ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–25

ಶಾಂತಿಪರ್ವದ

ರಾಜಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ಶ್ರೀರಾಮಶ್ರೀ॥

ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಭಾಗ - ೨೫

ಶಾಂತಿಪರ್ವದ

ರಾಜಧರ್ಮಪರ್ವ

(ಅಧ್ಯಾಯಗಳು ೩೭ರಿಂದ ೮೨ರವರೆಗೆ)

ಸಮಗ್ರಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ
ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಲಂಕಾರದೊಂದಿಗೆ

ಅನುಗ್ರಹ

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರು

ಶ್ರೀಹೃಷೀಕೇಶಸಂಸ್ಥಾನಮ್, ಪಲಿಮಾರು ಮಠ, ಉಡುಪಿ.

ಅನುವಾದಕರು

ವಿದ್ವಾನ್ ಶ್ರೀಶೇಷಗಿರಿ ಆಚಾರ್ಯ ಪಿ.ಎಸ್., ಮೈಸೂರು

ಪ್ರಕಾಶಕರು

ತತ್ತ್ವಸಂಶೋಧನಸಂಸತ್ (ರಿ)

ಕರ್ನಾಟಕಸಂಸ್ಕೃತವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವ - ಮಹಾಭಾರತತಾತ್ಪರ್ಯನಿರ್ಣಯ-ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ-ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ದ್ವಿತೀಯಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣ -ಗೊಂಡಿತು.

ರಾಜಧರ್ಮಪರ್ವ - ಭಾಗ ೨॥

ಅನುವಾದಕರು - ವಿದ್ವಾನ್ ಶ್ರೀಶೇಷಗಿರಿ ಆಚಾರ್ಯ ಪಿ.ಎಸ್., ಮೈಸೂರು

ಪ್ರಕಾಶಕರು – ತತ್ವಸಂಶೋಧನಸಂಸತ್ (ರಿ.), ಪಲಿಮಾರುಮಠ, ಉಡುಪಿ.

ಈ ಗ್ರಂಥವು ಕರ್ನಾಟಕಸರ್ಕಾರದ ಆರ್ಥಿಕನೆರವಿನಿಂದ ಮುದ್ರಿತವಾಗಿದೆ.

ಪುಟಗಳು – XiV + 442 = 456

ಮುದ್ರಿತಪ್ರತಿಗಳು - 1000

ಬೆಲೆ - ರೂ 500/-

©ತತ್ವಸಂಶೋಧನಸಂಸತ್ (ರಿ.), ಪಲಿಮಾರುಮಠ, ಉಡುಪಿ.

ಡಿ.ಟಿ.ಪಿ.- ಸುಬ್ಬಣ್ಣ ಕೆಂಪದಾಳಿಹಳ್ಳಿ , (9141311280)

ಮುದ್ರಕರು – ಪವನ್ ಪ್ರಿಂಟರ್ಸ್, ಬೆಂಗಳೂರು -18
ಮೊಬೈಲ್- 9686489131

ಗ್ರಂಥಪ್ರಾಪ್ತಿ - ಪಲಿಮಾರುಮಠ, ಉಡುಪಿ

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ನುಮಃ

ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದಂಗಳವರು,
ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನ,
ಪರ್ಯಾಯ ಶ್ರೀಹೃಷೀಕೇಶಸಂಸ್ಥಾನಮ್,
ಪಲಿಮಾರು ಮಠ, ಉಡುಪಿ

ಅನುಗ್ರಹಸಂದೇಶ

ಪುಷ್ಯಮಾಸದ ಕೃಷ್ಣಪಕ್ಷ ಸಪ್ತಮಿಯಿಂದಾರಂಭಿಸಿ ಮಾಘಮಾಸದ ಶುಕ್ಲಪಕ್ಷದ ಸಪ್ತಮಿಯ ತನಕ ಭೀಷ್ಮರು ಪಾಂಡವರಿಗೆ ಧರ್ಮೋಪದೇಶವನ್ನು ಮಾಡಿದ್ದಾರೆ. ಹದಿನೈದು ದಿವಸದಲ್ಲಿ ಸುಮಾರು ಮಹಾಭಾರತದ ಮೂವತ್ತುಸಾವಿರಶ್ಲೋಕಗಳ ಉಪದೇಶವನ್ನು ಭೀಷ್ಮರು ಮಾಡಿದ್ದಾರೆಂದರೆ ಅವರಲ್ಲಿ ಕೃಷ್ಣನೇ ಸನ್ನಿಹಿತನಾಗಿದ್ದಾನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಭೀಷ್ಮರ ಜೀವನದಲ್ಲಿ ಪ್ರಾರಬ್ಧವೆಲ್ಲವೂ ಸೋರಿ ಹರಿಕರುಣೆಯೆಂಬ ಸೊದೆಯು ಸೇರಿ ಶರಮಂಚವನ್ನೇರಿದಾಗ ಅಂತರಂಗದ ಕದವು ತೆರೆಯಿತು. ಭೀಷ್ಮರ ಅಂತರಂಗ ಶ್ರೀರಂಗನ ನಾಟ್ಯರಂಗವಾಯಿತು. ಭೀಷ್ಮರು ಭಾರ್ಗವ, ಬೃಹಸ್ಪತಿಗಳಿಂದ ಕಲಿತ ವೇದಗಳೇ ವಿದ್ಯುದ್ದೀಪಗಳಾದವು. ಶಬ್ದಪ್ರಪಂಚವೇ ಸ್ತೋತ್ರವಾಯಿತು. ತ್ಯಾಗದ ತನುವಿನ ಅಸ್ಥಿಗಳೇ ತಾಳಗಳಾದವು. ಗಂಭೀರನಾದ ಮೃದಂಗವಾಯಿತು. ಈ ಭೀಷ್ಮರ ಅಂತರಂಗದಲ್ಲಿ ಶ್ರೀರಂಗನಾಥನ ನಾಟ್ಯವು ಆರಂಭವಾಯಿತು. ತತ್ತ್ವಾಭಿಮಾನಿಗಳೇ ಪ್ರೇಕ್ಷಕರಾದರು. ಮಾತರಿಶ್ವನೇ ಸಂಚಾಲಕನಾದ. ಭೀಷ್ಮರ ಒಂದೊಂದು ಗೀತೆಗಳಿಗೂ ಗೀತಾಚಾರ್ಯನು ಒಂದೊಂದು ರೂಪ ಧರಿಸಿ ಬಂದ. ಭೀಷ್ಮರು ಸಮಗ್ರಬ್ರಹ್ಮಾಂಡವನ್ನು ಪಿಂಡಾಂಡದಲ್ಲಿ ಕಂಡರು. ಸಮಸ್ತಸುರನರರೊಳಗೆ ನಿಯಂತ್ರಕನಾದ ಅನಂತ ಅವತಾರಗಳನ್ನು ಬಗೆ ಬಗೆಯಾಗಿ ಕಂಡು ಬಣ್ಣಿಸಿದರು. ನಲಿವ ದೇವನಿಗೆ ತತ್ವಸುಧೆಯೇ ಸ್ನಾನವಾಯಿತು. ಭಾವನೆಯೇ ಮಲ್ಲಿಗೆಯಾಯಿತು. ನೋಟವೇ ನೀರಾಜನವಾಯಿತು. ಜೀವಾತ್ಮನ ಸಮರ್ಪಣೆಯೇ ನಮಸ್ಕಾರವಾಯಿತು. ಇಂತಹ ಅಳಿವಿರದ ನಿತ್ಯಪರದೈವವೆನಿಸಿದ ಭಗವಂತನನ್ನು ಅನೇಕ ಸ್ತುತಿಗಳಿಂದ ಸ್ತುತಿಸಿದ ಕೀರ್ತಿ ಭೀಷ್ಮರದ್ದು. ಭಗವಂತನನ್ನು ಸತ್ಯಾತ್ಮ,

ಧರ್ಮಾತ್ಮ, ಕಾಮಾತ್ಮ, ಕ್ಷೇತ್ರಾತ್ಮ, ಸಾಂಖ್ಯಾತ್ಮ, ಯೋಗಾತ್ಮ, ಮೋಕ್ಷಾತ್ಮ, ಲೋಕಾತ್ಮ, ಕಾಲಾತ್ಮ, ಘೋರಾತ್ಮ ಮುಂತಾಗಿ ಸ್ತುತಿಗೈದು ಹಿರಿಹಿಗ್ಗಿದವರು ಭೀಷ್ಮರು. ಈ ರೀತಿ ವಿಷ್ಣುಸಹಸ್ರನಾಮ, ಭಗವದ್ಗೀತೆ, ಭೀಷ್ಮಸ್ತವರಾಜ ಮುಂತಾದ ಸ್ತುತಿರತ್ನಗಳ ಮೂಲಕ ಅನೇಕ ಉಪಾಖ್ಯಾನಗಳ ಮೂಲಕ ಧರ್ಮೋಪದೇಶಗಳ ಮೂಲಕ, ಭಗವದರ್ಪಣಾಭಾವದಿಂದ ಭೀಷ್ಮರ ಅಂತರಂಗದ ಕೂಗು ತಾರಕಕ್ಕೇರಿದಾಗ ಸ್ವತಃ ದ್ವಾರಕಾಧೀಶನಾದ ಶ್ರೀಕೃಷ್ಣನು ಈಗಾಗಲೇ ಅಂತರಂಗದಲ್ಲಿ ಅಭಿವ್ಯಕ್ತಿಯನ್ನು ಪಡೆದು ಬಹಿರಂಗದಲ್ಲಿಯೂ ತೋರಲು ಸಿದ್ಧನಾದ. ಗಾಂಗೇಯನ ನುಡಿಗೆ ಸಡಗರದಿಂದ ಅಡಿಗಳನ್ನಿರಿಸಿ ಪಾಂಡವರೊಡನೆ ಕುರು-ಕ್ಷೇತ್ರಕ್ಕೆ ದೌಡಾಯಿಸಿ ಬಂದ. ಭಗವಂತನನ್ನೇ ಬಳಿಗೆ ಕರೆದ ಸ್ತುತಿ ಭೀಷ್ಮರ ಸ್ತುತಿ. ಭೀಷ್ಮಾಚಾರ್ಯರೆಂದರೆ ತತ್ವಜ್ಞಾನಕ್ಕೆ ತವರೂರು. ಬೃಹಸ್ಪತ್ಯಾಚಾರ್ಯರಿಂದ ನೂರಾರು ವರ್ಷಗಳ ಕಾಲ ಸಾಂಗವೇದಾಧ್ಯಯನ ನಡೆಸಿ, ಭಾರ್ಗವರಾಮರಿಂದ ತತ್ವಶ್ರವಣವನ್ನು ನಡೆಸಿ, ಶಸ್ತ್ರಾಭ್ಯಾಸವನ್ನು ನಡೆಸಿದ ಕೀರ್ತಿ ಭೀಷ್ಮರದ್ದು. ಭೀಷ್ಮರೆಂಬ ತತ್ವಜ್ಞಾನದ ವೃಕ್ಷದಲ್ಲಿ ಅರಳಿದ ಮಧುರ ಫಲಗಳೇ ಶಾಂತಿಪರ್ವ ಅನುಶಾಸನ ಪರ್ವಗಳು.

ಗೀತಾಸಹಸ್ರನಾಮೈವ ಸ್ತವರಾಜೋ ಹ್ಯನುಸ್ಮೃತಿಃ।
ಗಜೇಂದ್ರಮೋಕ್ಷಣಂ ಚೈವ ಪಂಚರತ್ನಾನಿ ಭಾರತೇ।

ಭಗವದ್ಗೀತೆ, ವಿಷ್ಣುಸಹಸ್ರನಾಮ, ಭೀಷ್ಮಸ್ತವರಾಜ, ಅನುಸ್ಮೃತಿ, ಗಜೇಂದ್ರಮೋಕ್ಷ ಈ ಐದು ಮಹಾಭಾರತದಲ್ಲಿ ಮೂಡಿ ಬಂದ ರತ್ನಗಳು. ಮನುಕುಲದ ರಕ್ಷಣೆಗಾಗಿ ಧರ್ಮರಾಜನನ್ನು ನೆಪ ಮಾಡಿಕೊಂಡು ಧರ್ಮದ ಸಾರಸಂದೇಶವನ್ನು ಸಾರಿದ ಭೀಷ್ಮರ ಅಂತರಂಗದಲ್ಲಿ ಮೂಡಿ ಬಂದ ನುಡಿಮುತ್ತೇ ಶಾಂತಿಪರ್ವವೆಂದು ಪ್ರಸಿದ್ಧವಾಗಿದೆ. ಬದುಕಿನ ಎಲ್ಲ ಸ್ತರಗಳಲ್ಲಿ ನಿಂತು ಜೀವನಾನುಭವವನ್ನು ಪಡೆದು ಭಗವಂತನನ್ನು ಕಂಡ ಕೀರ್ತಿ ಭೀಷ್ಮರದ್ದು. ಅಂತರಂಗದ ಸಾಧಕರಿಗೆ ಭೀಷ್ಮರ ಈ ಉಪದೇಶಗಳು ಮುಕ್ತಿಗೆ ಸುಲಭ-ಸಾಧನವೆನಿಸಿವೆ. ಇಂತಹ ಭೀಷ್ಮರ ಹತ್ತಾರು ನೀತಿಬೋಧಕವಾದ ಚಿಂತನೆಗಳು

ರಾಜಧರ್ಮದಲ್ಲಿ ವಿಸ್ತಾರವಾಗಿ ಮೂಡಿಬಂದಿದೆ. ಇದನ್ನು ಶ್ರದ್ಧೆಯಿಂದ ಅನುವಾದಿಸಿಕೊಟ್ಟ ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯರಿಗೆ ವಿಶೇಷವಾಗಿ ಭಗವಂತನು ಸನ್ಮಂಗಳವನ್ನುಂಟುಮಾಡಲಿ ಎಂದು ಶ್ರೀಕೃಷ್ಣ-ಮುಖ್ಯಪ್ರಾಣರಲ್ಲಿ ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣಸ್ಮರಣೆಗಳು

ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದಂಗಳವರು,

ಪರ್ಯಾಯ ಪಲಿಮಾರುಮಠ.

ಉಡುಪಿ.

ವಿಷಯಾನುಕ್ರಮಣಿಕೆ

೩೭. ಮೂವತ್ತೇಳನೆಯ ಅಧ್ಯಾಯ

ವ್ಯಾಸರಿಂದ ಯುಧಿಷ್ಠಿರನನ್ನು ಕುರಿತು ಭಕ್ಷ್ಯಾಭಕ್ಷ್ಯ, ಪಾತ್ರಾಪಾತ್ರ ಮೊದಲಾದವುಗಳ ವಿವೇಚನೆ. 1

೩೮. ಮೂವತ್ತೆಂಟನೆಯ ಅಧ್ಯಾಯ

ಯುದ್ಧಾನಂತರದಲ್ಲಿ ಯುಧಿಷ್ಠಿರನ ಪುರಪ್ರವೇಶ 14

೩೯. ಮೂವತ್ತೊಂಭತ್ತನೆಯ ಅಧ್ಯಾಯ

ಯುಧಿಷ್ಠಿರನ ರಾಜಗೃಹಪ್ರವೇಶ ಮತ್ತು ಸಭಾಪ್ರವೇಶ. ಚಾರ್ವಾಕರಾಕ್ಷಸನಿಂದ ಯುಧಿಷ್ಠಿರನ ನಿಂದೆ. ಬ್ರಾಹ್ಮಣರಿಂದ ಚಾರ್ವಾಕನ ಭಸ್ಮೀಕರಣ. 25

೪೦. ನಲವತ್ತನೆಯ ಅಧ್ಯಾಯ

ಯುಧಿಷ್ಠಿರನಿಗೆ ಕೃಷ್ಣನಿಂದ ರಾಜ್ಯದಲ್ಲಿ ಅಭಿಷೇಕ 36

೪೧. ನಲವತ್ತೊಂದನೆಯ ಅಧ್ಯಾಯ

ಯುಧಿಷ್ಠಿರನ ಉತ್ತರ ಮತ್ತು ಯೌವರಾಜ್ಯಾದಿಗಳಲ್ಲಿ ಭೀಮಾದಿಗಳ ಸ್ಥಾಪನಾ 41

೪೨. ನಲವತ್ತೆರಡನೆಯ ಅಧ್ಯಾಯ

ಯುಧಿಷ್ಠಿರನಿಂದ ಜ್ಞಾತಿಗಳಿಗೆ ಶ್ರಾದ್ಧದಾನ 46

೪೩. ನಲವತ್ತಮೂರನೆಯ ಅಧ್ಯಾಯ

ಯುಧಿಷ್ಠಿರನು ಮಾಡಿದ ಕೃಷ್ಣಸ್ತೋತ್ರ 49

೪೪. ನಲವತ್ತನಾಲ್ಕನೆಯ ಅಧ್ಯಾಯ

ಯುಧಿಷ್ಠಿರನ ಆಜ್ಞೆಯಂತೆ ಭೀಮಾದಿಗಳಿಂದ ದುರ್ಯೋಧನಾದಿ ಗೃಹಪ್ರವೇಶ. 54

೪೫. ನಲವತ್ತೈದನೆಯ ಅಧ್ಯಾಯ

ಕೃಷ್ಣನ ಬಳಿಗೆ ಬಂದು ಯುಧಿಷ್ಠಿರನಿಂದ ಕುಶಲಪ್ರಶ್ನೆ 58

೪೬. ನಲವತ್ತಾರನೆಯ ಅಧ್ಯಾಯ

ಯುಧಿಷ್ಠಿರನನ್ನು ಧರ್ಮೋಪದೇಶಶ್ರವಣಕ್ಕಾಗಿ ಭೀಷ್ಮರ ಬಳಿಗೆ ಹೋಗುವಂತೆ ಪ್ರೇರಿಸಿ ಕೃಷ್ಣನ ಸಿದ್ಧತೆ 62

೪೭. ನಲವತ್ತೇಳನೆಯ ಅಧ್ಯಾಯ

ಭೀಷ್ಮಸ್ತವರಾಜ 70

೪೮. ನಲವತ್ತೆಂಟನೆಯ ಅಧ್ಯಾಯ

ಕೃಷ್ಣಯುಧಿಷ್ಠಿರಾದಿಗಳಿಂದ ಕುರುಕ್ಷೇತ್ರಗಮನ, ಪರಶುರಾಮರ ಕಥೆಯನ್ನು ಹೇಳುವಂತೆ ಯುಧಿಷ್ಠಿರನಿಂದ ಕೃಷ್ಣನ ಪ್ರಾರ್ಥನೆ 102

೪೯. ನಲವತ್ತೊಂಭತ್ತನೆಯ ಅಧ್ಯಾಯ

ಕೃಷ್ಣನಿಂದ ಪರಶುರಾಮಚರಿತೆಯ ಕಥನ 106

೫೦. ಐವತ್ತನೆಯ ಅಧ್ಯಾಯ

ಕೃಷ್ಣನಿಂದ ಭೀಷ್ಮರ ಪ್ರಶಂಸೆ ಮತ್ತು ಧರ್ಮರಾಜರಿಗೆ ಉಪದೇಶಮಾಡುವಂತೆ ಪ್ರೇರಣೆ126

೫೧. ಐವತ್ತೊಂದನೆಯ ಅಧ್ಯಾಯ

ಕೃಷ್ಣನಿಂದ ಭೀಷ್ಮರಿಗೆ ಶ್ರೇಯಃಪ್ರದಾನ ಮತ್ತು ಧರ್ಮವನ್ನು ಹೇಳುವಂತೆ ಪ್ರೇರಣೆ 135

೫೨. ಐವತ್ತೆರಡನೆಯ ಅಧ್ಯಾಯ

ಭೀಷ್ಮರಿಂದ ತಮ್ಮ ಅಸಾಮರ್ಥ್ಯದ ನಿವೇದನೆ; ಕೃಷ್ಣನ ಅನುಗ್ರಹದಿಂದ ದೇಹದಾರ್ಢ್ಯಪ್ರಾಪ್ತಿ 139

೫೩. ಐವತ್ತಮೂರನೆಯ ಅಧ್ಯಾಯ

ಮರುದಿನ ಪ್ರಾತಃಕಾಲದಲ್ಲಿ ಕೃಷ್ಣಯುಧಿಷ್ಠಿರಾದಿಗಳಿಂದ ಭೀಷ್ಮಸಮೀಪಗಮನ 147

೫೪. ಐವತ್ತನಾಲ್ಕನೆಯ ಅಧ್ಯಾಯ

ಕೃಷ್ಣನಿಂದ ಧರ್ಮವನ್ನು ಉಪದೇಶಮಾಡುವಂತೆ ಭೀಷ್ಮರಿಗೆ ಪ್ರೇರಣೆ 153

೫೫. ಪಂಚಪಂಚಾಶೋಽಧ್ಯಾಯಃ

ಯುಧಿಷ್ಠಿರನ ಉಪಸತ್ತಿಯನ್ನು ಕುರಿತು ಕೃಷ್ಣನಿಂದ ಕಾರಣನಿರೂಪಣೆ; ಭೀಷ್ಮರಿಂದ ಯುಧಿಷ್ಠಿರನಿಗೆ ಪ್ರಶ್ನೆಯನ್ನು ಕೇಳಲು ಅನುಮತಿ 162

೫೬. ಐವತ್ತಾರನೆಯ ಅಧ್ಯಾಯ

ಭೀಷ್ಮರಿಂದ ರಾಜಧರ್ಮಕಥನ 167

೫೭. ಐವತ್ತೇಳನೆಯ ಅಧ್ಯಾಯ

ರಾಜಧರ್ಮಕಥನ 182

೫೮. ಐವತ್ತೆಂಟನೆಯ ಅಧ್ಯಾಯ

ಪ್ರಥಮದಿನದ ಉಪದೇಶದ ಅನಂತರ ಸಾಯಂಕಾಲದಲ್ಲಿ ಕೃಷ್ಣಾದಿಗಳ ಹಿಂದಿರುವಿಕೆ 193

೫೯. ಐವತ್ತೊಂಭತ್ತನೆಯ ಅಧ್ಯಾಯ

ಭೀಷ್ಮರಿಂದ ರಾಜೋತ್ಪತ್ತಿಯ ಬ್ರಹತ್ಕೃತದಂಡನೀತಿಶಾಸ್ತ್ರದ ಮತ್ತು ಪೃಥುರಾಜಚರಿತ್ರೆಯ ಕಥನ 200

೬೦. ಅರವತ್ತನೆಯ ಅಧ್ಯಾಯ

ಶಿವಾದಿಗಳಿಂದ ಬ್ರಹ್ಮದೇವರಿಂದ ರಚಿತವಾದ ದಂಡನೀತಿಶಾಸ್ತ್ರದ ಸಂಕ್ಷೇಪಕರಣ 219

೬೧. ಅರವತ್ತೊಂದನೆಯ ಅಧ್ಯಾಯ

ಚಾತುರ್ವರ್ಣ್ಯಧರ್ಮಕಥನ 235

೬೨. ಅರವತ್ತೆರಡನೆಯ ಅಧ್ಯಾಯ

ಚತುರಾಶ್ರಮಧರ್ಮಗಳ ನಿರೂಪಣೆ 249

೬೩. ಅರವತ್ತಮೂರನೆಯ ಅಧ್ಯಾಯ

ಬ್ರಾಹ್ಮಣಧರ್ಮಕಥನ 254

೬೪. ಅರವತ್ತನಾಲ್ಕನೆಯ ಅಧ್ಯಾಯ

ಬ್ರಾಹ್ಮಣರಿಗೆ ನಿಂದ್ಯವಾದ ಕರ್ಮಗಳ ಮತ್ತು ಕ್ಷತ್ರಿಯಧರ್ಮಗಳ ನಿರೂಪಣ 258

೬೫. ಅರವತ್ತೈದನೆಯ ಅಧ್ಯಾಯ

ರಾಜಧರ್ಮಪ್ರಶಂಸಾರೂಪವಾದ ಇಂದ್ರಮಾಂಧಾತೃಸಂವಾದಕಥನ 266

೬೬. ಅರವತ್ತಾರನೆಯ ಅಧ್ಯಾಯ

ಇಂದ್ರಮಾಂಧಾತೃಸಂವಾದಾನುವಾದ 276

೬೭. ಅರವತ್ತೇಳನೆಯ ಅಧ್ಯಾಯ

ರಾಜ್ಯಪಾಲನೆಯಿಂದ ಸರ್ವಾಶ್ರಮಧರ್ಮಫಲಪ್ರಾಪ್ತಿಕಥನ 285

೬೮. ಅರವತ್ತೆಂಟನೆಯ ಅಧ್ಯಾಯ

ರಾಜನ ಮಹತ್ವದ ಕಥನ 296

೬೯. ಅರವತ್ತೊಂಬತ್ತನೆಯ ಅಧ್ಯಾಯ

ಬೃಹಸ್ಪತಿ ಮತ್ತು ವಸುಮನಸರ ಸಂವಾದದಲ್ಲಿ ರಾಜಧರ್ಮಗಳ ವರ್ಣನೆ 305

೭೦. ಎಪ್ಪತ್ತನೆಯ ಅಧ್ಯಾಯ

ಯುದ್ಧಕಾಲದಲ್ಲಿ ಮತ್ತು ಕ್ಷೇಮಕಾಲದಲ್ಲಿ ರಾಜವೃತ್ತಕಥನ 319

೭೧. ಎಪ್ಪತ್ತೊಂದನೆಯ ಅಧ್ಯಾಯ

ಕೃತಾದಿಯುಗಗಳ ಗುಣನಿರೂಪಣೆ 340

೭೨. ಎಪ್ಪತ್ತೆರಡನೆಯ ಅಧ್ಯಾಯ

ರಾಜನಲ್ಲಿರಬೇಕಾದ ಗುಣಗಳು 348

೭೩. ಎಪ್ಪತ್ತಮೂರನೆಯ ಅಧ್ಯಾಯ

ರಾಜನ ಕರ್ತವ್ಯಗಳ ಕಥನ 352

೭೪. ಎಪ್ಪತ್ತನಾಲ್ಕನೆಯ ಅಧ್ಯಾಯ

ಬ್ರಾಹ್ಮಣನ ಶ್ರೇಷ್ಠತ್ವ ಕಥನ. ಐಲ-ವಾಯುಸಂವಾದ 360

೭೫. ಎಪ್ಪತ್ತೈದನೆಯ ಅಧ್ಯಾಯ

ರಾಜಪುರೋಹಿತನ ಲಕ್ಷಣ; ಐಲ-ಕಾಶ್ಯಪಸಂವಾದಾನುವಾದ 367

೭೬. ಎಪ್ಪತ್ತಾರನೆಯ ಅಧ್ಯಾಯ

ಮುಚುಕುಂದಚರಿತಕಥನ, ಕ್ಷತ್ರಿಯನ ಬ್ರಹ್ಮಾಧೀನತ್ವಸಮರ್ಥನ 387

೭೭. ಸಪ್ತಸಪ್ತತಿತಮೋऽಧ್ಯಾಯಃ

ಯುಧಿಷ್ಠಿರನನ್ನು ಕುರಿತು ರಾಜ್ಯಸ್ವೀಕಾರವು ಧರ್ಮವೆಂದು ಪ್ರತಿಪಾದನೆ 392

೭೮. ಎಪ್ಪತ್ತೆಂಟನೆಯ ಅಧ್ಯಾಯ

ಬ್ರಾಹ್ಮಣರ ಪ್ರಭೇದಕಥನ 401

೭೯. ಎಪ್ಪತ್ತೊಂಬತ್ತನೆಯ ಅಧ್ಯಾಯ

ಕೇಕಯರಾಜ-ರಾಕ್ಷಸಸಂವಾದದಲ್ಲಿ ಪ್ರಜೆಗಳ ಧರ್ಮಕಥನ 405

೮೦. ಎಂಬತ್ತನೆಯ ಅಧ್ಯಾಯ

ಬ್ರಾಹ್ಮಣಾದಿಗಳ ಆಪದ್ಧರ್ಮಕಥನ 415

೮೧. ಎಂಬತ್ತೊಂದನೆಯ ಅಧ್ಯಾಯ

ಋತ್ವಿಗ್‌ಲಕ್ಷಣಾದಿ ಕಥನ 425

೮೨. ಎಂಬತ್ತೆರಡನೆಯ ಅಧ್ಯಾಯ

ಅಮಾತ್ಯ ಮತ್ತು ಜ್ಞಾತಿಗಳ ಸ್ವರೂಪಕಥನ 431

* * * * *

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ

ಶ್ರೀಮನ್ಮಹಾಭಾರತೇ ಶಾಂತಿಪರ್ವಣಿ
ರಾಜಧರ್ಮಪರ್ವಣಿ

೩೭. ಮೂವತ್ತೇಳನೆಯ ಅಧ್ಯಾಯ

ವ್ಯಾಸರಿಂದ ಯುಧಿಷ್ಠಿರನನ್ನು ಕುರಿತು ಭಕ್ಷ್ಯಾಭಕ್ಷ್ಯ,
ಪಾತ್ರಾಪಾತ್ರ ಮೊದಲಾದವುಗಳ ವಿವೇಚನೆ.

ಯುಧಿಷ್ಠಿರಃ

ಕಿಂ ಭಕ್ಷ್ಯಂ ಕಿಮಭಕ್ಷ್ಯಂ ವಾ ಕಿಂ ಚ ದೇಯಂ ಪ್ರಶಸ್ಯತೇ।
ಕಿಂಚ ಪಾತ್ರಮಪಾತ್ರಂ ವಾ ತನ್ಮೇ ಬ್ರೂಹಿ ತಪೋಧನ ॥೧॥

ಯುಧಿಷ್ಠಿರನು ಹೇಳುತ್ತಾನೆ – ಎಲೈ ತಪೋಧನರೇ! ಯಾವುದು ಭಕ್ಷ್ಯ ಮತ್ತು ಯಾವುದು ಅಭಕ್ಷ್ಯವಾಗುತ್ತದೆ. ಯಾವ ವಸ್ತುವನ್ನು ಕೊಟ್ಟರೆ ಪ್ರಶಸ್ತವಾದ ದಾನವಾಗುತ್ತದೆ? ಮತ್ತು ದಾನವನ್ನು ಸ್ವೀಕರಿಸಲು ಪಾತ್ರರು ಮತ್ತು ಅಪಾತ್ರರು ಯಾರು? ಎಂಬುದನ್ನು ನನಗೆ ಹೇಳಿ.

ವ್ಯಾಸಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಸಿದ್ಧಾನಾಂ ಚೈವ ಸಂವಾದಂ ಮನೋಶ್ಚೈವ ಪ್ರಜಾಪತೇಃ ॥೨॥

ವ್ಯಾಸರು ಹೇಳುತ್ತಾರೆ – ಈ ವಿಷಯದಲ್ಲಿಯೂ ಸಹ ಪ್ರಜಾಪತಿಯಾದ ಮನುವಿಗೂ ಮತ್ತು ಸಿದ್ಧಪುರುಷರಿಗೂ ನಡೆದ ಪುರಾತನವಾದ ಈ ಸಂವಾದವನ್ನು ಹೇಳುತ್ತಾರೆ.

ಸಿದ್ಧಾಸ್ತಪೋವ್ರತಪರಾಃ ಸಮಾಗಮ್ಯ ಪುರಾ ವಿಭುಮ್।
ಧರ್ಮಂ ಪಪ್ರಚ್ಛುರಾಸೀನಮಾದಿಕಾಲೇ ಪ್ರಜಾಪತಿಮ್ ॥೩॥

ಹಿಂದೆ ಆದಿಕಾಲದಲ್ಲಿ ತಪೋವ್ರತನಿಷ್ಠರಾದ ಸಿದ್ಧರು ಪ್ರಭುವಾದ ಪ್ರಜಾಪತಿಯಾದ ಮನುವಿನ ಸಮೀಪಕ್ಕೆ ಬಂದು, ಕುಳಿತಿದ್ದ ಅವನನ್ನು ಕುರಿತು ಧರ್ಮದ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದರು.

ಕಥಮನ್ನಂ ಕಥಂ ದಾನಂ ಕಥಮಧ್ಯಯನಂ ತಪಃ।
ಕಾರ್ಯಾಕಾರ್ಯಂ ಚ ನಃ ಸರ್ವಂ ಶಂಸ ವೈ ತ್ವಂ ಪ್ರಜಾಪತೇ ॥೪॥

ಎಲೈ ಪ್ರಜಾಪತಿಯೇ! ಅನ್ನವು ಯಾವ ರೀತಿಯಾಗಿರಬೇಕು? ದಾನ ಅಧ್ಯಯನ ಮತ್ತು ತಪಸ್ಸುಗಳು ಯಾವ ರೀತಿಯಿರಬೇಕು? ಯಾವುದು ಕಾರ್ಯ ಮತ್ತು ಯಾವುದು ಅಕಾರ್ಯ? ಇವೆಲ್ಲವನ್ನೂ ನಮಗೆ ಹೇಳಿ.

ತೈರೇವಮುಕ್ತೋ ಭಗವಾನ್ ಮನುಃ ಸ್ವಾಯಂಭುವೋಽಬ್ರವೀತ್।
ಶುಶ್ರೂಷಧ್ವಂ ಯಥಾವೃತ್ತಂ ಧರ್ಮಂ ವ್ಯಾಸಸಮಾಸತಃ ॥೫॥

ಅವರಿಂದ ಈ ರೀತಿಯಲ್ಲಿ ಕೇಳಲ್ಪಟ್ಟ ಪೂಜ್ಯನಾದ ಸ್ವಾಯಂಭುವಮನುವು 'ಸಂಕ್ಷೇಪವಿಸ್ತಾರಗಳಿಂದ ಯಥಾರ್ಥವಾದ ಧರ್ಮವನ್ನು ಮಾಡಿ' ಎಂದು ಹೇಳಿದನು.

ಅನಾದೇಶೇ ಜಪೋ ಹೋಮ ಉಪವಾಸಸ್ತಥೈವ ಚ।
ಆತ್ಮಜ್ಞಾನಂ ಪುಣ್ಯನದ್ಯೋ ಯತ್ರ ಪ್ರಾಯಶ್ಚ ತತ್ಪರಾಃ ॥೬॥

ಅನಾದಿಷ್ಟಂ ತಥೈತಾನಿ ಪುಣ್ಯಾನಿ ಧರಣೀಭೃತಾಮ್।

ಇನ್ನೊಬ್ಬರಿಂದ ಧನದಾನವನ್ನು ಸ್ವೀಕರಿಸಿ, ಅವರ ಆಜ್ಞೆಯಂತೆ ಮಾಡದ ಜಪ-ಹೋಮ, ಉಪವಾಸ, ಅಧ್ಯಯನ, ಪುಣ್ಯನದೀಸ್ನಾನ ಇವುಗಳು ಪ್ರಾಯಶಃ ಧರ್ಮ-ವನ್ನು ಉಂಟು ಮಾಡುತ್ತವೆ. ಇನ್ನೊಬ್ಬರ ಪ್ರೇರಣೆಯಿಲ್ಲದೆ, ಧನದ ಆಸೆಯಿಲ್ಲದೆ ಮಾಡುವ ಇಂತಹ ಕಾರ್ಯಗಳು ಪುಣ್ಯಪ್ರದವೆನಿಸುತ್ತವೆ.

ಸುವರ್ಣಪ್ರಾಶನಮಪಿ ರತ್ನಾದಿಸ್ನಾನಮೇವ ಚ ॥೭॥

ದೇವಸ್ಥಾನಾಭಿಗಮನಮಾಜ್ಯಪ್ರಾಶನಮೇವ ಚ।
ಏತಾನಿ ಮೇಧ್ಯಂ ಪುರುಷಂ ಕುರ್ವಂತ್ಯಾಶು ನ ಸಂಶಯಃ ॥೮॥

ಸುವರ್ಣಪ್ರಾಶನ, ರತ್ನಾದಿಮಿಶ್ರಿತಜಲದಿಂದ ಸ್ನಾನ (ರತ್ನಾಭಿಷೇಕ), ದೇವಾಲಯಗಳಿಗೆ ಹೋಗುವುದು, ಘೃತಪ್ರಾಶನ ಇವುಗಳು ಶೀಘ್ರವಾಗಿ ಪುರುಷನನ್ನು ಪವಿತ್ರೀಕರಿಸುತ್ತವೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ನ ಗರ್ವೇಣ ಭವೇತ್ ಪ್ರಾಜ್ಞಃ ಕದಾಚಿದಪಿ ಮಾನದ।
ದೀರ್ಘಮಾಯುರಭೀಚ್ಛನ್ ಹಿ ತ್ರಿರಾತ್ರಂ ಚೋಷ್ಣಪೋ ಭವೇತ್ ॥೯॥

ಎಲೈ ಮಾನದನೇ! ಪ್ರಾಜ್ಞನಾದವನು ಎಂದೂ ಗರ್ವವನ್ನು ಮಾಡಬಾರದು. ದೀರ್ಘಾಯುಷ್ಯವನ್ನು ಬಯಸುವವನು ಮೂರು ದಿನಗಳ ಕಾಲದ ಉಷ್ಣಪಾನವನ್ನು ಮಾಡಬೇಕು. (ಇದಕ್ಕೆ ತಪ್ತಕೃಚ್ಛ್ರವೆಂದು ಹೆಸರು. ಮೊದಲ ಮೂರು ದಿನಗಳು ಆರು ಕುಡಿತೆಯಷ್ಟು ಬಿಸಿನೀರನ್ನು ಕುಡಿಯಬೇಕು. ಅನಂತರ ಮೂರು ದಿನಗಳು ಮೂರು ಕುಡಿತೆಯಷ್ಟು ಬಿಸಿ ಹಾಲನ್ನು ಕುಡಿಯಬೇಕು. ಅನಂತರ ಮೂರು ದಿನಗಳು ಒಂದು ಕುಡಿತೆಯಷ್ಟು ಬಿಸಿಯ ತುಪ್ಪವನ್ನು ಮಾತ್ರ ಸೇವಿಸಬೇಕು. ಅನಂತರ ಮೂರು ದಿನಗಳು ಉಪವಾಸವಿರಬೇಕು. ಇದು ತಪ್ತಕೃಚ್ಛ್ರದ ವಿಧಿಯೆಂದು ಮನುಸ್ಮೃತಿಯಲ್ಲಿ ಹೇಳಲ್ಪಟ್ಟಿದೆ).

ಅದತ್ತಸ್ಯಾನುಪಾದಾನಂ ದಾನಮಧ್ಯಯನಂ ತಪಃ।
ಅಹಿಂಸಾ ಸತ್ಯಮಕ್ರೋಧಃ ಕ್ಷಮೇಜ್ಯಾ ಧರ್ಮಲಕ್ಷಣಮ್ ॥೧೦॥

ಇನ್ನೊಬ್ಬರು ಕೊಡದಿದ್ದ ವಸ್ತುವನ್ನು ಸ್ವೀಕರಿಸದಿರುವುದು, ದಾನ, ಅಧ್ಯಯನ, ತಪಸ್ಸು, ಅಹಿಂಸೆ, ಸತ್ಯವಚನ, ಅಕ್ರೋಧ, ಕ್ಷಮೆ, ಪೂಜೆ ಇವು ಧರ್ಮದ ಲಕ್ಷಣಗಳು.

ಸ ಏವ ಧರ್ಮಃ ಸೋಽಧರ್ಮೋಽದೇಶೇಽಕಾಲೇ ಪ್ರತಿಷ್ಠಿತಃ।
ಅದಾನಮನೃತಂ ಹಿಂಸಾ ಧರ್ಮೋ ಹ್ಯಾವಸ್ಥಿಕಃ ಸ್ಮೃತಃ ॥೧೧॥

ಯಾವುದು ಧರ್ಮವೋ ಅದೇ ಕಾರ್ಯವನ್ನು ಅದೇಶದಲ್ಲಿ ಮತ್ತು ಅಕಾಲದಲ್ಲಿ ಮಾಡಿದರೆ ಅದು ಅಧರ್ಮವಾಗುತ್ತದೆ. ಹಾಗೆಯೇ ವಿಶೇಷಸಂದರ್ಭದಲ್ಲಿ ಮಾಡಿದ ಅಧರ್ಮವೂ ಸಹ ಧರ್ಮವಾಗುತ್ತದೆ. ಅಪಾತ್ರರಿಗೆ ದಾನವನ್ನು ಮಾಡದಿರುವುದು, ಬ್ರಾಹ್ಮಣರ ಹಿತದ ಸಲುವಾಗಿ ಸುಳ್ಳನ್ನು ಹೇಳುವುದು, ಮತ್ತು ಗೋವುಗಳನ್ನು ರಕ್ಷಿಸಲು ವ್ಯಾಘ್ರಾದಿಗಳ ಹತ್ಯೆ ಇವು ಅದಾನ, ಅನೃತ, ಹಿಂಸಾ ರೂಪವಾದರೂ ಧರ್ಮವಾಗುತ್ತವೆ. ಅದನ್ನು ಬಿಟ್ಟು ಬೇರೆ ಸ್ಥಳದಲ್ಲಿ ಮಾತ್ರ ಅಧರ್ಮವಾಗುತ್ತವೆ. – ಲಕ್ಷ್ಮಲಂಕಾರ.

ದ್ವಿವಿಧೌ ಚಾಪ್ಯುಭಾವೇತೌ ಧರ್ಮಾಧರ್ಮೌ ವಿಜಾನತಾಮ್ ।
ಅಪ್ರವೃತ್ತಿಃ ಪ್ರವೃತ್ತಿಶ್ಚ ದ್ವೈವಿಧ್ಯಂ ಲೋಕವೇದಯೋಃ ॥೧೨॥

ಜ್ಞಾನಿಗಳ ದೃಷ್ಟಿಯಲ್ಲಿ ಧರ್ಮ ಮತ್ತು ಅಧರ್ಮಗಳೆರಡೂ ಎರಡು ವಿಧವಾದವುಗಳು. ಲೋಕವೇದವಿಹಿತವಾದ ಧರ್ಮವು ಪ್ರವೃತ್ತಿಧರ್ಮ ಮತ್ತು ನಿವೃತ್ತಿಧರ್ಮ ಎಂದು ಎರಡು ವಿಧ. ಹಾಗೆಯೇ ಅಧರ್ಮವೂ ಸಹ ಧರ್ಮದಲ್ಲಿ ಅಪ್ರವೃತ್ತಿ ಮತ್ತು ಅಧರ್ಮದಲ್ಲಿ ಪ್ರವೃತ್ತಿ ಎಂದು ಎರಡು ವಿಧವಾದದ್ದು.

ಅಪ್ರವೃತ್ತೇರಮರ್ತ್ಯತ್ವಂ ಮರ್ತ್ಯತ್ವಂ ಕರ್ಮಣಃ ಫಲಮ್ ।
ಅಶುಭಸ್ಯಾಶುಭಂ ವಿದ್ಯಾಚ್ಛುಭಸ್ಯ ಶುಭಮೇವ ಚ ।
ಏತಯೋಶ್ಚೋಭಯೋಃ ಸ್ಯಾತಾಂ ಶುಭಾಶುಭತಯಾ ತಥಾ ॥೧೩॥

ಮೋಕ್ಷವು ನಿವೃತ್ತಿಕರ್ಮಗಳ ಫಲ. ಪುನಃ ಮನುಷ್ಯಾದಿಯೋನಿಗಳು ಪ್ರವೃತ್ತಿಕರ್ಮದ ಫಲ. ಅಶುಭಕರ್ಮದಿಂದ ಅಶುಭವಾದ ಫಲವುಂಟಾಗುತ್ತದೆ. ಶುಭಕರ್ಮದಿಂದ ಶುಭವಾದ ಫಲವುಂಟಾಗುತ್ತದೆ ಎಂದು ತಿಳಿಯಬೇಕು. ಹೀಗೆ ಶುಭಾಶುಭರೂಪವಾದ ಎರಡು ಕರ್ಮಗಳಿಗೂ ಶುಭಾಶುಭರೂಪವಾದ ಫಲವು ದೊರೆಯುತ್ತದೆ.

ದೈವಂ ಚ ದೈವಯುಕ್ತಂ ಚ ಪ್ರಾಣಶ್ಚ ಪ್ರಲಯಶ್ಚ ಹ ।
ಅಪೇಕ್ಷಾಪೂರ್ವಕರಣಾದಶುಭಾನಾಂ ಶುಭಂ ಫಲಮ್ ॥೧೪॥

ದೇವಪೂಜೆ ದೇವಮಹಿಮಾಪ್ರತಿಪಾದಕವಾದ ವೇದಾದಿಗಳ ಅಧ್ಯಯನ, ಪ್ರಕೃಷ್ಟಚೇಷ್ಟಾರೂಪವಾದ ಯಜ್ಞ ಮತ್ತು ಫಲಾಪೇಕ್ಷೆಯಿಂದ ಮಾಡುವ ಯಜ್ಞದ ಪಶುಹಿಂಸಾ ಇವುಗಳನ್ನು ಫಲಾಪೇಕ್ಷೆಯಿಂದ ಮಾಡಿದರೆ ಇವು ಅಶುಭ ಕರ್ಮ-ಗಳೆನಿಸುತ್ತವೆ. ಫಲದ ಅಪೇಕ್ಷೆಯನ್ನು ತಿರಸ್ಕರಿಸಿ (ಹಿಂದೆ ಹಾಕಿ) ಅನುಷ್ಠಾನ ಮಾಡಿ-ದರೆ ಇವು ಶುಭಫಲವನ್ನು ಕೊಡುತ್ತವೆ. (ಲಕ್ಷಾಲಂಕಾರ).

ಕ್ರೋಧಮೋಹಕೃತೇ ಚೈವ ದೃಷ್ಟಾಂತಾಗಮಹೇತುಭಿಃ।
ಶರೀರಾಣಾಮುಪಕ್ಲೇಶೋ ಮನಸಶ್ಚ ಪ್ರಿಯಾಪ್ರಿಯೇ।
ತದೌಷಧೈಶ್ಚ ಮಂತ್ರೈಶ್ಚ ಪ್ರಾಯಶ್ಚಿತ್ತೈಶ್ಚ ಶಾಮ್ಯತಿ ॥೧೫॥

ಕ್ರೋಧಮೋಹಗಳಿಗೆ ವಶರಾಗಿ ಕರ್ಮಗಳನ್ನು ಆಚರಿಸಿ ಅವುಗಳಿಂದ ಶರೀರಕ್ಕೆ ಕ್ಲೇಶವೂ, ಮನಸ್ಸಿಗೆ ಪ್ರಿಯಾಪ್ರಿಯಗಳೂ ಉಂಟಾದರೆ ಅವುಗಳನ್ನು ಶಾಸ್ತ್ರದೃಷ್ಟವಾದ ಪರಿಹಾರಕಾರಣಗಳಾದ ಮಂತ್ರಗಳಿಂದಲೂ ಪ್ರಾಯಶ್ಚಿತ್ತಗಳಿಂದಲೂ ಮತ್ತು ಔಷಧಿ-ಗಳಿಂದಲೂ ಪರಿಹರಿಸಿಕೊಳ್ಳಬೇಕು.

ಊರ್ಧ್ವಂ ಭವತಿ ಸಂದೋಹಾದಿಹ ದೃಷ್ಟಾರ್ಥಮೇವ ಚ।
ಅಪೇಕ್ಷಾಪೂರ್ವಕರಣಾತ್ ಪ್ರಾಯಶ್ಚಿತ್ತಂ ವಿಧೀಯತೇ ॥೧೬॥

ಧರ್ಮರೂಪವಾದ ಧೇನುವನ್ನು ಚೆನ್ನಾಗಿ ಕರೆಯುವುದರಿಂದ ಎಂದರೆ ಫಲಾ-ಪೇಕ್ಷೆಯಿಲ್ಲದೇ ಆಚರಿಸುವುದರಿಂದ ಊರ್ಧ್ವಗತಿಯುಂಟಾಗುತ್ತದೆ. ಮತ್ತು ಈ ಲೋಕದಲ್ಲಿಯೂ ದೃಷ್ಟವಾದ ಶುಭಫಲವು ದೊರೆಯುತ್ತದೆ. ಆದರೆ ಫಲಾ-ಪೇಕ್ಷೆಯಿಂದ ಮಾಡಿದರೆ ಪ್ರಾಯಶ್ಚಿತ್ತವು ವಿಧಿಸಲ್ಪಡುತ್ತದೆ.

ಉಪವಾಸಮೇಕರಾತ್ರಂ ದಂಡೋತ್ಸರ್ಗೇ ನರಾಧಿಪಃ।
ವಿಶುದ್ಧ್ಯೇದಾತ್ಮಶುದ್ಧ್ಯರ್ಥಂ ತ್ರಿರಾತ್ರಂ ತು ಪುರೋಹಿತಃ ॥೧೭॥

ರಾಜನಾದವನು ಶಿಕ್ಷೆಗೆ ಅರ್ಹನಾದವನನ್ನು ಶಿಕ್ಷಿಸದಿದ್ದರೆ ಒಂದು ರಾತ್ರಿ ಉಪವಾಸವನ್ನು ಮಾಡಿ ಶುದ್ಧನಾಗುತ್ತಾನೆ. ಆದರೆ ರಾಜಪುರೋಹಿತನು ಮಾತ್ರ ಮೂರು ದಿನ ಉಪವಾಸವನ್ನು ಮಾಡಬೇಕು. (ಲಕ್ಷಾಲಂಕಾರ)

ಕ್ಷಯಂ ಶೋಕಂ ಪ್ರಕುರ್ವಾಣೋ ನ ಮ್ರಿಯೇತ ಯದಾ ನರಃ।
ಶಸ್ತ್ರಾದಿಭಿರುಪಾವಿಷ್ಟಸ್ತ್ರಿರಾತ್ರಂ ತತ್ರ ನಿರ್ದಿಶೇತ್ ॥೧೮॥

ರಾಜನು ಅಪರಾಧಿಗೆ ಮರಣದಂಡನೆಯನ್ನು ವಿಧಿಸಿ, ಶಸ್ತ್ರಘಾತಾದಿಗಳನ್ನು ಮಾಡಿದರೂ ಅಪರಾಧಿಯು ಮರಣವನ್ನು ಹೊಂದದಿದ್ದರೆ ರಾಜನು ತನ್ನ ಶುದ್ಧಿಗಾಗಿ ಮೂರು ದಿನ ಉಪವಾಸವನ್ನು ಮಾಡಬೇಕು.

ಜಾತಿಶ್ರೇಣ್ಯಧಿವಾಸಾನಾಂ ಕುಲಧರ್ಮಾಂಶ್ಚ ಸರ್ವತಃ।
ವರ್ಜಯಂತಿ ಹಿ ಯೇ ಧರ್ಮಂ ತೇಷಾಂ ಧರ್ಮೋ ನ ವಿದ್ಯತೇ ॥೧೯॥

ತಮ್ಮ ಜಾತಿಯ ತಮ್ಮ ಸಮಾನರ ತಮ್ಮ ಗೃಹದ ಮತ್ತು ತಮ್ಮ ಕುಲದ ಧರ್ಮಗಳನ್ನು ಯಾರು ತ್ಯಜಿಸುತ್ತಾರೆಯೋ ಅವರಿಗೆ ಯಾವ ಧರ್ಮವೂ ಇರುವುದಿಲ್ಲ.

ದಶ ವಾ ವೇದಶಾಸ್ತ್ರಜ್ಞಾಸ್ತ್ರಯೋ ವಾ ಧರ್ಮಪಾಠಕಾಃ।
ಯದ್ ಬ್ರೂಯುಃ ಕಾರ್ಯ ಉತ್ಪನ್ನೇ ಸ ಧರ್ಮೋ ಧರ್ಮಸಂಶಯೇ ॥೨೦

ಧರ್ಮಸಂಶಯವುಂಟಾದಾಗ ವೇದಶಾಸ್ತ್ರಗಳನ್ನು ತಿಳಿದ ಹತ್ತು ವಿದ್ವಾಂಸರು ಅಥವಾ ಧರ್ಮಶಾಸ್ತ್ರವನ್ನು ತಿಳಿದ ಮೂರು ವಿದ್ವಾಂಸರು ಯಾವುದನ್ನು ಮಾಡಬೇಕೆಂದು ಹೇಳುತ್ತಾರೆಯೋ ಅದೇ ಧರ್ಮವೆನಿಸುತ್ತದೆ. ಅದನ್ನು ಮಾಡಬೇಕು.

ಅರುಣಾಮೃತ್ತಿಕಾ ಚೈವ ತಥಾ ಚೈವ ಪಿಪೀಲಿಕಾಃ।
ಶ್ಲೇಷ್ಮಾತ್ಮಕಸ್ತಥಾ ವಿಪ್ರೈರಭಕ್ಷ್ಯಂ ವಿಷಮೇವ ಚ ॥೨೧॥

ಕೆಮ್ಮಣ್ಣು, ಇರುವೆಗಳು ಬೆರೆತ ಆಹಾರ, ಚಳ್ಳೆ ಹಣ್ಣು, ಧರ್ಮಶಾಸ್ತ್ರದಲ್ಲಿ ವಿಷವೆಂದು ಪರಿಗಣಿಸಲ್ಪಟ್ಟ ಆಹಾರ ಇವುಗಳನ್ನು ಬ್ರಾಹ್ಮಣರು ತ್ಯಜಿಸಬೇಕು.

ಅಭಕ್ಷ್ಯಾ ಬ್ರಾಹ್ಮಣೈರ್ಮತ್ಸ್ಯಾಃ ಶಕಲೈರ್ಯೇ ವಿವರ್ಜಿತಾಃ।
ಚತುಷ್ಪಾತ್ ಕಚ್ಛಪಾಜ್ಜಾತೋ ಮಂಡೂಕಾ ಜಲಜಾಶ್ಚ ಯೇ ॥೨೨॥

ಭಾಸಾ ಹಂಸಾಃ ಸುಪರ್ಣಾಶ್ಚ ಚಕ್ರವಾಕಾ ಬಕಾಃ ಪ್ಲವಾಃ।
ಕಂಕೋ ಮದ್ಗುಶ್ಚ ಗೃಧ್ರಾಶ್ಚ ಕಾಕೋಲೂಕಂ ತಥೈವ ಚ ॥೨೩॥

ಕ್ರವ್ಯಾದಾಃ ಪಕ್ಷಿಣಃ ಸರ್ವೇ ಚತುಷ್ಪಾದಾಶ್ಚ ದಂಷ್ಟ್ರಿಣಃ।
ಯೇಷಾಂ ಚೋಭಯತೋ ದಂತಾಶ್ಚತುರ್ದಂಷ್ಟ್ರಾಂಶ್ಚ ಸರ್ವಶಃ ॥೨೪॥

ಮುಳ್ಳಿಲ್ಲದ ಮತ್ಸ್ಯಗಳು, ಆಮೆಯ ಜಾತಿಗೆ ಸೇರಿದ ಚತುಷ್ಪಾದ ಪ್ರಾಣಿಗಳು, ಕಪ್ಪೆ ಮೊದಲಾದ ಜಲಜಾತಿಗಳು, ಹಂಸಗಳು, ಗರುಡಗಳು, ಚಕ್ರವಾಕಪಕ್ಷಿಗಳು, ಕೊಕ್ಕರೆಗಳು, ಭಾಸಪಕ್ಷಿಗಳು, ಗಿಡುಗಗಳು, ಕಂಕಪಕ್ಷಿಗಳು, ನೀರು ಕಾಗೆಗಳು, ಹದ್ದುಗಳು, ಕಾಗೆಗಳು, ಗೂಬೆಗಳು, ಮಾಂಸವನ್ನು ತಿನ್ನುವ ಎಲ್ಲ ಪಕ್ಷಿಗಳು, ನಾಲ್ಕು ಪಾದಗಳನ್ನು ಹೊಂದಿದ ಕೋರೆದಾಡೆ ಉಳ್ಳ ಪ್ರಾಣಿಗಳು, ಎರಡು ಸಾಲು ದಂತವಿರುವ ಪ್ರಾಣಿಗಳು, ನಾಲ್ಕು ಕೋರೆದಾಡೆ ಉಳ್ಳ ಪ್ರಾಣಿಗಳು, ಇವುಗಳಲ್ಲಿ ಯಾವುದನ್ನೂ ಬ್ರಾಹ್ಮಣರು ತಿನ್ನಬಾರದು.

ಏಡಕಾಶ್ವ ಖರೋಷ್ಟ್ರೀಣಾಂ ಸೂತಿಕಾನಾಂ ಗವಾಮಪಿ।
ಮಾನುಷೀಣಾಂ ಮೃಗೀಣಾಂ ಚ ನ ಪಿಬೇದ್ ಬ್ರಾಹ್ಮಣಃ ಪಯಃ ॥೨೫॥

ಆಡು, ಕುದುರೆ, ಕತ್ತೆ, ಒಂಟೆ, ಆಗ ತಾನೇ ಕರುವನ್ನು ಹಾಕಿದ ಗೋವುಗಳು, ಮನುಷ್ಯರು, ಜಿಂಕೆಗಳು ಇವುಗಳ ಹಾಲನ್ನು ಬ್ರಾಹ್ಮಣರು ಕುಡಿಯಬಾರದು.

ಪ್ರೇತಾನ್ನಂ ಸೂತಿಕಾನ್ನಂ ಚ ಯಚ್ಚ ಕಿಂಚಿದನಿರ್ದಶಮ್।
ಅಭೋಜ್ಯಂ ಚಾಪ್ಯಪೇಯಂ ಚ ಧೇನ್ವಾ ದುಗ್ಧಮನಿರ್ದಶಮ್ ॥೨೬॥

ಹತ್ತು ದಿನ ಕಳೆಯದಿದ್ದ ಮೃತರ ಮನೆಯ ಅನ್ನ, ಜಾತಾಶೌಚವಿರುವ ಮನೆಯವರ ಅನ್ನ ಇವುಗಳನ್ನು ತಿನ್ನಬಾರದು. ಹಸುವು ಕರುವನ್ನು ಹಾಕಿದ ಮೇಲೆ ಹತ್ತು ದಿನ ಕಳೆಯುವವರೆಗೆ ಅದರ ಹಾಲನ್ನು ಕುಡಿಯಬಾರದು.

ರಾಜಾನ್ನಂ ತೇಜ ಆದತ್ತೇ ಶೂದ್ರಾನ್ನಂ ಬ್ರಹ್ಮವರ್ಚಸಮ್।
ಆಯುಃ ಸುವರ್ಣಕಾರಾನ್ನಮವೀರಾಯಾಶ್ಚ ಯೋಷಿತಃ ॥೨೭॥

ರಾಜಾನ್ನವು ತೇಜಸ್ಸನ್ನು ನಾಶ ಮಾಡುತ್ತದೆ. ಶೂದ್ರಾನ್ನವು ಬ್ರಹ್ಮವರ್ಚಸ್ಸನ್ನು ನಾಶ ಮಾಡುತ್ತದೆ. ಅಕ್ಕಸಾಲಿಗನ ಮತ್ತು ಮಕ್ಕಳಿಲ್ಲದ ಸ್ತ್ರೀಯರ ಅನ್ನವು ಆಯುಸ್ಸನ್ನು ನಾಶ ಮಾಡುತ್ತದೆ.

ವಿಷ್ಟಾವಾರ್ಧುಷಿಕಸ್ಯಾನ್ನಂ ಗಣಿಕಾನ್ನಮಥೇಂದ್ರಿಯಮ್ ।
ಮೃಷ್ಯಂತಿ ಯೇ ಚೋಪಪತಿಂ ಸ್ತ್ರೀಜಿತಾನಾಂ ಚ ಸರ್ವಶಃ ॥೨೮॥

ಬಡ್ಡಿಯಿಂದ ಜೀವನವನ್ನು ಮಾಡುವವನ ಅನ್ನವು ಅಮೇಧ್ಯಕ್ಕೆ ಸಮನಾದುದು, ವೇಶ್ಯೆಯರ ಅನ್ನ, ತನ್ನ ಪತ್ನಿಯ ಇನ್ನೊಬ್ಬನ ಸಂಬಂಧವನ್ನು ಹೊಂದಿದ್ದರೂ ಸಹಿಸಿಕೊಂಡು ಇರುವವನ ಅನ್ನ , ಮತ್ತು ಸ್ತ್ರೀವಶರಾದವರ ಅನ್ನ ಎಲ್ಲವೂ ರೇತಸ್ಸಿಗೆ ಸಮಾನವಾದುದು.

ದೀಕ್ಷಿತಸ್ಯ ಕದರ್ಯಸ್ಯ ಕ್ರತುವಿಕ್ರಯಿಕಸ್ಯ ಚ ।
ತಕ್ಷ್ಣಶ್ಚರ್ಮಾವಕರ್ತುಶ್ಚ ಪುಂಶ್ಚಲ್ಯಾ ರಜಕಸ್ಯ ಚ ।
ಚಿಕಿತ್ಸಕಸ್ಯ ಯಚ್ಚಾನ್ನಮಭೋಜ್ಯಂ ರಕ್ಷಿಣಸ್ತಥಾ ॥೨೯॥

ಯಜ್ಞದೀಕ್ಷಿತನಾದವನ, ನೀಚಸ್ವಭಾವದವನ, ಪೂಜಾದಿಗಳನ್ನು ಮಾರುವವನ, ಬಡಗಿಯ, ಚರ್ಮಕಾರನ, ವೇಶ್ಯೆಯ, ಅಗಸನ, ವೈದ್ಯನ, ಕಾವಲುಗಾರನ ಅನ್ನವು ಅಭೋಜ್ಯವಾದುದು.

ಗಣಗ್ರಾಮಾಭಿಶಸ್ತಾನಾಂ ರಂಗಸ್ತ್ರೀಜೀವಿನಶ್ಚ ಯೇ ।
ಪರಿವಿತ್ತಿನಪುಂಸಾಂ ಚ ವಂದಿದ್ಯೂತವಿದಾಂ ತಥಾ ॥೩೦॥

ಗ್ರಾಮದಿಂದ ಅಥವಾ ಕುಲದಿಂದ ಬಹಿಷ್ಕೃತನಾದವನ, ರಂಗಜೀವಿಯಾದವನ, ಸ್ತ್ರೀಯರನ್ನು ಅವಲಂಬಿಸಿ ಜೀವನವನ್ನು ಮಾಡುವವನ, ಅಣ್ಣನಿಗಿಂತ ಮೊದಲು ಮದುವೆಯಾದ ತಮ್ಮನ, ನಪುಂಸಕನ, ಹೊಗಳು ಭಟ್ಟನ, ದ್ಯೂತಾಸಕ್ತನ ಅನ್ನವು ಅಭೋಜ್ಯವಾದುದು.

ವಾಮಹಸ್ತಾಹೃತಂ ಚಾನ್ನಂ ಶುಷ್ಕಂ ಪರ್ಯುಷಿತಂ ಚ ಯತ್ ।
ಸುರಾನುಗತಮುಚ್ಛಿಷ್ಟಮಭೋಜ್ಯಂ ಶೇಷಿತಂ ಚ ಯತ್ ॥೩೧॥

ಎಡಗೈಯಿಂದ ತೆಗೆದುಕೊಂಡು ಬಂದ ಅನ್ನ, ಎಲೆಯಲ್ಲಿ ಬಡಿಸಿ ಬಹಳ ಹೊತ್ತಾಗಿ ಒಣಗಿ ಹೋದ ಅನ್ನ, ಹಳಸಿದ ಅನ್ನ, ಮದ್ಯದ ಜೊತೆಯಲ್ಲಿ ತೆಗೆದುಕೊಂಡ ಬಂದ ಅನ್ನ, ಉಚ್ಛಿಷ್ಟ, ಎಲ್ಲರೂ ಊಟ ಮಾಡಿದ ಮೇಲೆ ಉಳಿದ ಅನ್ನ ಇವು ಅಭೋಜ್ಯವಾದವುಗಳು.

ಪಿಷ್ಟಮಾಂಸೇಕ್ಷುಶಾಖಾನಾಂ ವಿಕಾರಾಃ ಪಯಸಸ್ತಥಾ ।
ಸಕ್ತುಧಾನಾಕರಂಭಾಶ್ಚ ನೋಪಭೋಜ್ಯಾಶ್ಚಿರಸ್ಥಿತಾಃ ॥೩೨॥

ಹಿಟ್ಟು, ಮಾಂಸ, ಕಬ್ಬಿನ ರಸ, ಹಾಲು, ಇವುಗಳ ವಿಕಾರಗಳು, ಹೋಳಿಗೆ, ಅರಳು, ಅವಲಕ್ಕಿಪುರಿ, ಬಹಳ ಹೊತ್ತಾದ ಮೊಸರಿನಲ್ಲಿ ಕಲಸಿದ ಹಿಟ್ಟುಹುರಿದ ಹಿಟ್ಟುಗಳು ಇವುಗಳನ್ನು ತಿನ್ನಬಾರದು.

ಪಾಯಸಂ ಕೃಸರಂ ಮಾಂಸಮಪೂಪಾಶ್ಚ ವೃಥಾ ಕೃತಾಃ।
ಅಭೋಜ್ಯಾಶ್ಚಾಪ್ಯಭಕ್ಷ್ಯಶ್ಚ ಬ್ರಾಹ್ಮಣೈರ್ಗೃಹಮೇಧಿಭಿಃ ॥೩೩॥

ದೇವತೆಗಳನ್ನು ಅಥವಾ ಅತಿಥಿಗಳನ್ನು ಉದ್ದೇಶಿಸಿ ಮಾಡದ ಪಾಯಸ, ಎಳ್ಳುಪುಡಿ ಅನ್ನ, ಮಾಂಸ, ಅಪೂಪಗಳು ಇವುಗಳನ್ನು ಗೃಹಸ್ಥರಾದ ಬ್ರಾಹ್ಮಣರು ತಿನ್ನಬಾರದು. ಇನ್ನೊಬ್ಬರಿಗೆ ಬಡಿಸಲೂ ಬಾರದು.

ದೇವಾನ್ ಪಿತೄನ್ ಮನುಷ್ಯಾಂಶ್ಚ ಮುನೀನ್ ಗೃಹ್ಯಾಂಶ್ಚ ದೇವತಾಃ।
ಪೂಜಯಿತ್ವಾ ತತಃ ಪಶ್ಚಾತ್ ಗೃಹಸ್ಥೋ ಭೋಕ್ತುಮರ್ಹತಿ ॥೩೪॥

ಗೃಹಸ್ಥನಾದವನು ದೇವತೆಗಳನ್ನು, ಪಿತೃಗಳನ್ನು, ಋಷಿಗಳನ್ನು, ಗೃಹದೇವತೆಗಳನ್ನು, ಮನುಷ್ಯರನ್ನೂ ಪೂಜಿಸಿ ಅನಂತರ ಭೋಜನವನ್ನು ಮಾಡಬೇಕು.

ಯಥಾ ಪ್ರವ್ರಾಜಿತೋ ಭಿಕ್ಷುರ್ಗೃಹಸ್ಥಃ ಸ್ವಗೃಹೇ ವಸೇತ್ ।
ಏವಂ ವೃತ್ತಃ ಪ್ರಿಯೈರ್ದಾರೈಃ ಸಂವಸನ್ ಧರ್ಮಮಾಪ್ನುಯಾತ್ ॥೩೫॥

ಗೃಹಸ್ಥನಾದವನು ಸನ್ಯಾಸವನ್ನು ಸ್ವೀಕರಿಸಿದ ಭಿಕ್ಷುವಿನಂತೆ ತನ್ನ ಮನೆಯಲ್ಲಿ ವಾಸ ಮಾಡಬೇಕು. ತನ್ನ ಪ್ರೀತಿಪಾತ್ರಳಾದ ಹೆಂಡತಿಯ ಜೊತೆಯಲ್ಲಿಯೂ ಇಂತಹ ನಡತೆಯನ್ನು ಹೊಂದಿದವನು ಧರ್ಮವನ್ನು ಸಂಪಾದಿಸುತ್ತಾನೆ.

ನ ದದ್ಯಾದ್ ಯಶಸೇ ದಾನಂ ನ ಭಯಾನ್ನೋಪಕಾರಿಣೇ।
ನ ನೃತ್ತಗೀತಶೀಲೇಷು ಹಾಸಕೇಷು ಚ ಧಾರ್ಮಿಕಃ ॥೩೬॥

ಧಾರ್ಮಿಕನಾದವನು ಕೀರ್ತಿಗಾಗಿ ದಾನವನ್ನು ಮಾಡಬಾರದು. ಭಯದಿಂದ ದಾನವನ್ನು ಮಾಡಬಾರದು. ಉಪಕಾರವನ್ನು ಮಾಡಿದವನು ಎಂದು ದಾನವನ್ನು ಮಾಡಬಾರದು. ನರ್ತಕರಿಗೆ ಗಾಯಕರಿಗೆ ಮತ್ತು ವಿದೂಷಕರಿಗೆ ದಾನವನ್ನು ಮಾಡಬಾರದು.

ನ ಮತ್ತೇ ಚೈವ ಚೋನ್ಮತ್ತೇ ನ ಸ್ತೇನೇ ನ ಚಿಕಿತ್ಸಕೇ।
ನ ವಾಗ್ದಿನೇ ವಿವರ್ಣೇ ವಾ ನಾಂಗಹೀನೇ ನ ವಾಮನೇ ॥೩೭॥

ಪಾನಮತ್ತನಾದವನಿಗೆ, ಹುಚ್ಚನಾದವನಿಗೆ, ಕಳ್ಳನಿಗೆ, ವೈದ್ಯನಿಗೆ, ಮೂಕನಾದವನಿಗೆ, ಚರ್ಮರೋಗವುಳ್ಳವನಿಗೆ, ಅಂಗಹೀನನಾದವನಿಗೆ, ವಾಮನ(ಬಹಳ ಕುಳ್ಳ)-ನಾದವನಿಗೆ ದಾನವನ್ನು ಮಾಡಬಾರದು.

ನ ದುರ್ಜನೇ ದೌಷ್ಕುಲೇ ವಾ ವ್ರತೈರ್ವಾ ಯೋ ನ ಸಂಸ್ಕೃತಃ।
ಅಶ್ರೋತ್ರಿಯೇ ಮೃತಂ ದಾನಂ ಬ್ರಾಹ್ಮಣೇऽಬ್ರಹ್ಮವಾದಿನಿ ॥೩೮॥

ದುರ್ಜನನಿಗೆ, ದುಷ್ಕುಲದಲ್ಲಿ ಹುಟ್ಟಿದವನಿಗೆ, ವ್ರತಗಳನ್ನು ಮಾಡದವನಿಗೆ ದಾನವನ್ನು ಮಾಡಬಾರದು. ಶ್ರೋತ್ರಿಯನಲ್ಲದ, ವೇದವಿದ್ಯಾರಹಿತನಾದ ಬ್ರಾಹ್ಮಣ-ನಿಗೆ ಮಾಡಿದ ದಾನವು ಮೃತವಾಗುತ್ತದೆ.

ಅಸಮ್ಯಕ್ ಚೈವ ಯದ್ ದತ್ತಮಸಮ್ಯಕ್ ಚ ಪ್ರತಿಗ್ರಹಃ।
ಉಭಯೋಃ ಸ್ಯಾದನರ್ಥಾಯ ದಾತುರಾದಾತುರೇವ ಚ ॥೩೯॥

ಸರಿಯಾಗಿ ಕೊಡದಿದ್ದ ದಾನ, ಸರಿಯಾಗಿ ಮಾಡದಿದ್ದ ಪ್ರತಿಗ್ರಹ ಇವೆರಡೂ

ದಾನವನ್ನು ಕೊಡುವವನಿಗೂ ದಾನವನ್ನು ಸ್ವೀಕರಿಸುವವನಿಗೂ ಅನರ್ಥವಾದ ಫಲವನ್ನು ಉಂಟು ಮಾಡುತ್ತವೆ.

ಯಥಾ ಖದಿರಮಾಲಂಬ್ಯ ಶಿಲಾಂ ವಾಪ್ಯರ್ಣವಂ ತರನ್ ।
ಮಜ್ಜತೇ ಮಜ್ಜತೇ ತದ್ವದ್ ದಾತಾ ಯಶ್ಚ ಪ್ರತೀಚ್ಛಕಃ ॥೪೦॥

ಖದಿರ(ಕಗ್ಗಲಿ)ವೃಕ್ಷದ ಒಂದು ಸಣ್ಣಕೊಂಬೆಯನ್ನು ಹಿಡಿದು, ಅಥವಾ ಕಲ್ಲಿನ ಗುಂಡನ್ನು ಕಟ್ಟಿಕೊಂಡು ಸಮುದ್ರವನ್ನು ದಾಟಲು ಪ್ರಯತ್ನಿಸುವವನು ಮುಳುಗಿ ಹೋಗುವಂತೆ ಇಂತಹ ದಾನವನ್ನು ಮಾಡುವವನು ಮತ್ತು ದಾನವನ್ನು ಸ್ವೀಕರಿಸುವವನು ಮುಳುಗಿ ಹೋಗುತ್ತಾರೆ.

ಕಾಷ್ಠೈರಾರ್ದ್ರೈರ್ಯಥಾ ವಹ್ನಿರುಪಸ್ತೀರ್ಣೋ ನ ದೀಪ್ಯತೇ ।
ತಪಃಸ್ವಾಧ್ಯಾಯಚಾರಿತ್ರೈರೇವಂ ಹೀನಃ ಪ್ರತಿಗ್ರಹೀ ॥೪೧॥

ಹಸಿಯ ಕಟ್ಟಿಗೆಗಳನ್ನು ತುಂಬಿದ ಅಗ್ನಿಯು ಹೇಗೆ ಜ್ವಲಿಸುವುದಿಲ್ಲವೋ ಅದರಂತೆ ತಪಸ್ಸು, ಸ್ವಾಧ್ಯಾಯ, ಶೀಲ ಇವುಗಳಿಂದ ಹೀನನಾದ ಪ್ರತಿಗ್ರಹಿಯೂ ಕೂಡ ಶೋಭಿಸುವುದಿಲ್ಲ.

ಕಪಾಲೇ ಯದ್ವದಾಪಃ ಸ್ಯುಃ ಶ್ವದೃತೌ ವಾ ಯಥಾ ಪಯಃ ।
ಆಶ್ರಯಸ್ಥಾನದೋಷೇಣ ವೃತ್ತಹೀನೇ ಯಥಾ ಶ್ರುತಮ್ ॥೪೨॥

ಒಳ್ಳೆಯ ಶೀಲವಿಲ್ಲದವನಲ್ಲಿ ಇರುವ ವಿದ್ಯೆಯು ತಲೆಯ ಬುರುಡೆಯಲ್ಲಿ ಹಾಕಿದ ನೀರಿನಂತೆ, ನಾಯಿಯ ಚರ್ಮದಲ್ಲಿ ಶೇಖರಿಸಿದ ಕ್ಷೀರದಂತೆ ಆಶ್ರಯದೋಷದಿಂದ ದುಷ್ಟವಾಗುತ್ತದೆ.

ನಿರ್ಮಂತ್ರೋ ನಿರ್ವ್ರತೋ ಯಃ ಸ್ಯಾದಶಾಸ್ತ್ರಜ್ಞೋಽನಸೂಯಕಃ ।
ಅನುಕ್ರೋಶಾತ್ ಪ್ರದಾತವ್ಯಂ ದೀನೇಷ್ವೇವಂ ನರೇಷ್ವಪಿ ॥೪೩॥

ಮಂತ್ರಜಪವಿಲ್ಲದ, ವ್ರತಾನುಷ್ಠಾನವಿಲ್ಲದ, ಶಾಸ್ತ್ರಜ್ಞಾನವಿಲ್ಲದ ಪುರುಷನು

ಅಸೂಯಾರಹಿತನಾಗಿದ್ದರೆ ಅಂತಹ ದೀನನಿಗೂ ಅನುಕಂಪದಿಂದ ದಾನವನ್ನು (ಏನನ್ನಾದರೂ) ಕೊಡಬೇಕು.

ನವೈ ದೇಯಮನುಕ್ರೋಶಾದ್ ದೀನಾಯಾಮಪ್ಯಪಕಾರಿಣೇ।
ಆಪ್ತಾಚರಿತಮಿತ್ಯೇವ ಧರ್ಮ ಇತ್ಯೇವ ವಾ ಪುನಃ ॥೪೪॥

ಆದರೆ ಅಂತಹ ದೀನನಾದವನು ಅಪಕಾರವನ್ನು ಮಾಡುವುದಾದರೆ ಅವನಿಗೆ ಸಜ್ಜನರ ಆಚರಣೆಯೆಂದಲಾಗಲೀ ಅಥವಾ ಇದು ಧರ್ಮ ಎಂಬ ದೃಷ್ಟಿಯಿಂದಾಗಲೀ ಅನುಕಂಪದಿಂದಲೂ ಏನನ್ನೂ ಕೊಡಬಾರದು.

ನಿಷ್ಕಾರಣಂ ಸ್ಮೃತದ್ ದತ್ತಂ ಬ್ರಾಹ್ಮಣೇ ಧರ್ಮವರ್ಜಿತೇ।
ಭವೇದಪಾತ್ರದೋಷೇಣ ನ ಮೇಽತ್ರಾಸ್ತಿ ವಿಚಾರಣಾ ॥೪೫॥

ಧರ್ಮರಹಿತನಾದ ಬ್ರಾಹ್ಮಣನಿಗೆ ನಿಷ್ಕಾರಣವಾಗಿ ಕೊಟ್ಟ ದಾನವು ಅಪಾತ್ರನಿಗೆ ಕೊಟ್ಟ ಕಾರಣದಿಂದಾಗಿ ಯಾವ ಫಲವನ್ನೂ ಕೊಡುವುದಿಲ್ಲ. ಈ ವಿಷಯದಲ್ಲಿ ನನಗೆ ಯಾವ ಸಂಶಯವೂ ಇಲ್ಲ.

ಯಥಾ ದಾರುಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ।
ಬ್ರಾಹ್ಮಣಶ್ಚಾನಧೀಯಾನಸ್ತ್ರಯಸ್ತೇ ನಾಮಧಾರಕಾಃ ॥೪೬॥

ಮರದಿಂದ ಮಾಡಿದ ಆನೆ, ಚರ್ಮದಿಂದ ಮಾಡಿದ ಮೃಗ ಮತ್ತು ಅಧ್ಯಯನವನ್ನು ಮಾಡದಿದ್ದ ಬ್ರಾಹ್ಮಣ ಈ ಮೂವರೂ ಹೆಸರಿಗೆ ಮಾತ್ರ ಆನೆ, ಮೃಗ ಮತ್ತು ಬ್ರಾಹ್ಮಣ ಎಂದು ಕರೆಸಿಕೊಳ್ಳಲ್ಪಡುತ್ತಾರೆ.

ಯಥಾ ಷಂಢೋಽಫಲಃ ಸ್ತ್ರೀಷು ಯಥಾ ಗೌರ್ಭುವಿ ಚಾಫಲಾ।
ಶಕುನಿರ್ವಾಪ್ಯಪಕ್ಷಃ ಸ್ಯಾನ್ನಿರ್ಮಂತ್ರೋ ಬ್ರಾಹ್ಮಣಸ್ತಥಾ ॥೪೭॥

ನಪುಂಸಕನಾದವನು ಸ್ತ್ರೀಯರ ವಿಷಯದಲ್ಲಿ ನಿಷ್ಫಲನಾದಂತೆ, ಹಾಲನ್ನು ಕರೆದು ಮುದಿಯಾದ ಧೇನು(ಇನ್ನು ಮುಂದೆ ಹಾಲುಕೊಡದ ಧೇನು) ಭೂಮಿಯಲ್ಲಿ

ನಿಷ್ಫಲವಾದಂತೆ, ರೆಕ್ಕೆಗಳು ಮೂಡದಿರುವ ಪಕ್ಷಿಯು ನಿಷ್ಫಲವಾದಂತೆ ಮಂತ್ರ-ರಹಿತನಾದ ಬ್ರಾಹ್ಮಣನು ನಿಷ್ಫಲನಾಗುತ್ತಾನೆ. (ಲಕ್ಷಾಲಂಕಾರ)

ಗ್ರಾಮಧಾನ್ಯಂ ಯಥಾ ಶೂನ್ಯಂ ಯಥಾ ಕೂಪಶ್ಚ ನಿರ್ಜಲಃ।
ಯಥಾ ಹುತಮನಗ್ನೌ ಚ ತಥೈವ ಸ್ಯಾನ್ನಿರಾಕೃತೌ ॥೪೮॥

ಧಾನ್ಯವಿಲ್ಲದ ಗ್ರಾಮದಂತೆ, ಜಲವಿಲ್ಲದ ಕೂಪದಂತೆ, ಅಗ್ನಿಯಿಲ್ಲದ ಹೋಮ-ದಂತೆ ಅಂತಹ ನಿರಾಕಾರನಾದ ಬ್ರಾಹ್ಮಣನಿಗೆ ಕೊಟ್ಟ ದಾನವು ವ್ಯರ್ಥವಾಗುತ್ತದೆ.

ದೇವತಾನಾಂ ಪಿತೄಣಾಂ ಚ ಹವ್ಯಕವ್ಯವಿನಾಶನಃ।
ಶತ್ರುರರ್ಥಹರೋ ಮೂಖೋ೯ ನ ಲೋಕಾನ್ ಪ್ರಾಪ್ತುಮರ್ಹತಿ ॥೪೯॥

ಅಂತಹ ಬ್ರಾಹ್ಮಣನು ದೇವತೆಗಳಿಗೂ ಮತ್ತು ಪಿತೃಗಳಿಗೂ ಕೊಟ್ಟ ಹವ್ಯ, ಕವ್ಯಗಳನ್ನು ನಾಶ ಪಡಿಸುತ್ತಾನೆ. ಅವನು ಧಾರ್ಮಿಕರಿಗೆ ಶತ್ರುವಾಗಿ ಅವರ ಪ್ರಯೋಜನವನ್ನು ನಾಶ ಮಾಡುವ ಮೂರ್ಖನಾಗುತ್ತಾನೆ. ಅವನಿಗೆ ಸದ್ಗತಿಯಾ-ಗುವುದಿಲ್ಲ.

ಏತತ್ ತೇ ಕಥಿತಂ ಸರ್ವಂ ಯಥಾವೃತ್ತಂ ಯುಧಿಷ್ಠಿರ।
ಸಮಾಸೇನ ಮಹದ್ ಹ್ಯೇತಚ್ಛ್ರೋತವ್ಯಂ ಭರತರ್ಷಭ ॥೫೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಭಕ್ಷ್ಯಾಭಕ್ಷ್ಯವಿಧಿರ್ನಾಮ ಸಪ್ತತ್ರಿಂಶೋಽಧ್ಯಾಯಃ ॥೩೭॥

ಎಲೈ ಯುಧಿಷ್ಠಿರನೇ! ನೀನು ಕೇಳಿದ ಎಲ್ಲವನ್ನೂ ನಿನಗೆ ಸಂಕ್ಷೇಪವಾಗಿ ಹೇಳಿರುವೆನು. ಎಲೈ ಭರತರ್ಷಭನೇ! ಇವೆಲ್ಲವನ್ನೂ ಇನ್ನೂ ವಿಸ್ತಾರವಾಗಿ ಕೇಳ-ಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೩೭ನೆಯ ಅಧ್ಯಾಯವು ಮುಗಿಯಿತು.

—0—

೩೮. ಮೂವತ್ತೆಂಟನೆಯ ಅಧ್ಯಾಯ

ಯುದ್ಧಾನಂತರದಲ್ಲಿ ಯುಧಿಷ್ಠಿರನ ಪುರಪ್ರವೇಶ

ಯುಧಿಷ್ಠಿರಃ

ಶ್ರೋತುಮಿಚ್ಛಾಮಿ ಭಗವನ್ ವಿಸ್ತರೇಣ ಮಹಾಮುನೇ।
ರಾಜಧರ್ಮಾನ್ ದ್ವಿಜಶ್ರೇಷ್ಠ ಚಾತುರ್ವರ್ಣ್ಯಸ್ಯ ಚಾಖಿಲಾನ್ ॥೧॥

ಯುಧಿಷ್ಠಿರ – ಪೂಜ್ಯರೇ! ಮಹಾಮುನಿಗಳೇ! ದ್ವಿಜಶ್ರೇಷ್ಠರೇ! ನಾನು ರಾಜ-ಧರ್ಮಗಳನ್ನೂ ಮತ್ತು ಚಾತುರ್ವರ್ಣ್ಯದ ಎಲ್ಲ ಧರ್ಮಗಳನ್ನೂ (ವಿಸ್ತಾರವಾಗಿ) ಕೇಳಲು ಬಯಸುತ್ತೇನೆ.

ಆಪತ್ಸು ಚ ಯಥಾ ನೀತಿರ್ವಿಧಾತವ್ಯಾ ಮಹೀಕ್ಷಿತಾ।
ಧರ್ಮ್ಯಮಾಲಂಬ್ಯ ಪಂಥಾನಂ ವಿಜಯೇಯಂ ಕಥಂ ಮಹೀಮ್ ॥೨॥

ರಾಜನಾದವನು ಆಪತ್ತಿನ ಕಾಲದಲ್ಲಿ ಎಂತಹ ನೀತಿಯನ್ನು ಅನುಸರಿಸಬೇಕು? ನಾನು ಧರ್ಮಮಾರ್ಗವನ್ನು ಅವಲಂಬಿಸಿ ಹೇಗೆ ಭೂಮಿಯನ್ನು ಗೆದ್ದೇನು?

ಪ್ರಾಯಶ್ಚಿತ್ತಕಥಾ ಹ್ಯೇಷಾ ಭಕ್ಷ್ಯಾಭಕ್ಷ್ಯವಿವರ್ಜಿತಾ।
ಕೌತೂಹಲಾನುಪ್ರವಣಾ ಹರ್ಷಂ ಜನಯತೀವ ಮೇ ॥೩॥

ನೀವು ಹೇಳಿದ ಭಕ್ಷ್ಯಾಭಕ್ಷ್ಯವಿವೇಚನೆಯು ಮತ್ತು ಪ್ರಾಯಶ್ಚಿತ್ತವಿಚಾರವು ನನಗೆ ಬಹಳ ಕುತೂಹಲವನ್ನು ಮತ್ತು ಸಂತೋಷವನ್ನು ಉಂಟು ಮಾಡಿವೆ.

ಧರ್ಮಚರ್ಯಾ ಚ ರಾಜ್ಯಂ ಚ ನಿತ್ಯಮೇವ ವಿರುದ್ಧ್ಯತೇ।
ಯೇನ ಮುಹ್ಯತಿ ಮೇ ಚೇತಶ್ಚಿಂತಯಾನಸ್ಯ ನಿತ್ಯಶಃ ॥೪॥

ಧರ್ಮಾಚರಣೆಯು ಮತ್ತು ರಾಜ್ಯಪಾಲನವು ಎರಡೂ ಯಾವಾಗಲೂ ವಿರುದ್ಧವಾದವುಗಳು. ಆದ್ದರಿಂದ ನಾನು ಎಷ್ಟು ಚಿಂತಿಸಿದರೂ ನನ್ನ ಮನಸ್ಸಿಗೆ ಮೋಹವುಂಟಾಗುತ್ತಿದೆ.

ವೈಶಂಪಾಯನಃ

ತಮುವಾಚ ಮಹಾತೇಜಾ ವ್ಯಾಸೋ ವೇದವಿದಾಂವರಃ।
ನಾರದಂ ಸಮಭಿಪ್ರೇಕ್ಷ್ಯ ಸರ್ವಂ ಜಾನನ್ ಪುರಾತನಮ್ ॥೫॥

ವೈಶಂಪಾಯನರು – ವಿವಿಧವೇತ್ತರಲ್ಲಿ ಶ್ರೇಷ್ಠರಾದ, ಮಹಾತೇಜಸ್ವಿ- ಗಳಾದ ವ್ಯಾಸರು ಪುರಾತನವಾದ ಎಲ್ಲವನ್ನೂ ತಿಳಿದವರಾಗಿ ನಾರದರನ್ನು ನೋಡುತ್ತಾ ಯುಧಿಷ್ಠಿರನನ್ನು ಕುರಿತು ಮಾತನಾಡಿದರು.

ಶ್ರೋತುಮಿಚ್ಛಸಿ ಚೇದ್ ಧರ್ಮಾನಖಿಲೇನ ಯುಧಿಷ್ಠಿರ।
ಪ್ರೈಹಿ ಭೀಷ್ಮಂ ಮಹಾಬಾಹೋ ವೃದ್ಧಂ ಕುರುಪಿತಾಮಹಮ್ ॥೬॥

ಎಲೈ ಯುಧಿಷ್ಠಿರನೇ! ನೀನು ಧರ್ಮಗಳನ್ನು ಸಮಗ್ರವಾಗಿ ಕೇಳಲು ಬಯ-ಸುವುದಾದರೆ ಎಲೈ ಮಹಾಬಾಹುವೇ! ಕುರುಪಿತಾಮಹರಾದ ವೃದ್ಧರಾದ ಭೀಷ್ಮರ ಬಳಿಗೆ ಹೋಗು.

ಸ ತೇ ಸರ್ವರಹಸ್ಯೇಷು ಸಂಶಯಾನ್ ಮನಸಿ ಸ್ಥಿತಾನ್।
ಛೇತ್ತಾ ಭಾಗೀರಥೀಪುತ್ರಃ ಸರ್ವಜ್ಞಃ ಸರ್ವಧರ್ಮವಿತ್ ॥೭॥

ಗಂಗಾಪುತ್ರರೂ ಸರ್ವಜ್ಞರೂ ಎಲ್ಲ ಧರ್ಮವನ್ನೂ ತಿಳಿದವರೂ ಆದ ಅವರು ಎಲ್ಲ ರಹಸ್ಯವಿಷಯಗಳಲ್ಲಿಯೂ ನಿನ್ನ ಮನಸ್ಸಿನಲ್ಲಿರುವ ಸಂಶಯಗಳನ್ನು ಪರಿಹರಿಸುವರು.

ಜನಯಾಮಾಸ ಯಂ ದೇವೀ ದಿವ್ಯಾ ತ್ರಿಪಥಗಾ ನದೀ।
ಸಾಕ್ಷಾದ್ ದದರ್ಶ ಯೋ ದೇವಾನ್ ಸರ್ವಾನ್ ಶಕ್ರಪುರೋಗಮಾನ್ ॥೮

ಬೃಹಸ್ಪತಿಪುರೋಗಾಂಶ್ಚ ದೇವರ್ಷೀನಸಕೃತ್ ಪ್ರಭುಃ।
ತೋಷಯಿತ್ವೋಪಚಾರೇಣ ರಾಜನೀತಿಮಧೀತವಾನ್ ॥೯॥

ತ್ರಿಪಥಗಾಮಿನಿಯಾದ ದೇವಗಂಗೆಯು ಯಾವನನ್ನು ಪುತ್ರನನ್ನಾಗಿ ಪಡೆ-

ದಳೋ, ಯಾವನು ಇಂದ್ರಮೊದಲಾದ ಎಲ್ಲ ದೇವತೆಗಳನ್ನೂ ಸಾಕ್ಷಾತ್ತಾಗಿ ನೋಡಿದ್ದಾನೆಯೋ, ಯಾವನು ಬೃಹಸ್ಪತಿ ಮೊದಲಾದ ದೇವರ್ಷಿಗಳನ್ನು ಅನೇಕಬಾರಿ ನೋಡಿ ಪೂಜಿಸಿ, ಅವರನ್ನು ಸಂತೋಷಪಡಿಸಿ, ರಾಜನೀತಿಶಾಸ್ತ್ರವನ್ನು ಅಧ್ಯಯನವನ್ನು ಮಾಡಿದ್ದಾನೆಯೋ (ಅಂತಹ ಭೀಷ್ಮರ ಬಳಿಗೆ ಹೋಗು).

ಉಶನಾ ವೇದ ಯಚ್ಛಾಸ್ತ್ರಂ ಯಚ್ಚ ದೇವಗುರುರ್ದ್ವಿಜಃ।
ತಚ್ಚ ಸರ್ವಂ ಸವೈಯಾಖ್ಯಂ ಪ್ರಾಪ್ತವಾನ್ ಕುರುಸತ್ತಮಃ ॥೧೦॥

ಶುಕ್ರಾಚಾರ್ಯರು ಯಾವ ಶಾಸ್ತ್ರವನ್ನು ತಿಳಿದಿದ್ದಾರೆಯೋ, ದೇವಗುರುಗಳಾದ ಬೃಹಸ್ಪತ್ಯಾಚಾರ್ಯರು ಯಾವ ಶಾಸ್ತ್ರವನ್ನು ತಿಳಿದಿದ್ದಾರೆಯೋ ಅವೆಲ್ಲವನ್ನೂ ವ್ಯಾಖ್ಯಾನಸಹಿತವಾಗಿ ಕುರುಶ್ರೇಷ್ಠರಾದ ಭೀಷ್ಮರು ತಿಳಿದಿದ್ದಾರೆ.

ಭಾರ್ಗವಾಚ್ಚ್ಯವನಾಚ್ಚಾಪಿ ವೇದಾನಂಗೋಪಬೃಂಹಿತಾನ್।
ಪ್ರತಿಪೇದೇ ಮಹಾಬುದ್ಧಿರ್ವಸಿಷ್ಠಾಚ್ಚ ಯತವ್ರತಾತ್ ॥೧೧॥

ಮಹಾಬುದ್ಧಿಶಾಲಿಗಳಾದ ಭೀಷ್ಮರು ಭಾರ್ಗವವಂಶದ ಚ್ಯವನರಿಂದ ಮತ್ತು ದೃಢವ್ರತರಾದ ವಸಿಷ್ಠರಿಂದ ಎಲ್ಲ ವೇದವೇದಾಂಗಗಳನ್ನು ಅಧ್ಯಯನ ಮಾಡಿದ್ದಾರೆ.

ಪಿತಾಮಹಸುತಂ ಜ್ಯೇಷ್ಠಂ ಕುಮಾರಂ ದೀಪ್ತತೇಜಸಮ್।
ಅಧ್ಯಾತ್ಮಗತಿತತ್ತ್ವಜ್ಞಮುಪಾಶಿಕ್ಷತ ಯಃ ಪುರಾ ॥೧೨॥

ಅದರ ಹಿಂದೆ ಬ್ರಹ್ಮದೇವರ ಜ್ಯೇಷ್ಠಪುತ್ರರೂ, ದೀಪ್ತವಾದ ತೇಜಸ್ಸುಳ್ಳವರೂ, ಅಧ್ಯಾತ್ಮಜ್ಞಾನನಿಪುಣರೂ ಆದ ಸನತ್ಕುಮಾರರಿಂದ ಶಿಕ್ಷಣವನ್ನು ಪಡೆದಿದ್ದಾರೆ.

ಮಾರ್ಕಂಡೇಯಮುಖಾತ್ ಕೃತ್ಸ್ನಂ ಯತಿಧರ್ಮಮವಾಪ್ತವಾನ್।
ರಾಮಾದಸ್ತ್ರಾಣಿ ಶಕ್ರಾಚ್ಚ ಪ್ರಾಪ್ತವಾನ್ ಭರತರ್ಷಭ ॥೧೩॥

ಮಾರ್ಕಂಡೇಯರಿಂದ ಸಮಗ್ರವಾಗಿ ಯತಿಧರ್ಮಗಳನ್ನು ಕೇಳಿ ತಿಳಿದಿದ್ದಾರೆ. ಎಲೈ ಭರತರ್ಷಭನೇ! ಪರಶುರಾಮರಿಂದಲೂ ಮತ್ತು ಇಂದ್ರನಿಂದಲೂ ಅಸ್ತ್ರಗಳನ್ನು ಪಡೆದಿದ್ದಾರೆ.

ಮೃತ್ಯುರಾತ್ಮೇಚ್ಛಯಾ ಯಸ್ಯ ಜಾತಸ್ಯ ಮನುಜೇಷ್ವಪಿ।
ತಥಾऽನಪತ್ಯಸ್ಯ ಸತಃ ಪುಣ್ಯಶ್ಲೋಕಾ ದಿವಿ ಶ್ರುತಾಃ ॥೧೪॥

ಮನುಷ್ಯಲೋಕದಲ್ಲಿ ಜನಿಸಿದರೂ ಅವರಿಗೆ ಇಚ್ಛಾಮರಣವಿದೆ. ವಿವಾಹವನ್ನು ಮಾಡಿಕೊಳ್ಳದೆ ಮಕ್ಕಳನ್ನು ಪಡೆಯದ ಅವರ ಪವಿತ್ರವಾದ ಕೀರ್ತಿಯು ದೇವಲೋಕದಲ್ಲಿ ಕೇಳಿಬರುತ್ತದೆ.

ಯಸ್ಯ ಬ್ರಹ್ಮರ್ಷಯಃ ಪುಣ್ಯಾ ನಿತ್ಯಮಾಸನ್ ಸಭಾಸದಃ।
ಯಸ್ಯ ನಾವಿದಿತಂ ಕಿಂಚಿಜ್ಜ್ಞಾನಜ್ಞೇಯೇಷು ವಿದ್ಯತೇ ॥೧೫॥

ಅವರಿದ್ದ ಸಭೆಯಲ್ಲಿ ಪವಿತ್ರರಾದ ಬ್ರಹ್ಮರ್ಷಿಗಳು ಯಾವಾಗಲೂ ಸಭಾಸದರಾಗಿದ್ದರು. ಜ್ಞಾನಜ್ಞೇಯಗಳ ವಿಷಯದಲ್ಲಿ ಅವರಿಗೆ ತಿಳಿಯದಿರುವುದು ಯಾವುದೂ ಇಲ್ಲ.

ಸ ತೇ ವಕ್ಷ್ಯತಿ ಧರ್ಮಜ್ಞಃ ಸೂಕ್ಷ್ಮಧರ್ಮಾರ್ಥತತ್ತ್ವವಿತ್।
ತಮಭ್ಯೇಹಿ ಪುರಾ ಪ್ರಾಣಾನ್ ಸ ವಿಮುಂಚತಿ ಧರ್ಮವಿತ್ ॥೧೬॥

ಸೂಕ್ಷ್ಮವಾದ ಧರ್ಮತತ್ವಗಳನ್ನು ಮತ್ತು ಅರ್ಥತತ್ವಗಳನ್ನು ಧರ್ಮಜ್ಞರಾದ ಅವರು ನಿನಗೆ ಎಲ್ಲವನ್ನೂ ಹೇಳುವರು. ಧರ್ಮಜ್ಞರಾದ ಅವರು ಪ್ರಾಣಗಳನ್ನು ತ್ಯಜಿಸುವುದಕ್ಕಿಂತ ಮೊದಲೇ ನೀನು ಅವರ ಬಳಿಗೆ ಹೋಗು.

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯೋ ದೀರ್ಘಪ್ರಜ್ಞೋ ಮಹಾದ್ಯುತಿಃ।
ಉವಾಚ ವದತಾಂಶ್ರೇಷ್ಠಂ ವ್ಯಾಸಂ ಸತ್ಯವತೀಸುತಮ್ ॥೧೭॥

ವೈಶಂಪಾಯನರು – ಹೀಗೆ ಹೇಳಲ್ಪಟ್ಟ ಕುಂತಿಯ ಪುತ್ರನೂ, ದೀರ್ಘಪ್ರಜ್ಞೆಯುಳ್ಳವನೂ, ಮಹಾಕಾಂತಿಯುಕ್ತನೂ ಆದ ಯುಧಿಷ್ಠಿರನು ಸತ್ಯವತೀಸುತರೂ, ಮಾತನಾಡುವವರಲ್ಲಿ ಶ್ರೇಷ್ಠರೂ ಆದ ವ್ಯಾಸರನ್ನು ಕುರಿತು ಹೇಳಿದನು.

ವೈಶಸಂ ಸುಮಹತ್ ಕೃತ್ವಾ ಜ್ಞಾತೀನಾಂ ಲೋಮಹರ್ಷಣಮ್ ।
ಆಗಸ್ಕೃತ್ ಸರ್ವಲೋಕಸ್ಯ ಪೃಥಿವೀನಾಶಕಾರಕಃ ॥೧೮॥

ಘಾತಯಿತ್ವಾತಮೇವಾಜೌ ಛಲೇನಾಜಿಹ್ಮಯೋಧಿನಮ್ ।
ಉಪಸಂಪ್ರಷ್ಟುಮರ್ಹಾಮಿ ತಮಹಂ ಕೇನ ಹೇತುನಾ ॥೧೯॥

ದಾಯಾದಿಗಳಿಗೆ ರೋಮಾಂಚಕಾರಿಯಾದ ದೊಡ್ಡ ಹಿಂಸೆಯನ್ನು ಉಂಟು-ಮಾಡಿ, ಪೃಥಿವಿಯ ನಾಶವನ್ನು ಉಂಟುಮಾಡಿ, ಸ್ವರ್ಗಲೋಕಕ್ಕೂ ಅಪಚಾರವನ್ನು ಮಾಡಿರುವ ನಾನು, ಕಪಟಯುದ್ಧವನ್ನು ಮಾಡದಿರುವ ಅದೇ ಭೀಷ್ಮರನ್ನು ಕಪಟ-ದಿಂದ ಘಾಸಿಗೊಳಿಸಿ, ಅವರ ಸಮೀಪಕ್ಕೆ ಹೋಗಲು ಹೇಗೆ ಅರ್ಹನಾಗುತ್ತೇನೆ?

ತತಸ್ತಂ ನೃಪತಿಶ್ರೇಷ್ಠಂ ಚಾತುರ್ವರ್ಣ್ಯಹಿತೇಪ್ಸಯಾ ।
ಪುನರಾಹ ಮಹಾಬಾಹುರ್ಯದುಶ್ರೇಷ್ಠೋ ಮಹಾದ್ಯುತಿಃ ॥೨೦॥

ಆಗ ಮಹಾಬಾಹುವೂ, ಮಹಾದ್ಯುತಿಯೂ, ಯದುಶ್ರೇಷ್ಠನೂ ಆದ ಕೃಷ್ಣನು ಚಾತುರ್ವರ್ಣ್ಯಕ್ಕೆ ಹಿತವನ್ನುಂಟು ಮಾಡಲು ಬಯಸಿ ಆ ರಾಜಶ್ರೇಷ್ಠನನ್ನು ಕುರಿತು ಮಾತನಾಡಿದನು.

ಶ್ರೀಭಗವಾನ್

ನೇದಾನೀಮತಿನಿರ್ಬಂಧಂ ಶೋಕೇ ಕರ್ತುಮಿಹಾರ್ಹಸಿ ।
ಯದಾಹ ಭಗವಾನ್ ವ್ಯಾಸಸ್ತತ್ ಕುರುಷ್ವ ನೃಪೋತ್ತಮ ॥೨೧॥

ಶ್ರೀಭಗವಾನ್ – ಎಲೈ ನೃಪೋತ್ತಮನೇ! ಈಗ ನೀನು ಬಹಳವಾದ ಶೋಕ-ವನ್ನು ಮಾಡಲು ಅರ್ಹನಲ್ಲ; ಪೂಜ್ಯರಾದ ವ್ಯಾಸರು ಏನು ಹೇಳುತ್ತಾರೆಯೋ ಅದರಂತೆ ಮಾಡು.

ಬ್ರಾಹ್ಮಣಾಸ್ತ್ವಾಂ ಮಹಾಬಾಹೋ ಭ್ರಾತರಶ್ಚ ಮಹೌಜಸಃ ।
ಪರ್ಜನ್ಯಮಿವ ಘರ್ಮಾರ್ತಾ ಆಶಂಸಾನಾ ಉಪಾಸತೇ ॥೨೨॥

ಎಲೈ ಮಹಾಬಾಹುವೇ! ಮಹಾಪರಾಕ್ರಮಿಗಳಾದ ನಿನ್ನ ತಮ್ಮಂದಿರು ಮತ್ತು ಬ್ರಾಹ್ಮಣರು, ಬಿಸಿಲಿನಿಂದ ಬಳಲಿದವರು ಮಳೆಯನ್ನು ನಿರೀಕ್ಷಿಸುವಂತೆ, ನಿನ್ನಿಂದ ಶುಭವನ್ನು ಆಶಂಸಿಸುತ್ತಾ ನಿನ್ನನ್ನು ಉಪಾಸನೆ ಮಾಡುತ್ತಿದ್ದಾರೆ.

ಹತಶಿಷ್ಟಾಶ್ಚ ರಾಜಾನಃ ಕೃತ್ಸ್ನಂ ಚೈವ ಸಮಾಗತಮ್ ।
ಚಾತುರ್ವರ್ಣ್ಯಂ ಮಹಾರಾಜ ರಾಷ್ಟ್ರಂ ತೇ ಕುರುಜಾಂಗಲಮ್ ॥೨೩॥

ಆಳಿದುಳಿದ ರಾಜರೆಲ್ಲರೂ ಇಲ್ಲಿಗೆ ಬಂದಿದ್ದಾರೆ. ಎಲೈ ಮಹಾರಾಜನೇ! ಕುರುಜಾಂಗಲನಿವಾಸಿಗಳಾದ ಚಾತುರ್ವರ್ಣ್ಯಸಂಬಂಧಿಗಳಾದ ನಿನ್ನ ರಾಷ್ಟ್ರದ ಜನರೆಲ್ಲರೂ ಇಲ್ಲಿ ಬಂದಿದ್ದಾರೆ.

ಪ್ರಿಯಾರ್ಥಮಪಿ ಚೈತೇಷಾಂ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ನಿಯೋಗಾದಸ್ಯ ಚ ಗುರೋರ್ವ್ಯಾಸಸ್ಯಾಮಿತತೇಜಸಃ ॥೨೪॥

ಸುಹೃದಾಂ ಚಾಸ್ಮದಾದೀನಾಂ ದ್ರೌಪದ್ಯಾಶ್ಚ ಪರಂತಪ ।
ಕುರು ಪ್ರಿಯಮಮಿತ್ರಘ್ನ ಲೋಕಸ್ಯ ಚ ಹಿತಂ ಕುರು ॥೨೫॥

ಈ ಮಹಾತ್ಮರಾದ ಬ್ರಾಹ್ಮಣರ ಪ್ರಿಯಾರ್ಥವಾಗಿ, ಅಮಿತತೇಜಸ್ವಿಗಳಾದ ಗುರುಗಳಾದ ವ್ಯಾಸರ ಆಜ್ಞೆಗೆ ಅನುಸಾರವಾಗಿ, ನಿನ್ನ ಹಿತೈಷಿಗಳಾದ ನಮ್ಮೆಲ್ಲರ ಮತ್ತು ದ್ರೌಪದಿಯ ಸಲುವಾಗಿ ಎಲೈ ಪರಂತಪನೇ! ಎಲೈ ಶತ್ರುಸೂದನನೇ! ಪ್ರಿಯವನ್ನು ಮಾಡುವವನಾಗು. ಲೋಕಕ್ಕೂ ಹಿತವನ್ನುಂಟುಮಾಡು.

ಏವಮುಕ್ತಸ್ತು ಕೃಷ್ಣೇನ ರಾಜಾ ರಾಜೀವಲೋಚನಃ ।
ಹಿತಾರ್ಥಂ ಸರ್ವಲೋಕಸ್ಯ ಸಮುತ್ತಸ್ಥೌ ಮಹಾತಪಾಃ ॥೨೬॥

ಕೃಷ್ಣನಿಂದ ಹೀಗೆ ಹೇಳಲ್ಪಟ್ಟ ರಾಜೀವಲೋಚನನೂ, ಮಹಾತಪಸ್ವಿಯೂ ಆದ ಯುಧಿಷ್ಠಿರರಾಜನು ಸರ್ವಲೋಕಕ್ಕೆ ಹಿತವನ್ನುಂಟು ಮಾಡಲು ಉದ್ದೇಶಿಸಿ, ಎದ್ದು ನಿಂತನು.

ಸೋಽನುನೀತೋ ನರವ್ಯಾಘ್ರೋ ವಿಷ್ವಕ್ಸೇನಸ್ವರೂಪಿಣಾ ಸ್ವಯಮ್ ।
ದ್ವೈಪಾಯನೇನ ಚ ತಥಾ ದೇವಸ್ಥಾನೇನ ಜಿಷ್ಣುನಾ ॥೨೭॥

ಏತೈಶ್ಚಾನ್ಯೈಶ್ಚ ಬಹುಭಿರನುನೀತೋ ಯುಧಿಷ್ಠಿರಃ ।
ವ್ಯಜಹಾನ್ಮಾನಸಂ ದುಃಖಂ ಸಂತಾಪಂ ಚ ಮಹಾಮನಾಃ ॥೨೮॥

ನರವ್ಯಾಘ್ರನಾದ ಅವನು ವಿಷ್ಣುವಿನ ಸ್ವರೂಪನಾದ ಜಿಷ್ಣುವಿನಿಂದಲೂ ವೇದ-ವ್ಯಾಸರಿಂದಲೂ ದೇವಸ್ಥಾನನಾಮಕ ಋಷಿಗಳಿಂದಲೂ ಅರ್ಜುನನಿಂದಲೂ ಮತ್ತು ಇನ್ನೂ ಅನೇಕರಿಂದಲೂ ಹೀಗೆ ಸಮಾಧಾನ ಪಡಿಸಲ್ಪಟ್ಟವನಾಗಿ ಧೈರ್ಯಶಾಲಿಯಾದ ಅವನು ಮನಸ್ಸಿನ ದುಃಖವನ್ನು ಮತ್ತು ಸಂತಾಪವನ್ನು ತ್ಯಜಿಸಿದನು.

ಶ್ರುತವಾಕ್ಯಃ ಶ್ರುತನಿಧಿಃ ಶ್ರುತಶ್ರವ್ಯವಿಶಾರದಃ ।
ವ್ಯವಸ್ಯ ಮನಸಃ ಶಾಂತಿಮಗಚ್ಛತ್ ಪಾಂಡುನಂದನಃ ॥೨೯॥

ವೇದವನ್ನು ಶ್ರವಣ ಮಾಡಿದ, ವಿದ್ಯಾನಿಧಿಯಾದ, ಕೇಳಬೇಕಾದುದನ್ನು ಕೇಳುವುದರಲ್ಲಿವಿಶಾರದನಾದ, ಪಾಂಡುನಂದನನಾದ ಅವನು ತನ್ನ ಮನಸ್ಸಿನಿಂದ ವಿಚಾರ ಮಾಡಿ ನಿರ್ಧರಿಸಿ ಶಾಂತಿಯನ್ನು ಹೊಂದಿದನು.

ಸ ತೈಃ ಪರಿವೃತೋ ರಾಜಾ ನಕ್ಷತ್ರೈರಿವ ಚಂದ್ರಮಾಃ ।
ಧೃತರಾಷ್ಟ್ರಂ ಪುರಸ್ಕೃತ್ಯ ಸ್ವಪುರಂ ಪ್ರವಿವೇಶ ಹ ॥೩೦॥

ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆ ರಾಜನಾದ ಯುಧಿಷ್ಠಿರನು ಅವರೆಲ್ಲರಿಂದಲೂ ಸುತ್ತುವರಿಯಲ್ಪಟ್ಟು ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ತನ್ನ ಪಟ್ಟಣವನ್ನು ಪ್ರವೇಶಿಸಿದನು.

ಪ್ರವಿವಿಕ್ಷುಃ ಸ ಧರ್ಮಜ್ಞಃ ಕುಂತೀಪುತ್ರೋ ಯುಧಿಷ್ಠಿರಃ ।
ಅರ್ಚಯಾಮಾಸ ದೇವಾಂಶ್ಚ ಬ್ರಾಹ್ಮಣಾಂಶ್ಚ ಸಹಸ್ರಶಃ ॥೩೧॥

ಧರ್ಮಜ್ಞನಾದ ಕುಂತೀಪುತ್ರನಾದ ಯುಧಿಷ್ಠಿರನು ಪುರವನ್ನು ಪ್ರವೇಶ ಮಾಡಲು

ಬಯಸಿ ಮೊದಲು ದೇವತೆಗಳನ್ನೂ ಮತ್ತು ಸಹಸ್ರಾರುಸಂಖ್ಯಾಕರಾದ ಬ್ರಾಹ್ಮಣರನ್ನೂ ಪೂಜಿಸಿದನು.

ತತೋ ರಥಂ ನವಂ ಶುಭ್ರಂ ಕಂಬಳಾಜಿನಸಂವೃತಮ್ ।
ಯುಕ್ತಂ ಷೋಡಶಭಿರ್ಹಯೈಃ ಪಾಂಡರೈಃ ಶುಭಲಕ್ಷಣೈಃ ॥೩೨॥

ಮಂತ್ರೈರಭ್ಯರ್ಚಿತಃ ಪುಣ್ಯೈಃ ಸ್ತೂಯಮಾನೋ ಮಹರ್ಷಿಭಿಃ ।
ಆರುರೋಹ ಯಥಾ ದೇವಃ ಸೋಮೋऽಮೃತಮಯಂ ರಥಮ್ ॥೩೩॥

ಅನಂತರ ಶುಭಲಕ್ಷಣವುಳ್ಳ ಹದಿನಾರು ಶ್ವೇತಾಶ್ವಗಳನ್ನು ಹೂಡಿದ, ರತ್ನಕಂಬಳಿ ಮತ್ತು ಅಜಿನಗಳಿಂದ ಸುತ್ತುವರೆಯಲ್ಪಟ್ಟ, ಶುಭ್ರವಾದ ಹೊಸದಾದ ರಥವನ್ನು ಮಹರ್ಷಿಗಳಿಂದ ಪುಣ್ಯವಚನಗಳಿಂದ ಸ್ತೋತ್ರಮಾಡಲ್ಪಟ್ಟು ಮತ್ತು ಮಂತ್ರಗಳಿಂದ ಸತ್ಕರಿಸಲ್ಪಟ್ಟು ಚಂದ್ರನು ಅಮೃತಮಯವಾದ ರಥವನ್ನು ಏರಿದಂತೆ ಏರಿದನು.

ಜಗ್ರಾಹ ರಶ್ಮೀನ್ ಕೌಂತೇಯೋ ಭೀಮೋ ಭೀಮಪರಾಕ್ರಮಃ ।
ಅರ್ಜುನಃ ಪಾಂಡರಂ ಛತ್ರಂ ಧಾರಯಾಮಾಸ ಭಾನುಮತ್ ॥೩೪॥

ಕುಂತೀಪುತ್ರನಾದ ಭಯಂಕರಪರಾಕ್ರಮವುಳ್ಳ ಭೀಮಸೇನನು ಅಶ್ವಗಳ ಕಡಿವಾಣಗಳನ್ನು ಹಿಡಿದನು. ಅರ್ಜುನನು ಪ್ರಕಾಶಮಾನವಾದ ಶ್ವೇತಚ್ಛತ್ರವನ್ನು ಹಿಡಿದನು.

ಧ್ರಿಯಮಾಣಂ ತು ತಚ್ಛತ್ರಂ ಪಾಂಡರಸ್ತಸ್ಯ ಮೂರ್ಧನಿ ।
ಶುಶುಭೇ ತಾರಕಾರಾಜಸಿತಮಭ್ರಮಿವಾಂಬರೇ ॥೩೫॥

ಅವನ ಶಿರಸ್ಸಿನ ಮೇಲೆ ಹಿಡಿದ ಆ ಶ್ವೇತಚ್ಛತ್ರವು ಆಕಾಶದಲ್ಲಿ ಚಂದ್ರನಿಂದ ಕೂಡಿದ ಮೋಡದಂತೆ ಶೋಭಿಸಿತು.

ಚಾಮರವ್ಯಜನೇ ಚಾಸ್ಯ ವೀರೌ ಜಗೃಹತುಸ್ತದಾ ।
ಚಂದ್ರರಶ್ಮಿಪ್ರಭೇ ಶುಭ್ರೇ ಮಾದ್ರೀಪುತ್ರಾವಲಂಕೃತೇ ॥೩೬॥

ಮಾದ್ರೀಪುತ್ರರಾದ ವೀರರಾದ ನಕುಲಸಹದೇವರು ಚಂದ್ರಕಿರಣಗಳ ಕಾಂತಿಯುಳ್ಳ ಶುಭ್ರವಾದ ಅಲಂಕೃತವಾದ ಚಾಮರವ್ಯಜನಗಳನ್ನು ಹಿಡಿದರು.

ತೇ ಪಂಚ ರಥಮಾಸ್ಥಾಯ ಭ್ರಾತರಃ ಸಮಲಂಕೃತಾಃ।
ಭೂತಾನೀವ ಸಮಸ್ತಾನಿ ರಾಜನ್ ದದೃಶಿರೇ ತದಾ ॥೩೭॥

ಎಲೈ ರಾಜನೇ! ಅಲಂಕೃತರಾಗಿ ರಥವನ್ನು ಏರಿದ ಆ ಐವರು ಸಹೋದರರು ಒಂದು ಗೂಡಿದ ಪಂಚಭೂತಗಳಂತೆ ಆಗ ಕಂಡುಬಂದರು.

ಆಸ್ಥಾಯ ತು ರಥಂ ಶುಭ್ರಂ ಯುಕ್ತಮಶ್ವೈರ್ಮಹಾಜವೈಃ।
ಅನ್ವಯಾತ್ ಪೃಷ್ಠತೋ ರಾಜನ್ ಯುಯುತ್ಸುಃ ಪಾಂಡವಾಗ್ರಜಮ್ ॥೩೮

ಎಲೈ ರಾಜನೇ! ಯುಯುತ್ಸುವು ಮಹಾವೇಗವುಳ್ಳ ಅಶ್ವಗಳಿಂದ ಕೂಡಿದ ಶುಭ್ರವಾದ ರಥವನ್ನು ಏರಿ ಪಾಂಡವರ ಹಿರಿಯನಾದ ಯುಧಿಷ್ಠಿರನನ್ನು ಹಿಂಬಾಲಿಸಿದನು.

ರಥಂ ಹೇಮಮಯಂ ಶುಭ್ರಂ ಸೈನ್ಯಸುಗ್ರೀವಯೋಜಿತಮ್।
ಸಹ ಸಾತ್ಯಕಿನಾ ಕೃಷ್ಣಃ ಸಮಾಸ್ಥಾಯಾನ್ವಯಾತ್ ಕುರೂನ್ ॥೩೯॥

ಕೃಷ್ಣನು ಸೈನ್ಯಸುಗ್ರೀವ ಅಶ್ವಗಳನ್ನು ಹೂಡಿದ ಸುವರ್ಣಮಯವಾದ ಶುಭ್ರವಾದ ರಥವನ್ನು ಸಾತ್ಯಕಿಯ ಜೊತೆಯಲ್ಲಿ ಏರಿ, ಕುರುಗಳನ್ನು ಹಿಂಬಾಲಿಸಿದನು.

ನರಯಾನೇನ ತು ಜ್ಯೇಷ್ಠಃ ಪಿತಾ ಪಾರ್ಥಸ್ಯ ಭಾರತ।
ಅಗ್ರತೋ ಧರ್ಮರಾಜಸ್ಯ ಗಾಂಧಾರೀಸಹಿತೋ ಯಯೌ ॥೪೦॥

ಎಲೈ ಭಾರತನೇ! ವೃದ್ಧನೂ ತಂದೆಯೂ ಆದ ಧೃತರಾಷ್ಟ್ರನು ಧರ್ಮರಾಜನ ಮುಂಭಾಗದಲ್ಲಿ ಗಾಂಧಾರಿಯ ಜೊತೆಯಲ್ಲಿ ಪಲ್ಲಕ್ಕಿಯ ಮೇಲೆ ಹೊರಟನು.

ಕುರುಸ್ತ್ರಿಯಶ್ಚ ತಾಃ ಸರ್ವಾಃ ಕುಂತೀ ಕೃಷ್ಣಾ ಚ ದ್ರೌಪದೀ।
ಯಾನೈರುಚ್ಚಾವಚೈರ್ಜಗ್ಮುರ್ವಿದುರೇಣ ಪುರಸ್ಕೃತಾಃ ॥೪೧॥

ಎಲ್ಲಾ ಕುರುಸ್ತ್ರೀಯರೂ ಕುಂತೀ ಮತ್ತು ದ್ರುಪದಪುತ್ರಿಯಾದ ಕೃಷ್ಣೆ ಇವರೂ ಶ್ರೇಷ್ಠ-ಕನಿಷ್ಠವಾದ ವಾಹನಗಳನ್ನು ಏರಿ, ವಿದುರನನ್ನು ಮುಂದೆ ಮಾಡಿಕೊಂಡು ಹೊರಟರು.

ತತೋ ರಥಾಶ್ಚ ಬಹುಲಾ ನಾಗಾಶ್ಚ ಸಮಲಂಕೃತಾಃ।
ಪಾದಾತಾಶ್ಚ ಹಯಾಶ್ಚೈವ ಪೃಷ್ಠತಃ ಸಮನುವ್ರಜನ್ ॥೪೨॥

ಅನಂತರ ಅನೇಕ ರಥಗಳು, ಅಲಂಕೃತವಾದ ಗಜಗಳು, ಅಶ್ವಗಳು ಮತ್ತು ಪದಾತಿಗಳು ಅವರನ್ನು ಹಿಂಬಾಲಿಸಿದವು.

ತತೋ ವೈತಾಲಿಕೈಃ ಸೂತೈರ್ಮಾಗಧೈಶ್ಚ ಸುಭಾಷಿತೈಃ।
ಸ್ತೂಯಮಾನೋ ಯಯೌ ರಾಜಾ ನಗರಂ ನಾಗಸಾಹ್ವಯಮ್ !೪೩॥

ಅನಂತರ ವೈತಾಲಿಕರಿಂದಲೂ, ಒಳ್ಳೆಯ ರೀತಿಯಲ್ಲಿ ಸ್ತೋತ್ರವನ್ನು ಮಾಡುವ ಸೂತಮಾಗಧರಿಂದಲೂ ಸ್ತೋತ್ರಮಾಡಲ್ಪಟ್ಟು ಯುಧಿಷ್ಠಿರರಾಜನು ಹಸ್ತಿನಪುರಕ್ಕೆ ಹೊರಟನು.

ತತ್ ಪ್ರಯಾಣಂ ಮಹಾಬಾಹೋರ್ಬಭೂವಾಪ್ರತಿಮಂ ಭುವಿ।
ಆಕುಲಾಕುಲಮುತ್ಕೃಷ್ಟಂ ಹೃಷ್ಟಪುಷ್ಟಜನಾನ್ವಿತಮ್ ॥೪೪॥

ಸಂತೋಷದಿಂದ ಕೂಡಿದ ಜನಗಳಿಂದ ಬಹಳವಾಗಿ ನಿಬಿಡವಾಗಿ ಅನೇಕ ರೀತಿಯ ಜಯಘೋಷಗಳಿಂದ ಕೂಡಿದ ಮಹಾಬಾಹುವಾದ ಯುಧಿಷ್ಠಿರನ ಆ ಪ್ರಯಾಣವು ಭೂಮಿಯಲ್ಲಿ ಅಸದೃಶವಾಗಿದ್ದಿತು.

ಅಭಿಯಾನೇ ತು ಪಾರ್ಥಸ್ಯ ನರೈರ್ನಗರವಾಸಿಭಿಃ।
ನಗರಂ ರಾಜಮಾರ್ಗಶ್ಚ ಯಥಾವತ್ ಸಮಲಂಕೃತಮ್ ॥೪೫॥

ಕುಂತೀಪುತ್ರನಾದ ಯುಧಿಷ್ಠಿರನು ನಗರವನ್ನು ಪ್ರವೇಶಿಸುತ್ತಿರಲು ನಗರವಾಸಿ-ಗಳಾದ ಜನರು ನಗರವನ್ನು ಮತ್ತು ರಾಜಮಾರ್ಗವನ್ನು ಚೆನ್ನಾಗಿ ಅಲಂಕಾರ ಮಾಡಿದ್ದರು.

ಪಾಂಡರೇಣ ಚ ಮಾಲ್ಯೇನ ಪತಾಕಾಭಿಶ್ಚ ವೇದಿಭಿಃ।
ಸಂವೃತೋ ರಾಜಮಾರ್ಗಶ್ಚ ಧೂಪನೈಶ್ಚ ಸುಧೂಪಿತಃ ॥೪೬॥

ರಾಜಮಾರ್ಗದಲ್ಲಿ ಶ್ವೇತಪುಷ್ಪದ ಮಾಲೆಗಳು, ಪತಾಕೆಗಳು, ವೇದಿಕೆಗಳು, ಒಳ್ಳೆಯ ಧೂಪಗಳು ನಿಬಿಡವಾಗಿದ್ದವು.

ಅಥ ಚೂರ್ಣೈಶ್ಚ ಗಂಧಾನಾಂ ನಾನಾಪುಷ್ಪೈಃ ಪ್ರಿಯಂಗುಭಿಃ।
ಮಾಲ್ಯದಾಮಭಿರಾಸಕ್ತೈಃ ರಾಜವೇಶ್ಮಾಭಿಸಂವೃತಮ್ ॥೪೭॥

ರಾಜಮಾರ್ಗವು ಗಂಧದ ಚೂರ್ಣಗಳು, ನಾನಾ ಪುಷ್ಪಗಳು, ಪ್ರಿಯಂಗು (ನವಣೆ) ಮೊದಲಾದ ಮಂಗಳಧಾನ್ಯಗಳು, ಹೂಮಾಲೆಗಳು ಇವುಗಳಿಂದ ಅಲಂಕೃತವಾಗಿದ್ದ ರಾಜರಿಗೆ ಯೋಗ್ಯವಾದ ಗೃಹಗಳಿಂದ ಕೂಡಿದ್ದಿತು.

ಕುಂಭಾಶ್ಚ ನಗರದ್ವಾರಿ ವಾರಿಪೂರ್ಣಾ ದೃಢಾ ನವಾಃ।
ಕನ್ಯಾಃ ಸುಮನಸಶ್ಚಾಗ್ರಾಃ ಸ್ಥಾಪಿತಾಸ್ತತ್ರ ತತ್ರ ಹ ॥೪೮॥

ನಗರದ ಪ್ರವೇಶದ್ವಾರದಲ್ಲಿ ದೃಢವಾದ ಹೊಸದಾದ ಜಲಪೂರ್ಣವಾದ ಕುಂಭಗಳು, ಅಲಂಕೃತರಾದ ಕನ್ಯೆಯರು, ಪುಷ್ಪಗಳು, ಹೋತಗಳು ಅಲ್ಲಲ್ಲಿ ಇಡಲ್ಪಟ್ಟಿದ್ದವು.

ತಥಾ ಸ್ವಲಂಕೃತದ್ವಾರಂ ನಗರಂ ಪಾಂಡುನಂದನಃ।
ಸ್ತೂಯಮಾನಃ ಶುಭೈರ್ವಾಕ್ಯೈಃ ಪ್ರವಿವೇಶ ಸುಹೃದ್ವೃತಃ ॥೪೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟತ್ರಿಂಶೋऽಧ್ಯಾಯಃ ॥೩೮॥

ಪಾಂಡುನಂದನನಾದ ಯುಧಿಷ್ಠಿರನು ತನ್ನ ಸುಹೃಜ್ಜನಗಳಿಂದ ಕೂಡಿದವನಾಗಿ, ಶುಭವಾಕ್ಯಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ ಪ್ರವೇಶದ್ವಾರವನ್ನೇ ಅಷ್ಟು ಚೆನ್ನಾಗಿ ಅಲಂಕಾರ ಮಾಡಿದ ನಗರವನ್ನು ಪ್ರವೇಶಿಸಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ಮೂವತ್ತೆಂಟನೆಯ ಅಧ್ಯಾಯವು ಮುಗಿಯಿತು.

೩೯. ಮೂವತ್ತೊಂಭತ್ತನೆಯ ಅಧ್ಯಾಯ

ಯುಧಿಷ್ಠಿರನ ರಾಜಗೃಹಪ್ರವೇಶ ಮತ್ತು ಸಭಾಪ್ರವೇಶ. ಚಾರ್ವಾಕರಾಕ್ಷಸನಿಂದ ಯುಧಿಷ್ಠಿರನ ನಿಂದೆ. ಬ್ರಾಹ್ಮಣರಿಂದ ಚಾರ್ವಾಕನ ಭಸ್ಮೀಕರಣ.

ವೈಶಂಪಾಯನಃ

ಪ್ರವೇಶನೇ ತು ಪಾರ್ಥಾನಾಂ ಜನಸ್ಯ ಪುರವಾಸಿನಃ।
ದಿದೃಕ್ಷೂಣಾಂ ಸಹಸ್ರಾಣಿ ಸಮಾಜಗ್ಮುರ್ಬಹೂನ್ಯಥ ॥೧॥

ವೈಶಂಪಾಯನರು – ಪಾಂಡವರು ಪುರವನ್ನು ಪ್ರವೇಶಿಸುತ್ತಿರುವಾಗ ಅವರನ್ನು ನೋಡಲು ಬಯಸಿದ ಪುರಜನರು ಅನೇಕಸಹಸ್ರಸಂಖ್ಯೆಗಳಲ್ಲಿ ರಾಜಮಾರ್ಗದಲ್ಲಿ ನೆರೆದರು.

ಸ ರಾಜಮಾರ್ಗಃ ಶುಶುಭೇ ಸಮಲಂಕೃತಚತ್ವರಃ।
ಯಥಾ ಚಂದ್ರೋದಯೇ ರಾಜನ್ ವರ್ಧಮಾನೋ ಮಹೋದಧಿಃ ॥೨॥

ಎಲೈ ರಾಜನೇ! ಚಂದ್ರೋದಯಕಾಲದಲ್ಲಿ ಉಕ್ಕುವ ಸಮುದ್ರದಂತೆ ಆ ರಾಜಮಾರ್ಗವು ಅಲಂಕೃತವಾದ ಅಂಗಳಗಳಿಂದ ಮತ್ತು ಚತುಷ್ಪಥಗಳಿಂದ ಕೂಡಿ ಶೋಭಿಸಿತು.

ಗೃಹಾಣಿ ರಾಜಮಾರ್ಗೇ ತು ರತ್ನವಂತಿ ಬೃಹಂತಿ ಚ।
ಪ್ರಾಕಂಪಂತೇವ ಭಾರೇಣ ಸ್ತ್ರೀಣಾಂ ಪೂರ್ಣಾನಿ ಭಾರತ ॥೩॥

ಎಲೈ ಭಾರತನೇ! ರಾಜಮಾರ್ಗದಲ್ಲಿದ್ದ ರತ್ನಪೂರ್ಣವಾದ ದೊಡ್ಡ ಗೃಹಗಳು ಸ್ತ್ರೀಯರ ಭಾರದಿಂದ ಕಂಪಿಸುವಂತೆ ತೋರುತ್ತಿದ್ದವು.

ತಾಃ ಶನೈರಿವ ಸವ್ರೀಡಂ ಪ್ರಶಶಂಸುರ್ಯುಧಿಷ್ಠಿರಮ್।
ಭೀಮಸೇನಾರ್ಜುನೌ ಚೈವ ಮಾದ್ರೀಪುತ್ರೌ ಚ ಪಾಂಡವೌ ॥೪॥

ಆ ಸ್ತ್ರೀಯರು ನಾಚಿಕೆಯಿಂದ ನಿಧಾನವಾಗಿ ಪಾಂಡವರಾದ ಯುಧಿಷ್ಠಿರನನ್ನೂ, ಭೀಮಸೇನಾರ್ಜುನರನ್ನೂ ಹಾಗೆಯೇ ಮಾದ್ರೀಪುತ್ರರನ್ನೂ ಪ್ರಶಂಸೆ ಮಾಡಿದರು.

ಧನ್ಯಾ ತ್ವಮಸಿ ಪಾಂಚಾಲಿ ಯಾ ತ್ವಂ ಪುರುಷಸತ್ತಮಾನ್ ।
ಉಪತಿಷ್ಠಸಿ ಕಲ್ಯಾಣಿ ಮಹರ್ಷೀನಿವ ಗೌತಮೀ ॥೫॥

ದ್ರೌಪದಿಯೇ! ಕಲ್ಯಾಣಿಯೇ! ಮಹರ್ಷಿಗಳಂತಿರುವ ಪುರುಷಶ್ರೇಷ್ಠರಾದ ಪಾಂಡವರನ್ನು ಅಹಲ್ಯೆಯಂತೆ ಸೇವಿಸುವ ನೀನು ಧನ್ಯಳಾದವಳು.

ತವ ಕರ್ಮಾಣ್ಯಮೋಘಾನಿ ವ್ರತಚರ್ಯಾ ಚ ಭಾಮಿನಿ ।
ಇತಿ ಕೃಷ್ಣಾಂ ಮಹಾರಾಜ ಪ್ರಶಶಂಸುಸ್ತದಾ ಸ್ತ್ರಿಯಃ ॥೬॥

ಎಲೌ ಭಾಮಿನಿಯೇ! ನಿನ್ನ ಕಾರ್ಯಗಳು ಮತ್ತು ವ್ರತಚರ್ಯೆಯು ಅಮೋಘ -ವಾದವುಗಳು ಎಂದು ಎಲೈ ಮಹಾರಾಜನೇ! ಸ್ತ್ರೀಯರು ಆಗ ದ್ರೌಪದಿಯನ್ನು ಪ್ರಶಂಸೆ ಮಾಡಿದರು.

ಪ್ರಶಂಸಾವಚನೈಸ್ತಾಸಾಂ ಮಿಥಃಶಬ್ದೈಶ್ಚ ಭಾರತ ।
ಪ್ರೀತಿಜೈಶ್ಚ ತದಾ ಶಬ್ದೈಃ ಪುರಮಾಸೀತ್ ಸಮಾಕುಲಮ್ ॥೭॥

ಎಲೈ ಭಾರತನೇ! ಆಗ ಅಂತಹ ಪ್ರಶಂಸಾವಚನಗಳಿಂದಲೂ, ಸಂತೋಷದಿಂದ ಪ್ರಜೆಗಳು ಪರಸ್ಪರ ಮಾತನಾಡುವ ಶಬ್ದಗಳಿಂದಲೂ ಆ ಪಟ್ಟಣವು ತುಂಬಿ ಹೋಯಿತು.

ತಮತೀತ್ಯ ಯಥಾಯುಕ್ತಂ ರಾಜಮಾರ್ಗಂ ಯುಧಿಷ್ಠಿರಃ ।
ಅಲಂಕೃತಂ ಶೋಭಮಾನಮುಪಯಾದ್ ರಾಜವೇಶ್ಮ ಹ ॥೮॥

ಯುಧಿಷ್ಠಿರನು ಆ ರೀತಿಯಲ್ಲಿ ಅಲಂಕೃತವಾಗಿದ್ದ ರಾಜಮಾರ್ಗವನ್ನು ದಾಟಿ, ಅಲಂಕೃತವಾಗಿ ಶೋಭಿಸುತ್ತಿದ್ದ ರಾಜಗೃಹದ ಸಮೀಪಕ್ಕೆ ಬಂದನು.

ತತಃ ಪ್ರಕೃತಯಃ ಸರ್ವಾಃ ಪೌರಜಾನಪದಾಸ್ತಥಾ ।
ಊಚುಃ ಕಥಾಃ ಕರ್ಣಸುಖಾಃ ಸಮುಪೇತ್ಯ ತತಸ್ತತಃ ॥೯॥

ಆಗ ರಾಜಧಾನಿಯ ಮತ್ತು ರಾಷ್ಟ್ರದ ಪ್ರಜೆಗಳೆಲ್ಲರೂ ಅಲ್ಲಲ್ಲಿಂದ ಬಂದು ಸೇರಿ, ಕರ್ಣಸುಖಕರವಾದ ಮಾತುಗಳನ್ನು ಆಡಿದರು.

ದಿಷ್ಟ್ಯಾ ಜಯಸಿ ರಾಜೇಂದ್ರ ಶತ್ರೂನ್ ಶತ್ರುನಿಷೂದನ।
ದಿಷ್ಟ್ಯಾರಾಜ್ಯಂ ಪುನಃ ಪ್ರಾಪ್ತಂ ಧರ್ಮೇಣ ಚ ಬಲೇನ ಚ ॥೧೦॥

ಎಲೈ ರಾಜೇಂದ್ರನೇ! ದೇವರ ದಯದಿಂದ ನೀನು ಜಯವನ್ನು ಗಳಿಸಿದ್ದೀಯೆ. ಎಲೈ ಶತ್ರುಸಂಹಾರಕನೇ! ನೀನು ಶತ್ರುಗಳನ್ನು ಸಂಹರಿಸಿ, ದೇವರ ದಯದಿಂದ ಮತ್ತು ನಿನ್ನ ಧರ್ಮ ಮತ್ತು ಬಲದಿಂದ ರಾಜ್ಯವನ್ನು ಪುನಃ ಪಡೆದಿದ್ದೀಯೆ.

ಭವ ನಸ್ತ್ವಂ ಮಹಾರಾಜ ರಾಜೇಹ ಶರದಾಂ ಶತಮ್ ।
ಪ್ರಜಾಃ ಪಾಲಯ ಧರ್ಮೇಣ ಯಥೇಂದ್ರಸ್ತ್ರಿದಿವಂ ನೃಪ ॥೧೧॥

ಎಲೈ ಮಹಾರಾಜನೇ! ನೀನು ನೂರು ವರ್ಷಗಳ ಕಾಲ ಇಲ್ಲಿ ನಮಗೆ ರಾಜನಾಗು. ಎಲೈ ರಾಜನೇ! ಇಂದ್ರನು ಸ್ವರ್ಗವನ್ನು ಆಳುವಂತೆ ಧರ್ಮದಿಂದ ನಮ್ಮನ್ನು ರಕ್ಷಿಸುವವನಾಗು.

ಏವಂ ರಾಜಕುಲದ್ವಾರಿ ಮಂಗಲೈರಭಿಪೂಜಿತಃ।
ಆಶೀರ್ವಾದಾನ್ ದ್ವಿಜೈರುಕ್ತಾನ್ ಪ್ರತಿಗೃಹ್ಯ ಸಮಂತತಃ ॥೧೨॥

ಪ್ರವಿಶ್ಯ ಭವನಂ ರಾಜಾ ದೇವರಾಜಗೃಹೋಪಮಮ್ ।
ಶ್ರುತ್ವಾವಿಜಯಸಂಯುಕ್ತಂ ರಥಾತ್ ಪಶ್ಚಾದವಾತರತ್ ॥೧೩॥

ಈ ರೀತಿಯಲ್ಲಿ ರಾಜಗೃಹದ ದ್ವಾರದಲ್ಲಿ ಮಂಗಳ ವಚನಗಳಿಂದ ಸತ್ಕೃತನಾಗಿ, ಎಲ್ಲ ಕಡೆಗಳಲ್ಲಿಯೂ ನೆರೆದ ಬ್ರಾಹ್ಮಣರಿಂದ ಹೇಳಲ್ಪಟ್ಟ ಆಶೀರ್ವಾದಗಳನ್ನು ಸ್ವೀಕರಿಸಿ, ದೇವರಾಜನಾದ ಇಂದ್ರನ ಮನೆಯಂತಿದ್ದ ರಾಜಭವನವನ್ನು ಪ್ರವೇಶಿಸಿ, ಜಯಕಾರದ ವಚನಗಳನ್ನು ಕೇಳಿ ರಾಜನಾದ ಯುಧಿಷ್ಠಿರನು ತನ್ನ ರಥದಿಂದ ಇಳಿದನು.

ಪ್ರವಿಶ್ಯಾಭ್ಯಂತರಂ ಶ್ರೀಮಾನ್ ದೈವತಾನ್ಯಭಿಗಮ್ಯ ಚ।
ಪೂಜಯಾಮಾಸ ರತ್ನೈಶ್ಚ ಗಂಧೈರ್ಮಾಲ್ಯೈಶ್ಚ ಸರ್ವಶಃ ॥೧೪॥

ಸಂಪದ್ಯುಕ್ತನಾದ ಅವನು ರಾಜಭವನದ ಒಳಭಾಗವನ್ನು ಪ್ರವೇಶಿಸಿ, ದೇವತೆಗಳಿಗೆ ನಮಸ್ಕಾರವನ್ನು ಮಾಡಿ, ರತ್ನಗಳಿಂದಲೂ, ಗಂಧಮಾಲ್ಯಗಳಿಂದಲೂ ಎಲ್ಲ ಕಡೆಗಳಲ್ಲಿಯೂ ದೇವತೆಗಳನ್ನು ಪೂಜಿಸಿದನು.

ನಿಶ್ಚಕ್ರಾಮ ತತಃ ಶ್ರೀಮಾನ್ ಪುನರೇವ ಮಹಾಯಶಾಃ।
ದದರ್ಶ ಬ್ರಾಹ್ಮಣಾಂಶ್ಚೈವ ಸೋಽಭಿರೂಪಾನುಪಸ್ಥಿತಾನ್ ॥೧೫॥

ಮಹಾಕೀರ್ತಿವಂತನೂ ಸಂಪದ್ಯುಕ್ತನೂ ಆದ ಯುಧಿಷ್ಠಿರನು ಅನಂತರ ಹೊರಗೆ ಬಂದು ಯೋಗ್ಯವಾದ ರೀತಿಯಲ್ಲಿ ಉಪಸ್ಥಿತರಾಗಿದ್ದ ಬ್ರಾಹ್ಮಣರನ್ನು ನೋಡಿದನು.

ಸ ಸಂವೃತಸ್ತದಾ ವಿಪ್ರೈರಾಶೀರ್ವಾದವಿವಕ್ಷುಭಿಃ।
ಶುಶುಭೇ ವಿಮಲಶ್ಚಂದ್ರಸ್ತಾರಾಗಣವೃತೋ ಯಥಾ ॥೧೬॥

ಆಶೀರ್ವಾದ ವಚನಗಳನ್ನು ಹೇಳಲು ಬಯಸಿದ ಬ್ರಾಹ್ಮಣರಿಂದ ಸುತ್ತುವರಿಯಲ್ಪಟ್ಟ ಅವನು ಆಗ ನಕ್ಷತ್ರಗಣಗಳಿಂದ ಸಂವೃತನಾದ ಪರಿಶುದ್ಧನಾದ ಚಂದ್ರನಂತೆ ಶೋಭಿಸಿದನು.

ತಾನ್ ಸ ಸಂಪೂಜಯಾಮಾಸ ಕೌಂತೇಯೋ ವಿಧಿವದ್ ದ್ವಿಜಾನ್।
ಧೌಮ್ಯಂ ಗುರುಂ ಪುರಸ್ಕೃತ್ಯ ಜ್ಯೇಷ್ಠಂ ಪಿತರಮೇವ ಚ ॥೧೭॥

ಸುಮನೋಮೋದಕೈ ರತ್ನೈರ್ಹಿರಣ್ಯೇನ ಚ ಭೂರಿಣಾ।
ಗೋಭಿರ್ವಸ್ತ್ರೈಶ್ಚ ರಾಜೇಂದ್ರ ವಿವಿಧೈಶ್ಚ ಕಿಮಿಚ್ಛಕೈಃ ॥೧೮॥

ಎಲೈ ರಾಜೇಂದ್ರನೇ! ಆಗ ಕುಂತೀಪುತ್ರನಾದ ಯುಧಿಷ್ಠಿರನು ಗುರುಗಳಾದ ಧೌಮ್ಯರನ್ನು, ಮತ್ತು ಜ್ಯೇಷ್ಠನಾದ ತಂದೆಯಾದ ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಪುಷ್ಪಗಳಿಂದಲೂ ಮೋದಕಗಳಿಂದಲೂ ಬಹುವಾದ ಸುವರ್ಣರತ್ನಗಳಿಂದಲೂ ಗೋವುಗಳಿಂದಲೂ ವಸ್ತ್ರಗಳಿಂದಲೂ ಅವರು ಬಯಸಿದ ಇನ್ನೂ ಅನೇಕವಸ್ತುಗಳಿಂದಲೂ ಆ ಬ್ರಾಹ್ಮಣರನ್ನು ವಿಧಿವತ್ತಾಗಿ ಪೂಜಿಸಿದನು.

ತತಃ ಪುಣ್ಯಾಹಘೋಷೋಽಭೂದ್ ದಿವಂ ಸ್ತಬ್ಧ್ವೇವ ಭಾರತ।
ಸುಹೃದಾಂ ಹರ್ಷಜನನಃ ಪುಣ್ಯಃ ಶ್ರುತಿಸುಖಾವಹಃ ॥೧೯॥

ಎಲೈ ಭಾರತನೇ! ಅನಂತರ ಸಹೃಜ್ಜನರ ಸಂತೋಷದಿಂದ ಉಂಟಾದ ಕರ್ಣ-ಸುಖಕರವಾದ ಪವಿತ್ರವಾದ ಪುಣ್ಯಾಹಘೋಷವು ಆಕಾಶವನ್ನು ಆವರಿಸುವಂತೆ ಕೇಳಿಬಂದಿತು.

ಹಂಸವನ್ನೇದುಷಾಂ ರಾಜನ್ ದ್ವಿಜಾನಾಂ ತತ್ರ ಭಾರತೀ।
ಶುಶ್ರುವೇ ವೇದವಿದುಷೋ ಪುಷ್ಕಲಾರ್ಥಪದಾಕ್ಷರಾ ॥೨೦॥

ಎಲೈ ರಾಜನೇ! ಹಂಸದಂತೆ ಉಲಿಯುವ ವೇದವಿದ್ವಾಂಸರಾದ ಬ್ರಾಹ್ಮಣರ ಬಹ್ವರ್ಥಗರ್ಭಿತವಾದ ಪದಾಕ್ಷರಗಳಿಂದ ಕೂಡಿದ ಪುಣ್ಯಾಹಶಬ್ದವು ಕೇಳಿಬಂದಿತು.

ತತೋ ದುಂದುಭಿನಿರ್ಘೋಷಃ ಶಂಖಾನಾಂ ಚ ಮನೋರಮಃ।
ಜಯಂ ಪ್ರವದತಾಂ ತತ್ರ ಸ್ವನಃ ಪ್ರಾದುರಭೂನ್ನೃಪ ॥೨೧॥

ಎಲೈ ರಾಜನೇ! ಅನಂತರ ಜಯಕಾರವನ್ನು ಮಾಡುವವರ ದುಂದುಭಿ-ಘೋಷವು ಮತ್ತು ಮನೋಹರವಾದ ಶಂಖಗಳ ಶಬ್ದವು ಕೇಳಿಬಂದಿತು.

ನಿಃಶಬ್ದೇ ಚ ಸ್ಥಿತೇ ತತ್ರ ತತೋ ವಿಪ್ರಜನೇ ಪುನಃ।
ರಾಜಾನಂ ಬ್ರಾಹ್ಮಣಚ್ಛದ್ಮಾ ಚಾರ್ವಾಕೋ ರಾಕ್ಷಸೋಽಬ್ರವೀತ್ ॥೨೨॥

ಪುನಃ ಬ್ರಾಹ್ಮಣರು ಮೌನವಾಗಿ ನಿಂತು ನಿಃಶಬ್ದವಾಗಿರುವಾಗ ಕಪಟಬ್ರಾಹ್ಮಣ-ವೇಷದಲ್ಲಿದ್ದ ಚಾರ್ವಾಕರಾಕ್ಷಸನು ಯುಧಿಷ್ಠಿರನನ್ನು ಕುರಿತು ಹೇಳಿದನು.

ತತ್ರ ದುರ್ಯೋಧನಸಖಾ ಭಿಕ್ಷುರೂಪೇಣ ಸಂವೃತಃ।
ಸಾಕ್ಷಃ(ಸಾಂಖ್ಯಃ) ಶಿಖೀ ತ್ರಿದಂಡೀ ಚ ಧೃಷ್ಟೋ ವಿಗತಸಾಧ್ವಸಃ ॥೨೩॥

ಅಲ್ಲಿ ಬ್ರಾಹ್ಮಣರ ಮಧ್ಯದಲ್ಲಿ ದುರ್ಯೋಧನನ ಸಖನಾದ ಸಾಂಖ್ಯಶಾಸ್ತ್ರವನ್ನು ಓದಿದ ಆ ಚಾರ್ವಾಕನು ಅಕ್ಷಮಾಲೆಯನ್ನು ಮತ್ತು ಶಿಖೆಯನ್ನು ಧರಿಸಿ, ತ್ರಿದಂಡಿ-ಯಾಗಿ, ನಿರ್ಭಯನಾಗಿ, ಧಾರ್ಷ್ಟ್ಯವನ್ನು ಹೊಂದಿ ಸನ್ಯಾಸಿಯ ರೂಪದಲ್ಲಿದ್ದನು.

ವೃತಃ ಸರ್ವೈಸ್ತದಾ ವಿಪ್ರೈರಾಶೀರ್ವಾದವಿವಕ್ಷುಭಿಃ।
ಪರಸಹಸ್ರೈಃ ರಾಜೇಂದ್ರ ತಪೋನಿಯಮಸಂಸ್ಥಿತೈಃ ॥೨೪॥

ಎಲೈ ರಾಜೇಂದ್ರನೇ! ಅವನು ತಪೋನಿಯಮಯುಕ್ತರಾದ ಆಶೀರ್ವಾದವನ್ನು ಹೇಳಲು ಇಚ್ಛಿಸಿದ ಸಹಸ್ರಾರು ಬ್ರಾಹ್ಮಣರಿಂದ ಪರಿವೃತನಾಗಿದ್ದನು.

ಸ ದುಷ್ಟಃ ಪಾಪಮಾಶಂಸನ್ ಪಾಂಡವಾನಾಂ ಮಹಾತ್ಮನಾಮ್।
ಅನಾಮಂತ್ರ್ಯೈವ ತಾನ್ ವಿಪ್ರಾಂಸ್ತಮುವಾಚ ಮಹೀಪತೀಮ್ ॥೨೫॥

ಆ ದುಷ್ಟನು ಮಹಾತ್ಮರಾದ ಪಾಂಡವರಿಗೆ ಪಾಪವನ್ನು ಆಶಂಸಿಸುತ್ತಾ ಆ ಬ್ರಾಹ್ಮಣರ ಅನುಮತಿಯನ್ನು ಪಡೆಯದೆಯೇ ಯುಧಿಷ್ಠಿರನನ್ನು ಕುರಿತು ಹೇಳಿದನು.

ಇಮೇ ಪ್ರಾಹುರ್ದ್ವಿಜಾಃ ಸರ್ವೇ ಸಮಾರೋಪ್ಯ ವಚೋ ಮಯಿ।
ಧಿಗ್ ಭವಂತಂ ಕುನೃಪತಿಂ ಜ್ಞಾತಿಘಾತಿನಮಸ್ತು ವೈ ॥೨೬॥

ಈ ಬ್ರಾಹ್ಮಣರೆಲ್ಲರೂ ತಮ್ಮ ಮಾತುಗಳನ್ನು ನನಗೆ ಒಪ್ಪಿಸಿ ನಿನಗೆ ಹೇಳುತ್ತಿದ್ದಾರೆ. ಜ್ಞಾತಿಗಳ ವಧೆಯನ್ನು ಮಾಡಿದ ಕೆಟ್ಟ ರಾಜನಾದ ನಿನಗೆ ಧಿಕ್ಕಾರವಿರಲಿ.

ಕಿಂ ತೇ ರಾಜ್ಯೇನ ಕೌಂತೇಯ ಕೃತ್ವೇಮಂ ಜ್ಞಾತಿಸಂಕ್ಷಯಮ್।
ಘಾತಯಿತ್ವಾ ಗುರೂಂಶ್ಚೈವ ಮೃತಂ ಶ್ರೇಯೋ ನ ಜೀವಿತಮ್ ॥೨೭॥

ಎಲೈ ಕೌಂತೇಯನೇ! ಇಂತಹ ಜ್ಞಾತಿವಧೆಯನ್ನೂ, ಗುರುಜನವಧೆಯನ್ನೂ ಮಾಡಿ, ನಿನಗೆ ರಾಜ್ಯದಿಂದ ಆಗಬೇಕಾದುದೇನು? ನಿನಗೆ ಮರಣವೇ ಒಳ್ಳೆಯದೇ ಹೊರತು ಜೀವನವಲ್ಲ.

ಇತಿ ತೇ ವೈ ದ್ವಿಜಾಃ ಶ್ರುತ್ವಾ ತಸ್ಯ ಘೋರಸ್ಯ ರಕ್ಷಸಃ।
ವಿವ್ಯಥುಶ್ಚುಕ್ರುಶುಶ್ಚೈವ ತಸ್ಯ ವಾಕ್ಯಪ್ರಧರ್ಷಿತಾಃ ॥೨೮॥

ಹೀಗೆ ಆ ಬ್ರಾಹ್ಮಣರು ಆ ಘೋರರಾಕ್ಷಸನ ಮಾತುಗಳನ್ನು ಕೇಳಿ, ಅವನ ಮಾತುಗಳಿಂದ ಅವಮಾನಿತರಾಗಿ ವ್ಯಥೆಯನ್ನು ಪಟ್ಟು ದುಃಖದಿಂದ ಕಿರುಚಿದರು.

ತತಸ್ತೇ ಬ್ರಾಹ್ಮಣಾಃ ಸರ್ವೇ ಸ ಚ ರಾಜಾ ಯುಧಿಷ್ಠಿರಃ।
ವ್ರೀಡಿತಾ ಪರಮೋದ್ವಿಗ್ನಾಸ್ತೂಷ್ಣೀಮಾಸನ್ ವಿಶಾಂಪತೇ ॥೨೯॥

ಎಲೈ ರಾಜನೇ! ಆಗ ಆ ಬ್ರಾಹ್ಮಣರೆಲ್ಲರೂ ಮತ್ತು ರಾಜನಾದ ಯುಧಿಷ್ಠಿರನೂ ಸಹ ನಾಚಿಕೆಗೊಂಡು ಪರಮೋದ್ವಿಗ್ನರಾಗಿ ಮೌನವಾಗಿ ನಿಂತರು.

ಯುಧಿಷ್ಠಿರಃ

ಪ್ರಸೀದಂತು ಭವಂತೋ ಮೇ ಪ್ರಣತಸ್ಯಾಭಿಯಾಚತಃ।
ಪ್ರತ್ಯಾಪನ್ನಂ ವ್ಯಸನಿನಂ ನ ಮಾಂ ಧಿಕ್ಕರ್ತುಮರ್ಹಥ ॥೩೦॥

ಯುಧಿಷ್ಠಿರ – ನಾನು ನಿಮ್ಮನ್ನು ನಮಸ್ಕರಿಸಿ ಬೇಡುತ್ತಿದ್ದೇನೆ. ನನ್ನ ಮೇಲೆ ಪ್ರಸನ್ನರಾಗಿ. ವ್ಯಸನದಲ್ಲಿ ಸಿಲುಕಿರುವ ನನ್ನನ್ನು ನೀವು ಧಿಕ್ಕರಿಸಬಾರದು.

ವೈಶಂಪಾಯನಃ

ತತೋ ರಾಜನ್ ಬ್ರಾಹ್ಮಣಾಸ್ತೇ ಸರ್ವ ಏವ ವಿಶಾಂಪತೇ।
ಊಚುರ್ನೈತದ್ ವಚೋಽಸ್ಮಾಕಂ ಶ್ರೇರಸ್ತು ತವ ಪಾರ್ಥಿವ ॥೩೧॥

ವೈಶಂಪಾಯನರು – 'ಎಲೈ ರಾಜನೇ! ಆಗ ಆ ಬ್ರಾಹ್ಮಣರೆಲ್ಲರೂ ಅವನನ್ನು ಕುರಿತು ರಾಜನೇ ನಿನಗೆ ಮಂಗಳವಾಗಲಿ. ಇದು ನಮ್ಮ ಮಾತಲ್ಲ' ಎಂದು ಹೇಳಿದರು.

ಜಜ್ಞುಶ್ಚೈವ ಮಹಾತ್ಮಾನಸ್ತತಸ್ತಂ ಜ್ಞಾನಚಕ್ಷುಷಾ।
ಬ್ರಾಹ್ಮಣಾ ವೇದವಿದ್ವಾಂಸಸ್ತಪೋಭಿರ್ವಿಮಲೀಕೃತಾಃ ॥೩೨॥

ವೇದವಿದ್ವಾಂಸರೂ, ತಪಸ್ಸುಗಳಿಂದ ಪರಿಶುದ್ಧರಾದವರೂ, ಮಹಾತ್ಮರೂ ಆದ ಆ ಬ್ರಾಹ್ಮಣರು ತಮ್ಮ ಜ್ಞಾನದೃಷ್ಟಿಯಿಂದ ಆ ರಾಕ್ಷಸನನ್ನು ತಿಳಿದರು.

ಬ್ರಾಹ್ಮಣಾಃ

ಏಷ ದುರ್ಯೋಧನಸಖಾ ಚಾರ್ವಾಕೋ ನಾಮ ರಾಕ್ಷಸಃ।
ಪರಿವ್ರಾಜಕರೂಪೇಣ ಹಿತಂ ತಸ್ಯ ಚಿಕೀರ್ಷತಿ ॥೩೩॥

ಬ್ರಾಹ್ಮಣರು – ಇವನು ದುರ್ಯೋಧನನ ಸ್ನೇಹಿತನಾದ ಚಾರ್ವಾಕನೆಂಬ ರಾಕ್ಷಸ. ಸನ್ಯಾಸಿಯ ರೂಪವನ್ನು ತಾಳಿ ದುರ್ಯೋಧನನಿಗೆ ಹಿತವನ್ನು ಮಾಡಲು ಬಯಸುತ್ತಿದ್ದಾನೆ.

ನ ವಯಂ ಬ್ರೂಮ ಧರ್ಮಾತ್ಮನ್ ವ್ಯೇತು ತೇ ಭಯಮೀದೃಶಮ್ ।
ಉಪತಿಷ್ಠತು ಕಲ್ಯಾಣಂ ಭವಂತಂ ಭ್ರಾತೃಭಿಃ ಸಹ ॥೩೪॥

ಎಲೈ ಧರ್ಮಾತ್ಮನೇ! ನಿನ್ನ ಮನಸ್ಸಿನ ಭಯವನ್ನು ಬಿಡು. ಈ ಧಿಕ್ಕಾರದ ಮಾತುಗಳು ನಮ್ಮವಲ್ಲ. ನಿನಗೂ ಮತ್ತು ನಿನ್ನ ತಮ್ಮಂದಿರಿಗೂ ಕಲ್ಯಾಣವುಂಟಾಗಲಿ.

ವೈಶಂಪಾಯನಃ

ತತಸ್ತೇ ಬ್ರಾಹ್ಮಣಾಃ ಸರ್ವೇ ಹುಂಕಾರೈಃ ಕ್ರೋಧಮೂರ್ಚ್ಛಿತಾಃ ।
ನಿರ್ಭರ್ತ್ಸಯಂತಃ ಶುಚಯೋ ನಿಜಘ್ನುಃ ಪಾಪರಾಕ್ಷಸಮ್ ॥೩೫॥

ವೈಶಂಪಾಯನರು – ಅನಂತರ ಕ್ರೋಧಮೂರ್ಛಿತರೂ ಪರಿಶುದ್ಧರೂ ಆದ ಆ ಎಲ್ಲಾ ಬ್ರಾಹ್ಮಣರು ಹುಂಕಾರಗಳಿಂದ ಆ ಪಾಪರಾಕ್ಷಸನನ್ನು ಗದರಿಸಿ, ಅವನನ್ನು ಸಂಹರಿಸಿದರು.

ಸ ಪಪಾತ ವಿನಿರ್ದಗ್ಧಸ್ತೇಜಸಾ ಬ್ರಹ್ಮವಾದಿನಾಮ್ ।
ಮಹೇಂದ್ರಾಶನಿನಿರ್ದಗ್ಧಃ ಪಾದಪೋಽಂಕುರವಾನಿವ ॥೩೬॥

ಬ್ರಹ್ಮವಾದಿಗಳಾದ ಬ್ರಾಹ್ಮಣರ ತೇಜಸ್ಸಿನಿಂದ ನಿರ್ದಗ್ಧನಾದ ಆ ರಾಕ್ಷಸನು ಇಂದ್ರನ ವಜ್ರಾಯುಧದಿಂದ ದಗ್ಧವಾದ ಅಂಕುರಸಹಿತವಾದ ವೃಕ್ಷದಂತೆ ಕೆಳಗೆ ಬಿದ್ದನು.

ಪೂಜಿತಾಶ್ಚ ಯಯುರ್ವಿಪ್ರಾ ರಾಜಾನಮಭಿನಂದ್ಯ ತಮ್ ।
ರಾಜಾ ಚ ಹರ್ಷಮಾಪೇದೇ ಪಾಂಡವಃ ಸಸುಹೃಜ್ಜನಃ ॥೩೭॥

ಬ್ರಾಹ್ಮಣರು ರಾಜನಿಂದ ಪೂಜಿತರಾಗಿ ರಾಜನನ್ನು ಅಭಿನಂದಿಸಿ ಹೊರಟು

ಹೋದರು. ಪಾಂಡುಪುತ್ರನಾದ ಯುಧಿಷ್ಠಿರನೂ ಸುಹೃಜ್ಜನರ ಜೊತೆಯಲ್ಲಿ ಸಂತೋಷವನ್ನು ಹೊಂದಿದನು.

ತತಸ್ತತ್ರ ತು ರಾಜಾನಂ ತಿಷ್ಠಂತಂ ಭ್ರಾತೃಭಿಃ ಸಹ।
ಉವಾಚ ದೇವಕೀಪುತ್ರಃ ಸರ್ವದರ್ಶೀ ಜನಾರ್ದನಃ ॥೩೮॥

ಆಗ ದೇವಕೀಪುತ್ರನೂ ಸರ್ವಜ್ಞನೂ ಆದ ಜನಾರ್ದನನು ತಮ್ಮಂದಿರ ಜೊತೆಯಲ್ಲಿದ್ದ ರಾಜನನ್ನು ಕುರಿತು ಮಾತನಾಡಿದನು.

ಶ್ರೀಭಗವಾನ್

ಬ್ರಾಹ್ಮಣಾಸ್ತಾತ ಲೋಕೇಽಸ್ಮಿನ್ನರ್ಚನೀಯಾಃ ಸದಾ ಮಮ।
ಏತೇ ಭೂಮಿಚರಾ ದೇವಾ ವಾಗ್ವಿಷಾಃ ಸುಪ್ರಸಾದಕಾಃ ॥೩೯॥

ಶ್ರೀಭಗವಾನ್ – ಎಲೈ ಪ್ರೀತಿಪಾತ್ರನೇ! ಈ ಲೋಕದಲ್ಲಿ ಬ್ರಾಹ್ಮಣರು ನನಗೆ ಯಾವಾಗಲೂ ಪೂಜ್ಯರಾದವರು. ಇವರು ಮಾತಿನಲ್ಲಿ ವಿಷವನ್ನು ಧರಿಸಿದ ಮತ್ತು ಒಳ್ಳೆಯ ಅನುಗ್ರಹವನ್ನು ಮಾಡುವ ಭೂಮಿಚರರಾದ ದೇವತೆಗಳು.

ಪುರಾ ಕೃತಯುಗೇ ತಾತ ಚಾರ್ವಾಕೋ ನಾಮ ರಾಕ್ಷಸಃ।
ತಪಸ್ತೇಪೇ ಮಹಾಬಾಹೋ ಬದರ್ಯಾಂ ಬಹುವತ್ಸರಮ್ ॥೪೦॥

ಎಲೈ ಪ್ರೀತಿಪಾತ್ರನೇ! ಮಹಾಬಾಹುವೇ! ಹಿಂದೆ ಕೃತಯುಗದಲ್ಲಿ ಚಾರ್ವಾಕನೆಂಬ ರಾಕ್ಷಸನು ಬದರೀಕ್ಷೇತ್ರದಲ್ಲಿ ಅನೇಕ ವರ್ಷಗಳ ಕಾಲ ತಪಸ್ಸನ್ನು ಮಾಡಿದನು.

ಛಂದ್ಯಮಾನೋ ವರೇಣಾಥ ಬ್ರಹ್ಮಣಾ ಸ ಪುನಃ ಪುನಃ।
ಅಭಯಂ ಸರ್ವಭೂತೇಭ್ಯಃ ವರಯಾಮಾಸ ಭಾರತ ॥೪೧॥

ಎಲೈ ಭಾರತನೇ! ಬ್ರಹ್ಮದೇವರಿಂದ ಪುನಃ ಪುನಃ ವರವನ್ನು ಕೇಳು ಎಂದು ಹೇಳಲ್ಪಟ್ಟ ಅವನು ಯಾವ ಪ್ರಾಣಿಗಳಿಂದಲೂ ತನಗೆ (ಮರಣ) ಭಯವುಂಟಾಗಬಾರದೆಂಬ ವರವನ್ನು ಬೇಡಿದನು.

ದ್ವಿಜಾವಮಾನಾದನ್ಯತ್ರ ಪ್ರಾದಾದ್ ವರಮನುತ್ತಮಮ್ ।
ಅಭಯಂ ಸರ್ವಭೂತೇಭ್ಯಸ್ತತಸ್ತಸ್ಮೈ ಜಗತ್ಪ್ರಭುಃ ॥೪೨॥

'ಬ್ರಾಹ್ಮಣರ ಅವಮಾನವನ್ನು ಮಾಡುವ ಪ್ರಸಂಗವನ್ನು ಬಿಟ್ಟು ಬೇರೆ ಯಾವ ಪ್ರಾಣಿಯಿಂದಲೂ ನಿನಗೆ ಭಯವಿಲ್ಲ' ಎಂಬ ಶ್ರೇಷ್ಠವಾದ ವರವನ್ನು ಜಗತ್ಪ್ರಭುಗಳಾದ ಬ್ರಹ್ಮದೇವರು ಅವನಿಗೆ ಕೊಟ್ಟರು.

ಸ ತು ಲಬ್ಧವರಃ ಪಾಪೋ ದೇವಾನಮಿತವಿಕ್ರಮಃ ।
ರಾಕ್ಷಸಸ್ತಾಪಯಾಮಾಸ ತೀವ್ರಕರ್ಮಾ ಮಹಾಬಲಃ ॥೪೩॥

ಅಮಿತಪರಾಕ್ರಮಿಯಾದ ಪಾಪಿಯಾದ ಅವನು ವರವನ್ನು ಪಡೆದು, ಮಹಾಬಲಿಷ್ಠನಾಗಿ ಘೋರವಾದ ಕರ್ಮಗಳನ್ನು ಮಾಡಿ ದೇವತೆಗಳಿಗೆ ತಾಪವನ್ನು ಉಂಟುಮಾಡಿದನು.

ತತೋ ದೇವಾಃ ಸಮೇತ್ಯಾಥ ಬ್ರಹ್ಮಾಣಮಿದಮಬ್ರುವನ್ ।
ವಧಾಯ ರಕ್ಷಸಸ್ತಸ್ಯ ಬಲವಿಪ್ರಕೃತಾಸ್ತದಾ ॥೪೪॥

ಆಗ ಅವನ ಬಲದಿಂದ ಅಪಕಾರಕ್ಕೆ ಒಳಗಾದ ದೇವತೆಗಳು ಬ್ರಹ್ಮದೇವರನ್ನು ಸಮೀಪಿಸಿ, ಆ ರಾಕ್ಷಸನ ವಧೆಯನ್ನು ಕುರಿತು ಪ್ರಾರ್ಥನೆಯನ್ನು ಮಾಡಿದರು.

ತಾನುವಾಚಾವ್ಯಯೋ ದೇವೋ ವಿಹಿತಂ ತತ್ರ ವೈ ಮಯಾ ।
ಯಥಾಸ್ಯ ಭವಿತಾ ಮೃತ್ಯುರಚಿರೇಣೈವ ಭಾರತ ॥೪೫॥

ಎಲೈ ಭಾರತನೇ! ಆಗ ಅವ್ಯಯರಾದ ಆ ಬ್ರಹ್ಮದೇವರು ''ಈ ರಾಕ್ಷಸನ ಮರಣವು ಶೀಘ್ರದಲ್ಲೇ ಉಂಟಾಗುವಂತೆ ನಾನು ವ್ಯವಸ್ಥೆಯನ್ನು ಮಾಡಿದ್ದೇನೆ'' ಎಂದು ಹೇಳಿದರು.

ರಾಜಾ ದುರ್ಯೋಧನೋ ನಾಮ ಸಖಾऽಸ್ಯ ಭವಿತಾ ನೃಪ ।
ತಸ್ಯ ಸ್ನೇಹಾವಬದ್ಧೋऽಸೌ ಬ್ರಾಹ್ಮಣಾನವಮಂಸ್ಯತೇ ॥೪೬॥

ಎಲೈ ರಾಜನೇ! ದುರ್ಯೋಧನನೆಂಬ ರಾಜನು ಇವನಿಗೆ ಸ್ನೇಹಿತನಾಗುವನು. ಅವನ ಸ್ನೇಹಕ್ಕೆ ವಶನಾಗಿ ಈ ರಾಕ್ಷಸನು ಬ್ರಾಹ್ಮಣರಿಗೆ ಅವಮಾನವನ್ನು ಮಾಡುವನು.

ತತ್ರೈನಂ ರುಷಿತಾ ವಿಪ್ರಾ ವಿಪ್ರಕಾರಪ್ರಧರ್ಷಿತಾಃ।
ಧಕ್ಷ್ಯಂತಿ ವಾಗ್ಬಲಾಃ ಪಾಪಂ ತತೋ ನಾಶಂ ಗಮಿಷ್ಯತಿ ॥೪೭॥

ಅವನ ಅವಮಾನಕರವಾದ ಮಾತುಗಳಿಂದ ಪೀಡಿಸಲ್ಪಟ್ಟ ವಾಗ್ಬಲರಾದ ಬ್ರಾಹ್ಮಣರು ಕೋಪಗೊಂಡು ಆ ಪಾಪಿಯನ್ನು ಸುಟ್ಟು ಹಾಕುವರು. ಆಗ ಅವನು ನಾಶವನ್ನು ಹೊಂದುವನು. (ಎಂದು ಹೇಳಿದರು)

ಸ ಏಷ ನಿಹತಃ ಶೇತೇ ಬ್ರಹ್ಮದಂಡೇನ ರಾಕ್ಷಸಃ।
ಚಾರ್ವಾಕೋ ನೃಪತಿಶ್ರೇಷ್ಠ ಮಾ ಶುಚೋ ಭರತರ್ಷಭ ॥೪೮॥

ಎಲೈ ರಾಜಶ್ರೇಷ್ಠನೇ! ಅಂತಹ ಈ ಚಾರ್ವಾಕರಾಕ್ಷಸನು ಬ್ರಹ್ಮದಂಡದಿಂದ ನಿಹತನಾಗಿ ಸತ್ತು ಬಿದ್ದಿದ್ದಾನೆ. ಭರತರ್ಷಭನೇ! ಶೋಕಪಡಬೇಡ.

ಹತಾಸ್ತೇ ಕ್ಷತ್ರಧರ್ಮೇಣ ಜ್ಞಾತಯಸ್ತವ ಪಾರ್ಥಿವಾಃ।
ಸ್ವರ್ಗತಾಶ್ಚ ಮಹಾತ್ಮಾನೋ ವೀರಾ ಕ್ಷತ್ರಿಯಪುಂಗವಾಃ ॥೪೯॥

ಎಲೈ ರಾಜನೇ! ನಿನ್ನ ಬಂಧುಗಳು ಕ್ಷತ್ರಿಯಧರ್ಮಕ್ಕೆ ಅನುಗುಣವಾಗಿ ನಿನ್ನಿಂದ ಹತರಾಗಿದ್ದಾರೆ. ಕ್ಷತ್ರಿಯಶ್ರೇಷ್ಠರೂ, ಮಹಾತ್ಮರೂ, ವೀರರೂ ಆದ ಅವರು ಸ್ವರ್ಗವನ್ನು ಪಡೆದಿದ್ದಾರೆ.

ಸ ತ್ವಮಾತಿಷ್ಠ ಕಲ್ಯಾಣಂ ಮಾ ತೇ ಭೂದ್ ಗ್ಲಾನಿರಚ್ಯುತ।
ಶತ್ರೂನ್ ಜಹಿ ಪ್ರಜಾ ರಕ್ಷ ದ್ವಿಜಾಂಶ್ಚ ಪ್ರತಿಪಾಲಯ ॥೫೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಚತ್ವಾರಿಂಶೋऽಧ್ಯಾಯಃ ॥೩೯॥

ಅಂತಹ ನೀನು ಕಲ್ಯಾಣಕಾರ್ಯಗಳನ್ನುಮಾಡು. ಎಲೈ ಅಚ್ಯುತನೇ! ಮನಸ್ಸಿ-

ನಲ್ಲಿ ಗ್ಲಾನಿಯನ್ನು ಹೊಂದಬೇಡ. ಶತ್ರುಗಳನ್ನು ಗೆಲ್ಲುವವನಾಗು. ಪ್ರಜೆಗಳನ್ನು ರಕ್ಷಿಸು. ಬ್ರಾಹ್ಮಣರನ್ನು ಪೂಜಿಸು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೩೯ಯ ಅಧ್ಯಾಯವು ಮುಗಿಯಿತು.

—0—

೪0. ನಲವತ್ತನೆಯ ಅಧ್ಯಾಯ

ಯುಧಿಷ್ಠಿರನಿಗೆ ಕೃಷ್ಣನಿಂದ ರಾಜ್ಯದಲ್ಲಿ ಅಭಿಷೇಕ

ವೈಶಂಪಾಯನಃ

ತತಃ ಕುಂತೀಸುತೋ ರಾಜಾ ಗತಮನ್ಯುರ್ಗತಜ್ವರಃ।
ಕಾಂಚನೇ ಪ್ರಾಙ್ಮುಖೋ ಹೃಷ್ಟೋ ನ್ಯಷೀದತ್ ಪರಮಾಸನೇ ॥೧॥

ವೈಶಂಪಾಯನರು ಹೇಳುತ್ತಾರೆ – ಅನಂತರ ಕುಂತಿಯ ಪುತ್ರನಾದ ಯುಧಿಷ್ಠಿರ ರಾಜನು ಮನಸ್ಸಿನ ಚಿಂತೆಯನ್ನು ಮತ್ತು ಸಂತಾಪವನ್ನು ಕಳೆದುಕೊಂಡು ಸುವರ್ಣ-ಮಯವಾದ ಶ್ರೇಷ್ಠವಾದ ಆಸನದಲ್ಲಿ ಸಂತೋಷದಿಂದ ಪೂರ್ವಾಭಿಮುಖವಾಗಿ ಕುಳಿತುಕೊಂಡನು.

ತಮೇವಾಭಿಮುಖೌ ಪೀಠೇ ದಿವ್ಯಾಸ್ತರಣಸಂವೃತೇ।
ಸಾತ್ಯಕಿರ್ವಾಸುದೇವಶ್ಚ ನಿಷೀದತುರರಿಂದಮೌ ॥೨॥

ಅರಿಂದಮರಾದ ಸಾತ್ಯಕಿ ಮತ್ತು ಕೃಷ್ಣರು ದಿವ್ಯವಾದ ಹಾಸುಗಳನ್ನು ಹಾಸಿದ ಪೀಠದಲ್ಲಿ ಅವನಿಗೆ ಎದುರಾಗಿ ಕುಳಿತುಕೊಂಡರು.

ಮಧ್ಯೇ ಕೃತ್ವಾತು ರಾಜಾನಂ ಭೀಮಸೇನಾರ್ಜುನಾವುಭೌ।
ನಿಷೀದತುರ್ಮಹಾತ್ಮಾನೌ ಶ್ಲಕ್ಷ್ಣಯೋರ್ಮಣಿಪೀಠಯೋಃ ॥೩॥

ಮಹಾತ್ಮರಾದ ಭೀಮಸೇನಾರ್ಜುನರು ರಾಜನನ್ನು ಮಧ್ಯೆ ಮಾಡಿಕೊಂಡು ಶ್ರೇಷ್ಠವಾದ ಮಣಿಪೀಠಗಳಲ್ಲಿ ಕುಳಿತುಕೊಂಡರು.

ದಾಂತೇ ಶಯ್ಯಾಸನೇ ಶುಭ್ರೇ ಜಾಂಬೂನದವಿಭೂಷಿತೇ।
ಪೃಥಾऽಪಿ ಸಹದೇವೇನ ಸಹಾಸ್ತೇ ನಕುಲೇನ ಚ ॥೪॥

ಗಜದಂತಮಯವಾದ ಶುಭ್ರವಾದ ಸುವರ್ಣಾಲಂಕೃತವಾದ ಶಯ್ಯಾಸನದಲ್ಲಿ ಕುಂತಿಯೂ ಸಹ ನಕುಲಸಹದೇವರ ಜೊತೆಯಲ್ಲಿ ಕುಳಿತುಕೊಂಡಳು.

ಸುಧರ್ಮಾ ವಿದುರೋ ಧೌಮ್ಯೋ ಧೃತರಾಷ್ಟ್ರಶ್ಚ ಕೌರವಃ।
ನಿಷೇದುರ್ಜ್ವಲನಾಕಾರೇಷ್ವಾಸನೇಷು ಪೃಥಕ್ ಪೃಥಕ್ ॥೫॥

ಧರ್ಮಶೀಲನಾದ ವಿದುರ, ಧೌಮ್ಯ, ಕೌರವನಾದ ಧೃತರಾಷ್ಟ್ರ ಇವರು ಅಗ್ನಿಯಂತೆ ಪ್ರಕಾಶಮಾನವಾಗಿದ್ದ ಬೇರೆ ಬೇರೆ ಆಸನಗಳಲ್ಲಿ ಕುಳಿತುಕೊಂಡರು.

ಯುಯುತ್ಸುಃ ಸಂಜಯಶ್ಚೈವ ಗಾಂಧಾರೀ ಚ ಯಶಸ್ವಿನೀ।
ಧೃತರಾಷ್ಟ್ರೋ ಯತೋ ರಾಜಾ ತತಃ ಸರ್ವ ಉಪಾವಿಶನ್ ॥೬॥

ಯುಯುತ್ಸು, ಸಂಜಯ, ಕೀರ್ತಿಶಾಲಿನಿಯಾದ ಗಾಂಧಾರೀ ಇವರೆಲ್ಲರೂ ಧೃತರಾಷ್ಟ್ರನ ಬಳಿಯಲ್ಲಿ ಕುಳಿತುಕೊಂಡರು.

ತತ್ರೋಪವಿಷ್ಟೋ ಧರ್ಮಾತ್ಮಾ ಶ್ವೇತಾಃ ಸುಮನಸೋऽಸ್ಪೃಶತ್।
ಸ್ವಸ್ತಿಕಾನಕ್ಷತಾನ್ ಭೂಮಿಂ ಸುವರ್ಣಂ ರಜತಂ ಮಣೀನ್ ॥೭॥

ಅಲ್ಲಿ ಕುಳಿತುಕೊಂಡ ಧರ್ಮಾತ್ಮನಾದ ಯುಧಿಷ್ಠಿರನು ಮಂಗಳದ ಸಲುವಾಗಿ ಶ್ವೇತಪುಷ್ಪಗಳನ್ನು, ಸ್ವಸ್ತಿಕೆಗಳನ್ನು, ಅಕ್ಷತೆಗಳನ್ನು, ಗೋಶಾಲೆ ಮತ್ತು ವೃಂದಾವನದ ಮೃತ್ತಿಕೆಗಳನ್ನು, ಸುವರ್ಣರಜತಮಣಿಗಳನ್ನು ಸ್ಪರ್ಶ ಮಾಡಿದನು.

ತತಃ ಪ್ರಕೃತಯಃ ಸರ್ವಾಃ ಪುರಸ್ಕೃತ್ಯ ಪುರೋಹಿತಮ್।
ಪೃಥಿವೀಂ ಚ ಸುವರ್ಣಂ ಚ ರತ್ನಾನಿ ಬಹು ಮಂಗಲಮ್ ॥೮॥

ಅನಂತರ ಎಲ್ಲಾ ಪ್ರಜೆಗಳು ಪುರೋಹಿತರನ್ನು ಮುಂದೆ ಮಾಡಿಕೊಂಡು ಕೈಯಲ್ಲಿ ಮಂಗಳವಸ್ತುಗಳನ್ನು ಹಿಡಿದು ಧರ್ಮರಾಜನನ್ನು ನೋಡಿದರು.

ಪೃಥಿವೀಂ ಚ ಸುವರ್ಣಂ ಚ ರತ್ನಾನಿ ವಿವಿಧಾನಿ ಚ।
ಆಭಿಷೇಚನಿಕಂ ಭಾಂಡಂ ಸರ್ವಸಂಭಾರಸಂಭೃತಮ್ ॥೯॥

ಮೃತ್ತಿಕೆ, ಸುವರ್ಣ, ವಿವಿಧವಾದ ರತ್ನಗಳು, ಅಭಿಷೇಕಕ್ಕೆ ಬೇಕಾದ ಪಾತ್ರೆಗಳು, ಮತ್ತು ಉಳಿದ ಎಲ್ಲಾ ಸಲಕರಣೆಗಳು ಸಿದ್ಧವಾದವು.

ಕಾಂಚನೌದುಂಬರಾಸ್ತತ್ರ ರಾಜತಾಃ ಪೃಥಿವೀಮಯಾಃ।
ಪೂರ್ಣಕುಂಭಾಃ ಸುಮನಸೋ ರಾಜಾ ಬರ್ಹಿರ್ಂಷಿ ಗೋರಸಾಃ ॥೧೦॥

ಶಮೀಪಲಾಶಪುನ್ನಾಗಾಃ ಸಮಿಧೋ ಮಧುಸರ್ಪಿಷೀ।
ಸ್ರುವ ಔದುಂಬರಃ ಶಂಖಾಸ್ತಥಾ ಹೇಮವಿಭೂಷಿತಾಃ ॥೧೧॥

ಅಲ್ಲಿ ಸುವರ್ಣಮಯವಾದ, ರಜತಮಯವಾದ, ಮೃಣ್ಮಯವಾದ, ಉದುಂಬರಮಯವಾದ ಪೂರ್ಣಕುಂಭಗಳು, ಪುಷ್ಪಗಳು, ಅರಳುಗಳು, ದರ್ಭೆ-ಗಳು , ಕ್ಷೀರಾದಿ ಗೋರಸಗಳು, ಶಮೀ, ಪಲಾಶ ಮತ್ತು ಪುನ್ನಾಗವೃಕ್ಷಗಳ ಸಮಿತ್ತು-ಗಳು, ಜೇನುತುಪ್ಪ, ತುಪ್ಪ, ಔದುಂಬರ ಸ್ರುವ, ಸುವರ್ಣಭೂಷಿತವಾದ ಶಂಖಗಳು ಎಲ್ಲವೂ ಅಣಿಗೊಂಡವು.

ದಾಶಾರ್ಹೇಣಾಭ್ಯನುಜ್ಞಾತಸ್ತತ್ರ ಧೌಮ್ಯಃ ಪುರೋಹಿತಃ।
ಪ್ರಾಗುದಕ್ಪ್ರವಣಾಂ ವೇದೀಂ ಲಕ್ಷಣೇನೋಪಲಿಪ್ಯ ಹ ॥೧೨॥

ವ್ಯಾಘ್ರಚರ್ಮೋತ್ತರೇ ಶ್ಲಕ್ಷ್ಣೇ ಸರ್ವತೋಭದ್ರ ಆಸನೇ।
ದೃಢಪಾದಪ್ರತಿಷ್ಠಾನೇ ಹುತಾಶನಸಮತ್ವಿಷಿ ॥೧೩॥

ಉಪವೇಶ್ಯ ಮಹಾತ್ಮಾನಂ ಕೃಷ್ಣಾಂ ಚ ದ್ರುಪದಾತ್ಮಜಾಮ್।
ಜುಹಾವ ಪಾವಕಂ ಧೀಮಾನ್ ವಿಧಿಮಂತ್ರಪುರಸ್ಕೃತಮ್।

ಆಗ ಪುರೋಹಿತರೂ ಮೇಧಾವಿಗಳೂ ಆದ ಧೌಮ್ಯರು ಕೃಷ್ಣನ ಅನುಜ್ಞೆ-ಯನ್ನು ಪಡೆದು ಅಲ್ಲಿ ಈಶಾನ್ಯದಿಕ್ಕಿನಲ್ಲಿ ಇಳಿಜಾರಾಗಿದ್ದ ವೇದಿಕೆಯನ್ನು ರಂಗ-ವಲ್ಲೀ , ಸಾರಣೆ ಮೊದಲಾದವುಗಳಿಂದ ಅಲಂಕರಿಸಿದರು. ವ್ಯಾಘ್ರಚರ್ಮದ ಮೇಲೆ

ಹಾಸಿದ ಬೆಲೆಬಾಳುವ ದೃಢವಾದ ಪಾದಪೀಠವುಳ್ಳ ಅಗ್ನಿಯಂತೆ ಕಂಗೊಳಿಸುವ ಸರ್ವತೋಭದ್ರಾಸನದಲ್ಲಿ ದ್ರುಪದಪುತ್ರಿಯಾದ ಕೃಷ್ಣೆಯನ್ನು ಮತ್ತು ಮಹಾತ್ಮನಾದ ಧರ್ಮರಾಜನನ್ನು ಕುಳ್ಳಿರಿಸಿ, ವಿಧಿಮಂತ್ರಪುರಸ್ಸರವಾಗಿ ಅಗ್ನಿಯಲ್ಲಿ ಹೋಮವನ್ನು ಮಾಡಿದರು.

ತತ ಉತ್ಥಾಯ ದಾಶಾರ್ಹಃ ಶಂಖಮಾದಾಯ ಪೂಜಿತಮ್ ॥೧೪॥

ಅಭ್ಯಷಿಂಚತ್ ಪತಿಂ ಪೃಥ್ವ್ಯಾಃ ಕುಂತೀಪುತ್ರಂ ಯುಧಿಷ್ಠಿರಮ್ ।
ಧೃತರಾಷ್ಟ್ರಶ್ಚ ರಾಜರ್ಷಿಃ ಸರ್ವಾಃ ಪ್ರಕೃತಯಸ್ತಥಾ ॥೧೫॥

ಅನಂತರ ದಾಶಾರ್ಹನಾದ ಕೃಷ್ಣನು ಎದ್ದು ಪೂಜಿಸಲ್ಪಟ್ಟ ಶಂಖವನ್ನು ತೆಗೆದುಕೊಂಡು ಕುಂತೀಪುತ್ರನಾದ ಯುಧಿಷ್ಠಿರನನ್ನು ಪೃಥಿವೀಪತಿಯಾಗಿ ಅಭಿಷೇಕ ಮಾಡಿದನು. ಅನಂತರ ಧೃತರಾಷ್ಟ್ರನೂ, ರಾಜರ್ಷಿಗಳೂ ಮತ್ತು ಪ್ರಜೆಗಳಲ್ಲಿ ಪ್ರಧಾನರಾದವರೂ ಅಭಿಷೇಕವನ್ನು ಮಾಡಿದರು.

ಸಮನುಜ್ಞಾಯ ಕೃಷ್ಣೇನ ಭ್ರಾತೃಭಿಃ ಸಹ ಪಾಂಡವ ।
ಪಾಂಚಜನ್ಯಾಭಿಷಿಕ್ತಶ್ಚ ರಾಜಾऽಮೃತಮುಖೋऽಭವತ್ ॥೧೬॥

ಎಲೈ ಪಾಂಡವನೇ! ಕೃಷ್ಣನ ಅನುಮತಿಯನ್ನು ಪಡೆದು ತಮ್ಮಂದಿರಿಂದಲೂ ಪಾಂಚಜನ್ಯಶಂಖದಿಂದ ಅಭಿಷೇಕ ಮಾಡಲ್ಪಟ್ಟ ಯುಧಿಷ್ಠಿರನು ಚಂದ್ರನಂತೆ ಪ್ರಸನ್ನ ಮುಖನಾದನು.

ತತೋऽನುವಾದಯಾಮಾಸುಃ ಪಣವಾನಕದುಂದುಭೀಃ ।
ಧರ್ಮರಾಜೋऽಪಿ ತತ್ ಸರ್ವಂ ಪ್ರತಿಜಗ್ರಾಹ ಧರ್ಮತಃ ॥೧೭॥

ಅನಂತರ ಪಣವ, ಆನಕ ಮತ್ತು ದುಂದುಭಿಗಳು ಮೊಳಗಿದವು. ಧರ್ಮರಾಜನೂ ಸಹ ಅವೆಲ್ಲವನ್ನೂ ಧಾರ್ಮಿಕವಿಧಿಯಿಂದಲೇ ಸ್ವೀಕರಿಸಿದನು.

ಪೂಜಯಾಮಾಸ ತಾಂಶ್ಚಾಪಿ ವಿಧಿವದ್ ಭೂರಿದಕ್ಷಿಣಃ ।

ತತೋ ನಿಷ್ಕಸಹಸ್ರೇಣ ಬ್ರಾಹ್ಮಣಾನ್ ಸ್ವಸ್ತಿ ವಾಚಯತ್ ॥೧೮॥

ವೇದಾಧ್ಯಯನಸಂಪನ್ನಾನ್ ಶೀಲವೃತ್ತಸಮನ್ವಿತಾನ್ ।

ಬಹಳ ದಕ್ಷಿಣೆಯನ್ನು ಕೊಡುವ ಸ್ವಭಾವವುಳ್ಳ ಅವನು ಅವರೆಲ್ಲರನ್ನೂ ವಿಧಿವತ್ತಾಗಿ ಪೂಜಿಸಿದನು. ಅನಂತರ ವೇದಾಧ್ಯಯನಸಂಪನ್ನರೂ, ಶೀಲವೃತ್ತಗಳಿಂದ ಕೂಡಿದವರೂ ಆದ ಬ್ರಾಹ್ಮಣರಿಗೆ ಒಂದೊಂದು ಸಹಸ್ರ ನಿಷ್ಕಗಳನ್ನು ನೀಡಿ, ಸ್ವಸ್ತಿವಾಚನವನ್ನು ಮಾಡಿಸಿದನು.

ತೇ ಪ್ರೀತಾ ಬ್ರಾಹ್ಮಣಾ ರಾಜನ್ ಸ್ವಸ್ತ್ಯೂಚುರ್ಜಯಮೇವ ಚ ।
ಹಂಸಾ ಇವ ಚ ನರ್ದಂತಃ ಪ್ರಶಶಂಸುರ್ಯುಧಿಷ್ಠಿರಮ್ ॥೧೯॥

ಎಲೈ ರಾಜನೇ! ಪ್ರಸನ್ನರಾದ ಬ್ರಾಹ್ಮಣರು ಅವನಿಗೆ ಮಂಗಳವನ್ನು ಮತ್ತು ಜಯವನ್ನು ಹಾರೈಸಿದರು. ಹಂಸಗಳಂತೆ ಧ್ವನಿಯನ್ನು ಮಾಡುತ್ತಾ ಅವರು ಯುಧಿಷ್ಠಿರನನ್ನು ಪ್ರಶಂಸಿಸಿದರು.

ಯುಧಿಷ್ಠಿರ ಮಹಾಬಾಹೋ ದಿಷ್ಟ್ಯಾ ಜಯಸಿ ಪಾಂಡವ ।
ದಿಷ್ಟ್ಯಾ ಸ್ವಧರ್ಮಂ ಪ್ರಾಪ್ತೋಽಸಿ ವಿಕ್ರಮೇಣ ಮಹಾದ್ಯುತೇ ॥೨೦॥

ಮಹಾಬಾಹುವೇ ಪಾಂಡುಪುತ್ರನೇ! ಯುಧಿಷ್ಠಿರನೇ! ದೇವರ ದಯದಿಂದ ನೀನು ಜಯವನ್ನು ಸಂಪಾದಿಸಿದ್ದೀಯೆ. ಎಲೈ ಮಹಾದ್ಯುತಿಯೇ! ನಿನ್ನ ಪರಾಕ್ರಮದಿಂದ ಮತ್ತು ದೇವರ ದಯದಿಂದ ನೀನು ಪುನಃ ನಿನ್ನ ಕ್ಷತ್ರಿಯಧರ್ಮದಲ್ಲಿಯೇ ತೊಡಗಿದ್ದೀಯೆ.

ದಿಷ್ಟ್ಯಾ ಗಾಂಡೀವಧನ್ವಾ ಚ ಭೀಮಸೇನಶ್ಚ ಪಾಂಡವಃ ।
ತ್ವಂ ಚಾಪಿ ಕುಶಲೀ ರಾಜನ್ ಮಾದ್ರೀಪುತ್ರೌ ಚ ಪಾಂಡವೌ ॥೨೧॥

ಎಲೈ ರಾಜನೇ ದೇವರ ದಯದಿಂದಲೇ ಗಾಂಡೀವಧನುರ್ಧಾರಿಯಾದ ಅರ್ಜುನನೂ, ಪಾಂಡುಪುತ್ರನಾದ ಭೀಮಸೇನನೂ, ನೀನೂ ಮತ್ತು ಮಾದ್ರಿಪುತ್ರರಾದ ನಕುಲಸಹದೇವರೂ ಕುಶಲದಿಂದ ಇದ್ದೀರಿ.

ಮುಕ್ತಾ ವೀರಕ್ಷಯಾದಸ್ಮಾತ್ ಸಂಗ್ರಾಮಾನ್ನಿಹತದ್ವಿಷಃ।
ಕ್ಷಿಪ್ರಮುತ್ತರಕಾಲಾನಿ ಕುರು ಕಾರ್ಯಾಣಿ ಪಾಂಡವ ॥೨೨॥

ಶತ್ರುಸಂಹಾರಕವಾದ ವೀರರ ಕ್ಷಯವನ್ನುಂಟು ಮಾಡಿದ ಈ ಸಂಗ್ರಾಮದಿಂದ ಬಿಡುಗಡೆಯನ್ನು ಹೊಂದಿದ್ದೀರಿ. ಎಲೈ ಪಾಂಡವನೇ! ಮುಂದೆ ಮಾಡಬೇಕಾದ ಕಾರ್ಯಗಳನ್ನು ಶೀಘ್ರವಾಗಿ ಮಾಡು. (ಎಂದು ಹೇಳಿದರು)

ತತ್ರ ಪ್ರತ್ಯರ್ಚಿತಃ ಸದ್ಭಿರ್ಧರ್ಮರಾಜೋ ಯುಧಿಷ್ಠಿರಃ।
ಪ್ರತಿಪೇದೇ ಮಹದ್ ರಾಜ್ಯಂ ಸುಹೃದ್ಭಿಃ ಸಹ ಭಾರತ ॥೨೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತ್ವಾರಿಂಶೋಽಧ್ಯಾಯಃ ॥೪೦॥

ಎಲೈ ಭಾರತನೇ! ಆಗ ಧರ್ಮರಾಜನಾದ ಯುಧಿಷ್ಠಿರನು ಸಜ್ಜನರಿಂದ ಪೂಜಿಸಲ್ಪಟ್ಟು, ತನ್ನ ಸುಹೃಜ್ಜನರ ಜೊತೆಯಲ್ಲಿ ತನ್ನ ಶ್ರೇಷ್ಠವಾದ ರಾಜ್ಯವನ್ನು ಹೊಂದಿದನು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೪೦ನೆಯ ಅಧ್ಯಾಯವು ಮುಗಿಯಿತು.

—0—

೪೧. ನಲವತ್ತೊಂದನೆಯ ಅಧ್ಯಾಯ

ಯುಧಿಷ್ಠಿರನ ಉತ್ತರ ಮತ್ತು ಯೌವರಾಜ್ಯಾದಿಗಳಲ್ಲಿ ಭೀಮಾದಿಗಳ ಸ್ಥಾಪನಾ

ವೈಶಂಪಾಯನಃ

ಪ್ರಕೃತೀನಾಂ ತು ತದ್ ವಾಕ್ಯಂ ದೇಶಕಾಲೋಪಸಂಹಿತಮ್।
ಶ್ರುತ್ವಾ ಯುಧಿಷ್ಠಿರೋ ರಾಜಾಽಥೋತ್ತರಂ ಪ್ರತ್ಯಭಾಷತ ॥೧॥

ವೈಶಂಪಾಯನರು – ಪ್ರಜೆಗಳ ದೇಶಕಾಲೋಚಿತವಾದ ಆ ಮಾತುಗಳನ್ನು ಕೇಳಿದ ಯುಧಿಷ್ಠಿರರಾಜನು ಅನಂತರ ಉತ್ತರವನ್ನು ನೀಡಿದನು.

ಧನ್ಯಾಃ ಪಾಂಡುಸುತಾ ಲೋಕೇ ಯೇಷಾಂ ಬ್ರಾಹ್ಮಣಪುಂಗವಾಃ।
ತಥ್ಯಾನ್ ವಾಪ್ಯಥ ವಾऽತಥ್ಯಾನ್ ಗುಣಾನಾಹುಃ ಸಮಾಗತಾಃ ॥೨॥

ಬ್ರಾಹ್ಮಣಪುಂಗವರಾದ ನೀವೆಲ್ಲರೂ ಇಲ್ಲಿಗೆ ಬಂದು ನಮ್ಮಲ್ಲಿ ಇರುವ ಅಥವಾ ಇಲ್ಲದಿರುವ ಗುಣಗಳನ್ನು ಹೀಗೆ ಹೇಳುವುದರಿಂದ ಪಾಂಡುಸುತರಾದ ನಾವು ಧನ್ಯರಾಗಿದ್ದೇವೆ.

ಅನುಗ್ರಾಹ್ಯಾ ವಯಂ ನೂನಂ ಭವತಾಮಿತಿ ಮೇ ಮತಿಃ।
ಯತ್ಸೈವಂ ಗುಣಸಂಪನ್ನಾನಸ್ಮಾನ್ ಬ್ರೂಥ ವಿಮತ್ಸರಾಃ ॥೩॥

ಯಾವ ಮಾತ್ಸರ್ಯವೂ ಇಲ್ಲದೆ ನಮ್ಮನ್ನು ಈ ರೀತಿಯಾಗಿ ಗುಣಸಂಪನ್ನರೆಂದು ಹೇಳುತ್ತಿರುವ ನಿಮ್ಮ ಅನುಗ್ರಹವು ನಮ್ಮ ಮೇಲೆ ಯಾವಾಗಲೂ ಇರಬೇಕೆಂದು ನನ್ನ ಅಭಿಪ್ರಾಯ.

ಧೃತರಾಷ್ಟ್ರೋ ಮಹಾರಾಜಃ ಪಿತಾ ನೋ ದೈವತಂ ಪರಮ್।
ಶಾಸನೇऽಸ್ಯ ಪ್ರಿಯೇ ಚೈವ ಸ್ಥೇಯಂ ಮತ್ಪ್ರಿಯಕಾಂಕ್ಷಿಭಿಃ ॥೪॥

ನಮ್ಮ ತಂದೆಯಾದ ಧೃತರಾಷ್ಟ್ರನೇ ಮಹಾರಾಜ. ಅವನು ನಮಗೆ ದೊಡ್ಡ ದೇವತೆ. ನನಗೆ ಪ್ರಿಯವನ್ನು ಮಾಡಲು ಬಯಸುವ ನೀವು ಯಾವಾಗಲೂ ಅವನ ಶಾಸನವನ್ನು ನೆರವೇರಿಸಿ ಅವನಿಗೆ ಪ್ರಿಯವನ್ನು ಮಾಡಬೇಕು.

ಏತದರ್ಥಂ ಹಿ ಜೀವಾಮಿ ಕೃತ್ವಾ ಜ್ಞಾತಿವಧಂ ಮಹತ್।
ಅಸ್ಯ ಶು(ಶ)ಶ್ರೂಷಣಂ ಕಾರ್ಯಂ ಮಯಾ ನಿತ್ಯಮತಂದ್ರಿಣಾ ॥೫॥

ದೊಡ್ಡ ಜ್ಞಾತಿವಧೆಯನ್ನು ಮಾಡಿ ನಾನು ಇದರ ಸಲುವಾಗಿ ಜೀವಿಸಿದ್ದೇನೆ. ನಾನು ಆಲಸ್ಯವಿಲ್ಲದೆ ಧೃತರಾಷ್ಟ್ರನ ಸೇವೆಯನ್ನು ಯಾವಾಗಲೂ ಮಾಡಬೇಕಾಗಿದೆ.

ಯದಿ ಚಾಹಮನುಗ್ರಾಹ್ಯೋ ಭವತಾಂ ಸುಹೃದಾಂ ತತಃ।
ಧೃತರಾಷ್ಟ್ರೇ ಯಥಾಪೂರ್ವಂ ವೃತ್ತಿಂ ವರ್ತಿತುಮರ್ಹಥ ॥೬॥

ಸುಹೃಜ್ಜನರಾದ ನೀವೆಲ್ಲರೂ ನನಗೆ ಅನುಗ್ರಹವನ್ನು ಮಾಡುವುದಾದರೆ ನೀವೆಲ್ಲರೂ ಧೃತರಾಷ್ಟ್ರನ ವಿಷಯದಲ್ಲಿ ಮೊದಲಿನಂತೆಯೇ ನಡೆದುಕೊಳ್ಳಬೇಕು.

ಏಷ ನಾಥೋ ಹಿ ಜಗತೋ ಭವತಾಂ ಚ ಮಯಾ ಸಹ।
ಅಸ್ಯೈವ ಪೃಥಿವೀ ಕೃತ್ಸ್ನಾ ಪಾಂಡವಾಃ ಸರ್ವ ಏವ ಚ।
ಏತನ್ಮನಸಿ ಕರ್ತವ್ಯಂ ಭವದ್ಭಿರ್ವಚನಂ ಮಮ ॥೭॥

ಅವನೇ ಜಗತ್ತಿಗೂ ನಿಮಗೂ ಮತ್ತು ನನಗೂ ಒಡೆಯನಾದವನು. ಸಮಗ್ರವಾದ ಭೂಮಿಯು ಮತ್ತು ಎಲ್ಲಾ ಪಾಂಡವರೂ ಅವನಿಗೇ ಸೇರಿದವರು. ಈ ನನ್ನ ಮಾತನ್ನು ನೀವು ಯಾವಾಗಲೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. (ಎಂದು ಹೇಳಿದನು).

ಅನುಗಮ್ಯ ಚ ರಾಜಾ ತಾನ್ ಯಥೇಷ್ಟಂ ಗಮ್ಯತಾಮಿತಿ।
ಪೌರಜನಪದಾನ್ ಸರ್ವಾನ್ ವಿಸೃಜ್ಯ ಕುರುನಂದನಃ।
ಯೌವರಾಜ್ಯೇನ ಕೌರವ್ಯೋ ಭೀಮಸೇನಮಯೋಜಯತ್ ॥೮॥

ಕುರುನಂದನನಾದ ಯುಧಿಷ್ಠಿರನು ಪೌರಜಾನಪದರಿಗೆ ನಿಮಗೆ ಇಚ್ಛೆ ಬಂದಂತೆ ನೀವು ಹೋಗಬಹುದು ಎಂದು ಅನುಮತಿಯನ್ನು ನೀಡಿ, ಭೀಮಸೇನನಿಗೆ ಯುವರಾಜಪದವಿಯನ್ನು ನೀಡಿದನು.

ಮಂತ್ರೇ ಚ ನಿಶ್ಚಯೇ ಚೈವ ಷಾಡ್ಗುಣ್ಯಸ್ಯ ಚ ಚಿಂತನೇ।
ವಿದುರಂ ಬುದ್ಧಿಸಂಪನ್ನಂ ಪ್ರೀತಿಮಾನ್ ವೈ ಸಮಾದಿಶತ್ ॥೯॥

ಮಂತ್ರಾಲೋಚನೆಯಲ್ಲಿ ಮುಖ್ಯವಾದ ನಿರ್ಧಾರಗಳ ವಿಷಯದಲ್ಲಿ ಮತ್ತು ರಾಜನೀತಿಯ ಷಡಂಗಗಳಲ್ಲಿ ಬುದ್ಧಿಸಂಪನ್ನನಾದ ವಿದುರನನ್ನು ಸಂತೋಷದಿಂದ ಯೋಜಿಸಿದನು.

ಕೃತಾಕೃತಪರಿಜ್ಞಾನೇ ತಥಾऽಯವ್ಯಯಚಿಂತನೇ।
ಸಂಜಯಂ ಯೋಜಯಾಮಾಸ ಋದ್ಧಮೃದ್ಧೈರ್ಗುಣೈರ್ಯುತಮ್ ॥೧೦॥

ಮಾಡಿದ ಮತ್ತು ಮಾಡಬೇಕಾದ ಕಾರ್ಯಗಳ ಪರಿಶೀಲನೆ ಮತ್ತು ಆಯವ್ಯಯದ ಚಿಂತನೆಯಲ್ಲಿ ಸಮೃದ್ಧವಾದ ಗುಣಗಳಿಂದ ಕೂಡಿದ ಸಮೃದ್ಧನಾದ ಸಂಜಯನನ್ನು ಯೋಜಿಸಿದನು.

ಬಲಸ್ಯ ಪರಿಮಾಣೇ ಚ ಭಕ್ತವೇತನಯೋಸ್ತಥಾ।
ನಕುಲಂ ವ್ಯಾದಿಶದ್ ರಾಜಾ ಕರ್ಮಿಣಾಮನ್ವವೇಕ್ಷಣೇ ॥೧೧॥

ಸೈನ್ಯದ ಜಮಾವಣೆಯ ವಿಷಯದಲ್ಲಿ ಮತ್ತು ಸೈನಿಕರಿಗೆ ಭತ್ಯ ಮತ್ತು ವೇತನವನ್ನು ಕೊಡುವ ವಿಷಯದಲ್ಲಿ ಮತ್ತು ಎಲ್ಲ ಕರ್ಮಕಾರರ ಮೇಲ್ವಿಚಾರಣೆಯಲ್ಲಿ ನಕುಲನನ್ನು ಯೋಜಿಸಿದನು.

ಪರಚಕ್ರೋಪರೋಧೇ ಚ ದೃಪ್ತಾನಾಂ ಚಾವಮರ್ದನೇ।
ಯುಧಿಷ್ಠಿರೋ ಮಹಾರಾಜ ಫಲ್ಗುನಂ ವ್ಯಾದಿದೇಶ ಹ ॥೧೨॥

ಪರದೇಶಗಳನ್ನು ಮುತ್ತಿಗೆ ಹಾಕುವ ವಿಷಯದಲ್ಲಿ ಮತ್ತು ದರ್ಪವನ್ನು ಹೊಂದಿದ ರಾಜರನ್ನು ಸದೆಬಡಿಯುವ ವಿಷಯದಲ್ಲಿ ಮಹಾರಾಜನಾದ ಯುಧಿಷ್ಠಿರನು ಅರ್ಜುನನಿಗೆ ಆದೇಶವನ್ನು ನೀಡಿದನು.

ದ್ವಿಜಾನಾಂ ವೇದಕಾರ್ಯೇಷು ಕಾರ್ಯೇಷ್ವನ್ಯೇಷು ಚೈವ ಹಿ।
ಧೌಮ್ಯಂ ಪುರೋಧಸಾಂ ಶ್ರೇಷ್ಠಂ ವ್ಯಾದಿದೇಶ ಪರಂತಪಃ ॥೧೩॥

ಪರಂತಪನಾದ ಯುಧಿಷ್ಠಿರನು ಬ್ರಾಹ್ಮಣರ ವೈದಿಕಕಾರ್ಯಗಳಲ್ಲಿ ಮತ್ತು ಬೇರೆ ಕಾರ್ಯಗಳಲ್ಲಿಯೂ ಪುರೋಹಿತರಲ್ಲಿ ಶ್ರೇಷ್ಠರಾದ ಧೌಮ್ಯರನ್ನು ಆದೇಶಿಸಿದನು.

ಸಹದೇವಂ ಸಮೀಪಸ್ಥಂ ನಿತ್ಯಮೇವ ಸಮಾದಿಶತ್।
ತೇನ ಗೋಪ್ಯೋ ಹಿ ನೃಪತಿಃ ಸರ್ವಾವಸ್ಥೋ ವಿಶಾಂಪತೇ ॥೧೪॥

ಸಹದೇವನನ್ನು ಸಮೀಪದಲ್ಲಿ ಇದ್ದು, ಯಾವಾಗಲೂ ತನ್ನ ಅಂಗರಕ್ಷಕನಾಗಿರುವಂತೆ ಆದೇಶಿಸಿದನು. ಎಲೈ ರಾಜನೇ! ಎಲ್ಲ ಕಾಲಗಳಲ್ಲಿಯೂ ರಾಜನು ಸಹದೇವನಿಂದ ರಕ್ಷಿಸಲ್ಪಡಬೇಕಾದವನು.

ಯಾನ್ ಯಾನಮನ್ಯದ್ ಯೋಗ್ಯಾಂಶ್ಚ ಯೇಷು ಯೇಷ್ವಿಹ ಕರ್ಮಸು।
ತಾಂಸ್ತಾಂಸ್ತೇಷ್ವೇವ ಯುಯುಜೇ ಪ್ರೀಯಮಾಣೋ ಮಹೀಪತಿಃ ॥೧೫॥

ರಾಜನಾದ ಯುಧಿಷ್ಠಿರನು ಯಾವ ಯಾವ ಕಾರ್ಯಗಳಿಗೆ ಯಾರು ಯಾರು ಯೋಗ್ಯರೆಂದು ಭಾವಿಸಿದನೋ ಅಂತಹವರನ್ನು ಆಯಾ ಕಾರ್ಯಗಳಲ್ಲಿಯೇ ಸಂತೋಷದಿಂದ ನಿಯೋಜಿಸಿದನು.

ವಿದುರಂ ಸಂಜಯಂ ಚೈವ ಯುಯುತ್ಸುಂ ಚ ಮಹೀಪತಿಃ।
ಅಬ್ರವೀತ್ ಪರವೀರಘ್ನೋ ಧರ್ಮಾತ್ಮಾ ಧರ್ಮವತ್ಸಲಃ ॥೧೬॥

ಉತ್ಥಾಯೋತ್ಥಾಯ ಯತ್ ಕಾರ್ಯಮಸ್ಯ ರಾಜ್ಞಃ ಪಿತುರ್ಮಮ।
ಸರ್ವಂ ಭವದ್ಭಿಃ ಕರ್ತವ್ಯಮಪ್ರಮತ್ತೈರ್ಯಥಾತಥಮ್ ॥೧೭॥

ಪೌರಜಾನಪದಾನಾಂ ಚ ಯಾನಿ ಕಾರ್ಯಾಣಿ ನಿತ್ಯಶಃ।
ರಾಜಾನಂ ಸಮನುಜ್ಞಾಪ್ಯ ತಾನಿ ಕಾರ್ಯಾಣಿ ಧರ್ಮತಃ ॥೧೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕಚತ್ವಾರಿಂಶೋऽಧ್ಯಾಯಃ ॥೪೧॥

ವಿದುರ, ಸಂಜಯ ಮತ್ತು ಯುಯುತ್ಸುವನ್ನು ಕುರಿತು ಪರವೀರಘ್ನನೂ ಧರ್ಮಾತ್ಮನೂ ಧರ್ಮವತ್ಸಲನೂ ಆದ ರಾಜನು ನೀವು ಪ್ರತಿದಿನವೂ ಎದ್ದು ರಾಜನಾದ ನನ್ನ ತಂದೆಗೆ ಮಾಡಬೇಕಾದ ಕಾರ್ಯಗಳನ್ನು ಎಚ್ಚರಿಕೆಯಿಂದ ಸರಿಯಾಗಿ ಮಾಡಬೇಕು. ಪೌರಜಾನಪದರಿಗೆ ನಿತ್ಯವೂ ಯಾವ ಕಾರ್ಯವಾಗಬೇಕಾಗಿದೆಯೋ ಅವುಗಳನ್ನೆಲ್ಲಾ ರಾಜನಾದ ಧೃತರಾಷ್ಟ್ರನ ಅನುಮತಿಯನ್ನು ಪಡೆದು ನೀವು ಧರ್ಮದಿಂದ ಮಾಡಬೇಕು ಎಂದು ಹೇಳಿದನು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೪೧ನೆಯ ಅಧ್ಯಾಯವು ಮುಗಿಯಿತು

—0—

೪೨. ನಲವತ್ತೆರಡನೆಯ ಅಧ್ಯಾಯ

ಯುಧಿಷ್ಠಿರನಿಂದ ಜ್ಞಾತಿಗಳಿಗೆ ಶ್ರಾದ್ಧದಾನ

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ಜ್ಞಾತೀನಾಂ ಯೇ ಹತಾ ಮೃಧೇ।
ಶ್ರಾದ್ಧಾನಿ ಕಾರಯಾಮಾಸ ತೇಷಾಂ ಪೃಥಗುದಾರಧೀಃ ॥೧॥

ವೈಶಂಪಾಯನರು – ಅನಂತರ ರಾಜನಾದ ಯುಧಿಷ್ಠಿರನು ಉದಾರವಾದ ಬುದ್ಧಿಯುಳ್ಳವನಾಗಿ ಯುದ್ಧದಲ್ಲಿ ಹತರಾದ ಜ್ಞಾತಿಗಳಿಗೆ ಶ್ರಾದ್ಧಗಳನ್ನು ಮಾಡಿಸಿದನು.

ಧೃತರಾಷ್ಟ್ರೋ ದದೌ ರಾಜಾ ಪುತ್ರಾಣಾಮೌರ್ಧ್ವದೇಹಿಕಮ್।
ಸರ್ವಕಾಮಗುಣೋಪೇತಮನ್ನಂ ಗಾಶ್ಚ ಧನಾನಿ ಚ।
ರತ್ನಾನಿ ಚ ವಿಚಿತ್ರಾಣಿ ಮಹಾರ್ಹಾಣಿ ಮಹಾಯಶಾಃ ॥೨॥

ರಾಜನಾದ ಧೃತರಾಷ್ಟ್ರನು ತನ್ನ ಪುತ್ರರಿಗೆ ಸರ್ವಾಪೇಕ್ಷಿತಗುಣಗಳಿಂದ ಕೂಡಿದ ಔರ್ಧ್ವದೈಹಿಕಕ್ರಿಯೆಯನ್ನು ಮಾಡಿ ಮಹಾಕೀರ್ತಿವಂತನಾದ ಅವನು ಅನ್ನವನ್ನೂ ಗೋವುಗಳನ್ನೂ, ಧನವನ್ನೂ, ವಿಚಿತ್ರವಾದ ಬೆಲೆ ಬಾಳುವ ರತ್ನಗಳನ್ನೂ ದಾನ ಮಾಡಿದನು.

ಯುಧಿಷ್ಠಿರಸ್ತು ಕರ್ಣಸ್ಯ ದ್ರೋಣಸ್ಯ ಚ ಮಹಾತ್ಮನಃ।
ಧೃಷ್ಟದ್ಯುಮ್ನಾಭಿಮನ್ಯುಭ್ಯಾಂ ಹೈಡಿಂಬಸ್ಯ ಚ ರಕ್ಷಸಃ ॥೩॥

ವಿರಾಟಪ್ರಭೃತೀನಾಂ ಚ ಸುಹೃದಾಮುಪಕಾರಿಣಾಮ್।
ದ್ರುಪದದ್ರೌಪದೇಯಾನಾಂ ದ್ರೌಪದ್ಯಾ ಸಹಿತೋ ದದೌ ॥೪॥

ಯುಧಿಷ್ಠಿರನಾದರೋ ಕರ್ಣನಿಗೆ ಮಹಾತ್ಮರಾದ ದ್ರೋಣರಿಗೆ ಧೃಷ್ಟದ್ಯುಮ್ನ ಮತ್ತು ಅಭಿಮನ್ಯುಗಳಿಗೆ ರಾಕ್ಷಸನಾದ ಘಟೋತ್ಕಚನಿಗೆ ವಿರಾಟ ಮೊದಲಾದ

ಉಪಕಾರಿಗಳಾದ ಸುಹೃಜ್ಜನರಿಗೆ ದ್ರುಪದನಿಗೆ ಮತ್ತು ದ್ರುಪದಪುತ್ರರಿಗೆ ದ್ರೌಪದಿ-ಯಿಂದ ಸಹಿತನಾಗಿ ಶ್ರಾದ್ಧವನ್ನು ಮಾಡಿದನು.

ಬ್ರಾಹ್ಮಣಾನಾಂ ಸಹಸ್ರಾಣಿ ಪೃಥಗೇಕೈಕಮುದ್ದಿಶನ್ ।
ಧನೈಶ್ಚ ವಸ್ತ್ರೈ ರತ್ನೈಶ್ಚ ಗೋಭಿಶ್ಚ ಸಮತರ್ಪಯತ್ ॥೫॥

ಹತರಾದ ಒಬ್ಬೊಬ್ಬರನ್ನೂ ಉದ್ದೇಶಿಸಿ ಸಹಸ್ರಬ್ರಾಹ್ಮಣರನ್ನು ಧನಗಳಿಂದಲೂ, ವಸ್ತ್ರಗಳಿಂದಲೂ, ರತ್ನಗಳಿಂದಲೂ, ಗೋವುಗಳಿಂದಲೂ ತೃಪ್ತಿಪಡಿಸಿದನು.

ಯೇ ಚಾನ್ಯೇ ಪೃಥಿವೀಪಾಲಾ ಯೇಷಾಂ ನಾಸ್ತಿ ಸುಹೃಜ್ಜನಃ ।
ಉದ್ದಿಶ್ಯೋದ್ದಿಶ್ಯ ತೇಷಾಂ ಚ ಚಕ್ರೇ ರಾಜೌರ್ಧ್ವದೈಹಿಕಮ್ ॥೬॥

ರಾಜನಾದ ಅವನು ಯುದ್ಧದಲ್ಲಿ ಮಡಿದ ಸುಹೃಜ್ಜನರಿಲ್ಲದ ರಾಜರನ್ನು ಪ್ರತಿ-ಯೊಬ್ಬರನ್ನೂ ಉದ್ದೇಶಿಸಿ ಉದ್ದೇಶಿಸಿ ಅವರಿಗೆ ಉತ್ತರಕ್ರಿಯೆಯನ್ನು ಮಾಡಿದನು.

ಸಭಾಃ ಪ್ರಪಾಶ್ಚ ವಿವಿಧಾಸ್ತಡಾಗಾನಿ ಚ ಪಾಂಡವಃ ।
ಸುಹೃದಾಂ ಕಾರಯಾಮಾಸ ಸರ್ವೇಷಾಮೌರ್ಧ್ವದೈಹಿಕಮ್ ॥೭॥

ಪಾಂಡವನಾದ ಅವನು ಸುಹೃಜ್ಜನರ ಔರ್ಧ್ವದೈಹಿಕಕ್ರಿಯೆಯ ಅಂಗವಾಗಿ ಸಭೆ-ಗಳನ್ನು , ಪಾನಶಾಲೆಗಳನ್ನು ವಿವಿಧವಾದ ಜಲಾಶಯಗಳನ್ನು ನಿರ್ಮಿಸಿದನು.

ಸ ತೇಷಾಮನೃಣೋ ಭೂತ್ವಾ ಗತ್ವಾ ಲೋಕೇಷ್ವವಾಚ್ಯತಾಮ್ ।
ಕೃತಕೃತ್ಯೋಽಭವದ್ ರಾಜಾ ಪ್ರಜಾ ಧರ್ಮೇಣ ಪಾಲಯನ್ ॥೮॥

ಅವನು ಅವರ ಋಣದಿಂದ ಮುಕ್ತನಾಗಿ, ಲೋಕದಲ್ಲಿ ನಿಂದ್ಯನಾಗದೆ ಪ್ರಜೆ-ಗಳನ್ನು ಧರ್ಮದಿಂದ ಪಾಲಿಸುತ್ತಾ ಕೃತಕೃತ್ಯನಾದನು.

ಧೃತರಾಷ್ಟ್ರಂ ಯಥಾಪೂರ್ವಂ ಗಾಂಧಾರೀಂ ವಿದುರಂ ತಥಾ ।
ಸರ್ವಾಂಶ್ಚ ಕೌರವಾಮಾತ್ಯಾನ್ ಭೃತ್ಯಾಂಶ್ಚ ಸಮಪೂಜಯತ್ ॥೯॥

ಧೃತರಾಷ್ಟ್ರನನ್ನೂ, ಗಾಂಧಾರಿಯನ್ನೂ, ವಿದುರನನ್ನೂ, ಕೌರವರ ಎಲ್ಲಾ ಮಂತ್ರಿಗಳನ್ನೂ ಮತ್ತು ಭೃತ್ಯರನ್ನೂ ಮೊದಲಿನಂತೆಯೇ ಪೂಜಿಸಿದನು.

ಯಾಶ್ಚ ತತ್ರ ಸ್ತ್ರಿಯಃ ಕಾಶ್ಚಿದ್ ಹತವೀರಾ ಹತಾತ್ಮಜಾಃ।
ಸರ್ವಾಸ್ತಾಃ ಕೌರವೋ ರಾಜಾ ಸಂಪೂಜ್ಯಾಪಾಲಯದ್ ಘೃಣೀ ॥೧೦॥

ಕೌರವರಾಜನಾದ ಯುಧಿಷ್ಠಿರನು ದಯಾಪೂರ್ಣನಾಗಿ ಯುದ್ಧದಲ್ಲಿ ಪತಿಗಳನ್ನೂ, ಪುತ್ರರನ್ನೂ ಕಳೆದುಕೊಂಡ ಎಲ್ಲಾ ಸ್ತ್ರೀಯರನ್ನೂ ಪೂಜಿಸಿ, ಅವರ ಪಾಲನೆಯನ್ನು ಮಾಡಿದನು.

ದೀನಾಂಧಕೃಪಣಾನಾಂ ಚ ಗೃಹಾಚ್ಛಾದನಭೋಜನೈಃ।
ಆನೃಂಶಸ್ಯಪರೋ ರಾಜಾ ಚಕಾರಾನುಗ್ರಹಂ ಪ್ರಭುಃ ॥೧೧॥

ಪ್ರಭುವೂ ದಯಾಳುವೂ ಆದ ರಾಜನು ದೀನಾಂಧಕೃಪಣರಿಗೆ ಗೃಹಗಳನ್ನೂ, ವಸ್ತ್ರಗಳನ್ನೂ ಮತ್ತು ಭೋಜನವನ್ನೂ ಕಲ್ಪಿಸಿ ಅನುಗ್ರಹವನ್ನು ಮಾಡಿದನು.

ಸ ವಿಜಿತ್ಯ ಮಹೀಂ ಕೃತ್ಸ್ನಾಮಾನೃಣ್ಯಂ ಪ್ರಾಪ್ಯ ವೈರಿಷು।
ನಿಃಸಪತ್ನಃ ಸುಖೀ ರಾಜಾ ವಿಜಹಾರ ಯುಧಿಷ್ಠಿರಃ ॥೧೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಿಚತ್ವಾರಿಂಶೋऽಧ್ಯಾಯಃ ॥೪೨॥

ರಾಜನಾದ ಯುಧಿಷ್ಠಿರನು ಸಮಗ್ರವಾದ ಭೂಮಿಯನ್ನು ಗೆದ್ದು ವೈರಿಗಳಿಗೂ ಶ್ರಾದ್ಧವನ್ನು ಮಾಡಿ ಅವರ ಋಣವನ್ನು ತೀರಿಸಿ, ಶತ್ರುರಹಿತನಾಗಿ ಸಂತೋಷದಿಂದ ವಿಹರಿಸಿದನು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೪೨ನೆಯ ಅಧ್ಯಾಯ ಮುಗಿಯಿತು.

—0—

೪೩. ನಲವತ್ತಮೂರನೆಯ ಅಧ್ಯಾಯ

ಯುಧಿಷ್ಠಿರನು ಮಾಡಿದ ಕೃಷ್ಣಸ್ತೋತ್ರ

ವೈಶಂಪಾಯನಃ

ಅಭಿಷಿಕ್ತೋ ಮಹಾಪ್ರಾಜ್ಞೋ ರಾಜ್ಯಂ ಪ್ರಾಪ್ಯ ಯುಧಿಷ್ಠಿರಃ।
ದಾಶಾರ್ಹಂ ಪುಂಡರೀಕಾಕ್ಷಮುವಾಚ ಪ್ರಾಂಜಲಿಃ ಶುಚಿಃ ॥೧॥

ವೈಶಂಪಾಯನರು – ಮಹಾಪ್ರಾಜ್ಞನಾದ ಯುಧಿಷ್ಠಿರನು ರಾಜ್ಯದಲ್ಲಿ ಅಭಿಷಿಕ್ತನಾಗಿ ರಾಜ್ಯವನ್ನು ಪಡೆದು ಪುಂಡರೀಕಾಕ್ಷನಾದ ದಾಶಾರ್ಹನಾದ ಕೃಷ್ಣನಿಗೆ ಶುಚಿಯಾಗಿ ಕೈಗಳನ್ನು ಮುಗಿದು ಮಾತನಾಡಿದನು.

ತವ ಕೃಷ್ಣ ಪ್ರಸಾದೇನ ನಯೇನ ಚ ಬಲೇನ ಚ।
ಬುದ್ಧ್ಯಾ ಚ ಯದುಶಾರ್ದೂಲ ತಥಾ ವಿಕ್ರಮಣೇನ ಚ ॥೨॥

ಪುನಃ ಪ್ರಾಪ್ತಮಿದಂ ರಾಜ್ಯಂ ಪಿತೃಪೈತಾಮಹಂ ಮಯಾ।
ನಮಸ್ತೇ ಪುಂಡರೀಕಾಕ್ಷ ಪುನಃ ಪುನರರಿಂದಮ ॥೩॥

ಕೃಷ್ಣನೇ ನಿನ್ನ ಅನುಗ್ರಹದಿಂದ, ನೀತಿಯಿಂದ, ಬಲದಿಂದ, ಬುದ್ಧಿಯಿಂದ ಮತ್ತು ಪರಾಕ್ರಮದಿಂದ ಪಿತೃಪಿತಾಮಹರಿಗೆ ಸೇರಿದ ಈ ರಾಜ್ಯವನ್ನು ನಾನು ಪುನಃ ಪಡೆದಿದ್ದೇನೆ. ಎಲೈ ಯದುಶಾರ್ದೂಲನೇ! ಪುಂಡರೀಕಾಕ್ಷನೇ! ಅರಿಂದಮನೇ! ನಿನಗೆ ಪುನಃ ಪುನಃ ನಮಸ್ಕಾರ.

ತ್ವಾಮೇಕಮಾಹುಃ ಪುರುಷಂ ತ್ವಾಮಾಹುಃ ಸಾತ್ವತಾಂಪತಿಮ್।
ನಾಮಭಿಸ್ತ್ವಾಂ ಬಹುವಿಧೈಃ ಸ್ತುವಂತಿ ಪರಮರ್ಷಯಃ ॥೪॥

ನಿನ್ನನ್ನು ಸರ್ವೋತ್ತಮನೆಂದು ಕರೆಯುತ್ತಾರೆ. ಪೂರ್ಣಷಡ್ಗುಣಸಂಪನ್ನನೆಂದು ಕರೆಯುತ್ತಾರೆ. ಸಾತ್ವತರಿಗೆ ಪತಿಯೆಂದು ಕರೆಯುತ್ತಾರೆ. ಪರಮ ಋಷಿಗಳು ಅನೇಕವಿಧವಾದ ನಾಮಗಳಿಂದ ನಿನ್ನ ಸ್ತೋತ್ರವನ್ನು ಮಾಡುತ್ತಾರೆ.

ವಿಶ್ವಕರ್ಮನ್ ನಮಸ್ತೇಽಸ್ತು ವಿಶ್ವಾತ್ಮನ್ ವಿಶ್ವಸಂಭವ।
ವಿಷ್ಣೋ ಜಿಷ್ಣೋ ಹರೇ ಕೃಷ್ಣ ವೈಕುಂಠ ಪುರುಷೋತ್ತಮ ॥೫॥

ಎಲೈ ಎಲ್ಲ ಕರ್ಮಗಳನ್ನೂ ಮಾಡುವವನೇ! ನಿನಗೆ ನಮಸ್ಕಾರ. ವಿಶ್ವ-ವ್ಯಾಪಕನೇ! ವಿಶ್ವೋತ್ಪತ್ತಿಗೆ ಕಾರಣನೇ! ವಿಶೇಷವಾದ ಪ್ರಾಣಚೇಷ್ಟಾರೂಪನಾದ-ವನೇ! ಜಯಶೀಲನಾದವನೇ! ಪಾಪಪರಿಹಾರಕನೇ! ಕುಂದದ ಗುಣಗಳುಳ್ಳವನೇ! ಪುರುಷೋತ್ತಮನೇ! ಕೃಷ್ಣನೇ! (ನಿನಗೆ ನಮಸ್ಕಾರ).

ಅದಿತ್ಯಾಃ ಸಪ್ತಧಾ ತ್ವಂ ತು ಪುರಾಣೇ ಗರ್ಭತಾಂಗತಃ।
ಪೃಶ್ನಿಗರ್ಭಸ್ತ್ವಮೇವೈಕಸ್ತ್ರಿಯುಗಂ ತ್ವಾಂ ವದಂತ್ಯಪಿ ॥೬॥

ಪುರಾಣಗಳಲ್ಲಿ ನೀನು ಅದಿತಿದೇವಿಯ ಗರ್ಭದಲ್ಲಿ ಏಳು ಬಾರಿ ಜನಿಸಿದ್ದೀಯೆ ಎಂದು ಹೇಳಲ್ಪಡುತ್ತದೆ. ನೀನೇ ಪೃಶ್ನಿಗರ್ಭನಾದವನು. ನಿನ್ನನ್ನು ಮೂರು ಯುಗ-ಗಳಲ್ಲಿ ಅವತಾರ ಮಾಡುವ ಕಾರಣದಿಂದ ತ್ರಿಯುಗನೆಂದು ಕರೆಯುತ್ತಾರೆ.

ಶುಚಿಶ್ರವಾ ಹೃಷೀಕೇಶೋ ಘೃತಾರ್ಚಿರ್ಹಂಸ ಉಚ್ಯಸೇ।
ತ್ರಿಚಕ್ಷುಃ ಶಂಭುರೇಕಸ್ತ್ವಂ ವಿಭುರ್ದಾಮೋದರೋಽಪಿ ಚ ॥೭॥

ನೀನು ಪವಿತ್ರವಾದ ಕೀರ್ತಿಯುಳ್ಳವನು. ಇಂದ್ರಿಯಗಳಿಗೆ ಅಧಿಪತಿಯಾದ-ವನು. ಪ್ರಸರಿಸುವ ಜ್ಞಾನಾದಿ ಜ್ವಾಲೆಯುಳ್ಳವನು. ದೋಷದೂರನೂ ಮತ್ತು ಗುಣಪರಿಪೂರ್ಣನೂ ಆದ ಕಾರಣದಿಂದ ಶುಚಿಶ್ರವನೆಂದೂ, ಹೃಷೀಕೇಶನೆಂದೂ, ಘೃತಾರ್ಚಿ ಎಂದೂ, ಹಂಸನೆಂದೂ ಹೇಳಲ್ಪಡುತ್ತೀಯೆ. ನರಸಿಂಹರೂಪದಲ್ಲಿ ನೀನು ತ್ರಿನೇತ್ರನಾದವನು. ಪರಮಾನಂದಕ್ಕೆ ಆಶ್ರಯನಾದವನು ನೀನೊಬ್ಬನೇ. ನೀನು ವ್ಯಾಪ್ತನಾದವನು ಮತ್ತು ಯಶೋದೆಯಿಂದ ಉದರದಲ್ಲಿ ಕಟ್ಟಲ್ಪಟ್ಟವನು.

ವರಾಹೋಽಗ್ನಿರ್ಬೃಹದ್ಭಾನುರ್ವರ್ಷಣಸ್ತಾರ್ಕ್ಷ್ಯಲಕ್ಷಣಃ।
ಅನೀಕಸಾಹಃ ಪುರುಷಃ ಶಿಪಿವಿಷ್ಟ ಉರುಕ್ರಮಃ ॥೮॥

ನೀನೇ ವರಾಹನಾದವನು. ಅಗ್ರನಾದ್ದರಿಂದ ಅಗ್ನಿಯೆಂದು ಕರೆಯಲ್ಪಡುವ-

ವನು. ಅನಂತವಾದ ಜ್ಞಾನಕಿರಣವುಳ್ಳವನು. ಭಕ್ತರ ಅಭೀಷ್ಟವನ್ನು ಮಳೆಯಂತೆ ಸುರಿಸುವವನು. ಗರುಡಧ್ವಜನಾದವನು. ಯಾವ ಸೈನ್ಯವನ್ನೂ ತಡೆಯಲು ಸಮರ್ಥ-ನಾದವನು. ಗರುಡಾರೂಢನಾದವನು. ಮಹಾಪರಾಕ್ರಮವುಳ್ಳವನು.

ವಾಚಿಷ್ಠಃ ಉಗ್ರಃ ಸೇನಾನೀಃ ಸತ್ಯೋ ವಾಜಸನಿರ್ಗ್ರಹಃ।
ಅಚ್ಯುತಶ್ಚ್ಯವನೋಽರೀಣಾಂ ಸಂಕೃತಿರ್ವಿಕೃತಿರ್ವೃಷಃ ॥೯॥

ವಾಗಿಂದ್ರಿಯಸ್ಥಿತನಾದವನು. ಅಸುರರಿಗೆ ಘೋರರೂಪನಾದವನು. ಸೇನಾ ನಾಯಕನಾದವನು. ಮುಖ್ಯಪ್ರಾಣಪ್ರೇರಕನಾದವನು. ಎಲ್ಲರಿಗೂ ಅನ್ನವನ್ನು ನೀಡುವವನು. ಹೃದಯಗುಹೆಯಲ್ಲಿ ವಾಸಿಸುವವನು. ಚತುರ್ವಿಧನಾಶರಹಿತ-ನಾದವನು. ಶತ್ರುಗಳನ್ನು ನಾಶಪಡಿಸುವವನು. ಸಮೀಚೀನವಾದ ಕಾರ್ಯಗಳನ್ನು ಮಾಡುವವನು. ವಿವಿಧವಾದ ಕಾರ್ಯಗಳನ್ನು ಮಾಡುವವನು. ಸರ್ವಶ್ರೇಷ್ಠನಾ-ದವನು.

ಕೃತವರ್ತ್ಮಾ ತ್ವಮೇವಾದ್ರಿರ್ವೃಷಗರ್ಭೋ ವೃಷಾಕಪಿಃ।
ಸಿಂಧುಕ್ಷಿದೂರ್ಮಿಸ್ತ್ರಿಕಕುತ್ ತ್ರಿಧಾಮಾ ತ್ರಿವೃದಚ್ಯುತಃ ॥೧೦॥

ವೇದಗಳಿಂದ ನಿನ್ನ ಪ್ರಾಪ್ತಿಗೆ ತೋರಿಸಲ್ಪಟ್ಟ ದಾರಿಯುಳ್ಳವನು. ನೀನೇ ಆದರಣೀಯನಾದವನು. ಶ್ರೇಷ್ಠವಾದ ಗರ್ಭವನ್ನು (ಬ್ರಹ್ಮಾಂಡವನ್ನು) ಧರಿಸಿದ-ವನು. ವೃಷಾಕಪಿ ಎನಿಸುವವನು. ಸಮುದ್ರಶಾಯಿಯಾದವನು. ಉತ್ಪತ್ತಿ ಸ್ಥಿತಿ ಸಂಹಾರಗಳ ತರಂಗಗಳನ್ನು ಪ್ರವರ್ತಿಸುವವನು. ಮೂರು ಶಿಖರಗಳನ್ನು ಹೊಂದಿ-ದವನು. ಶ್ವೇತದ್ವೀಪ ಅನಂತಾಸನ ಮತ್ತು ವೈಕುಂಠವೆಂಬ ಮೂರು ವಾಸಸ್ಥಾನ-ವುಳ್ಳವನು. ಮೂರು ವೇದಗಳಿಂದ ಪ್ರತಿಪಾದ್ಯನಾದವನು. ಚತುರ್ವಿಧನಾಶರಹಿತ-ನಾದವನು.

ಸಮ್ರಾಡ್ ವಿರಾಟ್ ಸ್ವರಾಟ್ ಚೈವ ಸುರರಾಟ್ ಧರ್ಮದೋ ಭವಃ।
ವಿಭುರ್ಭೂರಭಿಭೂಃ ಕೃಷ್ಣಃ ಕೃಷ್ಣವರ್ತ್ಮಾ ತ್ವಮೇವ ಚ ॥೧೧॥

ಚೆನ್ನಾಗಿ ಪ್ರಕಾಶಿಸುವವನು. ವಿವಿಧವಾಗಿ ಪ್ರಕಾಶಿಸುವವನು. ಸ್ವತಂತ್ರನಾದವನು. ದೇವತೆಗಳಿಗೆ ಒಡೆಯನಾದವನು. ಧರ್ಮಪ್ರದನಾದವನು. ವೈಭವರೂಪನಾದವನು. ವ್ಯಾಪ್ತನಾದವನು. ಸರ್ವಾಶ್ರಯನಾದವನು. ಶತ್ರುಗಳನ್ನು ಸೋಲಿಸುವವನು. ಎಲ್ಲರನ್ನೂ ಆಕರ್ಷಿಸುವವನು. ಎಲ್ಲರನ್ನೂ ನಿನ್ನೆಡೆಗೆ ಆಕರ್ಷಿಸುವ ಮಾರ್ಗವುಳ್ಳವನು.

ಸ್ವಿಷ್ಟಕೃದ್ ಭಿಷಗಾವರ್ತಃ ಕಪಿಲಸ್ತ್ವಂ ಚ ವಾಮನಃ।
ಯಜ್ಞೋ ಧ್ರುವಃ ಪತಂಗಶ್ಚ ಜಯತ್ಸೇನಸ್ತ್ವಮುಚ್ಯತೇ ॥೧೨॥

ಭಕ್ತರಿಗೆ ಬಹಳ ಇಷ್ಟವಾದ ವಸ್ತುಗಳನ್ನು ಕೊಡುವವನು. ಸಂಸಾರವೆಂಬ ರೋಗಕ್ಕೆ ವೈದ್ಯನಾದವನು. ಪುನಃ ಪುನಃ ಅವತಾರವನ್ನು ಮಾಡುವವನು. ನೀನೇ ಕಪಿಲನಾದವನು. ವಾಮನನಾದವನು. ಯಜನೀಯನಾದವನು. ಶಾಶ್ವತನಾದವನು. ಗರುಡಾದಿ ಪಕ್ಷಿಗಳ ಅಂತರ್ಯಾಮಿಯಾದವನು. ಜಯಶೀಲವಾದ ಸೇನೆಯುಳ್ಳವನು ಎಂದು ಕರೆಯಲ್ಪಡುತ್ತೀಯೆ.

ಶಿಖಂಡೀ ನಹುಷೋ ಬಭ್ರುರ್ದಿವಃಸ್ಪೃಕ್ ತ್ವಂ ಪುನರ್ವಸುಃ।
ಸುಬಭ್ರುರುಕ್ಷೋ ರುಗ್ಮಸ್ತ್ವಂ ಸುಷೇಣೋ ದುಂದುಭಿಸ್ತಥಾ ॥೧೩॥

ನೀನೇ ಶಿಖೆಯನ್ನು ಧರಿಸಿದವನು. ನಹುಷಾದಿ ಚಕ್ರವರ್ತಿಗಳ ಅಂತರ್ಯಾಮಿಯಾದವನು. ಸರ್ವವನ್ನೂ ಧರಿಸಿದವನು. ಅವ್ಯಾಕೃತಾಕಾಶದಲ್ಲಿ ವ್ಯಾಪಿಸಿರುವವನು. ಪುನಃ ಪುನಃ ಭಕ್ತರಿಗೆ ಧನವನ್ನು ಕೊಡುವವನು. ಶ್ರೇಷ್ಠವಾದ ಧಾರಣಶೀಲನಾದವನು. ಭಕ್ತರ ಅಭೀಷ್ಟವನ್ನು ಸುರಿಸುವವನು. ಕಾಂತಿಯಿಂದ ಬೆಳಗುವವನು. ಒಳ್ಳೆಯ ಸೈನ್ಯವುಳ್ಳವನು. ದುಂದುಭಿಮೊದಲಾದವುಗಳಲ್ಲಿ ಇದ್ದು ಅವುಗಳ ಕಾರ್ಯವನ್ನು ಮಾಡುವವನು.

ಗಭಸ್ತಿನೇಮಿಃ ಶ್ರೀಪದ್ಮಂ ಪುಷ್ಕರಂ ಪುಷ್ಪಧಾರಣಃ।
ಋಭುರ್ವಿಭುಃ ಸರ್ವಸೂಕ್ಷ್ಮಸ್ತ್ವಂ ಸಾವಿತ್ರಂ ಚ ಪಶ್ಯಸೇ ॥೧೪॥

ಕಿರಣಗಳುಳ್ಳ ಸುದರ್ಶನಚಕ್ರವುಳ್ಳವನು. ಲಕ್ಷ್ಮಿಯಿಂದ ಅಭಿಮನ್ಯವಾದ ಪದ್ಮವನ್ನು ಧರಿಸಿದವನು. ಪುಷ್ಕಳನಾದವನು. ಪುಷ್ಪಗಳಿಂದ ಮಾಡಿದ ವನಮಾಲೆಯನ್ನು ಧರಿಸಿದವನು. ದೇವತೆಗಳಿಗೆ ಒಡೆಯನಾದವನು. ವ್ಯಾಪ್ತನಾದವನು. ಅತ್ಯಂತ ಸೂಕ್ಷ್ಮನಾದವನು(ಅತೀಂದ್ರಿಯನಾದವನು). ನೀನೇ ಗಾಯತ್ರೀಮಂತ್ರಪ್ರತಿಪಾದ್ಯನೆಂದು ಹೇಳಲ್ಪಡುತ್ತೀಯೆ.

ಅಂಭೋನಿಧಿಸ್ತ್ವಂ ಬ್ರಹ್ಮಾ ತ್ವಂ ಪವಿತ್ರಂ ಧಾಮ ಧನ್ವಚ।
ಹಿರಣ್ಯಗರ್ಭಂ ತ್ವಾಮಾಹುಃ ಸ್ವಧಾ ಸ್ವಾಹಾ ಚ ಕೇಶವ ॥೧೫॥

ಎಲೈ ಕೇಶವನೇ! ಸಮುದ್ರಗಳು, ಬ್ರಹ್ಮಾದಿ ದೇವತೆಗಳು, ಪವಿತ್ರವಾದ ವಾಸಸ್ಥಾನಗಳು, ಮರುಭೂಮಿಗಳು ಹಿರಣ್ಯಗರ್ಭರೂಪವಾದ ಬ್ರಹ್ಮಾಂಡ, ದೇವತೆಗಳ ಅನ್ನ, ಪಿತೃಗಳ ಅನ್ನ ಎಲ್ಲವೂ ನಿನ್ನ ಅಧೀನವಾದುದು.

ಯೋನಿಸ್ತ್ವಮಸ್ಯ ಪ್ರಲಯಶ್ಚ ಕೃಷ್ಣ
ತ್ವಮೇವೇದಂ ಸೃಜಸಿ ವಿಶ್ವಮಗ್ರೇ।
ವಿಶ್ವಂ ಚೇದಂ ತ್ವದ್ವಶೇ ವಿಶ್ವಯೋನೇ
ನಮೋಽಸ್ತು ತೇ ಶಾರ್ಙ್ಗಚಕ್ರಾಸಿಪಾಣೇ ॥೧೬॥

ಎಲೈ ಕೃಷ್ಣನೇ! ನೀನು ಈ ಜಗತ್ತಿಗೆ ಉತ್ಪತ್ತಿಕಾರಣ ಮತ್ತು ಸಂಹಾರಕಾರಣನಾದವನು. ಪ್ರಳಯಕಾಲದಲ್ಲಿ ನೀನೇ ಈ ಜಗತ್ತನ್ನು ಸೃಷ್ಟಿಸುವವನು. ಎಲೈ ವಿಶ್ವಯೋನಿಯೇ! ಈ ಜಗತ್ತು ನಿನ್ನ ಅಧೀನವಾಗಿದೆ. ಶಾರ್ಙ್ಗಧನುಸ್ಸನ್ನೂ, ಸುದರ್ಶನ ಚಕ್ರವನ್ನೂ, ನಂದಕ ಖಡ್ಗವನ್ನೂ ಹಸ್ತದಲ್ಲಿ ಹಿಡಿದ ನಿನಗೆ ನಮಸ್ಕಾರ.

ಏವಂ ಸ್ತುತೋ ಧರ್ಮರಾಜೇನ ಕೃಷ್ಣಃ
ಸಭಾಮಧ್ಯೇ ಪ್ರೀತಿಮಾನ್ ಪುಷ್ಕರಾಕ್ಷಃ।
ತಮಭ್ಯನಂದದ್ ಭಾರತಂ ಪುಷ್ಕಳಾಭಿಃ
ವಾಗ್ಭಿರ್ಜ್ಯೇಷ್ಠಂ ಪಾಂಡವಂ ಯಾದವಾಗ್ರ್ಯಃ ॥೧೭॥

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಿಚತ್ವಾರಿಂಶೋಽಧ್ಯಾಯಃ ॥೪೩॥

ಹೀಗೆ ಸಭಾಮಧ್ಯದಲ್ಲಿ ಧರ್ಮರಾಜನಿಂದ ಸ್ತೋತ್ರಮಾಡಲ್ಪಟ್ಟ ಪುಷ್ಕರಾಕ್ಷನಾದ ಕೃಷ್ಣನು ಸಂತೋಷಗೊಂಡವನಾಗಿ, ಯಾದವಶ್ರೇಷ್ಠನಾದ ಅವನು ಪಾಂಡುಪುತ್ರರಲ್ಲಿ ಜ್ಯೇಷ್ಠನಾದ ಭರತವಂಶಪ್ರಸೂತನಾದ ಧರ್ಮರಾಜನನ್ನು ಪುಷ್ಕಳವಾದ ವಚನಗಳಿಂದ ಅಭಿನಂದಿಸಿದನು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೪೩ನೆಯ ಅಧ್ಯಾಯ ಮುಗಿಯಿತು.

—0—

೪೪. ನಲವತ್ತನಾಲ್ಕನೆಯ ಅಧ್ಯಾಯ

ಯುಧಿಷ್ಠಿರನ ಆಜ್ಞೆಯಂತೆ ಭೀಮಾದಿಗಳಿಂದ ದುರ್ಯೋಧನಾದಿ ಗೃಹಪ್ರವೇಶ.

ವೈಶಂಪಾಯನಃ

ತತೋ ವಿಸರ್ಜಯಾಮಾಸ ಸರ್ವಾಃ ಪ್ರಕೃತಯೋ ನೃಪಃ।
ವಿವಿಶುಶ್ಚಾಭ್ಯನುಜ್ಞಾತಾ ಯಥಾಸ್ವಾನಿ ಗೃಹಾಣಿ ಚ ॥೧॥

ವೈಶಂಪಾಯನರು – ಅನಂತರ ರಾಜನಾದ ಯುಧಿಷ್ಠಿರನು ಎಲ್ಲ ಪ್ರಜೆಗಳನ್ನೂ ಬೀಳ್ಕೊಟ್ಟನು. ರಾಜನ ಅನುಮತಿಯನ್ನು ಪಡೆದ ಅವರು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು.

ತತೋ ಯುಧಿಷ್ಠಿರೋ ರಾಜಾ ಭೀಮಂ ಭೀಮಪರಾಕ್ರಮಮ್।
ಸಾಂತ್ವಯನ್ನಬ್ರವೀದ್ ಧೀಮಾನರ್ಜುನಂ ಯಮಜೌ ತಥಾ ॥೨॥

ಅನಂತರ ರಾಜನಾದ ಯುಧಿಷ್ಠಿರನು ಭಯಂಕರಪರಾಕ್ರಮವುಳ್ಳ ಭೀಮಸೇನನನ್ನು ಮೇಧಾವಿಯಾದ ಅರ್ಜುನನನ್ನು ಮತ್ತು ನಕುಲ ಸಹದೇವರನ್ನು ಸಮಾಧಾನ ಪಡಿಸುತ್ತಾ ಮಾತನಾಡಿದನು.

ಶತ್ರುಭಿರ್ವಿವಿಧೈಃ ಶಸ್ತ್ರೈಃ ಕೃತ್ತದೇಹಾ ಮಹಾರಣೇ।
ಶ್ರಾಂತಾ ಭವಂತಃ ಸುಭೃಶಂ ತಾಪಿತಾಃ ಶೋಕಮನ್ಯುಭಿಃ ॥೩॥

ನೀವು ದೊಡ್ಡ ಯುದ್ಧದಲ್ಲಿ ಶತ್ರುಗಳ ಅನೇಕವಿಧವಾದ ಶಸ್ತ್ರಗಳಿಂದ ಗಾಯ-ಗಳನ್ನು ಹೊಂದಿ ದಣಿದಿದ್ದೀರಿ. ಶೋಕ ಕೋಪಗಳಿಂದ ಬಹಳವಾಗಿ ತಪ್ತರಾಗಿದ್ದೀರಿ.

ಅರಣ್ಯೇ ದುಃಖಿವಸತೀರ್ಮತ್ಕೃತೇ ಪುರುಷೋತ್ತಮಾಃ।
ಭವದ್ಭಿರನುಭೂತಾಶ್ಚ ಯಥಾ ಕುಪುರುಷೈಸ್ತಥಾ ॥೪॥

ಪುರುಷೋತ್ತಮರಾದ ನೀವು ನನ್ನ ಅಪರಾಧದಿಂದ ಕೆಟ್ಟಪುರುಷರಂತೆ ಅರಣ್ಯದಲ್ಲಿ ಕಷ್ಟವಾದ ವಾಸವನ್ನು ಮಾಡಿ ದುಃಖಿಗಳನ್ನು ಅನುಭವಿಸಿದ್ದೀರಿ.

ಯಥಾಸುಖಂ ಯಥಾಜೋಷಂ ಜಯೋಽಯಮನುಭೂಯತಾಮ್।
ವಿಶ್ರಾಂತಾನ್ ಲಬ್ಧವಿಜ್ಞಾನಾನ್ ಶ್ವಃ ಸಮೇತಾಸ್ಮಿ ವಃ ಪುನಃ ॥೫॥

ನಿಮ್ಮ ಅಭಿರುಚಿಗೆ ಅನುಗುಣವಾಗಿ ಮತ್ತು ನಿಮ್ಮ ಸುಖದ ಆಸೆಗೆ ಅನು-ಗುಣವಾಗಿ ಈ ವಿಜಯವನ್ನು ಅನುಭವಿಸಿ. ಈ ದಿನ ವಿಶ್ರಾಂತಿಯನ್ನು ಪಡೆದು ನಾಳೆ ಬೆಳಿಗ್ಗೆ ಪ್ರಸನ್ನವಾದ ಇಂದ್ರಿಯಗಳುಳ್ಳ ನಿಮ್ಮನ್ನು ನಾನು ಕಾಣುತ್ತೇನೆ. (ಎಂದು ಹೇಳಿದನು.)

ತತೋ ದುರ್ಯೋಧನಗೃಹಂ ಪ್ರಾಸಾದೈರುಪಶೋಭಿತಮ್।
ಬಹುರತ್ನಸಮಾಕೀರ್ಣಂ ದಾಸೀದಾಸಸಮಾಕುಲಮ್ ॥೬॥

ಧೃತರಾಷ್ಟ್ರಾಭ್ಯನುಜ್ಞಾತಂ ಭ್ರಾತ್ರಾ ದತ್ತಂ ವೃಕೋದರಃ।
ಪ್ರತಿಪೇದೇ ಮಹಾಬಾಹುರ್ಮಂದರಂ ಮಘವಾನಿವ ॥೭॥

ಅನಂತರ ಅನೇಕ ಉಪ್ಪರಿಗೆಗಳಿಂದ ಶೋಭಿತವಾದ ಅನೇಕ ರತ್ನಗಳಿಂದ ನಿಬಿಡವಾದ ದಾಸೀ-ದಾಸರಿಂದ ಕೂಡಿದ ಅಣ್ಣನಾದ ಯುಧಿಷ್ಠಿರನಿಂದ ಕೊಡಲ್ಪಟ್ಟ ದುರ್ಯೋಧನನ ಗೃಹವನ್ನು ಧೃತರಾಷ್ಟ್ರನ ಅನುಮತಿಯನ್ನು ಪಡೆದು ಮಹಾ-

ಬಾಹುವಾದ ಭೀಮಸೇನನು ಇಂದ್ರನು ಮಂದರಪರ್ವತವನ್ನು ಪ್ರವೇಶಿಸುವಂತೆ ಪ್ರವೇಶಿಸಿದನು.

ಯಥಾ ದುರ್ಯೋಧನಗೃಹಂ ತಥಾ ದುಃಶಾಸನಸ್ಯ ಚ।
ಪ್ರಾಸಾದಮಾಲಾಸಂಯುಕ್ತಂ ಹೇಮತೋರಣಭೂಷಿತಮ್ ॥೮॥

ದಾಸೀದಾಸಸುಸಂಪೂರ್ಣಂ ಪ್ರಭೂತಧನಧಾನ್ಯವತ್।
ಪ್ರತಿಪೇದೇ ಮಹಾಬಾಹುರರ್ಜುನೋ ರಾಜಶಾಸನಾತ್ ॥೯॥

ದುರ್ಯೋಧನನ ಗೃಹದಂತೆಯೇ ದುಃಶಾಸನನ ಗೃಹವೂ ಸಹ ಉಪ್ಪರಿಗೆಗಳ ಶ್ರೇಣಿಗಳಿಂದ ಅಲಂಕೃತವಾಗಿ ಸುವರ್ಣಮಯವಾದ ತೋರಣಗಳನ್ನು ಹೊಂದಿದ್ದಿತು. ದಾಸೀ-ದಾಸರ ಸಮೂಹದಿಂದ ನಿಬಿಡವಾದ ಧನಧಾನ್ಯಸಮೃದ್ಧವಾದ ಆ ಗೃಹವನ್ನು ರಾಜನ ಶಾಸನದಂತೆ ಮಹಾಬಾಹುವಾದ ಅರ್ಜುನನು ಪಡೆದನು.

ದುರ್ಮರ್ಷಣಸ್ಯ ಭವನಂ ದುಃಶಾಸನಗೃಹಾದ್ ವರಮ್।
ಕುಬೇರಭವನಪ್ರಖ್ಯಂ ಮಣಿಹೇಮವಿಭೂಷಿತಮ್ ॥೧೦॥

ನಕುಲಾಯ ವರಾರ್ಹಾಯ ಕರ್ಶಿತಾಯ ಮಹಾವನೇ।
ದದೌ ಪ್ರೀತೋ ಮಹಾರಾಜ ಧರ್ಮರಾಜೋ ಯುಧಿಷ್ಠಿರಃ ॥೧೧॥

ದುರ್ಮರ್ಷಣನ ಭವನವಾದರೋ ದುಃಶಾಸನನ ಗೃಹಕ್ಕಿಂತಲೂ ಶ್ರೇಷ್ಠವಾದುದು. ಕುಬೇರನ ಭವನಕ್ಕೆ ಸದೃಶವಾದ ಮಣಿಹೇಮವಿಭೂಷಿತವಾದ ಆ ಗೃಹವನ್ನು ಧರ್ಮರಾಜನಾದ ಯುಧಿಷ್ಠಿರನು ಮಹಾರಣದಲ್ಲಿ ಕರ್ಶಿತನಾದ ವರಪ್ರಾಪ್ತಿಗೆ ಯೋಗ್ಯನಾದ ನಕುಲನಿಗೆ ಸಂತೋಷದಿಂದ ಕೊಟ್ಟನು.

ದುರ್ಮುಖಸ್ಯ ಚ ವೇಶ್ಮಾಗ್ರ್ಯಂ ಶ್ರೀಮತ್ಕನಕಭೂಷಿತಮ್।
ಪೂರ್ಣಂ ಪದ್ಮದಲಾಕ್ಷೀಣಾಂ ಸ್ತ್ರೀಣಾಂ ಶಯನಸಂಕುಲಮ್ ॥೧೨॥

ಪ್ರದದೌ ಸಹದೇವಾಯ ಸತತಂ ಪ್ರಿಯಕಾರಿಣೇ।
ಮುಮುದೇ ತಚ್ಚ ಲಬ್ಧ್ವಾಸ ಕೈಲಾಸಂ ಧನದೋ ಯಥಾ ॥೧೩॥

ದುರ್ಮುಖನ ಶ್ರೇಷ್ಠವಾದ ಗೃಹವು ಕಾಂತಿಯುಕ್ತವಾಗಿ ಕನಕಭೂಷಿತವಾಗಿ ಪದ್ಮದಳನೇತ್ರೆಯರಾದ ಸ್ತ್ರೀಯರಿಂದ ಮತ್ತು ಶಯನಗಳಿಂದ ನಿಬಿಡವಾಗಿ ಪೂರ್ಣವಾಗಿದ್ದಿತು. ತನಗೆ ಸತತವಾಗಿ ಪ್ರಿಯವನ್ನು ಮಾಡುವ ಸಹದೇವನಿಗೆ ಯುಧಿಷ್ಠಿರನು ಅದನ್ನು ಕೊಟ್ಟನು. ಸಹದೇವನು ಆ ಗೃಹವನ್ನು ಪಡೆದು, ಕುಬೇರನು ಕೈಲಾಸಪರ್ವತವನ್ನು ಪಡೆದು ಸಂತೋಷವನ್ನು ಪಡುವಂತೆ ಸಂತೋಷಪಟ್ಟನು.

ಯುಯುತ್ಸುರ್ವಿದುರಶ್ಚೈವ ಸಂಜಯಶ್ಚ ಮಹಾಮತಿಃ।
ಸುಧರ್ಮಾ ಚೈವ ಧೌಮ್ಯಶ್ಚ ಯಥಾಸ್ವಂ ಜಗ್ಮುರಾಲಯಾನ್ ॥೧೪॥

ಯುಯುತ್ಸು, ವಿದುರ, ಮಹಾಮತಿಯಾದ ಸಂಜಯ, ಧರ್ಮಿಷ್ಠರಾದ ಧೌಮ್ಯರು ಇವರು ತಮ್ಮ ತಮ್ಮ ಮನೆಗಳಿಗೆ ಹೋದರು.

ಸಹ ಸಾತ್ಯಕಿನಾ ಶೌರಿರರ್ಜುನಸ್ಯ ನಿವೇಶನಮ್।
ವಿವೇಶ ಪುರುಷವ್ಯಾಘ್ರೋ ವ್ಯಾಘ್ರೋ ಗಿರಿಗುಹಾಮಿವ ॥೧೫॥

ಪುರುಷವ್ಯಾಘ್ರನಾದ ಶೌರಿಯು ಸಾತ್ಯಕಿಯ ಜೊತೆಯಲ್ಲಿ ವ್ಯಾಘ್ರವು ಪರ್ವತದ ಗುಹೆಯನ್ನು ಪ್ರವೇಶಿಸುವಂತೆ ಅರ್ಜುನನ ಗೃಹವನ್ನು ಪ್ರವೇಶಿಸಿದನು.

ತತ್ರ ಭಕ್ಷಾನ್ನಪಾನೈಸ್ತೇ ಸಮುಪೇತಾಃ ಸುಖೋಷಿತಾಃ।
ಸುಖಪ್ರಬುದ್ಧಾ ರಾಜಾನಮುಪತಸ್ಥುರ್ಯುಧಿಷ್ಠಿರಮ್ ॥೧೬॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುಶ್ಚತ್ವಾರಿಂಶೋऽಧ್ಯಾಯಃ ॥೪೪॥

ಅಲ್ಲಿ ಭಕ್ಷಾನ್ನಪಾನಗಳಿಂದ ಅವರು ಸಂತುಷ್ಟರಾಗಿ ರಾತ್ರಿಯನ್ನು ಸುಖವಾಗಿ ಕಳೆದು ಪ್ರಾತಃಕಾಲದಲ್ಲಿ ಸುಖವಾಗಿ ಎದ್ದು ರಾಜನಾದ ಯುಧಿಷ್ಠಿರನ ಬಳಿಗೆ ಬಂದರು.

ಇಲ್ಲಿಗೆ ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪೪ನೆಯ ಅಧ್ಯಾಯವು ಮುಗಿಯಿತು

—0—

೪೫. ನಲವತ್ತೈದನೆಯ ಅಧ್ಯಾಯ

ಕೃಷ್ಣನ ಬಳಿಗೆ ಬಂದು ಯುಧಿಷ್ಠಿರನಿಂದ ಕುಶಲಪ್ರಶ್ನೆ

ಜನಮೇಜಯಃ

ಪ್ರಾಪ್ಯ ರಾಜ್ಯಂ ಮಹಾತೇಜಾ ಧರ್ಮರಾಜೋ ಯುಧಿಷ್ಠಿರಃ।
ಯದನ್ಯದಕರೋದ್ ವಿಪ್ರ ತನ್ಮೇ ವಕ್ತುಮಿಹಾರ್ಹಸಿ ॥೧॥

ಜನಮೇಜಯ– ಎಲೈ ಬ್ರಾಹ್ಮಣರೇ! ಮಹಾತೇಜಸ್ವಿಯಾದ ಧರ್ಮರಾಜನಾದ ಯುಧಿಷ್ಠಿರನು ರಾಜ್ಯವನ್ನು ಪಡೆದು ಬೇರೆ ಏನನ್ನು ಮಾಡಿದನೆಂದು ನನಗೆ ಹೇಳಬೇಕು.

ಭಗವಾನ್ ವಾ ಹೃಷೀಕೇಶಸ್ತ್ರೈಲೋಕ್ಯಸ್ಯ ಪರೋ ಗುರುಃ।
ಋಷೇ ಯದಕರೋದ್ ವೀರಸ್ತಚ್ಚ ವ್ಯಾಖ್ಯಾತುಮರ್ಹಸಿ ॥೨॥

ಎಲೈ ಋಷಿಗಳೇ! ಮೂರು ಲೋಕಗಳಿಗೂ ಪರಮಗುರುವೂ ವೀರನೂ ಆದ ಹೃಷೀಕೇಶನು ಏನು ಮಾಡಿದನೆಂದು ಹೇಳಬೇಕು.

ವೈಶಂಪಾಯನಃ

ಶೃಣು ರಾಜೇಂದ್ರ ತತ್ತ್ವೇನ ಕೀರ್ತ್ಯಮಾನಂ ಮಯಾऽನಘ।
ವಾಸುದೇವಂ ಪುರಸ್ಕೃತ್ಯ ಯದಕುರ್ವತ ಪಾಂಡವಾಃ ॥೩॥

ವೈಶಂಪಾಯನರು– ಎಲೈ ರಾಜೇಂದ್ರನೇ! ವಾಸುದೇವನನ್ನು ಮುಂದೆ ಮಾಡಿಕೊಂಡು ಪಾಂಡವರು ಏನು ಮಾಡಿದರೆಂದು ನಾನು ಹೇಳುವುದನ್ನು ಎಲೈ ಅನಘನೇ! ನೀನು ಕೇಳು.

ಪ್ರಾಪ್ಯ ರಾಜ್ಯಂ ಮಹಾತೇಜಾ ಧರ್ಮರಾಜೋ ಯುಧಿಷ್ಠಿರಃ।
ಚಾತುರ್ವರ್ಣ್ಯಂ ಯಥಾಯೋಗಂ ಸ್ವೇ ಸ್ವೇ ಧರ್ಮೇ ನ್ಯವೇಶಯನ್ ॥೪॥

ಮಹಾತೇಜಸ್ವಿಯಾದ ಧರ್ಮರಾಜನಾದ ಯುಧಿಷ್ಠಿರನು ರಾಜ್ಯವನ್ನು ಪಡೆದು

ನಾಲ್ಕು ವರ್ಣಗಳಿಗೆ ಸಂಬಂಧಿಸಿದ ಪ್ರಜೆಗಳನ್ನು ಅವರಿಗೆ ಯೋಗ್ಯವಾದ ರೀತಿಯಲ್ಲಿ ತಮ್ಮ ತಮ್ಮ ಧರ್ಮಗಳಲ್ಲಿ ಇರಿಸಿದನು.

ಬ್ರಾಹ್ಮಣಾನಾಂ ಸಹಸ್ರಂ ಚ ಸ್ನಾತಕಾನಾಂ ಮಹಾತ್ಮನಾಮ್ ।
ಸಹಸ್ರನಿಷ್ಕಮೇಕೈಕಂ ವಾಚಯಾಮಾಸ ಪಾಂಡವಃ ॥೫॥

ಪಾಂಡವನಾದ ಯಧಿಷ್ಠಿರನು ಮಹಾತ್ಮರಾದ ವೇದವಿದ್ಯಾಪಾರಂಗತರಾದ ಸಹಸ್ರ ಬ್ರಾಹ್ಮಣರಿಗೆ ಒಬ್ಬೊಬ್ಬರಿಗೂ ಸಹಸ್ರನಿಷ್ಕಗಳನ್ನು ಕೊಟ್ಟು ಸ್ವಸ್ತಿವಾಚನವನ್ನು ಮಾಡಿಸಿದನು.

ತಥಾನುಜೀವಿನೋ ಭೃತ್ಯಾನ್ ಸಂಶ್ರಿತಾನತಿಥೀನಪಿ ।
ಕಾಮೈಃ ಸಂತರ್ಪಯಾಮಾಸ ಕೃಪಣಾನ್ ಯಾಚಕಾನಪಿ ॥೬॥

ಹಾಗೆಯೇ ತನ್ನನ್ನು ಅನುಸರಿಸಿ ಜೀವಿಸುವ ಸೇವಕರಿಗೂ, ಆಶ್ರಿತರಿಗೂ, ಅತಿಥಿಗಳಿಗೂ, ಕೃಪಣರಿಗೂ, ಯಾಚಕರಿಗೂ ಸಹ ಅವರವರಿಗೆ ಇಷ್ಟವಾದ ವಸ್ತುಗಳನ್ನು ನೀಡಿ ತೃಪ್ತಿ ಪಡಿಸಿದನು.

ಪುರೋಹಿತಾಯ ಧೌಮ್ಯಾಯ ಪ್ರಾದಾದಯುತಶಃ ಸ ಗಾಃ ।
ಧನಂ ಸುವರ್ಣಂ ರಜತಂ ವಾಸಾಂಸಿ ವಿವಿಧಾನಿ ಚ ॥೭॥

ಪುರೋಹಿತರಾದ ಧೌಮ್ಯರಿಗೆ ಹತ್ತುಸಾವಿರ ಸಂಖ್ಯೆಗಳಲ್ಲಿ ಗೋವುಗಳನ್ನೂ, ಧನವನ್ನೂ, ಸುವರ್ಣವನ್ನೂ, ರಜತವನ್ನೂ ಮತ್ತು ವಿವಿಧವಾದ ವಸ್ತುಗಳನ್ನೂ ಕೊಟ್ಟನು.

ಕೃಪಾಯ ಚ ಮಹಾರಾಜ ಗುರುವೃತ್ತಿಮವರ್ತತ ।
ವಿದುರಾಯ ಚ ಧರ್ಮಾತ್ಮಾ ಪೂಜಾಂ ಚಕ್ರೇ ಯತವ್ರತಃ ॥೮॥

ಎಲೈ ಮಹಾರಾಜನೇ! ಕೃಪಾಚಾರ್ಯರಲ್ಲಿ ಗುರುವೃತ್ತಿಯನ್ನು ಹೊಂದಿದನು. ಧರ್ಮಾತ್ಮನಾದ ಅವನು ನಿಯತವ್ರತವುಳ್ಳವನಾಗಿ ವಿದುರನನ್ನು ಪೂಜಿಸಿದನು.

ಭಕ್ಷಾನ್ನಪಾನೈರ್ವಿವಿಧೈರ್ವಾಸೋಭಿಃ ಶಯನಾಸನೈಃ।
ಸರ್ವಾನ್ ಸಂತೋಷಯಾಮಾಸ ಸಂಶ್ರಿತಾನ್ ದದತಾಂವರಃ ॥೯॥

ದಾನ ಮಾಡುವವರಲ್ಲಿ ಶ್ರೇಷ್ಠನಾದ ಅವನು ತನ್ನನ್ನು ಆಶ್ರಯಿಸಿದ ಎಲ್ಲರನ್ನೂ ವಿವಿಧವಾದ ಭಕ್ಷ್ಯಾನ್ನಪಾನಗಳಿಂದಲೂ, ವಸ್ತ್ರಗಳಿಂದಲೂ, ಶಯನಾಸನಗಳಿಂದಲೂ ತೃಪ್ತಿ ಪಡಿಸಿದನು.

ಲಬ್ಧಪ್ರಶಮನಂ ಕೃತ್ವಾ ಸ ರಾಜಾ ರಾಜಸತ್ತಮ।
ಯುಯುತ್ಸೋರ್ಧಾರ್ತರಾಷ್ಟ್ರಸ್ಯ ಪೂಜಾಂ ಚಕ್ರೇ ಮಹಾಯಶಾಃ ॥೧೦॥

ಎಲೈ ರಾಜಶ್ರೇಷ್ಠನೇ! ರಾಜನಾದ ಅವನು ಪಡೆದುದನ್ನು ಯಥಾಯೋಗ್ಯವಾಗಿ ವಿಭಾಗವನ್ನು ಮಾಡಿ ಹಂಚಿ ಮಹಾಕೀರ್ತಿವಂತನಾದ ಅವನು ಧೃತರಾಷ್ಟ್ರಪುತ್ರನಾದ ಯುಯುತ್ಸುವಿಗೆ ಪೂಜೆಯನ್ನು ಮಾಡಿದನು.

ಧೃತರಾಷ್ಟ್ರಾಯ ತದ್ ರಾಜ್ಯಂ ಗಾಂಧಾರ್ಯೈ ವಿದುರಾಯ ಚ।
ನಿವೇದ್ಯ ಸ್ವಸ್ಥವದ್ ರಾಜನ್ನಾಸ್ತೇ ರಾಜಾ ಯುಧಿಷ್ಠಿರಃ ॥೧೧॥

ಎಲೈ ರಾಜನೇ! ರಾಜನಾದ ಯುಧಿಷ್ಠಿರನು ಧೃತರಾಷ್ಟ್ರನಿಗೂ, ಗಾಂಧಾರಿಗೂ ಮತ್ತು ವಿದುರನಿಗೂ ಆ ರಾಜ್ಯವನ್ನು ನಿವೇದಿಸಿ ನಿಶ್ಚಿಂತನಾದನು.

ತಥಾ ಸರ್ವಂ ಸ ನಗರಂ ಪ್ರಸಾದ್ಯ ಜನಮೇಜಯ।
ವಾಸುದೇವಂ ಮಹಾತ್ಮಾನಮಭ್ಯಗಚ್ಛತ್ ಕೃತಾಂಜಲಿಃ ॥೧೨॥

ಎಲೈ ಜನಮೇಜಯನೇ! ಈ ರೀತಿಯಲ್ಲಿ ನಗರವಾಸಿಗಳೆಲ್ಲರನ್ನೂ ಸಂತೋಷ ಪಡಿಸಿ ಮಹಾತ್ಮನಾದ ವಾಸುದೇವನ ಬಳಿಗೆ ಬಂದು ಕೈಗಳನ್ನು ಮುಗಿದು ನಿಂತನು.

ತತೋ ಮಹತಿ ಪರ್ಯಂಕೇ ಮಣಿಕಾಂಚನಭೂಷಿತೇ।
ದದರ್ಶ ಕೃಷ್ಣಮಾಸೀನಂ ನೀಲಂ ಮೇರಾವಿವಾಂಬುದಮ್ ॥೧೩॥

ಜಾಜ್ವಲ್ಯಮಾನಂ ವಪುಷಾ ದಿವ್ಯಾಭರಣಭೂಷಿತಮ್।
ಪೀತಕೌಶೇಯಸಂವೀತಂ ಹೇಮ್ನೀವೋಪಹಿತಂ ಮಣಿಮ್ ॥೧೪॥

ಕೌಸ್ತುಭೇನ ಉರಃಸ್ಥೇನ ಮಣಿನಾऽಭಿವಿರಾಜಿತಮ್ ।
ಉದ್ಯತೇವೋದಯಂ ಶೈಲಂ ಸೂರ್ಯೇಣಾಪ್ತಕಿರೀಟಿನಮ್ ।
ನೌಪಮ್ಯಂ ವಿದ್ಯತೇ ಯಸ್ಯ ತ್ರಿಷು ಲೋಕೇಷು ಕಿಂಚನ ॥೧೫॥

ಅನಂತರ ಮಣಿಕಾಂಚನವಿಭೂಷಿತವಾದ ದೊಡ್ಡ ಮಂಚದಲ್ಲಿ, ಮೇರು ಪರ್ವತದ ಮೇಲೆ ಇರುವ ನೀಲವಾದ ಮೋಡದಂತೆ ದಿವ್ಯಾಭರಣಭೂಷಿತನಾಗಿ, ಚಿನ್ನದಲ್ಲಿಟ್ಟ ನೀಲಮಣಿಯಂತೆ ಪೀತಾಂಬರವನ್ನು ಧರಿಸಿ, ಜಾಜ್ವಲ್ಯಮಾನವಾದ ದೇಹದಿಂದಲೂ, ವಕ್ಷಸ್ಥಳದಲ್ಲಿದ್ದ ಕೌಸ್ತುಭಮಣಿಯಿಂದಲೂ ವಿರಾಜಿತನಾಗಿ ಉದಯಪರ್ವತದ ಮೇಲೆ ಉದಯಿಸುವ ಸೂರ್ಯನನ್ನು ಹೋಲುವ ಕಿರೀಟವನ್ನು ಧರಿಸಿ ಕುಳಿತಿದ್ದ ಮೂರು ಲೋಕಗಳಲ್ಲಿಯೂ ಉಪಮೆಯೇ ಇಲ್ಲದ ಕೃಷ್ಣನನ್ನು ನೋಡಿದನು.

ಸೋऽಭಿಗಮ್ಯ ಮಹಾತ್ಮಾನಂ ವಿಷ್ಣುಂ ಪುರುಷವಿಗ್ರಹಮ್ ।
ಉವಾಚ ಮಧುರಾಭಾಷಃ ಸ್ಮಿತಪೂರ್ವಮಿದಂ ತದಾ ॥೧೬॥

ಮಧುರವಾಗಿ ಮಾತನಾಡುವ ಅವನು ಮಹಾತ್ಮನಾದ ಪುರುಷವಿಗ್ರಹವನ್ನು ಧರಿಸಿದ ವಿಷ್ಣುವಾದ ಕೃಷ್ಣನ ಬಳಿಗೆ ಬಂದು ಆಗ ಮಂದಹಾಸಪೂರ್ವಕವಾಗಿ ಹೀಗೆ ಮಾತನಾಡಿದನು.

ಸುಖೇನ ತೇ ನಿಶಾ ಕಚ್ಚಿದ್ ವ್ಯುಷ್ಟಾ ಬುದ್ಧಿಮತಾಂವರ।
ಕಚ್ಚಿಚ್ಚ ಜ್ಞಾನಾನಿ ಸರ್ವಾಣಿ ಪ್ರಸನ್ನಾನಿ ತವಾಚ್ಯುತ ॥೧೭॥

ಎಲೈ ಮೇಧಾವಿಗಳಲ್ಲಿ ಶ್ರೇಷ್ಠನಾದವನೇ! ನಿನಗೆ ರಾತ್ರಿಯು ಸುಖವಾಗಿ ಕಳೆಯಿತೇ? ಎಲೈ ಅಚ್ಯುತನೇ ನಿನ್ನ ಎಲ್ಲ ಇಂದ್ರಿಯಗಳೂ ಪ್ರಸನ್ನವಾಗಿವೆಯೇ?

ತವ ಹ್ಯಾಶ್ರಿತ್ಯ ತಾಂ ದೈವೀಂ ಬುದ್ಧಿಂ ಬುದ್ಧಿಮತಾಂವರ।
ವಯಂ ರಾಜ್ಯಮನುಪ್ರಾಪ್ತಾಃ ಪೃಥಿವೀ ಚ ವಶೇ ಸ್ಥಿತಾ ॥೧೮॥

ಎಲೈ ಮೇಧಾವಿಗಳಲ್ಲಿ ಶ್ರೇಷ್ಠನೇ! ನಿನ್ನ ಆ ದೈವೀಬುದ್ಧಿಯನ್ನು ಅವಲಂಬಿಸಿ, ನಾವು ರಾಜ್ಯವನ್ನು ಸಂಪಾದಿಸಿದೆವು. ಮತ್ತು ಪೃಥಿವಿಯು ನಮ್ಮ ವಶವಾಯಿತು.

ಭವತ್ಪ್ರಸಾದಾದ್ ಭಗವಂಸ್ತ್ರಿಲೋಕಗತಿವಿಕ್ರಮ।
ಜಯಃ ಪ್ರಾಪ್ತೋ ಯಶಶ್ಚಾಗ್ರ್ಯಂ ನ ಚ ಧರ್ಮಾಚ್ಚ್ಯುತಾ ವಯಮ್ ॥೧೯॥

ಭಗವಂತನೇ! ತ್ರಿಲೋಕಕ್ಕೆ ಗತಿಯಾದವನೇ, ತ್ರಿವಿಕ್ರಮನೇ! ನಿನ್ನ ಅನುಗ್ರಹದಿಂದ ನಾವು ಜಯವನ್ನೂ ಶ್ರೇಷ್ಠವಾದ ಕೀರ್ತಿಯನ್ನೂ ಪಡೆದೆವು. ಮತ್ತು ಎಂದೂ ಧರ್ಮದಿಂದ ಚ್ಯುತರಾಗಲಿಲ್ಲ.

ತಂ ತಥಾ ಭಾಷಮಾಣಂ ತು ಧರ್ಮರಾಜಂ ಯುಧಿಷ್ಠಿರಮ್।
ನೋವಾಚ ಭಗವಾನ್ ಕಿಂಚಿದ್ ಧ್ಯಾನಮೇವಾನ್ವಪದ್ಯತ ॥೨೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚಚತ್ವಾರಿಂಶೋऽಧ್ಯಾಯಃ ॥೪೫॥

ಧರ್ಮರಾಜನಾದ ಯುಧಿಷ್ಠಿರನು ಹಾಗೆ ಮಾತನಾಡುತ್ತಿರಲು, ಭಗವಂತನು ಏನನ್ನೂ ಮಾತನಾಡಲಿಲ್ಲ. ಕೇವಲ ಧ್ಯಾನಪರವಶನಾದನು.

ಇಲ್ಲಿಗೆ ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪೫ನೆಯ ಅಧ್ಯಾಯವು ಮುಗಿಯಿತು

೪೬. ನಲವತ್ತಾರನೆಯ ಅಧ್ಯಾಯ

ಯುಧಿಷ್ಠಿರನನ್ನು ಧರ್ಮೋಪದೇಶಶ್ರವಣಕ್ಕಾಗಿ ಭೀಷ್ಮರ ಬಳಿಗೆ
ಹೋಗುವಂತೆ ಪ್ರೇರಿಸಿ ಕೃಷ್ಣನ ಸಿದ್ಧತೆ

ಯುಧಿಷ್ಠಿರಃ

ಕಿಮಿದಂ ಪರಮಾಶ್ಚರ್ಯಂ ಧ್ಯಾಯಸ್ಯಮಿತವಿಕ್ರಮ।
ಕಚ್ಚಿಲ್ಲೋಕತ್ರಯಸ್ಯಾಸ್ಯ ಸ್ವಸ್ತಿ ಲೋಕಪರಾಯಣ ॥೧॥

ಯುಧಿಷ್ಠಿರ – ಎಲೈ ಅಮಿತವಿಕ್ರಮನೇ! ಲೋಕಕ್ಕೆ ಶ್ರೇಷ್ಠನಾದ ಆಶ್ರಯನಾದವನೇ!. ಇದೇನು ಪರಮಾಶ್ಚರ್ಯ? ಮೂರು ಲೋಕಗಳಿಗೂ ಕ್ಷೇಮವಷ್ಟೆ?.

ಚತುರ್ಥಂ ಧ್ಯಾನಮಾರ್ಗಂ ತ್ವಮಾಲಂಬ್ಯ ಪುರುಷೋತ್ತಮ।
ಅಪಾಕ್ರಾಂತೋ ಯತೋ ದೇವ ತೇನ ಮೇ ವಿಸ್ಮಿತಂ ಮನಃ ॥೨॥

ಎಲೈ ಪುರುಷೋತ್ತಮನೇ! ನೀನು ವೈರಾಗ್ಯ, ಭಕ್ತಿ, ಶಾಸ್ತ್ರಾಭ್ಯಾಸಮಾರ್ಗ-ಗಳನ್ನು ಮೀರಿದ ನಾಲ್ಕನೆಯ ಮಾರ್ಗವಾದ ಧ್ಯಾನಮಾರ್ಗವನ್ನು ಅವಲಂಬಿಸಿ ಬಾಹ್ಯಜಗತ್ತಿನಿಂದ ಹಿಂದೆ ಸರಿದಿದ್ದೀಯೆ. ದೇವನೇ! ಅದರಿಂದ ನನ್ನ ಮನಸ್ಸಿಗೆ ವಿಸ್ಮಯವುಂಟಾಗಿದೆ.

ನಿಗೃಹೀತೋ ಹಿ ವಾಯುಸ್ತೇ ಪಂಚಕರ್ಮಾ ಶರೀರಗಃ।
ಇಂದ್ರಿಯಾಣಿ ಚ ಸರ್ವಾಣಿ ಮನಸಿ ಸ್ಥಾಪಿತಾನಿ ತೇ ॥೩॥

ಶರೀರದಲ್ಲಿ ಪಂಚವಿಧವಾದ ಕರ್ಮಗಳನ್ನು ಮಾಡುವ ವಾಯುವು ನಿನ್ನಿಂದ ನಿಗೃಹೀತವಾಗಿದೆ. ಎಲ್ಲ ಇಂದ್ರಿಯಗಳೂ ಮನಸ್ಸಿನಲ್ಲಿ ನೆಲೆಗೊಳಿಸಲ್ಪಟ್ಟಿವೆ.

ಇಂದ್ರಿಯಾಣಿ ಮನಶ್ಚೈವ ಬುದ್ಧೌ ಸಂವೇಶಿತಾನಿ ತೇ।
ಸರ್ವಶ್ಚೈವ ಗಣೋ ದೇವ ಕ್ಷೇತ್ರಜ್ಞೇ ತೇ ನಿವೇಶಿತಃ ॥೪॥

ಇಂದ್ರಿಯಸಹಿತವಾದ ಮನಸ್ಸು ಬುದ್ಧಿಯಲ್ಲಿ ಇಡಲ್ಪಟ್ಟಿದೆ. ಎಲೈ ದೇವನೇ! ಈ ಎಲ್ಲ ಸಮೂಹವೂ ಕ್ಷೇತ್ರಜ್ಞನಾದ ಪರಮಾತ್ಮನಲ್ಲಿಯೇ ನೆಲೆಗೊಳಿಸಲ್ಪಟ್ಟಿದೆ.

ನೇಂಗಂತಿ ತವ ರೋಮಾಣಿ ಸ್ಥಿರಾ ಬುದ್ಧಿಸ್ತಥಾ ಮನಃ।
ಸ್ಥಾಣುಕುಡ್ಯಶಿಲಾಭೂತೋ ನಿರೀಹಶ್ಚಾಸಿ ಮಾಧವ ॥೫॥

ನಿನ್ನ ರೋಮಗಳೂ ಅಲುಗಾಡುತ್ತಿಲ್ಲ. ನಿನ್ನ ಬುದ್ಧಿ ಮತ್ತು ಮನಸ್ಸು ಸ್ಥಿರ-ವಾಗಿವೆ. ಮಾಧವನೇ! ಮರದ ಬುಡದಂತೆ, ಗೋಡೆಯಂತೆ, ಅಥವಾ ಶಿಲೆಯಂತೆ ನಿಶ್ಚೇಷ್ಟನಾಗಿದ್ದೀಯೆ.

ಯಥಾ ದೀಪೋ ನಿವಾತಸ್ಥೋ ನಿರಿಂಗೋ ಜ್ವಲತೇऽಚ್ಯುತ।
ತಥಾऽಸಿ ಭಗವನ್ ದೇವ ನಿಶ್ಚಲೋ ದೃಢನಿಶ್ಚಯಃ ॥೬॥

ಎಲೈ ಅಚ್ಯುತನೇ! ದೇವನೇ! ವಾತವಿಲ್ಲದ ಸ್ಥಳದಲ್ಲಿ ದೀಪವು ಹೇಗೆ ಅಲು-ಗಾಡುವುದಿಲ್ಲವೋ ಹಾಗೆ ಭಗವಂತನೇ! ದೃಢನಿಶ್ಚಯವನ್ನು ಹೊಂದಿ ನಿಶ್ಚಲನಾಗಿ-ದ್ದೀಯೆ.

ಯದಿ ಶ್ರೋತುಮಿಹಾರ್ಹಾಮಿ ನ ರಹಸ್ಯಂ ಚ ನ ತೇ ಯದಿ।
ಛಿಂಧಿ ಮೇ ಸಂಶಯಂ ದೇವ ಪ್ರಪನ್ನಾಯಾಭಿಯಾಚತೇ ॥೭॥

ದೇವನೇ! ಈ ವಿಷಯವು ರಹಸ್ಯವಲ್ಲದಿದ್ದರೆ ಮತ್ತು ನಾನು ಅದನ್ನು ಕೇಳಲು ಅರ್ಹನಾಗುವುದಾದರೆ ನಿನಗೆ ಶರಣಾಗತನಾಗಿ ಯಾಚಿಸುತ್ತಿರುವ ನನ್ನ ಸಂಶಯವನ್ನು ಪರಿಹರಿಸು.

ತ್ವಂ ಹಿ ಕರ್ತಾ ವಿಕರ್ತಾ ಚ ತ್ವಂ ಕ್ಷರಂ ಚಾಕ್ಷರಂ ಚ ಹಿ।
ಅನಾದಿನಿಧನಶ್ಚಾದ್ಯಸ್ತ್ವಮೇವ ಪುರುಷೋತ್ತಮ ॥೮॥

ನೀನು ಎಲ್ಲವನ್ನೂ ಮಾಡುವವನು. ವಿವಿಧರೀತಿಯಲ್ಲಿ ಮಾಡುವವನು. ಕ್ಷರಾಕ್ಷರವಸ್ತುಗಳೆಲ್ಲವೂ ನಿನ್ನ ಅಧೀನವಾಗಿವೆ. ನೀನು ಆದ್ಯಂತಶೂನ್ಯನಾದವನು. ಎಲೈ ಪುರುಷೋತ್ತಮನೆ! ನೀನು ಜಗತ್ತಿನ ಸೃಷ್ಟಿಗಿಂತಲೂ ಮೊದಲು ಇರುವವನು.

ತ್ವತ್ಪ್ರಪನ್ನಾಯ ಭಕ್ತಾಯ ಶಿರಸಾ ಪ್ರಣತಾಯ ಚ।
ಧ್ಯಾನಸ್ಯಾಸ್ಯ ಯಥಾತತ್ತ್ವಂ ಬ್ರೂಹಿ ಧರ್ಮಭೃತಾಂವರ ॥೯॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ! ನಿನ್ನ ಭಕ್ತನಾಗಿ ನಿನಗೆ ಶರಣಾಗತನಾಗಿ ಶಿರಸಾ ನಮಸ್ಕಾರವನ್ನು ಮಾಡಿದ ನನಗೆ ಈ ಧ್ಯಾನದ ನಿಜವಾದ ತತ್ತ್ವವನ್ನು ಹೇಳು.

ವೈಶಂಪಾಯನಃ

ತತಃ ಸ್ವಗೋಚರೇ ನ್ಯಸ್ಯ ಮನೋ ಬುದ್ಧೀಂದ್ರಿಯಾಣಿ ಚ।
ಸ್ಮಿತಪೂರ್ವಮುವಾಚೇದಂ ಭಗವಾನ್ ವಾಸವಾನುಜಃ ॥೧೦॥

ವೈಶಂಪಾಯನರು – ಅನಂತರ ಭಗವಂತನಾದ, ಇಂದ್ರಾನುಜನಾದ ಕೃಷ್ಣನು ತನ್ನ ಬುದ್ಧೀಂದ್ರಿಯಮನಸ್ಸುಗಳನ್ನು ಅವುಗಳ ವಿಷಯದಲ್ಲಿ ನೆಲೆಗೊಳಿಸಿ, ಮಂದಹಾಸಪೂರ್ವಕವಾಗಿ ಈ ಮಾತನ್ನು ಆಡಿದನು.

ಶರತಲ್ಪಗತೋ ಭೀಷ್ಮಃ ಶಾಮ್ಯನ್ನಿವ ಹುತಾಶನಃ।
ಮಾಂ ಧ್ಯಾತಿ ಪುರುಷವ್ಯಾಘ್ರಸ್ತತೋ ಮೇ ತದ್ಗತಂ ಮನಃ ॥೧೧॥

ನಂದಿಹೋಗುವ ಅಗ್ನಿಯಂತೆ ಇರುವ ಶರತಲ್ಪಗತನಾದ ಪುರುಷವ್ಯಾಘ್ರನಾದ ಭೀಷ್ಮನು ನನ್ನನ್ನು ಧ್ಯಾನಿಸುತ್ತಿದ್ದಾನೆ. ಆದ್ದರಿಂದ ನನ್ನ ಮನಸ್ಸು ಅವನಲ್ಲಿಗೆ ಹೋಯಿತು.

ಯಸ್ಯ ಜ್ಯಾತಳನಿಘೋರ್ಷಂ ವಿಸೃಜ್ಯಿತಮಿವಾಶನೇಃ।
ನ ಸಹೇದ್ ದೇವರಾಜೋಽಪಿ ತಮಸ್ಮಿ ಮನಸಾ ಗತಃ ॥೧೨॥

ಯಾವನ ಧನುಸ್ಸಿನ ಹೆದೆಯ ನಿಘೋರ್ಷವು ಸಿಡಿಲಿನ ಆರ್ಭಟದಂತಿದ್ದು, ದೇವರಾಜನಾದ ಇಂದ್ರನೂ ಸಹ ಸಹಿಸಲಾರನೋ ಅವನಲ್ಲಿ ನನ್ನ ಮನಸ್ಸು ಹೋಯಿತು.

ಯೇನಾಭಿದ್ರುತ್ಯ ತರಸಾ ಸಮಸ್ತಂ ರಾಜಮಂಡಲಮ್।
ಊಢಾಸ್ತಿಸ್ರಃ ಪುರಾ ಕನ್ಯಾಸ್ತಮಸ್ಮಿ ಮನಸಾ ಗತಃ ॥೧೩॥

ಯಾವನು ಶೀಘ್ರವಾಗಿ ಕಾಶೀದೇಶಕ್ಕೆ ಧಾವಿಸಿ, ಸಮಗ್ರವಾದ ರಾಜ-ಸಮೂಹವನ್ನು ಪರಾಭವಗೊಳಿಸಿ, ಮೂರು ಕನ್ಯೆಯರನ್ನು ತಂದು ತಮ್ಮನಿಗೆ ವಿವಾಹ ಮಾಡಿಸಿದನೋ ನನ್ನ ಮನಸ್ಸು ಅವನಲ್ಲಿ ಹೋಯಿತು.

ತ್ರಯೋವಿಂಶತಿರಾತ್ರಂ ಯೋ ಯೋಧಯಾಮಾಸ ಭಾರ್ಗವಮ್।
ನ ಚ ರಾಮೇಣ ನಿಸ್ತೀರ್ಣಸ್ತಮಸ್ಮಿ ಮನಸಾ ಗತಃ ॥೧೪॥

ಯಾವನು ಇಪ್ಪತ್ತಮೂರು ದಿನಗಳ ಕಾಲ ಭಾರ್ಗವರಾಮನ ಜೊತೆಯಲ್ಲಿ ಯುದ್ಧಮಾಡಿದರೂ ಅವನಿಗೆ ಸೋಲಲಿಲ್ಲವೋ ಅವನಲ್ಲಿ ನನ್ನ ಮನಸ್ಸು ಹೋಯಿತು.

ಯಾಂ ಗಂಗಾ ಗರ್ಭವಿಧಿನಾ ಧಾರಯಾಮಾಸ ಪಾರ್ಥಿವಮ್।
ವಸಿಷ್ಠಶಿಷ್ಯಂ ತಂ ತಾತ ಮನಸಾಽಸ್ಮಿ ಗತೋ ನೃಪ ॥೧೫॥

ಎಲೈ ರಾಜನೇ! ಪ್ರೀತಿಪಾತ್ರನೇ! ರಾಜನಾದ ಯಾವನನ್ನು ಗಂಗೆಯು ಗರ್ಭರೂಪದಲ್ಲಿ ಧರಿಸಿದಳೋ, ವಸಿಷ್ಠರ ಶಿಷ್ಯರಾದ ಆ ಭೀಷ್ಮನಲ್ಲಿಗೆ ನನ್ನ ಮನಸ್ಸು ಹೋಯಿತು.

ದಿವ್ಯಾಸ್ತ್ರಾಣಿ ಮಹಾತೇಜಾ ಯೋ ಧಾರಯತಿ ಬುದ್ಧಿಮಾನ್ ।
ಸಾಂಗಾಂಶ್ಚ ಚತುರೋ ವೇದಾಂಸ್ತಮಸ್ಮಿ ಮನಸಾ ಗತಃ ॥೧೬॥

ಮೇಧಾವಿಯೂ, ಮಹಾತೇಜಸ್ವಿಯೂ ಆದ ಯಾವನು ದಿವ್ಯಾಸ್ತ್ರಗಳನ್ನು ಹೊಂದಿದ್ದಾನೆಯೋ ಅಂಗಸಹಿತವಾದ ನಾಲ್ಕುವೇದಗಳನ್ನು ಹೊಂದಿದ್ದಾನೆಯೋ ಅವನೆಡೆಗೆ ನನ್ನ ಮನಸ್ಸು ಹೋಯಿತು.

ರಾಮಸ್ಯ ದಯಿತಂ ಶಿಷ್ಯಂ ಜಾಮದಗ್ನ್ಯಸ್ಯ ಪಾಂಡವ ।
ಆಧಾರಂ ಸರ್ವವಿದ್ಯಾನಾಂ ತಮಸ್ಮಿ ಮನಸಾ ಗತಃ ॥೧೭॥

ಎಲೈ ಪಾಂಡವನೇ! ಜಮದಗ್ನಿಯ ಪುತ್ರರಾದ ಪರಶುರಾಮರ ಪ್ರಿಯಶಿಷ್ಯನೂ, ಎಲ್ಲ ವಿದ್ಯೆಗಳಿಗೆ ಆಶ್ರಯನಾದವನೂ ಆದವನಲ್ಲಿ ನನ್ನ ಮನಸ್ಸು ಹೋಯಿತು.

ಏಕೀಕೃತ್ಯೇಂದ್ರಿಯಗ್ರಾಮಂ ಮನಃ ಸಂಯಮ್ಯ ಮೇಧಯಾ ।
ಶರಣಂ ಮಾಮುಪಾಗಚ್ಛತ್ ತತೋ ಮೇ ತದ್ಗತಂ ಮನಃ ॥೧೮॥

ಅವನು ತನ್ನ ಇಂದ್ರಿಯಸಮೂಹವನ್ನು ಏಕಾಗ್ರಗೊಳಿಸಿ, ಬುದ್ಧಿಯಿಂದ ಮನಸ್ಸನ್ನು ನಿಯಂತ್ರಿಸಿ, ನನಗೆ ಶರಣಾಗತನಾದನು. ಆದ್ದರಿಂದ ನನ್ನ ಮನಸ್ಸು ಅವನೆಡೆಗೆ ಹೋಯಿತು.

ಸ ಹಿ ಭೂತಂ ಚ ಭವ್ಯಂ ಚ ಭವಚ್ಚ ಪುರುಷರ್ಷಭ ।
ವೇತ್ತಿ ಧರ್ಮಭೃತಾಂ ಶ್ರೇಷ್ಠಸ್ತತೋ ಮೇ ತದ್ಗತಂ ಮನಃ ॥೧೯॥

ಎಲೈ ಪುರುಷಶ್ರೇಷ್ಠನೇ! ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಭೂತ, ಭವಿಷ್ಯತ್, ವರ್ತಮಾನವಿಷಯವೆಲ್ಲವನ್ನೂ ತಿಳಿದಿದ್ದಾನೆ. ಆದ್ದರಿಂದ ನನ್ನ ಮನಸ್ಸು ಅವನಲ್ಲಿಗೆ ಹೋಯಿತು.

ತಸ್ಮಿನ್ ಹಿ ಪುರುಷವ್ಯಾಘ್ರೇ ಕರ್ಮಭಿಃ ಸ್ವೈರ್ದಿವಂ ಗತೇ ।
ಭವಿಷ್ಯತಿ ಮಹೀ ಪಾರ್ಥ ನಷ್ಟಚಂದ್ರೇವ ಶರ್ವರೀ ॥೨೦॥

ಎಲೈ ಪಾರ್ಥನೇ! ಪುರುಷವ್ಯಾಘ್ರನಾದ ಅವನು ತನ್ನ ಕರ್ಮಗಳಿಗೆ ಅನುಗುಣವಾಗಿ ಸ್ವರ್ಗತನಾದರೆ ಭೂಮಿಯು ಚಂದ್ರನಿಲ್ಲದ ರಾತ್ರಿಯಂತಾಗುತ್ತದೆ.

ತದ್ ಯುಧಿಷ್ಠಿರ ಗಾಂಗೇಯಂ ಭೀಷ್ಮಂ ಭೀಷ್ಮಪರಾಕ್ರಮಮ್ ।
ಅಭಿಗಮ್ಯೋಪಸಂಗೃಹ್ಯ ಪೃಚ್ಛ ಯತ್ ತೇ ಮನೋಗತಮ್ ॥೨೧॥

ಆದ್ದರಿಂದ ಎಲೈ ಯುಧಿಷ್ಠಿರನೇ! ಗಂಗಾಪುತ್ರನೂ, ಭಯಂಕರ ಪರಾಕ್ರಮವುಳ್ಳವನೂ ಆದ ಭೀಷ್ಮನನ್ನು ಸಮೀಪಿಸಿ, ಉಪಸತ್ತಿಯನ್ನು ಮಾಡಿ, ನಿನ್ನ ಮನಸ್ಸಿನಲ್ಲಿರುವ ವಿಷಯಗಳನ್ನು ಕೇಳುವವನಾಗು.

ಚಾತುರ್ವೇದ್ಯಂ ಚಾತುಹೋರ್ತ್ರಂ ಚಾತುರಾಶ್ರಮ್ಯಮೇವ ಚ ।
ಚಾತುರ್ವರ್ಣ್ಯಸ್ಯ ಧರ್ಮಂ ಚ ಪೃಚ್ಛೈನಂ ಪೃಥಿವೀಪತೇ ॥೨೨॥

ಎಲೈ ಪೃಥಿವೀಪತಿಯೇ! ಅವನನ್ನು ಕುರಿತು ನಾಲ್ಕು ವೇದಗಳಿಗೆ ಸಂಬಂಧಿಸಿದ, ನಾಲ್ಕು ಹೋತೃಗಳಿಗೆ ಸಂಬಂಧಿಸಿದ, ನಾಲ್ಕು ಆಶ್ರಮಗಳಿಗೆ ಸಂಬಂಧಿಸಿದ, ನಾಲ್ಕು ವರ್ಣಗಳಿಗೆ ಸಂಬಂಧಿಸಿದ ಧರ್ಮಗಳನ್ನು ಕೇಳುವವನಾಗು.

ತಸ್ಮಿನ್ನಸ್ತಮಿತೇ ಭೀಷ್ಮೇ ಕೌರವಾಣಾಂ ಧುರಂಧರೇ ।
ಜ್ಞಾನಾನ್ಯಲ್ಪೀಭವಿಷ್ಯಂತಿ ತಸ್ಮಾತ್ ತ್ವಾಂ ಚೋದಯಾಮ್ಯಹಮ್ ।

ಕೌರವರ ಧುರಂಧರನಾದ ಭೀಷ್ಮನು ಅಸ್ತವನ್ನು ಹೊಂದಿದರೆ ಈ ಲೋಕದಲ್ಲಿ ಜ್ಞಾನವು ಕೃಶವಾಗುವುದು. ಆದ್ದರಿಂದ ನಿನ್ನನ್ನು ಪ್ರೇರಿಸುತ್ತಿದ್ದೇನೆ.

ತಚ್ಛ್ರುತ್ವಾ ಚ ಸ ಧರ್ಮಜ್ಞೋ ಜನಾರ್ದನಮುವಾಚ ಹ ॥೨೩॥
ಯದ್ ಭವಾನಾಹ ಭೀಷ್ಮಸ್ಯ ಪ್ರಭಾವಂ ಪ್ರತಿ ಮಾಧವ ।
ತಥಾ ತನ್ನಾತ್ರ ಸಂದೇಹೋ ವಿದ್ಯತೇ ಮಮ ಮಾನದ ॥೨೪॥

ಆ ಮಾತುಗಳನ್ನು ಕೇಳಿದ ಧರ್ಮಜ್ಞನಾದ ಯುಧಿಷ್ಠಿರನು ಜನಾರ್ದನನನ್ನು ಕುರಿತು ಮಾತನಾಡಿದನು – ಮಾಧವನೇ! ಭೀಷ್ಮರ ಪ್ರಭಾವದ ವಿಷಯದಲ್ಲಿ ನೀನು

ಏನು ಹೇಳಿದೆಯೋ ಅದು ಹಾಗೆಯೇ ಸರಿ. ಎಲೈ ಮಾನದನೇ! ಈ ವಿಷಯದಲ್ಲಿ ನನಗೆ ಸಂದೇಹವಿಲ್ಲ.

ಮಹಾಭಾಗ್ಯಂ ಹಿ ಭೀಷ್ಮಸ್ಯ ಪ್ರಭಾವಶ್ಚ ಮಹಾತ್ಮನಃ।
ಶ್ರುತಂ ಮಯಾ ಕಥಯತಾಂ ಬ್ರಾಹ್ಮಣಾನಾಂ ಮಹಾತ್ಮನಾಮ್ ॥೨೫॥

ನಾನು ಮಹಾತ್ಮರಾದ ಬ್ರಾಹ್ಮಣರು ಮಾತನಾಡುವಾಗ ಮಹಾತ್ಮರಾದ ಭೀಷ್ಮರ ಮಹಾಭಾಗ್ಯವನ್ನೂ ಮತ್ತು ಪ್ರಭಾವವನ್ನೂ ಕೇಳಿದ್ದೇನೆ.

ಭವಾಂಶ್ಚ ಕರ್ತಾ ಲೋಕಾನಾಂ ಯದ್ ಬ್ರವೀತ್ಯರಿಸೂದನ।
ತಥಾ ತದನಭಿಧ್ಯೇಯಂ ವಾಕ್ಯಂ ಯಾದವನಂದನ ॥೨೬॥

ಎಲೈ ಅರಿಸೂದನನೇ! ಯಾದವನಂದನನೇ! ಲೋಕಗಳನ್ನು ಸೃಷ್ಟಿಸುವ ನೀನು ಏನನ್ನು ಮಾತನಾಡುತ್ತೀಯೋ ಅದನ್ನು ಪುನಃ ವಿಚಾರಮಾಡುವ ಅಗತ್ಯವಿಲ್ಲ.

ಯತಸ್ತ್ವನುಗ್ರಹಕೃತಾ ಬುದ್ಧಿಸ್ತೇ ಮಯಿ ಮಾಧವ।
ತ್ವಾಮಗ್ರತಃ ಪುರಸ್ಕೃತ್ಯ ಭೀಷ್ಮಂ ಪಶ್ಯಾಮಹೇ ವಯಮ್ ॥೨೭॥

ಎಲೈ ಮಾಧವನೇ! ನನ್ನ ಮೇಲೆ ನಿನಗೆ ಅನುಗ್ರಹಬುದ್ಧಿ ಇರುವುದರಿಂದ ನಿನ್ನನ್ನು ಮುಂದೆ ಮಾಡಿಕೊಂಡು ನಾವು ಭೀಷ್ಮರನ್ನು ನೋಡೋಣ.

ಆವೃತ್ತೇ ಭಗವತ್ಯರ್ಕೇ ಸ ಹಿ ಲೋಕಾನ್ ಗಮಿಷ್ಯತಿ।
ತ್ವದ್ದರ್ಶನಂ ಮಹಾಬಾಹೋ ತಸ್ಮಾದರ್ಹತಿ ಕೌರವಃ ॥೨೮॥

ಸೂರ್ಯನು ದಿಕ್ಕನ್ನು ಬದಲಿಸಿದ ಮೇಲೆ ಭೀಷ್ಮರು ಲೋಕಾಂತರಗಳಿಗೆ ಹೋಗುವರು. ಎಲೈ ಮಹಾಬಾಹುವೇ! ಆದರಿಂದ ಕೌರವರಾದ ಅವರು ನಿನ್ನ ದರ್ಶನಕ್ಕೆ ಅರ್ಹರಾದವರು - ಎಂದು ಭಾವಿಸುತ್ತೇನೆ.

ತವ ಹ್ಯಾದ್ಯಸ್ಯ ದೇವಸ್ಯ ಕ್ಷರಸ್ಯೈವಾಕ್ಷರಸ್ಯ ಚ।
ದರ್ಶನಂ ತಸ್ಯ ಲಾಭಃ ಸ್ಯಾತ್ ತ್ವಂ ಹಿ ಬ್ರಹ್ಮಮಯೋ ನಿಧಿಃ ॥೨೯॥

ಕ್ಷರಾಕ್ಷರಗಳಿಗೆ ಒಡೆಯನಾದ ಆದಿದೇವನಾದ ನಿನ್ನ ದರ್ಶನವು ಅವರಿಗೆ ಲಾಭವಾದೀತು! ಏಕೆಂದರೆ ನೀನು ಬ್ರಹ್ಮಮಯನಾದ ನಿಧಿಯಾಗಿದ್ದೀಯೆ. (ಎಂದು ಯುಧಿಷ್ಠಿರನು ಹೇಳಿದನು).

ಶ್ರುತ್ವೈತದ್ ಧರ್ಮರಾಜಸ್ಯ ವಚನಂ ಮಧುಸೂದನಃ।
ಪಾರ್ಶ್ವಸ್ಥಂ ಸಾತ್ಯಕಿಂ ಪ್ರಾಹ ರಥೋ ಮೇ ಯುಜ್ಯತಾಮಿತಿ ॥೩೦॥

ಮಧುಸೂದನನು ಧರ್ಮರಾಜನ ಈ ಮಾತುಗಳನ್ನು ಕೇಳಿ, ಪಾರ್ಶ್ವದಲ್ಲಿದ್ದ ಸಾತ್ಯಕಿಯನ್ನು ಕುರಿತು ನನ್ನ ರಥವನ್ನು ಅಣಿಗೊಳಿಸು ಎಂದು ಹೇಳಿದನು.

ಸಾತ್ಯಕಿಸ್ತೂಪನಿಷ್ಕ್ರಮ್ಯ ಕೇಶವಸ್ಯ ಸಮೀಪತಃ।
ದಾರುಕಂ ಪ್ರಾಹ ಕೃಷ್ಣಸ್ಯ ಯುಜ್ಯತಾಂ ರಥ ಇತ್ಯುತ ॥೩೧॥

ಸಾತ್ಯಕಿಯಾದರೋ ಕೇಶವನ ಸಮೀಪದಿಂದ ಹೊರಬಂದು ದಾರುಕನನ್ನು ಕುರಿತು ಕೃಷ್ಣನ ರಥವನ್ನು ಹೂಡು ಎಂದು ಹೇಳಿದನು.

ಸ ಸಾತ್ಯಕೇರಾಶು ವಚೋ ನಿಶಮ್ಯ
ರಥೋತ್ತಮಂ ಕಾಂಚನಭೂಷಿತಾಂಗಮ್।
ಮಸಾರಗಲ್ವರ್ಕಮಯೈರ್ವಿಭಂಗೈಃ
ವಿಭೂಷಿತಂ ಹೇಮಪಿನದ್ಧಚಕ್ರಮ್ ॥೩೨॥

ದಿವಾಕರಾಂಶುಪ್ರಭಮಾಶುಗಾಮಿನಂ
ವಿಚಿತ್ರನಾನಾಮಣಿರತ್ನಭೂಷಿತಮ್।
ನವೋದಿತಂ ಸೂರ್ಯಮಿವ ಪ್ರತಾಪಿನಂ
ವಿಚಿತ್ರತಾಕ್ಷ್ಯಧ್ವಜಿನಂ ಪತಾಕಿನಮ್ ॥೩೩॥

ಸುಗ್ರೀವಸೈನ್ಯಪ್ರಮುಖೈರ್ವರಾಶ್ವೈಃ
ಮನೋಜವೈಃ ಕಾಂಚನಭೂಷಿತಾಂಗೈಃ।

ಸುಯುಕ್ತಮಾವೇದಯದಚ್ಯುತಾಯ
ಕೃತಾಂಜಲಿರ್ದಾರುಕೋ ರಾಜಸಿಂಹ ॥೩೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಟ್‌ಚತ್ವಾರಿಂಶೋಽಧ್ಯಾಯಃ ॥೪೬॥

ಎಲೈ ರಾಜಸಿಂಹನೇ! ಆ ದಾರುಕನಾದರೋ ಸಾತ್ಯಕಿಯ ಮಾತುಗಳನ್ನು ಕೇಳಿ ಶೀಘ್ರವಾಗಿ ಸುವರ್ಣ ಭೂಷಿತವಾದ ಅಂಗಗಳನ್ನು ಹೊಂದಿದ, ಮರಕತ ಸೂರ್ಯ-ಕಾಂತ ಮತ್ತು ಚಂದ್ರಕಾಂತಮಣಿಗಳಿಂದ ಕೂಡಿದ ಆಯಾಮವುಳ್ಳ , ಸುವರ್ಣ-ವನ್ನು ಮೆಟ್ಟಿದ ಚಕ್ರಗಳನ್ನು ಹೊಂದಿದ, ಸೂರ್ಯನ ಕಿರಣಗಳ ಪ್ರಭೆಯನ್ನು ಹೊಂದಿದ, ಶೀಘ್ರಗಾಮಿಯಾದ, ವಿಚಿತ್ರವಾದ ನಾನಾ ಮಣಿಗಳಿಂದಲೂ ಮತ್ತು ರತ್ನಗಳಿಂದಲೂ ಭೂಷಿತವಾದ, ಆಗ ತಾನೇ ಉದಯಿಸುವ ಸೂರ್ಯನಂತೆ ಪ್ರತಾಪವನ್ನು ಹೊಂದಿದ, ವಿಚಿತ್ರವಾದ ಗರುಡಧ್ವಜವನ್ನು ಹೊಂದಿದ, ಪ್ರತಾಪದಿಂದ ಕೂಡಿದ, ಮನೋವೇಗವುಳ್ಳವೂ ಸುವರ್ಣಭೂಷಿತಾಂಗವುಳ್ಳವೂ ಆದ ಸುಗ್ರೀವಸೈನ್ಯ ಮೊದಲಾದ ಶ್ರೇಷ್ಠ ಅಶ್ವಗಳನ್ನು ಚೆನ್ನಾಗಿ ಹೂಡಿದ ರಥವು ಸಿದ್ಧವಾಗಿದೆ ಎಂದು ಕೈಗಳನ್ನು ಮುಗಿದು ಅಚ್ಯುತನಿಗೆ ಹೇಳಿದನು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೪೬ನೆಯ ಅಧ್ಯಾಯವು ಮುಗಿಯಿತು.

—೦—

೪೭. ನಲವತ್ತೇಳನೆಯ ಅಧ್ಯಾಯ

ಭೀಷ್ಮಸ್ತವರಾಜ

ಜನಮೇಜಯಃ

ಶರತಲ್ಪೇ ಶಯಾನಸ್ತು ಭರತಾನಾಂ ಪಿತಾಮಹಃ।
ಕಥಮುತ್ಸೃಷ್ಟವಾನ್ ದೇಹಂ ಕಂ ಚ ಯೋಗಮಧಾರಯತ್ ॥೧॥

ಜನಮೇಜಯ– ಶರತಲ್ಪದಲ್ಲಿ ಮಲಗಿದ್ದ ಭರತಪಿತಾಮಹರಾದ ಭೀಷ್ಮರು

ದೇಹವನ್ನು ಹೇಗೆ ತ್ಯಜಿಸಿದರು? ಮತ್ತು ಯಾವ ಯೋಗಧಾರಣೆಯನ್ನು ಮಾಡಿದರು?

ವೈಶಂಪಾಯನಃ

ಶೃಣುಷ್ವಾವಹಿತೋ ರಾಜನ್ ಶುಚಿರ್ಭೂತ್ವಾ ಸಮಾಹಿತಃ।
ಭೀಷ್ಮಸ್ಯ ಕುರುಶಾರ್ದೂಲ ದೇಹೋತ್ಸರ್ಗಂ ಮಹಾತ್ಮನಃ ॥೨॥

ವೈಶಂಪಾಯನರು – ರಾಜನೇ! ಕುರುಶಾರ್ದೂಲನೇ! ಮಹಾತ್ಮರಾದ ಭೀಷ್ಮರ ದೇಹತ್ಯಾಗವನ್ನು ಶುಚಿಯಾಗಿ, ಸಮಾಧಾನದಿಂದ, ಅವಧಾನದಿಂದ ಕೇಳು.

ನಿವೃತ್ತಮಾತ್ರೇ ತ್ವಯನೇ ಉತ್ತರೇ ವೈ ದಿವಾಕರೇ।
ಸಮಾವೇಶಯದಾತ್ಮಾನಮಾತ್ಮನ್ಯೇವ ಸಮಾಹಿತಃ ॥೩॥

ಸೂರ್ಯನು ಉತ್ತರಾಯಣಗತಿಗೆ ತಿರುಗುತ್ತಿರಲು ಭೀಷ್ಮರು ಸಮಾಧಾನದಿಂದ ತಮ್ಮ ಮನಸ್ಸನ್ನು ಪರಮಾತ್ಮನಲ್ಲಿ ಇರಿಸಿದರು.

ವಿಕೀರ್ಣಾಂಶುರಿವಾದಿತ್ಯೋ ಭೀಷ್ಮಃ ಶರಶತೈಶ್ಚಿತಃ।
ಶಿಶ್ಯೇ ಪರಮಯಾ ಲಕ್ಷ್ಮ್ಯಾ ವೃತೋ ಬ್ರಾಹ್ಮಣಸತ್ತಮೈಃ ॥೪॥

ಸುತ್ತಲೂ ಹೊರಹೊಮ್ಮುವ ಕಿರಣಗಳಿಂದ ಕೂಡಿದ ಸೂರ್ಯನಂತೆ ನೂರಾರು ಬಾಣಗಳಿಂದ ಚುಚ್ಚಲ್ಪಟ್ಟ ಭೀಷ್ಮರು ಬಹಳ ಕಾಂತಿಯಿಂದ ಕೂಡಿದವರಾಗಿ ಬ್ರಾಹ್ಮಣಶ್ರೇಷ್ಠರಿಂದ ಸುತ್ತುವರಿಯಲ್ಪಟ್ಟು ಮಲಗಿದ್ದರು.

ಶುಕ್ಲಪಕ್ಷಸ್ಯ ಚಾಷ್ಟಮ್ಯಾಂ ಮಾಘಮಾಸಸ್ಯ ಪಾರ್ಥಿವ।
ಪ್ರಾಜಾಪತ್ಯೇ ಚ ನಕ್ಷತ್ರೇ ಮಧ್ಯಂ ಪ್ರಾಪ್ತೇ ದಿವಾಕರೇ ॥೫॥

ವ್ಯಾಸೇನ ವೇದಶ್ರವಸಾ ನಾರದೇನ ಸುರರ್ಷಿಣಾ।
ದೇವಸ್ಥಾನೇನ ವಾತ್ಸ್ಯೇನ ತಥಾಽಶ್ಮಕಸುಮಂತುನಾ ॥೬॥

ತಥಾ ಜೈಮಿನಿನಾ ಚೈವ ಪೈಲೇನ ಚ ಮಹಾತ್ಮನಾ।
ಶಾಂಡಿಲ್ಯದೇವಲಾಭ್ಯಾಂ ಚ ಮೈತ್ರೇಯೇಣ ಚ ಧೀಮತಾ ॥೭॥

ಅಸಿತೇನ ವಸಿಷ್ಠೇನ ಕೌಶಿಕೇನ ಮಹಾತ್ಮನಾ ।
ಹಾರೀತಲೋಮಶಾಭ್ಯಾಂ ಚ ತಥಾऽऽತ್ರೇಯೇಣ ಧೀಮತಾ ॥೮॥

ಬೃಹಸ್ಪತಿಶ್ಚ ಶುಕ್ರಶ್ಚ ಚ್ಯವನಶ್ಚ ಮಹಾಮುನಿಃ ।
ಸನತ್ಕುಮಾರಃ ಕಪಿಲೋ ವಾಲ್ಮೀಕಿಸ್ತುಂಬುರುಃ ಕುರುಃ ॥೯॥

ಮೌದ್ಗಲ್ಯೋ ಭಾರ್ಗವೋ ರಾಮಸ್ತೃಣಬಿಂದುರ್ಮಹಾಮುನಿಃ ।
ಪಿಪ್ಪಲಾದಶ್ಚ ವಾಯುಶ್ಚ ಸಂವರ್ತಃ ಪುಲಹಃ ಕಚಃ ॥೧೦॥

ಕಾಶ್ಯಪಶ್ಚ ಪುಲಸ್ತ್ಯಶ್ಚ ಕ್ರತುರ್ದಕ್ಷಃ ಪರಾಶರಃ ।
ಮರೀಚಿರಂಗಿರಾ ಕಾಶ್ಯೋ ಗೌತಮೋ ಗಾಲವೋ ಮುನಿಃ ॥೧೧॥

ಧೌಮ್ಯೋ ವಿಭಾಂಡೋ ಮಾಂಡವ್ಯೋ ಧೌತ್ರಃ ಕೃಷ್ಣಾನುಭೌತಿಕಃ ।
ಉಲೂಕಃ ಪರಮೋ ವಿಪ್ರೋ ಮಾರ್ಕಂಡೇಯೋ ಮಹಾಮುನಿಃ ।
ಭಾಸ್ಕರಿಃ ಪೂರಣಃ ಕೃಷ್ಣಃ ಸೂತಃ ಪರಮಧಾರ್ಮಿಕಃ ॥೧೨॥

ಏತೈಶ್ಚಾನ್ಯೈರ್ಮುನಿಗಣೈರ್ಮಹಾಭಾಗೈರ್ಮಹಾತ್ಮಭಿಃ ।
ಶ್ರದ್ಧಾದಮಪುರಸ್ಕಾರೈರ್ವೃತಶ್ಚಂದ್ರ ಇವ ಗ್ರಹೈಃ ॥೧೩॥

ಎಲೈ ರಾಜನೇ! ಮಾಘಮಾಸದ ಶುಕ್ಲಪಕ್ಷದ ಅಷ್ಟಮಿಯಂದು ಚಂದ್ರನು ರೋಹಿಣೀನಕ್ಷತ್ರದಲ್ಲಿರುವಾಗ ಸೂರ್ಯನು ಮಧ್ಯಂದಿನದಲ್ಲಿರಲು – ವ್ಯಾಸರು, ವೇದಶ್ರವಸ, ದೇವರ್ಷಿಗಳಾದ ನಾರದರು, ದೇವಸ್ಥಾನ, ವಾತ್ಸ್ಯ, ಅಶ್ಮಕ, ಸುಮಂತು, ಜೈಮಿನಿ, ಮಹಾತ್ಮನಾದ ಪೈಲ, ಶಾಂಡಿಲ್ಯ, ದೇವಲ, ಮೇಧಾವಿಯಾದ ಮೈತ್ರೇಯ, ಅಸಿತ, ವಸಿಷ್ಠ, ಮಹಾತ್ಮನಾದ ವಿಶ್ವಾಮಿತ್ರ, ಹಾರೀತ, ಲೋಮಶ, ಮೇಧಾವಿಯಾದ ಆತ್ರೇಯ, ಬೃಹಸ್ಪತಿ, ಶುಕ್ರ, ಮಹರ್ಷಿಗಳಾದ ಚ್ಯವನ, ಸನತ್ಕುಮಾರ, ಕಪಿಲ, ವಾಲ್ಮೀಕಿ, ತುಂಬುರು,ಪುರು, ಮೌದ್ಗಲ್ಯ, ಪರಶುರಾಮ, ಮಹಾಮುನಿಗಳಾದ ತೃಣಬಿಂದು, ಪಿಪ್ಪಲಾದ, ವಾಯು, ಸಂವರ್ತ, ಪುಲಹ, ಕಚ, ಕಾಶ್ಯಪ, ಪುಲಸ್ತ್ಯ, ಕ್ರತು, ದಕ್ಷ, ಪರಾಶರ, ಮರೀಚಿ, ಅಂಗಿರಸ್, ಕಾಶ್ಯ, ಗೌತಮ,

ಗಾಲವ, ಧೌಮ್ಯ , ವಿಭಾಂಡ, ಮಾಂಡವ್ಯ, ಧೌತ್ರ , ಕೃಷ್ಣಾನುಭೌತಿಕ, ಪರಮ - ಬ್ರಾಹ್ಮಣರಾದ ಉಲೂಕ, ಮಹಾಮುನಿಗಳಾದ ಮಾರ್ಕಂಡೇಯ, ಭಾಸ್ಕರಿ, ಪೂರಣ, ಕೃಷ್ಣ, ಪರಮಧಾರ್ಮಿಕನಾದ ಸೂತ – ಈ ಎಲ್ಲಾ ಮಹಾತ್ಮರೂ ಮಹಾ-ಭಾಗ್ಯವಂತರೂ ಆದ ಮುನಿಗಳ ಸಮೂಹದಿಂದ ಶ್ರದ್ಧಾ, ದಮ ಪುರಸ್ಸರವಾಗಿ ಗ್ರಹಗಳಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ಭೀಷ್ಮರು ಇದ್ದರು.

ಭೀಷ್ಮಸ್ತು ಪುರುಷವ್ಯಾಘ್ರಃ ಕರ್ಮಣಾ ಮನಸಾ ಗಿರಾ ।
ಶರತಲ್ಪಗತಃ ಕೃಷ್ಣಂ ಪ್ರದಧ್ಯೌ ಪ್ರಾಂಜಲಿಃ ಸ್ಥಿತಃ ॥೧೪॥

ಪುರುಷವ್ಯಾಘ್ರರಾದ ಶರತಲ್ಪಗತರಾದ ಭೀಷ್ಮರಾದರೋ ಕೈಗಳನ್ನು ಮುಗಿದು ಕರ್ಮದಿಂದಲೂ ಮನಸ್ಸಿನಿಂದಲೂ ಮತ್ತು ಮಾತಿನಿಂದಲೂ ಕೃಷ್ಣನನ್ನು ಧ್ಯಾನ ಮಾಡಿದರು.

ಸ್ವರೇಣ ಪುಷ್ಪನಾದೇನ ತುಷ್ಟಾವ ಮಧುಸೂದನಮ್ ।
ಯೋಗೇಶ್ವರಂ ಪದ್ಮನಾಭಂ ವಿಷ್ಣುಂ ಜಿಷ್ಣುಂ ಜಗತ್ಪತಿಮ್ ॥೧೫॥

ಅವರು ಯೋಗೇಶ್ವರನೂ ಪದ್ಮನಾಭನೂ ವಿಷ್ಣುವೂ ಜಿಷ್ಣುವೂ ಜಗತ್ಪತಿಯೂ ಆದ ಮಧುಸೂದನನನ್ನು ತುಂಬಿದ ಸ್ವರದಿಂದ ಸ್ತೋತ್ರಮಾಡಿದರು.

ಕೃತಾಂಜಲಿಃ ಶುಚಿರ್ಭೂತ್ವಾ ವಾಗ್ವಿದಾಂ ಪ್ರವರಃ ಪ್ರಭುಮ್ ।
ಭೀಷ್ಮಃ ಪರಮಧರ್ಮಾತ್ಮಾ ವಾಸುದೇವಮಥಾಸ್ತುವತ್ ॥೧೬॥

ಮಾತನಾಡುವವರಲ್ಲಿ ಶ್ರೇಷ್ಠರಾದ ಪರಮಧರ್ಮಾತ್ಮರಾದ ಭೀಷ್ಮರು ಶುಚಿಯಾಗಿ ಕೈಗಳನ್ನು ಮುಗಿದು ಪ್ರಭುವಾದ ವಾಸುದೇವನನ್ನು ಆಗ ಸ್ತೋತ್ರ ಮಾಡಿದರು.

ಆರಿರಾಧಯಿಷುಃ ಕೃಷ್ಣಂ ವಾಚಂ ಜಿಗದಿಷಾಮಿ ಯಾಮ್ ।
ತಥಾ ವ್ಯಾಸಸಮಾಸಿನ್ಯಾ ಪ್ರೀಯತಾಂ ಪುರುಷೋತ್ತಮಃ ॥೧೭॥

ನಾನು ಕೃಷ್ಣನನ್ನು ಸ್ತೋತ್ರಮಾಡಲು ಬಯಸಿ ಯಾವ ಮಾತುಗಳನ್ನು ಆಡಲು

ಇಚ್ಛಿಸುತ್ತಿದ್ದೇನೆಯೋ ಅಂತಹ ಸಂಕ್ಷಿಪ್ತ ಮತ್ತು ವಿಸ್ತಾರವಾದ ಮಾತುಗಳಿಂದ ಪುರುಷೋತ್ತಮನಾದ ಕೃಷ್ಣನು ಪ್ರಸನ್ನನಾಗಲಿ.

ಶುಚಿಃ ಶುಚಿಪದಂ ಹಂಸಂ ತತ್ಪರಃ ಪರಮೇಷ್ಠಿನಮ್ ।
ಯುಕ್ತ್ವಾ ಸರ್ವಾತ್ಮನಾऽऽತ್ಮಾನಂ ತಂ ಪ್ರಪದ್ಯೇ ಪ್ರಜಾಪತಿಮ್ ॥೧೮॥

ನನ್ನ ಮನಸ್ಸನ್ನು ಶುಚಿಯೂ, ವಾಯ್ವಂತರ್ಯಾಮಿಯೂ, ದೋಷದೂರನೂ, ಗುಣಪೂರ್ಣನೂ, ಪರಮೇಷ್ಠಿಯೂ ಆದ ಕೃಷ್ಣನಲ್ಲಿ ನಿಲ್ಲಿಸಿ ಪ್ರಜಾಪತಿಯಾದ ಅವನಿಗೆ ನಾನು ಶರಣಾಗತನಾಗುತ್ತೇನೆ.

ಅನಾದ್ಯಂತಃ ಪರಂ ಬ್ರಹ್ಮ ನ ದೇವಾ ನರ್ಷಯೋ ವಿದುಃ ।
ಏಕೋऽಯಂ ವೇದ ಭಗವಾನ್ ಧಾತಾ ನಾರಾಯಣೋ ಹರಿಃ ॥೧೯॥

ಅವನು ಆದ್ಯಂತಶೂನ್ಯನಾದ ಪರಬ್ರಹ್ಮ. ದೇವತೆಗಳಾಗಲೀ ಋಷಿಗಳಾಗಲೀ ಅವನನ್ನು ಪೂರ್ಣವಾಗಿ ತಿಳಿದಿಲ್ಲ. ಜಗತ್ಸೃಷ್ಟಿಕರ್ತನಾದ ಭಗವಂತನಾದ ಹರಿನಾರಾಯಣನೊಬ್ಬನೇ ಅವನನ್ನು ತಿಳಿದವನು.

ನಾರಾಯಣಾದೃಷಿಗಣಾಸ್ತಥಾ ಸಿದ್ಧಮಹೋರಗಾಃ ।
ದೇವಾ ದೇವರ್ಷಯಶ್ಚೈವ ಯೇ ವಿದುಃ ಪರಮವ್ಯಯಮ್ ॥೨೦॥

ದೇವತೆಗಳೂ, ದೇವಋಷಿಗಳೂ, ಋಷಿಗಣಗಳೂ, ಸಿದ್ಧರೂ, ಮಹೋರಗಗಳೂ ಮೊದಲಾದ ಯಾರು ಸರ್ವೋತ್ತಮನೂ ಅವ್ಯಯನೂ ಆದ ಅವನನ್ನು ಅಲ್ಪಸ್ವಲ್ಪ ತಿಳಿದಿದ್ದಾರೆಯೋ ಅದೂ ಸಹ ನಾರಾಯಣನ ಉಪದೇಶದಿಂದಲೇ.

ದೇವದಾನವಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಯಂ ನ ಜಾನಂತಿ ಕೋ ಹ್ಯೇಷ ಕುತೋ ವಾ ಭಗವಾನಿತಿ ॥೨೧॥

ಯಾವನನ್ನು ಇವನ ಸ್ವರೂಪವೇನು? ಭಗವಂತನಾದ ಇವನು ಎಲ್ಲಿಂದ ಬಂದಿದ್ದಾನೆ? ಎಂಬುದನ್ನು ದೇವದಾನವಗಂಧರ್ವರಾಗಲೀ, ಯಕ್ಷರಾಕ್ಷಸಸರ್ಪಗಳಾಗಲೀ ತಿಳಿದಿಲ್ಲವೋ,

ಯಸ್ಮಿನ್ ವಿಶ್ವಾನಿ ಭೂತಾನಿ ತಿಷ್ಠಂತಿ ಚ ವಿಶಂತಿ ಚ।
ಗುಣಭೂತಾನಿ ಭೂತೇಶೇ ಸೂತ್ರೇ ಮಣಿಗಣಾ ಇವ ॥೨೨॥

ಭೂತೇಶನಾದ ಯಾವನಲ್ಲಿ ಎಲ್ಲ ಪ್ರಾಣಿಗಳೂ ಸೂತ್ರದಲ್ಲಿ ಪೋಣಿಸಿದ ಮಣಿಗಣಗಳಂತೆ ಪ್ರವೇಶಿಸಿ, ಆಶ್ರಿತವಾಗಿ ಅಪ್ರಧಾನವಾಗಿವೆಯೋ,

ಯಸ್ಮಿನ್ ನಿತ್ಯೇ ತತೇ ತಂತೌ ದೃಢೇ ಸ್ರಗಿವ ತಿಷ್ಠತಿ।
ಸದಸದ್ ಗ್ರಥಿತಂ ವಿಶ್ವಂ ವಿಶ್ವಾಂಗೇ ವಿಶ್ವಕರ್ಮಣಿ ॥೨೩॥

ನಿತ್ಯಾಂಗನಾದ ವಿಶ್ವಶರೀರನೂ, ವಿಶ್ವಕರ್ಮನೂ ಆದ ಯಾವನಲ್ಲಿ ಕಾರ್ಯ-ಕಾರಣಾತ್ಮಕವಾದ ಈ ಪ್ರಪಂಚವು ದೃಢವಾದ ತಂತುವಿನಲ್ಲಿ ಆಶ್ರಯಿಸಿದ ಹೂಮಾಲೆಯಂತಿದೆಯೋ,

ಹರಿಂ ಸಹಸ್ರಶಿರಸಂ ಸಹಸ್ರಚರಣೇಕ್ಷಣಮ್।
ಪ್ರಾಹುರ್ನಾರಾಯಣಂ ದೇವಂ ಯಂ ವಿಶ್ವಸ್ಯ ಪರಾಯಣಮ್ ॥೨೪॥

ಯಾವನನ್ನು ಹರಿಯೆಂದು, ಸಹಸ್ರಶೀರ್ಷನೆಂದು, ಸಹಸ್ರಪಾದನೆಂದು, ಸಹಸ್ರಾಕ್ಷನೆಂದು, ನಾರಾಯಣನೆಂದು, ವಿಶ್ವಕ್ಕೆ ಶ್ರೇಷ್ಠನಾದ ಆಶ್ರಯನಾದ ದೇವನೆಂದು ಹೇಳುತ್ತಾರೆಯೋ,

ಅಲ್ಪೀಯಸಾಮಲ್ಪೀಯಾಂಸಂ ಸ್ಥವಿಷ್ಠಂ ಚ ಸ್ಥವೀಯಸಾಮ್।
ಗರೀಯಸಾಂ ಗರಿಷ್ಠಂ ಚ ಶ್ರೇಷ್ಠಂ ಚ ಶ್ರೇಯಸಾಮಪಿ ॥೨೫॥

ಯಾವನು ಸೂಕ್ಷ್ಮವಾದ ವಸ್ತುವಿಗಿಂತಲೂ ಅತ್ಯಂತಸೂಕ್ಷ್ಮನೋ, ಸ್ಥೂಲವಾದ ವಸ್ತುಗಳಿಗಿಂತಲೂ ಅತ್ಯಂತಸ್ಥೂಲನೋ, ಭಾರವಾದ ವಸ್ತುಗಳಿಗಿಂತಲೂ ಹೆಚ್ಚು ಭಾರವುಳ್ಳವನೋ, ಶ್ರೇಷ್ಠವಾದ ವಸ್ತುಗಳಿಗಿಂತಲೂ ಅತ್ಯಂತ ಶ್ರೇಷ್ಠನಾದವನೋ,

ಯಂ ವಾಕೇಷ್ವನುವಾಕೇಷು ನಿಷತ್ಸೂಪನಿಷತ್ಸು ಚ।
ಗೃಣಂತಿ ಸತ್ಯಕರ್ಮಾಣಂ ಸತ್ಯಂ ಸತ್ಯೇಷು ನಾಮಸು ॥೨೬॥

ಸತ್ಯಕರ್ಮನಾದ, ಸತ್ಯನಾದ, ಯಾವನನ್ನು ಸತ್ಯರೂಪವಾದ ನಾಮಾತ್ಮಕವಾದ ವಾಕ, ಅನುವಾಕ, ವೇದ ಮತ್ತು ಉಪನಿಷತ್ತುಗಳಿಂದ ಕೊಂಡಾಡುತ್ತಾರೆಯೋ,

ಚತುರ್ಭಿಶ್ಚತುರಾತ್ಮಾನಂ ಸತ್ವಸ್ಥಂ ಸಾತ್ವತಾಂಪತಿಮ್ ।
ಯಂ ದಿವ್ಯೈರ್ದೇವಮರ್ಚಂತಿ ಗುಹ್ಯೈಃ ಪರಮನಾಮಭಿಃ ॥೨೭॥

ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ರೂಪವನ್ನು ಧರಿಸಿದವನಾಗಿ ಸಾತ್ವತರ ಪತಿಯೂ ಶುದ್ಧಾಂತಃಕರಣದಲ್ಲಿ ನೆಲೆಸಿರುವವನೂ ಆದ ಯಾವ ದೇವನನ್ನು ಶ್ರೇಷ್ಠವಾದ ಮತ್ತು ಪರಮರಹಸ್ಯವಾದ ದಿವ್ಯನಾಮಗಳಿಂದ ಜ್ಞಾನಿಗಳು ಅರ್ಚಿಸುತ್ತಾರೆಯೋ,

ಯಂ ದೇವಂ ದೇವಕೀದೇವೀ ವಸುದೇವಾದಜೀಜನತ್ ।
ಭೌಮಸ್ಯ ಬ್ರಹ್ಮಣೋ ಗುಪ್ತ್ಯೈ ದೀಪ್ತಮಗ್ನಿಮಿವಾರಣಿಃ ॥೨೮॥

ಭೂಮಿಯಲ್ಲಿ ವೇದರಕ್ಷಣೆಯನ್ನು ಮಾಡಲು ಅರಣಿಯಿಂದ ದೀಪ್ತವಾದ ಅಗ್ನಿಯನ್ನು ಪಡೆದಂತೆ ಯಾವನನ್ನು ದೇವಕೀದೇವಿಯು ವಸುದೇವನಿಂದ ಪಡೆದಳೋ,

ಯಮನನ್ಯೋ ವ್ಯಪೇತಾಶೀರಾತ್ಮಾನಂ ವೀತಕಲ್ಮಷಮ್ ।
ದೃಷ್ಟ್ವಾನಂತ್ಯಾಯ ಗೋವಿಂದಂ ಪಶ್ಯತ್ಯಾತ್ಮನ್ಯವಸ್ಥಿತಮ್ ॥೨೯॥

ಯಾವನು ಸ್ವಾಮಿಯಾದ, ದೋಷದೂರನಾದ, ವೇದಪ್ರತಿಪಾದ್ಯನಾದ ಕೃಷ್ಣನನ್ನು ಅನಂತವಾದ ಮೋಕ್ಷವನ್ನು ಪಡೆಯುವ ಸಲುವಾಗಿ ಎಲ್ಲ ಕಾಮಗಳನ್ನೂ ತೊರೆದು ಅನನ್ಯವಾದ ಭಕ್ತಿಯಿಂದ ತಮ್ಮ ಹೃದಯಗುಹೆಯಲ್ಲಿ ನೋಡುತ್ತಾನೆಯೋ,

ಪುರಾಣೇ ಪುರುಷಃ ಪ್ರೋಕ್ತೋ ಬ್ರಹ್ಮಾ ಪ್ರೋಕ್ತೋ ಯುಗಾದಿಷು ।
ಕಲ್ಪಯೇ ಸಂಕರ್ಷಣಃ ಪ್ರೋಕ್ತಸ್ತಮುಪಾಸ್ಯಮುಪಾಸ್ಮಹೇ ॥೩೦॥

ಯಾವನನ್ನು ಪುರಾಣಗಳಲ್ಲಿ ಪುರುಷನೆಂದೂ, ಯುಗದ ಪ್ರಾರಂಭದಲ್ಲಿ

ಬ್ರಹ್ಮನೆಂದೂ, ಸಂಹಾರಕಾಲದಲ್ಲಿ ಸಂಕರ್ಷಣನೆಂದೂ ಹೇಳುತ್ತಾರೆಯೋ ಅಂತಹ ಉಪಾಸನೆಗೆ ಯೋಗ್ಯವಾದ ಕೃಷ್ಣನನ್ನು ಉಪಾಸನೆ ಮಾಡುತ್ತೇವೆ.

ಅತಿವಾಯ್ವಗ್ನಿಕರ್ಮಾಣಮತಿಸೂರ್ಯಾಗ್ನಿತೇಜಸಮ್ ।
ಅತಿಬುದ್ಧೀಂದ್ರಿಯಾತ್ಮಾನಂ ತಂ ಪ್ರಪದ್ಯೇ ಪ್ರಜಾಪತಿಮ್ ॥೩೧॥

ವಾಯು ಅಗ್ನಿಗಳನ್ನು ಮೀರಿದ ಕರ್ಮಗಳನ್ನು ಮಾಡುವ, ಸೂರ್ಯಾಗ್ನಿಗಳನ್ನು ಮೀರಿದ ತೇಜಸ್ಸನ್ನು ಹೊಂದಿದ, ಜೀವನ ಬುದ್ಧೀಂದ್ರಿಯಗಳಿಗೆ ನಿಲುಕದ ಸ್ವರೂಪವುಳ್ಳ ಆ ಪ್ರಜಾಪತಿಯನ್ನು ಶರಣು ಹೊಂದುತ್ತೇನೆ.

ಯಮೇಕಂ ಬಹುಧಾಮಾನಂ ಪ್ರಾದುರ್ಭೂತಮಧೋಕ್ಷಜಮ್ ।
ನಾನ್ಯಭಕ್ತಾ ಕ್ರಿಯಾವಂತೋ ಯಜಂತೇ ಸರ್ವಕಾಮದಮ್ ॥೩೨॥

ಅನೇಕ ವಾಸಸ್ಥಾನಗಳನ್ನು ಹೊಂದಿದ ಸರ್ವಕಾಮಪ್ರದನಾದ ಭೂಮಿಯಲ್ಲಿ ಅವತರಿಸಿದ ಯಾವ ಅಧೋಕ್ಷಜನನ್ನು ಸತ್ಕರ್ಮವನ್ನು ಮಾಡುವ ಜೀವರು ಅನನ್ಯಭಕ್ತಿಯಿಂದ ಪೂಜಿಸುತ್ತಾರೆಯೋ,

ಯಮಾಹುರ್ಜಗತಃ ಕೋಶಂ ಯಸ್ಮಿನ್ ಸನ್ನಿಹಿತಾ ಪ್ರಜಾಃ ।
ಯಸ್ಮಿನ್ ಲೋಕಾ ಸ್ಫುರಂತೀಮೇ ಜಲೇ ಶಕುನಯೋ ಯಥಾ ॥೩೩॥

ಯಾವನನ್ನು ಜಗತ್ತಿನ ಕೋಶವೆಂದು ಹೇಳುತ್ತಾರೆಯೋ, ಯಾವನಲ್ಲಿ ಎಲ್ಲ ಪ್ರಜೆಗಳೂ ಆಶ್ರಯಿಸಿಕೊಂಡಿದ್ದಾರೆಯೋ, ಯಾವನಲ್ಲಿ ಜಲದಲ್ಲಿ ಪಕ್ಷಿಗಳು (ಮೀನುಗಳು) ತೋರುವಂತೆ ಈ ಎಲ್ಲ ಲೋಕಗಳೂ ಪ್ರಕಾಶಿಸುತ್ತವೆಯೋ,

ಋತಮೇಕಾಕ್ಷರಂ ಬ್ರಹ್ಮ ಯತ್ ತತ್ ಸದಸತಃ ಪರಮ್ ।
ಅನಾದಿಮಧ್ಯಪರ್ಯಂತಂ ನ ದೇವಾ ನರ್ಷಯೋ ವಿದುಃ ॥೩೪॥

ಯಾವನು ಯಾವಾಗಲೂ ಒಂದೇ ರೀತಿಯಲ್ಲಿದ್ದಾನೆಯೋ ಪ್ರಣವಪ್ರತಿಪಾದ್ಯನೋ, ಗುಣಪೂರ್ಣನೋ, ಕಾರ್ಯಕಾರಣಗಳಿಗಿಂತ ಶ್ರೇಷ್ಠನಾದವನೋ, ಆದಿಮಧ್ಯಾಂತಶೂನ್ಯನೋ, ಯಾವನನ್ನು ದೇವತೆಗಳಾಗಲೀ ಋಷಿಗಳಾಗಲೀ ತಿಳಿದಿಲ್ಲವೋ,

ಯಂ ಸುರಾಸುರಗಂಧರ್ವಾಃ ಸಸಿದ್ಧರ್ಷಿಮಹೋರಗಾಃ।
ಪ್ರಯತಾ ನಿತ್ಯಮರ್ಚಂತಿ ಪರಮಂ ದುಃಖಭೇಷಜಮ್ ॥೩೫॥

ದುಃಖಪರಿಹಾರಕನಾದ, ಸರ್ವೋತ್ತಮನಾದ ಯಾವನನ್ನು ಸುರಾಸುರ-ಗಂಧರ್ವರು ಸಿದ್ಧರ್ಷಿಮಹೋರಗರು ನಿತ್ಯವೂ ಶ್ರದ್ಧೆಯಿಂದ ಪೂಜಿಸುತ್ತಾರೆಯೋ

ಅನಾದಿನಿಧನಂ ದೇವಮಾತ್ಮಯೋನಿಂ ಸನಾತನಮ್।
ಅಪ್ರತರ್ಕ್ಯಮವಿಜ್ಞೇಯಂ ಹರಿಂ ನಾರಾಯಣಂ ಪ್ರಭುಮ್ ॥೩೬॥

ಆದ್ಯಂತರಹಿತನೂ, ಆತ್ಮಯೋನಿಯೂ, ವೇದಪ್ರತಿಪಾದ್ಯನೂ, ತರ್ಕವನ್ನು ಮೀರಿದವನೂ, ಪೂರ್ಣವಾಗಿ ತಿಳಿಯಲು ಅಸಾಧ್ಯನಾದವನೂ, ಪಾಪಪರಿ-ಹಾರಕನೂ ಪ್ರಭುವೂ ಆದ ಆ ನಾರಾಯಣನಿಗೆ ಶರಣಾಗತನಾಗುತ್ತೇನೆ.

ಹಿರಣ್ಯವರ್ಣಂ ಯಂ ಗರ್ಭಮದಿತಿರ್ದೈತ್ಯನಾಶನಮ್।
ಏಕಂ ದ್ವಾದಶಧಾ ಜಜ್ಞೇ ತಸ್ಮೈ ಸೂರ್ಯಾತ್ಮನೇ ನಮಃ ॥೩೭॥

ದೇವಮಾತೆಯಾದ ಅದಿತಿಯು ದೈತ್ಯನಾಶಕನಾದ ಹಿರಣ್ಯವರ್ಣದ ಗರ್ಭವನ್ನು ಧರಿಸಿ ಯಾವ ಒಬ್ಬನನ್ನು ದ್ವಾದಶ ಆದಿತ್ಯರಾಗಿ ಪ್ರಸವಿಸಿದಳೋ ಅಂತಹ ಸೂರ್ಯ-ನಲ್ಲಿ ವ್ಯಾಪ್ತನಾದ ದೇವನಿಗೆ ನಮಸ್ಕಾರ.

ಶುಕ್ಲೇ ದೇವಾನ್ ಪಿತೄನ್ ಕೃಷ್ಣೇ ತರ್ಪಯತ್ಯಮೃತೇನ ಯಃ।
ಯಶ್ಚ ರಾಜಾ ದ್ವಿಜಾತೀನಾಂ ತಸ್ಮೈ ಸೋಮಾತ್ಮನೇ ನಮಃ ॥೩೮॥

ಯಾವನು ಚಂದ್ರನಲ್ಲಿ ಸನ್ನಿಹಿತನಾಗಿದ್ದು ಅಮೃತದಿಂದ ಶುಕ್ಲಪಕ್ಷದಲ್ಲಿ ದೇವತೆ-ಗಳನ್ನೂ, ಕೃಷ್ಣಪಕ್ಷದಲ್ಲಿ ಪಿತೃಗಳನ್ನೂ ತೃಪ್ತಿಪಡಿಸುತ್ತಾನೆಯೋ ಮತ್ತು ಬ್ರಾಹ್ಮಣ ಜಾತಿಗೆ ಅಧಿಪತಿಯಾಗಿದ್ದಾನೆಯೋ ಅಂತಹ ಚಂದ್ರಸ್ವಾಮಿಗೆ ನಮಸ್ಕಾರ.

ಹುತಾಶನಮುಖೈರ್ದೇವೈರ್ಧಾರ್ಯತೇ ಸಕಲಂ ಜಗತ್।
ಹೃದಿ ಪ್ರಥಮಭೋಕ್ತಾ ಚ ತಸ್ಮೈ ಹೋತ್ರಾತ್ಮನೇ ನಮಃ ॥೩೯॥

ಅಗ್ನಿಯೇ ಮೊದಲಾದ ದೇವತೆಗಳಿಂದ ಸಕಲಜಗತ್ತು ಧರಿಸಲ್ಪಡುತ್ತದೆ. ಪ್ರಥಮ ಹವಿರ್ಭೋಕ್ತನಾದ ಹೋತೃವಿನಲ್ಲಿ ವಿಶೇಷವಾಗಿ ಸನ್ನಿಹಿತನಾದ ಅವನಿಗೆ ನಮಸ್ಕಾರ.

ಮಹತಸ್ತಮಸಃ ಪಾರೇ ಪುರುಷಂ ಜ್ವಲನದ್ಯುತಿಮ್ ।
ಯಂ ಜ್ಞಾತ್ವಾ ಮೃತ್ಯುಮತ್ಯೇತಿ ತಸ್ಮೈ ಜ್ಞೇಯಾತ್ಮನೇ ನಮಃ ॥೪೦॥

ಮಹಾ ತಮಸ್ಸಿನ ಅಂಚಿನಲ್ಲಿ ಅಗ್ನಿಯ ಪ್ರಕಾಶವನ್ನು ಹೊಂದಿರುವ ಯಾವ ಪುರುಷನನ್ನು ನೋಡಿ ಜೀವನು ಮೃತ್ಯುವನ್ನು ದಾಟುತ್ತಾನೆಯೋ ಅಂತಹ ಜ್ಞೇಯ ವಸ್ತುವಿನಲ್ಲಿ ಶ್ರೇಷ್ಠನಾದ ಕೃಷ್ಣನಿಗೆ ನಮಸ್ಕಾರ.

ಯಂ ಬೃಹಂತಂ ಬೃಹತ್ಯುಕ್ಥೇ ಯಮಗ್ನೌ ಯಂ ಮಹಾಧ್ವರೇ ।
ಯಂ ವಿಪ್ರಸಂಘಾ ಗಾಯಂತಿ ತಸ್ಮೈ ವೇದಾತ್ಮನೇ ನಮಃ ॥೪೧॥

ಯಾವ ಮಹಾತ್ಮನನ್ನು ಮಹಾಯಜ್ಞಗಳಲ್ಲಿ ಬೃಹತ್ ಉಕ್ಥಗಳಲ್ಲಿ ಅಗ್ನಿಯಲ್ಲಿ ಬ್ರಾಹ್ಮಣರ ಸಮೂಹಗಳು ಗಾನಮಾಡುತ್ತವೆಯೋ ಅಂತಹ ವೇದಪ್ರತಿಪಾದ್ಯ-ನಾದವನಿಗೆ ನಮಸ್ಕಾರ.

ಋಗ್ಯಜುಃಸಾಮಧಾಮಾನಂ ದಶಾರ್ಧಹವಿರಾಕೃತಿಮ್ ।
ಯಂ ಸಪ್ತತಂತುಂ ತನ್ವಂತಿ ತಸ್ಮೈ ಯಜ್ಞಾತ್ಮನೇ ನಮಃ ॥೪೨॥

ಋಗ್‌ಯಜುಸ್ಸಾಮವೇದಗಳಲ್ಲಿ ಪ್ರತಿಪಾದ್ಯತಯಾ ಆಶಯವನ್ನು ಪಡೆದಿರುವ ಧಾನ, ಕರಂಭ, ಪರಿವಾಪ, ಪುರೋಡಾಶ ಮತ್ತು ಪಯಸ್ಯಗಳೆಂಬ ಐದುವಿಧವಾದ ಹವಿಸ್ಸುಗಳಲ್ಲಿ ಸನ್ನಿಹಿತನಾಗಿರುವ (ಹವಿಸ್ಸುಗಳ ಆಕಾರವನ್ನು ಹೊಂದಿರುವ) ಮತ್ತು ಯಾವನನ್ನು ಉದ್ದೇಶಿಸಿ ಯಜ್ಞಗಳನ್ನು ವಿಸ್ತಾರವಾಗಿ ಮಾಡುತ್ತಾರೆಯೋ ಅಂತಹ ಯಜ್ಞಾತ್ಮನಾದ ಕೃಷ್ಣನಿಗೆ ನಮಸ್ಕಾರ.

ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ ।
ಹೂಯತೇ ಚ ಪುನರ್ದ್ವಾಭ್ಯಾಂ ತಸ್ಮೈ ಹೋಮಾತ್ಮನೇ ನಮಃ ॥೪೩॥

ನಾಲ್ಕು ಅಕ್ಷರಗಳ ಮಂತ್ರದಿಂದ ಪುನಃ ನಾಲ್ಕು ಅಕ್ಷರಗಳ ಮಂತ್ರದಿಂದ, ಎರಡು ಅಕ್ಷರಗಳ ಮಂತ್ರದಿಂದ, ಐದು ಅಕ್ಷರಗಳ ಮಂತ್ರದಿಂದ ಪುನಃ ಎರಡು ಅಕ್ಷರಗಳ ಮಂತ್ರದಿಂದ ಯಾವನಲ್ಲಿ ಹೋಮ ಮಾಡಲ್ಪಡುತ್ತದೆಯೋ ಅಂತಹ ಹೋಮ-ಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

''ಆಶ್ರಾವಯ, ಅಸ್ತು ಶ್ರೌಷಟ್, ಯಜ, ಯೇಯಜಾಮಹೇ, ವಷಟ್'' ಎಂಬುದು ಕ್ರಮವಾಗಿ ಆ ಮಂತ್ರಗಳು.

ಯಃ ಸುಪರ್ಣೋ ಯಜುರ್ನಾಮ ಛಂದೋಗಾತ್ರಸ್ತ್ರಿವೃಚ್ಛಿರಾಃ।
ರಥಂತರಬೃಹತ್ಯಕ್ಷಸ್ತಸ್ಮೈ ಸ್ತೋತ್ರಾತ್ಮನೇ ನಮಃ ॥೪೪॥

ಯಾವ ಸುಪೂರ್ಣಾನಂದರೂಪನಾದ ಕೃಷ್ಣನು ಯಜನೀಯನಾದ್ದರಿಂದ ಯಜುರ್ನಾಮಕನಾಗಿದ್ದಾನೆಯೋ, ಛಂದಃಶರೀರವುಳ್ಳವನೋ, ತ್ರಿವೃತ್ ಸ್ತೋಮವೇ ಶಿರಸ್ಸಾಗಿ ಹೊಂದಿದವನೋ, ರಥಂತರ ಮತ್ತು ಬೃಹತೀ ಸಾಮಗಳನ್ನು ಚಕ್ಷುಸ್ಸಾಗಿ ಹೊಂದಿದ್ದಾನೆಯೋ ಅಂತಹ ಸ್ತೋತ್ರಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯಃ ಸಹಸ್ರಸವೇ ಸತ್ರೇ ಜಜ್ಞೇ ವಿಶ್ವಸೃಜಾಮೃಷಿಃ।
ಹಿರಣ್ಯವರ್ಣಃ ಶಕುನಿಸ್ತಸ್ಮೈ ಹಂಸಾತ್ಮನೇ ನಮಃ ॥೪೫॥

ಯಾವ ಸರ್ವಜ್ಞನಾದವನು ವಿಶ್ವಸೃಗ್ ದೇವತೆಗಳ ಸಹಸ್ರಸವನಾಮಕ ಯಜ್ಞದಲ್ಲಿ ಹಿರಣ್ಯವರ್ಣದ ಶಕುನಿಯಾಗಿ (ಪಕ್ಷಿಯಾಗಿ) ಪ್ರಾದುರ್ಭವಿಸಿದನೋ ಅಂತಹ ಹಂಸರೂಪನಾದ ಕೃಷ್ಣನಿಗೆ ನಮಸ್ಕಾರ. (ಹಿರಣ್ಮಯಶ್ಶಕುನಿಃ ಬ್ರಹ್ಮ ನಾಮ ಎಂಬ ವೇದವಾಕ್ಯವಿದೆ.)

ಯಜ್ಞಾಂಗೋ ಯೋ ವರಾಹೋ ವೈ ಭೂತ್ವಾಗಾಮುಜ್ಜಹಾರ ಹ।
ಲೋಕತ್ರಯಹಿತಾರ್ಥಾಯ ತಸ್ಮೈ ವೀರ್ಯಾತ್ಮನೇ ನಮಃ ॥೪೬॥

ಯಾವನು ಯಜ್ಞವರಾಹನಾಗಿ ಅವತರಿಸಿ ಮೂರು ಲೋಕಗಳ ಹಿತಕ್ಕಾಗಿ

ಭೂಮಿಯನ್ನು ಮೇಲಕ್ಕೆ ಎತ್ತಿದನೋ ಅಂತಹ ಪರಾಕ್ರಮರೂಪನಾದ ಅವನಿಗೆ ನಮಸ್ಕಾರ.

ಯಃ ಶೇತೇ ಯೋಗಮಾಸ್ಥಾಯ ಪರ್ಯಂಕೇ ನಾಗಭೂಷಿತೇ।
ಫಣಾಸಹಸ್ರಖಚಿತೇ ತಸ್ಮೈ ನಿದ್ರಾತ್ಮನೇ ನಮಃ ॥೪೭॥

ಯಾವನು ಸಹಸ್ರಫಣಗಳಿಂದ ಖಚಿತವಾದ ಸರ್ಪಮಯವಾದ ಪರ್ಯಂಕದಲ್ಲಿ ಯೋಗನಿದ್ರೆಯನ್ನು ಅವಲಂಬಿಸಿ ಮಲಗಿರುತ್ತಾನೆಯೋ ಅಂತಹ ಯೋಗನಿದ್ರಾಸಕ್ತನಾದ ಕೃಷ್ಣನಿಗೆ ನಮಸ್ಕಾರ.

ಪದಾಂಗಂ ಸಂಧಿಪರ್ವಾಣಂ ಸ್ವರವ್ಯಂಜನಲಕ್ಷಣಮ್।
ಯಮಾಹುರಕ್ಷರಂ ನಿತ್ಯಂ ತಸ್ಮೈ ವಾಗಾತ್ಮನೇ ನಮಃ ॥೪೮॥

ಯಾವನಿಗೆ ಪದಗಳೇ ಶರೀರದ ಅವಯವಗಳೋ, ವರ್ಣ ಸಂಧಿಗಳು ಪರ್ವಗಳೋ (ಗಿಣ್ಣುಗಳೋ) ಯಾವನನ್ನು ಸ್ವರವ್ಯಂಜನರೂಪವಾದ ಅಕ್ಷರನಿಯಾಮಕ--ನೆಂದು ಹೇಳುತ್ತಾರೆಯೋ ಅಂತಹ ನಾಶರಹಿತನಾದ ನಿತ್ಯನಾದ ವಾಗ್ರೂಪನಾದ ಕೃಷ್ಣನಿಗೆ ನಮಸ್ಕಾರ.

ಯಶ್ಚಿನೋತಿ ಸತಾಂ ಸೇತುಮೃತೇನಾಮೃತಯೋನಿನಾ।
ಧರ್ಮಾರ್ಥವ್ಯವಹಾರಾಂಗೈಸ್ತಸ್ಮೈ ಮತ್ಯಾತ್ಮನೇ ನಮಃ ॥೪೯॥

ಯಾವನು ಧರ್ಮಾರ್ಥವ್ಯವಹಾರ ಎಂಬ ಅಂಗಗಳಿಂದಲೂ, ಮೋಕ್ಷಕ್ಕೆ ಕಾರಣವಾದ ಯಥಾರ್ಥಜ್ಞಾನದಿಂದಲೂ, ಸಜ್ಜನರಿಗೆ ಸಂಸಾರವನ್ನು ದಾಟುವ ಸೇತುವೆಯನ್ನು ನಿರ್ಮಿಸುತ್ತಾನೆಯೋ ಅಂತಹ ಮತಿರೂಪನಾದ (ಮತಿಪ್ರೇರಕನಾದ) ಕೃಷ್ಣನಿಗೆ ನಮಸ್ಕಾರ.

ಯಂ ಪೃಥಗ್ ಧರ್ಮಚರಣಾಃ ಪೃಥಗ್ ಧರ್ಮಫಲೈಷಿಣಃ।
ಪೃಥಗ್ ಧರ್ಮೈಃ ಸಮರ್ಚಂತಿ ತಸ್ಮೈ ಧರ್ಮಾತ್ಮನೇ ನಮಃ ॥೫೦॥

ಬೇರೆ ಬೇರೆ ಫಲಗಳನ್ನು ಅಪೇಕ್ಷಿಸಿ ಬೇರೆ ಬೇರೆ ಧರ್ಮವನ್ನು ಆಚರಿಸುವವರು

ಯಾವನನ್ನು ಬೇರೆ ಬೇರೆ ವಿಧಾನಗಳಿಂದ ಚೆನ್ನಾಗಿ ಅರ್ಚಿಸುತ್ತಾರೆಯೋ ಅಂತಹ ಧರ್ಮಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯತಃ ಸರ್ವೇ ಪ್ರಸೂಯಂತೇ ಹ್ಯನಂಗಾತ್ಮಾಂಗದೇಹಿನಃ।
ಉನ್ಮಾದಂ ಸರ್ವಭೂತಾನಾಂ ತಸ್ಮೈ ಕಾಮಾತ್ಮನೇ ನಮಃ ॥೫೧॥

ಯಾವನಿಂದ ಎಲ್ಲ ಜೀವರೂ ಮನ್ಮಥನಿಂದ ವ್ಯಾಪ್ತವಾದ ದೇಹಾವಯವವುಳ್ಳ-ವರಾಗಿ ಪ್ರಸವಕ್ಕೆ ಕಾರಣರಾಗುತ್ತಾರೆಯೋ, ಯಾವನು ಸರ್ವಪ್ರಾಣಿಗಳಿಗೂ ಶ್ರೇಷ್ಠವಾದ ಹರ್ಷವನ್ನು ಕೊಡುತ್ತಾನೆಯೋ ಅಂತಹ ಕಾಮಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯಂ ತಂ ವ್ಯಕ್ತಸ್ಥಮವ್ಯಕ್ತಂ ವಿಚಿನ್ವಂತಿ ಮಹರ್ಷಯಃ।
ಕ್ಷೇತ್ರೇ ಕ್ಷೇತ್ರಜ್ಞಮಾಸೀನಂ ತಸ್ಮೈ ಕ್ಷೇತ್ರಾತ್ಮನೇ ನಮಃ ॥೫೨॥

ವ್ಯಕ್ತವಾದ ಶರೀರರೂಪವಾದ ಕ್ಷೇತ್ರದಲ್ಲಿ ಮಹರ್ಷಿಗಳು ಕ್ಷೇತ್ರಜ್ಞನಾದ ಮತ್ತು ಅವ್ಯಕ್ತನಾದ ಯಾವನನ್ನು ಹುಡುಕುತ್ತಾರೆಯೋ ಅಂತಹ ಕ್ಷೇತ್ರಸ್ವಾಮಿಯಾದ ಕೃಷ್ಣ-ನಿಗೆ ನಮಸ್ಕಾರ.

ಯಂ ದೃಗಾತ್ಮಾನಮಾತ್ಮಸ್ಥಂ ವೃತಂ ಷೋಡಶಭಿರ್ಗುಣೈಃ।
ಪ್ರಾಹುಃ ಸಪ್ತದಶಂ ಸಾಂಖ್ಯಾಸ್ತಸ್ಮೈ ಸಾಂಖ್ಯಾತ್ಮನೇ ನಮಃ ॥೫೩॥

ಅಪ್ರಧಾನವಾದ ಪಂಚಭೂತಗಳು, ಮತ್ತು ಏಕಾದಶೇಂದ್ರಿಯಗಳಿಂದ ಪ್ರವೃತ್ತ-ನಾದ ಜ್ಞಾನರೂಪನಾಗಿ ಜೀವನಲ್ಲಿರುವ ಯಾವನನ್ನು ಸಾಂಖ್ಯರು ಹದಿನೇಳನೆಯ-ವನೆಂದು ಹೇಳುತ್ತಾರೆಯೋ ಅಂತಹ ಸಾಂಖ್ಯತತ್ವಪ್ರತಿಪಾದ್ಯನಾದ ಕೃಷ್ಣನಿಗೆ ನಮಸ್ಕಾರ.

ಯಂ ವಿನಿದ್ರಾ ಜಿತಶ್ವಾಸಾಃ ಸತ್ತ್ವಸ್ಥಾಃ ಸಂಯತೇಂದ್ರಿಯಾಃ।
ಜ್ಯೋತಿಃ ಪಶ್ಯಂತಿ ಯುಂಜಾನಾಸ್ತಸ್ಮೈ ಯೋಗಾತ್ಮನೇ ನಮಃ ॥೫೪॥

ಯೋಗಿಗಳಾದವರು ನಿದ್ರೆಯನ್ನು ತೊರೆದು ಶ್ವಾಸವನ್ನು ಜಯಿಸಿ ಸತ್ವಗುಣ-

ಪ್ರಧಾನರಾಗಿ ಇಂದ್ರಿಯಜಯವನ್ನು ಹೊಂದಿ, ಯೋಗವನ್ನು ಅನುಷ್ಠಾನ ಮಾಡಿ ಜ್ಯೋತೀರೂಪನಾದ ಯಾವನನ್ನು ನೋಡುತ್ತಾರೆಯೋ ಅಂತಹ ಯೋಗಾತ್ಮನಾದ ಕೃಷ್ಣನಿಗೆ ನಮಸ್ಕಾರ.

ಅಪುಣ್ಯಪುಣ್ಯೋಪರಮೇ ಯಂ ಪುನರ್ಭವನಿರ್ಭಯಾಃ।
ಶಾಂತಾಃ ಸನ್ನ್ಯಾಸಿನೋ ಯಾಂತಿ ತಸ್ಮೈ ಮೋಕ್ಷಾತ್ಮನೇ ನಮಃ ॥೫೫॥

ಪುಣ್ಯಪಾಪಗಳೆರಡನ್ನೂ ಕಳೆದುಕೊಂಡು ಪುನರ್ಭವ(ಪುನರ್ಜನ್ಮ)ದ ಹೆದರಿಕೆಯಿಂದ ಮುಕ್ತರಾದ ಶಾಂತರಾದ ಸನ್ನ್ಯಾಸಿಗಳು ಯಾವನನ್ನು ಹೊಂದುತ್ತಾರೆಯೋ ಅಂತಹ ಮೋಕ್ಷಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯಸ್ಯಾಗ್ನಿರಾಸ್ಯಂ ದ್ಯೌರ್ಮೂರ್ಧಾ ಖಂ ನಾಭಿಶ್ಚರಣೌ ಕ್ಷಿತಿಃ।
ಸೂರ್ಯಶ್ಚಕ್ಷುರ್ದಿಶಃ ಶ್ರೋತ್ರೇ ತಸ್ಮೈ ಲೋಕಾತ್ಮನೇ ನಮಃ ॥೫೬॥

ಯಾವನ ಆಸ್ಯವು ಅಗ್ನಿಯೋ, ಶಿರಸ್ಸು ದ್ಯುಲೋಕವೋ, ನಾಭಿಯು ಅಂತರಿಕ್ಷವೋ, ಪಾದಗಳು ಭೂಮಿಯೋ, ಸೂರ್ಯನು ಚಕ್ಷುಸ್ಸೋ, ದಿಕ್ಕುಗಳು ಶ್ರೋತ್ರವೋ ಅಂತಹ ಲೋಕವ್ಯಾಪ್ತನಾದ ಕೃಷ್ಣನಿಗೆ ನಮಸ್ಕಾರ. (ಅಗ್ನಿ ಮೊದಲಾದ ದೇವತೆಗಳು ಆಸ್ಯದಿಂದ ಜನ್ಮವನ್ನು ಪಡೆದು, ಆಸ್ಯವನ್ನು ಆಶ್ರಯಿಸಿಕೊಂಡಿದ್ದಾರೆ ಎಂದು ಅಭಿಪ್ರಾಯ).

ಯೋಽಸೌ ಯುಗಸಹಸ್ರಾಂತೇ ಪ್ರದೀಪ್ತಾರ್ಚಿರ್ವಿಭಾವಸುಃ।
ಸಂಭಕ್ಷಯತಿ ಭೂತಾನಿ ತಸ್ಮೈ ಘೋರಾತ್ಮನೇ ನಮಃ ॥೫೭॥

ಯಾವನು ಸಹಸ್ರಯುಗಗಳ ಅಂತ್ಯದಲ್ಲಿ ದೀಪ್ತವಾದ ಜ್ವಾಲೆಗಳಿಂದ ಕೂಡಿದ ಅಗ್ನಿಯಾಗಿ ಎಲ್ಲ ಪ್ರಾಣಿಗಳನ್ನೂ ಭಕ್ಷಿಸುತ್ತಾನೆಯೋ ಅಂತಹ ಘೋರರೂಪನಾದ ಕೃಷ್ಣನಿಗೆ ನಮಸ್ಕಾರ.

ಸಂಭಕ್ಷ್ಯ ಸರ್ವಭೂತಾನಿ ಕೃತ್ವಾ ಚೈಕಾರ್ಣವಂ ಜಗತ್।
ಬಾಲಃ ಸ್ವಪಿತಿ ಯಶ್ಚೈಕಸ್ತಸ್ಮೈ ಮಾಯಾತ್ಮನೇ ನಮಃ ॥೫೮॥

ಎಲ್ಲ ಪ್ರಾಣಿಗಳನ್ನೂ ಭಕ್ಷಿಸಿ ಸಂಹಾರ ಮಾಡಿ, ಜಗತ್ತನ್ನು ಏಕಾರ್ಣವವನ್ನಾಗಿ ಮಾಡಿ ಬಾಲರೂಪವನ್ನು ಧರಿಸಿ ಒಬ್ಬನೇ ನಿದ್ರಿಸುವ ಸಾಮರ್ಥ್ಯರೂಪನಾದ ಕೃಷ್ಣನಿಗೆ ನಮಸ್ಕಾರ.

ಸಹಸ್ರಶಿರಸೇ ತಸ್ಮೈ ಪುರುಷಾಯಾಮಿತಾತ್ಮನೇ।
ಚತುಃಸಮುದ್ರಪಯಸಿ ಯೋಗನಿದ್ರಾತ್ಮನೇ ನಮಃ ॥೫೯॥

ಸಹಸ್ರಶಿರಸ್ಸುಗಳನ್ನು ಹೊಂದಿದ, ಅಪರಿಮಿತವಾದ ಶರೀರವನ್ನು ಹೊಂದಿದ, ಚತುಃಸಮುದ್ರದ ನೀರಿನಲ್ಲಿ ಯೋಗನಿದ್ರಾರತನಾದ ಕೃಷ್ಣನಿಗೆ ನಮಸ್ಕಾರ.

ಆಜಸ್ಯ ನಾಭಾವಧ್ಯೇಕಂ ಯಸ್ಮಿನ್ ವಿಶ್ವಂ ಪ್ರತಿಷ್ಠಿತಮ್।
ಪುಷ್ಕರಂ ಪುಷ್ಕರಾಕ್ಷಸ್ಯ ತಸ್ಮೈ ಪದ್ಮಾತ್ಮನೇ ನಮಃ ॥೬೦॥

ಜನ್ಮರಹಿತನಾದ ಪುಂಡರೀಕಾಕ್ಷನಾದ ಯಾವನ ನಾಭಿಯಲ್ಲಿ ಲೋಕಾತ್ಮಕವಾದ ಪದ್ಮವು ಪ್ರತಿಷ್ಠಿತವಾಗಿದೆಯೋ ಅಂತಹ ಪದ್ಮವ್ಯಾಪ್ತನಾದ ಕೃಷ್ಣನಿಗೆ ನಮಸ್ಕಾರ.

ಯಸ್ಯ ಕೇಶೇಷು ಜೀಮೂತಾ ನದ್ಯಃ ಸರ್ವಾಂಗಸಂಧಿಷು।
ಕುಕ್ಷೌ ಸಮುದ್ರಾಶ್ಚತ್ವಾರಸ್ತಸ್ಮೈ ತೋಯಾತ್ಮನೇ ನಮಃ ॥೬೧॥

ಯಾವನ ತಲೆಕೂದಲುಗಳಲ್ಲಿ ಮೋಡಗಳೂ, ಸರ್ವಾಂಗಸಂಧಿಗಳಲ್ಲಿ ನದಿಗಳೂ, ಕುಕ್ಷಿಯಲ್ಲಿ ಸಮುದ್ರಗಳೂ ಇವೆಯೋ ಅಂತಹ ಜಲದಲ್ಲಿ ವ್ಯಾಪ್ತನಾದ ಕೃಷ್ಣನಿಗೆ ನಮಸ್ಕಾರ.

ಯಸ್ಮಾತ್ ಸರ್ವಾಃ ಪ್ರಸೂಯಂತೇ ಸರ್ಗಪ್ರಳಯವಿಕ್ರಿಯಾಃ।
ಯಸ್ಮಿಂಶ್ಚೈವ ಪ್ರಲೀಯಂತೇ ತಸ್ಮೈ ಹೇತ್ವಾತ್ಮನೇ ನಮಃ ॥೬೨॥

ಯಾವನಿಂದ ಸರ್ಗಪ್ರಳಯಾದಿ ಎಲ್ಲ ವಿಕಾರಗಳೂ ಉಂಟಾಗುತ್ತವೆಯೋ, ಯಾವನಲ್ಲಿ ಪ್ರಪಂಚವು ಪ್ರಳಯವನ್ನು ಹೊಂದುತ್ತವೆಯೋ ಅಂತಹ ಸರ್ವ-ಕಾರಣನಾದ ಕೃಷ್ಣನಿಗೆ ನಮಸ್ಕಾರ.

ಯೋ ನಿಷಣ್ಣೋ ಭವೇದ್ ರಾತ್ರೌ ದಿವಾ ಭವತಿ ವಿಷ್ಠಿತಃ।
ಇಷ್ಟಾನಿಷ್ಟಸ್ಯ ಚ ದ್ರಷ್ಟಾ ತಸ್ಮೈ ದ್ರಷ್ಟಾತ್ಮನೇ ನಮಃ ॥೬೩॥

ಯಾವನು ರಾತ್ರಿಯಲ್ಲಿ ಕುಳಿತು, ಹಗಲಿನಲ್ಲಿ ವಿಶೇಷವಾಗಿ ನಿಂತು ಜೀವರ ಇಷ್ಟಾನಿಷ್ಟಗಳನ್ನು ಸಾಕ್ಷಾತ್ತಾಗಿ ನೋಡುತ್ತಾನೆಯೋ ಅಂತಹ ಸಾಕ್ಷಿರೂಪನಾದ ಕೃಷ್ಣನಿಗೆ ನಮಸ್ಕಾರ.

ಅಕುಂಠಃ ಸರ್ವಕಾರ್ಯೇಷು ಧರ್ಮಕಾರ್ಯಾರ್ಥಮುದ್ಯತಮ್।
ವೈಕುಂಠಸ್ಯ ಹಿ ತದ್ರೂಪಂ ತಸ್ಮೈ ಕಾರ್ಯಾತ್ಮನೇ ನಮಃ ॥೬೪॥

ಯಾವ ಕಾರ್ಯಗಳಲ್ಲಿಯೂ ವಿಫಲನಾಗದೇ ಧರ್ಮಕಾರ್ಯಗಳಿಗಾಗಿ ಉದ್ಯುಕ್ತನಾದ ವೈಕುಂಠನಾದ ಕೃಷ್ಣರೂಪವೇನಿದೆಯೋ ಅಂತಹ ಸರ್ವಕಾರ್ಯ-ಸಾಧಕನಾದ ಕೃಷ್ಣನಿಗೆ ನಮಸ್ಕಾರ.

ತ್ರಿಃಸಪ್ತಕೃತ್ವೋ ಯಃ ಕ್ಷತ್ರಂ ಧರ್ಮವ್ಯತ್ಯಂತಗೌರವಮ್।
ಕ್ರುದ್ಧೋ ನಿಜಘ್ನೇ ಸಮರೇ ತಸ್ಮೈ ಕ್ರೌರ್ಯಾತ್ಮನೇ ನಮಃ ॥೬೫॥

ಯಾವನು ಧರ್ಮದ ಎಲ್ಲೆಯನ್ನು ಮೀರಿದ ಕ್ಷತ್ರಿಯರ ಮೇಲೆ ಕೋಪ-ಗೊಂಡು ಇಪ್ಪತ್ತೊಂದು ಬಾರಿ ಯುದ್ಧದಲ್ಲಿ ಕ್ಷತ್ರಿಯರನ್ನು ಸಂಹರಿಸಿದನೋ ಅಂತಹ ಕ್ರೌರ್ಯರೂಪನಾದ ಪರಶುರಾಮನಿಗೆ ನಮಸ್ಕಾರ.

ವಿಭಜ್ಯ ಪಂಚಧಾऽऽತ್ಮಾನಂ ವಾಯುಭೂತ್ವಾ ಶರೀರಗಃ।
ಯಶ್ಚೇಷ್ಟಯತಿ ಭೂತಾನಿ ತಸ್ಮೈ ವಾಯ್ವಾತ್ಮನೇ ನಮಃ ॥೬೬॥

ಪ್ರಾಣಾಪಾನಾದಿ ಪಂಚವಾಯುಗಳಲ್ಲಿ ತಾನೂ ಪ್ರಾಣಾಪಾನಾದಿ ಪಂಚರೂಪ-ಗಳನ್ನು ಧರಿಸಿ ಯಾವನು ಎಲ್ಲ ಪ್ರಾಣಿಗಳಿಗೂ ಚೇಷ್ಟೆಯನ್ನು ಉಂಟುಮಾಡು-ತ್ತಾನೆಯೋ ಅಂತಹ ವಾಯುಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯುಗೇಷ್ವಾವರ್ತತೇ ಯೋऽಂಶೈರ್ದಿನರ್ತ್ವಯನಹಾಯನೈಃ।
ಸರ್ಗಪ್ರಲಯಯೋಃ ಕರ್ತಾ ತಸ್ಮೈ ಕಾಲಾತ್ಮನೇ ನಮಃ ॥೬೭॥

ಯಾವನು ದಿನ, ಋತು, ಅಯನ, ಸಂವತ್ಸರ ಎಂಬ ಅಂಶಗಳಿಂದ ಯುಗಗಳನ್ನು ತಿರುಗಿಸುತ್ತಾ ಸೃಷ್ಟಿಪ್ರಳಯಗಳನ್ನು ಮಾಡುತ್ತಾನೆಯೋ ಅಂತಹ ಕಾಲರೂಪಿಯಾದ ಕೃಷ್ಣನಿಗೆ ನಮಸ್ಕಾರ.

ಬ್ರಹ್ಮ ವಕ್ತ್ರಂ ಭುಜೌ ಕ್ಷತ್ರಂ ಕೃತ್ಸ್ನಮೂರೂದರಂ ವಿಶಃ।
ಪಾದೌ ಯಸ್ಯಾಶ್ರಿತಾ ಶೂದ್ರಾಸ್ತಸ್ಮೈ ವರ್ಣಾತ್ಮನೇ ನಮಃ ॥೬೮॥

ಯಾವನ ಮುಖದಲ್ಲಿ ಬ್ರಾಹ್ಮಣಜಾತಿಯೂ, ಭುಜಗಳಲ್ಲಿ ಕ್ಷತ್ರಿಯ ಜಾತಿಯೂ, ಉದರ ಮತ್ತು ಊರುಗಳಲ್ಲಿ ವೈಶ್ಯಜಾತಿಯೂ, ಪಾದಗಳಲ್ಲಿ ಶೂದ್ರಜಾತಿಯೂ ಆಶ್ರಯಿಸಿಕೊಂಡಿವೆಯೋ ಅಂತಹ ವರ್ಣಗಳ ಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಪರಃ ಕಾಲಾತ್ ಪರೋ ಯಜ್ಞಾತ್ ಪರಂ ಸದಸತಶ್ಚ ಯಃ।
ಅನಾದಿರಾದಿರ್ವಿಶ್ವಸ್ಯ ತಸ್ಮೈ ವಿಶ್ವಾತ್ಮನೇ ನಮಃ ॥೬೯॥

ಯಾವನು ಕಾಲಕ್ಕಿಂತಲೂ ಪರನೋ, ಯಜ್ಞಕ್ಕಿಂತಲೂ ಪರನೋ, ಕಾರ್ಯಕಾರಣಗಳಿಗಿಂತಲೂ ಪರನೋ, ಯಾವನಿಗೆ ಆದಿಯಿಲ್ಲವೋ, ಮತ್ತು ಯಾವನು ವಿಶ್ವಕ್ಕೆ ಆದಿಯೋ ಅಂತಹ ವಿಶ್ವಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ವಿಷಯೇ ವರ್ತಮಾನಾನಾಂ ಯಂ ತಂ ವೈಶೇಷಿಕೈರ್ಗುಣೈಃ।
ಪ್ರಾಹುರ್ವಿಷಯಗೋಪ್ತಾರಂ ತಸ್ಮೈ ಗೋಪ್ತ್ರಾತ್ಮನೇ ನಮಃ ॥೭೦॥

ವಿಷಯಗಳಲ್ಲಿ ಅಭಿಲಾಷೆಯುಳ್ಳವರಿಗೆ ವಿಶೇಷಗುಣಗಳಿಂದ ಕೂಡಿದ ವಿಷಯಗಳನ್ನು ಒದಗಿಸಿ ಯಾವನನ್ನು ವಿಷಯಗಳನ್ನು ರಕ್ಷಿಸುವವನೆಂದು ಹೇಳುತ್ತಾರೆಯೋ ಅಂತಹ ರಕ್ಷಕನಾದ ಕೃಷ್ಣನಿಗೆ ನಮಸ್ಕಾರ.

ಅನ್ನಪಾನೇಂಧನಮಯೋ ರಸಪ್ರಾಣವಿವರ್ಧನಃ।
ಯೋ ಧಾರಯತಿ ಭೂತಾನಿ ತಸ್ಮೈ ಪ್ರಾಣಾತ್ಮನೇ ನಮಃ ॥೭೧॥

ಯಾವನು ಅನ್ನಪಾನಗಳೆಂಬ ಇಂಧನಗಳನ್ನು ಹೊಂದಿದವನಾಗಿ ಜೀವರ ರಸ

ಮತ್ತು ಪ್ರಾಣಗಳನ್ನು ಅಭಿವೃದ್ಧಿಪಡಿಸುತ್ತಾನೆಯೋ, ಯಾವನು ಎಲ್ಲ ಭೂತಗಳನ್ನೂ ಧರಿಸುತ್ತಾನೆಯೋ ಅಂತಹ ಶರೀರಚೇಷ್ಟಕನಾದ ಕೃಷ್ಣನಿಗೆ ನಮಸ್ಕಾರ.

ಪ್ರಾಣಾನಾಂ ಧಾರಣಾರ್ಥಾಯ ಯೋಽನ್ನಂ ಭುಂಕ್ತೇ ಚತುರ್ವಿಧಮ್ ।
ಅಂತರ್ಭೂತಃ ಪಚತ್ಯಗ್ನಿಸ್ತಸ್ಮೈ ಪಾಕಾತ್ಮನೇ ನಮಃ ॥೭೨॥

ಜೀವರು ಪ್ರಾಣಗಳನ್ನು ಧರಿಸುವ ಸಲುವಾಗಿ ಯಾವನು ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯ ರೂಪವಾದ ನಾಲ್ಕುವಿಧವಾದ ಅನ್ನವನ್ನು ಭುಂಜಿಸುತ್ತಾನೆಯೋ, ಯಾವನು ಉದರದಲ್ಲಿ ವೈಶ್ವಾನರನಾಮಕ ಅಗ್ನಿಯಾಗಿದ್ದು ಆ ಅನ್ನವನ್ನು ಪಚನ ಮಾಡುತ್ತಾನೆಯೋ ಅಂತಹ ಪಾಕಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಅಪ್ರಮೇಯಶರೀರಾಯ ಸರ್ವತೋ ಬುದ್ಧಿಚಕ್ಷುಷೇ ।
ಅಪಾರಪರಿಮಾಣಾಯ ತಸ್ಮೈ ದಿವ್ಯಾತ್ಮನೇ ನಮಃ ॥೭೩॥

ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದ ಶರೀರವನ್ನು ಹೊಂದಿದ, ವ್ಯಾಪ್ತವಾದ ಬುದ್ಧಿ ಮತ್ತು ಚಕ್ಷುರಾದಿ ಇಂದ್ರಿಯಗಳನ್ನು ಹೊಂದಿದ, ಎಲ್ಲೆಯೇ ಇಲ್ಲದ ಪರಿಮಾಣವನ್ನು ಹೊಂದಿದ ದಿವ್ಯರೂಪನಾದ ಕೃಷ್ಣನಿಗೆ ನಮಸ್ಕಾರ.

ರಸಸ್ಯಾಂತರ್ಗತೋ ಧೀಮಾನನಂತೋ ಭಗವಾನ್ ವಿಭುಃ ।
ಜಗದ್ ಧಾರಯತೇ ಕೃತ್ಸ್ನಂ ತಸ್ಮೈ ಶೇಷಾತ್ಮನೇ ನಮಃ ॥೭೪॥

ಭಗವಂತನೂ ವ್ಯಾಪ್ತನಾದವನೂ ಸಂಪದ್ಯುಕ್ತನಾದವನೂ ಆದ ಕೃಷ್ಣನು ಅನಂತನಾಮಕನಾಗಿ ಅನಂತನಾಮಕನಾದ ಶೇಷನ ಒಳಗಿದ್ದು, ರಸಾತಳರೂಪದಲ್ಲಿ ಇದ್ದು, ಸಮಸ್ತಜಗತ್ತನ್ನು ಧರಿಸುತ್ತಾನೆಯೋ ಅಂತಹ ಶೇಷಾತ್ಮಕನಾದ ಕೃಷ್ಣನಿಗೆ ನಮಸ್ಕಾರ.

ಜ್ವಲನಾರ್ಕೇಂದುತಾರಾಣಾಂ ಜ್ಯೋತಿಷಾಂ ದಿವ್ಯಮೂರ್ತಿನಾಮ್ ।
ಯಸ್ತೇಜಯತಿ ತೇಜಾಂಸಿ ತಸ್ಮೈ ತೇಜಾತ್ಮನೇ ನಮಃ ॥೭೫॥

ಯಾವನು ದಿವ್ಯಸ್ವರೂಪವುಳ್ಳ ಅಗ್ನಿ ಸೂರ್ಯ ಚಂದ್ರ ನಕ್ಷತ್ರಗಳು ಮೊದಲಾದ

ಜ್ಯೋತಿಸ್ಸುಗಳಿಗೆ ಅವುಗಳ ಜ್ಯೋತಿಸ್ಸನ್ನು ಅಭಿವೃದ್ಧಿಪಡಿಸುತ್ತಾನೆಯೋ ಅಂತಹ ಸ್ವತಃ ತೇಜೋರೂಪನಾದ ಕೃಷ್ಣನಿಗೆ ನಮಸ್ಕಾರ.

ಯೋ ಮೋಹಯತಿ ಭೂತಾನಿ ಸ್ನೇಹರಾಗಾನುಬಂಧನೈಃ।
ಸರ್ಗಸ್ಯ ರಕ್ಷಣಾರ್ಥಾಯ ತಸ್ಮೈ ಮೋಹಾತ್ಮನೇ ನಮಃ ॥೭೬॥

ಯಾವನು ಸೃಷ್ಟಿಯನ್ನು ರಕ್ಷಿಸುವುದಕ್ಕಾಗಿ ಪ್ರಾಣಿಗಳಿಗೆ ಸ್ನೇಹ, ರಾಗ, ಪ್ರೀತಿ-ಗಳನ್ನು ಕೊಟ್ಟು ಮೋಹ ಪಡಿಸುತ್ತಾನೆಯೋ ಅಂತಹ ಮೋಹಪ್ರದನಾದ ಕೃಷ್ಣನಿಗೆ ನಮಸ್ಕಾರ.

ಆತ್ಮಜ್ಞಾನಮಿದಂ ಜ್ಞಾನಂ ಜ್ಞಾತ್ವಾ ಪಂಚಸ್ವವಸ್ಥಿತಮ್।
ಯಂ ಜ್ಞಾನಿನೋಽಧಿಗಚ್ಛಂತಿ ತಸ್ಮೈ ಜ್ಞಾನಾತ್ಮನೇ ನಮಃ ॥೭೭॥

ಶುದ್ಧವಾದ ಆತ್ಮಜ್ಞಾನವು ದೇವ ಋಷಿ ಪಿತೃ ಚಕ್ರವರ್ತಿ ಮನುಷ್ಯೋತ್ತಮರೆಂಬ ಐದು ವಿಧ ಜೀವರಲ್ಲಿ ಇದೆ ಎಂದು ತಿಳಿದು ಯಾವ ಜ್ಞಾನಿಗಳು ಅವನನ್ನು ಹೊಂದುತ್ತಾರೆಯೋ ಅಂತಹ ಜ್ಞಾನರೂಪನಾದ ಕೃಷ್ಣನಿಗೆ ನಮಸ್ಕಾರ.

ಜಟಿನೇ ದಂಡಿನೇ ನಿತ್ಯಂ ಲಂಬೋದರಶರೀರಿಣೇ।
ಕಮಂಡಲುನಿಷಂಗಾಯ ತಸ್ಮೈ ಬ್ರಹ್ಮಾತ್ಮನೇ ನಮಃ ॥೭೮॥

ಜಟೆಯನ್ನು ಧರಿಸಿ, ದಂಡವನ್ನು ಹಿಡಿದು, ನಿತ್ಯವೂ ಲಂಬೋದರಶರೀರವುಳ್ಳ ಕಮಂಡಲು ಧಾರಿಯಾದ ಬ್ರಹ್ಮನ ಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಸಾಂಖ್ಯೈರ್ಯೋಗೈರ್ವಿನಿಶ್ಚಿತ್ಯ ಸಾಧ್ಯೈಶ್ಚ ಪರಮರ್ಷಿಭಿಃ।
ಯಸ್ಯ ನ ಜ್ಞಾಯತೇ ತತ್ವಂ ತಸ್ಮೈ ಗುಹ್ಯಾತ್ಮನೇ ನಮಃ ॥೭೯॥

ಸಾಧ್ಯರು ಮತ್ತು ಪರಮ ಋಷಿಗಳು ಸಾಂಖ್ಯಶಾಸ್ತ್ರವನ್ನು ಯೋಗಶಾಸ್ತ್ರವನ್ನು ತಿಳಿದರೂ ಯಾವನ ಸ್ವರೂಪವನ್ನು ಸರಿಯಾಗಿ ತಿಳಿಯುವುದಿಲ್ಲವೋ ಅಂತಹ ರಹಸ್ಯರೂಪನಾದ ಕೃಷ್ಣನಿಗೆ ನಮಸ್ಕಾರ.

ಪಂಚಭೂತಾತ್ಮಭೂತಾಯ ಭೂತಾದಿನಿಧನಾತ್ಮನೇ।
ಅಕ್ರೋಧದ್ರೋಹಮೋಹಾಯ ತಸ್ಮೈ ಶಾಂತಾತ್ಮನೇ ನಮಃ ॥೮೦॥

ಯಾವನು ಪಂಚಭೂತಗಳ ಅಂತರ್ಯಾಮಿಯಾಗಿ ಅವುಗಳ ಉತ್ಪತ್ತಿ ಮತ್ತು ಸಂಹಾರಕ್ಕೆ ಕಾರಣನಾಗಿದ್ದಾನೆಯೋ, ಕ್ರೋಧದ್ರೋಹಮೋಹಗಳಿಂದ ದೂರನಾಗಿದ್ದಾನೆಯೋ ಅಂತಹ ಶಾಂತರೂಪನಾದ ಕೃಷ್ಣನಿಗೆ ನಮಸ್ಕಾರ.

ಯಸ್ಮಿನ್ ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ।
ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ॥೮೧॥

ಯಾವನಲ್ಲಿ ಎಲ್ಲವೂ ಆಶ್ರಿತವಾಗಿವೆಯೋ, ಯಾವನಿಂದ ಎಲ್ಲವೂ ಇವೆಯೋ, ಯಾವನು ಎಲ್ಲಕ್ಕೂ ಒಡೆಯನೋ, ಯಾವನು ಸರ್ವತ್ರವ್ಯಾಪ್ತನೋ, ಯಾವನು ನಿತ್ಯವೂ ಸರ್ವಪ್ರಧಾನನೋ ಅಂತಹ ಸರ್ವಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯಂ ಹಿ ಸೂಕ್ಷ್ಮಂ ವಿಚಿನ್ವಂತಿ ಪರಂ ಸೂಕ್ಷ್ಮವಿದೋ ಜನಾಃ।
ಸೂಕ್ಷ್ಮಂ ತತ್ತ್ವಮಪಿ ಬ್ರಹ್ಮ ತಸ್ಮೈ ಸೂಕ್ಷ್ಮಾತ್ಮನೇ ನಮಃ ॥೮೨॥

ಸೂಕ್ಷ್ಮಜ್ಞಾನಿಗಳಾದ ಜೀವರು ಅತ್ಯಂತಸೂಕ್ಷ್ಮನಾದ ಯಾವ ಬ್ರಹ್ಮತತ್ವವನ್ನು ಹುಡುಕುತ್ತಾರೆಯೋ ಅಂತಹ ಸೂಕ್ಷ್ಮರೂಪನಾದ ಕೃಷ್ಣನಿಗೆ ನಮಸ್ಕಾರ.

ಯಃ ಶೇತೇ ಕ್ಷೀರಪರ್ಯಂಕೇ ದಿವ್ಯೇ ನಾಗವಿಭೂಷಿತೇ।
ಫಣಾಸಹಸ್ರರುಚಿರೇ ತಸ್ಮೈ ನಿದ್ರಾತ್ಮನೇ ನಮಃ ॥೮೩॥

ಯಾವನು ಕ್ಷೀರಸಮುದ್ರದಲ್ಲಿ ಸಹಸ್ರಫಣಗಳಿಂದ ಮನೋಹರವಾಗಿ ಕಾಣುವ ಶೇಷನಿಂದ ಭೂಷಿತವಾದ ದಿವ್ಯಪರ್ಯಂಕದಲ್ಲಿ ಮಲಗುತ್ತಾನೆಯೋ ಅಂತಹ ನಿದ್ರಾಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ವಿಶ್ವೇ ಚ ಮರುತಶ್ಚೈವ ರುದ್ರಾದಿತ್ಯಾಶ್ವಿನಾವಪಿ।
ವಸವಃ ಸಿದ್ಧಸಾಧ್ಯಾಶ್ಚ ತಸ್ಮೈ ದೇವಾತ್ಮನೇ ನಮಃ ॥೮೪॥

ವಿಶ್ವೇದೇವತೆಗಳು, ಮರುತ್ತುಗಳು, ರುದ್ರರು, ಆದಿತ್ಯರು, ಅಶ್ವಿನಿಗಳು, ವಸುಗಳು, ಸಿದ್ಧರು, ಸಾಧ್ಯರು– ಇಂತಹ ದೇವತೆಗಳ ಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಅವ್ಯಕ್ತಂ ಬುದ್ಧ್ಯಹಂಕಾರೋ ಮನೋಬುದ್ಧೀಂದ್ರಿಯಾಣಿ ಚ।
ತನ್ಮಾತ್ರಾಣಿ ವಿಶೇಷಾಶ್ಚ ತಸ್ಮೈ ತತ್ತ್ವಾತ್ಮನೇ ನಮಃ ॥೮೫॥

ಅವ್ಯಕ್ತತತ್ವ, ಬುದ್ಧಿ, ಅಹಂಕಾರ, ಮನಸ್ಸು, ಇಂದ್ರಿಯಗಳು, ಶಬ್ದಾದಿತನ್ಮಾತ್ರಗಳು ಅವುಗಳ ವಿಶೇಷಗಳು ಯಾವನ ಅಧೀನವಾಗಿವೆಯೋ ಅಂತಹ ತತ್ತ್ವವ್ಯಾಪ್ತನಾದ ಕೃಷ್ಣನಿಗೆ ನಮಸ್ಕಾರ.

ಭೂತಂ ಭವ್ಯಂ ಭವಿಷ್ಯಚ್ಚ ಭೂತಾದಿಪ್ರಭವಾಪ್ಯಯಃ।
ಯೋऽಗ್ರಜಃ ಸರ್ವಭೂತಾನಾಂ ತಸ್ಮೈ ಭೂತಾತ್ಮನೇ ನಮಃ ॥೮೬॥

ಯಾವನು ಭೂತಭವ್ಯಭವಿಷ್ಯತ್ತುಗಳಿಗೆ ಒಡೆಯನೋ, ಎಲ್ಲ ಭೂತಗಳ ಉತ್ಪತ್ತಿ ಸಂಹಾರಗಳಿಗೆ ಕಾರಣನೋ, ಎಲ್ಲ ಭೂತಗಳ ಉತ್ಪತ್ತಿಗಿಂತ ಮೊದಲೇ ಇರುವವನೋ ಅಂತಹ ಭೂತವ್ಯಾಪ್ತನಾದ ಕೃಷ್ಣನಿಗೆ ನಮಸ್ಕಾರ.

ವಾರಾಹಂ ರೂಪಮಾಸ್ಥಾಯ ಮಹೀಂ ಸವನಪರ್ವತಾಮ್ ।
ಉದ್ಧರತ್ಯೇಕದಂಷ್ಟ್ರೇಣ ತಸ್ಮೈ ಕ್ರೋಡಾತ್ಮನೇ ನಮಃ ॥೮೭॥

ವರಾಹರೂಪವನ್ನು ಧರಿಸಿ ಕಾನನ ಪರ್ವತಗಳಿಂದ ಸಹಿತವಾದ ಭೂಮಿಯನ್ನು ಒಂದು ಕೋರೆದಾಡೆಯ ಮೇಲೆ ಎತ್ತಿದ ವರಾಹರೂಪನಾದ ಆ ಕೃಷ್ಣನಿಗೆ ನಮಸ್ಕಾರ.

ನಾರಸಿಂಹವಪುಃ ಕೃತ್ವಾ ಸರ್ವಲೋಕಭಯಂಕರಮ್ ।
ಹಿರಣ್ಯಕಶಿಪುಂ ಜಘ್ನೇ ತಸ್ಮೈ ಸಿಂಹಾತ್ಮನೇ ನಮಃ ॥೮೮॥

ಸರ್ವಲೋಕಭಯಂಕರವಾದ ನರಸಿಂಹರೂಪವನ್ನು ಧರಿಸಿ ಹಿರಣ್ಯಕಶಿಪುವನ್ನು ಸಂಹರಿಸಿದ ನರಸಿಂಹರೂಪಿಯಾದ ಕೃಷ್ಣನಿಗೆ ನಮಸ್ಕಾರ.

ಪಿಂಗೇಕ್ಷಣಸಟಂ ಯಸ್ಯ ರೂಪಂ ದಂಷ್ಟ್ರಾನಖೈರ್ಯುತಮ್ ।
ದಾನವೇಂದ್ರಾಂತಕರಣಂ ತಸ್ಮೈ ದೃಪ್ತಾತ್ಮನೇ ನಮಃ ॥೪೯॥

ಕಂದು ಬಣ್ಣದ ಕಣ್ಣುಗಳು ಮತ್ತು ಸಟೆಗಳನ್ನು ಹೊಂದಿದ ದಂಷ್ಟ್ರಾನಖಗಳಿಂದ ಕೂಡಿದ ಯಾವನ ರೂಪವು ದಾನವೇಂದ್ರನಾದ ಹಿರಣ್ಯಕಶಿಪುವನ್ನು ಸಂಹರಿಸಿತೋ ದರ್ಪಿಷ್ಠವಾದ ರೂಪವನ್ನು ಧರಿಸಿದ ಅಂತಹ ಕೃಷ್ಣನಿಗೆ ನಮಸ್ಕಾರ.

ವಾಮನಂ ರೂಪಮಾಸ್ಥಾಯ ಬಲಿಂ ಸಂಯಮ್ಯ ಮಾಯಯಾ ।
ತ್ರೈಲೋಕ್ಯಂ ಕ್ರಾಂತವಾನ್ ಯಸ್ತು ತಸ್ಮೈ ಕ್ರಾಂತಾತ್ಮನೇ ನಮಃ ॥೫೦॥

ವಾಮನರೂಪವನ್ನು ಧರಿಸಿ, ತನ್ನ ಸಾಮರ್ಥ್ಯದಿಂದ ಬಲಿಯನ್ನು ನಿಯಂತ್ರಿಸಿ, ಮೂರು ಲೋಕವನ್ನೂ ಅಳೆದ ತ್ರಿವಿಕ್ರಮರೂಪಿಯಾದ ಕೃಷ್ಣನಿಗೆ ನಮಸ್ಕಾರ.

ಜಮದಗ್ನಿಸುತೋ ಭೂತ್ವಾ ರಾಮಃ ಶಸ್ತ್ರಭೃತಾಂವರಃ ।
ಮಹೀಂ ನಿಃಕ್ಷತ್ರಿಯಾಂ ಚಕ್ರೇ ತಸ್ಮೈ ರಾಮಾತ್ಮನೇ ನಮಃ ॥೫೧॥

ಜಮದಗ್ನಿಪುತ್ರನಾಗಿ ಜನಿಸಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಪರಶುರಾಮನಾಗಿ ಭೂಮಿಯಲ್ಲಿ ಕ್ಷತ್ರಿಯರಿಲ್ಲದಿರುವಂತೆ ಮಾಡಿದ ಪರಶುರಾಮರೂಪಿಯಾದ ಕೃಷ್ಣನಿಗೆ ನಮಸ್ಕಾರ.

ತ್ರಿಃಸಪ್ತಕೃತ್ವೋ ಯಶ್ಚೈಕೋ ಧರ್ಮೇ ವ್ಯುತ್ಕ್ರಾಂತಿಗೌರವಾತ್ ।
ಜಘಾನ ಕ್ಷತ್ರಿಯಾನ್ ಸಂಖೇ ತಸ್ಮೈ ಕ್ರೋಧಾತ್ಮನೇ ನಮಃ ॥೫೨॥

ಯಾವ ಒಬ್ಬನೇ ಧರ್ಮಮಾರ್ಗವನ್ನು ಮೀರಿದ ಕ್ಷತ್ರಿಯರನ್ನು ಇಪ್ಪತ್ತೊಂದು ಬಾರಿ ಭೂಮಿಯಲ್ಲಿ ಸಂಚರಿಸಿ ಯುದ್ಧದಲ್ಲಿ ಸಂಹರಿಸಿದನೋ ಅಂತಹ ಕೃಷ್ಣನಿಗೆ ನಮಸ್ಕಾರ.

ರಾಮೋ ದಾಶರಥಿರ್ಭೂತ್ವಾ ಪುಲಸ್ತ್ಯಕುಲನಂದನಮ್ ।
ಜಘಾನ ರಾವಣಂ ಸಂಖೇ ತಸ್ಮೈ ಕ್ಷತ್ರಾತ್ಮನೇ ನಮಃ ॥೫೩॥

ದಶರಥನಪುತ್ರನಾಗಿ ರಾಮನಾಗಿ ಅವತರಿಸಿ ಪುಲಸ್ತ್ಯಕುಲನಂದನನಾದ ರಾವಣ -ನನ್ನು ಯುದ್ಧದಲ್ಲಿ ಸಂಹರಿಸಿದ ಕ್ಷತ್ರಿಯರೂಪಿಯಾದ ಕೃಷ್ಣನಿಗೆ ನಮಸ್ಕಾರ.

ಯೋ ಹಲೀ ಮುಸಲೀ ಶ್ರೀಮಾನ್ ನೀಲಾಂಬರಧರಃ ಸ್ಥಿತಃ।
ರಾಮಾಯ ರೌಹಿಣೇಯಾಯ ತಸ್ಮೈ ಭೋಗಾತ್ಮನೇ ನಮಃ ॥೯೪॥

ಯಾವನು ಹಲ ಮುಸಲಗಳನ್ನು ಧರಿಸಿ ಸಂಪದ್ಯುಕ್ತನಾಗಿ ನೀಲಾಂಬರಧಾರಿ-ಯಾಗಿದ್ದಾನೆಯೋ ಅಂತಹ ರೋಹಿಣೀ ಪುತ್ರನಾದ ಬಲರಾಮನಾದ ಶೇಷನ ಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಶಂಖಿನೇ ಚಕ್ರಿಣೇ ನಿತ್ಯಂ ಶಾರ್ಙ್ಗಿಣೇ ಪೀತವಾಸಸೇ।
ವನಮಾಲಾಧರಾಯೈವ ತಸ್ಮೈ ಕೃಷ್ಣಾತ್ಮನೇ ನಮಃ ॥೯೫॥

ಶಂಖಚಕ್ರಗಳನ್ನು ಧರಿಸಿ ನಿತ್ಯವೂ ಶಾರ್ಙ್ಗಧನುಸ್ಸನ್ನೂ, ಪೀತಾಂಬರವನ್ನೂ ವನಮಾಲೆಯನ್ನೂ ಧರಿಸಿದ ಕೃಷ್ಣರೂಪನಾದ ನಿನಗೆ ನಮಸ್ಕಾರ.

ವಾಸುದೇವತ್ವಮಾಗಮ್ಯ ಯದೋರ್ವಂಶಸಮುದ್ಭವಃ।
ಭೂಭಾರಹರಣಂ ಚಕ್ರೇ ತಸ್ಮೈ ಕೃಷ್ಣಾತ್ಮನೇ ನಮಃ ॥೯೬॥

ಯದುವಂಶದಲ್ಲಿ ವಸುದೇವನ ಪುತ್ರನಾಗಿ ಅವತರಿಸಿ ಭೂಭಾರಹರಣವನ್ನು ಮಾಡಿದ ಕೃಷ್ಣರೂಪಿಯಾದ ನಿನಗೆ ನಮಸ್ಕಾರ.

ದಾನವಾಂಸ್ತು ವಶೇ ಕೃತ್ವಾ ಪುನರ್ಬುದ್ಧತ್ವಮಾಗತಃ।
ಸರ್ಗಸ್ಯ ರಕ್ಷಣಾರ್ಥಾಯ ತಸ್ಮೈ ಬುದ್ಧಾತ್ಮನೇ ನಮಃ ॥೯೭॥

ಪುನಃ ಬುದ್ಧನಾಗಿ ಅವತರಿಸಿ ದಾನವರನ್ನು ವಶಪಡಿಸಿಕೊಂಡು ಜಗತ್ಸೃಷ್ಟಿ-ಯನ್ನು ರಕ್ಷಿಸಿದ ಬುದ್ಧರೂಪನಾದ ಕೃಷ್ಣನಿಗೆ ನಮಸ್ಕಾರ.

ಹನಿಷ್ಯತಿ ಕಲೌ ಪ್ರಾಪ್ತೇ ಮ್ಲೇಚ್ಛಾಂಸ್ತುರಗವಾಹನಃ।
ಧರ್ಮಸಂಸ್ಥಾಪಕೋ ಯಸ್ತು ತಸ್ಮೈ ಕಲ್ಕ್ಯಾತ್ಮನೇ ನಮಃ ॥೯೮॥

ಯಾವನು ಕಲಿಯುಗವು ಪ್ರಾಪ್ತವಾದಾಗ ತುರಗವಾಹನನಾಗಿ ಮ್ಲೇಚ್ಛರನ್ನು ಸಂಹರಿಸಿ ಧರ್ಮಸಂಸ್ಥಾಪನೆಯನ್ನು ಮಾಡುವನೋ ಅಂತಹ ಕಲ್ಕಿರೂಪನಾದ ಕೃಷ್ಣನಿಗೆ ನಮಸ್ಕಾರ.

ತಾರಾನ್ವಯೇ ಕಾಲನೇಮಿಂ ಹತ್ವಾ ದಾನವಪುಂಗವಮ್ ।
ದದೌ ರಾಜ್ಯಂ ಮಹೇಂದ್ರಾಯ ತಸ್ಮೈ ಸಾಂಖ್ಯಾತ್ಮನೇ ನಮಃ ॥೯೯॥

ತಾರವಂಶದಲ್ಲಿ ಜನಿಸಿದ ದಾನವಪುಂಗವನಾದ ಕಾಲನೇಮಿಯನ್ನು ಕೊಂದು ಇಂದ್ರನಿಗೆ ರಾಜ್ಯವನ್ನು ಕೊಟ್ಟ ಯುದ್ಧಸ್ವಾಮಿಯಾದ ಕೃಷ್ಣನಿಗೆ ನಮಸ್ಕಾರ.

ಯಃ ಸರ್ವಪ್ರಾಣಿನಾಂ ದೇಹೇ ಸಾಕ್ಷಿಭೂತೋ ಹ್ಯವಸ್ಥಿತಃ ।
ಅಕ್ಷರಃ ಕ್ಷರಮಾಣಾನಾಂ ತಸ್ಮೈ ಸಾಕ್ಷ್ಯಾತ್ಮನೇ ನಮಃ ॥೧೦೦॥

ಯಾವನು ನಾಶವನ್ನು ಹೊಂದುವ ಸರ್ವಪ್ರಾಣಿಗಳ ಶರೀರದಲ್ಲಿ ಸ್ವತಃ ನಾಶರಹಿತನಾಗಿ ಸಾಕ್ಷಿಯಾಗಿದ್ದಾನೆಯೋ ಅಂತಹ ಸಾಕ್ಷಿರೂಪನಾದ ಕೃಷ್ಣನಿಗೆ ನಮಸ್ಕಾರ.

ನಮೋಽಸ್ತು ತೇ ಮಹಾದೇವ ನಮಸ್ತೇ ಭಕ್ತವತ್ಸಲ ।
ಸುಬ್ರಹ್ಮಣ್ಯ ನಮಸ್ತೇಽಸ್ತು ಪ್ರಸೀದ ಪರಮೇಶ್ವರ ॥೧೦೧॥

ಎಲೈ ಮಹಾದೇವನೇ! ಭಕ್ತವತ್ಸಲನೇ! ನಿನಗೆ ನಮಸ್ಕಾರ. ಸುಬ್ರಹ್ಮಣ್ಯನೇ! ನಿನಗೆ ನಮಸ್ಕಾರ. ಪರಮೇಶ್ವರನೇ! ಪ್ರಸನ್ನನಾಗು.

ಅವ್ಯಕ್ತವ್ಯಕ್ತರೂಪೇಣ ವ್ಯಾಪ್ತಂ ಸರ್ವಂ ತ್ವಯಾ ವಿಭೋ ।
ನಾರಾಯಣಂ ಸಹಸ್ರಾಕ್ಷಂ ಸರ್ವಲೋಕಮಹೇಶ್ವರಮ್ ॥೧೦೨॥

ಹಿರಣ್ಯನಾಭಂ ಯಜ್ಞಾಂಗಮಮೃತಂ ವಿಶ್ವತೋಮುಖಮ್ ।

ಅವ್ಯಕ್ತ ಮತ್ತು ವ್ಯಕ್ತರೂಪದಿಂದ ನೀನು ಎಲ್ಲವನ್ನೂ ವ್ಯಾಪಿಸಿದ್ದೀಯೆ. ಎಲೈ ವಿಭುವೇ! ನಾರಾಯಣನೇ! ಸಹಸ್ರಾಕ್ಷನೇ! ಸರ್ವಲೋಕಮಹೇಶ್ವರನೇ! ಹಿರಣ್ಯನಾಭನೇ! ಯಜ್ಞಾಂಗನೇ! ಅಮೃತನೇ! ವಿಶ್ವತೋಮುಖನೇ! ನಿನಗೆ ನಮಸ್ಕಾರ.

ಸರ್ವದಾ ಸರ್ವಕಾರ್ಯೇಷು ನಾಸ್ತಿ ತೇಷಾಮಮಂಗಳಮ್ ॥೧೦೩॥

ಯೇಷಾಂ ಹೃದಿಸ್ಥೋ ದೇವೇಶೋ ಮಂಗಳಾಯತನಂ ಹರಿಃ।
ಮಂಗಳಂ ಭಗವಾನ್ ವಿಷ್ಣುರ್ಮಂಗಳಂ ಮಧುಸೂದನಃ ॥೧೦೪॥

ಮಂಗಳಂ ಪುಂಡರೀಕಾಕ್ಷೋ ಮಂಗಳಂ ಗರುಡಧ್ವಜಃ।

ಯಾರ ಹೃದಯದಲ್ಲಿ ದೇವೇಶನೂ, ಮಂಗಳಾಶ್ರಯನೂ ಆದ ಹರಿಯಿದ್ದಾನೆಯೋ ಅಂತಹವರಿಗೆ ಯಾವಾಗಲೂ ಯಾವ ಕಾರ್ಯಗಳಲ್ಲಿಯೂ ಅಮಂಗಳವಿಲ್ಲ. ಭಗವಂತನಾದ ವಿಷ್ಣುವು ಮಂಗಳಸ್ವರೂಪನಾದವನು. ಮಧುಸೂದನನು ಮಂಗಳಸ್ವರೂಪನಾದವನು. ಪುಂಡರೀಕಾಕ್ಷನು ಮಂಗಳಸ್ವರೂಪನಾದವನು. ಗರುಡಧ್ವಜನು ಮಂಗಳಸ್ವರೂಪನಾದವನು.

ವಿಶ್ವಕರ್ಮನ್ ನಮಸ್ತೇಽಸ್ತು ವಿಶ್ವಾತ್ಮನ್ ವಿಶ್ವಸಂಭವ ॥೧೦೫॥

ಅಪವರ್ಗಸ್ಥಭೂತಾನಾಂ ಪಂಚಾನಾಂ ಪರಮಾಸ್ಥಿತ।
ನಮಸ್ತೇ ತ್ರಿಷುಲೋಕೇಷು ನಮಸ್ತೇ ಪರತಸ್ತ್ರಿಷು ॥೧೦೬॥

ಎಲೈ ವಿಶ್ವಕರ್ಮನೇ! ವಿಶ್ವವ್ಯಾಪಕನೇ! ವಿಶ್ವಕಾರಣನೇ! ನಿನಗೆ ನಮಸ್ಕಾರ. ಮೋಕ್ಷದಲ್ಲಿರುವ ದೇವಾದಿಪಂಚವಿಧಜೀವರಿಂದ ಚೆನ್ನಾಗಿ ಆಶ್ರಯಿಸಲ್ಪಟ್ಟ ನಿನಗೆ ನಮಸ್ಕಾರ. ಮೂರು ಲೋಕಗಳಲ್ಲಿರುವ, ಮೂರುಲೋಕಗಳಿಂದಲೂ ಆಚೆಗಿರುವ ನಿನಗೆ ನಮಸ್ಕಾರ.

ನಮಸ್ತೇ ದಿಕ್ಷು ಸರ್ವಾಸು ತ್ವಂ ಹಿ ಸರ್ವಪರಾಯಣಮ್।
ನಮಸ್ತೇ ಭಗವನ್ ವಿಷ್ಣೋ ಲೋಕಾನಾಂ ಪ್ರಭವಾಪ್ಯಯಮ್ ॥೧೦೭॥

ಎಲ್ಲ ದಿಕ್ಕುಗಳಲ್ಲಿಯೂ ನಿನಗೆ ನಮಸ್ಕಾರ. ನೀನು ಎಲ್ಲರಿಗೂ ಶ್ರೇಷ್ಠನಾದ ಆಶ್ರಯನಾಗಿದ್ದೀಯೆ. ಲೋಕಗಳ ಉತ್ಪತ್ತಿ ಸಂಹಾರಗಳಿಗೆ ಕಾರಣನಾಗಿದ್ದೀಯೆ. ಭಗವಂತನಾದ ವಿಷ್ಣುವೇ! ನಿನಗೆ ನಮಸ್ಕಾರ.

ತ್ವಂ ಹಿ ಕರ್ತಾ ಹೃಷೀಕೇಶಃ ಸಂಹರ್ತಾ ಚಾಪರಾಜಿತಃ।
ತೇನ ಪಶ್ಯಾಮಿ ತೇ ದಿವ್ಯಾನ್ ಭಾವಾನ್ ಹಿ ತ್ರಿಷು ವರ್ತ್ಮಸು ॥೧೦೮॥

ಎಲೈ ಹೃಷೀಕೇಶನೇ! ನೀನೇ ಸೃಷ್ಟಿಕರ್ತನಾದವನು. ಸಂಹಾರಕರ್ತನಾದವನು. ಅಪರಾಜಿತನಾದವನು. ಆದ್ದರಿಂದ ಎಲ್ಲ ಮಾರ್ಗಗಳಲ್ಲಿಯೂ ನಿನ್ನ ದಿವ್ಯವಾದ ಮಹಿಮೆಗಳನ್ನು ನೋಡುತ್ತಿದ್ದೇನೆ.

ತಚ್ಚ ಪಶ್ಯಾಮಿ ತತ್ತ್ವೇನ ಯತ್ ತೇ ರೂಪಂ ಸನಾತನಮ್।
ದಿವಂ ತೇ ಶಿರಸಾ ವ್ಯಾಪ್ತಂ ಪದ್ಭ್ಯಾಂ ದೇವೀ ವಸುಂಧರಾ ॥೧೦೯॥

ವೇದಪ್ರತಿಪಾದ್ಯವಾದ ನಿನ್ನ ರೂಪವೇನಿದೆಯೋ ಅದನ್ನು ನೋಡುತ್ತಿದ್ದೇನೆ. ದ್ಯುಲೋಕವು ನಿನ್ನ ಶಿರಸ್ಸಿನಿಂದ ವ್ಯಾಪ್ತವಾಗಿದೆ. ಭೂಮಿಯು ನಿನ್ನ ಪಾದಗಳಿಂದ ವ್ಯಾಪ್ತವಾಗಿದೆ.

ವಿಕ್ರಮೇಣ ತ್ರಯೋ ಲೋಕಾಃ ಪುರುಷೋಽಸಿ ಸನಾತನಃ।
ದಿಶೋ ಭುಜಾ ರವಿಶ್ಚಕ್ಷುರ್ವೀರ್ಯೇ ಶುಕ್ರಃ ಪ್ರತಿಷ್ಠಿತಃ।
ಸಪ್ತಮಾರ್ಗಾ ನಿರುದ್ಧಾಸ್ತೇ ವಾಯೋರಮಿತತೇಜಸಃ ॥೧೧೦॥

ನಿನ್ನ ವಿಕ್ರಮದಿಂದ ಮೂರು ಲೋಕಗಳು ಅಳೆಯಲ್ಪಟ್ಟಿವೆ. ನೀನು ಸನಾತನನಾದ ಪುರುಷನಾಗಿದ್ದೀಯೆ. ದಿಕ್ಕುಗಳು ನಿನ್ನ ಭುಜಗಳು. ಸೂರ್ಯನು ಚಕ್ಷುಸ್ಸು. ನಿನ್ನ ವೀರ್ಯದಲ್ಲಿ ಶುಕ್ರನಿದ್ದಾನೆ. ಅಮಿತತೇಜಸ್ವಿಯಾದ ನಿನ್ನಿಂದ ವಾಯುವಿನ ಸಪ್ತಮಾರ್ಗಗಳು ನಿರೋಧಿಸಲ್ಪಟ್ಟಿವೆ.

ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್।
ಯೇ ನಮಸ್ಯಂತಿ ಗೋವಿಂದಂ ನ ತೇಷಾಂ ವಿದ್ಯತೇ ಭಯಮ್ ॥೧೧೧॥

ಅಗಸೆಯ ಪುಷ್ಪದ ಬಣ್ಣವನ್ನು ಹೊಂದಿರುವ, ಪೀತಾಂಬರಧಾರಿಯಾದ ಗೋವಿಂದನನ್ನು ಯಾರು ನಮಸ್ಕರಿಸುವರೋ ಅವರಿಗೆ ಭಯವಿಲ್ಲ.

ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮಃ ದಶಾಶ್ವಮೇಧಾವಭೃಥೇನ ತುಲ್ಯಃ।
ದಶಾಶ್ವಮೇಧೀ ಪುನರೇತಿ ಜನ್ಮ ಕೃಷ್ಣಪ್ರಣಾಮೀ ನ ಪುನರ್ಭವಾಯ ॥೧೧೨॥

ಕೃಷ್ಣನಿಗೆ ಮಾಡಿದ ಭಕ್ತಿಪೂರ್ವಕವಾದ ಒಂದು ಪ್ರಣಾಮವೂ ಸಹ ಹತ್ತು ಅಶ್ವಮೇಧಗಳ ಅವಭೃಥಸ್ನಾನಕ್ಕೆ ಸಮನಾದುದು. ಹತ್ತು ಅಶ್ವಮೇಧಯಜ್ಞಮಾಡಿದವನು ಪುನಃ ಜನ್ಮ ಪಡೆಯುತ್ತಾನೆ. ಕೃಷ್ಣಪ್ರಣಾಮಮಾಡಿದವನು ಪುನಃ ಜನ್ಮವನ್ನು ಪಡೆಯುವುದಿಲ್ಲ.

ಕೃಷ್ಣವ್ರತಾಃ ಕೃಷ್ಣಮನುಸ್ಮರಂತೋ
ರಾತ್ರೌ ಚ ಕೃಷ್ಣಂ ಪುನರುತ್ಥಿತಾ ಯೇ।
ತೇ ಕೃಷ್ಣದೇಹಾಃ ಪ್ರವಿಶಂತಿ ಕೃಷ್ಣಂ
ಆಜ್ಯಂ ಯಥಾ ಮಂತ್ರಹುತಂ ಹುತಾಶೈ ॥೧೧೩॥

ಯಾರು ಕೃಷ್ಣವ್ರತವನ್ನು ಧರಿಸಿ, ಕೃಷ್ಣನನ್ನು ಸ್ಮರಿಸುತ್ತಾ, ರಾತ್ರಿಯಲ್ಲಿಯೂ ಎದ್ದು ಕೃಷ್ಣನನ್ನು ಸ್ಮರಿಸುತ್ತಾರೆಯೋ ಅವರು ಕೃಷ್ಣನ ಸನ್ನಿಧಾನಕ್ಕೆ ಪಾತ್ರವಾದ ದೇಹವುಳ್ಳವರಾಗಿ ಮಂತ್ರಹುತವಾದ ಆಜ್ಯವು ಅಗ್ನಿಯನ್ನು ಪ್ರವೇಶಿಸುವಂತೆ ಕೃಷ್ಣನನ್ನು ಪ್ರವೇಶಿಸುತ್ತಾರೆ.

ನಮೋ ನರಕಸಂತ್ರಾಸರಕ್ಷಾಮಂಡಲಕಾರಿಣೇ।
ಸಂಸಾರನಿಮ್ನಗಾವರ್ತತರಿಕಾಷ್ಠಾಯ ವಿಷ್ಣವೇ ॥೧೧೪॥

ನರಕದ ಭಯದಿಂದ ರಕ್ಷಿಸುವ ನಿನಗೆ ನಮಸ್ಕಾರ. ಸಂಸಾರನದಿಯನ್ನು ದಾಟಿಸುವ ತೆಪ್ಪದಂತಿರುವ ವಿಷ್ಣುವಾದ ನಿನಗೆ ನಮಸ್ಕಾರ.

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥೧೧೫॥

ಬ್ರಾಹ್ಮಣವತ್ಸಲನಾದ, ಗೋಬ್ರಾಹ್ಮಣಹಿತನಾದ ನಿನಗೆ ನಮಸ್ಕಾರ. ಜಗತ್ತಿಗೆ ಹಿತನಾದ, ವೇದಪ್ರತಿಪಾದ್ಯನಾದ, ಕೃಷ್ಣನಾದ ನಿನಗೆ ನಮಸ್ಕಾರ ನಮಸ್ಕಾರ.

ಪ್ರಾಣಕಾಂತಾರಪಾಥೇಯಂ ಸಂಸಾರೋಚ್ಛೇದಭೇಷಜಮ್ ।
ದುಃಖಶೋಕಪರಿತ್ರಾಣಂ ಹರಿರಿತ್ಯಕ್ಷರದ್ವಯಮ್ ॥೧೧೬॥

ಹರಿಯೆಂಬ ಎರಡು ಅಕ್ಷರವು ಸಂಸಾರದ ಕಾಡಿನಲ್ಲಿ ತಿರುಗುವವರಿಗೆ ಪಾಥೇಯವಾದುದು. ಸಂಸಾರವನ್ನು ಪರಿಹರಿಸುವ ಔಷಧರೂಪವಾದುದು. ದುಃಖ-ಶೋಕಗಳ ನಿವಾರಕವಾದುದು.

ನಾರಾಯಣಪರಂ ಬ್ರಹ್ಮ ನಾರಾಯಣಪರಂ ತಪಃ ।
ನಾರಾಯಣಪರಂ ಸತ್ಯಂ ನಾರಾಯಣಪರಂ ಪರಮ್ ॥೧೧೭॥

ವೇದಗಳು ನಾರಾಯಣಪರವಾದವುಗಳು. ತಪಸ್ಸು ನಾರಾಯಣನ ಪ್ರೀತಿಯ ಉದ್ದೇಶದಿಂದ ಇರುವಂಥಹದು. ಸತ್ಯವಚನವು ನಾರಾಯಣನ ಪರವಾದುದು. ಶ್ರೇಷ್ಠವಾದುದೆಲ್ಲವೂ ನಾರಾಯಣಪರವಾದವುಗಳು.

ಯಥಾ ವಿಷ್ಣುಮಯಂ ಸತ್ಯಂ ಯಥಾ ವಿಷ್ಣುಮಯಂ ಹವಿಃ ।
ಯಥಾ ವಿಷ್ಣುಮಯಂ ಸರ್ವಂ ಪಾಪ್ಮಾ ಮೇ ನಶ್ಯತಾಂ ತಥಾ ॥೧೧೮॥

ಹೇಗೆ ಸತ್ಯವು ವಿಷ್ಣುಮಯವಾದುದೋ, ಹವಿಸ್ಸು ವಿಷ್ಣುಮಯವಾದುದೋ, ಎಲ್ಲವೂ ವಿಷ್ಣುಮಯವಾದುದೋ ಈ ಮಾತಿನ ಸತ್ಯದಿಂದ ನನ್ನ ಪಾಪವು ನಾಶವನ್ನು ಹೊಂದಲಿ.

ತಸ್ಯ ಯಜ್ಞವರಾಹಸ್ಯ ವಿಷ್ಣೋರಮಿತತೇಜಸಃ ।
ಪ್ರಣಾಮಂ ಯೇಽಪಿ ಕುರ್ವಂತಿ ತೇಷಾಮಪಿ ನಮೋನಮಃ ॥೧೧೯॥

ಅಮಿತತೇಜಸ್ವಿಯಾದ, ಯಜ್ಞವರಾಹರೂಪಿಯಾದ ವಿಷ್ಣುವಿಗೆ ಯಾರು ನಮಸ್ಕಾರ ಮಾಡುತ್ತಾರೆಯೋ ಅವರಿಗೂ ಸಹ ನಮಸ್ಕಾರಗಳು, ನಮಸ್ಕಾರಗಳು.

ತ್ವಾಂ ಪ್ರಪನ್ನಾಯ ಭಕ್ತಾಯ ಗತಿಮಿಷ್ಟಾಂ ಜಿಗೀಷವೇ ।
ಯಚ್ಛ್ರೇಯಃ ಪುಂಡರೀಕಾಕ್ಷ ತದ್ ಧ್ಯಾಯಸ್ವ ಸುರೋತ್ತಮ ॥೧೨೦॥

ಇತಿ ವಿದ್ಯಾತಪೋಯೋನಿರಯೋನಿರ್ವಿಷ್ಣುರೀಡಿತಃ।
ವಾಗ್ಯಜ್ಞೇನಾರ್ಚಿತೋ ದೇವಃ ಪ್ರೀಯತಾಂ ಮೇ ಜನಾರ್ದನಃ ॥೧೨೧॥

ಎಲೈ ಪುಂಡರೀಕಾಕ್ಷನೇ! ಎಲೈ ದೇವೋತ್ತಮನೇ! ಉತ್ತಮವಾದ ಗತಿಯನ್ನು ಹೊಂದಲು ಬಯಸಿ ನಿನಗೆ ಶರಣಾಗತನಾದ ನಿನ್ನ ಭಕ್ತನಾದ ನನಗೆ ಯಾವುದು ಶ್ರೇಯಸ್ಸೋ ಅದನ್ನು ಚಿಂತಿಸಿ ದಯಪಾಲಿಸು. ಹೀಗೆ ವಾಗ್ಯಜ್ಞದಿಂದ ನನ್ನಿಂದ ಅರ್ಚಿಸಲ್ಪಟ್ಟ ವಿದ್ಯಾತಪಸ್ಸುಗಳ ಉಗಮಸ್ಥಾನನೂ, ಅಯೋನಿಜನೂ, ದೇವನೂ, ಜನಾರ್ದನನೂ ಆದ ವಿಷ್ಣುವು ನನಗೆ ಪ್ರಸನ್ನನಾಗಲಿ.

ವೈಶಂಪಾಯನಃ

ಏತಾವದುಕ್ತ್ವಾ ವಚನಂ ಭೀಷ್ಮಸ್ತದ್ಗತಮಾನಸಃ।
ನಮ ಇತ್ಯೇವ ಕೃಷ್ಣಾಯ ಪ್ರಣಾಮಮಕರೋತ್ ತದಾ ॥೧೨೨॥

ವೈಶಂಪಾಯನರು – ಭೀಷ್ಮರು ಹೀಗೆ ಕೃಷ್ಣನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿ, ಇಷ್ಟು ಮಾತುಗಳನ್ನು ಹೇಳಿ, ನಮಸ್ಕಾರವೆಂದು ಹೇಳಿ ಕೃಷ್ಣನಿಗೆ ಪ್ರಣಾಮವನ್ನು ಮಾಡಿದರು.

ತಸ್ಮಿನ್ನುಪರತೇ ವಾಕ್ಯೇ ತತಸ್ತೇ ಬ್ರಹ್ಮವಾದಿನಃ।
ಭೀಷ್ಮಂ ವಾಗ್ಭಿರ್ಬಾಷ್ಪಗಲಾಸ್ತಮಾನರ್ಚುರ್ಮಹಾದ್ಯುತಿಮ್ ॥೧೨೩॥

ಭೀಷ್ಮರು ತಮ್ಮ ಮಾತನ್ನು ನಿಲ್ಲಿಸುತ್ತಿರಲು, ಬ್ರಹ್ಮವಾದಿಗಳು ಬಾಷ್ಪಕಂಠರಾಗಿ ಮಹಾದ್ಯುತಿಯನ್ನು ಹೊಂದಿದ ಭೀಷ್ಮರನ್ನು ತಮ್ಮ ಮಾತುಗಳಿಂದ ಅರ್ಚಿಸಿದರು.

ತೇऽಸ್ತುವಂತಶ್ಚ ವಿಪ್ರೇಂದ್ರಾಃ ಕೇಶವಂ ಪುರುಷೋತ್ತಮಮ್।
ಭೀಷ್ಮಂ ಚ ಶನಕೈಃ ಸರ್ವೇ ಪ್ರಶಶಂಸುಃ ಪುನಃಪುನಃ ॥೧೨೪॥

ಆ ವಿಪ್ರೇಂದ್ರರು ಪುರುಷೋತ್ತಮನಾದ ಕೇಶವನನ್ನೂ, ಭೀಷ್ಮರನ್ನೂ ಮೃದುವಾದ ಸ್ವರದಲ್ಲಿ ಪುನಃ ಪುನಃ ಪ್ರಶಂಸಿದರು.

ಅಧಿಗಮ್ಯ ತು ಯೋಗೇನ ಭಕ್ತಿಂ ಭೀಷ್ಮಸ್ಯ ಮಾಧವಃ।
ತ್ರೈಲೋಕ್ಯದರ್ಶನಂ ಜ್ಞಾನಂ ದಿವ್ಯಂ ದತ್ತ್ವಾ ಯಯೌ ಹರಿಃ ॥೧೨೫॥

ಮಾಧವನು ತನ್ನ ಯೋಗಶಕ್ತಿಯಿಂದ ಭೀಷ್ಮರ ಭಕ್ತಿಯೋಗವನ್ನು ತಿಳಿದು, ಅವರಿಗೆ ಮೂರು ಲೋಕಗಳನ್ನೂ ತೋರಿಸುವ ದಿವ್ಯಜ್ಞಾನವನ್ನು ಕರುಣಿಸಿ, ಹರಿಯಾದ ಅವನು ಅಲ್ಲಿಂದ ಹೊರಟನು.

ವಿದಿತ್ವಾ ಭಕ್ತಿಯೋಗಂ ತಂ ಭೀಷ್ಮಸ್ಯ ಪುರುಷೋತ್ತಮಃ।
ಸಹಸೋತ್ಥಾಯ ತಂ ಹೃಷ್ಟೋ ಯಾನಮೇವಾನ್ವಪದ್ಯತ ॥೧೨೬॥

ಪುರುಷೋತ್ತಮನಾದ ಕೃಷ್ಣನು ಭೀಷ್ಮರ ಭಕ್ತಿಯೋಗವನ್ನು ತಿಳಿದು ಸಂತೋಷಗೊಂಡು ತತ್‌ಕ್ಷಣದಲ್ಲಿಯೇ ಎದ್ದು ತನ್ನ ರಥವನ್ನು ಸೇರಿದನು.

ಕೇಶವಃ ಸಾತ್ಯಕಿಶ್ಚೈವ ರಥೇನೈಕೇನ ಜಗ್ಮತುಃ।
ಅಪರೇಣ ಮಹಾತ್ಮಾನೌ ಯುಧಿಷ್ಠಿರಧನಂಜಯೌ ॥೧೨೭॥

ಕೇಶವ ಮತ್ತು ಸಾತ್ಯಕಿಯರು ಒಂದೇ ರಥದಲ್ಲಿ ಹೊರಟರು. ಮಹಾತ್ಮರಾದ ಯುಧಿಷ್ಠಿರ ಮತ್ತು ಅರ್ಜುನರು ಇನ್ನೊಂದು ರಥದಲ್ಲಿ ಹೊರಟರು.

ಭೀಮಸೇನೋ ಯಮೌ ಚೋಭೌ ರಥಮೇಕಂ ಸಮಾಸ್ಥಿತಾಃ।
ಕೃಪೋ ಯುಯುತ್ಸುಃ ಸೂತಶ್ಚ ಸಂಜಯಶ್ಚಾಪರಂ ರಥಮ್ ॥೧೨೮॥

ಭೀಮಸೇನ ಮತ್ತು ನಕುಲಸಹದೇವರು ಒಂದು ರಥವನ್ನು ಏರಿದರು. ಕೃಪ, ಯುಯುತ್ಸು ಮತ್ತು ಸೂತನಾದ ಸಂಜಯ ಇವರು ಇನ್ನೊಂದು ರಥದಲ್ಲಿ ಹೊರಟರು.

ತೇ ರಥೈರ್ನಗರಾಕಾರೈಃ ಪ್ರಯಾತಾಃ ಪುರುಷರ್ಷಭಾಃ।
ನೇಮಿಘೋಷೇಣ ಮಹತಾ ಕಂಪಯಂತೋ ವಸುಂಧರಾಮ್ ॥೧೨೯॥

ಪುರುಷಶ್ರೇಷ್ಠರಾದ ಅವರು ಚಕ್ರದ ಮಹಾಘೋಷದಿಂದ ಭೂಮಿಯನ್ನು ನಡುಗಿಸುತ್ತಾ, ನಗರದಂತಿದ್ದ ತಮ್ಮ ರಥಗಳಲ್ಲಿ ಹೊರಟರು.

ತತೋ ಗಿರಃ ಪುರುಷವರಸ್ತವೇರಿತಾ
ದ್ವಿಜೇರಿತಾ ಪಥಿಷು ಮನಾಕ್ ಸ ಶುಶ್ರುವೇ।
ಕೃತಾಂಜಲಿಂ ಪ್ರಣತಮಥಾಪರಂ ಜನಂ
ಸ ಕೇಶಿಹಾ ಮುದಿತಮನಾಶ್ಚನಂದತ ॥೧೩೦॥

ಆಗ ಮಾರ್ಗಗಳಲ್ಲಿ ಶ್ರೇಷ್ಠಪುರುಷರಿಂದಲೂ, ಬ್ರಾಹ್ಮಣರಿಂದಲೂ ಉಚ್ಚರಿಸಲ್ಪಟ್ಟ ಪರಮಾತ್ಮನ ಸ್ತೋತ್ರರೂಪವಾದ ಶಬ್ದಗಳು ಕೇಳಿಬಂದವು. ಕೇಶಿಸೂದನನಾದ ಕೃಷ್ಣನು ಕೈಗಳನ್ನು ಮುಗಿದು ನಮಸ್ಕಾರ ಮಾಡಿ ನಿಂತಿದ್ದ ಉಳಿದ ಜನರನ್ನು ನೋಡಿ ಮನಸ್ಸಿನಲ್ಲಿ ಸಂತೋಷಗೊಂಡು ಅವರನ್ನು ಅಭಿನಂದಿಸಿದನು.

ಇತಿ ಸ್ಮರನ್ ಪಠತಿ ಚ ಶಾರ್ಙ್ಗಧನ್ವನಃ
ಶೃಣೋತಿ ವಾ ಯದುಕುಲನಂದನಸ್ತವಮ್।
ಸ ಚಕ್ರಭೃತ್ ಪ್ರತಿಹತಸರ್ವಕಿಲ್ಬಿಷೋ
ಜನಾರ್ದನಂ ಪ್ರವಿಶತಿ ದೇಹಸಂಕ್ಷಯೇ ॥೧೩೧॥

ಹೀಗೆ ಯಾರು ಕೃಷ್ಣನನ್ನು ಸ್ಮರಿಸಿ ಶಾರ್ಙ್ಗಧನುರ್ಧಾರಿಯಾದ ಯದುಕುಲನಂದನನಾದ ಅವನ ಈ ಸ್ತೋತ್ರವನ್ನು ಪಠಿಸುತ್ತಾನೆಯೋ (ಕೇಳುತ್ತಾನೆಯೋ) ಅವನು ಸುದರ್ಶನಧಾರಿಯಾದ ಕೃಷ್ಣನಿಂದ ಎಲ್ಲ ಪಾಪಗಳನ್ನೂ ಕಳೆದುಕೊಂಡು ದೇಹತ್ಯಾಗವನ್ನು ಮಾಡಿ ಜನಾರ್ದನನನ್ನು ಪ್ರವೇಶಿಸುತ್ತಾನೆ.

ಯಂ ಯೋಗಿನಃ ಪ್ರಾಣವಿಯೋಗಕಾಲೇ
ಯತ್ನೇನ ಚಿತ್ತೇ ವಿನಿವೇಶಯಂತಿ।
ಸ ತಂ ಪುರಸ್ತಾದ್ ಹರಿಮೀಕ್ಷಮಾಣಃ
ಪ್ರಾಣಾನ್ ಜಹೌ ಪ್ರಾಪ್ತಫಲೋ ಹಿ ಭೀಷ್ಮಃ ॥೧೩೨॥

ಯೋಗಿಗಳು ಪ್ರಾಣವಿಯೋಗಕಾಲದಲ್ಲಿ ಯಾವನನ್ನು ಪ್ರಯತ್ನಪೂರ್ವಕವಾಗಿ ಚಿತ್ತದಲ್ಲಿ ಸ್ಥಾಪಿಸಿಕೊಳ್ಳಲು ಪ್ರಯತ್ನಪಡುತ್ತಾರೆಯೋ ಅಂತಹ ಹರಿಯನ್ನು ತನ್ನ

ಎದುರಿಗೆ ನೋಡುತ್ತಾ ಪ್ರಾಣಗಳನ್ನು ತ್ಯಜಿಸಿದ ಭೀಷ್ಮರು ಚಕ್ಷುಸ್ಸಿನ ಫಲವನ್ನು ಪಡೆದವರು.

ಸ್ತವರಾಜಃ ಸಮಾಪ್ತೋಽಯಂ ವಿಷ್ಣೋರದ್ಭುತಕರ್ಮಣಃ।
ಗಾಂಗೇಯೇನ ಪುರಾ ಗೀತೋ ಮಹಾಪಾತಕನಾಶನಃ ॥೧೩೩॥

ಗಂಗಾಪುತ್ರರಾದ ಭೀಷ್ಮರಿಂದ ಮಾಡಲ್ಪಟ್ಟ ಮಹಾಪಾತಕನಾಶನವಾದ ಅದ್ಭುತವಾದ ಈ ವಿಷ್ಣುಸ್ತವರಾಜವು ಸಮಾಪ್ತವಾಯಿತು.

ಇಮಂ ನರಃ ಸ್ತವರಾಜಂ ಮುಮುಕ್ಷುಃ
ಪಠನ್ ಶುಚಿಃ ಕಲುಷಿತಕಲ್ಮಷಾಪಹಮ್।
ಅತೀತ್ಯ ಲೋಕಾನ್ ಮಲಿನಃ ಸಮಾಗತಾನ್
ಪದಂ ಸ ಗಚ್ಛತ್ಯಮೃತಂ ಮಹಾತ್ಮನಃ ॥೧೩೪॥

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ರಾಜಧರ್ಮೇ ಸಪ್ತಚತ್ವಾರಿಂಶೋಽಧ್ಯಾಯಃ ॥೪೭॥

ಮುಮುಕ್ಷುವಾದ ಯಾವ ಮನುಷ್ಯನು ಶುಚಿಯಾಗಿ ಕಲುಷಿತವಾದ ಮನಸ್ಸಿನ ಕಲ್ಮಶವನ್ನು ಕಳೆಯುವ ಈ ಸ್ತವರಾಜವನ್ನು ಪಠಿಸುತ್ತಾನೆಯೋ ಅವನು ಪ್ರಾಪ್ತವಾದ ಮಲಿನವಾದ ಲೋಕಗಳನ್ನು ದಾಟಿ, ಮಹಾತ್ಮನಾದ ಕೃಷ್ಣನ ಮೋಕ್ಷಸ್ಥಾನವನ್ನು ಪಡೆಯುತ್ತಾನೆ.

ಇಲ್ಲಿಗೆ ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪೭ನೆಯ ಅಧ್ಯಾಯವು ಮುಗಿಯಿತು.

—0—

೪೮. ನಲವತ್ತೆಂಟನೆಯ ಅಧ್ಯಾಯ

ಕೃಷ್ಣಯುಧಿಷ್ಠಿರಾದಿಗಳಿಂದ ಕುರುಕ್ಷೇತ್ರಗಮನ, ಪರಶುರಾಮರ ಕಥೆಯನ್ನು ಹೇಳುವಂತೆ ಯುಧಿಷ್ಠಿರನಿಂದ ಕೃಷ್ಣನ ಪ್ರಾರ್ಥನೆ

ವೈಶಂಪಾಯನಃ

ತತಃ ಸ ಚ ಹೃಷೀಕೇಶಃ ಸ ಚ ರಾಜಾ ಯುಧಿಷ್ಠಿರಃ।
ಕೃಪಾದಯಶ್ಚ ತೇ ಸರ್ವೇ ಚತ್ವಾರಃ ಪಾಂಡವಾಶ್ಚ ಹ ॥೧॥

ರಥೈಸ್ತೇ ನಗರಾಕಾರೈಃ ಪತಾಕಾಧ್ವಜಶೋಭಿತೈಃ।
ಯಯುರಾಶು ಕುರುಕ್ಷೇತ್ರಂ ವಾಜಿಭಿಃ ಶೀಘ್ರಗಾಮಿಭಿಃ ॥೨॥

ವೈಶಂಪಾಯನರು– ಅನಂತರ ಆ ಹೃಷೀಕೇಶನೂ, ರಾಜನಾದ ಯುಧಿಷ್ಠಿರನೂ, ಕೃಪಾದಿಗಳೆಲ್ಲರೂ, ಉಳಿದ ನಾಲ್ವರು ಪಾಂಡವರೂ ಪತಾಕಾ ಧ್ವಜಗಳಿಂದ ಶೋಭಿತವಾದ ನಗರಾಕಾರವಾದ ರಥಗಳಲ್ಲಿ ಶೀಘ್ರಗಾಮಿಗಳಾದ ಅಶ್ವಗಳಿಂದ ಶೀಘ್ರವಾಗಿ ಕುರುಕ್ಷೇತ್ರಕ್ಕೆ ತಲುಪಿದರು.

ತೇऽವತೀರ್ಯ ಕುರುಕ್ಷೇತ್ರಂ ಕೇಶಮಜ್ಜಾಸ್ಥಿಸಂಕುಲಮ್ ।
ದೇಹನ್ಯಾಸಃ ಕೃತೋ ಯತ್ರ ಕ್ಷತ್ರಿಯೈಸ್ತೈರ್ಮಹಾತ್ಮಭಿಃ ॥೩॥

ಅವರು ಮಹಾತ್ಮರಾದ ಕ್ಷತ್ರಿಯರು ತಮ್ಮ ದೇಹವನ್ನು ಪರಿತ್ಯಜಿಸಿದ ಕೇಶ, ಮಜ್ಜ, ಅಸ್ಥಿಗಳಿಂದ ನಿಬಿಡವಾದ ಕುರುಕ್ಷೇತ್ರವನ್ನು ತಲುಪಿದರು.

ಗಜಾಶ್ವದೇಹಾಸ್ಥಿಚಯೈಃ ಪರ್ವತೈರಿವ ಸಂಚಿತಮ್ ।
ನರಶೀರ್ಷಕಪಾಲೈಶ್ಚ ಶಂಖೈರಿವ ಸಮಾಚಿತಮ್ ॥೪॥

ಭೂತಸಂಘಾನುಚರಿತಂ ರಕ್ಷೋಗಣನಿಷೇವಿತಮ್ ।
ಆಪಾನಭೂಮಿಂ ಕಾಲಸ್ಯ ತದಾ ಭುಕ್ತೋಜ್ಝಿತಾಮಿವ ॥೫॥

ಭೂತಸಂಘಾನುಚರಿತಂ ರಕ್ಷೋಗಣನಿಷೇವಿತಮ್ ।
ಪಶ್ಯಂತಸ್ತೇ ಕುರುಕ್ಷೇತ್ರಂ ಯಯುರಾಶು ಮಹಾರಥಾಃ ॥೬॥

ಗಜಾಶ್ವದೇಹಗಳ ಅಸ್ಥಿಗಳ ಪರ್ವತಾಕಾರವಾದ ರಾಶಿಯಿಂದ ಕೂಡಿದ್ದ, ಮನುಷ್ಯರ ತಲೆಬರುಡೆಗಳಿಂದ ಶಂಖಗಳಂತೆ ಎಲ್ಲೆಡೆಯೂ ಹರಡಿದ್ದ, ಸಹಸ್ರಾರು ಚಿತೆಗಳಿಂದ ತುಂಬಿದ, ಕವಚ ಮತ್ತು ಶಸ್ತ್ರಗಳು ಎಲ್ಲೆಲ್ಲಿಯೂ ಬಿದ್ದಿದ್ದ, ಮೃತ್ಯು-ದೇವತೆಯು ಆಗ ತಾನೆ ಕುಡಿದು ಬಿಟ್ಟಿದ್ದಂತಹ ಪಾನಭೂಮಿಯಂತಿದ್ದ, ಭೂತ-ಸಂಘಗಳ ಸಂಚಾರವನ್ನು ಹೊಂದಿದ ರಾಕ್ಷಸರ ಗಣಗಳಿಂದ ಸೇವಿತವಾದ ಕುರುಕ್ಷೇತ್ರ-ವನ್ನು ನೋಡುತ್ತಾ ಆ ಮಹಾರಥರು ಶೀಘ್ರವಾಗಿ ಮುಂದೆ ಸಾಗಿದರು.

ಗಚ್ಛನ್ನೇವ ಮಹಾಬಾಹುಃ ಸರ್ವಯಾದವನಂದನಃ ।
ಯುಧಿಷ್ಠಿರಾಯ ಪ್ರೋವಾಚ ಜಾಮದಗ್ನ್ಯಸ್ಯ ವಿಕ್ರಮಮ್ ॥೭॥

ಮಹಾಬಾಹುವೂ ಸರ್ವಯಾದವನಂದನನೂ ಆದ ಕೃಷ್ಣನು ಹೋಗುತ್ತಲೇ ಯುಧಿಷ್ಠಿರನಿಗೆ ಪರಶುರಾಮರ ಪರಾಕ್ರಮವನ್ನು ಹೇಳಿದನು.

ಅಮೀ ರಾಮಹ್ರದಾಃ ಪಂಚ ದೃಶ್ಯಂತೇ ಪಾರ್ಥ ದೂರತಃ ।
ಯೇಷು ಸಂತರ್ಪಯಾಮಾಸ ಪೂರ್ವಾನ್ ಕ್ಷತ್ರಿಯಶೋಣಿತೈಃ ॥೮॥

ಎಲೈ ಪಾರ್ಥನೇ! ದೂರದಲ್ಲಿ ಈ ಐದು ರಾಮಹ್ರದಗಳು ಕಾಣುತ್ತಿವೆಯಷ್ಟೇ. ಇಲ್ಲಿ ಪರಶುರಾಮರು ತಮ್ಮ ಪೂರ್ವಜರಿಗೆ ಕ್ಷತ್ರಿಯರಕ್ತದಿಂದ ತರ್ಪಣವನ್ನು ಕೊಟ್ಟರು.

ತ್ರಿಃಸಪ್ತಕೃತ್ವೋ ವಸುಧಾಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ ।
ಇಹೇದಾನೀಂ ತತೋ ರಾಮಃ ಕರ್ಮಣೋ ವಿರರಾಮ ಹ ॥೯॥

ಪ್ರಭುಗಳಾದ ಪರಶುರಾಮರು ಇಪ್ಪತ್ತೊಂದು ಬಾರಿ ಸಂಚರಿಸಿ, ಭೂಮಿ-ಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿ ಈ ಸ್ಥಳದಲ್ಲಿ ಆ ಕರ್ಮಕ್ಕೆ ಮುಕ್ತಾಯವನ್ನು ಹೇಳಿದರು.

ಯುಧಿಷ್ಠಿರಃ

ತ್ರಿಃ ಸಪ್ತಕೃತ್ವಃ ಪೃಥಿವೀ ಕೃತಾ ನಿಃಕ್ಷತ್ರಿಯಾ ತದಾ ।
ರಾಮೇಣೇತಿ ಯದಾऽऽತ್ಥ ತ್ವಮತ್ರ ಮೇ ಸಂಶಯೋ ಮಹಾನ್ ॥೧೦॥

ಯುಧಿಷ್ಠಿರ – ಇಪ್ಪತ್ತೊಂದು ಬಾರಿ ಭೂಮಿಯನ್ನು ಪರಶುರಾಮರು ಕ್ಷತ್ರಿಯ-ರಹಿತವನ್ನಾಗಿ ಮಾಡಿದರು ಎಂದು ನೀನು ಹೇಳಿದ ವಿಷಯದಲ್ಲಿ ನನಗೆ ಬಹಳ ಸಂಶಯವಿದೆ.

ಕ್ಷತ್ರಬೀಜಂ ಯದಾ ದಗ್ಧಂ ರಾಮೇಣ ಯದುಪುಂಗವ ।
ಕಥಂ ಭೂಯಃ ಸಮುತ್ಪತ್ತಿಃ ಕ್ಷತ್ರಸ್ಯಾಮಿತವಿಕ್ರಮ ॥೧೧॥

ಎಲೈ ಯದುಪುಂಗವನೇ! ಅಮಿತವಿಕ್ರಮನೇ! ಪರಶುರಾಮರು ಕ್ಷತ್ರಿಯ-ಬೀಜವನ್ನೇ ಸುಟ್ಟುಹಾಕಿದ ಮೇಲೆ ಪುನಃ ಭೂಮಿಯಲ್ಲಿ ಕ್ಷತ್ರಿಯರ ಉತ್ಪತ್ತಿಯು ಹೇಗೆ ಉಂಟಾಯಿತು?

ಮಹಾತ್ಮನಾ ಭಗವತಾ ರಾಮೇಣ ಯದುಪುಂಗವ ।
ಕಥಮುತ್ಸಾದಿತಂ ಕ್ಷತ್ರಂ ಕಥಂ ವೃದ್ಧಿಂ ಪುನರ್ಗತಮ್ ॥೧೨॥

ಎಲೈ ಯದುಪುಂಗವನೇ! ಮಹಾತ್ಮರೂ ಭಗವತ್ಸ್ವರೂಪರೂ ಆದ ಪರಶು-ರಾಮರಿಂದ ಕ್ಷತ್ರಿಯಕುಲವು ಹೇಗೆ ಉತ್ಸನ್ನಗೊಂಡಿತು? ಮತ್ತು ಆ ಕುಲಕ್ಕೆ ಪುನಃ ಹೇಗೆ ವೃದ್ಧಿಯುಂಟಾಯಿತು?

ಮಹಾಭಾರತಯುದ್ಧೇ ಹಿ ಕೋಟಿಶಃ ಕ್ಷತ್ರಿಯಾ ಹತಾಃ ।
ತಥಾಭೂಚ್ಚ ಮಹೀ ಕೀರ್ಣಾ ಕ್ಷತ್ರಿಯೈರ್ವದತಾಂವರ ॥೧೩॥

ಮಹಾಭಾರತಯುದ್ಧದಲ್ಲಿ ಕ್ಷತ್ರಿಯರು ಕೋಟಿಸಂಖ್ಯೆಗಳಲ್ಲಿ ಹತರಾದರು. ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ! ಆದ್ದರಿಂದ ಆ ರೀತಿಯಲ್ಲಿ ಭೂಮಿಯು ಕ್ಷತ್ರಿಯ-ರಿಂದ ತುಂಬಿದ್ದಿತು.

ಕಿಮರ್ಥಂ ಭಾರ್ಗವೇಣೇದಂ ಕ್ಷತ್ರಮುತ್ಸಾದಿತಂ ಪುರಾ ।
ರಾಮೇಣ ಯದುಶಾರ್ದೂಲ ಕುರುಕ್ಷೇತ್ರೇ ಮಹಾತ್ಮನಾ ॥೧೪॥

ಎಲೈ ಯದುಶಾರ್ದೂಲನೇ! ಮಹಾತ್ಮರಾದ ಭಾರ್ಗವರಾದ ಪರಶುರಾಮರು ಏತಕ್ಕಾಗಿ ಕುರುಕ್ಷೇತ್ರದಲ್ಲಿ ಕ್ಷತ್ರಿಯರ ಸಂಹಾರವನ್ನು ಮಾಡಿದರು?

ಏತಂ ಮೇ ಛಿಂಧಿ ವಾರ್ಷ್ಣೇಯ ಸಂಶಯಂ ತಾರ್ಕ್ಷ್ಯಕೇತನ ।
ಆಗಮೋ ಹಿ ಪರಃ ಕೃಷ್ಣ ತ್ವತ್ತೋ ನೋ ವಾಸವಾನುಜ ॥೧೫॥

ಎಲೈ ವಾರ್ಷ್ಣೇಯನೇ! ಗರುಡಧ್ವಜನೇ! ಈ ನನ್ನ ಸಂಶಯವನ್ನು ಪರಿಹರಿಸು. ಎಲೈ ಇಂದ್ರಾನುಜನೇ! ಕೃಷ್ಣನೇ! ನಿನ್ನಿಂದಲೇ ನಮಗೆ ಎಲ್ಲ ಜ್ಞಾನದ ಪ್ರಾಪ್ತಿ ಉಂಟಾಗಬೇಕು.

ವೈಶಂಪಾಯನಃ

ತತೋ ವ್ರಜನ್ನೇವ ಗದಾಗ್ರಜಃ ಪ್ರಭುಃ
ಶಶಂಸ ತಸ್ಮೈ ನಿಖಿಲೇನ ತತ್ತ್ವತಃ ।
ಯುಧಿಷ್ಠಿರಾಯಾಪ್ರತಿಮೌಜಸೇ ತದಾ
ಯಥಾऽಭವತ್ ಕ್ಷತ್ರಿಯಸಂಕುಲಾ ಮಹೀ ॥೧೬॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಚತ್ವಾರಿಂಶೋऽಧ್ಯಾಯಃ ॥೪೮॥

ಆಗ ಗದಾಗ್ರಜನಾದ ಪ್ರಭುವಾದ ಕೃಷ್ಣನು ಹೋಗುತ್ತಲೇ ಅಪ್ರತಿಮ-ಪರಾಕ್ರಮಿಯಾದ ಯುಧಿಷ್ಠಿರನನ್ನು ಕುರಿತು ಎಲ್ಲವೂ ಹೇಗೆ ನಡೆಯಿತು ಮತ್ತು ಪುನಃ ಭೂಮಿಯು ಹೇಗೆ ಕ್ಷತ್ರಿಯರಿಂದ ತುಂಬಿತು ಎಂಬ ವಿಷಯವನ್ನು ಯಥಾರ್ಥವಾಗಿ ಹೇಳಿದನು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೪೮ನೆಯ ಅಧ್ಯಾಯವು ಮುಗಿಯಿತು

—0—

೪೯. ನಲವತ್ತೊಂಭತ್ತನೆಯ ಅಧ್ಯಾಯ

ಕೃಷ್ಣನಿಂದ ಪರಶುರಾಮಚರಿತೆಯ ಕಥನ

ಶ್ರೀಭಗವಾನ್

ಶೃಣು ಕೌಂತೇಯ ರಾಮಸ್ಯ ಮಯಾ ಯಾವತ್ ಪರಿಶ್ರುತಮ್ ।
ಮಹರ್ಷೀಣಾಂ ಕಥಯತಾಂ ಕಾರಣಂ ತಸ್ಯ ಜನ್ಮ ಚ ॥೧॥

ಶ್ರೀಭಗವಾನ್ – ಎಲೈ ಕೌಂತೇಯನೇ! ಮಹರ್ಷಿಗಳು ಮಾತನಾಡುವಾಗ ನಾನು ಎಷ್ಟು ಅಂಶವನ್ನು ಪರಶುರಾಮರ ಜನ್ಮದ ಮತ್ತು ಕ್ಷತ್ರಿಯಸಂಹಾರದ ಕಾರಣದ ವಿಷಯದಲ್ಲಿ ಕೇಳಿದ್ದೇನೆಯೋ ಅಷ್ಟನ್ನು ಕೇಳು.

ಯಥಾ ಜಾಮದಗ್ನ್ಯೇನ ಕೋಟಿಶಃ ಕ್ಷತ್ರಿಯಾ ಹತಾಃ ।
ಉದ್ಭೂತಾ ರಾಜವಂಶೇಷು ಯೇ ಭೂಯೋ ಭಾರತೇ ಹತಾಃ ॥೨॥

ಪರಶುರಾಮರಿಂದ ಕೋಟಿಸಂಖ್ಯೆಯಲ್ಲಿ ಕ್ಷತ್ರಿಯರು ಹತರಾದರು. ಹೇಗೆ ಅವರು ಪುನಃ ರಾಜವಂಶಗಳಲ್ಲಿ ಜನಿಸಿ ಮಹಾಭಾರತಯುದ್ಧದಲ್ಲಿ ಹತರಾದರು ಎಂಬುದನ್ನು ಹೇಳುತ್ತೇನೆ.

ಜಹ್ನೋರಜಹ್ನುಸ್ತನಯೋ ಬಲ್ಲವಸ್ತಸ್ಯ ಚಾತ್ಮಜಃ ।
ಕುಶಿಕೋ ನಾಮ ಧರ್ಮಜ್ಞಸ್ತಸ್ಯ ಪುತ್ರೋ ಮಹೀಪತಿಃ ॥೩॥

ಜಹ್ನುವಿಗೆ ಅಜಹ್ನುವೆಂಬ ಪುತ್ರನು ಜನಿಸಿದನು. ಅವನ ಪುತ್ರನು ವಲ್ಲವ. ಅವನ ಪುತ್ರನಾದ ಕುಶಿಕನು ಧರ್ಮಜ್ಞನಾದ ರಾಜನಾದನು.

ಉಗ್ರಂ ತಪಃ ಸಮಾತಿಷ್ಠತ್ ಸಹಸ್ರಾಕ್ಷಸಮೋ ಭುವಿ ।
ಪುತ್ರಂ ಲಭೇಯಮಜಿತಂ ತ್ರಿಲೋಕೇಶ್ವರಮಿತ್ಯುತ ॥೪॥

ಭೂಮಿಯಲ್ಲಿ ಇಂದ್ರನಿಗೆ ಸಮನಾಗಿದ್ದ ಅವನು 'ಯುದ್ಧದಲ್ಲಿ ಎಂದೂ

ಸೋಲದ ತ್ರಿಲೋಕಪತಿಯಾದ ಪುತ್ರನನ್ನು ಪಡೆದೇನು' ಎಂದು ಉಗ್ರವಾದ ತಪಸ್ಸನ್ನು ಪ್ರಾರಂಭಿಸಿದನು.

ತಮುಗ್ರತಪಸಂ ದೃಷ್ಟ್ವಾ ಸಹಸ್ರಾಕ್ಷಃ ಪುರಂದರಃ।
ಸಮರ್ಥಂ ಪುತ್ರಜನನೇ ಸ್ವಯಮೇವೈತ್ಯ ಭಾರತ ॥೫॥

ಪುತ್ರತ್ವಮಗಮದ್ ರಾಜಂಸ್ತಸ್ಯ ಲೋಕೇಶ್ವರೇಶ್ವರಃ।
ಗಾಧಿರ್ನಾಮಾಭವತ್ ಪುತ್ರಃ ಕೌಶಿಕಃ ಪಾಕಶಾಸನಃ ॥೬॥

ಎಲೈ ಭಾರತನೇ! ಸಹಸ್ರಾಕ್ಷನಾದ ಪುರಂದರನು ಅವನು ಉಗ್ರತಪಸ್ಸಿನಲ್ಲಿ ನಿರತ-ನಾದುದನ್ನು ನೋಡಿ, ಅಂತಹ ಪುತ್ರನನ್ನು ಪಡೆಯಲು ಅವನು ಸಮರ್ಥನೆಂದು ತಿಳಿದು ತಾನಾಗಿಯೇ ಬಂದು ಲೋಕೇಶ್ವರೇಶ್ವರನಾದ ಅವನು ಅವನ ಪುತ್ರ-ನಾದನು. ರಾಜನೇ ಪಾಕಶಾಸನನಾದ ಇಂದ್ರನು ಗಾಧಿ ಎಂಬ ಹೆಸರಿನಿಂದ ಕುಶಿಕನ ಪುತ್ರನಾಗಿ ಕೌಶಿಕನೆನಿಸಿದನು.

ತಸ್ಯ ಕನ್ಯಾಽಭವದ್ ರಾಜನ್ ನಾಮ್ನಾ ಸತ್ಯವತೀ ಪ್ರಭೋ।
ತಾಂ ಗಾಧಿಃ ಕವಿಪುತ್ರಾಯ ಸೋಽರ್ಚೀಕಾಯ ದದೌ ಪ್ರಭುಃ ॥೭॥

ಎಲೈ ಪ್ರಭುವೇ! ಗಾಧಿಗೆ ಸತ್ಯವತಿಯೆಂಬ ಮಗಳಿದ್ದಳು. ಅವನು ಅವಳನ್ನು ಭಾರ್ಗವವಂಶದ ಕವಿಪುತ್ರನಾದ ಋಚೀಕರಿಗೆ ಕೊಟ್ಟು ವಿವಾಹ ಮಾಡಿದನು.

ತತಃ ಪ್ರೀತಸ್ತು ಕೌಂತೇಯ ಭಾರ್ಗವಃ ಕುರುನಂದನ।
ಪುತ್ರಾರ್ಥೇ ಶ್ರಪಯಾಮಾಸ ಚರುಂ ಗಾಧೇಸ್ತಥೈವ ಚ ॥೮॥

ಎಲೈ ಕೌಂತೇಯನೇ! ಕುರುನಂದನನೇ! ಸಂತೋಷಗೊಂಡ ಭಾರ್ಗವರಾದ ಋಚೀಕರು ಪುತ್ರರನ್ನು ಪಡೆಯಲು ತಮ್ಮ ಸಲುವಾಗಿ ಮತ್ತು ಗಾಧಿಯ ಸಲುವಾಗಿ ಚರುವನ್ನು ಸಿದ್ಧಪಡಿಸಿದರು.

ಆಹೂಯ ಚಾಹ ತಾಂ ಭಾರ್ಯಾಮೃಚೀಕೋ ಭಾರ್ಗವಸ್ತದಾ।
ಉಪಯೋಜ್ಯಶ್ಚರುರಯಂ ತ್ವಯಾ ಮಾತ್ರಾಪ್ಯಯಂ ತವ ॥೯॥

ಭಾರ್ಗವರಾದ ಋಚೀಕರು ತಮ್ಮ ಪತ್ನಿಯನ್ನು ಕರೆದು ಈ ಎರಡು ಚರುಗಳಲ್ಲಿ ಈ ಚರುವನ್ನು ಮಾತ್ರ ನೀನು ಭುಂಜಿಸಬೇಕು. ನಿನ್ನ ತಾಯಿಯು ಮಾತ್ರ ಈ ಇನ್ನೊಂದು ಚರುವನ್ನೇ ಭುಂಜಿಸಬೇಕು.

ತಸ್ಯಾ ಜನಿಷ್ಯತೇ ಪುತ್ರೋ ದೀಪ್ತಿಮಾನ್ ಕ್ಷತ್ರಿಯರ್ಷಭಃ।
ಅಜಯ್ಯಃ ಕ್ಷತ್ರಿಯೈರ್ಲೋಕೇ ಕ್ಷತ್ರಿಯರ್ಷಭಸೂದನಃ ॥೧೦॥

ಅವಳಿಗೆ ತೇಜಸ್ವಿಯಾದ ಕ್ಷತ್ರಿಯರ್ಷಭನು ಪುತ್ರನಾಗಿ ಜನಿಸುವನು. ಅವನು ಲೋಕದಲ್ಲಿ ಕ್ಷತ್ರಿಯರಿಂದ ಅಜೇಯನಾಗಿ ಶ್ರೇಷ್ಠರಾದ ಕ್ಷತ್ರಿಯರನ್ನು ಸಂಹರಿಸುವವ -ನಾಗುವನು.

ತವಾಪಿ ಪುತ್ರಂ ಕಲ್ಯಾಣಿ ಧೃತಿಮಂತಂ ತಪೋನ್ವಿತಮ್ ।
ಶಮಾತ್ಮಕಂ ದ್ವಿಜಶ್ರೇಷ್ಠಂ ಚರುರೇಷ ವಿಧಾಸ್ಯತಿ ॥೧೧॥

ಎಲೌ ಕಲ್ಯಾಣಿಯೇ! ನಿನಗೂ ಸಹ ಈ ಚರುವು ತಪಸ್ಸಿನಿಂದ ಕೂಡಿದ ಧೈರ್ಯಶಾಲಿಯಾದ ಶಾಂತನಾದ ಬ್ರಾಹ್ಮಣಶ್ರೇಷ್ಠನನ್ನು ಪುತ್ರನನ್ನಾಗಿ ಕೊಡುವುದು. (ಎಂದು ಹೇಳಿದರು).

ಇತ್ಯೇವಮುಕ್ತ್ವಾ ತಾಂ ಭಾರ್ಯಾಮೃಚೀಕೋ ಭೃಗುನಂದನಃ।
ತಪಸ್ಯಭಿರತೋ ಧೀಮಾನ್ ಜಗಾಮಾರಣ್ಯಮೇವ ಹ ॥೧೨॥

ಭಾರ್ಯೆಯನ್ನು ಕುರಿತು ಹೀಗೆ ಹೇಳಿ ಮೇಧಾವಿಗಳಾದ ಭೃಗುನಂದನರಾದ ಋಚೀಕರು ತಪಸ್ಸಿನಲ್ಲಿ ನಿರತರಾಗಿ ಕಾಡಿಗೆ ಹೊರಟು ಹೋದರು.

ಏತಸ್ಮಿನ್ನೇವ ಕಾಲೇ ತು ತೀರ್ಥಯಾತ್ರಾಪರೋ ನೃಪಃ।
ಗಾಧಿಃ ಸದಾರಃ ಸಂಪ್ರಾಪ್ತ ಋಚೀಕಸ್ಯಾಶ್ರಮಂ ಪ್ರತಿ ॥೧೩॥

ಆ ಸಮಯಕ್ಕೆ ಸರಿಯಾಗಿ ತೀರ್ಥಯಾತ್ರಾಪರನಾದ ಗಾಧಿರಾಜನು ಪತ್ನಿಯ ಸಹಿತನಾಗಿ ಋಚೀಕರ ಆಶ್ರಮಕ್ಕೆ ಬಂದನು.

ಚರುದ್ವಯಂ ಗೃಹೀತ್ವಾತು ರಾಜನ್ ಸತ್ಯವತೀ ತದಾ ।
ಭರ್ತುರ್ವಾಕ್ಯಾದಥಾವ್ಯಗ್ರಾ ಮಾತ್ರೇ ಹೃಷ್ಟಾನ್ಯವೇದಯತ್ ॥೧೪॥

ಎಲೈ ರಾಜನೇ! ಆಗ ಸತ್ಯವತಿಯು ಪತಿಯ ವಾಕ್ಯಕ್ಕೆ ಅನುಸಾರವಾಗಿ ಎರಡು ಚರುಗಳನ್ನೂ ಹಿಡಿದುಕೊಂಡು ತಪ್ಪಿಲ್ಲದಂತೆ ತಾಯಿಗೆ ಸಂತೋಷದಿಂದ ನಿವೇದಿಸಿದಳು.

ಮಾತಾ ತು ತಸ್ಯಾಃ ಕೌಂತೇಯ ದುಹಿತ್ರೇ ಸ್ವಂ ಚರುಂ ದದೌ ।
ತಸ್ಯಾಶ್ಚರುಮಥಾಜ್ಞಾತಮಾತ್ಮಸಂಸ್ಥಂ ಚಕಾರ ಹ ॥೧೫॥

ಎಲೈ ಕೌಂತೇಯನೇ! ತಾಯಿಯಾದರೋ ತನ್ನ ಚರುವನ್ನು ಮಗಳಿಗೆ ಕೊಟ್ಟಳು. ಅವಳ ಚರುವನ್ನು ಅವಳಿಗೆ ತಿಳಿಯದಂತೆಯೇ ತಾನು ಉಪಯೋಗಿಸಿದಳು.

ಅಥ ಸತ್ಯವತೀ ಗರ್ಭಂ ಕ್ಷತ್ರಿಯಾಂತಕರಂ ತದಾ ।
ಧಾರಯಾಮಾಸ ದೀಪ್ತೇನ ವಪುಷಾ ಘೋರದರ್ಶನಮ್ ॥೧೬॥

ಅನಂತರ ಸತ್ಯವತಿಯು ಕ್ಷತ್ರಿಯಾಂತಕನಾದ ದೀಪ್ತವಾದ ಶರೀರವುಳ್ಳ ಘೋರದರ್ಶನವನ್ನು ಹೊಂದಿದ ಗರ್ಭವನ್ನು ಧರಿಸಿದಳು.

ತಾಮೃಚೀಕಸ್ತದಾ ದೃಷ್ಟ್ವಾ ಧ್ಯಾನಯೋಗೇನ ವೈ ತತಃ ।
ಅಬ್ರವೀದ್ ರಾಜಶಾರ್ದೂಲ ಸ್ವಾಂ ಭಾರ್ಯಾಂ ವರವರ್ಣಿನೀಮ್ ॥೧೭

ಎಲೈ ರಾಜಶಾರ್ದೂಲನೇ! ಆಗ ಋಚೀಕರು ತಮ್ಮ ಧ್ಯಾನದೃಷ್ಟಿಯಿಂದ ಅದನ್ನು ತಿಳಿದು ಸುಂದರಿಯಾದ ತಮ್ಮ ಭಾರ್ಯೆಯನ್ನು ಕರೆದು ಹೇಳಿದರು.

ಮಾತ್ರಾऽಸಿ ವ್ಯಂಸಿತಾ ಭದ್ರೇ ಚರುವ್ಯತ್ಯಾಸಹೇತುನಾ ।
ಜನಿಷ್ಯತೇ ಹಿ ತೇ ಪುತ್ರಃ ಕ್ರೂರಕರ್ಮಾ ಮಹಾಬಲಃ ॥೧೮॥

ಎಲೌ ಮಂಗಳಸ್ವರೂಪಳೇ! ಚರುವನ್ನು ವ್ಯತ್ಯಾಸ ಮಾಡಿದ ಕಾರಣದಿಂದ ನಿನ್ನ

ತಾಯಿಯು ನಿನಗೆ ಮೋಸ ಮಾಡಿದ್ದಾಳೆ. ನಿನಗೆ ಕ್ರೂರಕರ್ಮನೂ ಮಹಾಬಲನೂ ಆದ ಪುತ್ರನು ಜನಿಸುವನು.

ಜನಿಷ್ಯತೇ ಹಿ ತೇ ಭ್ರಾತಾ ಬ್ರಹ್ಮಭೂತಸ್ತಪೋಧನಃ।
ವಿಶ್ವಂ ಹಿ ಬ್ರಹ್ಮ ತಪಸಾ ಮಯಾ ತತ್ರ ಸಮರ್ಪಿತಮ್ ॥೧೯॥

ನಿನ್ನ ತಮ್ಮನು ಬ್ರಹ್ಮಿಷ್ಠನಾಗಿ ತಪೋಧನನಾಗಿ ಜನಿಸುವನು. ನಾನು ಸಮಗ್ರವಾದ ಬ್ರಹ್ಮತೇಜಸ್ಸನ್ನು ನನ್ನ ತಪಸ್ಸಿನ ಬಲದಿಂದ ಆ ಚರುವಿನಲ್ಲಿ ಆಧಾನ ಮಾಡಿದ್ದೆನು.

ಕ್ಷತ್ರವೀರ್ಯಂ ಚ ಸಕಲಂ ತವ ಮಾತ್ರೇ ಸಮರ್ಪಿತಮ್।
ವಿಪರ್ಯಯೇಣ ತೇ ಭದ್ರೇ ನೈತದೇವಂ ಭವಿಷ್ಯತಿ।
ಮಾತುಸ್ತೇ ಬ್ರಾಹ್ಮಣೋ ಭೂಯಾತ್ ತವ ಚ ಕ್ಷತ್ರಿಯಃ ಸುತಃ ॥೨೦॥

ನಿನ್ನ ತಾಯಿಯ ಚರುವಿನಲ್ಲಿ ಸಕಲವಾದ ಕ್ಷತ್ರಿಯತೇಜಸ್ಸನ್ನು ಆಧಾನ ಮಾಡಿದ್ದೆನು. ನೀವು ಚರುವನ್ನು ವ್ಯತ್ಯಾಸ ಮಾಡಿದುದರಿಂದ ಎಲೌ ಮಂಗಳಸ್ವರೂಪಳೇ! ನಾನು ಸಂಕಲ್ಪಿಸಿದಂತೆ ಆಗುವುದಿಲ್ಲ. ನಿನ್ನ ತಾಯಿಗೆ ಬ್ರಾಹ್ಮಣನೂ ಮತ್ತು ನಿನಗೆ ಕ್ಷತ್ರಿಯನೂ ಪುತ್ರರಾಗಿ ಜನಿಸುತ್ತಾರೆ.

ಸೈವಮುಕ್ತಾ ಮಹಾಭಾಗಾ ಭರ್ತ್ರಾ ಸತ್ಯವತೀ ತದಾ।
ಪಪಾತ ಶಿರಸಾ ತಸ್ಮೈ ವೇಪಂತೀ ಚಾಬ್ರವೀದಿದಮ್ ॥೨೧॥

ನಾಹೋ೯ಽಸಿ ಭಗವನ್ನದ್ಯ ವಕ್ತುಮೇವಂವಿಧಂ ವಚಃ।
ಬ್ರಾಹ್ಮಣಾಪಶದಂ ಪುತ್ರಂ ಪ್ರಾಪ್ಸ್ಯಸೀತಿ ಮಹಾಮುನೇ ॥೨೨॥

ಪತಿಯಿಂದ ಈ ರೀತಿಯಲ್ಲಿ ಹೇಳಲ್ಪಟ್ಟ ಮಹಾನುಭಾವಳಾದ ಸತ್ಯವತಿಯು ಆಗ ನಡುಗುತ್ತಾ ಪತಿಯ ಪಾದಗಳ ಮೇಲೆ ಶಿರಸಾ ಬಿದ್ದು, ಪೂಜ್ಯರೇ! ಮಹರ್ಷಿಗಳೇ! ನೀವು ಈ ರೀತಿಯಲ್ಲಿ ನೀಚಕ್ಷತ್ರಿಯನನ್ನು ಪುತ್ರನನ್ನಾಗಿ ಪಡೆಯುವಿ ಎಂದು ಹೇಳುವುದು ಯುಕ್ತವಲ್ಲ ಎಂದು ಹೇಳಿದಳು.

ಋಚೀಕಃ

ನೈಷ ಸಂಕಲ್ಪಿತಃ ಕಾಮೋ ಮಯಾ ಭದ್ರೇ ತಥಾ ತ್ವಯಿ।
ಉಗ್ರಕರ್ಮಾ ಭವೇತ್ ಪುತ್ರಶ್ಚರುರ್ಮಾತಾ ಚ ಕಾರಣಮ್ ॥೨೩॥

ಋಚೀಕ – ಎಲೌ ಭದ್ರೆ! ನಿನಗೆ ಉಗ್ರಕರ್ಮವನ್ನು ಮಾಡುವ ಪುತ್ರನಾಗಬೇಕೆಂದು ನಾನು ಸಂಕಲ್ಪಿಸಿರಲಿಲ್ಲ. ಈ ವ್ಯತ್ಯಾಸಕ್ಕೆ ಚರುವೂ ಮತ್ತು ನಿನ್ನ ತಾಯಿಯೂ ಕಾರಣರಾಗಿದ್ದಾರೆ.

ಸತ್ಯವತೀ

ಇಚ್ಛನ್ ಲೋಕಾನಪಿ ಮುನೇ ಸೃಜೇಥಾಃ ಕಿಂ ಪುನರ್ಮಮ।
ಶಮಾತ್ಮಕಮೃಜುಂ ಪುತ್ರಂ ಲಭೇಯಂ ಜಪತಾಂವರ ॥೨೪॥

ಸತ್ಯವತೀ – ಎಲೈ ಋಷಿಗಳೇ! ನೀವು ಬಯಸಿದರೆ ಮೂರು ಲೋಕಗಳನ್ನೂ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದೀರಿ. ನನ್ನ ಇಷ್ಟವನ್ನು ಕೊಡುವ ಸಾಮರ್ಥ್ಯದ ವಿಷಯದಲ್ಲಿ ಏನು ಹೇಳಬೇಕು? ಜಪವನ್ನು ಮಾಡುವವರಲ್ಲಿ ಶ್ರೇಷ್ಠರೇ! ನಾನು ಶಾಂತನಾದ ಆರ್ಜವವನ್ನು ಹೊಂದಿದ ಪುತ್ರನನ್ನು ಪಡೆದೇನು!

ಋಚೀಕಃ

ನೋಕ್ತಪೂರ್ವಂ ಮಯಾ ಭದ್ರೇ ಸ್ವೈರೇಷ್ವಪ್ಯನೃತಂ ವಚಃ।
ಕಿಮುತಾಗ್ನಿಂ ಸಮಾಧಾಯ ಮಂತ್ರವಚ್ಚರುಸಾಧನೇ ॥೨೫॥

ಋಷೀಕ – ಭದ್ರೆಯೇ! ನಾನು ವಿನೋದಕ್ಕಾಗಿಯೂ ಹಿಂದೆ ಸುಳ್ಳು ಮಾತನಾಡಿದವನಲ್ಲ. ಹೀಗಿರುವಾಗ ಅಗ್ನ್ಯಾಧಾನವನ್ನು ಮಾಡಿ ಮಂತ್ರಪೂರ್ವಕವಾಗಿ ಚರುವನ್ನು ಸಿದ್ಧಪಡಿಸುವಾಗ ಹೇಗೆ ಸುಳ್ಳನ್ನು ಮಾತನಾಡುವೆನು?

ಸತ್ಯವತೀ

ಕಾಮಮೇವಂ ಭವೇತ್ ಪೌತ್ರೋ ಮಮೇಹ ತವ ಚೈವ ಹ।
ಶಮಾತ್ಮಕಮೃಜುಂ ಪುತ್ರಂ ಲಭೇಯಂ ಜಪತಾಂವರ ॥೨೬॥

ಸತ್ಯವತೀ – ಎಲೈ ಜಪಿಸುವವರಲ್ಲಿ ಶ್ರೇಷ್ಠರಾದವರೇ! ಬೇಕಾದರೆ ನನ್ನ ಮತ್ತು ನಿಮ್ಮ ಪೌತ್ರನು ನೀವು ಹೇಳಿದಂತೆಯೇ ಆಗಲಿ. ಆದರೆ ಪುತ್ರನು ಮಾತ್ರ ಶಾಂತನೂ ಮತ್ತು ಋಜುವೂ ಆಗಿರಬೇಕು.

ಋಚೀಕಃ

ಪುತ್ರೇ ನಾಸ್ತಿ ವಿಶೇಷೋ ಮೇ ಪೌತ್ರೇ ವಾ ವರವರ್ಣಿನಿ।
ಯಥಾ ತ್ವಯೋಕ್ತಂ ತು ವಚಸ್ತಥಾ ಭದ್ರೇ ಭವಿಷ್ಯತಿ ॥೨೭॥

ಋಚೀಕರು – ಎಲೌ ಸುಂದರಿಯೇ! ನನಗೆ ಪುತ್ರನಲ್ಲಿ ಮತ್ತು ಪೌತ್ರನಲ್ಲಿ ಯಾವ ವಿಶೇಷವೂ ಕಾಣುವುದಿಲ್ಲ. ಎಲೌ ಭದ್ರೆಯೇ! ಆದ್ದರಿಂದ ನೀನು ಹೇಳಿದಂತೆಯೇ ಆಗುವುದು.

ಶ್ರೀಭಗವಾನ್

ತತಃ ಸತ್ಯವತೀ ಪುತ್ರಂ ಜನಯಾಮಾಸ ಭಾರ್ಗವಮ್ ।
ತಪಸ್ಯಭಿರತಂ ಶಾಂತಂ ಜಮದಗ್ನಿಂ ಶಮಾತ್ಮಕಮ್ ॥೨೮॥

ಶ್ರೀಭಗವಾನ್ – ಅನಂತರ ಸತ್ಯವತಿಯು ಭೃಗುಕುಲಕ್ಕೆ ಸೇರಿದ ತಪೋನಿಷ್ಠರಾದ ಶಾಂತರಾದ ಜಮದಗ್ನಿಗಳನ್ನು ಪುತ್ರರನ್ನಾಗಿ ಪಡೆದಳು.

ವಿಶ್ವಾಮಿತ್ರಂ ಚ ದಾಯಾದಂ ಗಾಧಿಃ ಕುಶಿಕನಂದನಃ।
ಪ್ರಾಪ ಬ್ರಹ್ಮರ್ಷಿಸಮಿತಂ ವಿಶ್ವೇನ ಬ್ರಹ್ಮಣಾ ಯುತಮ್ ॥೨೯॥

ಕುಶಿಕನಂದನನಾದ ಗಾಧಿಯು ವಿಶ್ವಾಮಿತ್ರರನ್ನು ಪುತ್ರರನ್ನಾಗಿ ಪಡೆದನು. ವಿಶ್ವಾಮಿತ್ರರು ಮುಂದೆ ಬ್ರಹ್ಮರ್ಷಿಸಮಾನರಾಗಿ ಪರಿಗಣಿಸಲ್ಪಟ್ಟು ವಿಶ್ವನಾಮಕನಾದ ಪರಬ್ರಹ್ಮನ ಸನ್ನಿಧಾನದಿಂದ ಕೂಡಿದವರಾದರು.

ಆರ್ಚೀಕೋ ಜನಯಾಮಾಸ ಜಮದಗ್ನಿಃ ಸುದಾರುಣಮ್ ।
ಸರ್ವವಿದ್ಯಾಂತಗಂ ಶ್ರೇಷ್ಠಂ ಧನುರ್ವೇದೇ ಚ ಪಾರಗಮ್ ।
ರಾಮಂ ಕ್ಷತ್ರಿಯಹಂತಾರಂ ಪ್ರದೀಪ್ತಮಿವ ಪಾವಕಮ್ ॥೩೦॥

ಋಚೀಕಪುತ್ರರಾದ ಜಮದಗ್ನಿಗಳು ಅತ್ಯಂತ ಘೋರನೂ, ಸರ್ವವಿದ್ಯಾ ಪಾರಂಗತನೂ, ಶ್ರೇಷ್ಠನೂ, ಧನುರ್ವೇದದಲ್ಲಿಯೂ ಪಾರಂಗತನೂ, ಕ್ಷತ್ರಿಯ-ಸಂಹಾರಕನೂ, ಜ್ವಲಿಸುವ ಅಗ್ನಿಯಂತಿರುವವನೂ ಆದ ರಾಮನನ್ನು ಪುತ್ರನನ್ನಾಗಿ ಪಡೆದರು.

ತೋಷಯಿತ್ವಾ ಮಹಾದೇವಂ ಪರ್ವತೇ ಗಂಧಮಾದನೇ।
ಅಸ್ತ್ರಾಣಿ ವರಯಾಮಾಸ ಪರಶುಂ ಚಾತಿತೇಜಸಮ್ ॥೩೧॥

ರಾಮನು ಗಂಧಮಾದನಪರ್ವತದಲ್ಲಿ ಮಹಾದೇವನನ್ನು ಸಂತೋಷಪಡಿಸಿ ಅವನಿಂದ ಅಸ್ತ್ರಗಳನ್ನೂ ಅತಿತೇಜಸ್ಸುಳ್ಳ ಪರಶುವನ್ನೂ ವರವನ್ನಾಗಿ ಪಡೆದನು. (ಅಲ್ಲಿಂದ ಅವನಿಗೆ ಪರಶುರಾಮನೆಂಬ ಹೆಸರು ಬಂದಿತು).

ಸ ತೇನಾಕುಂಠಧಾರೇಣ ಜ್ವಲಿತಾನಲವರ್ಚಸಾ।
ಕುಠಾರೇಣಾಪ್ರಮೇಯೇನ ಲೋಕೇಷ್ವಪ್ರತಿಮೋऽಭವತ್ ॥೩೨॥

ಜ್ವಲಿಸುವ ಅಗ್ನಿಗೆ ಸಮವಾದ ನಿಶಿತವಾದ ಧಾರೆಯುಳ್ಳ ಅಪರಿಮಿತವಾದ ಶಕ್ತಿಯುಳ್ಳ ಆ ಪರಶುವಿನಿಂದ ಲೋಕದಲ್ಲಿ ಅವನು ಅಪ್ರತಿಮನಾದನು.

ಏತಸ್ಮಿನ್ನೇವ ಕಾಲೇ ತು ಕೃತವೀರ್ಯಾತ್ಮಜೋ ಬಲೀ।
ಅರ್ಜುನೋ ನಾಮ ತೇಜಸ್ವೀ ಕ್ಷತ್ರಿಯೋ ಹೈಹಯಾನ್ವಯಃ ॥೩೩॥

ಅಜಯತ್ ಪೃಥಿವೀಂ ಸರ್ವಾಂ ಸಪ್ತದ್ವೀಪಾಂ ಸಪತ್ತನಾಮ್।
ಸ್ವಬಾಹ್ವಸ್ತ್ರಬಲೇನಾಜೌ ಧರ್ಮೇಣ ಪರಮೇಣ ಚ ॥೩೪॥

ಇದೇ ಸಮಯದಲ್ಲಿ ಕೃತವೀರ್ಯಪುತ್ರನಾದ ಅರ್ಜುನನೆಂಬ ಹೈಹಯಕುಲದ ತೇಜಸ್ವಿಯಾದ ಕ್ಷತ್ರಿಯನು ತನ್ನ ಬಾಹುಬಲದಿಂದ ಅಸ್ತ್ರಬಲದಿಂದ ಮತ್ತು ಶ್ರೇಷ್ಠವಾದ ಧರ್ಮದ ಬಲದಿಂದ ಪಟ್ಟಣಗಳಿಂದ ಸಹಿತವಾದ ಸಪ್ತದ್ವೀಪವತಿಯಾದ ಭೂಮಿಯನ್ನು ಗೆದ್ದನು.

ತೃಷಿತೇನ ಸ ಕೌರವ್ಯ ಭಿಕ್ಷತಶ್ಚಿತ್ರಭಾನುನಾ ।
ಸಹಸ್ರಬಾಹುರ್ವಿಕ್ರಾಂತಃ ಪ್ರಾದಾದ್ ಭಿಕ್ಷಾಮಥಾಗ್ನಯೇ ॥೩೫॥

ಎಲೈ ಕೌರವ್ಯನೇ! ಸಹಸ್ರಬಾಹುವಾದ ಅವನು ಅಗ್ನಿಯು ಬಾಯಾರಿ ಬೇಡಿದಾಗ ತನ್ನ ಪರಾಕ್ರಮದಿಂದ ಅಗ್ನಿಗೆ ಭಿಕ್ಷೆಯನ್ನು ನೀಡಿದನು.

ಗ್ರಾಮಾನ್ ಪುರಾಣಿ ಘೋಷಾಂಶ್ಚ ಪತ್ತನಾನಿ ಚ ವೀರ್ಯವಾನ್ ।
ಜಜ್ವಾಲ ತಸ್ಯ ಬಾಣೈಸ್ತು ಚಿತ್ರಭಾನುರ್ದಿಧಕ್ಷಯಾ ॥೩೬॥

ಕಾರ್ತವೀರ್ಯಾರ್ಜುನನು ಪ್ರಯೋಗಿಸಿದ ಬಾಣದಿಂದ ಉಂಟಾದ ಅಗ್ನಿಯಿಂದ ಎಲ್ಲವನ್ನೂ ದಹಿಸಿ ಭಕ್ಷಿಸಲು ಬಯಸಿ ಅಗ್ನಿಯು ಗ್ರಾಮಗಳನ್ನೂ, ಪುರಗಳನ್ನೂ, ಪಟ್ಟಣಗಳನ್ನೂ ಮತ್ತು ಹಳ್ಳಿಗಳನ್ನೂ ಜ್ವಲಿಸಿದನು.

ಸ ತಸ್ಯ ಪುರುಷೇಂದ್ರಸ್ಯ ಪ್ರಭಾವೇನ ಮಹಾತಪಾಃ ।
ದದಾಹ ಕಾರ್ತವೀರ್ಯಸ್ಯ ಶೈಲಾನಥ ವನಾನಿ ಚ ॥೩೭॥

ಮಹಾತಪಸ್ವಿಯಾದ ಅಗ್ನಿಯು ಪುರುಷೇಂದ್ರನಾದ ಕಾರ್ತವೀರ್ಯಾರ್ಜುನನ ಪ್ರಭಾವದಿಂದ ಕಾರ್ತವೀರ್ಯಾರ್ಜುನನ ಪರ್ವತಗಳನ್ನೂ ವನಗಳನ್ನೂ ಸುಟ್ಟುಹಾಕಿದನು.

ಸ ಶೂನ್ಯಮಾಶ್ರಮಾರಣ್ಯಮ್ ಆಪವಸ್ಯ ಮಹಾತ್ಮನಃ ।
ದದಾಹ ಪವನೇನೇದ್ಧಶ್ಚಿತ್ರಭಾನುಃ ಸಹೈಹಯಃ ॥೩೮॥

ಅಗ್ನಿಯು ಹೈಹಯರಾಜನಿಂದ ಸಹಿತನಾಗಿ ಮಹಾತ್ಮರಾದ ವಸಿಷ್ಠರ ಶೂನ್ಯವಾದ ಅರಣ್ಯಾಶ್ರಮವನ್ನು ವಾಯುವಿನ ಸಹಾಯದಿಂದ ಸುಟ್ಟುಹಾಕಿದನು.

ಆಪವಸ್ತಂ ತತೋ ರೋಷಾಚ್ಚಶಾಪಾರ್ಜುನಮಚ್ಯುತ ।
ದಗ್ಧೋ ಶ್ರಮೇ ಮಹಾರಾಜ ಕಾರ್ತವೀರ್ಯೇಣ ವೀರ್ಯವಾನ್ ॥೩೯॥

ಎಲೈ ಮಹಾರಾಜನೇ! ಅಚ್ಯುತನೇ! ಕಾರ್ತವೀರ್ಯನ ಸಹಾಯದಿಂದ

ಅಗ್ನಿಯು ತಮ್ಮ ಆಶ್ರಮವನ್ನು ದಹಿಸಿದ ಕಾರಣದಿಂದ ಪರಾಕ್ರಮಶಾಲಿಗಳಾದ ವಸಿಷ್ಠರು ರೋಷದಿಂದ ಅರ್ಜುನನಿಗೆ ಶಾಪವನ್ನು ಕೊಟ್ಟರು.

ತ್ವಯಾ ನ ವರ್ಜಿತಂ ಮೋಹಾದ್ ಯಸ್ಮಾದ್ ವನಮಿದಂ ಮಮ।
ದಗ್ಧಂ ತಸ್ಮಾದ್ ರಣೇ ರಾಮೋ ಬಾಹೂಂಸ್ತೇ ಛೇತ್ಸ್ಯತೇऽರ್ಜುನ ॥೪೦॥

ಎಲೈ ಅರ್ಜುನನೇ! ನೀನು ಮೋಹಕ್ಕೆ ವಶನಾಗಿ ನನ್ನ ಈ ಕಾನನಾಶ್ರಮವನ್ನು ಬಿಡದೆ ದಹಿಸಿದ ಕಾರಣದಿಂದ ಮುಂದೆ ಪರಶುರಾಮನು ಯುದ್ಧದಲ್ಲಿ ನಿನ್ನ ಬಾಹುಗಳನ್ನು ಕತ್ತರಿಸುವನು (ಎಂದು ಶಾಪವನ್ನು ನೀಡಿದರು).

ಅರ್ಜುನಸ್ತು ಮಹಾರಾಜ ಬಲೀ ನಿತ್ಯಂ ಶಮಾತ್ಮಕಃ।
ಬ್ರಹ್ಮಣ್ಯಶ್ಚ ಶರಣ್ಯಶ್ಚ ದಾತಾ ಶೂರಶ್ಚ ಭಾರತ ॥೪೧॥

ಎಲೈ ಮಹಾರಾಜನೇ! ಭಾರತನೇ! ಅರ್ಜುನನಾದರೋ ಬಲಿಷ್ಠನೂ, ಯಾವಾಗಲೂ ಶಾಂತಸ್ವರೂಪನೂ, ಬ್ರಾಹ್ಮಣವತ್ಸಲನೂ, ಶರಣಾಗತವತ್ಸಲನೂ, ದಾತೃವೂ ಮತ್ತು ಶೂರನೂ ಆಗಿದ್ದನು.

ತಸ್ಯ ಪುತ್ರಾಃ ಸುಬಲಿನಃ ಶಾಪೇನಾಸನ್ ಪಿತುರ್ವಧೇ।
ನಿಮಿತ್ತಮವಲಿಪ್ತಾ ವೈ ನೃಶಂಸಾಶ್ಚೈವ ನಿತ್ಯದಾ ॥೪೨॥

ಅವನ ಪುತ್ರರು ಬಲಿಷ್ಠರೂ ಕ್ರೂರಿಗಳೂ ದರ್ಪಿಷ್ಠರೂ ಆಗಿ ಶಾಪದಿಂದ ಪಿತೃ-ವಧೆಗೆ ಕಾರಣರಾದರು.

ಜಮದಗ್ನಿಧೇನ್ವಾಸ್ತೇ ವತ್ಸಮಾನಿನ್ಯುರ್ಭರತರ್ಷಭ।
ಅಜ್ಞಾತಂ ಕಾರ್ತವೀರ್ಯಸ್ಯ ಹೈಹಯೇಂದ್ರಸ್ಯ ಧೀಮತಃ ॥೪೩॥

ಎಲೈ ಭರತರ್ಷಭನೇ! ಅವರು ಜಮದಗ್ನಿಋಷಿಗಳ ಧೇನುವಿನ ಕರುವನ್ನು ಮೇಧಾವಿಯಾದ ಹೈಹಯರಾಜನಾದ ಕಾರ್ತವೀರ್ಯನಿಗೆ ತಿಳಿಯದಂತೆಯೇ ಎಳೆದುಕೊಂಡು ಬಂದರು.

ತೃಷಿತೇನ ಸ ಕೌರವ್ಯ ಭಿಕ್ಷತಶ್ಚಿತ್ರಭಾನುನಾ ।
ಸಹಸ್ರಬಾಹುರ್ವಿಕ್ರಾಂತಃ ಪ್ರಾದಾದ್ ಭಿಕ್ಷಾಮಥಾಗ್ನಯೇ ॥೩೫॥

ಎಲೈ ಕೌರವ್ಯನೇ! ಸಹಸ್ರಬಾಹುವಾದ ಅವನು ಅಗ್ನಿಯು ಬಾಯಾರಿ ಬೇಡಿದಾಗ ತನ್ನ ಪರಾಕ್ರಮದಿಂದ ಅಗ್ನಿಗೆ ಭಿಕ್ಷೆಯನ್ನು ನೀಡಿದನು.

ಗ್ರಾಮಾನ್ ಪುರಾಣಿ ಘೋಷಾಂಶ್ಚ ಪತ್ತನಾನಿ ಚ ವೀರ್ಯವಾನ್ ।
ಜಜ್ವಾಲ ತಸ್ಯ ಬಾಣೈಸ್ತು ಚಿತ್ರಭಾನುರ್ದಿಧಕ್ಷಯಾ ॥೩೬॥

ಕಾರ್ತವೀರ್ಯಾರ್ಜುನನು ಪ್ರಯೋಗಿಸಿದ ಬಾಣದಿಂದ ಉಂಟಾದ ಅಗ್ನಿಯಿಂದ ಎಲ್ಲವನ್ನೂ ದಹಿಸಿ ಭಕ್ಷಿಸಲು ಬಯಸಿ ಅಗ್ನಿಯು ಗ್ರಾಮಗಳನ್ನೂ, ಪುರಗಳನ್ನೂ, ಪಟ್ಟಣಗಳನ್ನೂ ಮತ್ತು ಹಳ್ಳಿಗಳನ್ನೂ ಜ್ವಲಿಸಿದನು.

ಸ ತಸ್ಯ ಪುರುಷೇಂದ್ರಸ್ಯ ಪ್ರಭಾವೇನ ಮಹಾತಪಾಃ ।
ದದಾಹ ಕಾರ್ತವೀರ್ಯಸ್ಯ ಶೈಲಾನಥ ವನಾನಿ ಚ ॥೩೭॥

ಮಹಾತಪಸ್ವಿಯಾದ ಅಗ್ನಿಯು ಪುರುಷೇಂದ್ರನಾದ ಕಾರ್ತವೀರ್ಯಾರ್ಜುನನ ಪ್ರಭಾವದಿಂದ ಕಾರ್ತವೀರ್ಯಾರ್ಜುನನ ಪರ್ವತಗಳನ್ನೂ ವನಗಳನ್ನೂ ಸುಟ್ಟುಹಾಕಿದನು.

ಸ ಶೂನ್ಯಮಾಶ್ರಮಾರಣ್ಯಮ್ ಆಪವಸ್ಯ ಮಹಾತ್ಮನಃ ।
ದದಾಹ ಪವನೇನೇದ್ಧಶ್ಚಿತ್ರಭಾನುಃ ಸಹೈಹಯಃ ॥೩೮॥

ಅಗ್ನಿಯು ಹೈಹಯರಾಜನಿಂದ ಸಹಿತನಾಗಿ ಮಹಾತ್ಮರಾದ ವಸಿಷ್ಠರ ಶೂನ್ಯವಾದ ಅರಣ್ಯಾಶ್ರಮವನ್ನು ವಾಯುವಿನ ಸಹಾಯದಿಂದ ಸುಟ್ಟುಹಾಕಿದನು.

ಆಪವಸ್ತಂ ತತೋ ರೋಷಾಚ್ಚಶಾಪಾರ್ಜುನಮಚ್ಯುತ ।
ದಗ್ಧೋ ಶ್ರಮೇ ಮಹಾರಾಜ ಕಾರ್ತವೀರ್ಯೇಣ ವೀರ್ಯವಾನ್ ॥೩೯॥

ಎಲೈ ಮಹಾರಾಜನೇ! ಅಚ್ಯುತನೇ! ಕಾರ್ತವೀರ್ಯನ ಸಹಾಯದಿಂದ

ಅಗ್ನಿಯು ತಮ್ಮ ಆಶ್ರಮವನ್ನು ದಹಿಸಿದ ಕಾರಣದಿಂದ ಪರಾಕ್ರಮಶಾಲಿಗಳಾದ ವಸಿಷ್ಠರು ರೋಷದಿಂದ ಅರ್ಜುನನಿಗೆ ಶಾಪವನ್ನು ಕೊಟ್ಟರು.

ತ್ವಯಾ ನ ವರ್ಜಿತಂ ಮೋಹಾದ್ ಯಸ್ಮಾದ್ ವನಮಿದಂ ಮಮ।
ದಗ್ಧಂ ತಸ್ಮಾದ್ ರಣೇ ರಾಮೋ ಬಾಹೂಂಸ್ತೇ ಛೇತ್ಸ್ಯತೇऽರ್ಜುನ ॥೪೦॥

ಎಲೈ ಅರ್ಜುನನೇ! ನೀನು ಮೋಹಕ್ಕೆ ವಶನಾಗಿ ನನ್ನ ಈ ಕಾನನಾಶ್ರಮವನ್ನು ಬಿಡದೆ ದಹಿಸಿದ ಕಾರಣದಿಂದ ಮುಂದೆ ಪರಶುರಾಮನು ಯುದ್ಧದಲ್ಲಿ ನಿನ್ನ ಬಾಹುಗಳನ್ನು ಕತ್ತರಿಸುವನು (ಎಂದು ಶಾಪವನ್ನು ನೀಡಿದರು).

ಅರ್ಜುನಸ್ತು ಮಹಾರಾಜ ಬಲೀ ನಿತ್ಯಂ ಶಮಾತ್ಮಕಃ।
ಬ್ರಹ್ಮಣ್ಯಶ್ಚ ಶರಣ್ಯಶ್ಚ ದಾತಾ ಶೂರಶ್ಚ ಭಾರತ ॥೪೧॥

ಎಲೈ ಮಹಾರಾಜನೇ! ಭಾರತನೇ! ಅರ್ಜುನನಾದರೋ ಬಲಿಷ್ಠನೂ, ಯಾವಾಗಲೂ ಶಾಂತಸ್ವರೂಪನೂ, ಬ್ರಾಹ್ಮಣವತ್ಸಲನೂ, ಶರಣಾಗತವತ್ಸಲನೂ, ದಾತೃವೂ ಮತ್ತು ಶೂರನೂ ಆಗಿದ್ದನು.

ತಸ್ಯ ಪುತ್ರಾಃ ಸುಬಲಿನಃ ಶಾಪೇನಾಸನ್ ಪಿತುರ್ವಧೇ।
ನಿಮಿತ್ತಮವಲಿಪ್ತಾ ವೈ ನೃಶಂಸಾಶ್ಚೈವ ನಿತ್ಯದಾ ॥೪೨॥

ಅವನ ಪುತ್ರರು ಬಲಿಷ್ಠರೂ ಕ್ರೂರಿಗಳೂ ದರ್ಪಿಷ್ಠರೂ ಆಗಿ ಶಾಪದಿಂದ ಪಿತೃ-ವಧೆಗೆ ಕಾರಣರಾದರು.

ಜಮದಗ್ನಿಧೇನ್ವಾಸ್ತೇ ವತ್ಸಮಾನಿನ್ಯುರ್ಭರತರ್ಷಭ।
ಅಜ್ಞಾತಂ ಕಾರ್ತವೀರ್ಯಸ್ಯ ಹೈಹಯೇಂದ್ರಸ್ಯ ಧೀಮತಃ ॥೪೩॥

ಎಲೈ ಭರತರ್ಷಭನೇ! ಅವರು ಜಮದಗ್ನಿಋಷಿಗಳ ಧೇನುವಿನ ಕರುವನ್ನು ಮೇಧಾವಿಯಾದ ಹೈಹಯರಾಜನಾದ ಕಾರ್ತವೀರ್ಯನಿಗೆ ತಿಳಿಯದಂತೆಯೇ ಎಳೆದುಕೊಂಡು ಬಂದರು.

ತೃಷಿತೇನ ಸ ಕೌರವ್ಯ ಭಿಕ್ಷತಶ್ಚಿತ್ರಭಾನುನಾ ।
ಸಹಸ್ರಬಾಹುರ್ವಿಕ್ರಾಂತಃ ಪ್ರಾದಾದ್ ಭಿಕ್ಷಾಮಥಾಗ್ನಯೇ ॥೩೫॥

ಎಲೈ ಕೌರವ್ಯನೇ! ಸಹಸ್ರಬಾಹುವಾದ ಅವನು ಅಗ್ನಿಯು ಬಾಯಾರಿ ಬೇಡಿದಾಗ ತನ್ನ ಪರಾಕ್ರಮದಿಂದ ಅಗ್ನಿಗೆ ಭಿಕ್ಷೆಯನ್ನು ನೀಡಿದನು.

ಗ್ರಾಮಾನ್ ಪುರಾಣಿ ಘೋಷಾಂಶ್ಚ ಪತ್ತನಾನಿ ಚ ವೀರ್ಯವಾನ್ ।
ಜಜ್ವಾಲ ತಸ್ಯ ಬಾಣೈಸ್ತು ಚಿತ್ರಭಾನುರ್ದಿಧಕ್ಷಯಾ ॥೩೬॥

ಕಾರ್ತವೀರ್ಯಾರ್ಜುನನು ಪ್ರಯೋಗಿಸಿದ ಬಾಣದಿಂದ ಉಂಟಾದ ಅಗ್ನಿಯಿಂದ ಎಲ್ಲವನ್ನೂ ದಹಿಸಿ ಭಕ್ಷಿಸಲು ಬಯಸಿ ಅಗ್ನಿಯು ಗ್ರಾಮಗಳನ್ನೂ, ಪುರಗಳನ್ನೂ, ಪಟ್ಟಣಗಳನ್ನೂ ಮತ್ತು ಹಳ್ಳಿಗಳನ್ನೂ ಜ್ವಲಿಸಿದನು.

ಸ ತಸ್ಯ ಪುರುಷೇಂದ್ರಸ್ಯ ಪ್ರಭಾವೇನ ಮಹಾತಪಾಃ ।
ದದಾಹ ಕಾರ್ತವೀರ್ಯಸ್ಯ ಶೈಲಾನಥ ವನಾನಿ ಚ ॥೩೭॥

ಮಹಾತಪಸ್ವಿಯಾದ ಅಗ್ನಿಯು ಪುರುಷೇಂದ್ರನಾದ ಕಾರ್ತವೀರ್ಯಾರ್ಜುನನ ಪ್ರಭಾವದಿಂದ ಕಾರ್ತವೀರ್ಯಾರ್ಜುನನ ಪರ್ವತಗಳನ್ನೂ ವನಗಳನ್ನೂ ಸುಟ್ಟುಹಾಕಿದನು.

ಸ ಶೂನ್ಯಮಾಶ್ರಮಾರಣ್ಯಮ್ ಆಪವಸ್ಯ ಮಹಾತ್ಮನಃ ।
ದದಾಹ ಪವನೇನೇದ್ಧಶ್ಚಿತ್ರಭಾನುಃ ಸಹೈಹಯಃ ॥೩೮॥

ಅಗ್ನಿಯು ಹೈಹಯರಾಜನಿಂದ ಸಹಿತನಾಗಿ ಮಹಾತ್ಮರಾದ ವಸಿಷ್ಠರ ಶೂನ್ಯವಾದ ಅರಣ್ಯಾಶ್ರಮವನ್ನು ವಾಯುವಿನ ಸಹಾಯದಿಂದ ಸುಟ್ಟುಹಾಕಿದನು.

ಆಪವಸ್ತಂ ತತೋ ರೋಷಾಚ್ಚಶಾಪಾರ್ಜುನಮಚ್ಯುತ ।
ದಗ್ಧೋ ಶ್ರಮೇ ಮಹಾರಾಜ ಕಾರ್ತವೀರ್ಯೇಣ ವೀರ್ಯವಾನ್ ॥೩೯॥

ಎಲೈ ಮಹಾರಾಜನೇ! ಅಚ್ಯುತನೇ! ಕಾರ್ತವೀರ್ಯನ ಸಹಾಯದಿಂದ

ಅಗ್ನಿಯು ತಮ್ಮ ಆಶ್ರಮವನ್ನು ದಹಿಸಿದ ಕಾರಣದಿಂದ ಪರಾಕ್ರಮಶಾಲಿಗಳಾದ ವಸಿಷ್ಠರು ರೋಷದಿಂದ ಅರ್ಜುನನಿಗೆ ಶಾಪವನ್ನು ಕೊಟ್ಟರು.

ತ್ವಯಾ ನ ವರ್ಜಿತಂ ಮೋಹಾದ್ ಯಸ್ಮಾದ್ ವನಮಿದಂ ಮಮ।
ದಗ್ಧಂ ತಸ್ಮಾದ್ ರಣೇ ರಾಮೋ ಬಾಹೂಂಸ್ತೇ ಛೇತ್ಸ್ಯತೇऽರ್ಜುನ ॥೪೦॥

ಎಲೈ ಅರ್ಜುನನೇ! ನೀನು ಮೋಹಕ್ಕೆ ವಶನಾಗಿ ನನ್ನ ಈ ಕಾನನಾಶ್ರಮವನ್ನು ಬಿಡದೆ ದಹಿಸಿದ ಕಾರಣದಿಂದ ಮುಂದೆ ಪರಶುರಾಮನು ಯುದ್ಧದಲ್ಲಿ ನಿನ್ನ ಬಾಹುಗಳನ್ನು ಕತ್ತರಿಸುವನು (ಎಂದು ಶಾಪವನ್ನು ನೀಡಿದರು).

ಅರ್ಜುನಸ್ತು ಮಹಾರಾಜ ಬಲೀ ನಿತ್ಯಂ ಶಮಾತ್ಮಕಃ।
ಬ್ರಹ್ಮಣ್ಯಶ್ಚ ಶರಣ್ಯಶ್ಚ ದಾತಾ ಶೂರಶ್ಚ ಭಾರತ ॥೪೧॥

ಎಲೈ ಮಹಾರಾಜನೇ! ಭಾರತನೇ! ಅರ್ಜುನನಾದರೋ ಬಲಿಷ್ಠನೂ, ಯಾವಾಗಲೂ ಶಾಂತಸ್ವರೂಪನೂ, ಬ್ರಾಹ್ಮಣವತ್ಸಲನೂ, ಶರಣಾಗತವತ್ಸಲನೂ, ದಾತೃವೂ ಮತ್ತು ಶೂರನೂ ಆಗಿದ್ದನು.

ತಸ್ಯ ಪುತ್ರಾಃ ಸುಬಲಿನಃ ಶಾಪೇನಾಸನ್ ಪಿತುರ್ವಧೇ।
ನಿಮಿತ್ತಮವಲಿಪ್ತಾ ವೈ ನೃಶಂಸಾಶ್ಚೈವ ನಿತ್ಯದಾ ॥೪೨॥

ಅವನ ಪುತ್ರರು ಬಲಿಷ್ಠರೂ ಕ್ರೂರಿಗಳೂ ದರ್ಪಿಷ್ಠರೂ ಆಗಿ ಶಾಪದಿಂದ ಪಿತೃ-ವಧೆಗೆ ಕಾರಣರಾದರು.

ಜಮದಗ್ನಿಧೇನ್ವಾಸ್ತೇ ವತ್ಸಮಾನಿನ್ಯುರ್ಭರತರ್ಷಭ।
ಅಜ್ಞಾತಂ ಕಾರ್ತವೀರ್ಯಸ್ಯ ಹೈಹಯೇಂದ್ರಸ್ಯ ಧೀಮತಃ ॥೪೩॥

ಎಲೈ ಭರತರ್ಷಭನೇ! ಅವರು ಜಮದಗ್ನಿಋಷಿಗಳ ಧೇನುವಿನ ಕರುವನ್ನು ಮೇಧಾವಿಯಾದ ಹೈಹಯರಾಜನಾದ ಕಾರ್ತವೀರ್ಯನಿಗೆ ತಿಳಿಯದಂತೆಯೇ ಎಳೆದುಕೊಂಡು ಬಂದರು.

ತತೋಽರ್ಜುನಸ್ಯ ಬಾಹೂಂಸ್ತು ಛಿತ್ತ್ವಾ ವೈ ಪೌರುಷಾನ್ವಿತಃ।
ತಂ ರುವಂತಂ ತತೋ ವತ್ಸಂ ಜಾಮದಗ್ನ್ಯಃ ಸ್ವಮಾಶ್ರಮಮ್ ॥೪೪॥

ಎಲೈ ರಾಜೇಂದ್ರನೇ! ಅನಂತರ ಪೌರುಷವನ್ನು ಹೊಂದಿದ ಪ್ರಭುಗಳಾದ ಪರಶುರಾಮರು ಅರ್ಜುನನ ಬಾಹುಗಳನ್ನು ಕತ್ತರಿಸಿ ಕಿರುಚಾಡುತ್ತಿದ್ದ ಆ ಕರುವನ್ನು ರಾಜನ ಅಂತಃಪುರದಿಂದ ತಮ್ಮ ಆಶ್ರಮಕ್ಕೆ ಹಿಂದಕ್ಕೆ ತೆಗೆದುಕೊಂಡು ಬಂದರು.

ಅರ್ಜುನಸ್ಯ ಸುತಾಸ್ತೇ ತು ಸಂಭೂಯಾಬುದ್ಧಯಸ್ತದಾ।
ಗತ್ವಾಽಽಶ್ರಮಮಸಂಬುದ್ಧಂ ಜಮದಗ್ನೇರ್ಮಹಾತ್ಮನಃ ॥೪೫॥

ಅಪಾತಯಂತ ಭಲ್ಲಾಗ್ರೈಃ ಶಿರಃ ಕಾಯಾನ್ನರಾಧಿಪ।
ಸಮಿತ್ಕುಶಾರ್ಥಂ ರಾಮಸ್ಯ ನಿರ್ಗತಸ್ಯ ಮಹಾತ್ಮನಃ ॥೪೬॥

ಆಗ ಆ ಅರ್ಜುನನ ಬುದ್ಧಿಹೀನರಾದ ಪುತ್ರರು ಮಹಾತ್ಮರಾದ ಜಮದಗ್ನಿಗಳ ಆಶ್ರಮಕ್ಕೆ ಯಾರಿಗೂ ತಿಳಿಯದಂತೆ ಹೋಗಿ ಭಲ್ಲೆಯಿಂದ ಅವರ ಶಿರಸ್ಸನ್ನು ಕತ್ತರಿಸಿ ಕೆಡವಿದರು. ಎಲೈ ರಾಜನೇ! ಮಹಾತ್ಮರಾದ ಪರಶುರಾಮರು ಆಗ ಸಮಿತ್ತು ಮತ್ತು ಕುಶಗಳನ್ನು ತರಲು ಆಶ್ರಮದಿಂದ ಹೊರಗೆ ಹೋಗಿದ್ದರು.

ಪ್ರತ್ಯಕ್ಷಂ ರಾಮಮಾತುಶ್ಚ ತಥೈವಾಶ್ರಮವಾಸಿನಾಮ್।
ಶ್ರುತ್ವಾ ರಾಮಸ್ತಮರ್ಥಂ ಚ ಕ್ರುದ್ಧಃ ಕಾಲಾನಲೋಪಮಃ ॥೪೭॥

ರಾಮನ ತಾಯಿಯಾದ ರೇಣುಕೆಯ ಮತ್ತು ಆಶ್ರಮವಾಸಿಗಳ ಎದುರಿನಲ್ಲಿ ತಮ್ಮ ತಂದೆಯನ್ನು ಸಂಹರಿಸಿದುದನ್ನು ಕೇಳಿ ಪರಶುರಾಮರು ಕಾಲಾಗ್ನಿಯಂತೆ ಕೋಪಗೊಂಡರು.

ಧನುರ್ವೇದೇಽದ್ವಿತೀಯೋ ಹಿ ದಿವ್ಯಾಸ್ತ್ರೈಃ ಸಮಲಂಕೃತಃ।
ಚಂದ್ರಬಿಂಬಾರ್ಧಸಂಕಾಶಂ ಪರಶುಂ ಗೃಹ್ಯ ಭಾರ್ಗವಃ ॥೪೮॥

ತತಃ ಪಿತೃವಧಾಮರ್ಷಾದ್ ರಾಮಃ ಪರಮಮನ್ಯುಮಾನ್।
ನಿಃಕ್ಷತ್ರಿಯಾಂ ಪ್ರತಿಶ್ರುತ್ಯ ಮಹೀಂ ಶಸ್ತ್ರಮಗೃಹ್ಣತ ॥೪೯॥

ಧನುರ್ವೇದದಲ್ಲಿ ಅದ್ವಿತೀಯರೂ ಮತ್ತು ದಿವ್ಯಾಸ್ತ್ರಗಳಿಂದ ಸಮಲಂಕೃತರೂ ಆದ ಪರಶುರಾಮರು ಅರ್ಧಚಂದ್ರಬಿಂಬದಂತಿದ್ದ ಪರಶುವನ್ನು ತೆಗೆದುಕೊಂಡು ತಂದೆಯ ವಧೆಯಿಂದ ಬಹಳ ಕೋಪಗೊಂಡವರಾಗಿ ಭೂಮಿಯನ್ನು ಕ್ಷತ್ರಿಯ-ರಹಿತವನ್ನಾಗಿ ಮಾಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ ಶಸ್ತ್ರಗ್ರಹಣವನ್ನು ಮಾಡಿದರು.

ತತಃ ಸ ಭೃಗುಶಾರ್ದೂಲಃ ಕಾರ್ತವೀರ್ಯಸ್ಯ ವೀರ್ಯವಾನ್ ।
ವಿಕ್ರಮ್ಯ ನಿಜಘಾನಾಶು ಪುತ್ರಾನ್ ಪೌತ್ರಾಂಶ್ಚ ಸರ್ವಶಃ ॥೫೦॥

ಅನಂತರ ಪರಾಕ್ರಮಶಾಲಿಗಳಾದ ಭೃಗುಶಾರ್ದೂಲರಾದ ಅವರು ತಮ್ಮ ಪರಾ-ಕ್ರಮದಿಂದ ಕಾರ್ತವೀರ್ಯನ ಪುತ್ರಪೌತ್ರರೆಲ್ಲರನ್ನೂ ಶೀಘ್ರವಾಗಿ ಸಂಹರಿಸಿದರು.

ಸ ಹೈಹಯಸಹಸ್ರಾಣಿ ಹತ್ವಾ ಪರಮಮನ್ಯುಮಾನ್ ।
ಚಕಾರ ಭಾರ್ಗವೋ ರಾಜನ್ ಮಹೀಂ ಶೋಣಿತಕರ್ದಮಾಮ್ ॥೫೧॥

ಎಲೈ ರಾಜನೇ! ಪರಮಕೋಪಿಷ್ಠರಾದ ಪರಶುರಾಮರು ಹೈಹಯಕುಲದ ಸಹಸ್ರಪುರುಷರನ್ನು ಕೊಂದು ಭೂಮಿಯನ್ನು ರಕ್ತದ ಕೆಸರುಳ್ಳದ್ದನ್ನಾಗಿ ಮಾಡಿದರು.

ಸ ತಥಾ ಸುಮಹಾತೇಜಾಃ ಕೃತ್ವಾ ನಿಃಕ್ಷತ್ರಿಯಾಂ ಮಹೀಮ್ ।
ಕೃಪಯಾ ಪರಯಾವಿಷ್ಟೋ ವನಮೇವ ಜಗಾಮ ಹ ॥೫೨॥

ಮಹಾತೇಜಸ್ವಿಗಳಾದ ಅವರು ಭೂಮಿಯನ್ನು ನಿಃಕ್ಷತ್ರಿಯವನ್ನಾಗಿ ಮಾಡಿ ಶ್ರೇಷ್ಠ ಕೃಪೆಯಿಂದ ಕೂಡಿದವರಾಗಿ ಕಾಡಿಗೇ ಹೊರಟುಹೋದರು.

ತತೋ ವರ್ಷಸಹಸ್ರೇಷು ಸಮತೀತೇಷು ಕೇಷುಚಿತ್ ।
ಕ್ಷೇಪಂ ಸಂಪ್ರಾಪ್ತವಾಂಸ್ತೀವ್ರಂ ಪ್ರಕೃತ್ಯಾ ಕೋಪನಃ ಪ್ರಭುಃ ॥೫೩॥

ಅನಂತರ ಕೆಲವು ಸಹಸ್ರವರ್ಷಗಳು ಕಳೆದ ಮೇಲೆ ಸ್ವಭಾವದಿಂದಲೇ ಕೋಪ-ಶೀಲರಾದ ಪ್ರಭುಗಳಾದ ಅವರು ತೀವ್ರವಾದ ನಿಂದೆಗೆ ಗುರಿಯಾದರು.

ವಿಶ್ವಾಮಿತ್ರಸ್ಯ ಪೌತ್ರಸ್ತು ರೈಭ್ಯಪುತ್ರೋ ಮಹಾತಪಾಃ।
ಪರಾವಸುರ್ಮಹಾರಾಜ ಕ್ಷಿಪ್ತ್ವಾಹ ಜನಸಂಸದಿ ॥೫೪॥

ಎಲೈ ಮಹಾರಾಜನೇ! ವಿಶ್ವಾಮಿತ್ರನ ಪೌತ್ರನೂ ಮಹಾತಪಸ್ವಿಯೂ ರೈಭ್ಯ-ಪುತ್ರನೂ ಆದ ಪರಾವಸುವು ಜನರ ಸಭೆಯಲ್ಲಿ ಪರಶುರಾಮರನ್ನು ನಿಂದಿಸಿ ಮಾತನಾಡಿದನು.

ಯೇ ತೇ ಯಯಾತಿಪತನೇ ಯಜ್ಞೇ ಸಂತಃ ಸಮಾಗತಾಃ।
ಪ್ರತರ್ದನಪ್ರಭೃತಯೋ ರಾಮ ಕಿಂ ಕ್ಷತ್ರಿಯಾ ನ ತೇ ॥೫೫॥

ಎಲೈ ಪರಶುರಾಮನೇ! ಯಯಾತಿಪತನವೆಂಬ ಸ್ಥಳದಲ್ಲಿ ಯಜ್ಞವನ್ನು ಮಾಡಿ-ದಾಗ ಅಲ್ಲಿಗೆ ಸಮಾಗತರಾದ ಪ್ರತರ್ದನ ಮೊದಲಾದವರು ಕ್ಷತ್ರಿಯರಲ್ಲವೇ? (ಅವರನ್ನು ನೀನು ಏಕೆ ಕೊಲ್ಲಲಿಲ್ಲ?)

ಮಿಥ್ಯಾಪ್ರತಿಜ್ಞೋ ರಾಮ ತ್ವಂ ಕತ್ಥಸೇ ಜನಸಂಸದಿ।
ಭಯಾತ್ ಕ್ಷತ್ರಿಯವೀರಾಣಾಂ ಪರ್ವತಂ ಸಮುಪಾಶ್ರಿತಃ ॥೫೬॥

ಎಲೈ ಪರಶುರಾಮನೇ! ನೀನು ಮಿಥ್ಯಾ ಪ್ರತಿಜ್ಞೆಯನ್ನು ಮಾಡಿ ಜನರೆದುರಿನಲ್ಲಿ ನಿನ್ನ ಪರಾಕ್ರಮವನ್ನು ಕೊಚ್ಚಿಕೊಳ್ಳುತ್ತಿದ್ದೀಯೆ. ಕ್ಷತ್ರಿಯವೀರರ ಭಯದಿಂದ ನೀನು ಪರ್ವತವನ್ನು ಸೇರಿದ್ದೀಯೆ.

ಸ ಪುನಃ ಕ್ಷತ್ರಿಯಶತೈಃ ಪೃಥಿವೀಮನುಸಂತತಾಮ್ ।
ಪರಾವಸೋಸ್ತದಾ ಶ್ರುತ್ವಾ ಶಸ್ತ್ರಂ ಜಗ್ರಾಹ ಭಾರ್ಗವಃ ॥೫೭॥

ಆಗ ಪರಶುರಾಮರು ಪರಾವಸುವಿನ ಆ ಮಾತನ್ನು ಕೇಳಿ, ಪುನಃ ಭೂಮಿಯಲ್ಲಿ ಕ್ಷತ್ರಿಯಜಾತಿಯು ನಿಬಿಡವಾಗಿ ಹರಡಿರುವುದನ್ನು ತಿಳಿದು ಪುನಃ ಶಸ್ತ್ರಗ್ರಹಣವನ್ನು ಮಾಡಿದರು.

ತತೋ ಯೇ ಕ್ಷತ್ರಿಯಾ ರಾಜನ್ ಶತಸ್ತೇನ ಜೀವಿತಾಃ।
ತೇ ವಿವೃದ್ಧಾ ಮಹಾವೀರ್ಯಾಃ ಪೃಥಿವೀಪತಯೋऽಭವನ್ ॥೫೮॥

ಎಲೈ ರಾಜನೇ! ಆಗ ಮೊದಲು ಯಾವ ನೂರಾರು ಸಂಖ್ಯೆಯ ಕ್ಷತ್ರಿಯರನ್ನು ಅವರು ಕೊಲ್ಲದೆ ಜೀವಸಹಿತವಾಗಿ ಉಳಿಸಿದ್ದರೋ, ಅವರೆಲ್ಲರೂ ಬೆಳೆದು ಮಹಾ-ಪರಾಕ್ರಮಿಗಳಾಗಿ ರಾಜರಾಗಿದ್ದರು.

ಸ ಪುನಸ್ತಾನ್ ಜಘಾನಾಶು ಬಾಲಾನಪಿ ನರಾಧಿಪ।
ಗರ್ಭಸ್ಥೈಸ್ತು ಮಹೀ ವ್ಯಾಪ್ತಾ ಪುನರೇವಾಭವತ್ ತದಾ ॥೫೯॥

ಎಲೈ ರಾಜನೇ! ಪರಶುರಾಮರು ಪುನಃ ಬಾಲಕರನ್ನೂ ಸೇರಿಸಿ ಅವರನ್ನು ಶೀಘ್ರವಾಗಿ ಕೊಂದರು. ಆದರೆ ಪುನಃ ಗರ್ಭದಲ್ಲಿದ್ದ ಕ್ಷತ್ರಿಯರಿಂದ ಭೂಮಿಯು ವ್ಯಾಪ್ತವಾಯಿತು.

ಜಾತಂ ಜಾತಂ ಸ ಗರ್ಭಂ ತು ಪುನರೇವ ಜಘಾನ ಹ।
ಅರಕ್ಷಂಶ್ಚ ಸುತಾನ್ ಕಾಶ್ಚಿತ್ ತದಾ ಕ್ಷತ್ರಿಯಯೋಷಿತಃ ॥೬೦॥

ಪರಶುರಾಮರು ಪುನಃ ಗರ್ಭವು ಜನಿಸಿದಂತೆ, ಜನಿಸಿದಂತೆ ಶಿಶುಗಳನ್ನು ಸಂಹರಿಸಿದರು. ಆಗ ಕೆಲವು ಕ್ಷತ್ರಿಯಸ್ತ್ರೀಯರು ಮಾತ್ರ ತಮ್ಮ ಪುತ್ರರನ್ನು ರಕ್ಷಿಸಿದರು.

ತ್ರಿಃಸಪ್ತಕೃತ್ವಃ ಪೃಥಿವೀಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ।
ದಕ್ಷಿಣಾಮಶ್ವಮೇಧಾಂತೇ ಕಶ್ಯಪಾಯಾದದತ್ ತತಃ ॥೬೧॥

ಪ್ರಭುಗಳಾದ ಪರಶುರಾಮರು ಇಪ್ಪತ್ತೊಂದು ಬಾರಿ ಭೂಮಿಯನ್ನು ಸುತ್ತಿ, ನಿಃಕ್ಷತ್ರಿಯವನ್ನಾಗಿ ಮಾಡಿ ಅಶ್ವಮೇಧವನ್ನು ಮಾಡಿ ಸಮಗ್ರವಾದ ಭೂಮಿಯನ್ನು ಕಶ್ಯಪರಿಗೆ ದಕ್ಷಿಣೆಯನ್ನಾಗಿ ನೀಡಿದರು.

ಕ್ಷತ್ರಿಯಾಣಾಂ ತು ಶೇಷಾರ್ಥಂ ಕರೇಣೋದ್ದಿಶ್ಯ ಕಶ್ಯಪಃ।
ಸುಕ್‌ಪ್ರಗ್ರಹವತಾ ರಾಜನ್ ಶ್ರೇಮಾನ್ ವಾಕ್ಯಮಥಾಬ್ರವೀತ್ ॥೬೨॥

ಎಲೈ ರಾಜನೇ! ಕ್ಷತ್ರಿಯಕುಲವನ್ನು ಉಳಿಸುವ ಸಲುವಾಗಿ ಕಾಂತಿಯುಕ್ತರಾದ ಕಶ್ಯಪರು ಸ್ರುವವನ್ನು ಹಿಡಿದ ಹಸ್ತವನ್ನು ಮೇಲಕ್ಕೆ ಎತ್ತಿ ತೋರಿಸಿ ಈ ಮಾತನ್ನಾಡಿದರು.

ಗಚ್ಛಂ ಪಾರಂ ಸಮುದ್ರಸ್ಯ ದಕ್ಷಿಣಸ್ಯ ಮಹಾಮುನೇ।
ನ ತೇ ಮದ್ವಿಷಯೇ ರಾಮ ವಸ್ತವ್ಯಮಿಹ ಕರ್ಹಿಚಿತ್ ॥೬೩॥

ಎಲೈ ಮಹಾಮುನಿಯೇ! ದಕ್ಷಿಣಸಮುದ್ರದ ತೀರಕ್ಕೆ ಹೊರಟು ಹೋಗು. ಎಲೈ ರಾಮನೇ! ನನ್ನ ರಾಜ್ಯದಲ್ಲಿ ನೀನು ಯಾವ ಕಾರಣಕ್ಕೂ ವಾಸವನ್ನು ಮಾಡಬಾರದು - ಎಂದು ಹೇಳಿದರು.

ತತಃ ಶೂರ್ಪಾಕರೋದ್ದೇಶಂ ಸಾಗರಸ್ತಸ್ಯ ನಿರ್ಮಮೇ।
ಸಂತ್ರಾಸಾಜ್ಜಾಮದಗ್ನ್ಯಸ್ಯ ಸೋಽಪರಾಂತಮಹೀತಳಮ್ ॥೬೪॥

ಆಗ ಪರಶುರಾಮರ ಭಯದಿಂದ ಸಾಗರನು ಪಶ್ಚಿಮಸಮುದ್ರದಲ್ಲಿ ಕನ್ಯಾತೀರ್ಥದ ಸಮೀಪದಲ್ಲಿ ಪರಶುರಾಮರ ಶೂರ್ಪಾಕಾರವಾದ ಶರವು ಬಿದ್ದ ಕಾರಣದಿಂದ ಶೂರ್ಪಾಕರವೆಂಬ ದೇಶದವರೆಗೆ ಭೂಮಿಯನ್ನು ನಿರ್ಮಿಸಿಕೊಟ್ಟನು.

ಕಶ್ಯಪಸ್ತು ಮಹಾರಾಜ ಪ್ರತಿಗೃಹ್ಯ ಮಹೀಮಿಮಾಮ್।
ಕೃತ್ವಾ ಬ್ರಾಹ್ಮಣಸಂಸ್ಥಾಂ ವೈ ಪ್ರವಿವೇಶ ಮಹಾವನಮ್ ॥೬೫॥

ಎಲೈ ಮಹಾರಾಜನೇ! ಕಶ್ಯಪರಾದರೋ ಈ ಭೂಮಿಯನ್ನು ದಾನವಾಗಿ ಸ್ವೀಕರಿಸಿ, ಅದನ್ನು ಬ್ರಾಹ್ಮಣರಿಗೆ ದಾನವನ್ನಾಗಿ ನೀಡಿ, ತಪಸ್ಸಿಗಾಗಿ ಮಹಾರಣ್ಯವನ್ನು ಪ್ರವೇಶಿಸಿದರು.

ತತಃ ಶೂದ್ರಾಶ್ಚ ವೈಶ್ಯಾಶ್ಚ ಯಥಾಸ್ವೈರಪ್ರಚಾರಿಣಃ।
ಅವರ್ತಂತ ದ್ವಿಜಾಗ್ರ್ಯಾಣಾಂ ದಾರೇಷು ಭರತರ್ಷಭ ॥೬೬॥

ಎಲೈ ಭರತಶ್ರೇಷ್ಠನೇ! ಆನಂತರ ಶೂದ್ರರು ಮತ್ತು ವೈಶ್ಯರು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಾ ಶ್ರೇಷ್ಠರಾದ ಬ್ರಾಹ್ಮಣರ ಪತ್ನಿಯರ ಸಹವಾಸವನ್ನು ಮಾಡಿದರು.

ಅರಾಜಕೇ ಜೀವಲೋಕೇ ದುರ್ಬಲಾ ಬಲವತ್ತರೈಃ।
ಬಾಧ್ಯಂತೇ ನಚ ವಿತ್ತೇಷು ಪ್ರಭುತ್ವಮಿಹ ಕಸ್ಯಚಿತ್ ॥೬೭॥

ಜೀವಲೋಕವು ಅರಾಜಕವಾದಾಗ ದುರ್ಬಲರು ಬಲಿಷ್ಠರಿಂದ ಪೀಡಿಸಲ್ಪಟ್ಟರು. ಯಾರಿಗೂ ತಮ್ಮ ಧನದ ಮೇಲೆ ಒಡೆತನವಿರಲಿಲ್ಲ.

ಬ್ರಾಹ್ಮಣಾ ಮದ್ಯಪಾ ಕೇಚಿನ್ಮೂರ್ಖಾಃ ಪಂಡಿತಮಾನಿನಃ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಶೂದ್ರಾಶ್ಚೋತ್ಪಥಗಾಮಿನಃ ॥೬೮॥

ಬ್ರಾಹ್ಮಣರು ಮದ್ಯಪಾನರತರಾದರು. ಕೆಲವು ಮೂರ್ಖರು ತಮ್ಮನ್ನೇ ಪಂಡಿತ-ರೆಂದುಕೊಂಡರು.ಬ್ರಾಹ್ಮಣರು ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ದುರ್ಮಾರ್ಗಗಾಮಿಗಳಾದರು.

ಪರಸ್ಪರಂ ಸಮಾಶ್ರಿತ್ಯ ಘಾತಯಂತ್ಯಪಥಿ ಸ್ಥಿತಾಃ।
ಸ್ವಧರ್ಮಂ ಬ್ರಾಹ್ಮಣಾಸ್ತ್ಯಕ್ತ್ವಾ ಪಾಷಂಡಾಶ್ಚ ಸಮಾಶ್ರಿತಾಃ ॥೬೯॥

ದುರ್ಮಾರ್ಗದಲ್ಲಿ ಪ್ರವೃತ್ತರಾಗಿ ಪರಸ್ಪರವಾಗಿ ಸಹಾಯವನ್ನು ಹೊಂದಿ ಪ್ರಜೆಗಳನ್ನು ಕೊಲ್ಲಲು ಪ್ರಾರಂಭಿಸಿದರು. ಬ್ರಾಹ್ಮಣರು ತಮ್ಮ ಧರ್ಮವನ್ನು ತ್ಯಜಿಸಿ, ಪಾಷಂಡಮತಗಳನ್ನು ಆಶ್ರಯಿಸಿದರು.

ಚೌರಿಕಾನೃತಮಾಯಾಶ್ಚ ಸರ್ವೇ ಚೈವ ಪ್ರಕುರ್ವತೇ।
ಸ್ವಧರ್ಮಸ್ಥಾನ್ ದ್ವಿಜಾನ್ ಹತ್ವಾ ತಥಾಶ್ರಮನಿವಾಸಿನಃ ॥೭೦॥

ಸ್ವಧರ್ಮನಿರತರಾದ ಆಶ್ರಮವಾಸಿಗಳಾದ ಬ್ರಾಹ್ಮಣರನ್ನು ಕೊಂದು ಎಲ್ಲರೂ ಕಳ್ಳತನ ಸುಳ್ಳುತನ ಮತ್ತು ಮೋಸಗಳಲ್ಲಿ ಪ್ರವೃತ್ತರಾದರು.

ವೈಶ್ಯಾ ಸತ್ಪಥಸಂಸ್ಥಾಶ್ಚ ಶೂದ್ರಾ ಯೇ ಚೈವ ಧಾರ್ಮಿಕಾಃ।
ತಾನ್ ಸರ್ವಾನ್ ಘಾತಯಂತಿ ಸ್ಮ ದುರಾಚಾರಾ ಸುನಿರ್ಭಯಾಃ ॥೭೧॥

ಯಜ್ಞಾಧ್ಯಯನಶೀಲಾಂಶ್ಚ ಆಶ್ರಮಸ್ಥಾಂಸ್ತಪಸ್ವಿನಃ।
ಗೋಬಾಲವೃದ್ಧನಾರೀಣಾಂ ನಾಶಂ ಕುರ್ವಂತಿ ಚಾಪರೇ ॥೭೨॥

ದುರಾಚಾರವುಳ್ಳ ನಿರ್ಭಯರಾದ ದುರ್ಜನರು ಸನ್ಮಾರ್ಗದಲ್ಲಿದ್ದು ಧಾರ್ಮಿಕರಾದ ವೈಶ್ಯರನ್ನೂ ಶೂದ್ರರನ್ನೂ ಎಲ್ಲರನ್ನೂ ಕೊಲ್ಲಲು ಪ್ರಾರಂಭಿಸಿದರು. ಇನ್ನು

ಗಚ್ಛಂ ಪಾರಂ ಸಮುದ್ರಸ್ಯ ದಕ್ಷಿಣಸ್ಯ ಮಹಾಮುನೇ।
ನ ತೇ ಮದ್ವಿಷಯೇ ರಾಮ ವಸ್ತವ್ಯಮಿಹ ಕರ್ಹಿಚಿತ್ ॥೬೩॥

ಎಲೈ ಮಹಾಮುನಿಯೇ! ದಕ್ಷಿಣಸಮುದ್ರದ ತೀರಕ್ಕೆ ಹೊರಟು ಹೋಗು. ಎಲೈ ರಾಮನೇ! ನನ್ನ ರಾಜ್ಯದಲ್ಲಿ ನೀನು ಯಾವ ಕಾರಣಕ್ಕೂ ವಾಸವನ್ನು ಮಾಡಬಾರದು - ಎಂದು ಹೇಳಿದರು.

ತತಃ ಶೂರ್ಪಾಕರೋದ್ದೇಶಂ ಸಾಗರಸ್ತಸ್ಯ ನಿರ್ಮಮೇ।
ಸಂತ್ರಾಸಾಜ್ಜಾಮದಗ್ನ್ಯಸ್ಯ ಸೋಽಪರಾಂತಮಹೀತಳಮ್ ॥೬೪॥

ಆಗ ಪರಶುರಾಮರ ಭಯದಿಂದ ಸಾಗರನು ಪಶ್ಚಿಮಸಮುದ್ರದಲ್ಲಿ ಕನ್ಯಾತೀರ್ಥದ ಸಮೀಪದಲ್ಲಿ ಪರಶುರಾಮರ ಶೂರ್ಪಾಕಾರವಾದ ಶರವು ಬಿದ್ದ ಕಾರಣದಿಂದ ಶೂರ್ಪಾಕರವೆಂಬ ದೇಶದವರೆಗೆ ಭೂಮಿಯನ್ನು ನಿರ್ಮಿಸಿಕೊಟ್ಟನು.

ಕಶ್ಯಪಸ್ತು ಮಹಾರಾಜ ಪ್ರತಿಗೃಹ್ಯ ಮಹೀಮಿಮಾಮ್।
ಕೃತ್ವಾ ಬ್ರಾಹ್ಮಣಸಂಸ್ಥಾಂ ವೈ ಪ್ರವಿವೇಶ ಮಹಾವನಮ್ ॥೬೫॥

ಎಲೈ ಮಹಾರಾಜನೇ! ಕಶ್ಯಪರಾದರೋ ಈ ಭೂಮಿಯನ್ನು ದಾನವಾಗಿ ಸ್ವೀಕರಿಸಿ, ಅದನ್ನು ಬ್ರಾಹ್ಮಣರಿಗೆ ದಾನವನ್ನಾಗಿ ನೀಡಿ, ತಪಸ್ಸಿಗಾಗಿ ಮಹಾರಣ್ಯವನ್ನು ಪ್ರವೇಶಿಸಿದರು.

ತತಃ ಶೂದ್ರಾಶ್ಚ ವೈಶ್ಯಾಶ್ಚ ಯಥಾಸ್ವೈರಪ್ರಚಾರಿಣಃ।
ಅವರ್ತಂತ ದ್ವಿಜಾಗ್ರ್ಯಾಣಾಂ ದಾರೇಷು ಭರತರ್ಷಭ ॥೬೬॥

ಎಲೈ ಭರತಶ್ರೇಷ್ಠನೇ! ಆನಂತರ ಶೂದ್ರರು ಮತ್ತು ವೈಶ್ಯರು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಾ ಶ್ರೇಷ್ಠರಾದ ಬ್ರಾಹ್ಮಣರ ಪತ್ನಿಯರ ಸಹವಾಸವನ್ನು ಮಾಡಿದರು.

ಅರಾಜಕೇ ಜೀವಲೋಕೇ ದುರ್ಬಲಾ ಬಲವತ್ತರೈಃ।
ಬಾಧ್ಯಂತೇ ನಚ ವಿತ್ತೇಷು ಪ್ರಭುತ್ವಮಿಹ ಕಸ್ಯಚಿತ್ ॥೬೭॥

ಜೀವಲೋಕವು ಅರಾಜಕವಾದಾಗ ದುರ್ಬಲರು ಬಲಿಷ್ಠರಿಂದ ಪೀಡಿಸಲ್ಪಟ್ಟರು. ಯಾರಿಗೂ ತಮ್ಮ ಧನದ ಮೇಲೆ ಒಡೆತನವಿರಲಿಲ್ಲ.

ಬ್ರಾಹ್ಮಣಾ ಮದ್ಯಪಾ ಕೇಚಿನ್ಮೂರ್ಖಾಃ ಪಂಡಿತಮಾನಿನಃ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಶೂದ್ರಾಶ್ಚೋತ್ಪಥಗಾಮಿನಃ ॥೬೮॥

ಬ್ರಾಹ್ಮಣರು ಮದ್ಯಪಾನರತರಾದರು. ಕೆಲವು ಮೂರ್ಖರು ತಮ್ಮನ್ನೇ ಪಂಡಿತ-ರೆಂದುಕೊಂಡರು.ಬ್ರಾಹ್ಮಣರು ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ದುರ್ಮಾರ್ಗಗಾಮಿಗಳಾದರು.

ಪರಸ್ಪರಂ ಸಮಾಶ್ರಿತ್ಯ ಘಾತಯಂತ್ಯಪಥಿ ಸ್ಥಿತಾಃ।
ಸ್ವಧರ್ಮಂ ಬ್ರಾಹ್ಮಣಾಸ್ತ್ಯಕ್ತ್ವಾ ಪಾಷಂಡಾಶ್ಚ ಸಮಾಶ್ರಿತಾಃ ॥೬೯॥

ದುರ್ಮಾರ್ಗದಲ್ಲಿ ಪ್ರವೃತ್ತರಾಗಿ ಪರಸ್ಪರವಾಗಿ ಸಹಾಯವನ್ನು ಹೊಂದಿ ಪ್ರಜೆಗಳನ್ನು ಕೊಲ್ಲಲು ಪ್ರಾರಂಭಿಸಿದರು. ಬ್ರಾಹ್ಮಣರು ತಮ್ಮ ಧರ್ಮವನ್ನು ತ್ಯಜಿಸಿ, ಪಾಷಂಡಮತಗಳನ್ನು ಆಶ್ರಯಿಸಿದರು.

ಚೌರಿಕಾನೃತಮಾಯಾಶ್ಚ ಸರ್ವೇ ಚೈವ ಪ್ರಕುರ್ವತೇ।
ಸ್ವಧರ್ಮಸ್ಥಾನ್ ದ್ವಿಜಾನ್ ಹತ್ವಾ ತಥಾಶ್ರಮನಿವಾಸಿನಃ ॥೭೦॥

ಸ್ವಧರ್ಮನಿರತರಾದ ಆಶ್ರಮವಾಸಿಗಳಾದ ಬ್ರಾಹ್ಮಣರನ್ನು ಕೊಂದು ಎಲ್ಲರೂ ಕಳ್ಳತನ ಸುಳ್ಳುತನ ಮತ್ತು ಮೋಸಗಳಲ್ಲಿ ಪ್ರವೃತ್ತರಾದರು.

ವೈಶ್ಯಾ ಸತ್ಪಥಸಂಸ್ಥಾಶ್ಚ ಶೂದ್ರಾ ಯೇ ಚೈವ ಧಾರ್ಮಿಕಾಃ।
ತಾನ್ ಸರ್ವಾನ್ ಘಾತಯಂತಿ ಸ್ಮ ದುರಾಚಾರಾ ಸುನಿರ್ಭಯಾಃ ॥೭೧॥

ಯಜ್ಞಾಧ್ಯಯನಶೀಲಾಂಶ್ಚ ಆಶ್ರಮಸ್ಥಾಂಸ್ತಪಸ್ವಿನಃ।
ಗೋಬಾಲವೃದ್ಧನಾರೀಣಾಂ ನಾಶಂ ಕುರ್ವಂತಿ ಚಾಪರೇ ॥೭೨॥

ದುರಾಚಾರವುಳ್ಳ ನಿರ್ಭಯರಾದ ದುರ್ಜನರು ಸನ್ಮಾರ್ಗದಲ್ಲಿದ್ದು ಧಾರ್ಮಿಕರಾದ ವೈಶ್ಯರನ್ನೂ ಶೂದ್ರರನ್ನೂ ಎಲ್ಲರನ್ನೂ ಕೊಲ್ಲಲು ಪ್ರಾರಂಭಿಸಿದರು. ಇನ್ನು

ಕೆಲವರು ಆಶ್ರಮದಲ್ಲಿ ತಪಸ್ಸನ್ನು ಮಾಡುವ ಯಜ್ಞಾಧ್ಯಯನಶೀಲರಾದ ಬ್ರಾಹ್ಮಣರನ್ನೂ, ಗೋವುಗಳನ್ನೂ, ಬಾಲಕರನ್ನೂ, ವೃದ್ಧರನ್ನೂ, ಸ್ತ್ರೀಯರನ್ನೂ ನಾಶಮಾಡಿದರು.

ಆನ್ವೀಕ್ಷಕೀ ತ್ರಯೀ ವಾರ್ತಾ ನ ಚ ನೀತಿಃ ಪ್ರವರ್ತತೇ।
ವ್ಯಾತ್ಯತಾಂ ಸಮನುಪ್ರಾಪ್ತಾ ಬಹವೋ ಹಿ ದ್ವಿಜಾತಯಃ।
ಅಧರೋತ್ತರಾಪಚಾರೇಣ ಮ್ಲೇಚ್ಛಭೂತಾಶ್ಚ ಸರ್ವಶಃ ॥೭೩॥

ತರ್ಕವಿದ್ಯೆಯಾಗಲೀ, ವೇದವಿದ್ಯೆಯಾಗಲೀ, ವಾಣಿಜ್ಯನೀತಿಯಾಗಲೀ ಯಾವುದೂ ಪ್ರವೃತ್ತವಾಗಲಿಲ್ಲ. ಬಹಳ ಬ್ರಾಹ್ಮಣರು ವ್ರತಭ್ರಷ್ಠರಾದರು. ಅಧಮರಾದ ವೈಶ್ಯಶೂದ್ರರು ಉತ್ತಮಸ್ಥಾನಗಳನ್ನು ಹೊಂದಿ ಎಲ್ಲವೂ ಮ್ಲೇಚ್ಛಮಯವಾಯಿತು.

ತತಃ ಕಾಲೇನ ಪೃಥಿವೀ ಪ್ರವಿವೇಶ ರಸಾತಳಮ್।
ಅರಕ್ಷ್ಯಮಾಣಾ ವಿಧಿವತ್ ಕ್ಷತ್ರಿಯೈರ್ಧರ್ಮರಕ್ಷಿಭಿಃ ॥೭೪॥

ಆಗ ಧರ್ಮವನ್ನು ರಕ್ಷಿಸುವ ಕ್ಷತ್ರಿಯರಿಂದ ಶಾಸ್ತ್ರೋಕ್ತರೀತಿಯಲ್ಲಿ ರಕ್ಷಿಸಲ್ಪಡದ ಭೂಮಿಯು ರಸಾತಳಲೋಕವನ್ನು ಸೇರಿತು.

ಊರುಣಾ ಧಾರಯಾಮಾಸ ಕಶ್ಯಪಃ ಪೃಥಿವೀಂ ತತಃ।
ನಿಮಜ್ಜಂತೀಂ ತದಾ ರಾಜಂಸ್ತೇನೋರ್ವೀತಿ ಮಹೀ ಸ್ಮೃತಾ ॥೭೫॥

ಆಗ ಕಶ್ಯಪರು ಮುಳುಗುತ್ತಿದ್ದ ಭೂಮಿಯನ್ನು ತಮ್ಮ ತೊಡೆಗಳಿಂದ ತಡೆದು ನಿಲ್ಲಿಸಿದರು. ಎಲೈ ರಾಜನೇ! ಆ ಕಾರಣದಿಂದ ಭೂಮಿಗೆ ಊರ್ವೀ ಎಂಬ ಹೆಸರು ಬಂದಿತು.

ರಕ್ಷಿಣಶ್ಚ ಸಮುದ್ದಿಶ್ಯ ಪ್ರಾಯಾಚತ್ ಪೃಥಿವೀ ತದಾ।
ಪ್ರಸಾದ್ಯ ಕಶ್ಯಪಂ ದೇವೀ ಕ್ಷತ್ರಿಯಾನ್ ಬಾಹುಶಾಲಿನಃ ॥೭೬॥

ಆಗ ಭೂದೇವಿಯು ಕಶ್ಯಪರನ್ನು ಪ್ರಸನ್ನೀಕರಿಸಿಕೊಂಡು ತನ್ನನ್ನು ರಕ್ಷಿಸಲು ಬಾಹುಶಾಲಿಗಳಾದ ಕ್ಷತ್ರಿಯರನ್ನು ದಯಪಾಲಿಸಬೇಕೆಂದು ಯಾಚಿಸಿದಳು.

ಸಂತಿ ಬ್ರಹ್ಮನ್ ಮಯಾ ಗುಪ್ತಾ ನೃಷು ಕ್ಷತ್ರಿಯಪುಂಗವಾಃ।
ಹೈಹಯಾನಾಂ ಕುಲೇ ಜಾತಾಸ್ತೇ ಸಂರಕ್ಷಂತು ಮಾಂ ಮುನೇ ॥೭೭॥

ಎಲೈ ಬ್ರಾಹ್ಮಣಶ್ರೇಷ್ಠರೇ! ಹೈಹಯಕುಲದಲ್ಲಿ ಜನಿಸಿದ ಕ್ಷತ್ರಿಯಪುಂಗವರನ್ನು ನಾನು ಗೋಪ್ಯವಾಗಿ ರಕ್ಷಿಸಿಟ್ಟಿದ್ದೇನೆ. ಎಲೈ ಋಷಿಗಳೇ! ಅವರು ನನ್ನನ್ನು ರಕ್ಷಿಸಲಿ.

ಅಸ್ತಿ ಪೌರವದಾಯಾದೋ ವಿದೂರಥಸುತಃ ಪ್ರಭೋ।
ಋಕ್ಷೈಃ ಸಂವರ್ಧಿತೋ ವಿಪ್ರ ಋಕ್ಷವತ್ಯೇವ ಪರ್ವತೇ ॥೭೮॥

ಎಲೈ ಪ್ರಭುಗಳೇ! ಪೌರವವಂಶದಲ್ಲಿ ಹುಟ್ಟಿದ, ವಿದೂರಥನ ಪುತ್ರನಾದ, ಕರಡಿಗಳಿಂದ ಪೋಷಿಸಲ್ಪಟ್ಟ ಒಬ್ಬ ಕ್ಷತ್ರಿಯನು ಋಕ್ಷವಾನ್ ಪರ್ವತದಲ್ಲಿದ್ದಾನೆ.

ತಥಾऽನುಕಂಪಮಾನೇನ ಯಜ್ವನಾऽಥಾಮಿತೌಜಸಾ।
ಪರಾಶರೇಣ ದಾಯಾದಃ ಸೌದಾಸಸ್ಯಾಭಿರಕ್ಷಿತಃ ॥೭೯॥

ಹಾಗೆಯೇ ಅಮಿತಪರಾಕ್ರಮಿಗಳಾದ, ಯಜ್ಞಶೀಲರಾದ, ಪರಾಶರರ ಅನುಕಂಪೆಗೆ ಪಾತ್ರನಾದ ಸೌದಾಸನ ಪುತ್ರನು ಪರಾಶರರಿಂದ ರಕ್ಷಿಸಲ್ಪಟ್ಟಿದ್ದಾನೆ.

ಸರ್ವಕರ್ಮಾಣಿ ಕುರುತೇ ತಸ್ಯರ್ಷೇಃ ಶೂದ್ರವದ್ಧಿ ಸಃ।
ಸರ್ವಕರ್ಮೇತ್ಯಭಿಖ್ಯಾತಃ ಸ ಮಾಂ ರಕ್ಷತು ಪಾರ್ಥಿವಃ ॥೮೦॥

ಅವನು ಆ ಪರಾಶರ ಋಷಿಗಳಿಗೆ ಶೂದ್ರನಂತೆ ಎಲ್ಲ ಕೆಲಸವನ್ನೂ ಮಾಡುತ್ತಾನೆ. ಆ ಕಾರಣದಿಂದ ಅವನು ಸರ್ವಕರ್ಮನೆಂದೇ ಪ್ರಸಿದ್ಧನಾಗಿದ್ದಾನೆ. ರಾಜನಾದ ಅವನು ನನ್ನನ್ನು ರಕ್ಷಿಸಲಿ.

ಶಿಬೇಃ ಪುತ್ರೋ ಮಹಾತೇಜಾ ಗೋಪತಿರ್ನಾಮ ನಾಮತಃ।
ವನೇ ಸಂರಕ್ಷಿತೋ ಗೋಭಿಃ ಸೋऽಭಿರಕ್ಷತು ಮಾಂ ಮುನೇ ॥೮೧॥

ಶಿಬಿಯ ಪುತ್ರನೂ ಮಹಾತೇಜಸ್ವಿಯೂ ಆದ ಗೋಪತಿಯೆಂಬ ಕ್ಷತ್ರಿಯನು ಕಾಡಿನಲ್ಲಿ ಗೋವುಗಳಿಂದ ಸಂರಕ್ಷಿಸಲ್ಪಟ್ಟಿದ್ದಾನೆ. ಎಲೈ ಋಷಿಗಳೇ! ಅವನು ನನ್ನನ್ನು ರಕ್ಷಿಸಲಿ.

ಪ್ರತರ್ದನಸ್ಯ ಪುತ್ರಸ್ತು ವತ್ಸೋ ನಾಮ ಮಹಾಯಶಾಃ।
ವತ್ಸೈಃ ಸಂವರ್ಧಿತೋ ಗೋಷ್ಠೇ ಸ ಮಾಂ ರಕ್ಷತು ಪಾರ್ಥಿವಃ ॥೮೨॥

ಪ್ರತರ್ದನನ ಪುತ್ರನೂ ಮಹಾಕೀರ್ತಿವಂತನೂ ಆದ ವತ್ಸನೆಂಬುವನು ಗೋಶಾಲೆಯಲ್ಲಿ ಕರುಗಳಿಂದ ಪೋಷಿಸಲ್ಪಟ್ಟಿದ್ದಾನೆ. ರಾಜನಾದ ಅವನು ನನ್ನನ್ನು ರಕ್ಷಿಸಲಿ.

ದಧಿವಾಹನಪೌತ್ರಸ್ತು ಪುತ್ರೋ ದಿವಿರಥಸ್ಯ ಹ।
ಅಂಗಃ ಸ ಗೌತಮೇನಾಪಿ ಗಂಗಾಕೂಲೇऽಭಿರಕ್ಷಿತಃ ॥೮೩॥

ದಧಿವಾಹನನ ಪೌತ್ರನೂ, ದಿವ್ಯರಥನ ಪುತ್ರನೂ ಆದ ಅಂಗನು ಗಂಗಾತೀರದಲ್ಲಿ ಗೌತಮರಿಂದ ರಕ್ಷಿಸಲ್ಪಟ್ಟಿದ್ದಾನೆ.

ಬೃಹದ್ರಥೋ ಮಹಾಬಾಹುರ್ಭುವಿ ಭೂತಿಪುರಸ್ಕೃತಃ।
ಗೋಲಾಂಗೂಲೈರ್ಮಹಾಭಾಗೋ ಗೃಧ್ರಕೂಟೇऽಭಿರಕ್ಷಿತಃ ॥೮೪॥

ಮಹಾಬಾಹುವೂ , ಮಹಾನುಭಾವನೂ ಆದ, ಭೂಮಿಯಲ್ಲಿ ಐಶ್ವರ್ಯವಂತನೂ ಆದ ಬೃಹದ್ರಥನು ಮುಖದಲ್ಲಿ ಕಪ್ಪಾದ ದೊಡ್ಡ ಬಾಲವುಳ್ಳ ಗೋಲಾಂಗೂಲ ಎಂಬ ಕಪಿಗಳಿಂದ ಗೃಧ್ರಕೂಟಪರ್ವತದಲ್ಲಿ ರಕ್ಷಿತನಾಗಿದ್ದಾನೆ.

ಮರುತ್ತಸ್ಯಾನ್ವವಾಯೇ ತು ಕ್ಷತ್ರಿಯಾಸ್ತುರ್ವಸೋಽಸ್ರ್ಯಯಃ।
ಮರುತ್ಪತಿಸಮಾ ವೀರ್ಯೇ ಸಮುದ್ರೇಣಾಭಿರಕ್ಷಿತಃ ॥೮೫॥

ಮರುತ್ತನ ಪುರದಲ್ಲಿ ತುರ್ವಸುವಿನ ವಂಶದಲ್ಲಿ ಮೂರು ಜನ ಕ್ಷತ್ರಿಯರು ಜನಿಸಿ, ಮರುತ್ಪತಿಯಾದ ಇಂದ್ರನಿಗೆ ಸಮಾನವಾದ ಪರಾಕ್ರಮವನ್ನು ಹೊಂದಿದವರಾಗಿ ಸಮುದ್ರನಿಂದ ರಕ್ಷಿತರಾಗಿದ್ದಾರೆ.

ಏತೇ ಕ್ಷತ್ರಿಯದಾಯಾದಾಸ್ತತ್ರ ತತ್ರ ಪರಿಶ್ರುತಾಃ।
ವ್ಯೋಕಾರಹೇಮಕಾರಾದಿಜಾತೀಃ ನಿತ್ಯಂ ಸಮಾಶ್ರಿತಾಃ।
ಯದಿ ಮಾಮಭಿರಕ್ಷಂತಿ ತತಃ ಸ್ಥಾಸ್ಯಾಮಿ ನಿಶ್ಚಲಾ ॥೮೬॥

ಕ್ಷತ್ರಿಯವಂಶದಲ್ಲಿ ಜನಿಸಿದ ಇವರು ಅಲ್ಲಲ್ಲಿ ಪ್ರಸಿದ್ಧರಾಗಿದ್ದಾರೆ. ಅವರು ಸದ್ಯ-

ದಲ್ಲಿ ಲೋಹಕಾರರ ಮತ್ತು ಸ್ವರ್ಣಕಾರರ ವೃತ್ತಿಯನ್ನು ಅವಲಂಬಿಸಿದ್ದಾರೆ. ಅವರು ನನ್ನನ್ನು ರಕ್ಷಿಸುವುದಾದರೆ ನಾನು ಸ್ಥಿರವಾಗಿ ನಿಲ್ಲುವೆನು.

ಏತೇಷಾಂ ಪಿತರಶ್ಚೈವ ತಥೈವ ಚ ಪಿತಾಮಹಾಃ।
ಮದರ್ಥಂ ನಿಹತಾ ಯುದ್ಧೇ ರಾಮೇಣಾಕ್ಲಿಷ್ಟಕರ್ಮಣಾ ॥೮೭॥

ನನ್ನನ್ನು ಉಳಿಸುವ ಸಲುವಾಗಿ ಹೋರಾಡಿದ ಇವರ ಪಿತೃ ಪಿತಾಮಹರು ಯುದ್ಧದಲ್ಲಿ ಲೀಲಾಜಾಲವಾಗಿ ಕಾರ್ಯವನ್ನು ಮಾಡುವ ಪರಶುರಾಮರಿಂದ ಹತರಾಗಿದ್ದಾರೆ.

ತೇಷಾಮಪಚಿತಿಶ್ಚೈವ ಮಯಾ ಕಾರ್ಯಾ ನ ಸಂಶಯಃ।
ನ ಹ್ಯಹಂ ಕಾಮಯೇ ನಿತ್ಯಮವಿಕ್ರಾಂತೇನ ರಕ್ಷಣಮ್ ॥೮೮॥

ನಾನು ಅವರಿಗೆ ನಿಃಸಂಶಯವಾಗಿ ಪ್ರತ್ಯುಪಕಾರವನ್ನು ಮಾಡಬೇಕಾಗಿದೆ. ನಾನು ಪರಾಕ್ರಮಶಾಲಿಯಲ್ಲದವನಿಂದ ರಕ್ಷಿಸಲ್ಪಡುವುದನ್ನು ಬಯಸುವುದಿಲ್ಲ. (ಎಂದು ಹೇಳಿದಳು).

ತತಃ ಪೃಥಿವ್ಯಾ ನಿರ್ದಿಷ್ಟಾಂಸ್ತಾನ್ ಸಮಾನೀಯ ಕಶ್ಯಪಃ।
ಅಭ್ಯಷಿಂಚತ್ ಮಹೀಪಾಲಾನ್ ಕ್ಷತ್ರಿಯಾನ್ ವೀರ್ಯಸಮ್ಮತಾನ್ ॥೮೯॥

ಅನಂತರ ಕಶ್ಯಪರು ಭೂದೇವಿಯು ಹೇಳಿದ ವೀರ್ಯಸಂಪನ್ನರಾದ ಆ ಕ್ಷತ್ರಿಯರೆಲ್ಲರನ್ನೂ ಕರೆತಂದು ಅವರನ್ನು ರಾಜರನ್ನಾಗಿ ಅಭಿಷೇಕ ಮಾಡಿದರು.

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಯೇಷಾಂ ವಂಶಾಃ ಪ್ರತಿಷ್ಠಿತಾಃ।
ಏವಮೇತತ್ ಪುರಾ ವೃತ್ತಂ ಯನ್ಮಾಂ ಪೃಚ್ಛಸಿ ಪಾಂಡವ ॥೯೦॥

ಅವರ ಮಕ್ಕಳು ಮತ್ತು ಮೊಮ್ಮಕ್ಕಳಿಂದ ಅವರ ವಂಶಗಳು ಪುನಃ ಪ್ರತಿಷ್ಠಿತವಾಯಿತು. ಎಲೈ ಪಾಂಡವನೇ! ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹಿಂದೆ ಹೀಗೆ ನಡೆಯಿತು ಎಂದು ಹೇಳುತ್ತಿದ್ದೇನೆ. (ಅದರಿಂದ ಪುನಃ ಭೂಲೋಕದಲ್ಲಿ ಕ್ಷತ್ರಿಯರು ಬಹುಸಂಖ್ಯಾತರಾದರು).

ವೈಶಂಪಾಯನಃ

ಏವಂ ಬ್ರುವನ್ನೇವ ಯದುಪ್ರವೀರೋ
ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಮ್ ।
ರಥೇನ ತೇನಾಶು ಯಯೌ ಯಥಾರ್ಕೋ
ವಿಶನ್ ಪ್ರಭಾಭಿರ್ಭಗವಾಂಸ್ತ್ರಿಲೋಕಮ್ ॥೯೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಪಂಚಾಶೋಽಧ್ಯಾಯಃ ॥೪೯॥

ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡುತ್ತಲೇ ಯದುಪ್ರವೀರನಾದ ಕೃಷ್ಣನು ಪೂಜ್ಯನಾದ ಸೂರ್ಯನು ತನ್ನ ಪ್ರಭೆಯಿಂದ ಮೂರು ಲೋಕಗಳನ್ನೂ ಪ್ರವೇಶಿಸುವಂತೆ ಶೀಘ್ರವಾಗಿ ಮುಂದೆ ಸಾಗಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪೯ನೆಯ ಅಧ್ಯಾಯವು ಮುಗಿಯಿತು.

—0—

೫೦. ಐವತ್ತನೆಯ ಅಧ್ಯಾಯ

ಕೃಷ್ಣನಿಂದ ಭೀಷ್ಮರ ಪ್ರಶಂಸೆ ಮತ್ತು ಧರ್ಮರಾಜರಿಗೆ ಉಪದೇಶಮಾಡುವಂತೆ ಪ್ರೇರಣೆ

ವೈಶಂಪಾಯನಃ

ತತೋ ರಾಮಸ್ಯ ತತ್ ಕರ್ಮ ಶ್ರುತ್ವಾ ರಾಜಾ ಯುಧಿಷ್ಠಿರಃ ।
ವಿಸ್ಮಯಂ ಪರಮಂ ಗತ್ವಾ ಪ್ರತ್ಯುವಾಚ ಜನಾರ್ದನಮ್ ॥೧॥

ವೈಶಂಪಾಯನರು – ಆಗ ರಾಜನಾದ ಯುಧಿಷ್ಠಿರನು ಪರಶುರಾಮರ ಆ ಕರ್ಮವನ್ನು ಕೇಳಿ ಬಹಳವಿಸ್ಮಯವನ್ನು ಹೊಂದಿ ಜನಾರ್ದನನಾದ ಕೃಷ್ಣನನ್ನು ಕುರಿತು ಮಾತನಾಡಿದನು.

ಅಹೋ ರಾಮಸ್ಯ ವಾರ್ಷ್ಣೇಯ ಶಕ್ರಸ್ಯೇವ ಮಹಾತ್ಮನಃ ।
ವಿಕ್ರಮೋ ಯೇನ ವಸುಧಾ ಕ್ರೋಧಾನ್ನಿಃಕ್ಷತ್ರಿಯಾ ಕೃತಾ ॥೨॥

ಎಲೈ ವಾರ್ಷ್ಣೇಯನೇ! ಭೂಮಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿದ ಮಹಾತ್ಮರಾದ ಪರಶುರಾಮರ ವಿಕ್ರಮವು ಇಂದ್ರನ ವಿಕ್ರಮದಂತೆ ಎಷ್ಟು ಅದ್ಭುತವಾದುದು!

ಗೋಭಿಃ ಸಮುದ್ರೇಣ ತಥಾ ಗೋಲಾಂಗೂಲರ್ಕ್ಷವಾನರೈಃ।
ಗುಪ್ತಾ ರಾಮಭಯೋದ್ವಿಗ್ನಾಃ ಕ್ಷತ್ರಿಯಾಣಾಂ ಕುಲೋದ್ವಹಾಃ ॥೩॥

ಪರಶುರಾಮನ ಭಯದಿಂದ ಉದ್ವಿಗ್ನರಾದ ಕ್ಷತ್ರಿಯ ಕುಲಪ್ರವರ್ತಕರು, ಗೋವುಗಳಿಂದಲೂ ಸಮುದ್ರದಿಂದಲೂ ಕಪಿಗಳಿಂದಲೂ ಕರಡಿಗಳಿಂದಲೂ ಗೋಲಾಂಗೂಲಗಳಿಂದಲೂ ರಕ್ಷಿಸಲ್ಪಟ್ಟರಷ್ಟೇ!

ಅಹೋ ಧನ್ಯೋ ಹಿ ಲೋಕೋ೭ಯಂ ಸಭಾಗ್ಯಾಶ್ಚ ನರಾ ಭುವಿ।
ಯತ್ರ ಕರ್ಮೇದೃಶಂ ಧರ್ಮ್ಯಂ ದ್ವಿಜೇನ ಕೃತಮಚ್ಯುತ ॥೪॥

ಅಹೋ! ಈ ಲೋಕವು ಎಷ್ಟು ಧನ್ಯವಾದದು! ಭೂಮಿಯಲ್ಲಿರುವ ಮನುಷ್ಯರು ಎಂತಹ ಭಾಗ್ಯವಂತರು! ಎಲೈ ಅಚ್ಯುತನೇ! ಒಬ್ಬ ಬ್ರಾಹ್ಮಣನು ಇಂತಹ ಧಾರ್ಮಿಕವಾದ ಕಾರ್ಯವನ್ನು ಮಾಡಿದನಷ್ಟೇ?

ತಥಾ ಯಾಂತೌ ತದಾ ತಾತ ತಾವಚ್ಯುತಯುಧಿಷ್ಠಿರೌ।
ಜಗ್ಮತುರ್ಯತ್ರ ಗಾಂಗೇಯಃ ಶರತಲ್ಪಗತಃ ಪ್ರಭುಃ ॥೫॥

ಎಲೈ ಪ್ರೀತಿಪಾತ್ರನೇ! ಕೃಷ್ಣ ಯುಧಿಷ್ಠಿರರಿಬ್ಬರೂ ಹಾಗೆಯೇ ಮುಂದೆ ಸಾಗುತ್ತಾ ಶರತಲ್ಪಗತರಾದ ಗಂಗಾಪುತ್ರರಾದ ಭೀಷ್ಮರು ಇದ್ದಲ್ಲಿಗೆ ಬಂದರು.

ತತಸ್ತೇ ದದೃಶುರ್ಭೀಷ್ಮಂ ಶರಪ್ರಸ್ತರಶಾಯಿನಮ್।
ಸ್ವರಶ್ಮಿಜಾಲಸಂವೀತಂ ಸಾಯಂಸೂರ್ಯಸಮಪ್ರಭಮ್ ॥೬॥

ಆಗ ಅವರು ಸಾಯಂಕಾಲದಲ್ಲಿ ತನ್ನ ರಶ್ಮಿಗಳಿಂದ ಕೂಡಿದ ಸೂರ್ಯನಂತೆ ಇದ್ದ ಶರಪಂಜರದಲ್ಲಿ ಮಲಗಿದ್ದ ಭೀಷ್ಮರನ್ನು ನೋಡಿದರು.

ವೈಶಂಪಾಯನಃ

ಏವಂ ಬ್ರುವನ್ನೇವ ಯದುಪ್ರವೀರೋ
ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಮ್ ।
ರಥೇನ ತೇನಾಶು ಯಯೌ ಯಥಾರ್ಕೋ
ವಿಶನ್ ಪ್ರಭಾಭಿರ್ಭಗವಾಂಸ್ತ್ರಿಲೋಕಮ್ ॥೯೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ರಾಜಧರ್ಮೇ ಏಕೋನಪಂಚಾಶೋಽಧ್ಯಾಯಃ ॥೪೯॥

ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡುತ್ತಲೇ ಯದುಪ್ರವೀರನಾದ ಕೃಷ್ಣನು ಪೂಜ್ಯನಾದ ಸೂರ್ಯನು ತನ್ನ ಪ್ರಭೆಯಿಂದ ಮೂರು ಲೋಕಗಳನ್ನೂ ಪ್ರವೇಶಿಸುವಂತೆ ಶೀಘ್ರವಾಗಿ ಮುಂದೆ ಸಾಗಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪೯ನೆಯ ಅಧ್ಯಾಯವು ಮುಗಿಯಿತು.

—೦—

೫೦. ಐವತ್ತನೆಯ ಅಧ್ಯಾಯ

ಕೃಷ್ಣನಿಂದ ಭೀಷ್ಮರ ಪ್ರಶಂಸೆ ಮತ್ತು ಧರ್ಮರಾಜರಿಗೆ ಉಪದೇಶಮಾಡುವಂತೆ ಪ್ರೇರಣೆ

ವೈಶಂಪಾಯನಃ

ತತೋ ರಾಮಸ್ಯ ತತ್ ಕರ್ಮ ಶ್ರುತ್ವಾ ರಾಜಾ ಯುಧಿಷ್ಠಿರಃ ।
ವಿಸ್ಮಯಂ ಪರಮಂ ಗತ್ವಾ ಪ್ರತ್ಯುವಾಚ ಜನಾರ್ದನಮ್ ॥೧॥

ವೈಶಂಪಾಯನರು – ಆಗ ರಾಜನಾದ ಯುಧಿಷ್ಠಿರನು ಪರಶುರಾಮರ ಆ ಕರ್ಮವನ್ನು ಕೇಳಿ ಬಹಳವಿಸ್ಮಯವನ್ನು ಹೊಂದಿ ಜನಾರ್ದನನಾದ ಕೃಷ್ಣನನ್ನು ಕುರಿತು ಮಾತನಾಡಿದನು.

ಅಹೋ ರಾಮಸ್ಯ ವಾರ್ಷ್ಣೇಯ ಶಕ್ರಸ್ಯೇವ ಮಹಾತ್ಮನಃ ।
ವಿಕ್ರಮೋ ಯೇನ ವಸುಧಾ ಕ್ರೋಧಾನ್ನಿಃಕ್ಷತ್ರಿಯಾ ಕೃತಾ ॥೨॥

ಎಲೈ ವಾರ್ಷ್ಣೇಯನೇ! ಭೂಮಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿದ ಮಹಾತ್ಮರಾದ ಪರಶುರಾಮರ ವಿಕ್ರಮವು ಇಂದ್ರನ ವಿಕ್ರಮದಂತೆ ಎಷ್ಟು ಅದ್ಭುತವಾದುದು!

ಗೋಭಿಃ ಸಮುದ್ರೇಣ ತಥಾ ಗೋಲಾಂಗೂಲರ್ಕ್ಷವಾನರೈಃ।
ಗುಪ್ತಾ ರಾಮಭಯೋದ್ವಿಗ್ನಾಃ ಕ್ಷತ್ರಿಯಾಣಾಂ ಕುಲೋದ್ವಹಾಃ ॥೩॥

ಪರಶುರಾಮನ ಭಯದಿಂದ ಉದ್ವಿಗ್ನರಾದ ಕ್ಷತ್ರಿಯ ಕುಲಪ್ರವರ್ತಕರು, ಗೋವುಗಳಿಂದಲೂ ಸಮುದ್ರದಿಂದಲೂ ಕಪಿಗಳಿಂದಲೂ ಕರಡಿಗಳಿಂದಲೂ ಗೋಲಾಂಗೂಲಗಳಿಂದಲೂ ರಕ್ಷಿಸಲ್ಪಟ್ಟರಷ್ಟೇ!

ಅಹೋ ಧನ್ಯೋ ಹಿ ಲೋಕೋಽಯಂ ಸಭಾಗ್ಯಾಶ್ಚ ನರಾ ಭುವಿ।
ಯತ್ರ ಕರ್ಮೇದೃಶಂ ಧರ್ಮ್ಯಂ ದ್ವಿಜೇನ ಕೃತಮಚ್ಯುತ ॥೪॥

ಅಹೋ! ಈ ಲೋಕವು ಎಷ್ಟು ಧನ್ಯವಾದದು! ಭೂಮಿಯಲ್ಲಿರುವ ಮನುಷ್ಯರು ಎಂತಹ ಭಾಗ್ಯವಂತರು! ಎಲೈ ಅಚ್ಯುತನೇ! ಒಬ್ಬ ಬ್ರಾಹ್ಮಣನು ಇಂತಹ ಧಾರ್ಮಿಕವಾದ ಕಾರ್ಯವನ್ನು ಮಾಡಿದನಷ್ಟೇ?

ತಥಾ ಯಾಂತೌ ತದಾ ತಾತ ತಾವಚ್ಯುತಯುಧಿಷ್ಠಿರೌ।
ಜಗ್ಮತುರ್ಯತ್ರ ಗಾಂಗೇಯಃ ಶರತಲ್ಪಗತಃ ಪ್ರಭುಃ ॥೫॥

ಎಲೈ ಪ್ರೀತಿಪಾತ್ರನೇ! ಕೃಷ್ಣ ಯುಧಿಷ್ಠಿರರಿಬ್ಬರೂ ಹಾಗೆಯೇ ಮುಂದೆ ಸಾಗುತ್ತಾ ಶರತಲ್ಪಗತರಾದ ಗಂಗಾಪುತ್ರರಾದ ಭೀಷ್ಮರು ಇದ್ದಲ್ಲಿಗೆ ಬಂದರು.

ತತಸ್ತೇ ದದೃಶುರ್ಭೀಷ್ಮಂ ಶರಪ್ರಸ್ತರಶಾಯಿನಮ್।
ಸ್ವರಶ್ಮಿಜಾಲಸಂವೀತಂ ಸಾಯಂಸೂರ್ಯಸಮಪ್ರಭಮ್ ॥೬॥

ಆಗ ಅವರು ಸಾಯಂಕಾಲದಲ್ಲಿ ತನ್ನ ರಶ್ಮಿಗಳಿಂದ ಕೂಡಿದ ಸೂರ್ಯನಂತೆ ಇದ್ದ ಶರಪಂಜರದಲ್ಲಿ ಮಲಗಿದ್ದ ಭೀಷ್ಮರನ್ನು ನೋಡಿದರು.

ಉಪಾಸ್ಯಮಾನಂ ಮುನಿಭಿರ್ದೇವೈರಿವ ಶತಕ್ರತುಮ್ ।
ದೇಶೇ ಪರಮಧರ್ಮಿಷ್ಠೇ ನದೀಮೋಘವತೀಮನು ॥೭॥

ಓಘವತೀ ನದಿಯ ಸಮೀಪದಲ್ಲಿ ಪರಮಧರ್ಮಿಷ್ಠವಾದ ದೇಶದಲ್ಲಿ ದೇವತೆಗಳಿಂದ ಇಂದ್ರನು ಸುತ್ತಿವರಿಯಲ್ಪಟ್ಟಂತೆ, ಋಷಿಗಳಿಂದ ಸುತ್ತುವರಿಯಲ್ಪಟ್ಟ ಭೀಷ್ಮರನ್ನು ನೋಡಿದರು.

ದೂರಾದೇವ ತಮಾಲೋಕ್ಯ ಕೃಷ್ಣೋ ರಾಜಾ ಚ ಧರ್ಮರಾಟ್ ।
ಚತ್ವಾರಃ ಪಾಂಡವಾಶ್ಚೈವ ತೇ ಚ ಶಾರದ್ವತಾದಯಃ ॥೮॥

ಅವಸ್ಕಂದ್ಯಾಥ ವಾಹೇಭ್ಯಃ ಸಂಯಮ್ಯ ಪ್ರಚಲಂ ಮನಃ ।
ಏಕೀಕೃತ್ಯೇಂದ್ರಿಯಗ್ರಾಮಮುಪತಸ್ಥುರ್ಮಹಾಮುನೀನ್ ॥೯॥

ಕೃಷ್ಣನೂ, ರಾಜನಾದ ಯುಧಿಷ್ಠಿರನೂ, ನಾಲ್ವರು ಪಾಂಡವರೂ, ಕೃಪ ಮೊದಲಾದವರೂ ದೂರದಿಂದಲೇ ಭೀಷ್ಮರನ್ನು ನೋಡಿ ತಮ್ಮ ವಾಹನಗಳಿಂದ ಇಳಿದು ಚಂಚಲವಾದ ಮನಸ್ಸನ್ನು ಸ್ಥಿರಗೊಳಿಸಿ ಇಂದ್ರಿಯಸಮೂಹವನ್ನು ಏಕಾಗ್ರವನ್ನಾಗಿ ಮಾಡಿ ಮಹಾಮುನಿಗಳ ಸಮೀಪಕ್ಕೆ ಬಂದರು.

ಅಭಿವಾದ್ಯ ಚ ಗೋವಿಂದಃ ಸಾತ್ಯಕಿಸ್ತೇ ಚ ಕೌರವಾಃ ।
ವ್ಯಾಸಾದೀಂಸ್ತಾನ್ ಋಷೀನ್ ಪಶ್ಚಾದ್ ಗಾಂಗೇಯಮುಪತಸ್ಥಿರೇ ॥೧೦॥

ಗೋವಿಂದನೂ, ಸಾತ್ಯಕಿಯೂ, ಆ ಕೌರವರೂ ವ್ಯಾಸಾದಿ ಋಷಿಗಳಿಗೆ ನಮಸ್ಕರಿಸಿ ಅನಂತರ ಭೀಷ್ಮರ ಸಮೀಪಕ್ಕೆ ಬಂದರು.

ತಪೋವೃದ್ಧಿಂ ತತಃ ಪೃಷ್ಟ್ವಾ ಗಾಂಗೇಯಂ ಯದುಕೌರವಾಃ ।
ಪರಿವಾರ್ಯ ತತಃ ಸರ್ವೇ ನಿಷೇದುಃ ಪುರುಷರ್ಷಭಾಃ ॥೧೧॥

ಯದುಕೌರವರು ಭೀಷ್ಮರನ್ನು ಅವರ ತಪೋವೃದ್ಧಿಯನ್ನು ವಿಚಾರಿಸಿ, ಪುರುಷಶ್ರೇಷ್ಠರಾದ ಅವರೆಲ್ಲರೂ ಅವರ ಸುತ್ತಲೂ ಕುಳಿತರು.

ತತೋ ನಿಶಾಮ್ಯ ಗಾಂಗೇಯಂ ಶಾಮ್ಯಮಾನಮಿವಾನಲಮ್ ।
ಕಿಂಚಿದ್ ದೀನಮನಾ ಭೀಷ್ಮಮಿತಿ ಹೋವಾಚ ಕೇಶವಃ ॥೧೨॥

ಆಗ ಆರಿಹೋಗುವ ಅಗ್ನಿಯಂತಿದ್ದ ಭೀಷ್ಮರನ್ನು ನೋಡಿ, ಕೇಶವನು ಮನಸ್ಸಿನಲ್ಲಿ ಸ್ವಲ್ಪ ವ್ಯಥೆಯನ್ನು ಹೊಂದಿ ಭೀಷ್ಮರನ್ನು ಕುರಿತು ಹೀಗೆ ಮಾತನಾಡಿದನು.

ಕಚ್ಚಿಜ್ಜ್ಞಾನಾನಿ ತೇ ರಾಜನ್ ಪ್ರಸನ್ನಾನಿ ಯಥಾ ಪುರಾ ।
ಕಚ್ಚಿದವ್ಯಾಕುಲಾ ಚೈವ ಬುದ್ಧಿಸ್ತೇ ವದತಾಂವರ ॥೧೩॥

ಎಲೈ ರಾಜನೇ! ನಿನ್ನ ಇಂದ್ರಿಯಗಳು ಮೊದಲಿನಂತೆಯೇ ಪ್ರಸನ್ನವಾಗಿವೆಯಷ್ಟೇ ?. ಮಾತನಾಡುವವರಲ್ಲಿ ಶ್ರೇಷ್ಠನಾದವನೇ! ನಿನ್ನ ಬುದ್ಧಿಯು ವ್ಯಾಕುಲವಾಗಿಲ್ಲವಷ್ಟೇ ?

ಶರಾಭಿಘಾತದುಃಖಾತ್ ತೇ ಕಚ್ಚಿದ್ ಗಾತ್ರಂ ನ ದೂಯತೇ ।
ಮಾನಸಾದಪಿ ದುಃಖಾದ್ಧಿ ಶರೀರಂ ಬಲವತ್ತರಮ್ ॥೧೪॥

ಬಾಣಗಳ ಪ್ರಹಾರಕ್ಕೆ ಸಿಲುಕಿದ ನಿನ್ನ ದೇಹವು ದುಃಖದಿಂದ ತಪಿಸುತ್ತಿಲ್ಲವಷ್ಟೇ ? ಮಾನಸದುಃಖಕ್ಕಿಂತಲೂ ಶರೀರದ ದುಃಖವು ಪ್ರಬಲವಾದುದು.

ವರದಾನಾತ್ ಪಿತುಃ ಕಾಮಂ ಛಂದಮೃತ್ಯುರಸಿ ಪ್ರಭೋ ।
ಶಂತನೋರ್ಧರ್ಮಶೀಲಸ್ಯ ನ ತ್ವೇತದಿಹ ಕಾರಣಮ್ ॥೧೫॥

ಎಲೈ ಪ್ರಭುವೇ! ತಂದೆಯ ವರದಾನದಿಂದ ನೀವು ಸ್ವಚ್ಛಂದ ಮೃತ್ಯುಗಳಾಗಿದ್ದೀರಿ. ಆದರೆ ಧರ್ಮಶೀಲನಾದ ಶಂತನುವಿನ ವರವು ಈ ದೇಹದ ಬಾಧೆಯನ್ನು ನಿವಾರಿಸಲು ಕಾರಣವಾಗುವುದಿಲ್ಲ.

ಸುಸೂಕ್ಷ್ಮೋऽಪೀಹ ದೇಹೇ ವೈ ಶಲ್ಯೋ ಜನಯತೇ ರುಜಮ್ ।
ಕಿಂಪುನಃ ಶರಸಂಘಾತೈಶ್ಚಿತಸ್ಯ ತವ ಪಾರ್ಥಿವ ॥೧೬॥

ಎಲೈ ರಾಜನೇ! ಒಂದು ಸಣ್ಣ ಮುಳ್ಳು ಚುಚ್ಚಿದರೂ ದೇಹಕ್ಕೆ ಬಾಧೆಯನ್ನು

ಉಂಟುಮಾಡುತ್ತದೆ. ಹೀಗಿರುವಾಗ ಬಾಣಗಳ ಸಮೂಹವು ಶರೀರದಲ್ಲಿ ಪೋಣಿಸಿ -ಕೊಂಡಿರುವ ನಿಮ್ಮ ವಿಷಯದಲ್ಲಿ ಹೇಳುವುದೇನು?

ಕಾಮಂ ನೈತತ್ ತವಾಖ್ಯೇಯಂ ಪ್ರಾಣಿನಾಂ ಪ್ರಭವಾಪ್ಯಯೌ।
ಭವಾನ್ ಹ್ಯುಪದಿಶೇಚ್ಛ್ರೇಯೋ ದೇವಾನಾಮಪಿ ಭಾರತ ॥೧೭॥

ಪ್ರಾಣಿಗಳ ಉತ್ಪತ್ತಿ ನಾಶಗಳ ವಿಷಯದಲ್ಲಿ ನಿಮಗೆ ಹೇಳಬೇಕಾದುದು ಏನೂ ಇಲ್ಲ. ಎಲೈ ಭಾರತರೇ! ನೀವು ದೇವತೆಗಳಿಗೂ ಸಹ ಶ್ರೇಯಸ್ಸನ್ನು ಉಪದೇಶಿಸಲು ಸಮರ್ಥರಾಗಿದ್ದೀರಿ.

ಯದ್ಧಿ ಭೂತಂ ಭವಿಷ್ಯಚ್ಚ ಭವಚ್ಚ ಪುರುಷರ್ಷಭ।
ಸರ್ವಂ ತಜ್ಜ್ಞಾನವೃದ್ಧಸ್ಯ ತವ ಪಾಣಾವಿವಾಹಿತಮ್ ॥೧೮॥

ಎಲೈ ಪುರುಷಶ್ರೇಷ್ಠರೇ! ಭೂತ ವರ್ತಮಾನ ಭವಿಷ್ಯತ್ತುಗಳೆಲ್ಲವೂ ಜ್ಞಾನ-ವೃದ್ಧರಾದ ನಿಮ್ಮ ಅಂಗೈಮೇಲೆ ಇರುವಂತಿದೆ.

ಸಂಸಾರಶ್ಚೈವ ಭೂತಾನಾಂ ಧರ್ಮಸ್ಯ ಚ ಫಲೋದಯಃ।
ವಿದಿತಸ್ತೇ ಮಹಾಪ್ರಾಜ್ಞತ್ವಂ ಹಿ ಬ್ರಹ್ಮಮಯೋ ನಿಧಿಃ ॥೧೯॥

ಮಹಾಪ್ರಾಜ್ಞರೇ! ಜೀವರ ಸಂಸಾರವು ಧರ್ಮಗಳ ಫಲೋದಯವು ನಿಮಗೆ ತಿಳಿದಿದೆ. ನೀವೇ ಧರ್ಮಮಯವಾದ ನಿಧಿಯಷ್ಟೇ ?

ತ್ವಾಂ ಹಿ ರಾಜ್ಯೇ ಸ್ಥಿತಂ ಸ್ಫೀತೇ ಸಮಗ್ರಾಂಗಮರೋಗಿಣಮ್।
ಸ್ತ್ರೀಸಹಸ್ರೈಃ ಪರಿವೃತಂ ಪಶ್ಯಾಮೀಹೋರ್ಧ್ವರೇತಸಮ್ ॥೨೦॥

ಸಮೃದ್ಧವಾದ ರಾಜ್ಯದಲ್ಲಿ ಸ್ತ್ರೀಸಹಸ್ರದಿಂದ ಪರಿವೃತರಾಗಿ ಸಮಗ್ರವಾದ ಅವಯವಗಳಿಂದ ರೋಗರಹಿತರಾಗಿ ಇರುವ ನಿಮ್ಮನ್ನು ನೋಡಬೇಕಾಗಿದ್ದ ನಾನು ಇಲ್ಲಿ ಊರ್ಧ್ವರೇತಸ್ಕರಾಗಿರುವುದನ್ನು ನೋಡುತ್ತಿದ್ದೇನೆ.

ಋತೇ ಶಾಂತನವಾದ್ ಭೀಷ್ಮಾತ್ ತ್ರಿಷು ಲೋಕೇಷು ಪಾರ್ಥಿವ।
ಸತ್ಯಸಂಧಾನ್ಮಹಾವೀರ್ಯಾಚ್ಛೂರಾದ್ ಧರ್ಮೈಕತತ್ಪರಾತ್ ॥೨೧॥

ಎಲೈ ಪ್ರೀತಿಪಾತ್ರರೇ! ಶಂತನು ಪುತ್ರರಾದ, ಸತ್ಯಸಂಧರಾದ, ಮಹಾಪರಾಕ್ರಮಿಗಳಾದ ಶೂರಾದ ಧರ್ಮೈಕನಿಷ್ಠರಾದ, ಮೃತ್ಯುವನ್ನು ತಡೆದು ಶರಪಂಜರದಲ್ಲಿ ಮಲಗಿರುವ ಭೀಷ್ಮರೊಬ್ಬರನ್ನು ಬಿಟ್ಟು ಪ್ರಕೃತಿಯಲ್ಲಿ ಜನಿಸಿದ ಇನ್ನೊಬ್ಬ ಇಂತಹ ವ್ಯಕ್ತಿಯನ್ನು ನಾವು ಕೇಳಿಲ್ಲ.

ಮೃತ್ಯುಮವಾರ್ಯ ತಪಸಾ ಶರಪ್ರಸ್ತರಶಾಯಿನಃ।
ನಿಸರ್ಗಪ್ರಭವಂ ಕಿಂಚಿನ್ನ ಚ ತಾತಾನುಶುಶ್ರುಮ ॥೨೨॥

ಸತ್ಯೇ ತಪಸಿ ದಾನೇ ಚ ಯಜ್ಞಾದಿಕರಣೇ ತಥಾ।
ಧನುರ್ವೇದೇ ಚ ವೇದೇ ಚ ನೀತ್ಯಾಂ ಚೈವಾನ್ವವೇಕ್ಷಣೇ ॥೨೩॥

ಅನೃಶಂಸಂ ಶುಚಿಂ ದಾಂತಂ ಸರ್ವಭೂತಹಿತೇ ರತಮ್।
ಮಹಾರಥಂ ತ್ವತ್ಸದೃಶಂ ನ ಕಂಚಿದನುಶುಶ್ರಮ ॥೨೪॥

ಸತ್ಯ, ತಪಸ್ಸು, ದಾನ, ಯಜ್ಞಾದಿ ಅನುಷ್ಠಾನ, ಧನುರ್ವೇದ, ವೇದ, ರಾಜನೀತಿ, ರಾಜ್ಯಪಾಲನೆ, ದಯೆ, ಶೌಚ, ಇಂದ್ರಿಯನಿಗ್ರಹ, ಸರ್ವಭೂತಹಿತದಲ್ಲಿ ಆಸಕ್ತಿ ಈ ವಿಷಯಗಳಲ್ಲಿ ಮಹಾರಥರಾದ ನಿಮ್ಮನ್ನು ಬಿಟ್ಟು ನಿಮಗೆ ಸದೃಶರಾದ ಇನ್ನೊಬ್ಬರನ್ನು ನಾನು ಕೇಳುವುದಿಲ್ಲ.

ತ್ವಂ ಹಿ ದೇವಾನ್ ಸಗಂಧರ್ವಾನ್ ಸಸುರಾಸುರರಾಕ್ಷಸಾನ್।
ಶಕ್ತ ಏಕರಥೇನೈವ ವಿಜೇತುಂ ನಾತ್ರ ಸಂಶಯಃ ॥೨೫॥

ನೀವಾದರೋ ಗಂಧರ್ವರಿಂದ ಸಹಿತರಾದ ಸುರಾಸುರರಾಕ್ಷಸರಿಂದ ಸಹಿತರಾದ ದೇವತೆಗಳನ್ನು ಒಂದು ರಥದಲ್ಲಿ ಕುಳಿತು ಜಯಿಸುವಿರೆಂಬ ವಿಷಯದಲ್ಲಿ ಸಂಶಯವಿಲ್ಲ.

ತ್ವಂ ಹಿ ಭೀಷ್ಮ ಮಹಾಬಾಹೋ ವಸೂನಾಂ ವಾಸವೋಪಮಃ।
ನಿತ್ಯಂ ವಿಪ್ರೈಃ ಸಮಾಖ್ಯಾತೋ ನವಮೋಽನವಮೋ ಗುಣೈಃ ॥೨೬॥

ಎಲೈ ಮಹಾಬಾಹುಗಳಾದ ಭೀಷ್ಮರೇ! ನೀವು ಎಂಟು ವಸುಗಳ ಸನ್ನಿಧಾನದಿಂದ ಕೂಡಿದ, ಗುಣಗಳಿಂದ ನ್ಯೂನರಾಗದ ಒಂಭತ್ತನೆಯ ವಸುವೆಂದು ಬ್ರಾಹ್ಮಣರು ನಿತ್ಯದಲ್ಲಿಯೂ ಹೇಳುತ್ತಾರೆ.

ಅಹಂ ಹಿ ತ್ವಾಽಭಿಜಾನಾಮಿ ಯಸ್ತ್ವಂ ಪುರುಷಸತ್ತಮ।
ತ್ರಿದಶೇಷ್ವಪಿ ವಿಖ್ಯಾತಃ ಸ್ವಶಕ್ತ್ಯಾ ಸುಮಹಾಬಲಃ ॥೨೭॥

ಎಲೈ ಪುರುಷಶ್ರೇಷ್ಠರೇ! ನೀವು ಯಾರೆಂದು ನಾನು ಚೆನ್ನಾಗಿ ತಿಳಿದಿದ್ದೇನೆ. ಮಹಾಬಲರಾದ ನೀವು ನಿಮ್ಮ ಶಕ್ತಿಯಿಂದ ದೇವತೆಗಳಲ್ಲೂ ಪ್ರಖ್ಯಾತರಾಗಿದ್ದೀರಿ.

ಮನುಷ್ಯೇಷು ಮನುಷ್ಯೇಂದ್ರ ನ ದೃಷ್ಟೋ ನ ಚ ಮೇ ಶ್ರುತಃ।
ಭವತೋ ಯೋ ಗುಣೈಸ್ತುಲ್ಯಃ ಪೃಥಿವ್ಯಾಂ ಪುರುಷಃ ಕ್ವಚಿತ್ ॥೨೮॥

ಎಲೈ ಮನುಷ್ಯೇಂದ್ರರೇ! ಭೂಮಿಯಲ್ಲಿ ಮನುಷ್ಯರಲ್ಲಿ ನಿಮಗೆ ಸದೃಶನಾದ ಇನ್ನೊಬ್ಬ ಮನುಷ್ಯನನ್ನು ನಾವು ಎಂದೂ ನೋಡಲಿಲ್ಲ ಅಥವಾ ಕೇಳಲಿಲ್ಲ.

ತ್ವಂ ಹಿ ಸರ್ವೈರ್ಗುಣೈ ರಾಜನ್ ದೇವಾನಪ್ಯತಿರಿಚ್ಯಸೇ।
ತಪಸಾ ಹಿ ಭವಾನ್ ಶಕ್ತಃ ಸ್ರಷ್ಟುಂ ಲೋಕಾಂಶ್ಚರಾಚರಾನ್ ।
ಕಿಂಪುನಶ್ಚಾತ್ಮನೋ ಲೋಕಾನುತ್ತಮಾನುತ್ತಮೈರ್ಗುಣೈಃ ॥೨೯॥

ಎಲೈ ರಾಜರೇ! ನೀವು ಸರ್ವಗುಣಗಳಿಂದಲೂ ದೇವತೆಗಳನ್ನು ಮೀರುತ್ತೀರಿ. ನಿಮ್ಮ ತಪಸ್ಸಿನಿಂದ ಚರಾಚರಲೋಕಗಳನ್ನೂ ಸೃಷ್ಟಿಸಲು ಸಮರ್ಥರಾಗಿದ್ದೀರಿ. ಇನ್ನು ನಿಮ್ಮ ಉತ್ತಮಗುಣಗಳಿಂದ ನಿಮ್ಮ ಉತ್ತಮಲೋಕಗಳನ್ನು ಸಂಪಾದಿಸುವುದು ಯಾವ ದೊಡ್ಡ ವಿಷಯ?

ತದಸ್ಯ ತಪ್ಯಮಾನಸ್ಯ ಜ್ಞಾತೀನಾಂ ಸಂಕ್ಷಯೇಣ ವೈ।
ಜ್ಯೇಷ್ಠಸ್ಯ ಪಾಂಡುಪುತ್ರಸ್ಯ ಶೋಕಂ ಭೀಷ್ಮ ವ್ಯಪಾನುದ ॥೩೦॥

ಎಲೈ ಭೀಷ್ಮರೇ! ಜ್ಞಾತಿಗಳ ವಧೆಯಿಂದ ಸಂತಾಪಕ್ಕೆ ಒಳಗಾದ ಈ ಜ್ಯೇಷ್ಠ ಪಾಂಡುಪುತ್ರನ ಶೋಕವನ್ನು ನಿವಾರಿಸಿ.

ಚಾತುರ್ವರ್ಣ್ಯಸ್ಯ ಯಶ್ಚೋಕ್ತಃ ಸೇವ್ಯಮಾನೋಽನ್ಯ ಏವ ಚ।
ಚಾತುರಾಶ್ರಮ್ಯಸಂಸೃಷ್ಟಾಸ್ತೇ ಸರ್ವೇ ವಿದಿತಾಸ್ತವ ॥೩೧॥

ಚಾತುರ್ವರ್ಣ್ಯದಿಂದ ಅನುಷ್ಠಾನ ಮಾಡಬೇಕಾದ ಧರ್ಮ, ಅದಕ್ಕೆ ವಿರುದ್ಧವಾದ ಧರ್ಮ, ನಾಲ್ಕು ಆಶ್ರಮಗಳಿಗೆ ಸಂಬಂಧಿಸಿದ ಧರ್ಮ ಇವೆಲ್ಲವೂ ನಿಮಗೆ ತಿಳಿದಿವೆ.

ಚಾತುರ್ವಿದ್ಯೇ ಚ ಯೇ ಪ್ರೋಕ್ತಾಶ್ಚಾತುರ್ಹೋತ್ರೇ ಚ ಭಾರತ।
ಸಾಂಖ್ಯೇ ಯೋಗೇ ಚ ನಿಯತಾ ಯೇ ಚ ಧರ್ಮಾಃ ಸನಾತನಾಃ ॥೩೨॥

ಚಾತುರ್ವರ್ಣ್ಯೇನ ಯಶ್ಚೈಕೋ ಧರ್ಮೋ ನ ಸ್ಮ ವಿರುದ್ಧ್ಯತೇ।
ಸೇವ್ಯಮಾನಃ ಸ ಚೈವಾದ್ಯೋ ಗಾಂಗೇಯ ವಿದಿತಸ್ತವ ॥೩೩॥

ಎಲೈ ಭಾರತರೇ! ಎಲೈ ಗಂಗಾಪುತ್ರರೇ! ನಾಲ್ಕು ವೇದವಿದ್ಯೆಗಳಲ್ಲಿ ಹೇಳಲ್ಪಟ್ಟ ಧರ್ಮಗಳು, ನಾಲ್ಕು ಹೋತೃಗಳಿಗೆ ಹೇಳಲ್ಪಟ್ಟ ಧರ್ಮಗಳು, ಸಾಂಖ್ಯ ಮತ್ತು ಯೋಗಶಾಸ್ತ್ರದಲ್ಲಿ ವಿಹಿತವಾದ ಸನಾತನಧರ್ಮಗಳು, ಚಾತುರ್ವರ್ಣ್ಯದಿಂದಲೂ ಸೇವಿಸಲ್ಪಡಬೇಕಾದ ಅವಿರುದ್ಧವಾದ ಮುಖ್ಯವಾದ ಶ್ರೇಷ್ಠವಾದ ಧರ್ಮ ಎಲ್ಲವೂ ನಿಮಗೆ ತಿಳಿದಿದೆ.

ಪ್ರತಿಲೋಮಪ್ರಸೂತಾನಾಂ ಮ್ಲೇಚ್ಛಾನಾಂ ಚೈವ ಯಃ ಸ್ಮೃತಃ।
ದೇಶಜಾತಿಕುಲಾನಾಂ ಚ ಜಾನೀಷೇ ಧರ್ಮಲಕ್ಷಣಮ್।
ವೇದೋಕ್ತೋ ಯಶ್ಚ ಶಿಷ್ಟೋಕ್ತಃ ಸ ಚೈವ ವಿದಿತಸ್ತವ ॥೩೪॥

ಪ್ರತಿಲೋಮದಲ್ಲಿ ಜನಿಸಿದ ಮ್ಲೇಚ್ಛರ ಧರ್ಮಗಳು, ದೇಶಜಾತಿಕುಲಧರ್ಮಗಳು , ಧರ್ಮದ ಲಕ್ಷಣ ಎಲ್ಲವನ್ನೂ ನೀವು ತಿಳಿದಿದ್ದೀರಿ. ವೇದೋಕ್ತವಾದ ಮತ್ತು ಶಿಷ್ಟಾಚಾರಪ್ರಾಪ್ತವಾದ ಧರ್ಮಗಳು ನಿಮಗೆ ತಿಳಿದಿವೆ.

ಇತಿಹಾಸಪುರಾಣಂ ಚ ಕಾರ್ತ್ಸ್ನ್ಯೇನ ವಿದಿತಂ ತವ।
ಧರ್ಮಶಾಸ್ತ್ರಂ ಚ ಸಕಲಂ ನಿತ್ಯಂ ಮನಸಿ ತೇ ಸ್ಥಿತಮ್ ॥೩೫॥

ಇತಿಹಾಸ, ಪುರಾಣಗಳನ್ನು ನೀವು ಸಮಗ್ರವಾಗಿ ತಿಳಿದಿದ್ದೀರಿ. ಸಮಗ್ರವಾದ ಧರ್ಮಶಾಸ್ತ್ರವು ಯಾವಾಗಲೂ ನಿಮ್ಮ ಮನಸ್ಸಿನಲ್ಲಿ ಇದೆ.

ಯೇ ಚ ಕೇಚನ ಲೋಕೇಽಸ್ಮಿನ್ನರ್ಥಾಃ ಸಂಶಯಕಾರಕಾಃ।
ತೇಷಾಂ ಛೇತ್ತಾ ನಾಸ್ತಿ ಲೋಕೇ ತ್ವದನ್ಯಃ ಪುರುಷರ್ಷಭ ॥೩೬॥

ಎಲೈ ಪುರುಷಶ್ರೇಷ್ಠರೇ! ಈ ಲೋಕದಲ್ಲಿ ಸಂಶಯಕ್ಕೆ ಎಡೆಮಾಡಿಕೊಡುವ ವಿಷಯಗಳು ಯಾವವು ಇವೆಯೋ ಅವುಗಳ ವಿಷಯದಲ್ಲಿ ಸಂಶಯವನ್ನು ಪರಿಹಾರ ಮಾಡುವವರು ನಿಮ್ಮನ್ನು ಬಿಟ್ಟು ಇನ್ನೊಬ್ಬರು ಇಲ್ಲ.

ಸ ಪಾಂಡವೇಯಸ್ಯ ಮನಃಸಮುತ್ಥಿತಂ
ನರೇಂದ್ರ ಶೋಕಂ ವ್ಯಪಕರ್ಷ ಮೇಧಯಾ।
ಭವದ್ವಿಧಾ ಹ್ಯುತ್ತಮಬುದ್ಧಿವಿಸ್ತರಾ
ವಿಮುಹ್ಯಮಾನಸ್ಯ ಜನಸ್ಯ ಶಾಂತಯೇ ॥೩೭॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚಾಶೋಽಧ್ಯಾಯಃ ॥೫೦॥

ಎಲೈ ನರೇಂದ್ರರೇ! ಅಂತಹ ನೀವು ಪಾಂಡುಪುತ್ರನಾದ ಯುಧಿಷ್ಠಿರನ ಮನಸ್ಸಿನಲ್ಲಿ ಉಂಟಾಗಿರುವ ಶೋಕವನ್ನು ನಿಮ್ಮ ಬುದ್ಧಿಯಿಂದ ಪರಿಹರಿಸಿ. ಉತ್ತಮವಾದ ಬುದ್ಧಿವಿಸ್ತಾರವುಳ್ಳ ನಿಮ್ಮಂತಹವರು ಮೋಹಕ್ಕೆ ಒಳಗಾಗುವ ಜನರಿಗೆ ಶಾಂತಿಯನ್ನು ಕರುಣಿಸುವುದಕ್ಕಾಗಿ ಇರುತ್ತಾರೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೦ನೆಯ ಅಧ್ಯಾಯವು ಮುಗಿಯಿತು.

—0—

೫೧. ಐವತ್ತೊಂದನೆಯ ಅಧ್ಯಾಯ

ಕೃಷ್ಣನಿಂದ ಭೀಷ್ಮರಿಗೆ ಶ್ರೇಯಃಪ್ರದಾನ ಮತ್ತು ಧರ್ಮವನ್ನು ಹೇಳುವಂತೆ ಪ್ರೇರಣೆ

ವೈಶಂಪಾಯನಃ

ಶ್ರುತ್ವಾತು ವಚನಂ ಭೀಷ್ಮೋ ವಾಸುದೇವಸ್ಯ ಧೀಮತಃ।
ಕಿಂಚಿದುನ್ನಾಮ್ಯ ವದನಂ ಪ್ರಾಂಜಲಿರ್ವಾಕ್ಯಮಬ್ರವೀತ್ ॥೧॥

ವೈಶಂಪಾಯನರು – ಭೀಷ್ಮರು ಮೇಧಾವಿಯಾದ ಕೃಷ್ಣನ ಮಾತುಗಳನ್ನು ಕೇಳಿ ಮುಖವನ್ನು ಸ್ವಲ್ಪ ಮೇಲೆತ್ತಿ ಕೈಗಳನ್ನು ಮುಗಿದು ಮಾತನಾಡಿದರು.

ನಮಸ್ತೇ ಭಗವನ್ ವಿಷ್ಣೋ ಲೋಕಾನಾಂ ನಿಧನೋದ್ಭವ।
ತ್ವಂ ಹಿ ಕರ್ತಾ ಹೃಷೀಕೇಶ ಸಂಹರ್ತಾ ಚಾಪರಾಜಿತಃ ॥೨॥

ಎಲೈ ವಿಷ್ಣುವೇ! ಭಗವಂತನೇ! ಲೋಕಗಳ ಸೃಷ್ಟಿ ಸಂಹಾರಕನೇ! ಹೃಷೀಕೇಶನೇ! ನೀನೇ ಕರ್ತೃವಾದವನು, ನೀನೇ ಸಂಹರ್ತೃವಾದವನು. ಮತ್ತು ಎಂದೂ ಪರಾಜಯವನ್ನು ಹೊಂದದವನು.

ವಿಶ್ವಕರ್ಮನ್ ನಮಸ್ತೇऽಸ್ತು ವಿಶಾತ್ಮನ್ ವಿಶ್ವಸಂಭವ।
ಅಪವರ್ಗೋऽಸಿ ಭೂತಾನಾಂ ಪಂಚಾನಾಂ ಪರತಃ ಸ್ಥಿತಃ ॥೩॥

ವಿಶ್ವಕರ್ಮನೇ! ನಿನಗೆ ನಮಸ್ಕಾರ. ವಿಶಾತ್ಮನೇ! ವಿಶ್ವೋತ್ಪತ್ತಿಕಾರಣನೇ! ನಿನಗೆ ನಮಸ್ಕಾರ. ನೀನು ಜೀವರಿಗೆ ಮೋಕ್ಷಪ್ರದನಾದವನು. ಪಂಚಭೂತಗಳನ್ನು ಮೀರಿದವನು.

ನಮಸ್ತೇ ತ್ರಿಷು ಲೋಕೇಷು ನಮಸ್ತೇ ಪರತಸ್ತ್ರಿಷು।
ಯೋಗೇಶ್ವರ ನಮಸ್ತೇऽಸ್ತು ತ್ವಂ ಹಿ ಸರ್ವಪರಾಯಣಮ್ ॥೪॥

ನಿನಗೆ ಮೂರು ಲೋಕಗಳಲ್ಲಿಯೂ ನಮಸ್ಕಾರ. ಮೂರುಲೋಕಗಳ ಆಚೆಯಲ್ಲಿಯೂ ನಿನಗೆ ನಮಸ್ಕಾರ. ಯೋಗೇಶ್ವರನೇ! ನಿನಗೆ ನಮಸ್ಕಾರ. ನೀನು ಎಲ್ಲರಿಗೂ ಶ್ರೇಷ್ಠವಾದ ಆಶ್ರಯನಾದವನು.

ಮತ್ಸಂಶ್ರಿತಂ ಯದಾತ್ಥ ತ್ವಂ ವಚಃ ಪುರುಷಸತ್ತಮ।
ತೇನ ಪಶ್ಯಾಮಿ ತೇ ದಿವ್ಯಾನ್ ಭಾವಾನ್ ಹಿ ತ್ರಿಷು ವರ್ತ್ಮಸು ॥೫॥

ಎಲೈ ಪುರುಷೋತ್ತಮನೇ! ನೀನು ನನ್ನ ವಿಷಯದಲ್ಲಿ ಏನು ಮಾತನಾಡಿದೆಯೋ ಅದರ ಬಲದಿಂದ ಮೂರು ಮಾರ್ಗಗಳಲ್ಲಿಯೂ ಇರುವ (ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿರುವ) ದಿವ್ಯವಾದ ವಸ್ತುಗಳನ್ನು ನೋಡುತ್ತಿದ್ದೇನೆ.

ತಚ್ಚ ಪಶ್ಯಾಮಿ ತತ್ತ್ವೇನ ಯತ್ ತೇ ರೂಪಂ ಸನಾತನಮ್।
ಸಪ್ತ ಮಾರ್ಗಾ ನಿರುದ್ಧಾಸ್ತೇ ವಾಯೋರಮಿತತೇಜಸಃ ॥೬॥

ನಿನ್ನ ಸನಾತನವಾದ ರೂಪವನ್ನು ಸಹ ಯಥಾರ್ಥವಾಗಿ ನೋಡುತ್ತಿದ್ದೇನೆ. ಅಮಿತತೇಜಸ್ವಿಯಾದ ವಾಯುವಿನ ಸಪ್ತಮಾರ್ಗಗಳನ್ನೂ ನೀನು ತಡೆದಿದ್ದೀಯೆ.

ದಿವಂ ತೇ ಶಿರಸಾ ವ್ಯಾಪ್ತಂ ಪದ್ಭ್ಯಾಂ ದೇವೀ ವಸುಂಧರಾ।
ದಿಶೋ ಭುಜೌ ರವಿಶ್ಚಕ್ಷುರ್ವೀರ್ಯಂ ತೇ ಶಕ್ರಃ ಪ್ರತಿಷ್ಠಿತಃ ॥೭॥

ದ್ಯುಲೋಕವು ನಿನ್ನ ಶಿರಸ್ಸಿನಿಂದ ವ್ಯಾಪ್ತವಾಗಿದೆ. ಭೂಮಿಯು ನಿನ್ನ ಪಾದಗಳಿಂದ ವ್ಯಾಪ್ತವಾಗಿದೆ. ದಿಕ್ಕುಗಳು ನಿನ್ನ ಭುಜಗಳನ್ನು ಆಶ್ರಯಿಸಿವೆ. ಸೂರ್ಯನು ಚಕ್ಷುಸ್ಸನ್ನೂ, ಇಂದ್ರನು ನಿನ್ನ ವೀರ್ಯವನ್ನೂ ಆಶ್ರಯಿಸಿದ್ದಾರೆ.

ಅಸತೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್।
ಯೇ ನಮಸ್ಯಂತಿ ಗೋವಿಂದಂ ನ ತೇಷಾಂ ವಿದ್ಯತೇ ಭಯಮ್।
ವಪುರ್ಹ್ಯನುಮಿಮೀಮಸ್ತೇ ಮೇಘಸ್ಯೇವ ಸವಿದ್ಯುತಃ ॥೮॥

ಅಗಸೇಪುಷ್ಪದ ಕಾಂತಿಯನ್ನು ಹೊಂದಿದ ಪೀತಾಂಬರಧಾರಿಯಾದ ಗೋವಿಂದ -ನನ್ನು ನಮಸ್ಕರಿಸುವವರು ಯಾವ ಭಯವನ್ನೂ ಹೊಂದುವುದಿಲ್ಲ. ನಿನ್ನ ಶರೀರವು ವಿದ್ಯುತ್ತಿನಿಂದ ಕೂಡಿದ ಮೇಘದಂತೆ ಕಂಡು ಬರುತ್ತದೆ.

ತ್ವತ್ಪ್ರಪನ್ನಾಯ ಭಕ್ತಾಯ ಗತಿಮಿಷ್ಟಾಂ ಜಿಗೀಷವೇ।
ಯಚ್ಛ್ರೇಯಃ ಪುಂಡರೀಕಾಕ್ಷ ತದ್ ಧ್ಯಾಯಸ್ವ ಸುರೋತ್ತಮ ॥೯॥

ಪುಂಡರೀಕಾಕ್ಷನೇ! ಸುರೋತ್ತಮನೇ! ಶ್ರೇಷ್ಠವಾದ ಗತಿಯನ್ನು ಬಯಸುವ, ಶರಣಾಗತನಾದ ನಿನ್ನ ಭಕ್ತನಾದ ನನಗೆ ಶ್ರೇಯಸ್ಸನ್ನು ಚಿಂತಿಸು.

ಶ್ರೀಭಗವಾನ್

ಯತಃ ಖಲು ಪರಾ ಭಕ್ತಿರ್ಮಯಿ ತೇ ಪುರುಷರ್ಷಭ।
ತತೋ ವಪುರ್ಮಯಾ ದಿವ್ಯಂ ತವ ರಾಜನ್ ಪ್ರದರ್ಶಿತಮ್ ॥೧೦॥

ಭಗವಾನ್ – ಎಲೈ ಪುರುಷಶ್ರೇಷ್ಠನೇ! ರಾಜನೇ ನಿನಗೆ ನನ್ನಲ್ಲಿ ಶ್ರೇಷ್ಠವಾದ ಭಕ್ತಿಯಿರುವ ಕಾರಣದಿಂದ ನನ್ನ ದಿವ್ಯದೇಹವನ್ನು ನಿನಗೆ ತೋರಿಸಿದ್ದೇನೆ.

ನ ಹ್ಯಭಕ್ತಾಯ ರಾಜೇಂದ್ರ ಭಕ್ತಾಯಾನೃಜವೇ ನ ಚ।
ದರ್ಶಯಾಮ್ಯಹಮಾತ್ಮಾನಂ ನ ಚಾದಾಂತಾಯ ಭಾರತ ॥೧೧॥

ಎಲೈ ಭಾರತನೇ! ರಾಜೇಂದ್ರನೇ! ಭಕ್ತನಲ್ಲದವನಿಗೆ ಭಕ್ತನಾದರೂ ವಕ್ರನಾದವನಿಗೆ ಇಂದ್ರಿಯನಿಗ್ರಹವಿಲ್ಲದವನಿಗೆ ನಾನು ನನ್ನನ್ನು ತೋರಿಸುವುದಿಲ್ಲ.

ಭವಾಂಸ್ತು ಮಮ ಭಕ್ತಶ್ಚ ನಿತ್ಯಂ ಚಾರ್ಜವಮಾಸ್ಥಿತಃ।
ದಮೇ ತಪಸಿ ಸತ್ಯೇ ಚ ದಾನೇ ಚ ನಿರತಃ ಶುಚಿಃ ॥೧೨॥

ನೀನಾದರೋ ನನ್ನ ಭಕ್ತನಾದವನು; ಯಾವಾಗಲೂ ನೇರಸ್ವಭಾವದವನು. ಇಂದ್ರಿಯನಿಗ್ರಹದಲ್ಲಿಯೂ ತಪಸ್ಸಿನಲ್ಲಿಯೂ ಸತ್ಯವಚನದಲ್ಲಿಯೂ ದಾನದಲ್ಲಿಯೂ ನಿರತನಾಗಿ ಶುಚಿಯಾಗಿರುವವನು.

ಅರ್ಹಸ್ತ್ವಂ ಭೀಷ್ಮ ಮಾಂ ದ್ರಷ್ಟುಂ ತಪಸಾ ಸ್ವೇನ ಪಾರ್ಥಿವ।
ತವ ಹ್ಯುಪಸ್ಥಿತಾ ಲೋಕಾ ಯೇಭ್ಯೋ ನಾವರ್ತತೇ ಪುನಃ ॥೧೩॥

ಎಲೈ ಭೀಷ್ಮನೇ! ರಾಜನೇ! ನಿನ್ನ ತಪಸ್ಸಿನ ಬಲದಿಂದ ನೀನು ನನ್ನನ್ನು ನೋಡಲು ಅರ್ಹನಾಗಿದ್ದೀಯೆ. ನಿನಗೆ ಪುನಃ ಹಿಂದಿರುಗದ ಲೋಕಗಳು ಸಿದ್ಧವಾಗಿವೆ.

ಪಂಚಾಶತಂ ಷಟ್ ಚ ಕುರುಪ್ರವೀರ
ಶೇಷಂ ದಿನಾನಾಂ ತವ ಜೀವಿತಸ್ಯ।

ತತಃ ಶುಭೈಃ ಕರ್ಮಫಲೋದಯೈಸ್ತ್ವಂ
ಸಮೇಷ್ಯಸೇ ಭೀಷ್ಮ ವಿಮುಚ್ಯ ದೇಹಮ್ ॥೧೪॥

ಎಲೈ ಕುರುಪ್ರವೀರನೇ! ನಿನ್ನ ಜೀವನದಲ್ಲಿ ಇನ್ನೂ ಐವತ್ತಾರು ದಿವಸಗಳು ಉಳಿದಿವೆ. ಅನಂತರ ಎಲೈ ಭೀಷ್ಮನೇ! ನೀನು ಈ ದೇಹವನ್ನು ತ್ಯಜಿಸಿ, ಶುಭವಾದ ಕರ್ಮಫಲಗಳನ್ನು ಹೊಂದುವಿ.

ಏತೇ ಹಿ ದೇವಾ ವಸವೋ ವಿಮಾನಾನ್
ಆಸ್ಥಾಯ ಸರ್ವೇ ಜ್ವಲಿತಾಗ್ನಿಕಲ್ಪಾಃ।
ಅಂತರ್ಹಿತಾಸ್ತ್ವಾಂ ಪ್ರತಿಪಾಲಯಂತಿ
ಕಾಷ್ಠಾಂ ಪ್ರಪದ್ಯಂತಮುದಕ್ ಪತಂಗಮ್ ॥೧೫॥

ಜ್ವಲಿಸುವ ಅಗ್ನಿಯ ಕಾಂತಿಯನ್ನು ಹೊಂದಿರುವ ಈ ದೇವತೆಗಳು ಮತ್ತು ವಸುಗಳೆಲ್ಲರೂ ತಮ್ಮ ವಿಮಾನಗಳಲ್ಲಿ ಕುಳಿತು ಅದೃಶ್ಯರಾಗಿ ಸೂರ್ಯನು ಉತ್ತರ ದಿಕ್ಕಿಗೆ ಗತಿಯನ್ನು ಬದಲಾಯಿಸುವವರೆಗೆ ರಕ್ಷಣೆ ಮಾಡುತ್ತಿದ್ದಾರೆ.

ವ್ಯಾವೃತ್ತಮಾತ್ರೇ ಭಗವತ್ಯುದೀಚೀಂ
ಸೂರ್ಯೇ ದಿಶಂ ಕಾಲವಶಾತ್ ಪ್ರಪನ್ನೇ।
ಗಂತಾಸಿ ಲೋಕಾನ್ ಪುರುಷಪ್ರವೀರ
ನಾವರ್ತತೇ ಯಾನುಪಲಭ್ಯ ವಿದ್ವಾನ್ ॥೧೬॥

ಭಗವಂತನಾದ ಸೂರ್ಯನು ಉತ್ತರದಿಕ್ಕಿಗೆ ಹೊರಟಕೂಡಲೇ ಎಲೈ ಪುರುಷ-ಪ್ರವೀರನೇ! ನೀನು ಜ್ಞಾನಿಯಾದವನು ಯಾವ ಲೋಕಗಳನ್ನು ಪಡೆದು ಹಿಂದಿರು-ಗುವುದಿಲ್ಲವೋ ಅಂತಹ ಲೋಕಗಳಿಗೆ ಕಾಲವಶನಾಗಿ ಹೋಗುವವನಾಗುವಿ.

ಅಮುಂ ಚ ಲೋಕಂ ತ್ವಯಿ ಭೀಷ್ಮ ಯಾತೇ
ಜ್ಞಾನಾನಿ ನಂಕ್ಷ್ಯಂತ್ಯಖಿಲೇನ ವೀರ।
ಅತಃ ಸ್ಮ ಸರ್ವೇ ತ್ವಯಿ ಸನ್ನಿಕರ್ಷಂ
ಸಮಾಗತಾ ಧರ್ಮವಿವೇಚನಾಯ ॥೧೭॥

ಎಲೈ ವೀರನೇ! ಭೀಷ್ಮನೇ! ನೀನು ಪರಲೋಕಕ್ಕೆ ಪ್ರಯಾಣಮಾಡಿದ ಮೇಲೆ ಈ ಲೋಕದಲ್ಲಿ ಜ್ಞಾನಗಳು ಪೂರ್ಣವಾಗಿ ನಾಶ ಹೊಂದುತ್ತವೆ. ಆದ್ದರಿಂದ ನಾವೆಲ್ಲರೂ ಧರ್ಮವಿವೇಚನೆಯನ್ನು ಮಾಡಲು ನಿನ್ನ ಬಳಿಗೆ ಬಂದಿದ್ದೇವೆ.

ತಜ್ಜ್ಞಾತಿಶೋಕೋಪಹತಶ್ರುತಾಯ
ಸತ್ಯಾಭಿಸಂಧಾಯ ಯುಧಿಷ್ಠಿರಾಯ।
ಪ್ರಬ್ರೂಹಿ ಧರ್ಮಾರ್ಥಸಮಾಧಿಯುಕ್ತ-
ಮರ್ಥ್ಯಂ ವಚೋऽಸ್ಯಾಪನುದಾಧ ಶೋಕಮ್ ॥೧೪॥

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕಪಂಚಾಶೋऽಧ್ಯಾಯಃ ॥೫೧॥

ಆದ್ದರಿಂದ ಜ್ಞಾತಿವಧೆಯಿಂದುಂಟಾದ ಶೋಕದಿಂದ ಮಲಿನವಾದ ಜ್ಞಾನವನ್ನು ಹೊಂದಿರುವ ಸತ್ಯವಾದ ಅಭಿಪ್ರಾಯವುಳ್ಳ ಯುಧಿಷ್ಠಿರನಿಗೆ ಧರ್ಮಾರ್ಥ-ಸಮಾಧಾನಯುಕ್ತವಾದ ಪ್ರಾರ್ಥನೀಯವಾದ ಮಾತುಗಳನ್ನು ಹೇಳಿ ಅವನ ಶೋಕವನ್ನು ಪರಿಹರಿಸು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೫೧ನೆಯ ಅಧ್ಯಾಯವು ಮುಗಿಯಿತು

—0—

೫೨. ಐವತ್ತೆರಡನೆಯ ಅಧ್ಯಾಯ

ಭೀಷ್ಮರಿಂದ ತಮ್ಮ ಅಸಾಮರ್ಥ್ಯದ ನಿವೇದನೆ; ಕೃಷ್ಣನ ಅನುಗ್ರಹದಿಂದ ದೇಹದಾರ್ಢ್ಯಪ್ರಾಪ್ತಿ

ವೈಶಂಪಾಯನಃ

ತತಃ ಕೃಷ್ಣಸ್ಯ ತದ್ ವಾಕ್ಯಂ ಧರ್ಮಾರ್ಥಸಹಿತಂ ಹಿತಮ್।
ಶ್ರುತ್ವಾ ಶಾಂತನವೋ ಭೀಷ್ಮಃ ಪ್ರತ್ಯುವಾಚ ಕೃತಾಂಜಲಿಃ ॥೧॥

ವೈಶಂಪಾಯನರು – ಆಗ ಧರ್ಮಾರ್ಥಸಹಿತವೂ ಹಿತವೂ ಆದ ಕೃಷ್ಣನ ಆ ಮಾತನ್ನು ಕೇಳಿ ಶಂತನುಪುತ್ರರಾದ ಆ ಭೀಷ್ಮರು ಕೈಗಳನ್ನು ಮುಗಿದು ಮಾತನಾಡಿದರು.

ಲೋಕನಾಥ ಮಹಾಬಾಹೋ ಶಿವ ನಾರಾಯಣಾಚ್ಯುತ।
ತವ ವಾಕ್ಯಮಭಿಶ್ರುತ್ಯ ಹರ್ಷೇಣಾಸ್ಮಿ ಪರಿಪ್ಲುತಃ ॥೨॥

ಲೋಕನಾಥನೇ! ಮಹಾಬಾಹುವೇ! ಶಿವನೇ! ನಾರಾಯಣನೇ! ಅಚ್ಯುತನೇ! ನಿನ್ನ ಮಾತನ್ನು ಕೇಳಿ ನಾನು ಸಂತೋಷದಿಂದ ತುಂಬಿಹೋಗಿದ್ದೇನೆ.

ಕಿಂ ಚಾಹಮಭಿಧಾಸ್ಯಾಮಿ ವಾಕ್ಪತೇ ತವ ಸನ್ನಿಧೌ।
ಯದಾ ವಾಚೋಗತಂ ಸರ್ವಂ ತವ ವಾಚಿ ಸಮಾಹಿತಮ್ ॥೩॥

ಎಲೈ ವಾಕ್ಪತಿಯೇ! ಮಾತಿನಿಂದ ಹೇಳಬೇಕಾದುದೆಲ್ಲವೂ ನಿನ್ನ ಮಾತಿನಲ್ಲಿಯೇ ಅಡಗಿರುವಾಗ ನಿನ್ನ ಸನ್ನಿಧಿಯಲ್ಲಿ ನಾನು ಏನನ್ನು ಹೇಳಲಿ?

ಯದ್ಧಿ ಕಿಂಚಿತ್ ಕೃತಂ ಲೋಕೇ ಕರ್ತವ್ಯಂ ಕ್ರಿಯತೇ ಚ ಯತ್।
ತತ್ತತ್ತನ್ನಿಃಸೃತಂ ದೇವ ಲೋಕಾ ಬುದ್ಧಿಮಯಾ ಹಿ ತೇ ॥೪॥

ಲೋಕದಲ್ಲಿ ಮಾಡಬೇಕಾದ ಯಾವ ಕರ್ತವ್ಯವಿದೆಯೋ ಯಾವುದು ಮಾಡಲ್ಪಡುತ್ತದೆಯೋ ಎಲೈ ದೇವನೇ! ಅದೆಲ್ಲವೂ ನಿನ್ನಿಂದಲೇ ಉಂಟಾಗುವುದು. ಎಲ್ಲ ಲೋಕಗಳೂ ನಿನ್ನ ಜ್ಞಾನವನ್ನು ಅವಲಂಬಿಸಿವೆ.

ಕಥಯೇದ್ ದೇವಲೋಕಂ ಯೋ ದೇವರಾಜಸಮೀಪತಃ।
ಧರ್ಮಕಾಮಾರ್ಥಶಾಸ್ತ್ರಾಣಾಂ ಸೋಽರ್ಥಾನ್ ಬ್ರೂಯಾತ್ ತವಾಗ್ರತಃ॥

ಯಾವನು ದೇವರಾಜನಾದ ಇಂದ್ರನಿಗೆ ದೇವಲೋಕವನ್ನು ಪರಿಚಯಮಾಡಿಕೊಡುತ್ತಾನೋ ಅಂತಹವನು ನಿನ್ನ ಎದುರಿನಲ್ಲಿ ಧರ್ಮ, ಅರ್ಥ, ಕಾಮಶಾಸ್ತ್ರಗಳ ಅರ್ಥವನ್ನು ಹೇಳಿಯಾನು!

ಶರಾಭಿಘಾತಾದ್ ವ್ಯಥಿತಂ ಮನೋ ಮೇ ಮಧುಸೂದನ।
ಗಾತ್ರಾಣಿ ಚಾವಸೀದಂತಿ ನ ಚ ಬುದ್ಧಿಃ ಪ್ರಸೀದತಿ ॥೬॥

ಎಲೈ ಮಧುಸೂದನನೇ! ಬಾಣಗಳಿಂದುಂಟಾದ ವೇದನೆಯಿಂದ ನನ್ನ ಮನಸ್ಸು ವ್ಯಥೆಯಿಂದ ಕೂಡಿದೆ. ಶರೀರವು ಕುಸಿದು ಹೋಗುತ್ತಿದೆ. ಬುದ್ಧಿಯು ಸ್ಪಷ್ಟವಾಗಿಲ್ಲ.

ನ ಚ ಮೇ ಪ್ರತಿಭಾ ಕಾಚಿದಸ್ತಿ ಕಿಂಚಿತ್ ಪ್ರಭಾಷಿತುಮ್ ।
ಪೀಡ್ಯಮಾನಸ್ಯ ಗೋವಿಂದ ವಿಷಾನಲಸಮೈಃ ಶರೈಃ ॥೭॥

ವಿಷಾಗ್ನಿಗಳಿಗೆ ಸಮಾನವಾದ ಬಾಣಗಳಿಂದ ಪೀಡಿತನಾದ ನನಗೆ ಮಾತನಾಡಲು ಯಾವುದೂ ಹೊಳೆಯುತ್ತಿಲ್ಲ.

ಬಲಂ ಮೇಧಾಃ ಪ್ರಜರತಿ ಪ್ರಾಣಾಃ ಸಂತ್ವರಯಂತಿ ಚ ।
ಮರ್ಮಾಣಿ ಪರಿತಪ್ಯಂತೇ ಭ್ರಾಂತಂ ಚೈತಸ್ತಥೈವ ಚ ॥೮॥

ಬಲ ಮತ್ತು ಪ್ರತಿಭೆಗಳು ನಶಿಸಿ ಹೋಗುತ್ತಿವೆ. ಪ್ರಾಣಗಳು ಶರೀರವನ್ನು ಬಿಡಲು ತ್ವರೆ ಮಾಡುತ್ತಿವೆ. ಶರೀರದ ಮರ್ಮಸ್ಥಾನಗಳು ತಾಪಕ್ಕೊಳಗಾಗಿವೆ. ನನ್ನ ಮನಸ್ಸು ಭ್ರಾಂತಿಯಿಂದ ಕೂಡಿದೆ.

ದೌರ್ಬಲ್ಯಾತ್ ಸಜ್ಜತೇ ವಾಙ್ ಮೇ ಸ ಕಥಂ ವಕ್ತುಮುತ್ಸಹೇ ।
ಸಾಧು ಮೇ ತ್ವಂ ಪ್ರಸೀದಸ್ವ ದಾಶಾರ್ಹಕುಲನಂದನ ॥೯॥

ನಿಃಶಕ್ತಿಯಿಂದ ಮಾತು ಉಡುಗಿಹೋಗುತ್ತಿದೆ. ಅಂತಹ ನಾನು ಹೇಗೆ ಮಾತನಾಡಲಿ? ದಾಶಾರ್ಹಕುಲನಂದನನೇ! ನೀನು ನನಗೆ ಪ್ರಸನ್ನನಾಗು.

ತತ್ ಕ್ಷಮಸ್ವ ಮಹಾಬಾಹೋ ನ ಬ್ರೂಯಾಂ ಕಿಂಚಿದಚ್ಯುತ ।
ತ್ವತ್ಸನ್ನಿಧೌ ಚ ಸೀದೇತ ವಾಚಸ್ಪತಿರಪಿ ಬ್ರುವನ್ ॥೧೦॥

ಎಲೈ ಮಹಾಬಾಹುವೇ! ನನ್ನನ್ನು ಕ್ಷಮಿಸು. ಅಚ್ಯುತನೇ! ನಾನು ಏನನ್ನೂ ಹೇಳಲಾರೆ. ಅದರಲ್ಲೂ ನಿನ್ನ ಸನ್ನಿಧಿಯಲ್ಲಿ ವಾಚಸ್ಪತಿಯೂ ಮಾತನಾಡಲು ಹೊರಟರೆ ಅವನ ಮಾತುಗಳು ನಶಿಸಿಹೋದಾವು!

ನ ದಿಶಃ ಸಂಪ್ರಜಾನಾಮಿ ನಾಕಾಶಂ ನಚ ಮೇದಿನೀಮ್ ।
ಕೇವಲಂ ತವ ವೀರ್ಯೇಣ ತಿಷ್ಠಾಮಿ ಮಧುಸೂದನ ॥೧೧॥

ನನಗೆ ದಿಕ್ಕುಗಳು ತಿಳಿಯುತ್ತಿಲ್ಲ. ಭೂಮಿ ಮತ್ತು ಆಕಾಶಗಳು ಗೋಚರಿ-

ಸುತ್ತಿಲ್ಲ. ಎಲೈ ಮಧುಸೂದನನೇ! ಕೇವಲ ನಿನ್ನ ಅನುಗ್ರಹದಿಂದ ನಾನು ಬದುಕಿದ್ದೇನೆ.

ಸ್ವಯಮೇವ ಪ್ರಭೋ ತಸ್ಮಾದ್ ಧರ್ಮರಾಜಸ್ಯ ಯದ್ ಹಿತಮ್ ।
ತದ್ ಬ್ರವೀಹ್ಯಾಶು ಸರ್ವೇಷಾಮಾಗಮಾನಾಂ ತ್ವಮಾಗಮಃ ॥೧೨॥

ಎಲೈ ಪ್ರಭುವೇ! ಆದ್ದರಿಂದ ನೀನೇ ಧರ್ಮರಾಜನಿಗೆ ಯಾವುದು ಹಿತವೋ ಅದನ್ನು ಹೇಳು. ಎಲ್ಲ ಆಗಮಗಳಿಗೆ ನೀನೇ ಮೂಲನಾದವನು (ನೀನೇ ಜ್ಞಾನಪ್ರದನಾದವನು).

ಕಥಂ ತ್ವಯಿ ಸ್ಥಿತೇ ಲೋಕೇ ಶಾಶ್ವತೇ ಲೋಕಕರ್ತರಿ ।
ಪ್ರಬ್ರೂಯಾನ್ಮದ್ವಿಧಾಃ ಕಶ್ಚಿದ್ ಗುರೌ ಶಿಷ್ಯ ಇವ ಸ್ಥಿತೇ ॥೧೩॥

ಲೋಕಕರ್ತನೂ ಶಾಶ್ವತನೂ ಆದ ನಿನ್ನಂತಹವನು ಎದುರಿಗೆ ಇರುವಾಗ ಗುರುವಿನ ಎದುರಿನಲ್ಲಿ ಶಿಷ್ಯನು ಮಾತನಾಡಿದಂತೆ ನನ್ನಂತಹ ಯಾವನು ಮಾತನಾಡಿಯಾನು?

ಶ್ರೀಭಗವಾನ್

ಉಪಪನ್ನಮಿದಂ ವಾಕ್ಯಂ ಕೌರವಾಣಾಂ ಧುರಂಧರೇ ।
ಮಹಾವೀರ್ಯೇ ಮಹಾಸತ್ತ್ವೇ ಸ್ಥಿತೇ ಸರ್ವಾರ್ಥದರ್ಶಿನಿ ॥೧೪॥

ಶ್ರೀಭಗವಾನ್– ಕೌರವರ ಧುರಂಧರನೂ, ಮಹಾಪರಾಕ್ರಮಿಯೂ, ಮಹಾಧೈರ್ಯವಂತನೂ ಸರ್ವಜ್ಞನೂ ಆದ ನಿನ್ನಿಂದ ಇಂತಹ ಮಾತುಗಳು ಯೋಗ್ಯವಾಗಿವೆ.

ಯಚ್ಚ ಮಾಮಾತ್ಥ ಗಾಂಗೇಯ ಬಾಣಘಾತರುಜಂ ಪ್ರತಿ ।
ಗೃಹಾಣಾತ್ರ ವರಂ ಭೀಷ್ಮ ಮತ್ಪ್ರಸಾದಕೃತಂ ವಿಭೋ ॥೧೫॥

ಎಲೈ ಗಾಂಗೇಯನೇ! ಬಾಣಗಳಿಂದ ಉಂಟಾದ ವೇದನೆಯ ವಿಷಯದಲ್ಲಿ

ನೀನು ನನಗೆ ಹೇಳಿದೆಯಷ್ಟೇ. ಎಲೈ ಭೀಷ್ಮನೇ! ವಿಭುವೇ! ನನ್ನ ಅನುಗ್ರಹದಿಂದ ಉಂಟಾದ ವರವನ್ನು ಈ ವಿಷಯದಲ್ಲಿ ಸ್ವೀಕರಿಸು.

ನ ತೇ ಗ್ಲಾನಿರ್ನ ತೇ ಮೂರ್ಚ್ಛಾ ನ ದಾಹೋ ನ ಚ ತೇ ರುಜಾ।
ಪ್ರಭವಿಷ್ಯತಿ ಗಾಂಗೇಯ ಕ್ಷುತ್ಪಿಪಾಸೇ ನ ಚಾಪ್ಯುತ ॥೧೬॥

ಎಲೈ ಗಾಂಗೇಯನೇ! ಅಚ್ಯುತನೇ! ನಿನಗೆ ಶ್ರಮವಾಗಲೀ, ಮೂರ್ಛೆಯಾಗಲೀ, ಉರಿಯಾಗಲೀ, ವೇದನೆಯಾಗಲೀ, ಹಸಿವು ನೀರಡಿಕೆಗಳಾಗಲೀ ಉಂಟಾಗುವುದಿಲ್ಲ.

ಜ್ಞಾನಾನಿ ಚ ಸಮಗ್ರಾಣಿ ಪ್ರತಿಭಾಸ್ಯಂತಿ ತೇऽನಘ।
ನ ಚ ತೇ ಕ್ವಚಿದಾಸಕ್ತಿರ್ಬುದ್ಧೇಃ ಪ್ರಾದುರ್ಭವಿಷ್ಯತಿ ॥೧೭॥

ಎಲೈ ಅನಘನೇ! ನಿನಗೆ ಎಲ್ಲ ಜ್ಞಾನಗಳೂ ಪ್ರಕಾಶಿಸುತ್ತವೆ. ನಿನ್ನ ಬುದ್ಧಿಯು ಸಂಕಲ್ಪ ಮಾಡಿದ ವಿಷಯವನ್ನು ಬಿಟ್ಟು ಬೇರೆ ಕಡೆಗೆ ಹೋಗುವುದಿಲ್ಲ.

ಸತ್ತ್ವಸ್ಥಂ ಚ ಮನೋ ನಿತ್ಯಂ ತವ ಭೀಷ್ಮ ಭವಿಷ್ಯತಿ।
ರಜಸ್ತಮೋಭ್ಯಾಂ ರಹಿತಂ ಘನೈರ್ಮುಕ್ತ ಇವೋಡುರಾಟ್ ॥೧೮॥

ಎಲೈ ಭೀಷ್ಮನೇ! ನಿನ್ನ ಮನಸ್ಸು ರಜೋಗುಣ ಮತ್ತು ತಮೋಗುಣಗಳಿಂದ ರಹಿತವಾಗಿ ಮೋಡನಿಂದ ನಿರ್ಮುಕ್ತನಾದ ಚಂದ್ರನಂತೆ ಯಾವಾಗಲೂ ಸತ್ವಗುಣದಲ್ಲಿ ನಿಲ್ಲುವುದು.

ಯದ್ ಯಚ್ಚ ಧರ್ಮಸಂಯುಕ್ತಮರ್ಥಯುಕ್ತಮಥಾಪಿ ವಾ।
ಚಿಂತಯಿಷ್ಯಸಿ ತತ್ರಾಗ್ರ್ಯಾ ಬುದ್ಧಿಸ್ತವ ಭವಿಷ್ಯತಿ ॥೧೯॥

ಧರ್ಮದ ವಿಷಯದಲ್ಲಿ ಮತ್ತು ಅರ್ಥದ ವಿಷಯದಲ್ಲಿ ನೀನು ಏನೇನು ಚಿಂತಿಸುವಿಯೋ ಆ ವಿಷಯಗಳಲ್ಲಿ ನಿನ್ನ ಬುದ್ಧಿಯು ಬಹಳ ಶ್ರೇಷ್ಠವಾಗುವುದು.

ಇಮಂ ಚ ರಾಜಶಾರ್ದೂಲ ಭೂತಗ್ರಾಮಂ ಚತುರ್ವಿಧಮ್।
ಚಕ್ಷುರ್ದಿವ್ಯಂ ಸಮಾಶ್ರಿತ್ಯ ದ್ರಕ್ಷ್ಯಸ್ಯಮಿತವಿಕ್ರಮ ॥೨೦॥

ಎಲೈ ರಾಜಶಾರ್ದೂಲನೇ! ಅಮಿತವಿಕ್ರಮನೇ! ನೀನು ದಿವ್ಯವಾದ ಚಕ್ಷುಸ್ಸನ್ನು ಹೊಂದಿ, ಜರಾಯುಜಾದಿ ನಾಲ್ಕು ವಿಧವಾದ ಜೀವರನ್ನು ನೋಡುವಿ.

ಚತುರ್ವಿಧಂ ಪ್ರಜಾಜಾಲಂ ಸಂಯುಕ್ತೋ ಜ್ಞಾನಚಕ್ಷುಷಾ ।
ಭೀಷ್ಮ ದ್ರಕ್ಷ್ಯಸಿ ತತ್ತ್ವೇನ ಜಲೇ ಮೀನ ಇವಾಮಲೇ ॥೨೧॥

ಎಲೈ ಭೀಷ್ಮನೇ! ನೀನು ಸ್ವಚ್ಛವಾದ ನೀರಿನಲ್ಲಿ ಮೀನನ್ನು ನೋಡಿದಂತೆ ನಿನ್ನ ಜ್ಞಾನದೃಷ್ಟಿಯಿಂದ ಕೂಡಿದವನಾಗಿ ಎಲ್ಲ ಜೀವರನ್ನೂ ಯಥಾರ್ಥವಾಗಿ ನೋಡುವಿ (ಎಂದು ಹೇಳಿದನು).

ವೈಶಂಪಾಯನಃ

ತತಸ್ತೇ ವ್ಯಾಸಸಹಿತಾಃ ಸರ್ವ ಏವ ಮಹರ್ಷಯಃ ।
ಋಗ್ಯಜುಃಸಾಮಸಂಯುಕ್ತೈರ್ವಚೋಭಿಃ ಕೃಷ್ಣಮಾರ್ಚಯನ್ ॥೨೨॥

ವೈಶಂಪಾಯನರು – ಅನಂತರ ವ್ಯಾಸರಿಂದ ಕೂಡಿದ ಎಲ್ಲ ಮಹರ್ಷಿಗಳೂ ಋಗ್‌ಯಜುಃಸಾಮವಾಕ್ಯಗಳಿಂದ ಕೃಷ್ಣನನ್ನು ಪೂಜಿಸಿದರು.

ತತಃ ಸರ್ವರ್ತವಂ ದಿವ್ಯಂ ಪುಷ್ಪವರ್ಷಂ ನಭಸ್ತಳಾತ್ ।
ಪಪಾತ ಯತ್ರ ವಾರ್ಷ್ಣೇಯಃ ಸಗಾಂಗೇಯಃ ಸಪಾಂಡವಃ ॥೨೩॥

ಆಗ ಕೃಷ್ಣನೂ ಭೀಷ್ಮರೂ ಮತ್ತು ಪಾಂಡವರೂ ಇದ್ದ ಸ್ಥಳದಲ್ಲಿ ಆಕಾಶದಿಂದ ದಿವ್ಯವಾದ ಸರ್ವ ಋತುಗಳ ಪುಷ್ಪಗಳ ವೃಷ್ಟಿಯು ಉಂಟಾಯಿತು.

ವಾದಿತ್ರಾಣಿ ಚ ದಿವ್ಯಾನಿ ಜಗುಶ್ಚಾಪ್ಸರಸಾಂ ಗಣಾಃ ।
ನ ಚಾಹಿತಮನಿಷ್ಟಂ ವಾ ಕಿಂಚಿತ್ ತತ್ರ ವ್ಯದೃಶ್ಯತ ॥೨೪॥

ಆಕಾಶದಲ್ಲಿ ದಿವ್ಯವಾದ ವಾದ್ಯಗಳು ಮೊಳಗಿದವು. ಅಪ್ಸರೆಯರ ಸಮೂಹಗಳು ಗಾನವನ್ನು ಮಾಡಿದವು. ಅಲ್ಲಿ ಅಹಿತವಾದುದಾಗಲೀ, ಅನಿಷ್ಟವಾದುದಾಗಲೀ ಯಾವುದೂ ಕಂಡು ಬರಲಿಲ್ಲ.

ವವೌ ಶಿವಃ ಸುಖೋ ವಾಯುಃ ಸುಖಿಗಂಧವಹಃ ಶುಚಿಃ।
ಶಾಂತಾಯಾಂ ದಿಶಿ ಶಾಂತಾಶ್ಚ ಪ್ರಾವದನ್ ಮೃಗಪಕ್ಷಿಣಃ ॥೨೫॥

ಅನಂತರ ಮಂಗಳಕರವಾದ ವಾಯುವು ಶುಚಿಯಾಗಿ ಸರ್ವಗಂಧಗಳನ್ನು ತೆಗೆದುಕೊಂಡು ಸುಖವಾಗಿ ಬೀಸಿತು. ದಕ್ಷಿಣದಿಕ್ಕಿನಲ್ಲಿ ಮೃಗಪಕ್ಷಿಗಳು ಶಾಂತವಾಗಿ ಕಿರುಚಿದವು.

ತತೋ ಮುಹೂರ್ತಾದ್ ಭಗವಾನ್ ಸಹಸ್ರಾಂಶುರ್ದಿವಾಕರಃ।
ದಹನ್ ವನಮಿವೈಕಾಂತೇ ಪ್ರತೀಚ್ಯಾಂ ಪ್ರತ್ಯದೃಶ್ಯತ ॥೨೬॥

ಅನಂತರ ಒಂದು ಮುಹೂರ್ತದಲ್ಲಿ ಭಗವಂತನಾದ ಸಹಸ್ರಕಿರಣನಾದ ಸೂರ್ಯನು ಏಕಾಂತದಲ್ಲಿ ಆ ವನವನ್ನು ದಹಿಸುವವನಂತೆ ಪಶ್ಚಿಮದಿಕ್ಕಿನಲ್ಲಿ ಕಾಣಿಸಿ-ಕೊಂಡನು.

ತತೋ ಮಹರ್ಷಯಃ ಸರ್ವೇ ಸಮುತ್ಥಾಯ ಜನಾರ್ದನಮ್।
ಭೀಷ್ಮಮಾಮಂತ್ರ್ಯಾಂಚಕ್ರೂ ರಾಜಾನಂ ಚ ಯುಧಿಷ್ಠಿರಮ್ ॥೨೭॥

ಆಗ ಮಹರ್ಷಿಗಳೆಲ್ಲರೂ ಎದ್ದು ಹೊರಡಲು ಜನಾರ್ದನನ, ಭೀಷ್ಮರ ಮತ್ತು ರಾಜನಾದ ಯುಧಿಷ್ಠಿರನ ಅನುಮತಿಯನ್ನು ತೆಗೆದುಕೊಂಡರು.

ತತಃ ಪ್ರಣಾಮಮಕರೋತ್ ಕೇಶವಃ ಪಾಂಡವಸ್ತಥಾ।
ಸಾತ್ಯಕಿಃ ಸಂಜಯಶ್ಚೈವ ಸ ಚ ಶಾರದ್ವತಃ ಕೃಪಃ ॥೨೮॥

ಆಗ ಕೇಶವನೂ, ಪಾಂಡವನಾದ ಯುಧಿಷ್ಠಿರನೂ, ಸಾತ್ಯಕಿ, ಸಂಜಯ ಮತ್ತು ಶಾರದ್ವತರಾದ ಕೃಪರೂ ಋಷಿಗಳಿಗೆ ಪ್ರಣಾಮವನ್ನು ಮಾಡಿದರು.

ತತಸ್ತೇ ಧರ್ಮನಿರತಾಃ ಸಮ್ಯಕ್ ತೈರಭಿಪೂಜಿತಾಃ।
ಶ್ವಃ ಸಮೇಷ್ಯಾಮ ಇತ್ಯುಕ್ತ್ವಾ ಯಥೇಷ್ಟಂ ತ್ವರಿತಾ ಯಯುಃ ॥೨೯॥

ಅನಂತರ ಅವರಿಂದ ಚೆನ್ನಾಗಿ ಪೂಜಿಸಲ್ಪಟ್ಟ ಧರ್ಮನಿರತರಾದ ಆ ಮಹರ್ಷಿ-

ಗಳು ನಾಳೆ ಸಮಾಗಮವನ್ನು ಹೊಂದೋಣ ಎಂದು ಹೇಳಿ ಶೀಘ್ರವಾಗಿ ತಮಗೆ ಇಷ್ಟವಾದ ಸ್ಥಳಗಳಿಗೆ ಹೊರಟರು.

ತಥೈವಾಮಂತ್ರ್ಯ ಗಾಂಗೇಯಂ ಕೇಶವಸ್ತೇ ಚ ಪಾಂಡವಾಃ।
ಪ್ರದಕ್ಷಿಣಮುಪಾವೃತ್ಯ ರಥಾನಾರುರುಹುಃ ಶುಭಾನ್ ॥೩೦॥

ಹಾಗೆಯೇ ಕೇಶವನು ಮತ್ತು ಪಾಂಡವರು ಭೀಷ್ಮರ ಅನುಮತಿಯನ್ನು ಪಡೆದು ಅವರಿಗೆ ಪ್ರದಕ್ಷಿಣೆಯನ್ನು ಮಾಡಿ ತಮ್ಮ ಶುಭವಾದ ರಥಗಳನ್ನು ಏರಿದರು.

ತತೋ ರಥೈಃ ಕಾಂಚನದಂತಕೂಬರೈಃ
ಮಹೀಧರಾಭೈಃ ಸಮದೈಶ್ಚ ದಂತಿಭಿಃ।
ಹಯೈಃ ಸುಪರ್ಣೈರಿವ ಚಾಶುಗಾಮಿಭಿಃ
ಪದಾತಿಭಿಶ್ಚಾತ್ತಶರಾಸನಾದಿಭಿಃ ॥೩೧॥

ಯಯೌ ರಥಾನಾಂ ಪುರತೋ ಹಿ ಸಾ ಚಮೂಃ
ತಥೈವ ಪಶ್ಚಾದತಿಮಾತ್ರಸಾರಿಣೀ।
ಪುರಶ್ಚ ಪಶ್ಚಾಚ್ಚ ಯಥಾ ಮಹಾನದೀ
ಅಥರ್ಕ್ಷವಂತಂ ಗಿರಿಮೇತಿ ನರ್ಮದಾ ॥೩೨॥

ಅನಂತರ ಸುವರ್ಣ ಮತ್ತು ಗಜದಂತಗಳಿಂದ ಅಲಂಕೃತವಾದ ರಥಗಳಿಂದಲೂ, ಪರ್ವತಪ್ರಾಯವಾದ ಮದಿಸಿದ ಗಜಗಳಿಂದಲೂ, ಗರುಡನಂತೆ ವೇಗಶಾಲಿಗಳಾದ ಹಯಗಳಿಂದಲೂ, ಧನುರ್ಧಾರಿಗಳಾದ ಪದಾತಿಗಳಿಂದಲೂ ಕೂಡಿದ ಆ ಸೈನ್ಯವು ನರ್ಮದಾ ನದಿಯು ಋಕ್ಷವಂತಪರ್ವತ(ವಿಂಧ್ಯಾಚಲ)ದ ಹಿಂದೆಯೂ ಮತ್ತು ಮುಂದೆಯೂ ಹರಿದಂತೆ ರಥಗಳ ಮುಂದೆಯೂ ಮತ್ತು ಹಿಂದೆಯೂ ಚಲಿಸಿತು.

ತತಃ ಪುರಸ್ತಾದ್ ಭಗವಾನ್ ನಿಶಾಕರಃ
ಸಮುತ್ಥಿತಸ್ತಾಮಭಿಹರ್ಷಯಂಶ್ಚಮೂಮ್।

ದಿವಾಕರಾಪೀತರಸಾಸ್ತಥೌಷಧೀಃ
ಪುನಃ ಸ್ವಕೇನೈವ ಗುಣೇನ ಯೋಜಯನ್ ॥೩೩॥

ಅನಂತರ ಅವರ ಮುಂಭಾಗದಲ್ಲಿ ಪೂಜ್ಯನಾದ ಚಂದ್ರನು ಆ ಸೈನ್ಯವನ್ನು ಸಂತೋಷವನ್ನುಂಟು ಮಾಡುತ್ತಾ ಸೂರ್ಯನು ಹೀರಿದ್ದ ಔಷಧಿಗಳ ರಸವನ್ನು ತನ್ನ ಗುಣಗಳಿಂದ ಪುನಃ ಅವುಗಳಿಗೆ ಕೊಡುತ್ತಾ ಉದಯಿಸಿದನು.

ತತಃ ಪುರಂ ಸುರಪುರಸನ್ನಿಭದ್ಯುತಿ
ಪ್ರವಿಶ್ಯ ತೇ ಯದುವೃಷಪಾಂಡವಾಸ್ತದಾ।
ಯಥೋಚಿತಾನ್ ಭವನವರಾನ್ ಸಮಾವಿಶನ್
ಶ್ರಮಾನ್ವಿತಾ ಮೃಗಪತಯೋ ಗುಹಾ ಇವ ॥೩೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಿಪಂಚಾಶೋಽಧ್ಯಾಯಃ ॥೫೨॥

ಅನಂತರ ದೇವಲೋಕಕ್ಕೆ ಸಮಾನವಾದ ಕಾಂತಿಯುಳ್ಳ ಪಟ್ಟಣವನ್ನು ಪ್ರವೇಶಿಸಿ ಆ ಯದುಶ್ರೇಷ್ಠನು ಮತ್ತು ಪಾಂಡವರು ದಣಿದ ಸಿಂಹಗಳು ಗುಹೆಯನ್ನು ಪ್ರವೇಶಿಸುವಂತೆ ತಮಗೆ ಉಚಿತವಾದ ಶ್ರೇಷ್ಠವಾದ ಭವನಗಳನ್ನು ಪ್ರವೇಶಿಸಿದರು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೫೨ನೆಯ ಅಧ್ಯಾಯವು ಮುಗಿಯಿತು.

—೦—

೫೩. ಐವತ್ತಮೂರನೆಯ ಅಧ್ಯಾಯ

ಮರುದಿನ ಪ್ರಾತಃಕಾಲದಲ್ಲಿ ಕೃಷ್ಣಯುಧಿಷ್ಠಿರಾದಿಗಳಿಂದ ಭೀಷ್ಮಸಮೀಪಗಮನ

ವೈಶಂಪಾಯನಃ

ತತಃ ಪ್ರವಿಶ್ಯ ಭವನಂ ಪ್ರಸುಪ್ತೋ ಮಧುಸೂದನಃ।
ಯಾಮಮಾತ್ರಾವಶೇಷಾಯಾಂ ಯಾಮಿನ್ಯಾಂ ಪ್ರತ್ಯಬುದ್ಧ್ಯತ ॥೧॥

ವೈಶಂಪಾಯನರು – ಅನಂತರ ತನ್ನ ಭವನವನ್ನು ಪ್ರವೇಶಿಸಿ, ನಿದ್ರಿಸಿದ ಮಧು-

ಸೂದನನು ರಾತ್ರಿಯಲ್ಲಿ ಇನ್ನೂ ಒಂದು ಯಾಮದ ಕಾಲ ಉಳಿದಿರುವಾಗ ಎಚ್ಚರ-ಗೊಂಡನು.

ಸ ಧ್ಯಾನಪಥಮಾಶ್ರಿತ್ಯ ಸರ್ವಜ್ಞಾನಾನಿ ಮಾಧವಃ।
ಅವಲೋಕ್ಯ ತತಃ ಪಶ್ಚಾದ್ ದಧ್ಯೌ ಬ್ರಹ್ಮ ಸನಾತನಮ್ ॥೨॥

ಆ ಮಾಧವನು ಧ್ಯಾನಮಾರ್ಗವನ್ನು ಆಶ್ರಯಿಸಿ ಎಲ್ಲ ವಿಷಯಗಳನ್ನೂ ಅವಲೋಕಿಸಿ ಅನಂತರ ಸನಾತನನಾದ ಬ್ರಹ್ಮನಾದ ತನ್ನನ್ನೇ ಧ್ಯಾನ ಮಾಡಿದನು.

ತತಃ ಶ್ರುತಿಪುರಾಣಜ್ಞಾಃ ಶಿಕ್ಷಿತಾ ರಕ್ತಕಂಠಿನಃ।
ಅಸ್ತುವನ್ ವಿಶ್ವಕರ್ಮಾಣಂ ವಾಸುದೇವಂ ಪ್ರಜಾಪತಿಮ್ ॥೩॥

ಅನಂತರ ಶ್ರುತಿಪುರಾಣಗಳನ್ನು ತಿಳಿದ, ಸುಶಿಕ್ಷಿತರಾದ, ಅನುರಾಗಪೂರ್ಣ-ವಾದ ಕಂಠದಿಂದ ಕೂಡಿದ ಬ್ರಾಹ್ಮಣರು ವಿಶ್ವಕರ್ಮನೂ ಪ್ರಜಾಪತಿಯೂ ಆದ ವಾಸುದೇವನನ್ನು ಸ್ತೋತ್ರ ಮಾಡಿದರು.

ಪಠಂತಿ ಪಾಣಿಕಾ ಗಾಥಾಸ್ತಥಾ ಗಾಯಂತಿ ಗಾಯನಾಃ।
ಶಂಖಾನಕಮೃದಂಗಾಶ್ಚ ಪ್ರವಾದ್ಯಂತ ಸಹಸ್ರಶಃ ॥೪॥

ಕೈಗಳಲ್ಲಿ ತಾಳಗಳನ್ನು ಹಾಕುತ್ತಾ ಹಾಡುವವರು ಹಾಡಿದರು. ಗಾಯಕರು ಹಾಡಿದರು. ಶಂಖ, ಆನಕ ಮತ್ತು ಮೃದಂಗಗಳು ಸಹಸ್ರಸಂಖ್ಯೆಯಲ್ಲಿ ಮೊಳ-ಗಿದವು.

ವೀಣಾಪಣವವೇಣೂನಾಂ ಸ್ವನಶ್ಚಾತಿಮನೋರಮಃ।
ಪ್ರಹಾಸ ಇವ ವಿಸ್ತೀರ್ಣಃ ಶುಶ್ರುವೇ ತಸ್ಯ ವೇಶ್ಮನಃ ॥೫॥

ಅತ್ಯಂತಮನೋಹರವಾದ ವೀಣಾಪಣವವೇಣುಗಳಿಂದ ಉಂಟಾದ ವಿಸ್ತೀರ್ಣವಾದ ನಾದವು ಆ ಗೃಹದ ಅಟ್ಟಹಾಸದಂತೆ ಕೇಳಿಬಂದಿತು.

ತಥಾ ಯುಧಿಷ್ಠಿರಸ್ಯಾಪಿ ರಾಜ್ಞೋ ಮಂಗಲಸಂಹಿತಾಃ।
ಉಚ್ಚೈರುರ್ಮಧುರಾ ವಾಚೋ ಗೀತವಾದಿತ್ರಮಿಶ್ರಿತಾಃ ॥೬॥

ಹಾಗೆಯೇ ರಾಜನಾದ ಯುಧಿಷ್ಠಿರನ ಮನೆಯಲ್ಲಿಯೂ ಮಂಗಳಸಂಯುಕ್ತವಾದ ಗೀತವಾದಿತ್ರಮಿಶ್ರಿತವಾದ ಮಧುರವಾದ ಮಾತುಗಳು ಕೇಳಿ ಬಂದವು.

ತತ ಉತ್ಥಾಯ ದಾಶಾರ್ಹಃ ಸ್ನಾತಃ ಪ್ರಾಂಜಲಿರಚ್ಯುತಃ।
ಜಪ್ತ್ವಾ ಗುಹ್ಯಂ ಮಹಾಬಾಹುರಗ್ನೀನಾಶ್ರಿತ್ಯ ತಸ್ಥಿವಾನ್ ॥೭॥

ಅನಂತರ ಮಹಾಬಾಹುವೂ, ದಾಶಾರ್ಹನೂ ಆದ ಅಚ್ಯುತನು ಎದ್ದು ಸ್ನಾನವನ್ನು ಮಾಡಿ ಕೈಗಳನ್ನು ಮುಗಿದು ರಹಸ್ಯ ಮಂತ್ರಗಳನ್ನು ಜಪ ಮಾಡಿ ಅಗ್ನಿಕಾರ್ಯವನ್ನು ಮಾಡಿ ನಿಂತನು.

ತತಃ ಸಹಸ್ರಂ ವಿಪ್ರಾಣಾಂ ಚತುರ್ವೇದವಿದಾಂ ತಥಾ।
ಗವಾಂ ಸಹಸ್ರೇಣೈಕೈಕಂ ವಾಚಯಾಮಾಸ ಮಾಧವಃ ॥೮॥

ಅನಂತರ ಚತುರ್ವೇದಗಳನ್ನು ಬಲ್ಲ ಸಹಸ್ರವಿಪ್ರರಿಗೆ ಒಬ್ಬೊಬ್ಬರಿಗೂ ಸಹಸ್ರ ಗೋವುಗಳನ್ನು ನೀಡಿ ಮಾಧವನು ಸಂತೋಷಪಡಿಸಿದನು.

ಮಂಗಲಾಲಂಭನಂ ಕೃತ್ವಾ ಆತ್ಮಾನಮವಲೋಕ್ಯ ಚ।
ಆದರ್ಶೇ ವಿಮಲೇ ಕೃಷ್ಣಸ್ತತಃ ಸಾತ್ಯಕಿಮಬ್ರವೀತ್ ॥೯॥

ಗಚ್ಛ ಶೈನೇಯ ಜಾನೀಹಿ ಗತ್ವಾ ರಾಜನಿವೇಶನಮ್।
ಅಪಿ ಸಜ್ಜೋ ಮಹಾತೇಜಾ ಭೀಷ್ಮಂ ದ್ರಷ್ಟುಂ ಯುಧಿಷ್ಠಿರಃ ॥೧೦॥

ಕೃಷ್ಣನು ಮಂಗಳಪದಾರ್ಥಗಳನ್ನು ಸ್ಪರ್ಶಮಾಡಿ, ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡು ಅನಂತರ ಸಾತ್ಯಕಿಯನ್ನು ಕುರಿತು 'ಎಲೈ ಸಾತ್ಯಕಿಯೇ! ರಾಜಮಂದಿರಕ್ಕೆ ಹೋಗಿ ಮಹಾತೇಜಸ್ವಿಯಾದ ಯುಧಿಷ್ಠಿರನು ಭೀಷ್ಮರನ್ನು ನೋಡಲು ಸಿದ್ಧನಾಗಿದ್ದಾನೆಯೇ ಎಂದು ತಿಳಿ' ಎಂದು ಹೇಳಿದನು.

ತತಃ ಕೃಷ್ಣಸ್ಯ ವಚನಾತ್ ಸಾತ್ಯಕಿಸ್ತ್ವರಿತೋ ಯಯೌ।
ಉಪಗಮ್ಯ ಚ ರಾಜಾನಂ ಯುಧಿಷ್ಠಿರಮುವಾಚ ಹ ॥೧೧॥

ಯುಕ್ತೋ ರಥವರೋ ರಾಜನ್ ವಾಸುದೇವಸ್ಯ ಧೀಮತಃ।
ಸಮೀಪಮಾಪಗೇಯಸ್ಯ ಪ್ರಯಾಸ್ಯತಿ ಜನಾರ್ದನಃ ॥೧೨॥

ಭವತ್ಪ್ರತೀಕ್ಷಃ ಕೃಷ್ಣೋಽಸೌ ಧರ್ಮರಾಜ ಮಹಾದ್ಯುತೇ।
ಯದತ್ರಾನಂತರಂ ಕೃತ್ಯಂ ತದ್ ಭವಾನ್ ಕರ್ತುಮರ್ಹತಿ ॥೧೩॥

ಕೃಷ್ಣನ ವಚನದಂತೆ ಸಾತ್ಯಕಿಯು ಶೀಘ್ರವಾಗಿ ಹೋಗಿ ರಾಜನಾದ ಯುಧಿಷ್ಠಿರನ ಗೃಹವನ್ನು ತಲುಪಿ ಅವನನ್ನು ಕುರಿತು 'ರಾಜನೇ! ಮೇಧಾವಿಯಾದ ವಾಸುದೇವನ ಶ್ರೇಷ್ಠವಾದ ರಥವು ಸಿದ್ಧವಾಗಿದೆ. ಜನಾರ್ದನನು ಭೀಷ್ಮರ ಸಮೀಪಕ್ಕೆ ಹೊರಡುವನು. ಎಲೈ ಮಹಾದ್ಯುತಿಯಾದ ಧರ್ಮರಾಜನೇ! ಈ ಕೃಷ್ಣನು ನಿನ್ನನ್ನು ನಿರೀಕ್ಷಿಸುತ್ತಿದ್ದಾನೆ. ಈಗ ಮುಂದೆ ಮಾಡಬೇಕಾದ ಕಾರ್ಯವನ್ನು ನೀನು ಮಾಡುವುದು ಉಚಿತವಾದುದು' ಎಂದು ಹೇಳಿದನು.

ಯುಧಿಷ್ಠಿರಃ

ಯುಜ್ಯತಾಂ ಮೇ ರಥವರಃ ಫಲ್ಗುನಾಪ್ರತಿಮದ್ಯುತೇ।
ನ ಸೈನಿಕೈಶ್ಚ ಯಾತವ್ಯಂ ಯಾಸ್ಯಾಮೋ ವಯಮೇವ ಹಿ ॥೧೪॥

ಯುಧಿಷ್ಠಿರ – ಎಲೈ ಅಮಿತದ್ಯುತಿಯಾದ ಫಲ್ಗುನನೇ! ನನ್ನ ಶ್ರೇಷ್ಠವಾದ ರಥವು ಹೂಡಲ್ಪಡಲಿ. ಅಲ್ಲಿಗೆ ಸೈನಿಕರು ಹೋಗಬಾರದು. ನಾವೇ ಹೋಗುವೆವು.

ನ ಚ ಪೀಡಯಿತವ್ಯೋ ಮೇ ಭೀಷ್ಮೋ ಧರ್ಮಭೃತಾಂವರಃ।
ಅತಃ ಪುರಃಸರಾಶ್ಚಾಪಿ ನಿವರ್ತಂತು ಧನಂಜಯ ॥೧೫॥

ಎಲೈ ಧನಂಜಯನೇ! ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಭೀಷ್ಮರು ಪೀಡಿಸಲ್ಪಡಬಾರದು. ಆದ್ದರಿಂದ ನಮ್ಮ ಮುಂದೆ ಹೋಗುವ ಸೇವಕರೂ ಸಹ ಹಿಂದಿರುಗಲಿ.

ಅದ್ಯ ಪ್ರಭೃತಿ ಗಾಂಗೇಯಃ ಪರಂ ಗುಹ್ಯಂ ಪ್ರವಕ್ಷ್ಯತಿ।
ತತೋ ನೇಚ್ಛಾಮಿ ಕೌಂತೇಯ ಪೃಥಗ್ ಜನಸಮಾಗಮಮ್ ॥೧೬॥

ಈ ದಿನದಿಂದ ಪ್ರಾರಂಭಿಸಿ ಭೀಷ್ಮರು ಪರಮರಹಸ್ಯವಾದ ವಿಷಯಗಳನ್ನು ಹೇಳುವರು. ಎಲೈ ಕೌಂತೇಯನೇ! ಆದ್ದರಿಂದ ಸಾಧಾರಣಜನರ ಸಮಾಗಮವನ್ನು ನಾನು ಅಲ್ಲಿ ಬಯಸುವುದಿಲ್ಲ.

ವೈಶಂಪಾಯನಃ

ತದ್ ವಾಕ್ಯಮಾಕರ್ಣ್ಯ ತಥಾ ಕುಂತೀಪುತ್ರೋ ಧನಂಜಯಃ।
ಯುಕ್ತಂ ರಥವರಂ ತಸ್ಮಾ ಆಚಚಕ್ಷೇ ನರರ್ಷಭ ॥೧೭॥

ವೈಶಂಪಾಯನರು – ಕುಂತೀಪುತ್ರನಾದ ಧನಂಜಯನು ಆ ರೀತಿಯಲ್ಲಿ ಆ ಮಾತನ್ನು ಕೇಳಿ 'ಎಲೈ ನರಶ್ರೇಷ್ಠನೇ! ನಿನ್ನ ಶ್ರೇಷ್ಠವಾದ ರಥವು ಸಿದ್ಧವಾಗಿದೆ' ಎಂದು ಹೇಳಿದನು.

ತತೋ ಯುಧಿಷ್ಠಿರೋ ರಾಜಾ ಯಮೌ ಭೀಮಾರ್ಜುನಾವಪಿ।
ಭೂತಾನೀವ ಸಮಸ್ತಾನಿ ಯಯುಃ ಕೃಷ್ಣನಿವೇಶನಮ್ ॥೧೮॥

ಅನಂತರ ರಾಜನಾದ ಯುಧಿಷ್ಠಿರನೂ, ನಕುಲ ಸಹದೇವರೂ ಮತ್ತು ಭೀಮಾರ್ಜುನರೂ ಸಮಸ್ತವಾದ ಪಂಚಭೂತಗಳಂತೆ ಕೃಷ್ಣನ ಗೃಹಕ್ಕೆ ಹೋದರು.

ಆಗಚ್ಛತ್ಸ್ವಥ ಕೃಷ್ಣೋಽಪಿ ಪಾಂಡವೇಷು ಮಹಾತ್ಮಸು।
ಶೈನೇಯಸಹಿತೋ ಧೀಮಾನ್ ರಥಮೇವಾನ್ವಪದ್ಯತ ॥೧೯॥

ಮಹಾತ್ಮರಾದ ಪಾಂಡವರು ಬರುತ್ತಿರುವಂತೆಯೇ ಮೇಧಾವಿಯಾದ ಕೃಷ್ಣನು ಶೈನೇಯಸಹಿತನಾಗಿ ತನ್ನ ರಥವನ್ನು ಏರಿದನು.

ರಥಸ್ಥಾಃ ಸಂವಿದಂ ಕೃತ್ವಾ ಸುಖಾಂ ಪೃಷ್ಟ್ವಾ ಚ ಶರ್ವರೀಮ್।
ಮೇಘಘೋಷೈಃ ರಥವರೈಃ ಪ್ರಯಯುಸ್ತೇ ಮಹಾರಥಾಃ ॥೨೦॥

ರಥದಲ್ಲಿ ಕುಳಿತ ಆ ಮಹಾರಥರು ಪರಸ್ಪರ ಸಂಭಾಷಣೆಯನ್ನು ಮಾಡಿ ರಾತ್ರಿಯು ಕಳೆದ ವಿಷಯದಲ್ಲಿ ಕುಶಲಪ್ರಶ್ನೆಯನ್ನು ಮಾಡಿ ಮೇಘಗರ್ಜನೆಯ ನಾದವನ್ನು ಹೊಂದಿದ್ದ ಶ್ರೇಷ್ಠವಾದ ರಥಗಳಲ್ಲಿ ಅಲ್ಲಿಂದ ಹೊರಟರು.

ಯುಕ್ತೋ ರಥವರೋ ರಾಜನ್ ವಾಸುದೇವಸ್ಯ ಧೀಮತಃ।
ಸಮೀಪಮಾಪಗೇಯಸ್ಯ ಪ್ರಯಾಸ್ಯತಿ ಜನಾರ್ದನಃ ॥೧೨॥

ಭವತ್ತ್ವೀಕ್ಷಃ ಕೃಷ್ಣೋಽಸೌ ಧರ್ಮರಾಜ ಮಹಾದ್ಯುತೇ।
ಯದತ್ರಾನಂತರಂ ಕೃತ್ಯಂ ತದ್ ಭವಾನ್ ಕರ್ತುಮರ್ಹತಿ ॥೧೩॥

ಕೃಷ್ಣನ ವಚನದಂತೆ ಸಾತ್ಯಕಿಯು ಶೀಘ್ರವಾಗಿ ಹೋಗಿ ರಾಜನಾದ ಯುಧಿಷ್ಠಿರನ ಗೃಹವನ್ನು ತಲುಪಿ ಅವನನ್ನು ಕುರಿತು 'ರಾಜನೇ! ಮೇಧಾವಿಯಾದ ವಾಸುದೇವನ ಶ್ರೇಷ್ಠವಾದ ರಥವು ಸಿದ್ಧವಾಗಿದೆ. ಜನಾರ್ದನನು ಭೀಷ್ಮರ ಸಮೀಪಕ್ಕೆ ಹೊರಡುವನು. ಎಲೈ ಮಹಾದ್ಯುತಿಯಾದ ಧರ್ಮರಾಜನೇ! ಈ ಕೃಷ್ಣನು ನಿನ್ನನ್ನು ನಿರೀಕ್ಷಿಸುತ್ತಿದ್ದಾನೆ. ಈಗ ಮುಂದೆ ಮಾಡಬೇಕಾದ ಕಾರ್ಯವನ್ನು ನೀನು ಮಾಡುವುದು ಉಚಿತವಾದುದು' ಎಂದು ಹೇಳಿದನು.

ಯುಧಿಷ್ಠಿರಃ

ಯುಜ್ಯತಾಂ ಮೇ ರಥವರಃ ಫಲ್ಗುನಾಪ್ರತಿಮದ್ಯುತೇ।
ನ ಸೈನಿಕೈಶ್ಚ ಯಾತವ್ಯಂ ಯಾಸ್ಯಾಮೋ ವಯಮೇವ ಹಿ ॥೧೪॥

ಯುಧಿಷ್ಠಿರ – ಎಲೈ ಅಮಿತದ್ಯುತಿಯಾದ ಫಲ್ಗುನನೇ! ನನ್ನ ಶ್ರೇಷ್ಠವಾದ ರಥವು ಹೂಡಲ್ಪಡಲಿ. ಅಲ್ಲಿಗೆ ಸೈನಿಕರು ಹೋಗಬಾರದು. ನಾವೇ ಹೋಗುವೆವು.

ನ ಚ ಪೀಡಯಿತವ್ಯೋ ಮೇ ಭೀಷ್ಮೋ ಧರ್ಮಭೃತಾಂವರಃ।
ಅತಃ ಪುರಃಸರಾಶ್ಚಾಪಿ ನಿವರ್ತಂತು ಧನಂಜಯ ॥೧೫॥

ಎಲೈ ಧನಂಜಯನೇ! ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಭೀಷ್ಮರು ಪೀಡಿಸಲ್ಪಡಬಾರದು. ಆದ್ದರಿಂದ ನಮ್ಮ ಮುಂದೆ ಹೋಗುವ ಸೇವಕರೂ ಸಹ ಹಿಂದಿರುಗಲಿ.

ಅದ್ಯ ಪ್ರಭೃತಿ ಗಾಂಗೇಯಃ ಪರಂ ಗುಹ್ಯಂ ಪ್ರವಕ್ಷ್ಯತಿ।
ತತೋ ನೇಚ್ಛಾಮಿ ಕೌಂತೇಯ ಪೃಥಗ್ ಜನಸಮಾಗಮಮ್ ॥೧೬॥

ಈ ದಿನದಿಂದ ಪ್ರಾರಂಭಿಸಿ ಭೀಷ್ಮರು ಪರಮರಹಸ್ಯವಾದ ವಿಷಯಗಳನ್ನು ಹೇಳುವರು. ಎಲೈ ಕೌಂತೇಯನೇ! ಆದ್ದರಿಂದ ಸಾಧಾರಣಜನರ ಸಮಾಗಮವನ್ನು ನಾನು ಅಲ್ಲಿ ಬಯಸುವುದಿಲ್ಲ.

ವೈಶಂಪಾಯನಃ

ತದ್ ವಾಕ್ಯಮಾಕರ್ಣ್ಯ ತಥಾ ಕುಂತೀಪುತ್ರೋ ಧನಂಜಯಃ।
ಯುಕ್ತಂ ರಥವರಂ ತಸ್ಮಾ ಆಚಚಕ್ಷೇ ನರರ್ಷಭ ॥೧೭॥

ವೈಶಂಪಾಯನರು – ಕುಂತೀಪುತ್ರನಾದ ಧನಂಜಯನು ಆ ರೀತಿಯಲ್ಲಿ ಆ ಮಾತನ್ನು ಕೇಳಿ 'ಎಲೈ ನರಶ್ರೇಷ್ಠನೇ! ನಿನ್ನ ಶ್ರೇಷ್ಠವಾದ ರಥವು ಸಿದ್ಧವಾಗಿದೆ' ಎಂದು ಹೇಳಿದನು.

ತತೋ ಯುಧಿಷ್ಠಿರೋ ರಾಜಾ ಯಮೌ ಭೀಮಾರ್ಜುನಾವಪಿ।
ಭೂತಾನೀವ ಸಮಸ್ತಾನಿ ಯಯುಃ ಕೃಷ್ಣನಿವೇಶನಮ್ ॥೧೮॥

ಅನಂತರ ರಾಜನಾದ ಯುಧಿಷ್ಠಿರನೂ, ನಕುಲ ಸಹದೇವರೂ ಮತ್ತು ಭೀಮಾರ್ಜುನರೂ ಸಮಸ್ತವಾದ ಪಂಚಭೂತಗಳಂತೆ ಕೃಷ್ಣನ ಗೃಹಕ್ಕೆ ಹೋದರು.

ಆಗಚ್ಛತ್ಸ್ವಥ ಕೃಷ್ಣೋಽಪಿ ಪಾಂಡವೇಷು ಮಹಾತ್ಮಸು।
ಶೈನೇಯಸಹಿತೋ ಧೀಮಾನ್ ರಥಮೇವಾನ್ವಪದ್ಯತ ॥೧೯॥

ಮಹಾತ್ಮರಾದ ಪಾಂಡವರು ಬರುತ್ತಿರುವಂತೆಯೇ ಮೇಧಾವಿಯಾದ ಕೃಷ್ಣನು ಶೈನೇಯಸಹಿತನಾಗಿ ತನ್ನ ರಥವನ್ನು ಏರಿದನು.

ರಥಸ್ಥಾಃ ಸಂವಿದಂ ಕೃತ್ವಾ ಸುಖಾಂ ಪೃಷ್ಟ್ವಾ ಚ ಶರ್ವರೀಮ್।
ಮೇಘಘೋಷೈಃ ರಥವರೈಃ ಪ್ರಯಯುಸ್ತೇ ಮಹಾರಥಾಃ ॥೨೦॥

ರಥದಲ್ಲಿ ಕುಳಿತ ಆ ಮಹಾರಥರು ಪರಸ್ಪರ ಸಂಭಾಷಣೆಯನ್ನು ಮಾಡಿ ರಾತ್ರಿಯು ಕಳೆದ ವಿಷಯದಲ್ಲಿ ಕುಶಲಪ್ರಶ್ನೆಯನ್ನು ಮಾಡಿ ಮೇಘಗರ್ಜನೆಯ ನಾದವನ್ನು ಹೊಂದಿದ್ದ ಶ್ರೇಷ್ಠವಾದ ರಥಗಳಲ್ಲಿ ಅಲ್ಲಿಂದ ಹೊರಟರು.

ಮೇಘಪುಷ್ಪಂ ಬಲಾಹಂ ಚ ಸೈನ್ಯಂ ಸುಗ್ರೀವಮೇವ ಚ।
ದಾರುಕಶ್ಚೋದಯಾಮಾಸ ವಾಸುದೇವಸ್ಯ ವಾಜಿನಃ ॥೨೧॥

ವಾಸುದೇವನ ಸಾರಥಿಯಾದ ದಾರುಕನು ಮೇಘಪುಷ್ಪ, ಬಲಾಹಕ, ಸೈನ್ಯ, ಸುಗ್ರೀವ ಅಶ್ವಗಳನ್ನು ಪ್ರಚೋದಿಸಿದನು.

ತೇ ಹಯಾ ವಾಸುದೇವಸ್ಯ ದಾರುಕೇಣ ಪ್ರಚೋದಿತಾಃ।
ಗಾಂ ಖುರಾಗ್ರೈಸ್ತಥಾ ರಾಜನ್ ಲಿಖಂತಃ ಪ್ರಯಯುಸ್ತದಾ ॥೨೨॥

ಎಲೈ ರಾಜನೇ! ದಾರುಕನಿಂದ ಪ್ರಚೋದಿಸಲ್ಪಟ್ಟ ಕೃಷ್ಣನ ಆ ಅಶ್ವಗಳು ತಮ್ಮ ಗೊರಸುಗಳ ತುದಿಯಿಂದ ಭೂಮಿಯ ಮೇಲೆ ಬರೆಯುತ್ತಾ ಹೊರಟವು.

ತೇ ಗ್ರಸಂತ ಇವಾಕಾಶಂ ವೇಗವಂತೋ ಮಹಾಬಲಾಃ।
ಕ್ಷೇತ್ರಂ ಧರ್ಮಸ್ಯ ಕೃತ್ಸ್ನಸ್ಯ ಕುರುಕ್ಷೇತ್ರಮವಾತರನ್ ॥೨೩॥

ಮಹಾ ಬಲಿಷ್ಠವಾದ ವೇಗಶಾಲಿಗಳಾದ ಆ ಅಶ್ವಗಳು ಆಕಾಶವನ್ನೇ ನುಂಗುವಂತೆ ಹೊರಟು ಸಮಗ್ರ ಧರ್ಮದ ಕ್ಷೇತ್ರವಾದ ಕುರುಕ್ಷೇತ್ರವನ್ನು ತಲುಪಿದವು.

ತತೋ ಯಯುರ್ಯತ್ರ ಭೀಷ್ಮಃ ಶರತಲ್ಪಗತಃ ಪ್ರಭುಃ।
ಆಸ್ತೇ ಬ್ರಹ್ಮರ್ಷಿಭಿಃ ಸಾರ್ಧಂ ಬ್ರಹ್ಮಾ ದೇವಗಣೈರ್ಯಥಾ ॥೨೪॥

ಅನಂತರ ಪ್ರಭುಗಳಾದ ಭೀಷ್ಮರು ಶರತಲ್ಪಗತರಾಗಿ ದೇವಗಣಗಳಿಂದ ಬ್ರಹ್ಮದೇವರು ಸುತ್ತುವರೆಯಲ್ಪಟ್ಟಂತೆ ಬ್ರಹ್ಮರ್ಷಿಗಳಿಂದ ಸುತ್ತುವರೆಯಲ್ಪಟ್ಟ ಸ್ಥಳಕ್ಕೆ ಹೋದರು.

ತತೋಽವತೀರ್ಯ ಗೋವಿಂದೋ ರಥಾತ್ ಸ ಚ ಯುಧಿಷ್ಠಿರಃ।
ಭೀಮೋ ಗಾಂಡೀವಧನ್ವಾ ಚ ಯಮೌ ಸಾತ್ಯಕಿರೇವ ಚ।
ಋಷೀನಭ್ಯರ್ಚಯಾಮಾಸುಃ ಕರಾನುದ್ಯಮ್ಯ ದಕ್ಷಿಣಾನ್ ॥೨೫॥

ಸ ತೈಃ ಪರಿವೃತೋ ರಾಜಾ ನಕ್ಷತ್ರೈರಿವ ಚಂದ್ರಮಾಃ।
ಅಭ್ಯಾಜಗಾಮ ಗಾಂಗೇಯಂ ಬ್ರಹ್ಮಾಣಮಿವ ವಾಸವಃ ॥೨೬॥

ಅನಂತರ ಗೋವಿಂದನು ಯುಧಿಷ್ಠಿರನು, ಭೀಮ, ಅರ್ಜುನರು, ನಕುಲ ಸಹದೇವರು, ಸಾತ್ಯಕಿಯು ತಮ್ಮ ರಥಗಳಿಂದ ಇಳಿದು ತಮ್ಮ ಬಲಗೈಯ್ಯನ್ನು ಎತ್ತಿ ಋಷಿಗಳಿಗೆ ಪೂಜೆಯನ್ನು ಸಲ್ಲಿಸಿದರು. ನಕ್ಷತ್ರಗಳಿಂದ ಸುತ್ತುವರೆಯಲ್ಪಟ್ಟ ಚಂದ್ರನಂತೆ ಅವರಿಂದ ಪರಿವೃತನಾದ ರಾಜನು ಬ್ರಹ್ಮದೇವರ ಬಳಿಗೆ ಇಂದ್ರನು ಬಂದಂತೆ ಭೀಷ್ಮರ ಬಳಿಗೆ ಬಂದನು.

ಶರತಲ್ಪೇ ಶಯಾನಂ ತಮಾದಿತ್ಯಂ ಪತಿತಂ ಯಥಾ।
ದದರ್ಶ ಸ ಮಹಾಬಾಹುರ್ಭಯಾದಾಗತಸಾಧ್ವಸಃ ॥೨೭॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಿಪಂಚಾಶೋऽಧ್ಯಾಯಃ ॥೫೩॥

ಮಹಾಬಾಹುವಾದ ಅವನು ಭೂಮಿಯ ಮೇಲೆ ಬಿದ್ದ ಸೂರ್ಯನಂತೆ ಶರತಲ್ಪದಲ್ಲಿ ಮಲಗಿದ್ದ ಭೀಷ್ಮರನ್ನು ಮನಸ್ಸಿನಲ್ಲಿ ಭಯಗೊಂಡು ನೋಡಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೩ನೆಯ ಅಧ್ಯಾಯ ಮುಗಿಯಿತು

—0—

೫೪. ಐವತ್ತನಾಲ್ಕನೆಯ ಅಧ್ಯಾಯ

ಕೃಷ್ಣನಿಂದ ಧರ್ಮವನ್ನು ಉಪದೇಶಮಾಡುವಂತೆ ಭೀಷ್ಮರಿಗೆ ಪ್ರೇರಣೆ

ಜನಮೇಜಯಃ

ಧರ್ಮಾತ್ಮನಿ ಮಹಾಸತ್ತ್ವೇ ಸತ್ಯಸಂಧೇ ಜಿತಾತ್ಮನಿ।
ದೇವವ್ರತೇ ಮಹಾಭಾಗೇ ಶರತಲ್ಪಗತೇऽಚ್ಯುತೇ ॥೧॥

ಶಯಾನೇ ವೀರಶಯನೇ ಭೀಷ್ಮೇ ಶಂತನುನಂದನೇ।
ಗಾಂಗೇಯೇ ಪುರುಷವ್ಯಾಘ್ರೇ ಪಾಂಡವೈಃ ಪರ್ಯುಪಸ್ಥಿತೇ ॥೨॥

ಕಾಃ ಕಥಾಃ ಸಮವರ್ತಂತ ತಸ್ಮಿನ್ ವೀರಸಮಾಗಮೇ।
ಗತೇಷು ಸರ್ವಸೈನ್ಯೇಷು ತನ್ಮೇ ಶಂಸ ಮಹಾಮುನೇ ॥೩॥

ಜನಮೇಜಯ – ಧರ್ಮಿಷ್ಠರೂ, ಸತ್ಯಸಂಧರೂ, ಜಿತಮನಸ್ಕರೂ, ಮಹಾ-ಧೈರ್ಯಶಾಲಿಗಳೂ , ಮಹಾನುಭಾವರೂ ಆದ ತಮ್ಮ ಗುಣಗಳನ್ನು ಕಳೆದುಕೊಳ್ಳದ ದೇವವ್ರತರಾದ, ಶಂತನುಪುತ್ರರಾದ, ಗಂಗಾಪುತ್ರರಾದ ಪುರುಷವ್ಯಾಘ್ರರಾದ ಭೀಷ್ಮರು ವೀರಶಯ್ಯೆಯಿಂದ ಮಲಗಿ ಪಾಂಡವರಿಂದ ಸುತ್ತುವರಿಯಲ್ಪಟ್ಟಿರಲು ಆ ವೀರಸಮಾಗಮದಲ್ಲಿ ಎಲ್ಲ ಸೈನ್ಯಗಳೂ ಹೊರಟು ಹೋದ ಮೇಲೆ ಯಾವ ಕಥೆಗಳು ನಡೆದವು ಎಂಬುದನ್ನು ಎಲೈ ಮಹಾಮುನಿಯೇ! ನನಗೆ ಹೇಳಬೇಕು.

ವೈಶಂಪಾಯನಃ

ಶರತಲ್ಪಗತೇ ಭೀಷ್ಮೇ ಕೌರವಾಣಾಂ ಧುರಂಧರೇ।
ಆಜಗ್ಮುರ್ಋಷಯಃ ಸಿದ್ಧಾ ನಾರದಪ್ರಮುಖಾ ನೃಪ ॥೪॥

ವೈಶಂಪಾಯನರು – ಎಲೈ ರಾಜನೇ! ಕೌರವರ ಧುರಂಧರರಾದ ಭೀಷ್ಮರು ಶರತಲ್ಪದಲ್ಲಿ ಮಲಗಿರಲು ಸಿದ್ಧರು, ನಾರದರೇ ಮೊದಲಾದ ಋಷಿಗಳು ಅಲ್ಲಿಗೆ ಬಂದರು.

ಹತಶಿಷ್ಟಾಶ್ಚ ರಾಜಾನೋ ಯುಧಿಷ್ಠಿರಪುರೋಗಮಾಃ।
ಧೃತರಾಷ್ಟ್ರಶ್ಚ ಕೃಷ್ಣಶ್ಚ ಭೀಮಾರ್ಜುನಯಮಾಸ್ತಥಾ ॥೫॥

ಅಳಿದುಳಿದ ರಾಜರು, ಯುಧಿಷ್ಠಿರ ಮೊದಲಾದವರು, ಧೃತರಾಷ್ಟ್ರ, ಕೃಷ್ಣ, ಭೀಮಾರ್ಜುನ ನಕುಲಸಹದೇವರು ಬಂದರು.

ತೇऽಭಿಗಮ್ಯ ಮಹಾತ್ಮಾನೋ ಭರತಾನಾಂ ಪಿತಾಮಹಮ್ ।
ಅನ್ವಶೋಚಂತ ಗಾಂಗೇಯಮಾದಿತ್ಯಂ ಪತಿತಂ ತಥಾ ॥೬॥

ಮಹಾತ್ಮರಾದ ಅವರು ಭರತರ ಪಿತಾಮಹರಾದ ಭೀಷ್ಮರ ಸಮೀಪಕ್ಕೆ ಬಂದು ಭೂಮಿಯ ಮೇಲೆ ಬಿದ್ದ ಸೂರ್ಯನಂತಿದ್ದ ಅವರನ್ನು ನೋಡಿ ಶೋಕಪಟ್ಟರು.

ಮುಹೂರ್ತಮಿವ ಚ ಧ್ಯಾತ್ವಾ ನಾರದೋ ದೇವದರ್ಶನಃ।
ಉವಾಚ ಪಾಂಡವಾನ್ ಸರ್ವಾನ್ ಹತಶಿಷ್ಟಾಂಶ್ಚ ಪಾರ್ಥಿವಾನ್ ॥೭॥

ದೇವದರ್ಶನರಾದ ನಾರದರು ಒಂದು ಮುಹೂರ್ತಗಳಷ್ಟು ಕಾಲ ಧ್ಯಾನ-ರತರಾಗಿ ಪಾಂಡವರನ್ನೂ, ಅಳಿದುಳಿದ ಎಲ್ಲಾ ರಾಜರನ್ನೂ ಕುರಿತು ಮಾತನಾಡಿದರು.

ಪ್ರಾಪ್ತಕಾಲಂ ಚ ಆಚಕ್ಷೇ ಭೀಷ್ಮೋಽಯಮನುಯುಜ್ಯತಾಮ್ ।
ಅಸ್ತಮೇತಿ ಹಿ ಗಾಂಗೇಯೋ ಭಾನುಮಾನಿವ ಭಾರತ ॥೮॥

ಎಲೈ ಭಾರತನೇ! ಯೋಗ್ಯವಾದ ಕಾಲವು ಸಮೀಪಿಸಿದೆ ಎಂದು ಹೇಳುತ್ತಿದ್ದೇನೆ. ಈ ಭೀಷ್ಮರನ್ನು(ಲ್ಲಿ) ಪ್ರಶ್ನೆಯನ್ನು ಮಾಡು. ಸೂರ್ಯನಂತೆ ಭೀಷ್ಮರು ಅಸ್ತವನ್ನು ಹೊಂದಲಿದ್ದಾರೆ.

ಅಯಂ ಪ್ರಾಣಾನುತ್ಸಿಸೃಕ್ಷುಸ್ತಂ ಸರ್ವೇಽಭ್ಯೇತ್ಯ ಪೃಚ್ಛತ ।
ಕೃತ್ಸ್ನಾನ್ ಹಿ ವಿವಿಧಾನ್ ಧರ್ಮಾಂಶ್ಚಾತುರ್ವರ್ಣ್ಯಸ್ಯ ವೇತ್ಸ್ಯಯಮ್ ॥೯॥

ಇವರು ಪ್ರಾಣಗಳನ್ನು ತೊರೆಯಲು ಬಯಸುತ್ತಿದ್ದಾರೆ. ನೀವೆಲ್ಲರೂ ಅವರ ಬಳಿಗೆ ಹೋಗಿ ಸಮಗ್ರವಾದ ಧರ್ಮಗಳನ್ನು ಪ್ರಶ್ನೆ ಮಾಡಿ ಕೇಳಿ. ಚಾತುರ್ವರ್ಣ್ಯದ ಎಲ್ಲ ಧರ್ಮಗಳನ್ನೂ ಅವರು ತಿಳಿದಿದ್ದಾರೆ.

ಏಷ ವೃದ್ಧಃ ಪುರಾ ಲೋಕಾನ್ ಸಂಪ್ರಾಪ್ನೋತಿ ಸುದುರ್ಲಭಾನ್ ।
ತಂ ಶೀಘ್ರಮನುಯುಜ್ಯಧ್ವಂ ಸಂಶಯಾನ್ ಮನಸಿ ಸ್ಥಿತಾನ್ ॥೧೦॥

ವೃದ್ಧರಾದ ಇವರು ಸುದುರ್ಲಭವಾದ ಪರಲೋಕಗಳನ್ನು ಹೊಂದುವುದಕ್ಕಿಂತ ಮೊದಲೇ ನೀವು ಶೀಘ್ರವಾಗಿ ಅವರ ಬಳಿಯಲ್ಲಿ ನಿಮ್ಮ ಮನಸ್ಸಿನಲ್ಲಿರುವ ಸಂಶಯ-ಗಳನ್ನು ಕೇಳಿ. (ಎಂದು ಹೇಳಿದರು).

ಏವಮುಕ್ತಾ ನಾರದೇನ ಭೀಷ್ಮಮೀಯುರ್ನರಾಧಿಪಾಃ ।
ಪ್ರಷ್ಟುಂ ಚಾಶಕ್ನುವಂತಸ್ತೇ ವೀಕ್ಷಾಂಚಕ್ರುಃ ಪರಸ್ಪರಮ್ ॥೧೧॥

ನಾರದರಿಂದ ಹೀಗೆ ಹೇಳಲ್ಪಟ್ಟ ರಾಜರು ಭೀಷ್ಮರ ಸಮೀಪಕ್ಕೆ ಹೋದರು. ಅವರನ್ನು ಮಾತನಾಡಿಸಲು ಧೈರ್ಯಸಾಲದೇ ಪರಸ್ಪರವಾಗಿ ನೋಡಿದರು.

ಅಥೋವಾಚ ಹೃಷೀಕೇಶಂ ಪಾಂಡುಪುತ್ರೋ ಯುಧಿಷ್ಠಿರಃ।
ನಾನ್ಯಸ್ತ್ವದ್ ದೇವಕೀಪುತ್ರ ಶಕ್ತಃ ಪ್ರಷ್ಟುಂ ಪಿತಾಮಹಮ್ ॥೧೨॥

ಅನಂತರ ಪಾಂಡುಪುತ್ರನಾದ ಯುಧಿಷ್ಠಿರನು ಹೃಷೀಕೇಶನನ್ನು ಕುರಿತು ದೇವಕೀಪುತ್ರನೇ! ನಿನ್ನನ್ನು ಬಿಟ್ಟು ಇನ್ನೊಬ್ಬನು ಪಿತಾಮಹರಾದ ಭೀಷ್ಮರನ್ನು ಪ್ರಶ್ನೆ ಮಾಡಲಾರನು.

ಪ್ರವ್ಯಾಹಾರಯ ದುರ್ಧರ್ಷಂ ತ್ವಮಗ್ರೇ ಮಧುಸೂದನ।
ತ್ವಂ ಹಿ ನಸ್ತಾತ ಸರ್ವೇಷಾಂ ಸರ್ವಧರ್ಮವಿದುತ್ತಮಃ ॥೧೩॥

ಎಲೈ ಮಧುಸೂದನನೇ! ನೀನೇ ದುರ್ಧರ್ಷರಾದ ಭೀಷ್ಮರನ್ನು ಮೊದಲು ಮಾತನಾಡಿಸು. ಎಲೈ ಪ್ರೀತಿಪಾತ್ರನೇ! ನಮ್ಮೆಲ್ಲರಲ್ಲಿಯೂ ನೀನೇ ಶ್ರೇಷ್ಠನಾದ ಸರ್ವ-ಧರ್ಮಜ್ಞನಾದವನು. (ಎಂದು ಹೇಳಿದನು.)

ಏವಮುಕ್ತಃ ಪಾಂಡವೇನ ಭಗವಾನ್ ಕೇಶವಸ್ತದಾ।
ಅಭಿಗಮ್ಯ ದುರಾಧರ್ಷಂ ಪ್ರವ್ಯಾಹಾರಯದಚ್ಯುತಃ ॥೧೪॥

ಪಾಂಡವನಾದ ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟ ಭಗವಂತನೂ, ಅಚ್ಯುತನೂ ಆದ ಕೇಶವನು ದುರಾಧರ್ಷರಾದ ಭೀಷ್ಮರ ಬಳಿಗೆ ಹೋಗಿ ಅವರನ್ನು ಮಾತನಾಡಿಸಿದನು.

ಶ್ರೀಭಗವಾನ್

ಕಚ್ಚಿತ್ ಸುಖೇನ ರಜನೀ ವ್ಯುಷ್ಟಾ ತೇ ರಾಜಸತ್ತಮ।
ವಿಸ್ಪಷ್ಟಲಕ್ಷಣಾ ಬುದ್ಧಿಃ ಕಚ್ಚಿಚ್ಚೋಪಸ್ಥಿತಾ ತವ ॥೧೫॥

ಶ್ರೀಭಗವಾನ್ – ಎಲೈ ರಾಜಶ್ರೇಷ್ಠನೇ! ನಿನಗೆ ರಾತ್ರಿಯು ಸುಖವಾಗಿ ಕಳೆಯಿತೇ? ನಿನ್ನ ಬುದ್ಧಿಯು ಸ್ಪಷ್ಟವಾಗಿ ನಿನಗೆ ಗೋಚರಿಸುತ್ತಿದೆಯೇ?

ಕಚ್ಚಿಜ್ಜ್ಞಾನಾನಿ ಸರ್ವಾಣಿ ಪ್ರತಿಭಾಂತಿ ಚ ತೇऽನಘ।
ನ ಗ್ಲಾಯತೇ ಚ ಹೃದಯಂ ನ ಚ ತೇ ವ್ಯಾಕುಲಂ ಮನಃ ॥೧೬॥

ಎಲೈ ಅನಘನೇ! ನಿನ್ನ ಎಲ್ಲ ಇಂದ್ರಿಯಗಳೂ ಚೆನ್ನಾಗಿ ಕೆಲಸ ಮಾಡುತ್ತಿವೆಯೇ? ನಿನ್ನ ಹೃದಯದಲ್ಲಿ ಗ್ಲಾನಿಯಾಗಲೀ ಮನಸ್ಸಿನಲ್ಲಿ ವ್ಯಾಕುಲತೆಯಾಗಲೀ ಇಲ್ಲವಷ್ಟೇ?

ಭೀಷ್ಮಃ

ದಾಹೋ ಮೋಹಃ ಶ್ರಮಶ್ಚೈವ ಕ್ಲಮೋ ಗ್ಲಾನಿಸ್ತಥಾ ರುಜಾ।
ತವ ಪ್ರಸಾದಾದ್ ಗೋವಿಂದ ಸದ್ಯೋ ವ್ಯಪಗತಾನಘ ॥೧೭॥

ಭೀಷ್ಮರು – ಎಲೈ ಗೋವಿಂದನೇ! ಅನಘನೇ! ನಿನ್ನ ಅನುಗ್ರಹದಿಂದ ದಾಹವಾಗಲೀ ಬುದ್ಧಿಯ ಮೋಹವಾಗಲೀ, ಶ್ರಮವಾಗಲೀ ದಣಿವಾಗಲೀ, ಬೇಸರವಾಗಲೀ, ರೋಗವಾಗಲೀ ಎಲ್ಲವೂ ತತ್ಕ್ಷಣದಲ್ಲಿಯೇ ನಾಶವನ್ನು ಹೊಂದಿವೆ.

ಯಚ್ಚ ಭೂತಂ ಭವಿಷ್ಯಚ್ಚ ಭವಚ್ಚ ಪರಮದ್ಯುತೇ।
ತತ್ ಸರ್ವಮನುಪಶ್ಯಾಮಿ ಪಾಣೌ ಫಲಮಿವಾಹಿತಮ್ ॥೧೮॥

ಎಲೈ ಪರಮದ್ಯುತಿಯೇ! ಭೂತಭವಿಷ್ಯದ್ವರ್ತಮಾನಗಳೆಲ್ಲವನ್ನೂ ಅಂಗೈಯಲ್ಲಿ ಹಿಡಿದ ಫಲದಂತೆ ನೋಡುತ್ತಿದ್ದೇನೆ.

ವೇದೋಕ್ತಾಶ್ಚೈವ ಯೇ ಧರ್ಮಾ ವೇದಾಂತನಿಹಿತಾಶ್ಚ ಯೇ।
ತಾನ್ ಸರ್ವಾನ್ ಸಂಪ್ರಪಶ್ಯಾಮಿ ವರದಾನಾತ್ ತವಾಚ್ಯುತ ॥೧೯॥

ಎಲೈ ಅಚ್ಯುತನೇ! ನಿನ್ನ ವರಪ್ರದಾನದಿಂದ ನಾನು ವೇದೋಕ್ತವಾದ ಧರ್ಮಗಳನ್ನು, ವೇದಾಂತವಿಹಿತವಾದ ಧರ್ಮಗಳನ್ನು ಎಲ್ಲವನ್ನೂ ಚೆನ್ನಾಗಿ ಕಾಣುತ್ತಿದ್ದೇನೆ.

ಶಿಷ್ಟೈಶ್ಚ ಧರ್ಮೋ ಯಃ ಪ್ರೋಕ್ತಃ ಸ ಚ ಮೇ ಹೃದಿ ವರ್ತತೇ।
ದೇಶಜಾತಿಕುಲಾನಾಂ ಚ ಧರ್ಮಜ್ಞೋಽಸ್ಮಿ ಜನಾರ್ದನ ॥೨೦॥

ಶಿಷ್ಟಾಚಾರದಿಂದ ಪ್ರಾಪ್ತವಾದ ಧರ್ಮಗಳು ನನ್ನ ಮನಸ್ಸಿಗೆ ತೋರುತ್ತಿವೆ. ಎಲೈ ಜನಾರ್ದನನೇ! ದೇಶಧರ್ಮಗಳನ್ನು, ಜಾತಿಧರ್ಮಗಳನ್ನು ಮತ್ತು ಕುಲಧರ್ಮಗಳನ್ನು ತಿಳಿದಿದ್ದೇನೆ.

ಚತುರ್ಣಾಶ್ರಮಧರ್ಮೇಷು ಯೋಽರ್ಥಃ ಸ ಚ ಹೃದಿ ಸ್ಥಿತಃ।
ರಾಜಧರ್ಮಾಶ್ಚ ಸಕಲಾನವಗಚ್ಛಾಮಿ ಕೇಶವ ॥೨೧॥

ನಾಲ್ಕು ಆಶ್ರಮಗಳ ಧರ್ಮಗಳ ಫಲವು ಏನಿವೆಯೋ, ಅವೂ ನನ್ನ ಮನಸ್ಸಿನಲ್ಲಿ ತೋರುತ್ತಿದೆ. ಕೇಶವನೇ! ಸಕಲವಾದ ರಾಜಧರ್ಮಗಳನ್ನು ತಿಳಿದಿದ್ದೇನೆ. (ಎಲ್ಲ ಧರ್ಮಗಳ ಫಲವೂ ನನ್ನ ಮನಸ್ಸಿಗೆ ಗೋಚರಿಸುತ್ತಿದೆ.)

ಯತ್ರ ಯತ್ರ ಚ ವಕ್ತವ್ಯಂ ತದ್ ವಕ್ಷ್ಯಾಮಿ ಜನಾರ್ದನ।
ತವ ಪ್ರಸಾದಾದ್ಧಿ ಶುಭಾ ಮನೋ ಮೇ ಬುದ್ಧಿರಾವಿಶತ್ ॥೨೨॥

ಎಲೈ ಜನಾರ್ದನನೇ! ಏನೇನು ಹೇಳಬೇಕಾಗಿದೆಯೋ ಅದೆಲ್ಲವನ್ನೂ ಹೇಳುವೆನು. ನಿನ್ನ ಅನುಗ್ರಹದಿಂದ ಶುಭವಾದ ನನ್ನ ಮನಸ್ಸು ಬುದ್ಧಿಯನ್ನು ಆಶ್ರಯಿಸಿದೆ.

ಯುವೇವ ಚಾಸ್ಮಿ ಸಂವೃತ್ತಸ್ತ್ವದನುಧ್ಯಾನಬೃಂಹಿತಃ।
ವಕ್ತುಂ ಶ್ರೇಯಃ ಸಮರ್ಥೋಽಸ್ಮಿ ತತ್ತ್ವಪ್ರಸಾದಾಜ್ಜನಾರ್ದನ ॥೨೩॥

ನಿನ ಶುಭಾಶಂಸನೆಯಿಂದ ನಾನು ಯುವಕನಂತೆ ದೃಢನಾಗಿದ್ದೇನೆ. ಎಲೈ ಜನಾರ್ದನನೇ! ನಿನ್ನ ಅನುಗ್ರಹದಿಂದ ಶ್ರೇಯಸ್ಸನ್ನು ಹೇಳಲು ಸಮರ್ಥನಾಗಿದ್ದೇನೆ.

ಸ್ವಯಂ ಕಿಮರ್ಥಂ ತು ಭವಾನ್ ಶ್ರೇಯೋ ನ ಪ್ರಾಹ ಪಾಂಡವಮ್ ।
ಕಿಂ ತೇ ವಿವಕ್ಷಿತಂ ಚಾತ್ರ ತದಾಶು ವದ ಮಾಧವ ॥೨೪॥

ಎಲೈ ಮಾಧವನೇ! ನೀನೇ ಸ್ವತಃ ಧರ್ಮರಾಜನಿಗೆ ಏಕೆ ಶ್ರೇಯಸ್ಸನ್ನು ಹೇಳಲಿಲ್ಲ? ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ಎಂಬುದನ್ನು ಶೀಘ್ರವಾಗಿ ಹೇಳು.

ಶ್ರೀಭಗವಾನ್

ಯಶಸಃ ಶ್ರೇಯಸಶ್ಚೈವ ಮೂಲಂ ಮಾಂ ವಿದ್ಧಿ ಭಾರತ।
ಮತ್ತಃ ಸರ್ವೇಽಭಿನಿರ್ವೃತ್ತಾ ಭಾವಾಃ ಸದಸದಾತ್ಮಕಾಃ ॥೨೫॥

ಶ್ರೀಭಗವಾನ್ – ಎಲೈ ಭಾರತನೇ! ಶ್ರೇಯಸ್ಸಿಗೂ ಮತ್ತು ಯಶಸ್ಸಿಗೂ ನಾನು

ಮೂಲಕಾರಣನೆಂದು ತಿಳಿ. ಕಾರ್ಯಕಾರಣಾತ್ಮಕವಾದ ಎಲ್ಲ ವಸ್ತುಗಳೂ ನನ್ನಿಂದಲೇ ಉಂಟಾಗುತ್ತವೆ.

ಶೀತಾಂಶುಶ್ಚಂದ್ರ ಇತ್ಯುಕ್ತೇ ಕೋ ಲೋಕೇ ವಿಸ್ಮಯಿಷ್ಯತಿ।
ತಥೈವ ಯಶಸಾ ಪೂರ್ಣೇ ಮಯಿ ಕೋ ವಿಸ್ಮಯಿಷ್ಯತಿ ॥೨೬॥

'ಚಂದ್ರನು ಶೀತಕಿರಣ'ನೆಂದು ಹೇಳಿದರೆ ಲೋಕದಲ್ಲಿ ಯಾರಿಗೆ ಆಶ್ಚರ್ಯವುಂಟಾಗುವುದು? ಆದ್ದರಿಂದ ಯಶಸ್ಸಿನಿಂದ ಪೂರ್ಣವಾದ ನಾನು ಏನನ್ನಾದರೂ ಹೇಳಿದರೆ ಅದರಲ್ಲಿ ಯಾರಿಗೆ ವಿಸ್ಮಯವುಂಟಾಗುವುದು? (ಅದರಲ್ಲಿ ಏನೂ ಆಶ್ಚರ್ಯವಿರುವುದಿಲ್ಲ.)

ಆಧೇಯಂ ತು ಮಯಾ ಭೂಯೋ ಯಶಸ್ತವ ಮಹಾದ್ಯುತೇ।
ತತೋ ಮೇ ವಿಪುಲಾ ಬುದ್ಧಿಸ್ತ್ವಯಿ ಭೀಷ್ಮ ಸಮಾಹಿತಾ ॥೨೭॥

ಎಲೈ ಮಹಾದ್ಯುತಿಯೇ! ನಾನು ನಿನಗೆ ಇನ್ನೂ ಹೆಚ್ಚಿನ ಯಶಸ್ಸನ್ನು ದಯಪಾಲಿಸಬೇಕು. ಆದ್ದರಿಂದ ಎಲೈ ಭೀಷ್ಮನೇ! ನನ್ನ ವಿಪುಲವಾದ ಬುದ್ಧಿಯು ನಿನ್ನಲ್ಲಿ ಕೇಂದ್ರೀಕೃತವಾಗಿದೆ. (ನೀನು ಧರ್ಮೋಪದೇಶವನ್ನು ಮಾಡಬೇಕೆಂದು ನಿರ್ಧರಿಸಿದೆ.)

ಯಾವದ್ಧಿ ಪೃಥಿವೀಪಾಲ ಪೃಥಿವೀ ಸ್ಥಾಸ್ಯತೇ ಧ್ರುವಾ।
ತಾವತ್ ತಸ್ಯಾಕ್ಷಯಾ ಕೀರ್ತಿರ್ಲೋಕಾನನುಚರಿಷ್ಯತಿ ॥೨೮॥

ಎಲೈ ರಾಜನೇ! ಎಲ್ಲಿಯವರೆಗೆ ಶಾಶ್ವತವಾದ ಭೂಮಿಯು ಇರುತ್ತದೆಯೋ ಅಲ್ಲಿಯವರೆಗೆ ಪರಲೋಕದಲ್ಲಿ ಅಕ್ಷಯವಾದ ಕೀರ್ತಿಯಿರುತ್ತದೆ.

ಯಚ್ಚ ತ್ವಂ ವಕ್ಷ್ಯಸೇ ಭೀಷ್ಮ ಪಾಂಡವಾಯಾನುಪೃಚ್ಛತೇ।
ವೇದಪ್ರವಾದಾ ಇವ ತೇ ಸ್ಥಾಸ್ಯಂತಿ ವಸುಧಾತಳೇ ॥೨೯॥

ಎಲೈ ಭೀಷ್ಮನೇ! ಪ್ರಶ್ನೆಯನ್ನು ಮಾಡುವ ಪಾಂಡವನಿಗೆ ನೀನು ಏನು ಉತ್ತರ-

ವನ್ನು ಹೇಳುವಿಯೋ ಅದು ವೇದವಾದಗಳಂತೆ ಭೂತಲದಲ್ಲಿ ಶಾಶ್ವತವಾಗಿ ಉಳಿಯುತ್ತದೆ.

ಯಶ್ಚೈತೇನ ಪ್ರಮಾಣೇನ ಯೋಕ್ಷ್ಯತ್ಯಾತ್ಮಾನಮಾತ್ಮನಾ ।
ಸ ಫಲಂ ಸರ್ವಪುಣ್ಯಾನಾಂ ಪ್ರೇತ್ಯ ಚಾನುಭವಿಷ್ಯತಿ ॥೩೦॥

ಯಾವನು ನೀನು ಹೇಳಿದುದನ್ನು ಪ್ರಮಾಣವಾಗಿ ಸ್ವೀಕರಿಸಿ ತಾನು ಅದರಂತೆ ನಡೆದುಕೊಳ್ಳುತ್ತಾನೆಯೋ ಅವನು ಮರಣವನ್ನು ಹೊಂದಿ ಸರ್ವಪುಣ್ಯಗಳ ಫಲವನ್ನು ಅನುಭವಿಸುವನು.

ಏತಸ್ಮಾತ್ ಕಾರಣಾದ್ ಭೀಷ್ಮ ಮತಿರ್ದಿವ್ಯಾ ಮಯಾ ಹಿ ತೇ ।
ದತ್ತಾ ಯಶೋ ವಿಪ್ರಥೇತ ಕಥಂ ಭೂಯಸ್ತವೇತಿ ಹ ॥೩೧॥

ಎಲೈ ಭೀಷ್ಮನೇ! ಈ ಕಾರಣದಿಂದ ನಿನ್ನ ಕೀರ್ತಿಯು ಹೇಗೆ ಇನ್ನೂ ಹೆಚ್ಚು ವಿಸ್ತಾರವಾದೀತು ಎಂದು ಯೋಚಿಸಿ ನಾನು ನಿನಗೆ ದಿವ್ಯವಾದ ಬುದ್ಧಿಯನ್ನು ಕೊಟ್ಟಿದ್ದೇನೆ.

ಯಾವದ್ಧಿ ಪ್ರಥತೇ ಲೋಕೇ ಪುರುಷಸ್ಯ ಯಶೋ ಭುವಿ ।
ತಾವತ್ ತಸ್ಯಾಕ್ಷಯಂ ಸ್ಥಾನಂ ಭವತೀತಿ ವಿನಿಶ್ಚಿತಮ್ ॥೩೨॥

ಎಲ್ಲಿಯವರೆಗೆ ಭೂಮಿಯಲ್ಲಿ ಒಬ್ಬ ಪುರುಷನ ಯಶಸ್ಸು ಹರಡುತ್ತದೆಯೋ ಅಲ್ಲಿಯವರೆಗೆ ಅವನಿಗೆ ಪರಲೋಕದಲ್ಲಿ ಅಕ್ಷಯಸ್ಥಾನವುಂಟಾಗುತ್ತದೆ ಎಂಬುದು ಸುನಿಶ್ಚಿತವಾದುದು.

ರಾಜಾನೋ ಹತಶಿಷ್ಟಾಸ್ತ್ವಾಂ ರಾಜನ್ನಭಿತ ಆಸತೇ ।
ಧರ್ಮಾನನುಯುಯುಕ್ಷಂತಸ್ತೇಭ್ಯಃ ಪ್ರಬ್ರೂಹಿ ಭಾರತ ॥೩೩॥

ಎಲೈ ರಾಜನೇ! ಯುದ್ಧದಲ್ಲಿ ಹತರಾಗಿ ಉಳಿದ ರಾಜರು ಧರ್ಮಗಳನ್ನು ಕೇಳಲು ಬಯಸಿ ನಿನ್ನನ್ನು ಸುತ್ತುವರಿದಿದ್ದಾರೆ. ಎಲೈ ಭಾರತನೇ! ಅವರಿಗೆ ಉಪದೇಶವನ್ನು ಮಾಡು.

ಭವಾನ್ ಹಿ ವಯಸಾ ವೃದ್ಧಃ ಶ್ರುತಾಚಾರಸಮನ್ವಿತಃ।
ಕುಶಲೋ ರಾಜಧರ್ಮಾಣಾಂ ಪೂರ್ವೇಷಾಮಪರಾಶ್ಚ ಯೇ ॥೩೪॥

ನೀನು ವಯೋವೃದ್ಧನಾಗಿದ್ದೀಯೆ. ವಿದ್ಯೆ ಮತ್ತು ಆಚಾರಸಂಪನ್ನನಾಗಿದ್ದೀಯೆ. ಪೂರ್ವರಾಜರ ಮತ್ತು ಅನಂತರ ಬಂದ ರಾಜರ ಎಲ್ಲ ಧರ್ಮಗಳನ್ನೂ ಚೆನ್ನಾಗಿ ತಿಳಿದಿದ್ದೀಯೆ.

ಜನ್ಮಪ್ರಭೃತಿ ತೇ ಕಶ್ಚಿದ್ ವೃಜಿನಂ ನ ದದರ್ಶ ಹ।
ಜ್ಞಾತಾರಂ ಮನುಧರ್ಮಾಣಾಂ ತ್ವಾಂ ವಿದುಃ ಸರ್ವಪಾರ್ಥಿವಾಃ ॥೩೫॥

ನೀನು ಹುಟ್ಟಿದಾಗಿನಿಂದ ನಿನ್ನಲ್ಲಿ ಯಾವ ದೋಷವೂ ಕಂಡುಬರಲಿಲ್ಲ. ಎಲ್ಲ ರಾಜರೂ ನೀನು ಮನುಧರ್ಮಗಳನ್ನು ತಿಳಿದವನು ಎಂದು ತಿಳಿದಿದ್ದಾರೆ.

ತೇಭ್ಯಃ ಪಿತೇವ ಪುತ್ರೇಭ್ಯೋ ರಾಜನ್ ಬ್ರೂಹಿ ಪರಂ ನಯಮ್।
ಋಷಯಶ್ಚ ಹಿ ದೇವಾಶ್ಚ ತ್ವಯಾ ನಿತ್ಯಮುಪಾಸಿತಾಃ ॥೩೬॥

ಎಲೈ ರಾಜನೇ! ಮಕ್ಕಳಿಗೆ ತಂದೆಯು ಹೇಳಿದಂತೆ ಅವರಿಗೆ ಶ್ರೇಷ್ಠವಾದ ರಾಜನೀತಿಯನ್ನು ಹೇಳು. ನೀನು ನಿತ್ಯವೂ ಋಷಿಗಳ ಮತ್ತು ದೇವತೆಗಳ ಸೇವೆಯನ್ನು ಮಾಡಿದ್ದೀಯೆ.

ತಸ್ಮಾದ್ ವಕ್ತವ್ಯಮೇವೇಹ ತ್ವಯಾ ಪಶ್ಯಾಮ್ಯಶೇಷತಃ।
ಧರ್ಮಾನ್ ಶುಶ್ರೂಷಮಾಣೇಭ್ಯಃ ಪೃಷ್ಟೇನ ಚ ಸತಾ ಪುನಃ ॥೩೭॥

ಆದ್ದರಿಂದ ಕೇಳಲು ಬಯಸುವ ಈ ರಾಜರಿಗೆ ಅದರಲ್ಲಿಯೂ ಸಜ್ಜನನಾದ ಯುಧಿಷ್ಠಿರನಿಂದ ಪ್ರಶ್ನೆ ಮಾಡಲ್ಪಟ್ಟ ನೀನು ಎಲ್ಲವನ್ನೂ ಪೂರ್ಣವಾಗಿ ಹೇಳಲೇ ಬೇಕು - ಎಂದು ನಾನು ತಿಳಿಯುತ್ತೇನೆ.

ವಕ್ತವ್ಯಂ ವಿದುಷಾ ಚೇತಿ ಧರ್ಮಮಾಹುರ್ಮನೀಷಿಣಃ।
ಅಪ್ರತಿಬ್ರುವತಃ ಕಷ್ಟೋ ದೋಷೋ ಹಿ ಭವತಿ ಪ್ರಭೋ ॥೩೮॥

ವನ್ನು ಹೇಳುವಿಯೋ ಅದು ವೇದವಾದಗಳಂತೆ ಭೂತಲದಲ್ಲಿ ಶಾಶ್ವತವಾಗಿ ಉಳಿಯುತ್ತದೆ.

ಯಶ್ಚೈತೇನ ಪ್ರಮಾಣೇನ ಯೋಕ್ಷ್ಯತ್ಯಾತ್ಮಾನಮಾತ್ಮನಾ।
ಸ ಫಲಂ ಸರ್ವಪುಣ್ಯಾನಾಂ ಪ್ರೇತ್ಯ ಚಾನುಭವಿಷ್ಯತಿ ॥೩೦॥

ಯಾವನು ನೀನು ಹೇಳಿದುದನ್ನು ಪ್ರಮಾಣವಾಗಿ ಸ್ವೀಕರಿಸಿ ತಾನು ಅದರಂತೆ ನಡೆದುಕೊಳ್ಳುತ್ತಾನೆಯೋ ಅವನು ಮರಣವನ್ನು ಹೊಂದಿ ಸರ್ವಪುಣ್ಯಗಳ ಫಲವನ್ನು ಅನುಭವಿಸುವನು.

ಏತಸ್ಮಾತ್ ಕಾರಣಾದ್ ಭೀಷ್ಮ ಮತಿರ್ದಿವ್ಯಾ ಮಯಾ ಹಿ ತೇ।
ದತ್ತಾ ಯಶೋ ವಿಪ್ರಥೇತ ಕಥಂ ಭೂಯಸ್ತವೇತಿ ಹ ॥೩೧॥

ಎಲೈ ಭೀಷ್ಮನೇ! ಈ ಕಾರಣದಿಂದ ನಿನ್ನ ಕೀರ್ತಿಯು ಹೇಗೆ ಇನ್ನೂ ಹೆಚ್ಚು ವಿಸ್ತಾರವಾದೀತು ಎಂದು ಯೋಚಿಸಿ ನಾನು ನಿನಗೆ ದಿವ್ಯವಾದ ಬುದ್ಧಿಯನ್ನು ಕೊಟ್ಟಿದ್ದೇನೆ.

ಯಾವದ್ಧಿ ಪ್ರಥತೇ ಲೋಕೇ ಪುರುಷಸ್ಯ ಯಶೋ ಭುವಿ।
ತಾವತ್ ತಸ್ಯಾಕ್ಷಯಂ ಸ್ಥಾನಂ ಭವತೀತಿ ವಿನಿಶ್ಚಿತಮ್ ॥೩೨॥

ಎಲ್ಲಿಯವರೆಗೆ ಭೂಮಿಯಲ್ಲಿ ಒಬ್ಬ ಪುರುಷನ ಯಶಸ್ಸು ಹರಡುತ್ತದೆಯೋ ಅಲ್ಲಿಯವರೆಗೆ ಅವನಿಗೆ ಪರಲೋಕದಲ್ಲಿ ಅಕ್ಷಯಸ್ಥಾನವುಂಟಾಗುತ್ತದೆ ಎಂಬುದು ಸುನಿಶ್ಚಿತವಾದುದು.

ರಾಜಾನೋ ಹತಶಿಷ್ಟಾಸ್ತ್ವಾಂ ರಾಜನ್ನಭಿತ ಆಸತೇ।
ಧರ್ಮಾನನುಯುಯುಕ್ಷಂತಸ್ತೇಭ್ಯಃ ಪ್ರಬ್ರೂಹಿ ಭಾರತ ॥೩೩॥

ಎಲೈ ರಾಜನೇ! ಯುದ್ಧದಲ್ಲಿ ಹತರಾಗಿ ಉಳಿದ ರಾಜರು ಧರ್ಮಗಳನ್ನು ಕೇಳಲು ಬಯಸಿ ನಿನ್ನನ್ನು ಸುತ್ತುವರಿದಿದ್ದಾರೆ. ಎಲೈ ಭಾರತನೇ! ಅವರಿಗೆ ಉಪದೇಶವನ್ನು ಮಾಡು.

ಭವಾನ್ ಹಿ ವಯಸಾ ವೃದ್ಧಃ ಶ್ರುತಾಚಾರಸಮನ್ವಿತಃ।
ಕುಶಲೋ ರಾಜಧರ್ಮಾಣಾಂ ಪೂರ್ವೇಷಾಮಪರಾಶ್ಚ ಯೇ ॥೩೪॥

ನೀನು ವಯೋವೃದ್ಧನಾಗಿದ್ದೀಯೆ. ವಿದ್ಯೆ ಮತ್ತು ಆಚಾರಸಂಪನ್ನನಾಗಿದ್ದೀಯೆ. ಪೂರ್ವರಾಜರ ಮತ್ತು ಅನಂತರ ಬಂದ ರಾಜರ ಎಲ್ಲ ಧರ್ಮಗಳನ್ನೂ ಚೆನ್ನಾಗಿ ತಿಳಿದಿದ್ದೀಯೆ.

ಜನ್ಮಪ್ರಭೃತಿ ತೇ ಕಶ್ಚಿದ್ ವೃಜಿನಂ ನ ದದರ್ಶ ಹ।
ಜ್ಞಾತಾರಂ ಮನುಧರ್ಮಾಣಾಂ ತ್ವಾಂ ವಿದುಃ ಸರ್ವಪಾರ್ಥಿವಾಃ ॥೩೫॥

ನೀನು ಹುಟ್ಟಿದಾಗಿನಿಂದ ನಿನ್ನಲ್ಲಿ ಯಾವ ದೋಷವೂ ಕಂಡುಬರಲಿಲ್ಲ. ಎಲ್ಲ ರಾಜರೂ ನೀನು ಮನುಧರ್ಮಗಳನ್ನು ತಿಳಿದವನು ಎಂದು ತಿಳಿದಿದ್ದಾರೆ.

ತೇಭ್ಯಃ ಪಿತೇವ ಪುತ್ರೇಭ್ಯೋ ರಾಜನ್ ಬ್ರೂಹಿ ಪರಂ ನಯಮ್।
ಋಷಯಶ್ಚ ಹಿ ದೇವಾಶ್ಚ ತ್ವಯಾ ನಿತ್ಯಮುಪಾಸಿತಾಃ ॥೩೬॥

ಎಲೈ ರಾಜನೇ! ಮಕ್ಕಳಿಗೆ ತಂದೆಯು ಹೇಳಿದಂತೆ ಅವರಿಗೆ ಶ್ರೇಷ್ಠವಾದ ರಾಜ-ನೀತಿಯನ್ನು ಹೇಳು. ನೀನು ನಿತ್ಯವೂ ಋಷಿಗಳ ಮತ್ತು ದೇವತೆಗಳ ಸೇವೆಯನ್ನು ಮಾಡಿದ್ದೀಯೆ.

ತಸ್ಮಾದ್ ವಕ್ತವ್ಯಮೇವೇಹ ತ್ವಯಾ ಪಶ್ಯಾಮ್ಯಶೇಷತಃ।
ಧರ್ಮಾನ್ ಶುಶ್ರೂಷಮಾಣೇಭ್ಯಃ ಪೃಷ್ಟೇನ ಚ ಸತಾ ಪುನಃ ॥೩೭॥

ಆದ್ದರಿಂದ ಕೇಳಲು ಬಯಸುವ ಈ ರಾಜರಿಗೆ ಅದರಲ್ಲಿಯೂ ಸಜ್ಜನನಾದ ಯುಧಿಷ್ಠಿರನಿಂದ ಪ್ರಶ್ನೆ ಮಾಡಲ್ಪಟ್ಟ ನೀನು ಎಲ್ಲವನ್ನೂ ಪೂರ್ಣವಾಗಿ ಹೇಳಲೇ ಬೇಕು - ಎಂದು ನಾನು ತಿಳಿಯುತ್ತೇನೆ.

ವಕ್ತವ್ಯಂ ವಿದುಷಾ ಚೇತಿ ಧರ್ಮಮಾಹುರ್ಮನೀಷಿಣಃ।
ಅಪ್ರತಿಬ್ರುವತಃ ಕಷ್ಟೋ ದೋಷೋ ಹಿ ಭವತಿ ಪ್ರಭೋ ॥೩೮॥

ಸಜ್ಜನರು ಪ್ರಶ್ನೆ ಮಾಡಿದಾಗ ವಿದ್ವಾಂಸನಾದವನು ಉತ್ತರವನ್ನು ನೀಡುವುದು ಧರ್ಮವೆಂದು ಜ್ಞಾನಿಗಳು ಹೇಳುತ್ತಾರೆ. ಎಲೈ ಪ್ರಭುವೇ! ಉತ್ತರವನ್ನು ನೀಡದಿದ್ದರೆ ಕಷ್ಟಕರವಾದ ದೋಷವುಂಟಾಗುವುದಷ್ಟೇ!

ತಸ್ಮಾತ್ ಪುತ್ರೈಶ್ಚ ಪೌತ್ರೈಶ್ಚ ಧರ್ಮಾನ್ ಪೃಷ್ಟಃ ಸನಾತನಾನ್।
ವಿದ್ವಾನ್ ಜಿಜ್ಞಾಸಮಾನೈಸ್ತ್ವಂ ಪ್ರಬ್ರೂಹಿ ಭರತರ್ಷಭ ॥೩೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುಃಪಂಚಾಶೋऽಧ್ಯಾಯಃ ॥೫೪॥

ಎಲೈ ಭರತಶ್ರೇಷ್ಠನೇ! ಆದ್ದರಿಂದ ಪುತ್ರರಿಂದಲೂ ಮತ್ತು ಪೌತ್ರರಿಂದಲೂ ಸನಾತನಧರ್ಮಗಳ ವಿಷಯದಲ್ಲಿ ಪ್ರಶ್ನೆಮಾಡಲ್ಪಟ್ಟ ನೀನು ಎಲ್ಲವನ್ನೂ ತಿಳಿದವನಾಗಿ ತಿಳಿಯಲು ಬಯಸುವ ಅವರಿಗೆ ಉಪದೇಶವನ್ನು ಮಾಡು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೫೪ನೆಯಅಧ್ಯಾಯವು ಮುಗಿಯಿತು

—0—

೫೫. ಪಂಚಪಂಚಾಶೋऽಧ್ಯಾಯಃ

ಯುಧಿಷ್ಠಿರನ ಉಪಸತ್ತಿಯನ್ನು ಕುರಿತು ಕೃಷ್ಣನಿಂದ ಕಾರಣನಿರೂಪಣೆ;
ಭೀಷ್ಮರಿಂದ ಯುಧಿಷ್ಠಿರನಿಗೆ ಪ್ರಶ್ನೆಯನ್ನು ಕೇಳಲು ಅನುಮತಿ

ವೈಶಂಪಾಯನಃ

ಅಥಾಬ್ರವೀನ್ಮಹಾತೇಜಾ ವಾಕ್ಯಂ ಕೌರವನಂದನಃ।
ಹಂತ ಧರ್ಮಾನ್ ಪ್ರವಕ್ಷ್ಯಾಮಿ ದೃಢೇ ವಾಙ್ಮನಸೀ ಮಮ।
ತವ ಪ್ರಸಾದಾದ್ ಗೋವಿಂದ ಭೂತಾತ್ಮಾ ಹ್ಯಸಿ ಶಾಶ್ವತಃ ॥೧॥

ವೈಶಂಪಾಯನರು – ಆಗ ಮಹಾತೇಜಸ್ವಿಗಳಾದ ಕೌರವನಂದನರಾದ ಭೀಷ್ಮರು ಮಾತನಾಡಿದರು. ಸಂತೋಷ. ಧರ್ಮಗಳನ್ನು ಹೇಳುವೆನು. ಎಲೈ ಗೋವಿಂದನೇ! ನಿನ್ನ ಅನುಗ್ರಹದಿಂದ ನನ್ನ ಮಾತು ಮತ್ತು ಮನಸ್ಸುಗಳು ದೃಢವಾಗಿವೆ. ಗೋವಿಂದನೇ! ನೀನು ಶಾಶ್ವತನಾದ ಸರ್ವಾಂತರ್ಯಾಮಿಯಾಗಿದ್ದೀಯೆ.

ಯುಧಿಷ್ಠಿರಸ್ತು ಮಾಂ ರಾಜಾ ಧರ್ಮಾನ್ ಸಮನುಪೃಚ್ಛತು।
ಏವಂ ಪ್ರೀತೋ ಭವಿಷ್ಯಾಮಿ ಧರ್ಮಾನ್ ವಕ್ಷ್ಯಾಮಿ ಚಾನಘ ॥೨॥

ರಾಜನಾದ ಯುಧಿಷ್ಠಿರನು ಧರ್ಮಗಳ ವಿಷಯದಲ್ಲಿ ನನ್ನನ್ನು ಪ್ರಶ್ನಿಸಲಿ. ಎಲೈ ಅನಘನೇ! ಹಾಗೆ ಮಾಡಿದರೆ ನಾನು ಸಂತೋಷಗೊಳ್ಳುವೆನು ಮತ್ತು ಧರ್ಮ-ಗಳನ್ನು ನಿರೂಪಿಸುವೆನು.

ಯಸ್ಮಿನ್ ರಾಜರ್ಷಭೇ ಜಾತೇ ಧರ್ಮಾತ್ಮನಿ ಮಹಾತ್ಮನಿ।
ಅಹೃಷ್ಯನ್ ಋಷಯಃ ಸರ್ವೇ ಸ ಮಾಂ ಪೃಚ್ಛತು ಪಾಂಡವಃ ॥೩॥

ಯಾವ ಧರ್ಮಾತ್ಮನಾದ ಮಹಾತ್ಮನಾದ ರಾಜಶ್ರೇಷ್ಠನು ಜನಿಸಿದಾಗ ಎಲ್ಲ ಋಷಿಗಳೂ ಸಂತೋಷಗೊಂಡರೋ ಅಂತಹ ಪಾಂಡವನು ನನ್ನನ್ನು ಪ್ರಶ್ನಿಸಲಿ.

ಸರ್ವೇಷಾಂ ದೀಪ್ತಯಶಸಾಂ ಕುರೂಣಾಂ ಧರ್ಮಚಾರಿಣಾಮ್।
ಯಸ್ಯ ನಾಸ್ತಿ ಸಮಃ ಕಶ್ಚಿತ್ ಸ ಮಾಂ ಪೃಚ್ಛತು ಪಾಂಡವಃ ॥೪॥

ಯಾವ ಯುಧಿಷ್ಠಿರನಿಗೆ ದೀಪ್ತವಾದ ಕೀರ್ತಿಯುಳ್ಳ, ಧರ್ಮಚಾರಿಗಳಾದ, ಎಲ್ಲ ಕುರುಗಳಲ್ಲಿ ಸಮಾನನಾದವನು ಯಾವನೂ ಇಲ್ಲವೋ ಅಂತಹ ಪಾಂಡವನು ನನ್ನನ್ನು ಪ್ರಶ್ನೆ ಮಾಡಲಿ.

ಧೃತಿರ್ದಮೋ ಬ್ರಹ್ಮಚರ್ಯಂ ಕ್ಷಮಾ ಧರ್ಮಶ್ಚ ನಿತ್ಯದಾ।
ಯಸ್ಮಿನ್ನೋಜಶ್ಚ ತೇಜಶ್ಚ ಸ ಮಾಂ ಪೃಚ್ಛತು ಪಾಂಡವಃ ॥೫॥

ಯಾವನಲ್ಲಿ ಧೈರ್ಯ, ಇಂದ್ರಿಯನಿಗ್ರಹ, ಬ್ರಹ್ಮಚರ್ಯ, ಕ್ಷಮೆ ನಿತ್ಯವೂ ಧರ್ಮಾಚರಣೆ, ಅವಷ್ಟಂಭಶಕ್ತಿ, ತೇಜಸ್ಸುಗಳು ಇವೆಯೋ ಅಂತಹ ಯುಧಿಷ್ಠಿರನು ನನ್ನನ್ನು ಪ್ರಶ್ನೆ ಮಾಡಲಿ.

ಸತ್ಯಂ ದಾನಂ ತಪಃ ಶೌಚಂ ಶಾಂತಿರ್ದಾಕ್ಷ್ಯಮಸಂಭ್ರಮಃ।
ಯಸ್ಮಿನ್ನೇತಾನಿ ಸರ್ವಾಣಿ ಸ ಮಾಂ ಪೃಚ್ಛತು ಪಾಂಡವಃ ॥೬॥

ಯಾವನಲ್ಲಿ ಸತ್ಯ , ದಾನ, ತಪಸ್ಸು, ಶೌಚ, ಶಾಂತಿ, ದಕ್ಷತೆ ಮತ್ತು ಅಪ್ರಮಾದ -ಗಳು ಇವೆಲ್ಲವೂ ಇವೆಯೋ ಅಂತಹ ಯುಧಿಷ್ಠಿರನು ನನ್ನನ್ನು ಪ್ರಶ್ನೆ ಮಾಡಲಿ.

ಯೋ ನ ಕಾಮಾನ್ನ ಸಂರಂಭಾನ್ನ ಭಯಾನ್ನಾರ್ಥಕಾರಣಾತ್ ।
ಕುರ್ಯಾದಧರ್ಮಂ ಧರ್ಮಾತ್ಮಾ ಸ ಮಾಂ ಪೃಚ್ಛತು ಪಾಂಡವಃ ॥೭॥

ಧರ್ಮಾತ್ಮನಾದ ಯಾವನು ಕಾಮದಿಂದಾಗಲೀ, ಕ್ರೋಧದಿಂದಾಗಲೀ, ಭಯದಿಂದಾಗಲೀ, ಅರ್ಥಪ್ರಾಪ್ತಿಯ ಕಾರಣದಿಂದಾಗಲೀ ಅಧರ್ಮವನ್ನು ಮಾಡುವುದಿಲ್ಲವೋ ಅಂತಹ ಪಾಂಡವನು ನನ್ನನ್ನು ಪ್ರಶ್ನೆ ಮಾಡಲಿ.

ಸಂಬಂಧಿನೋಽತಿಥೀನ್ ಭೃತ್ಯಾನ್ ಸಂಶ್ರಿತೋಪಾಶ್ರಿತಾಂಶ್ಚ ಯಃ ।
ಸಮ್ಮಾನಯತಿ ಸತ್ಕೃತ್ಯ ಸ ಮಾಂ ಪೃಚ್ಛತು ಪಾಂಡವಃ ॥೮॥

ಯಾವನು ಸಂಬಂಧಿಗಳನ್ನು ಅತಿಥಿಗಳನ್ನು , ಭೃತ್ಯರನ್ನು , ಆಶ್ರಿತರನ್ನು , ಆಶ್ರಿತರ ಸಂಬಂಧಿಗಳನ್ನು ಸತ್ಕರಿಸಿ ಪೂಜಿಸುತ್ತಾನೆಯೋ ಅಂತಹ ಪಾಂಡವನು ನನ್ನನ್ನು ಪ್ರಶ್ನೆ ಮಾಡಲಿ.

ಸತ್ಯನಿತ್ಯಃ ಕ್ಷಮಾನಿತ್ಯೋ ಜ್ಞಾನನಿತ್ಯೋಽತಿಥಿಪ್ರಿಯಃ ।
ಯೋ ದದಾತಿ ಸತಾಂ ನಿತ್ಯಂ ಸ ಮಾಂ ಪೃಚ್ಛತು ಪಾಂಡವಃ ॥೯॥

ಯಾವನು ನಿತ್ಯವೂ ಸತ್ಯವಚನನೋ, ನಿತ್ಯವೂ ಕ್ಷಮಾಶೀಲನೋ, ನಿತ್ಯವೂ ಜ್ಞಾನರತನೋ, ಅತಿಥಿಪ್ರಿಯನೋ, ಸಜ್ಜನರಿಗೆ ನಿತ್ಯವೂ ದಾನವನ್ನು ಮಾಡುತ್ತಾನೆಯೋ ಅಂತಹ ಪಾಂಡವನು ನನ್ನನ್ನು ಪ್ರಶ್ನೆ ಮಾಡಲಿ.

ಇಜ್ಯಾಧ್ಯಯನನಿತ್ಯಶ್ಚ ಧರ್ಮೇ ಚ ನಿರತಃ ಸದಾ ।
ಶಾಂತಃ ಶ್ರುತರಹಸ್ಯಶ್ಚ ಸ ಮಾಂ ಪೃಚ್ಛತು ಪಾಂಡವಃ ॥೧೦॥

ಯಾವನು ಅರ್ಚನೆ ಮತ್ತು ಅಧ್ಯಯನಗಳಲ್ಲಿ ನಿತ್ಯವೂ ರತನಾಗಿದ್ದಾನೋ, ಧರ್ಮಗಳಲ್ಲಿ ನಿರತನೋ ಶಾಂತನೋ, ರಹಸ್ಯತತ್ವಗಳನ್ನು ತಿಳಿದವನೋ ಅಂತಹ ಪಾಂಡವನು ನನ್ನನ್ನು ಪ್ರಶ್ನೆ ಮಾಡಲಿ.

ಶ್ರೀಭಗವಾನ್

ಲಜ್ಜಯಾ ಪರಯೋಪೇತೋ ಧರ್ಮಾತ್ಮಾ ಸ ಯುಧಿಷ್ಠಿರಃ।
ಅಭಿಶಾಪಭಯಾದ್ ಭೀತೋ ಭವಂತಂ ನೋಪಸರ್ಪತಿ ॥೧೧॥

ಶ್ರೀಭಗವಾನ್ – ಧರ್ಮಾತ್ಮನಾದ ಆ ಯುಧಿಷ್ಠಿರನು ಬಹಳ ನಾಚಿಕೆಯಿಂದ ಕೂಡಿ ನೀನು ಶಾಪವನ್ನು ಕೊಡಬಹುದೆಂದು ಹೆದರಿ ನಿನ್ನ ಬಳಿಗೆ ಬರುತ್ತಿಲ್ಲ.

ಲೋಕಸ್ಯ ಕದನಂ ಕೃತ್ವಾ ಲೋಕನಾಥೋ ವಿಶಾಂಪತೇ।
ಅಭಿಶಾಪಭಯಾದ್ ಭೀತೋ ಭವಂತಂ ನೋಪಸರ್ಪತಿ ॥೧೨॥

ಎಲೈ ರಾಜನೇ! ಲೋಕನಾಥನಾದ ಅವನು ಘೋರವಾದ ಯುದ್ಧವನ್ನು ಮಾಡಿ, ನಿನ್ನಿಂದ ಶಾಪವುಂಟಾಗಬಹುದೆಂಬ ಭಯದಿಂದ ನಿನ್ನ ಬಳಿಗೆ ಬರುತ್ತಿಲ್ಲ.

ಪೂಜ್ಯಾನ್ ಮಾನ್ಯಾಂಶ್ಚ ಭಕ್ತಾಂಶ್ಚ ಗುರೂನ್ ಸಂಬಂಧಿಬಾಂಧವಾನ್।
ಅರ್ಘ್ಯಾರ್ಹಾನಿಷುಭಿರ್ಹತ್ವಾ ಭವಂತಂ ನೋಪಸರ್ಪತಿ ॥೧೩॥

ಪೂಜ್ಯರೂ, ಮಾನ್ಯರೂ, ಭಕ್ತರೂ, ಗುರುಗಳೂ, ಸಂಬಂಧಿಬಾಂಧವರೂ, ಪೂಜಾರ್ಹರೂ ಆದವರನ್ನು ಬಾಣಗಳಿಂದ ಕೊಂದು ನಿನ್ನ ಬಳಿಗೆ ಬರುತ್ತಿಲ್ಲ.

ಭೀಷ್ಮಃ

ಬ್ರಾಹ್ಮಣಾನಾಂ ಯಥಾ ಧರ್ಮೋ ದಾನಮಧ್ಯಯನಂ ತಪಃ।
ಕ್ಷತ್ರಿಯಾಣಾಂ ತಥಾ ಕೃಷ್ಣ ಸಮರೇ ದೇಹಪಾತನಮ್ ॥೧೪॥

ಭೀಷ್ಮರು – ಕೃಷ್ಣನೇ! ಬ್ರಾಹ್ಮಣರಿಗೆ ದಾನ, ಅಧ್ಯಯನ ಮತ್ತು ತಪಸ್ಸುಗಳು ಹೇಗೆ ಧರ್ಮವೋ ಹಾಗೆ ಕ್ಷತ್ರಿಯರಿಗೆ ಯುದ್ಧದಲ್ಲಿ ದೇಹತ್ಯಾಗವನ್ನು ಮಾಡುವುದು ಧರ್ಮವಾದುದು.

ಪಿತೄನ್ ಪಿತಾಮಹಾನ್ ಪುತ್ರಾನ್ ಗುರೂನ್ ಸಂಬಂಧಿಬಾಂಧವಾನ್।
ಮಿಥ್ಯಾಪ್ರವೃತ್ತಾನ್ ಯಃ ಸಂಖೇ ನಿಹನ್ಯಾದ್ ಧರ್ಮ ಏವ ಸಃ ॥೧೫॥

ಅನ್ಯಾಯದ ಕಾರಣದಿಂದ ಪ್ರವೃತ್ತರಾದ ಪಿತೃಗಳನ್ನೂ, ಪಿತಾಮಹರನ್ನೂ, ಪುತ್ರರನ್ನೂ, ಗುರುಗಳನ್ನೂ, ಸಂಬಂಧಿಬಾಂಧವರನ್ನು ಯುದ್ಧದಲ್ಲಿ ಕೊಲ್ಲುವುದು ಕ್ಷತ್ರಿಯರಿಗೆ ಧರ್ಮವೇ ಆಗುತ್ತದೆ.

ಸಮಯತ್ಯಾಗಿನೋ ಲುಬ್ಧಾನ್ ಗುರೂನಪಿ ಚ ಕೇಶವ।
ನಿಹಂತಿ ಸಮರೇಪಾಪಾನ್ ಕ್ಷತ್ರಿಯೋ ಯಃ ಸ ಧರ್ಮವಿತ್ ॥೧೬॥

ಎಲೈ ಕೇಶವನೇ! ಧರ್ಮವನ್ನು ತಿಳಿದ ಕ್ಷತ್ರಿಯನು ಮಾಡಿಕೊಂಡ ಒಪ್ಪಂದವನ್ನು ಮುರಿದ ಲೋಭಿಗಳಾದ ಪಾಪಿಗಳಾದ ಗುರುಗಳನ್ನೂ ಯುದ್ಧದಲ್ಲಿ ಕೊಲ್ಲುತ್ತಾನೆ.

ಲೋಹಿತೋದಾಂ ಕೇಶತೃಣಾಂ ಗಜಶೈಲಾಂ ಧ್ವಜದ್ರುಮಾಮ್।
ಮಹೀಂ ಕರೋತಿ ಯುದ್ಧೇಷು ಕ್ಷತ್ರಿಯೋ ಯಃ ಸ ಧರ್ಮವಿತ್ ॥೧೭॥

ಯಾವನು ಭೂಮಿಯಲ್ಲಿ ರಕ್ತದ ಪ್ರವಾಹವಿರುವ, ಕೇಶವೆಂಬ ತೃಣಗಳನ್ನು ಹೊಂದಿದ, ಗಜಗಳೆಂಬ ಪರ್ವತಗಳನ್ನು ಹೊಂದಿದ, ಧ್ವಜಗಳೆಂಬ ದ್ರುಮವನ್ನು ಹೊಂದಿದೆ ನದಿಯನ್ನು ಹರಿಸುತ್ತಾನೆಯೋ ಅಂತಹ ಕ್ಷತ್ರಿಯನು ಧರ್ಮವನ್ನು ತಿಳಿದವನಾಗುತ್ತಾನೆ.

ಆಹೂತೇನ ರಣೇ ನಿತ್ಯಂ ಯೋದ್ಧವ್ಯಂ ಕ್ಷತ್ರಬಂಧುನಾ।
ಧರ್ಮ್ಯಂ ಸ್ವರ್ಗ್ಯಂ ಚ ಲೋಕ್ಯಂ ಚ ಯುದ್ಧಂ ಹಿ ಮನುರಬ್ರವೀತ್ ॥೧೮॥

ಕ್ಷತ್ರಿಯನಾದವನು ಯುದ್ಧಕ್ಕೆ ಆಹ್ವಾನಿಸಲ್ಪಟ್ಟರೆ ಅವಶ್ಯವಾಗಿ ಯುದ್ಧವನ್ನು ಮಾಡಬೇಕು. ಅಂತಹ ಯುದ್ಧವು ಧರ್ಮಪ್ರದವಾದುದು, ಸ್ವರ್ಗಪ್ರದವಾದುದು, ಮತ್ತು ಪರಲೋಕಪ್ರದವೂ ಆದುದು ಎಂದು ಮನುವು ಹೇಳಿದ್ದಾನೆ.

ವೈಶಂಪಾಯನಃ

ಏವಮುಕ್ತಸ್ತು ಭೀಷ್ಮೇಣ ಧರ್ಮರಾಜೋ ಯುಧಿಷ್ಠಿರಃ।
ವಿನೀತವದುಪಾಗಮ್ಯ ತಸ್ಥೌ ಸಂದರ್ಶನೇऽಗ್ರತಃ ॥೧೯॥

ವೈಶಂಪಾಯನರು – ಭೀಷ್ಮರಿಂದ ಹೀಗೆ ಹೇಳಲ್ಪಟ್ಟ ಧರ್ಮರಾಜನಾದ ಯುಧಿ-ಷ್ಠಿರನು ವಿನಯದಿಂದ ಮುಂದೆ ಬಂದು ಅವರ ದೃಷ್ಟಿಗೆ ಗೋಚರವಾಗುವಂತೆ ಎದುರಿಗೆ ನಿಂತನು.

ಅಥಾಸ್ಯ ಪಾದೌ ಜಗ್ರಾಹ ಭೀಷ್ಮಶ್ಚಾಭಿನನಂದ ತಮ್ ।
ಮೂರ್ಧ್ನಿ ಚೈನಮುಪಾಘ್ರಾಯ ನಿಷೀದೇತ್ಯಬ್ರವೀತ್ ತದಾ ॥೨೦॥

ಅನಂತರ ಅವನು ಅವರ ಪಾದಗಳಿಗೆ ನಮಸ್ಕರಿಸಿದನು. ಭೀಷ್ಮರು ಅವನನ್ನು ಅಭಿನಂದಿಸಿದರು. ಅವನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ, ಕುಳಿತುಕೋ ಎಂದು ಹೇಳಿದರು.

ತಮುವಾಚಾಥ ಗಾಂಗೇಯ ಋಷಭಃ ಸರ್ವಧನ್ವಿನಾಮ್ ।
ಪೃಚ್ಛ ಮಾಂ ತಾತ ವಿಸ್ರಬ್ಧಂ ಮಾ ಭೈಸ್ತ್ವಂ ಕುರುಸತ್ತಮ ॥೨೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚಪಂಚಾಶೋऽಧ್ಯಾಯಃ ॥೫೫॥

ಅನಂತರ ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠರಾದ, ಗಂಗಾಪುತ್ರರಾದ ಭೀಷ್ಮರು ಎಲೈ ಪ್ರೀತಿಪಾತ್ರನೇ! ಕುರುಶ್ರೇಷ್ಠನೇ! ಹೆದರಬೇಡ. ವಿಶ್ವಾಸದಿಂದ ಪ್ರಶ್ನೆಗಳನ್ನು ಕೇಳು ಎಂದು ಅವನನ್ನು ಕುರಿತು ಹೇಳಿದರು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೫ನೆಯ ಅಧ್ಯಾಯವು ಮುಗಿಯಿತು.

—0—

೫೬. ಐವತ್ತಾರನೆಯ ಅಧ್ಯಾಯ

ವೈಶಂಪಾಯನಃ

ಭೀಷ್ಮರಿಂದ ರಾಜಧರ್ಮಕಥನ

ಪ್ರಣಿಪತ್ಯ ಹೃಷೀಕೇಶಮಭಿವಾದ್ಯ ಪಿತಾಮಹಮ್ ।
ಅನುಮಾನ್ಯ ಗುರೂನ್ ಸರ್ವಾನ್ ಪರ್ಯಪೃಚ್ಛದ್ ಯುಧಿಷ್ಠಿರಃ ॥೧॥

ವೈಶಂಪಾಯನರು – ಯುಧಿಷ್ಠಿರನು ಹೃಷೀಕೇಶನಾದ ಕೃಷ್ಣನಿಗೆ ನಮಸ್ಕರಿಸಿ, ಪಿತಾಮಹರಾದ ಭೀಷ್ಮರನ್ನು ನಮಸ್ಕರಿಸಿ, ಎಲ್ಲ ಗುರುಗಳ ಅನುಮತಿಯನ್ನು ಪಡೆದು ಪ್ರಶ್ನೆಯನ್ನು ಮಾಡಿದನು.

ರಾಜ್ಯಂ ವೈ ಪರಮೋ ಧರ್ಮ ಇತಿ ಧರ್ಮವಿದೋ ವಿದುಃ।
ಮಹಾಂತಮೇತಂ ಭಾರಂ ಚ ಮನ್ಯೇ ತದ್ ಬ್ರೂಹಿ ಪಾರ್ಥಿವ ॥೨॥

ಧರ್ಮವನ್ನು ತಿಳಿದವರು ರಾಜ್ಯಪಾಲನೆಯು ಶ್ರೇಷ್ಠವಾದ ಧರ್ಮವೆಂದು ತಿಳಿಯುತ್ತಾರೆ (ಹೇಳುತ್ತಾರೆ). ಈ ಭಾರವು ಬಹಳ ದೊಡ್ಡದಾದುದು ಎಂದು ನನ್ನ ಅಭಿಪ್ರಾಯ. ಎಲೈ ರಾಜನೇ! ಅದನ್ನು ನನಗೆ ಹೇಳು.

ರಾಜಧರ್ಮಾನ್ ವಿಶೇಷೇಣ ಕಥಯಸ್ವ ಪಿತಾಮಹ।
ಸರ್ವಸ್ಯ ಜೀವಲೋಕಸ್ಯ ರಾಜಧರ್ಮಾಃ ಪರಾಯಣಮ್ ॥೩॥

ಎಲೈ ಪಿತಾಮಹನೇ! ರಾಜಧರ್ಮವನ್ನು ವಿಶೇಷವಾಗಿ ಹೇಳು. ಎಲ್ಲ ಜೀವಲೋಕಕ್ಕೆ ರಾಜಧರ್ಮಗಳೇ ಶ್ರೇಷ್ಠವಾದ ಆಸರೆ.

ತ್ರಿವರ್ಗೋ೯ತ್ರ ಸಮಾಸಕ್ತೋ ರಾಜಧರ್ಮೇಷು ಕೌರವ।
ಮೋಕ್ಷಧರ್ಮಶ್ಚ ವಿಸ್ಪಷ್ಟಃ ಸಕಲೋ೯ತ್ರ ಸಮಾಹಿತಃ ॥೪॥

ಎಲೈ ಕೌರವನೇ! ರಾಜಧರ್ಮವನ್ನು ಧರ್ಮಾರ್ಥಕಾಮರೂಪವಾದ ತ್ರಿವರ್ಗವು ಅವಲಂಬಿಸಿದೆ. ಸಕಲವಾದ ಮೋಕ್ಷಧರ್ಮವೂ ಕೂಡ ಸ್ಪಷ್ಟವಾಗಿ ರಾಜಧರ್ಮವನ್ನು ಅವಲಂಬಿಸಿದೆ.

ಯಥಾ ಹಿ ರಶ್ಮಯೋ೯ಶ್ವಸ್ಯ ದ್ವಿರದಸ್ಯಾಂಕುಶೋ ಯಥಾ।
ನರೇಂದ್ರಧರ್ಮೋ ಲೋಕಸ್ಯ ತಥಾ ಪ್ರಗ್ರಹಣಂ ಸ್ಮೃತಮ್ ॥೫॥

ಕುದುರೆಗೆ ಕಡಿವಾಣಗಳಿದ್ದಂತೆ, ಆನೆಗೆ ಅಂಕುಶವಿದ್ದಂತೆ ರಾಜಧರ್ಮವು ಲೋಕಕ್ಕೆ ಕಡಿವಾಣವೆಂದು ಹೇಳಲ್ಪಡುತ್ತದೆ.

ಅತ್ರ ವೈ ಸಂಪ್ರಮೂಢೇ ತು ಧರ್ಮೇ ರಾಜರ್ಷಿಸೇವಿತೇ।
ಲೋಕಸ್ಯ ಸಂಸ್ಥಾ ನ ಭವೇತ್ ಸರ್ವಂ ಚ ವ್ಯಾಕುಲಂ ಭವೇತ್ ॥೬॥

ರಾಜರ್ಷಿಗಳಿಂದ ಸೇವಿತವಾದ ಅಂತಹ ರಾಜಧರ್ಮವು ಮಲಿನವಾದರೆ ಲೋಕಯಾತ್ರೆಯು ನಡೆಯಲಾರದು. ಎಲ್ಲವೂ ವ್ಯಾಕುಲಗೊಂಡೀತು!

ಉದಯನ್ ಹಿ ಯಥಾ ಸೂರ್ಯೋ ನಾಶಯತ್ಯಾಸುರಂ ತಮಃ।
ರಾಜಧರ್ಮಾಸ್ತಥಾಲೋಕ್ಯಾಮಾಕ್ಷಿಪಂತ್ಯಶುಭಾಂ ಗತಿಮ್ ॥೭॥

ಸೂರ್ಯನು ಉದಯಿಸುತ್ತಾ ಹೇಗೆ ಕತ್ತಲೆಯನ್ನು ನಾಶ ಪಡಿಸುತ್ತಾನೋ, ಅದರಂತೆ ರಾಜಧರ್ಮಗಳು ಲೋಕಸಂಬಂಧಿಯಾದ ಅಶುಭಗತಿಯನ್ನು ನಿವಾರಿಸುತ್ತವೆ.

ತದಗ್ರೇ ರಾಜಧರ್ಮಾಣಾಮರ್ಥತತ್ತ್ವಂ ಪಿತಾಮಹ।
ಪ್ರಬ್ರೂಹಿ ಭರತಶ್ರೇಷ್ಠ ತ್ವಂ ಹಿ ಬುದ್ಧಿಮತಾಂ ವರಃ ॥೮॥

ಆದ್ದರಿಂದ ಎಲೈ ಪಿತಾಮಹನೇ! ಭರತಶ್ರೇಷ್ಠನೇ! ರಾಜಧರ್ಮಗಳ ಸರಿಯಾದ ತತ್ವವನ್ನು ಹೇಳುವವನಾಗು. ನೀನು ಬುದ್ಧಿವಂತರಲ್ಲಿ ಶ್ರೇಷ್ಠನಾದವನಷ್ಟೇ.

ಆಗಮಶ್ಚ ಪರಸ್ತ್ವತ್ತಃ ಸರ್ವೇಷಾಂ ನಃ ಪರಂತಪ।
ಭವಂತಂ ಹಿ ಪರಂ ಬುದ್ಧ್ಯಾ ವಾಸುದೇವೋಽಭಿಮನ್ಯತೇ ॥೯॥

ಎಲೈ ಪರಂತಪನೇ! ನಿನ್ನಿಂದಲೇ ನಮ್ಮೆಲ್ಲರಿಗೂ ಜ್ಞಾನಲಾಭವಾಗಬೇಕಾಗಿದೆ. ಕೃಷ್ಣನು ನಿನ್ನನ್ನು ಬುದ್ಧಿಯಲ್ಲಿ ಶ್ರೇಷ್ಠನಾದವನೆಂದು ಅಭಿಪ್ರಾಯ ಪಡುತ್ತಾನೆ.

ಭೀಷ್ಮಃ

ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್ ॥೧೦॥

ಭೀಷ್ಮರು – ಮಹತ್ತಾದ ಧರ್ಮಕ್ಕೆ ನಮಸ್ಕಾರ. ಸರ್ವಕರ್ತನಾದ ಕೃಷ್ಣನಿಗೆ ನಮಸ್ಕಾರ. ಬ್ರಾಹ್ಮಣರನ್ನು ನಮಸ್ಕರಿಸಿ ಶಾಶ್ವತವಾದ ಧರ್ಮಗಳನ್ನು ಹೇಳುವೆನು.

ಶೃಣು ಕಾರ್ತ್ಸ್ನ್ಯೇನ ಮತ್ತಸ್ತ್ವಂ ರಾಜಧರ್ಮಾನ್ ಯುಧಿಷ್ಠಿರ।
ನಿರುಚ್ಯಮಾನಾನ್ ನಿಯತೋ ಯಚ್ಚಾನ್ಯದಭಿವಾಂಛಸಿ ॥೧೧॥

ಎಲೈ ಯುಧಿಷ್ಠಿರನೇ! ನೀನು ನಾನು ಹೇಳುವ ರಾಜಧರ್ಮಗಳನ್ನು ಮತ್ತು ನೀನು ಬಯಸುವ ಬೇರೆ ವಿಷಯಗಳನ್ನು ಸಮಗ್ರವಾಗಿ ಹೇಳುವುದನ್ನು ನಿಯಮದಿಂದ ಕೂಡಿದವನಾಗಿ ಕೇಳು.

ಆದಾವೇವ ಕುರುಶ್ರೇಷ್ಠ ರಾಜಾ ರಂಜನಕಾಮ್ಯಯಾ।
ದೇವತಾನಾಂ ದ್ವಿಜಾನಾಂ ಚ ವರ್ತಿತವ್ಯಂ ಯಥಾವಿಧಿ ॥೧೨॥

ಎಲೈ ಕುರುಶ್ರೇಷ್ಠನೇ! ರಾಜನು ಪ್ರಜೆಗಳನ್ನು ರಂಜಿಸುವ ಕಾಮನೆಯಿಂದ ಮೊದಲು ದೇವತೆಗಳ ಮತ್ತು ಬ್ರಾಹ್ಮಣರ ವಿಷಯದಲ್ಲಿ ಸರಿಯಾದ ವಿಧಾನದಿಂದ ನಡೆದುಕೊಳ್ಳಬೇಕು.

ದೇವತಾನ್ಯರ್ಚಯಿತ್ವಾ ಹಿ ಬ್ರಾಹ್ಮಣಾಂಶ್ಚ ಕುರೂದ್ವಹ।
ಆನೃಣ್ಯಂ ಯಾತಿ ಧರ್ಮಸ್ಯ ಲೋಕೇನ ಚ ಸ ಮಾನ್ಯತೇ ॥೧೩॥

ಎಲೈ ಕುರೂದ್ವಹನೇ! ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ಪೂಜಿಸುವವನು ಧರ್ಮದ ಋಣದಿಂದ ಮುಕ್ತನಾಗುತ್ತಾನೆ. ಮತ್ತು ಲೋಕವು ಅವನನ್ನು ಗೌರವಿಸುತ್ತದೆ.

ಉತ್ಥಾನೇ ಚ ಸದಾ ಪುತ್ರ ಪ್ರಯತೇಥಾ ಯುಧಿಷ್ಠಿರ।
ನಹ್ಯುತ್ಥಾನಮೃತೇ ದೈವಂ ರಾಜ್ಞಾಮರ್ಥಂ ಪ್ರಸಾಧಯೇತ್ ॥೧೪॥

ಎಲೈ ಯುಧಿಷ್ಠಿರನೇ! ಪುತ್ರನೇ! ಯಾವಾಗಲೂ ರಾಜಯೋಗ್ಯವಾದ ರಾಜ್ಯಪಾಲನಾದಿ ಪುರುಷಪ್ರಯತ್ನದಲ್ಲಿ ಯಾವಾಗಲೂ ಪ್ರಯತ್ನಿಸು. ಇಲ್ಲದಿದ್ದರೆ ದೈವವು ರಾಜರಿಗೆ ಅರ್ಥವನ್ನು ಸಾಧಿಸಿಕೊಡಲಾರದು.

ಸಾಧಾರಣಂ ದ್ವಯಂ ಹ್ಯೇತತ್ ದೈವಮುತ್ಥಾನಮೇವ ಚ।
ಪೌರುಷಂ ಹಿ ಪರಂ ಮನ್ಯೇ ದೈವಂ ನಿಶ್ಚಿತ್ಯಮುಚ್ಯತೇ ॥೧೫॥

ಎಲ್ಲ ಕರ್ಮಗಳಿಗೂ ದೈವ ಮತ್ತು ಪುರುಷಪ್ರಯತ್ನಗಳು ಸಾಧಾರಣವಾದ ಕಾರಣವಾಗಿವೆ. ಅವುಗಳಲ್ಲಿ ಪುರುಷಪ್ರಯತ್ನವು ಶ್ರೇಷ್ಠವಾದುದೆಂದು ತಿಳಿಯುತ್ತೇನೆ. ಪುರುಷಪ್ರಯತ್ನವನ್ನು ಮಾಡಿ ದೈವವನ್ನು ಹುಡುಕಬೇಕು. (ನಿರೀಕ್ಷಿಸಬೇಕು).

ವಿಪನ್ನೇ ಚ ಸಮಾರಂಭೇ ಸಂತಾಪಂ ಮಾ ಸ್ಮ ವೈ ಕೃಥಾಃ।
ಘಟೇತ ಚ ಸದಾऽऽತ್ಮಾನಂ ರಾಜ್ಞಾಮೇಷ ನಯಃ ಪರಃ ॥೧೬॥

ಒಂದು ಪ್ರಯತ್ನವು ವಿಫಲವಾದರೆ ಸಂತಾಪ ಪಡಬೇಡ. ಅದನ್ನು ಮಾಡಲು ಪುನಃ ಪ್ರಯತ್ನಿಸು. ಇದು ರಾಜರ ಶ್ರೇಷ್ಠವಾದ ನೀತಿ.

ನ ಹಿ ಸತ್ಯಾದೃತೇ ಕಿಂಚಿದ್ ರಾಜ್ಞಾಂ ವೈ ಸಿದ್ಧಿಕಾರಣಮ್।
ಸತ್ಯೇ ಹಿ ರಾಜಾ ನಿರತಃ ಪ್ರೇತ್ಯ ಚೇಹ ಹಿ ನಂದತಿ ॥೧೭॥

ಸತ್ಯವನ್ನು ಬಿಟ್ಟು ರಾಜರಿಗೆ ಸಿದ್ಧಿಯನ್ನುಂಟುಮಾಡುವ ಬೇರೆ ಯಾವ ಕಾರಣವೂ ಇಲ್ಲ. ಸತ್ಯದಲ್ಲಿ ನಿರತನಾದ ರಾಜನು ಈ ಲೋಕದಲ್ಲಿಯೂ ಮತ್ತು ಮರಣಾನಂತರ ಪರಲೋಕದಲ್ಲಿಯೂ ಸುಖದಿಂದಿರುತ್ತಾನೆ.

ಋಷೀಣಾಮಪಿ ರಾಜೇಂದ್ರ ಸತ್ಯಮೇವ ಪರಂ ಧನಮ್।
ತಥಾ ರಾಜ್ಞಃ ಪರಂ ಸತ್ಯಾನ್ನಾನ್ಯದ್ ವಿಶ್ವಾಸಕಾರಣಮ್ ॥೧೮॥

ಎಲೈ ರಾಜೇಂದ್ರನೇ! ಋಷಿಗಳಿಗೂ ಸಹ ಸತ್ಯವೇ ಶ್ರೇಷ್ಠವಾದ ಧನ. ಹಾಗೆಯೇ ರಾಜನಲ್ಲಿ ವಿಶ್ವಾಸ ಮಾಡುವುದಕ್ಕೆ ಸತ್ಯಕ್ಕಿಂತ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ.

ಗುಣವಾನ್ ಶೀಲವಾನ್ ದಾಂತೋ ಮೃದುರ್ಧರ್ಮ್ಯೋ ಜಿತೇಂದ್ರಿಯಃ।
ಸುದರ್ಶಃ ಸ್ಥೂಲಲಕ್ಷ್ಯಶ್ಚ ನ ಭ್ರಶ್ಯೇತ ಸದಾ ಶ್ರಿಯಃ ॥೧೯॥

ಗುಣವಂತನೂ ಶೀಲವಂತನೂ ಇಂದ್ರಿಯನಿಗ್ರಹವುಳ್ಳವನೂ ಮೃದುವೂ ಧರ್ಮಶೀಲನೂ ಜಿತೇಂದ್ರಿಯನೂ ಸುಲಭವಾಗಿ ನೋಡಲು ಸಾಧ್ಯವಾಗುವವನೂ ಪುಣ್ಯಕೀರ್ತಿಯುಳ್ಳವನೂ ಆದ ರಾಜನು ಸಂಪತ್ತನ್ನು ಕಳೆದುಕೊಳ್ಳುವುದಿಲ್ಲ. (ಲಕ್ಷ್ಮಲಂಕಾರ)

ಆರ್ಜವಂ ಸರ್ವಕಾರ್ಯೇಷು ಶ್ರಯೇಥಾಃ ಕುರುನಂದನ।
ಪುನರ್ನಯವಿಚಾರೇಣ ತ್ರಯೀಸಂವರಣೇನ ಚ ॥೨೦॥

ಎಲೈ ಕುರುನಂದನನೇ! ಎಲ್ಲ ಕಾರ್ಯಗಳಲ್ಲಿಯೂ ರಾಜನೀತಿಯನ್ನು ವಿಚಾರ ಮಾಡಿ ವಿವಿಧಮಾರ್ಗವನ್ನು ವಿಚಾರ ಮಾಡಿ ಆರ್ಜವವನ್ನು (ನೇರತನವನ್ನು) ಹೊಂದುವವನಾಗು. ಶಾಂತರಾಗಿರುವ ದ್ವಿಜಶ್ರೇಷ್ಠರು ಭೂಮಿಯಲ್ಲಿ ವೇದವನ್ನು ಧರಿಸಿರುತ್ತಾರೆ.

ಮೃದುರ್ಹಿ ರಾಜಾ ಸತತಂ ಲಂಘ್ಯೋ ಭವತಿ ಸರ್ವಶಃ।
ತೀಕ್ಷ್ಣಶ್ಚೋದ್ವಿಜತೇ ಲೋಕಸ್ತಸ್ಮಾದುಭಯಮಾಚರ ॥೨೧॥

ಮೃದುವಾದ ರಾಜನು ಯಾವಾಗಲೂ ಎಲ್ಲರಿಂದಲೂ ಉಲ್ಲಂಘಿಸಲ್ಪಡುತ್ತಾನೆ. ರಾಜನು ಉಗ್ರನಾಗಿದ್ದರೆ ಲೋಕವು ಹೆದರುತ್ತದೆ. ಆದ್ದರಿಂದ ಬಹಳ ಮೃದು-ವಾಗದೆ ಬಹಳ ಉಗ್ರನಾಗದೆ ಮೃದುವೂ ಉಗ್ರನೂ ಆಗಿರಬೇಕು.

ಅದಂಡ್ಯಾಶ್ಚೈವ ತೇ ನಿತ್ಯಂ ವಿಪ್ರಾಃ ಸ್ಯುರ್ದದತಾಂವರ।
ಭೂತಮೇತತ್ ಪರಂ ಲೋಕೇ ಬ್ರಾಹ್ಮಣಾ ನಾಮ ಭಾರತ ॥೨೨॥

ಎಲೈ ದಾನಮಾಡುವವರಲ್ಲಿ ಶ್ರೇಷ್ಠನಾದವನೇ! ಬ್ರಾಹ್ಮಣರು ದಂಡನೆಗೆ ಅರ್ಹರಾದವರಲ್ಲ. ಎಲೈ ಭಾರತನೇ! ಬ್ರಾಹ್ಮಣರು ಲೋಕದಲ್ಲಿ ದೊಡ್ಡ ವಸ್ತು-ಗಳೆನಿಸುವವರು.

ಮನುನಾ ಚಾಪಿ ರಾಜೇಂದ್ರ ಗೀತೌ ಶ್ಲೋಕೌ ಮಹಾತ್ಮನಾ।
ಧರ್ಮೇಷು ಸ್ವೇಷು ಕೌರವ್ಯ ಹೃದಿ ತೌ ಕರ್ತುಮರ್ಹಸಿ ॥೨೩॥

ಎಲೈ ರಾಜೇಂದ್ರನೇ! ಮಹಾತ್ಮನಾದ ಮನುವೂ ಸಹ ಈ ವಿಷಯದಲ್ಲಿ ಎರಡು ಶ್ಲೋಕಗಳನ್ನು ಹಾಡಿದ್ದಾನೆ. ಎಲೈ ಕೌರವ್ಯನೇ! ನಿನ್ನ ಧರ್ಮಾಚರಣೆಗಳಲ್ಲಿ ಆ ಎರಡು ಶ್ಲೋಕಗಳನ್ನು ಮನಸ್ಸಿನಲ್ಲಿಟ್ಟುಕೊಂಡಿರು.

ಅದ್ಭ್ಯೋಽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್ ।
ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥೨೪॥

ಜಲದಿಂದ ಅಗ್ನಿಯು, ಬ್ರಾಹ್ಮಣರಿಂದ ಕ್ಷತ್ರಿಯರು, ಶಿಲೆಯಿಂದ ಲೋಹವು ಉತ್ಪನ್ನವಾಗುತ್ತವೆ. ಉಳಿದೆಲ್ಲ ಕಡೆ ಇರುವ ಅವುಗಳ ತೇಜಸ್ಸುಗಳು ತಮ್ಮ ಮೂಲ ಕಾರಣದಲ್ಲಿ ನಾಶವನ್ನು ಹೊಂದುತ್ತವೆ.

ಅಯೋ ಹಂತಿ ಯದಾಶ್ಮಾನಮಗ್ನಿಶ್ಚಾಪ್ಪೋಽಭಿಪದ್ಯತೇ ।
ಬ್ರಹ್ಮ ಚ ಕ್ಷತ್ರಿಯೋ ದ್ವೇಷ್ಟಿ ತದಾ ಸೀದಂತಿ ತೇ ತ್ರಯಃ ॥೨೫॥

ಕಬ್ಬಿಣವು ಯಾವಾಗ ಶಿಲೆಯನ್ನು ಹೊಡೆಯುತ್ತದೆಯೋ, ಅಗ್ನಿಯು ಯಾವಾಗ ನೀರಿನಲ್ಲಿ ಸೇರುತ್ತದೆಯೋ, ಕ್ಷತ್ರಿಯನು ಬ್ರಾಹ್ಮಣನ ದ್ವೇಷ ಮಾಡುತ್ತಾನೆಯೋ ಆಗ ಕಬ್ಬಿಣವು ಅಗ್ನಿಯೂ ಮತ್ತು ಕ್ಷತ್ರಿಯನೂ ನಾಶವನ್ನು ಹೊಂದುತ್ತಾರೆ.

ಏತಜ್ಜ್ಞಾತ್ವಾ ಮಹಾರಾಜ ನಮಸ್ಯಾ ಏವ ತೇ ದ್ವಿಜಾಃ ।
ಭೌಮಂ ಬ್ರಹ್ಮ ದ್ವಿಜಶ್ರೇಷ್ಠಾ ಧಾರಯಂತಿ ಶಮಾನ್ವಿತಾಃ ॥೨೬॥

ಎಲೈ ಮಹಾರಾಜನೇ! ಇದನ್ನು ತಿಳಿದು ನೀನು ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡಲೇಬೇಕು. ಶಾಂತರಾದ ಬ್ರಾಹ್ಮಣಶ್ರೇಷ್ಠರು ಭೂಮಿಯಲ್ಲಿರುವ ವೇದವನ್ನು ಧರಿಸಿರುತ್ತಾರೆ.

ಏವಂ ಚೈವ ನರವ್ಯಾಘ್ರ ಲೋಕತಂತ್ರವಿಘಾತಕಾಃ ।
ನಿಗ್ರಾಹ್ಯಾ ಏವ ಸತತಂ ಬಾಹುಭ್ಯಾಂ ಯೇ ಸ್ಯುರೀದೃಶಾಃ ॥೨೭॥

ಆದರೂ ಸಹ ಎಲೈ ನರವ್ಯಾಘ್ರನೇ! ಬ್ರಾಹ್ಮಣರು ಲೋಕಯಾತ್ರಾವಿನಾಶಕರಾದರೆ ಅವರನ್ನು ಬಾಹುಬಲದಿಂದ ಸತತವಾಗಿ ನಿಗ್ರಹಿಸಲೇ ಬೇಕು.

ಶ್ಲೋಕೌ ಚೌಶನಸಾ ಗೀತೌ ಪುರಾ ತಾತ ಮಹರ್ಷಿಣಾ ।
ತೌ ನಿಬೋಧ ಮಹಾಪ್ರಾಜ್ಞ ತ್ವಮೇಕಾಗ್ರಮನಾ ನೃಪ ॥೨೮॥

ಎಲೈ ಪ್ರೀತಿಪಾತ್ರನೇ! ಮಹರ್ಷಿಗಳಾದ ಶುಕ್ರಾಚಾರ್ಯರು ಈ ವಿಷಯದಲ್ಲಿ ಎರಡು ಶ್ಲೋಕಗಳನ್ನು ಹೇಳಿದ್ದಾರೆ. ಎಲೈ ಮಹಾಪ್ರಾಜ್ಞನೇ! ರಾಜನೇ! ಏಕಾಗ್ರವಾದ ಮನಸ್ಸಿನಿಂದ ಅವುಗಳನ್ನು ಕೇಳು.

ಉದ್ಯಮ್ಯ ಶಸ್ತ್ರಮಾಯಾಂತಮಪಿ ವೇದಾಂತಗಂ ರಣೇ ।
ನಿಗೃಹ್ಣೀಯಾತ್ ಸ್ವಧರ್ಮೇಣ ಧರ್ಮಾಪೇಕ್ಷೀ ನರೇಶ್ವರಃ ॥೨೯॥

ವೇದಾಂತಪಾರಂಗತನಾದ ಬ್ರಾಹ್ಮಣನು ಶಸ್ತ್ರವನ್ನು ಹಿಡಿದು ಯುದ್ಧದಲ್ಲಿ ಎದುರಾಗಿ ಬಂದರೆ ಧರ್ಮಾಪೇಕ್ಷಿಯಾದ ರಾಜನು ತನ್ನ ಧರ್ಮಕ್ಕೆ ಅನುಸಾರವಾಗಿ ಅವನನ್ನು ನಿಗ್ರಹಿಸಬೇಕು. ಯುದ್ಧವನ್ನು ಬಿಟ್ಟು ಬೇರೆ ಸಂದರ್ಭದಲ್ಲಿ ಶಸ್ತ್ರವನ್ನು ಹಿಡಿದು ಬಂದ ಬ್ರಾಹ್ಮಣನನ್ನು ಬಂಧಿಸಬೇಕು. (ಯುದ್ಧದಲ್ಲಿ ಮಾತ್ರ ಅಂತಹ ಬ್ರಾಹ್ಮಣನು ಕ್ಷತ್ರಿಯ ವೃತ್ತಿಯನ್ನು ಅನುಸರಿಸುವುದರಿಂದ ಅವನನ್ನು ಕೊಲ್ಲಬಹುದು ಎಂದು ಅಭಿಪ್ರಾಯ.)

ವಿನಶ್ಯಮಾನಂ ಧರ್ಮಂ ಹಿ ಯೋ ರಕ್ಷತಿ ಸ ಧರ್ಮವಿತ್ ।
ನ ತೇನ ಧರ್ಮಹಾ ಸ ಸ್ಯಾನ್ಮನ್ಯುಸ್ತಂ ಮನ್ಯುಮೃಚ್ಛತಿ ॥೩೦॥

ಆ ರೀತಿಯಲ್ಲಿ ಬ್ರಾಹ್ಮಣವಧೆಯನ್ನು ಮಾಡುವುದರಿಂದ ರಾಜನು ಧರ್ಮ-ನಾಶವನ್ನು ಮಾಡಿದವನಾಗುವುದಿಲ್ಲ. ರಾಜನ ಕೋಪವು ಬ್ರಾಹ್ಮಣನ ಕೋಪವನ್ನು ನುಂಗುತ್ತದೆ. ವಿನಾಶಗೊಳ್ಳುತ್ತಿರುವ ಧರ್ಮವನ್ನು ಯಾವನು ರಕ್ಷಿಸುತ್ತಾನೋ ಅವನೇ ಧರ್ಮವನ್ನು ತಿಳಿದವನು.

ಏವಂ ಚೈವ ನರಶ್ರೇಷ್ಠ ರಕ್ಷ್ಯಾ ಏವ ದ್ವಿಜಾತಯಃ ।
ಸ್ವಪರಾದ್ಧಾನಪಿ ಹಿ ತಾನ್ ವಿಷಯಾಂತೇ ಸಮುತ್ಸೃಜೇತ್ ॥೩೧॥

ಎಲೈ ನರಶ್ರೇಷ್ಠನೇ! ಹಾಗಾದರೂ ಬ್ರಾಹ್ಮಣರು ರಕ್ಷಿಸಲ್ಪಡಬೇಕಾದವರೇ.

ಬಹಳ ಅಪರಾಧವನ್ನು ಮಾಡಿದ ಬ್ರಾಹ್ಮಣರನ್ನು ರಾಜ್ಯದಿಂದ ಹೊರಗೆ ಕಳುಹಿಸಬೇಕು. ಯುದ್ಧಪ್ರಸಂಗವಿಲ್ಲದಿದ್ದರೆ ಅವರನ್ನು ಕೊಲ್ಲಬಾರದು ಎಂದು ಅಭಿಪ್ರಾಯ.

ಅಭಿಶಸ್ತಮಪಿ ಹ್ಯೇಷಾಂ ಕೃಪಾಯೀತ ವಿಶಾಂಪತೇ।
ಬ್ರಹ್ಮಘ್ನೇ ಗುರುತಲ್ಪೇ ಚ ಭ್ರೂಣಹತ್ಯೇ ತಥೈವ ಚ ॥೩೨॥

ಎಲೈ ರಾಜನೇ! ಅವನು ಬ್ರಹ್ಮಹತ್ಯವನ್ನಾಗಲೀ, ಗುರುತಲ್ಪಗಮನವನ್ನಾಗಲೀ, ಭ್ರೂಣಹತ್ಯೆಯನ್ನಾಗಲೀ ಮಾಡಿ ಎಲ್ಲ ರೀತಿಯಿಂದಲೂ ಶಾಸನಕ್ಕೆ ಯೋಗ್ಯನಾಗಿದ್ದರೂ ಅವನ ಮೇಲೆ ಕೃಪೆಯನ್ನು ತೋರಿಸಬೇಕು.

ರಾಜದ್ವಿಷ್ಟೇ ಚ ವಿಪ್ರಸ್ಯ ವಿಷಯಾಂತೇ ವಿವಾಸನಮ್।
ವಿಧೀಯತೇ ನ ಶಾರೀರಂ ಭಯಮೇಷಾಂ ಕಥಂಚನ ॥೩೩॥

ರಾಜನಿಗೆ ಅಪಚಾರವನ್ನು ಮಾಡಿದರೆ ಬ್ರಾಹ್ಮಣನನ್ನು ದೇಶದಿಂದ ಗಡೀಪಾರು ಮಾಡಬೇಕೆಂದು ವಿಧಿಸಲ್ಪಡುತ್ತದೆ. ಅವರಿಗೆ ಎಂದೂ ದೇಹದಂಡನೆಯನ್ನು ಉಂಟು ಮಾಡಬಾರದು.

ದಯಿತಾಶ್ಚ ನರಾಸ್ತೇ ಸ್ಯುರ್ನಿತ್ಯಂ ಪುರುಷಸತ್ತಮ।
ನ ಕೋಶಃ ಪರಮೋ ಹ್ಯನ್ಯೋ ರಾಜ್ಞಾಂ ಪುರುಷಸಂಚಯಾತ್ ॥೩೪॥

ಎಲೈ ಪುರುಷಶ್ರೇಷ್ಠನೇ! ಬ್ರಾಹ್ಮಣರು ನಿತ್ಯವೂ ರಾಜನಿಗೆ ಪ್ರಿಯರಾದವರಾಗಿರಬೇಕು. ರಾಜರಿಗೆ ತಮ್ಮಲ್ಲಿ ಪ್ರೀತಿಯುಳ್ಳ ಪುರುಷರನ್ನು ಸಂಗ್ರಹಿಸುವುದಕ್ಕಿಂತ ಶ್ರೇಷ್ಠವಾದ ಇನ್ನೊಂದು ಕೋಶವು ಇರುವುದಿಲ್ಲ.

ದುರ್ಗೇಷು ಚ ಮಹಾರಾಜ ಷಟ್ಸು ಯೇ ಶಾಸ್ತ್ರನಿಶ್ಚಿತಾಃ।
ಸರ್ವೇಷು ತೇಷು ಮನ್ಯಂತೇ ನರದುರ್ಗಂ ಸುದುಸ್ತರಮ್ ॥೩೫॥

ಎಲೈ ಮಹಾರಾಜನೇ! ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ ಎಂಬ ಆರು ದುರ್ಗಗಳಿಗಿಂತಲೂ ದಾಟಲು ಅಸಾಧ್ಯವಾದ ಸೇನಾರೂಪವಾದ ಏಳನೆಯ ನರದುರ್ಗವು ಅತ್ಯಂತ ಶ್ರೇಷ್ಠವಾದುದೆಂದು ತಿಳಿಯುತ್ತಾರೆ.

ತಸ್ಮಾನ್ನಿತ್ಯಂ ದಯಾ ಕಾರ್ಯಾ ಚಾತುರ್ವರ್ಣ್ಯೇ ವಿಪಶ್ಚಿತಾ।
ಧರ್ಮಾತ್ಮಾ ಸತ್ಯವಾಕ್ ಚೈವ ರಾಜಾ ರಂಜಯತಿ ಪ್ರಜಾಃ ॥೩೬॥

ಆದ್ದರಿಂದ ವಿವೇಕಿಯಾದ ರಾಜನು ನಾಲ್ಕುವರ್ಣದವರ ಮೇಲೆಯೂ ಯಾವಾಗಲೂ ದಯೆಯನ್ನು ತೋರಿಸಬೇಕು. ಧರ್ಮಾತ್ಮನೂ ಸತ್ಯವಚನನೂ ಆದ ರಾಜನು ಪ್ರಜೆಗಳನ್ನು ರಂಜಿಸುತ್ತಾನೆ.

ನ ಚ ಕ್ಷಾಂತೇನ ತೇ ಭಾವ್ಯಂ ನಿತ್ಯಂ ಪುರುಷಸತ್ತಮ।
ಸುಧರ್ಷೋ ಹಿ ಮೃದೂ ರಾಜಾ ಕ್ಷಮಾವಾನಿವ ಕುಂಜರಃ ॥೩೭॥

ಎಲೈ ಪುರುಷಶ್ರೇಷ್ಠನೇ! ನೀನು ಯಾವಾಗಲೂ ಬಹಳ ಮೃದುವಾಗಿರಬಾರದು. ಮೃದುವಾಗಿರುವ ರಾಜನು ಶಾಂತವಾದ ಆನೆಯಂತೆ ಸುಲಭವಾಗಿ ಅವಮಾನ-ಗೊಳಿಸಲ್ಪಡುತ್ತಾನೆ.

ಬಾರ್ಹಸ್ಪತ್ಯೇ ಚ ಶಾಸ್ತ್ರೇ ವೈ ಶ್ಲೋಕೋ ವೈ ಗೀಯತೇ ಪುರಾ।
ಅಸ್ಮಿನ್ನರ್ಥೇ ಮಹಾರಾಜ ತನ್ಮೇ ನಿಗದತಃ ಶೃಣು ॥೩೮॥

ಎಲೈ ಮಹಾರಾಜನೇ! ಬೃಹಸ್ಪತ್ಯಾಚಾರ್ಯರು ರಚಿಸಿದ ಶಾಸ್ತ್ರದಲ್ಲಿ ಹಿಂದೆ ಈ ವಿಷಯದಲ್ಲಿ ಒಂದು ಶ್ಲೋಕವು ಹಾಡಲ್ಪಡುತ್ತದೆ. ನಾನು ಹೇಳುವ ಆ ಶ್ಲೋಕವನ್ನು ನೀನು ಕೇಳುವವನಾಗು.

ಕ್ಷಮಮಾಣಂ ನೃಪಂ ನಿತ್ಯಂ ನೀಚಃ ಪರಿಭವೇಜ್ಜನಃ।
ಹಸ್ತಿಯಂತಾ ಗಜಸ್ಯೇವ ಶಿರ ಏವಾರುರುಕ್ಷತಿ ॥೩೯॥

ಯಾವಾಗಲೂ ಕ್ಷಮಾಶೀಲನಾದ ರಾಜನನ್ನು ನೀಚರಾದ ಜನರು ಅವಮಾನ-ಗೊಳಿಸುತ್ತಾರೆ. ಮಾವುತನು ಆನೆಯ ಶಿರಸ್ಸನ್ನು ಏರಿದಂತೆ ಅವರು ರಾಜನ ಶಿರಸ್ಸನ್ನು ಏರಲು ಬಯಸುತ್ತಾರೆ.

ತಸ್ಮಾನ್ನೈವ ಮೃದುರ್ನಿತ್ಯಂ ತೀಕ್ಷ್ಣೋ ವಾಪಿ ಭವೇನ್ನೃಪಃ।
ವಸಂತೇಽರ್ಕ ಇವ ಶ್ರೀಮಾನ್ನ ಶೀತೋ ನ ಚ ಘರ್ಮದಃ ॥೪೦॥

ಆದ್ದರಿಂದ ರಾಜನಾದವನು ಬಹಳ ಮೃದುವೂ ಆಗಿರಬಾರದು; ಬಹಳ ತೀಕ್ಷ್ಣನೂ ಆಗಿರಬಾರದು. ವಸಂತಕಾಲದ ಸೂರ್ಯನಂತೆ ಸಂಪದ್ಯುಕ್ತನಾಗಿ ಬಹಳ ಶೀತನಾಗದೇ ಬಹಳ ತಾಪವನ್ನೂ ಕೊಡದೇ ಇರುವವನಾಗಬೇಕು.

ಪ್ರತ್ಯಕ್ಷೇನಾನುಮಾನೇನ ತಥೌಪಮ್ಯೇಪದೇಶತಃ।
ಪರೀಕ್ಷ್ಯಸ್ತೇ ಮಹಾರಾಜ ಸ್ವೇ ಪರೇ ಚೈವ ಸರ್ವದಾ ॥೪೧॥

ಎಲೈ ಮಹಾರಾಜನೇ! ನಿನ್ನವರನ್ನೂ ಮತ್ತು ಶತ್ರುವರ್ಗದವರನ್ನೂ ಪ್ರತ್ಯಕ್ಷದಿಂದಲೂ ಅನುಮಾನದಿಂದಲೂ ಮತ್ತು ಆಪ್ತರ ಉಪದೇಶಗಳಿಂದಲೂ ಯಾವಾಗಲೂ ಪರೀಕ್ಷಿಸುತ್ತಿರಬೇಕು.

ವ್ಯಸನಾನಿ ಚ ಸರ್ವಾಣಿ ತ್ಯಜೇಥಾ ಭೂರಿದಕ್ಷಿಣ।
ನ ಚೈತಾನಿ ಪ್ರಯುಂಜೀತ ಸಂಗಂ ತು ಪರಿವರ್ಜಯೇತ್ ॥೪೨॥

ಎಲೈ ಬಹಳ ದಕ್ಷಿಣೆಯನ್ನು ಕೊಡುವವನೇ! ಎಲ್ಲ ಚಟಗಳನ್ನೂ ಪರಿತ್ಯಜಿಸಬೇಕು. ಚಟಗಳಲ್ಲಿ ಆಸಕ್ತನಾಗಬಾರದು. ಎಲ್ಲರ ಸಹವಾಸವನ್ನು ಪರಿತ್ಯಜಿಸಬೇಕು.

ನಿತ್ಯಂ ಹಿ ವ್ಯಸನೀ ಲೋಕೇ ಪರಿಭೂತೋ ಭವತ್ಯುತ।
ಉದ್ವೇಜಯತಿ ಲೋಕಂ ಚಾಪ್ಯತಿದ್ವೇಷೀ ಮಹೀಪತಿಃ ॥೪೩॥

ಚಟಗಳಿಗೆ ಬಲಿಯಾದ ರಾಜನು ಲೋಕದಲ್ಲಿ ಪರಾಭವವನ್ನು ಹೊಂದುತ್ತಾನೆ. ಲೋಕದ ಜನರನ್ನು ಬಹಳವಾಗಿ ದ್ವೇಷಿಸಿ, ಅವರಿಗೆ ಭಯವನ್ನುಂಟು ಮಾಡುತ್ತಾನೆ.

ಭವಿತವ್ಯಂ ಸದಾ ರಾಜ್ಞಾ ಗರ್ಭಿಣೀಸಹಧರ್ಮಿಣಾ।
ಕಾರಣಂ ಚ ಮಹಾರಾಜ ಶೃಣು ಯೇನೇದಮಿಷ್ಯತೇ ॥೪೪॥

ರಾಜನು ಯಾವಾಗಲೂ ಗರ್ಭಿಣಿಯ ಧರ್ಮವನ್ನು ಆಚರಿಸಬೇಕು. ಎಲೈ ಮಹಾರಾಜನೇ! ನಾನು ಹೀಗೆ ಹೇಳುವುದಕ್ಕೆ ಕಾರಣವನ್ನು ಕೇಳು.

ಯಥಾ ಹಿ ಗರ್ಭಿಣೀ ಹಿತ್ವಾ ಸ್ವಂ ಪ್ರಿಯಂ ಮನಸೋಽನುಗಮ್।
ಗರ್ಭಸ್ಯ ಹಿತಮಾಧತ್ತೇ ತಥಾ ರಾಜ್ಞಾಪ್ಯಸಂಶಯಮ್ ॥೪೫॥

ಹೇಗೆ ಗರ್ಭಿಣಿಯು ತನ್ನ ಮನಸ್ಸಿಗೆ ಪ್ರಿಯವಾದುದನ್ನು ಬಿಟ್ಟು ಗರ್ಭಕ್ಕೆ ಹಿತವಾದುದನ್ನೇ ಮಾಡುತ್ತಾಳೆಯೋ ಅದರಂತೆ ರಾಜನೂ ನಿಸ್ಸಂಶಯವಾಗಿ ತನ್ನ ಪ್ರಿಯವನ್ನು ಬಿಟ್ಟು ಪ್ರಜೆಗಳಿಗೆ ಹಿತವನ್ನುಂಟು ಮಾಡಬೇಕು.

ವರ್ತಿತವ್ಯಂ ಕುರುಶ್ರೇಷ್ಠ ನಿತ್ಯಂ ಧರ್ಮಾನುವರ್ತಿನಾ।
ಸ್ವಂ ಪ್ರಿಯಂ ಸಮಭಿತ್ಯಜ್ಯ ಯದ್ಯಲ್ಲೋಕಹಿತಂ ಭವೇತ್ ॥೪೬॥

ಎಲೈ ಕುರುಶ್ರೇಷ್ಠನೇ! ರಾಜನು ಯಾವಾಗಲೂ ಧರ್ಮವನ್ನು ಅನುಸರಿಸುವವನಾಗಬೇಕು. ತನ್ನ ಪ್ರಿಯವನ್ನು ಪರಿತ್ಯಜಿಸಿ ಲೋಕದ ಹಿತವನ್ನು ಸಾಧಿಸುವವನಾಗಬೇಕು.

ನ ಸಂತ್ಯಾಜ್ಯಂ ಚ ತೇ ಧೈರ್ಯಂ ಕದಾಚಿದಪಿ ಪಾಂಡವ।
ಧೀರಸ್ಯ ಸ್ಪಷ್ಟದಂಡಸ್ಯ ನ ಹ್ಯಾಜ್ಞಾ ಪ್ರತಿಹನ್ಯತೇ ॥೪೭॥

ಎಲೈ ಪಾಂಡವನೇ! ಧೈರ್ಯವನ್ನು ಎಂದೂ ನೀನು ಕಳೆದುಕೊಳ್ಳಬಾರದು. ಧೀರನಾದ ಮತ್ತು ಸ್ಪಷ್ಟವಾಗಿ ಶಿಕ್ಷೆಯನ್ನು ವಿಧಿಸುವ ರಾಜನ ಆಜ್ಞೆಯು ತಿರಸ್ಕೃತವಾಗುವುದಿಲ್ಲ.

ಪರಿಹಾಸಶ್ಚ ಭೃತ್ಯೈಸ್ತೇ ನ ನಿತ್ಯಂ ದದತಾಂವರ।
ಕರ್ತವ್ಯೋ ರಾಜಶಾರ್ದೂಲ ದೋಷಮತ್ರ ಹಿ ಮೇ ಶೃಣು ॥೪೮॥

ಎಲೈ ದಾನಮಾಡುವವರಲ್ಲಿ ಶ್ರೇಷ್ಠನೇ! ಭೃತ್ಯರ ಜೊತೆಯಲ್ಲಿ ಯಾವಾಗಲೂ ಹಾಸ್ಯವನ್ನು ಮಾಡಿಕೊಂಡಿರಬಾರದು. ಎಲೈ ರಾಜಶಾರ್ದೂಲನೇ! ಹಾಗೆ ಮಾಡಿದರೆ ಉಂಟಾಗುವ ದೋಷವನ್ನು ನನ್ನಿಂದ ಕೇಳು.

ಅವಮನ್ಯಂತಿ ಭರ್ತಾರಂ ಸಂಹರ್ಷಾದುಪಜೀವಿನಃ।
ಸ್ವೇ ಸ್ಥಾನೇ ನ ಚ ತಿಷ್ಠಂತಿ ಲಂಘಯಂತಿ ಹಿ ತದ್ವಚಃ ॥೪೯॥

ರಾಜನನ್ನು ಉಪಜೀವಿಸಿ ಬದುಕುವ ಭೃತ್ಯರು ಹಾಸ್ಯದಿಂದುಂಟಾದ ಸಂತೋ-

ಷದಿಂದ ಸ್ವಾಮಿಯಾದ ರಾಜನನ್ನು ಅವಮಾನ ಮಾಡುತ್ತಾರೆ. ತಮ್ಮ ತಮ್ಮ ಸ್ಥಾನ-ಗಳಲ್ಲಿ ಅವರು ಇರುವುದಿಲ್ಲ. ಮತ್ತು ರಾಜನ ಆಜ್ಞೆಯನ್ನು ಮೀರುತ್ತಾರೆ.

ಪ್ರೇಷ್ಯಮಾಣಾ ವಿಕಲ್ಪಂತೇ ಗುಹ್ಯಂ ಚಾಪ್ಯನುಯುಂಜತೇ।
ಅಯಾಚ್ಯಂ ಚೈವ ಯಾಚಂತೇऽಭೋಜ್ಯಾನ್ಯಾಹಾರಯಂತಿ ಚ ॥೫೦॥

ಒಂದು ಕಾರ್ಯಕ್ಕಾಗಿ ಕಳುಹಿಸಿದರೆ ಅನೇಕ ಪ್ರಶ್ನೆಗಳನ್ನು ಮಾಡುತ್ತಾರೆ. ರಹಸ್ಯ-ವಾದುದನ್ನು ಕೇಳುತ್ತಾರೆ. ಬೇಡಬಾರದ ವಸ್ತುಗಳನ್ನು ಬೇಡುತ್ತಾರೆ. ರಾಜನು ತಿನ್ನ ಬಾರದ ವಸ್ತುಗಳನ್ನು ತಂದು ಕೊಡುತ್ತಾರೆ.

ಕ್ರುದ್ಧ್ಯಂತಿ ಪರಿದೀಪ್ಯಂತಿ ಭೂತಿಮಧ್ಯಾಸತೇऽಸ್ಯ ಚ।
ಉತ್ಕೋಚೈರ್ವಂಚನಾಭಿಶ್ಚ ಕಾರ್ಯಾಣ್ಯನುವಿಹಂತಿ ಚ ॥೫೧॥

ಕೋಪಗೊಳ್ಳುತ್ತಾರೆ; ಕೋಪದಿಂದ ಜ್ವಲಿಸುತ್ತಾರೆ; ರಾಜನ ವೈಭವವನ್ನು ಉಪ-ಯೋಗಿಸುತ್ತಾರೆ; ನಿಂದಾ ಮತ್ತು ವಂಚನೆಗಳಿಂದ ರಾಜನ ಕಾರ್ಯಗಳನ್ನು ನಾಶ ಮಾಡುತ್ತಾರೆ.

ಜರ್ಜರಂ ಚಾಸ್ಯ ವಿಷಯಂ ಕುರ್ವಂತಿ ಪ್ರತಿರೂಪಕೈಃ।
ಸ್ತ್ರೀರಕ್ಷಿಭಿಶ್ಚ ಸಜ್ಜಂತೇ ತುಲ್ಯವೇಷಾ ಭವಂತಿ ಚ ॥೫೨॥

ರಾಜನ ಪ್ರತಿರೂಪಗಳನ್ನು ನಿರ್ಮಿಸಿ ರಾಜ್ಯವನ್ನು ಶಿಥಿಲಗೊಳಿಸುತ್ತಾರೆ. ರಾಜನ ಸ್ತ್ರೀರಕ್ಷಕರಾದ ನಪುಂಸಕರ ಜೊತೆಯಲ್ಲಿ ಕಂಚುಕಾದಿಗಳನ್ನು ಧರಿಸಿ ಸಮಾನವೇಷ-ವುಳ್ಳವರಾಗಿ ಬೆರೆಯುತ್ತಾರೆ.

ವಾತಂ ನಿಷ್ಠೀವನಂ ಚೈವ ಕುರ್ವತೇ ಚಾಸ್ಯ ಸನ್ನಿಧೌ।
ನಿರ್ಲಜ್ಜಾ ನರಶಾರ್ದೂಲ ವ್ಯಾಹರಂತಿ ಚ ದುರ್ವಚಃ ॥೫೩॥

ರಾಜನೆದುರಿನಲ್ಲಿ ಉಗುಳುವುದು, ವಾಯುವನ್ನು ಬಿಡುವುದು ಮೊದಲಾದ-ವುಗಳನ್ನು ಮಾಡುತ್ತಾರೆ. ಎಲೈ ನರಶಾರ್ದೂಲನೇ! ಲಜ್ಜಾಹೀನರಾಗಿ ದುರ್ವಚನ-ಗಳನ್ನು ಆಡುತ್ತಾರೆ.

ಹಯಂ ವಾ ದಂತಿನಂ ವಾಪಿ ರಥಂ ನೃಪತಿಸಮ್ಮತಮ್ ।
ಅಧಿರೋಹಂತ್ಯನಾದೃತ್ಯ ಹರ್ಷಲೇ ಪಾರ್ಥಿವೇ ಮೃದೌ ॥೫೪॥

ರಾಜನು ಹರ್ಷಶೀಲನಾಗಿ ಮೃದುವಾಗಿದ್ದರೆ ಭೃತ್ಯರು ರಾಜನನ್ನು ಲೆಕ್ಕಿಸದೆ ಅವನಿಗೆ ಯೋಗ್ಯವಾದ ಯುದ್ಧದ ಅಶ್ವವನ್ನು ಅಥವಾ ಗಜವನ್ನು ಅಥವಾ ರಥವನ್ನು ಏರುತ್ತಾರೆ.

ಇದಂ ತೇ ದುಷ್ಕರಂ ರಾಜನ್ನಿದಂ ತೇ ದುರ್ವಿಚೇಷ್ಟಿತಮ್ ।
ಇತ್ಯೇವಂ ಸುಹೃದೋ ನಾಮ ಬ್ರುವಂತಿ ಪರಿಷದ್ಗತಾಃ ॥೫೫॥

''ರಾಜನೇ! ಇದು ನಿನ್ನಿಂದ ಅಸಾಧ್ಯವಾದ ಕಾರ್ಯ, ರಾಜನೇ! ಇದು ನೀನು ಮಾಡಿದ ದುಷ್ಟಕಾರ್ಯ'' ಎಂದು ಸುಹೃಜ್ಜನರಂತೆ ಸಭೆಯಲ್ಲಿ ರಾಜನಿಗೆ ಹೇಳುತ್ತಾರೆ.

ಕ್ರುದ್ಧೇ ಚಾಸ್ಮಿನ್ ಹಸಂತ್ಯೇವ ನ ಚ ಹೃಷ್ಯಂತಿ ಪೂಜಿತಾಃ ।
ಸಂಘರ್ಷಶೀಲಾಶ್ಚ ಸದಾ ಭವಂತ್ಯನ್ಯೋನ್ಯಕಾರಣಾತ್ ॥೫೬॥

ರಾಜನು ಕ್ರುದ್ಧನಾದರೆ ನಗುತ್ತಾರೆ. ರಾಜನು ಅವರನ್ನು ಪೂಜಿಸಿದರೆ ಸಂತೋಷಪಡುವುದಿಲ್ಲ. ಅವರು ತಮ್ಮತಮ್ಮಲ್ಲಿಯೇ ಪರಸ್ಪರವಾಗಿ ಕಲಹಶೀಲರಾಗುತ್ತಾರೆ.

ವಿಸ್ರಂಸಯಂತಿ ಮಂತ್ರಂ ಚ ವಿವೃಣ್ವಂತಿ ಚ ದುಷ್ಕೃತಮ್ ।
ಲೀಲಯಾ ಚೈವ ಕುರ್ವಂತಿ ಸಾವಜ್ಞಾಸ್ತಸ್ಯ ಶಾಸನಮ್ ।

ರಾಜನ ಮಂತ್ರಾಲೋಚನೆಯನ್ನು ಶಿಥಿಲಗೊಳಿಸುತ್ತಾರೆ. ರಾಜನು ಯಾವುದಾದರೂ ದುಷ್ಕಾರ್ಯವನ್ನು ಮಾಡಿದ್ದರೆ ಅದನ್ನು ಬಹಿರಂಗಪಡಿಸುತ್ತಾರೆ. ರಾಜನ ಶಾಸನವನ್ನು ವಿನೋದದಿಂದ ಅಥವಾ ತಿರಸ್ಕಾರದಿಂದ ಅನುಷ್ಠಾನ ಮಾಡುತ್ತಾರೆ.

ಅಲಂಕರಣಭೋಜ್ಯಂ ಚ ತಥಾ ಸ್ನಾನಾನುಲೇಪನಮ್ ॥೫೭॥

ಹೇಲಮಾನಾ ನರವ್ಯಾಘ್ರ ಸ್ವಸ್ಥಾಸ್ತಸ್ಯೋಪಶೃಣ್ವತೇ।
ನಿಂದಂತಿ ಸ್ಥಾನಧೀಕಾರಾನ್ ಸಂತ್ಯಜತಿ ಚ ಭಾರತ ॥೫೮॥

ಎಲೈ ನರವ್ಯಾಘ್ರನೇ! ರಾಜನ ಅಲಂಕಾರಗಳನ್ನು ಅವನ ಭೋಜ್ಯವಸ್ತುಗಳನ್ನು ಅವನ ಸ್ನಾನಾನುಲೇಪನಗಳನ್ನು ರಾಜನನ್ನು ಅವಹೇಳನ ಮಾಡುತ್ತಾ ನಿಶ್ಚಿಂತೆಯಾಗಿ ಉಪಯೋಗಿಸುತ್ತಾರೆ. ಎಲೈ ಭಾರತನೇ! ತಮಗೆ ಕೊಟ್ಟ ಸ್ಥಾನವನ್ನು ತಮ್ಮ ಯೋಗ್ಯತೆಗೆ ಸಾಲದೆಂದು ನಿಂದಿಸುತ್ತಾರೆ. ಸಮಯದಲ್ಲಿ ರಾಜನನ್ನು ತೊರೆಯುತ್ತಾರೆ.

ನ ವೃತ್ತ್ಯಾ ಪರಿತುಷ್ಯಂತಿ ರಾಜದೇಯಂ ಹರಂತಿ ಚ।
ಕ್ರೀಡಿತುಂ ತೇನ ಚೇಚ್ಛಂತಿ ಸಸೂತ್ರೇಣೇವ ಪಕ್ಷಿಣಾ ॥೫೯॥

ತಮಗೆ ಕೊಡುವ ವೇತನದಿಂದ ಸಂತೋಷ ಪಡುವುದಿಲ್ಲ. ರಾಜನಿಗೆ ಸಲ್ಲಬೇಕಾದುದನ್ನು ಅಪಹರಿಸುತ್ತಾರೆ. ದಾರವನ್ನು ಕಟ್ಟಿದ ಪಕ್ಷಿಯಂತೆ ರಾಜನ ಜೊತೆಯಲ್ಲಿ ಆಡಲು ಬಯಸುತ್ತಾರೆ. 'ರಾಜನು ನಾವು ಹೇಳಿದಂತೆ ಕೇಳುತ್ತಾನೆ' ಎಂದು ಲೋಕದ ಜನರಲ್ಲಿ ಪ್ರಚಾರ ಮಾಡುತ್ತಾರೆ.

ಏತೇ ಚೈವಾಪರೇ ಚೈವ ದೋಷಾಃ ಪ್ರಾದುರ್ಭವಂತ್ಯುತ।
ನೃಪತೌ ಮಾರ್ದವೋಪೇತೇ ಹರ್ಷಲೇ ಚ ಯುಧಿಷ್ಠಿರ ॥೬೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಟ್‌ಪಂಚಾಶೋಽಧ್ಯಾಯಃ ॥೫೬॥

ಎಲೈ ಯುಧಿಷ್ಠಿರನೇ! ರಾಜನು ಮೃದುವಾಗಿ ಹರ್ಷಶೀಲನಾಗಿದ್ದರೆ ಇವು ಮತ್ತು ಇನ್ನೂ ಅನೇಕ ದೋಷಗಳು ಉಂಟಾಗುತ್ತವೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೬ನೆಯ ಅಧ್ಯಾಯವು ಮುಗಿಯಿತು

—0—

೫೭. ಐವತ್ತೇಳನೆಯ ಅಧ್ಯಾಯ

ರಾಜಧರ್ಮಕಥನ

ಭೀಷ್ಮಃ

ನಿತ್ಯೋದ್ಯುಕ್ತೇನ ವೈ ರಾಜ್ಞಾ ಭವಿತವ್ಯಂ ಯುಧಿಷ್ಠಿರ।
ಪ್ರಶಾಮ್ಯತೇ ಚ ರಾಜಾ ಹಿ ನಾರೀವೋದ್ಯಮವರ್ಜಿತಃ ॥೧॥

ಭೀಷ್ಮರು – ಎಲೈ ಯುಧಿಷ್ಠಿರನೇ! ರಾಜನು ಯಾವಾಗಲೂ ಉದ್ಯಮಶೀಲನಾಗಬೇಕು. ಪ್ರಯತ್ನಶೀಲನಲ್ಲದ ರಾಜನು ಹೆಂಗಸಿನಂತೆ ವಿನಾಶವನ್ನು ಹೊಂದುತ್ತಾನೆ.

ಭಗವಾನುಶನಾ ಚಾಹ ಶ್ಲೋಕಮತ್ರ ವಿಶಾಂಪತೇ।
ತಮಿಹೈಕಮನಾ ರಾಜನ್ ಗದತಸ್ತ್ವಂ ನಿಬೋಧ ಮೇ ॥೨॥

ಎಲೈ ರಾಜನೇ! ಪೂಜ್ಯರಾದ ಶುಕ್ರಾಚಾರ್ಯರು ಈ ವಿಷಯದಲ್ಲಿ ಒಂದು ಶ್ಲೋಕವನ್ನು ಹೇಳಿದ್ದಾರೆ. ರಾಜನೇ ನಾನು ಹೇಳುವ ಆ ಶ್ಲೋಕವನ್ನು ನೀನು ಏಕಾಗ್ರನಾಗಿ ಕೇಳು.

ದ್ವಾವೇತೌ ಗ್ರಸತೇ ಭೂಮಿಃ ಸರ್ಪೋ ಬಿಲಶಯಾನಿವ।
ರಾಜಾನಂ ಚಾವಿರೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೩॥

ಶತ್ರುಗಳಿಗೆ ವಿರೋಧ ಮಾಡದಿರುವ ರಾಜ ಮತ್ತು ಪ್ರವಾಸ ಹೋಗದಿರುವ ಬ್ರಾಹ್ಮಣ ಇವರಿಬ್ಬರನ್ನು ಸರ್ಪವು ಮೂಷಿಕಗಳನ್ನು ನುಂಗುವಂತೆ ಭೂಮಿಯು ನುಂಗುತ್ತದೆ.

ತದೇತನ್ನರಶಾರ್ದೂಲ ಹೃದಿ ತ್ವಂ ಕರ್ತುಮರ್ಹಸಿ।
ಸಂಧೇಯಾನಪಿ ಸಂಧತ್ಸ್ವ ವಿರೋಧ್ಯಾಂಶ್ಚ ವಿರೋಧಯ ॥೪॥

ಎಲೈ ನರಶಾರ್ದೂಲನೇ! ಇದನ್ನು ನೀನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸಂಧಿ-

ಯನ್ನು ಮಾಡಿಕೊಳ್ಳಬೇಕಾದವರ ಜೊತೆಯಲ್ಲಿ ಸಂಧಿಯನ್ನು ಮಾಡು. ವಿರೋಧ -ವನ್ನು ಮಾಡಬೇಕಾದವರ ಜೊತೆಯಲ್ಲಿ ವಿರೋಧವನ್ನು ಮಾಡು.

ಸಪ್ತಾಂಗೇ ಯಶ್ಚ ತೇ ರಾಜ್ಯೇ ವೈಪರೀತ್ಯಂ ಸಮಾಚರೇತ್ ।
ಗುರುರ್ವಾ ಯದಿ ವಾ ಮಿತ್ರಂ ಪ್ರತಿಹಂತವ್ಯ ಏವ ಸಃ ॥೫॥

ಸಪ್ತಾಂಗಗಳುಳ್ಳ ನಿನ್ನ ರಾಜ್ಯದಲ್ಲಿ ಯಾರಾದರೂ ವಿಪರೀತವಾಗಿ ನಡೆದು-ಕೊಂಡರೆ ಅವನು ಗುರುವಾಗಲೀ, ಅಥವಾ ಮಿತ್ರನಾಗಲೀ ಅದನ್ನು ಪರಿಹರಿಸಲೇ ಬೇಕು.

ಮರುತ್ತೇನ ಹಿ ರಾಜ್ಞಾಽಯಂ ಗೀತಃ ಶ್ಲೋಕಃ ಪುರಾತನಃ ।
ರಾಜ್ಯಾಧಿಕಾರೇ ರಾಜೇಂದ್ರ ಬೃಹಸ್ಪತಿಮತಃ ಪುರಾ ॥೬॥

ಎಲೈ ರಾಜೇಂದ್ರನೇ! ಬೃಹಸ್ಪತಿಗೆ ಸಮ್ಮತನಾದ ಮರುತ್ತನೆಂಬ ರಾಜನು ರಾಜ್ಯಪಾಲನೆಯ ವಿಷಯದಲ್ಲಿ ಹಾಡಿದ ಒಂದು ಪುರಾತನವಾದ ಈ ಶ್ಲೋಕವನ್ನು ಕೇಳು.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಪ್ರತಿಪನ್ನಸ್ಯ ಪರಿತ್ಯಾಗೋ ವಿಧೀಯತೇ ॥೭॥

ಗುರುವಾದರೂ ಸಹ ಅಹಂಕಾರದಿಂದ ಕೂಡಿ ಕಾರ್ಯಾಕಾರ್ಯಗಳನ್ನು ತಿಳಿ-ಯದೆ ದುರ್ಮಾರ್ಗದಲ್ಲಿ ಪ್ರವೃತ್ತನಾದರೆ ಅವನ ಪರಿತ್ಯಾಗವು ವಿಹಿತವಾಗುತ್ತದೆ.

ಬಾಹೋಃ ಪುತ್ರೇಣ ರಾಜ್ಞಾ ಚ ಸಗರೇಣೇಹ ಧೀಮತಾ ।
ಅಸಮಂಜಾಃ ಸುತೋ ಜ್ಯೇಷ್ಠಸ್ತ್ಯಕ್ತಃ ಪೌರಹಿತೈಷಿಣಾ ॥೮॥

ಬಾಹುಕನ ಪುತ್ರನಾದ ಮೇಧಾವಿಯಾದ ಸಗರರಾಜನು ಪ್ರಜೆಗಳ ಹಿತವನ್ನು ಬಯಸಿ ತನ್ನ ಜ್ಯೇಷ್ಠಪುತ್ರನಾದ ಅಸಮಂಜನನ್ನು ಪರಿತ್ಯಜಿಸಿದನು.

ಅಸಮಂಜಾಃ ಸರಯ್ವಾಂ ಪ್ರಾಕ್ ಪೌರಾಣಾಂ ಬಾಲಕಾನ್ ನೃಪ ।
ನ್ಯಮಜ್ಜಯದತಃ ಪಿತ್ರಾ ನಿರ್ಭರ್ತ್ಸ್ಯ ಸ ವಿವಾಸಿತಃ ॥೯॥

ಎಲೈ ರಾಜನೇ! ಹಿಂದೆ ಅಸಮಂಜನು ಪ್ರಜೆಗಳ ಬಾಲಕರನ್ನು ಹಿಡಿದು ಸರಯೂ ನದಿಯಲ್ಲಿ ಮುಳುಗಿಸುತ್ತಿದ್ದನು. ಆದ್ದರಿಂದ ತಂದೆಯಾದ ಸಗರನು ಅವನನ್ನು ಗದರಿಸಿ ಗಡೀಪಾರು ಮಾಡಿದನು.

ಋಷೀಣೋದ್ದಾಲಕೇನಾಪಿ ಶ್ವೇತಕೇತುರ್ಮಹಾತಪಾಃ।
ಮಿಥ್ಯಾ ವಿಪ್ರಾನುಪಚರನ್ ಸಂತ್ಯಕ್ತೋ ದಯಿತಃ ಸುತಃ ॥೧೦॥

ಉದ್ದಾಲಕ ಋಷಿಗಳೂ ಕೂಡ ತಮ್ಮ ಪ್ರಿಯಪುತ್ರನಾದ ಮಹಾತಪಸ್ವಿಯಾದ ಶ್ವೇತಕೇತುವು ಬ್ರಾಹ್ಮಣರನ್ನು ಸುಳ್ಳಾಗಿ ಉಪಚರಿಸುತ್ತಿರಲು ಅವನನ್ನು ಪರಿತ್ಯಜಿಸಿದರು.

ಲೋಕರಂಜನಮೇವಾತ್ರ ರಾಜ್ಞಾಂ ಧರ್ಮಃ ಸನಾತನಃ।
ಸತ್ಯಸ್ಯ ರಕ್ಷಣಂ ಚೈವ ವ್ಯವಹಾರೇಷು ಚಾರ್ಜವಮ್ ॥೧೧॥

ಲೋಕವನ್ನು ಸಂತೋಷಪಡಿಸುವುದೇ ರಾಜರ ಸನಾತನವಾದ ಧರ್ಮ. ಸತ್ಯದ ರಕ್ಷಣೆ ಮತ್ತು ವ್ಯವಹಾರಗಳಲ್ಲಿ ಕಪಟವಿಲ್ಲದಿರುವಿಕೆ ಇವು ರಾಜನ ಕರ್ತವ್ಯಗಳು.

ನ ಹಿಂಸ್ಯಾತ್ ಪರವಿತ್ತಾನಿ ದೇಯಂ ಕಾಲೇ ಚ ದಾಪಯೇತ್।
ವಿಕ್ರಾಂತಃ ಸತ್ಯವಾಕ್ ಕ್ಷಾಂತೋ ನೃಪೋ ನ ಚ್ಯವತೇ ಪಥಃ ॥೧೨॥

ಪ್ರಜೆಗಳ ಧನಕ್ಕೆ ಹಿಂಸೆಯನ್ನುಂಟು ಮಾಡಬಾರದು. ಕೊಡಬೇಕಾದ ಧನವನ್ನು ಯೋಗ್ಯವಾದ ಕಾಲದಲ್ಲಿ ಕೊಡಿಸಬೇಕು. ಪರಾಕ್ರಮಶಾಲಿಯೂ ಸತ್ಯವಚನನೂ ಕ್ಷಮಾವಂತನೂ ಆದ ರಾಜನು ಸನ್ಮಾರ್ಗದಿಂದ ಚ್ಯುತನಾಗುವುದಿಲ್ಲ.

ಗುಪ್ತಮಂತ್ರೋ ಜಿತಕ್ರೋಧೋ ಶಾಸ್ತ್ರಾರ್ಥಗತನಿಶ್ಚಯಃ।
ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಸತತಂ ರತಃ ॥೧೩॥

ತ್ರಯ್ಯಾ ಸಂವೃತರಂಧ್ರಶ್ಚ ರಾಜಾ ಭವಿತುಮರ್ಹತಿ।
ವೃಜಿನಸ್ಯ ನರೇಂದ್ರಾಣಾಂ ನಾನ್ಯತ್ ಸಂವರಣಾತ್ ಪರಮ್ ॥೧೪॥

ತನ್ನ ಮಂತ್ರಾಲೋಚನೆಯನ್ನು ರಹಸ್ಯವಾಗಿಟ್ಟು, ಕ್ರೋಧವನ್ನು ಜಯಿಸಿ, ಶಾಸ್ತ್ರಕ್ಕೆ ಅನುಗುಣವಾಗಿ ನಿರ್ಧಾರವನ್ನು ಮಾಡಿ ಧರ್ಮಾರ್ಥಕಾಮಮೋಕ್ಷಗಳಲ್ಲಿ ಸತತವಾಗಿ ರತನಾಗಿ ತನ್ನ ದೋಷಗಳನ್ನು ವೇದೋಕ್ತಮಾರ್ಗದಿಂದ ತಿದ್ದಿಕೊಂಡ ಅವನು ರಾಜನಾಗಲು ಅರ್ಹನಾಗುತ್ತಾನೆ. ರಾಜರಿಗೆ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕಿಂತ ಶ್ರೇಷ್ಠವಾದ ಕಾರ್ಯವು ಇನ್ನೊಂದಿಲ್ಲ.

ಚಾತುರ್ವರ್ಣ್ಯಸ್ಯ ಧರ್ಮಾಶ್ಚ ರಕ್ಷಿತವ್ಯಾ ಮಹೀಕ್ಷಿತಾ।
ಧರ್ಮಸಂಕರರಕ್ಷಾ ಹಿ ರಾಜ್ಞಾಂ ಧರ್ಮಃ ಸನಾತನಃ ॥೧೫॥

ರಾಜನಾದವನು ಚಾತುರ್ವರ್ಣ್ಯದ ಧರ್ಮಗಳನ್ನು ರಕ್ಷಿಸಬೇಕು. ಧರ್ಮಸಂಕರವಾಗದಂತೆ ರಕ್ಷಣೆ ಮಾಡುವುದು ರಾಜರ ಸನಾತನವಾದ ಧರ್ಮ.

ನ ವಿಶ್ವಸೇಚ್ಚ ನೃಪತಿರ್ನ ಚಾತ್ಯರ್ಥಂ ನ ವಿಶ್ವಸೇತ್।
ಷಾಡ್ಗುಣ್ಯದೋಷಾಂಶ್ಚ ನಿತ್ಯಂ ಬುದ್ಧ್ಯಾऽವಲೋಕಯೇತ್ ॥೧೬॥

ರಾಜನಾದವನು ಯಾರಲ್ಲಿಯೂ ಬಹಳ ವಿಶ್ವಾಸವನ್ನು ಮಾಡಬಾರದು. ಬಹಳ ಅವಿಶ್ವಾಸವನ್ನೂ ಮಾಡಬಾರದು. ರಾಜ್ಯಪಾಲನೆಯ ಅಂಗವಾದ ಆರು ಗುಣಗಳು ಮತ್ತು ಅವುಗಳ ದೋಷಗಳನ್ನು ಯಾವಾಗಲೂ ಆಲೋಚಿಸುತ್ತಿರಬೇಕು.

ದ್ವಿಷ್ಟಿದ್ರದರ್ಶೀ ನೃಪತಿರ್ನಿತ್ಯಮೇವ ಪ್ರಶಸ್ಯತೇ।
ತ್ರಿವರ್ಗವಿದಿತಾರ್ಥಶ್ಚ ಯುಕ್ತಾಚಾರೋಪಧಿಶ್ಚ ಯಃ ॥೧೭॥

ತ್ರಿವರ್ಗದ ಅರ್ಥಗಳನ್ನು ತಿಳಿದು ಒಳ್ಳೆಯ ಗೂಢಚಾರರನ್ನು ಮತ್ತು ಭೃತ್ಯರನ್ನು ಹೊಂದಿದ ರಾಜನಿಗೆ ಶತ್ರುಗಳ ದೋಷವನ್ನು ನೋಡುವುದು ಯಾವಾಗಲೂ ಪ್ರಶಂಸಿಸಲ್ಪಡುತ್ತದೆ.

ಕೋಶಸ್ಯೋಪಾರ್ಜನರತಿರ್ಯಮವೈಶ್ರವಣೋಪಮಃ।
ವೇತ್ತಾ ಚ ದಶವರ್ಗಸ್ಯ ಸ್ಥಾನವೃದ್ಧಿಕ್ಷಯಾತ್ಮನಃ ॥೧೮॥

ಕೋಶವನ್ನು ಅಭಿವೃದ್ಧಿಪಡಿಸುವುದರಲ್ಲಿ ಆಸಕ್ತಿ, ಯಮನಿಗೆ ಮತ್ತು ಕುಬೇರ-

ನಿಗೆ ಸದೃಶವಾಗಿರುವುದು. ಸ್ಥಾನವೃದ್ಧಿ ಮತ್ತುಕ್ಷಯಗಳಿಗೆ ಸಂಬಂಧಿಸಿದ ಹತ್ತು ಅಂಶಗಳ ಸಮೂಹವನ್ನು ತಿಳಿಯುವುದು ರಾಜನಿಗೆ ಪ್ರಶಂಸಿಸಲ್ಪಡುತ್ತದೆ. ಸ್ಥಾನವೆಂದರೆ ರಾಜ್ಯ, ಅದರ ವೃದ್ಧಿ ಎಂದರೆ ಅಭಿವೃದ್ಧಿ. ಕ್ಷಯವೆಂದರೆ ರಾಜ್ಯವಿರೋಧಿಗಳ ವಿನಾಶ. ಸ್ಥಾನವೆಂದರೆ ಧನ, ಅದರ ವೃದ್ಧಿಯೆಂದರೆ ಕೋಶದ ದೃಢೀಕರಣ. ಕ್ಷಯವೆಂದರೆ ಕೋಶಕ್ಕೆ ವಿರುದ್ಧರಾದ ಚೋರಾದಿಗಳ ವಿನಾಶ. ಕ್ಷಯವೆಂದರೆ ಶತ್ರುಕ್ಷಯ. ಶತ್ರುಗಳ ಸ್ಥಾನಕ್ಷಯ. ಅವರ ಅಭಿವೃದ್ಧಿಯ ಕ್ಷಯ. ಅವರು ಶರಣಾಗತರಾದರೆ ಅವರ ಭಯದ ವಿನಾಶ. ಹೀಗೆ ಸ್ಥಾನವೃದ್ಧಿಕ್ಷಯರೂಪವಾದ ಹತ್ತು ಅಂಶಗಳ ಸಮೂಹವನ್ನು ತಿಳಿದ ರಾಜನು ಯಾವಾಗಲೂ ಪ್ರಶಂಸಿಸಲ್ಪಡುತ್ತಾನೆ. (– ಲಕ್ಷಾಲಂಕಾರ)

ಅಭೃತಾನಾಂ ಭವೇದ್ ಭರ್ತಾ ಭೃತಾನಾಂ ಚಾನ್ವವೇಕ್ಷಕಃ।
ನೃಪತಿಃ ಸುಮುಖಶ್ಚ ಸ್ಯಾತ್ ಸ್ಮಿತಪೂರ್ವಾಭಿಭಾಷಿತಾ ॥೧೯॥

ರಾಜನು ವೃತ್ತಿ ಇಲ್ಲದವರಿಗೆ ಪೋಷಕನಾಗಬೇಕು. ವೃತ್ತಿಯನ್ನು ಹೊಂದಿದವರ ಮೇಲ್ವಿಚಾರಣೆಯನ್ನು ಮಾಡಬೇಕು. ಯಾವಾಗಲೂ ಪ್ರಸನ್ನಮುಖನಾಗಿದ್ದು ಮಂದಹಾಸಪೂರ್ವಕವಾಗಿ ಮಾತನಾಡಬೇಕು.

ಉಪಾಸಿತಾ ಚ ವೃದ್ಧಾನಾಂ ಜಿತತಂದ್ರೀರಲೋಲುಪಃ।
ಸತಾಂ ವೃತ್ತೇ ಸ್ಥಿತಮತಿಃ ಸಂತೋ ಹ್ಯಾಚಾರದರ್ಶಿನಃ ॥೨೦॥

ಹಿರಿಯರ ಸೇವೆಯನ್ನು ಮಾಡಬೇಕು. ಆಲಸ್ಯವನ್ನು ಬಿಡಬೇಕು. ಇಂದ್ರಿಯಲೋಲುಪನಾಗಿರಬಾರದು. ಸಜ್ಜನರ ನಡವಳಿಕೆಯಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿರಬೇಕು ಏಕೆಂದರೆ, ಸಜ್ಜನರೇ ಆಚಾರವನ್ನು ತೋರಿಸಿಕೊಡುವವರು.

ನ ಚಾದದೀತ ವಿತ್ತಾನಿ ಸತಾಂ ಹಸ್ತಾತ್ ಕದಾಚನ।
ಅಸದ್ಭ್ಯಸ್ತು ಸಮಾದದ್ಯಾತ್ ಸದ್ಭ್ಯಃ ಸಂಪ್ರತಿಪಾದಯೇತ್ ॥೨೧॥

ಸಜ್ಜನರ ಹಸ್ತದಿಂದ ಎಂದೂ ಧನವನ್ನು ಸ್ವೀಕರಿಸಬಾರದು. ಅಸಜ್ಜನರಿಂದ ಧನವನ್ನು ತೆಗೆದುಕೊಂಡು ಅದನ್ನು ಸಜ್ಜನರಿಗೆ ಹಂಚಬೇಕು.

ಸ್ವಯಂ ಪ್ರಹರ್ತಾದಾತಾ ಚ ವಶ್ಯಾತ್ಮಾ ವಶ್ಯಸಾಧನಃ।
ಕಾಲೇ ದಾತಾ ಚ ಭೋಕ್ತಾ ಚ ಶುದ್ಧಾಚಾರಸ್ತಥೈವ ಚ ॥೨೨॥

ತಾನೇ ಧನವನ್ನು ತೆಗೆದುಕೊಳ್ಳುವವನು, ಸಜ್ಜನರಿಗೆ ಧನವನ್ನು ಕೊಡುವವನು, ಜಿತವಾದ ಮನಸ್ಸುಳ್ಳವನು, ಜಿತವಾದ ಸಾಧನಗಳುಳ್ಳವನು ಯೋಗ್ಯವಾದ ಕಾಲದಲ್ಲಿ ದಾನವನ್ನೂ ಭೋಗವನ್ನೂ ಮಾಡುವವನು ಮತ್ತು ಶುದ್ಧವಾದ ಆಚಾರವುಳ್ಳ ರಾಜನು. (ಪ್ರಶಂಸಿಸಲ್ಪಡುತ್ತಾನೆ).

ಶೂರಾನ್ ಭಕ್ತಾನಸಂಹಾರ್ಯಾನ್ ಮಾನಿನೋಽನವಮಾನಿನಃ।
ಶಿಷ್ಟಾನ್ ಶಿಷ್ಟಾಭಿಸಂಬಂಧಾನ್ ಕುಲೇ ಜಾತಾನರೋಗಿಣಃ ॥೨೩॥

ವಿದ್ಯಾವಿದೋ ಲೋಕವಿದಃ ಪರಲೋಕಾನ್ವವೇಕ್ಷಕಾನ್।
ಧರ್ಮೇಷು ನಿರತಾನ್ ಸಾಧೂನಚಲಾನಚಲಾನಿವ ॥೨೪॥

ಸಹಾಯಾನ್ ಸತತಂ ಕುರ್ಯಾದ್ ರಾಜಾ ಭೂತಿಪುರಸ್ಕೃತಃ।
ತೈಸ್ತುಲ್ಯಶ್ಚ ಭವೇದ್ ಭೋಗೈಶ್ಛತ್ರಮಾತ್ರಾಜ್ಞ್ಯಾಧಿಕಃ ॥೨೫॥

ಶೂರರು, ನಿಷ್ಠೆಯುಳ್ಳವರು, ಶತ್ರುಗಳಿಂದ ಅಪಹರಿಸಲ್ಪಡದವರು, ಆತ್ಮಾಭಿಮಾನವುಳ್ಳವರು, ರಾಜನನ್ನು ಮತ್ತು ಸಜ್ಜನರನ್ನು ಅವಮಾನಮಾಡದವರು, ಸತ್ಕುಲದಲ್ಲಿ ಜನಿಸಿ ಆರೋಗ್ಯದಿಂದಿರುವವರು, ಶಿಷ್ಟರು, ಶಿಷ್ಟರ ಸಂಬಂಧವನ್ನು ಹೊಂದಿದವರು, ವಿದ್ಯೆಗಳನ್ನು ಬಲ್ಲವರು, ಲೋಕವೃತ್ತವನ್ನು ಬಲ್ಲವರು, ಪರಲೋಕದ ನಿರೀಕ್ಷೆ ಉಳ್ಳವರು, ಧರ್ಮನಿರತರು, ಸಾಧುಗಳು, ಪರ್ವತದಂತೆ ಅಚಲರಾದವರು ಆದ ಭಟರನ್ನು ಸಮೃದ್ಧಿಯುಳ್ಳ ರಾಜನು ತನ್ನ ಸಹಾಯಕರನ್ನಾಗಿ ಮಾಡಿಕೊಳ್ಳಬೇಕು. ಅಂತಹ ಭಟರ ಜೊತೆಯಲ್ಲಿ ಸಮಾನವಾದ ಭೋಗವನ್ನು ಹೊಂದಿ ಛತ್ರಚಾಮರಾದಿಗಳಿಂದ ಮಾತ್ರ ಅತಿಶಯವನ್ನು ಹೊಂದಿರಬೇಕು.

ಪ್ರತ್ಯಕ್ಷಾ ಚ ಪರೋಕ್ಷಾ ಚ ವೃತ್ತಿಶ್ಚಾಸ್ಯ ಭವೇತ್ ಸದಾ।
ಏವಂ ಕೃತ್ವಾ ನರೇಂದ್ರೋ ಹಿ ನ ಖೇದಮಿಹ ವಿಂದತಿ ॥೨೬॥

ರಾಜನು ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ನಡೆವಳಿಕೆಗಳನ್ನು ಹೊಂದಿರಬೇಕು. ಹಾಗೆ ಮಾಡುವ ನರೇಂದ್ರನು ಈ ಲೋಕದಲ್ಲಿ ದುಃಖವನ್ನು ಹೊಂದುವುದಿಲ್ಲ.

ಸಭೆಯಲ್ಲಿ ಕುಳಿತು ಮಾಡುವ ಧರ್ಮವಿಚಾರಾದಿ ನಡೆವಳಿಕೆಯು ಪ್ರತ್ಯಕ್ಷರೂಪವಾದದು. ಅಂತಃಪುರದ ನಡೆವಳಿಕೆಯು ಪರೋಕ್ಷವಾದುದು – (ಲಕ್ಷಾಲಂಕಾರ)

ಸರ್ವಾತಿಶಂಕೀ ನೃಪತಿರ್ಯಶ್ಚ ಸರ್ವಹರೋ ಭವೇತ್ ।
ಸ ಕ್ಷಿಪ್ರಮನೃಜುರ್ಲುಬ್ಧಃ ಸ್ವಜನೇನೈವ ಬಾಧ್ಯತೇ ॥೨೭॥

ಯಾವ ರಾಜನು ಎಲ್ಲರನ್ನೂ ಶಂಕಿಸುತ್ತಾನೆಯೋ ಪ್ರಜೆಗಳಿಂದ ಎಲ್ಲವನ್ನೂ ಅಪಹರಿಸುತ್ತಾನೆಯೋ ಅಂತಹ ವಕ್ರನೂ, ಲೋಭಿಯೂ ಆದ ರಾಜನು ಸ್ವಜನರಿಂದಲೇ ಶೀಘ್ರವಾಗಿ ಬಾಧಿಸಲ್ಪಡುತ್ತಾನೆ.

ಶುಚಿಸ್ತು ಪೃಥಿವೀಪಾಲೋ ಲೋಕಚಿತ್ತಗ್ರಹೇ ರತಃ ।
ನ ಪತತ್ಯರಿಭಿರ್ಗ್ರಸ್ತಃ ಪತಿತಶ್ಚಾವತಿಷ್ಠತೇ ॥೨೮॥

ಶುಚಿಯೂ, ಪ್ರಜೆಗಳ ಚಿತ್ತಗ್ರಹದಲ್ಲಿ ನಿರತನೂ ಆದ ರಾಜನು ಶತ್ರುಗಳಿಂದ ಗ್ರಸ್ತನಾದರೂ ಕೆಳಗೆ ಬೀಳುವುದಿಲ್ಲ. ಕೆಳಗೆ ಬಿದ್ದರೂ ಪುನಃ ಎದ್ದು ನಿಲ್ಲುತ್ತಾನೆ.

ಅಕ್ರೋಧನೋऽಥಾವ್ಯಸನೀ ಮೃದುದಂಡೋ ಜಿತೇಂದ್ರಿಯಃ ।
ರಾಜಾ ಭವತಿ ಭೂತಾನಾಂ ವಿಶ್ವಾಸ್ಯೋ ಹಿಮವಾನಿವ ॥೨೯॥

ಕ್ರೋಧಶೀಲನಲ್ಲದ, ದುಶ್ಚಟಗಳಿಗೆ ಬಲಿಯಾಗದ, ಮೃದುವಾದ ಶಿಕ್ಷೆಯನ್ನು ಕೊಡುವ, ಜಿತೇಂದ್ರಿಯನಾದ ರಾಜನು ಹಿಮಾಲಯದಂತೆ ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾಗುತ್ತಾನೆ.

ಪ್ರಾಜ್ಞೋ ನ್ಯಾಯಗುಣೋಪೇತಃ ಪರರಂಧ್ರೇಷು ತತ್ಪರಃ ।
ಸುದರ್ಶಃ ಸರ್ವವರ್ಣಾನಾಂ ನಯಾಪನಯವಿತ್ ತಥಾ ॥೩೦॥

ಕ್ಷಿಪ್ರಕಾರೀ ಜಿತಕ್ರೋಧಃ ಸುಪ್ರಸಾದೋ ಮಹಾಮನಾಃ।
ಅರೋಷಪ್ರಕೃತಿರ್ಯುಕ್ತಃ ಕ್ರಿಯಾವಾನವಿಕತ್ಥನಃ ॥೩೧॥

ಪ್ರಾಜ್ಞನೂ, ನ್ಯಾಯಗುಣದಿಂದ ಕೂಡಿದವನೂ, ಶತ್ರುಗಳ ದೌರ್ಬಲ್ಯವನ್ನು ಹುಡುಕುವುದರಲ್ಲಿ ತತ್ಪರನೂ, ಎಲ್ಲ ವರ್ಣದವರಿಗೂ ಸುಲಭವಾಗಿ ದರ್ಶನವನ್ನು ಕೊಡುವವನು, ನ್ಯಾಯಾನ್ಯಾಯಗಳನ್ನು ತಿಳಿದವನೂ, ಶೀಘ್ರವಾಗಿ ಕಾರ್ಯವನ್ನು ಮಾಡುವವನೂ, ಕ್ರೋಧವನ್ನು ಜಯಿಸಿದವನೂ, ಧೈರ್ಯಶಾಲಿಯೂ, ಒಳ್ಳೆಯ ಅನುಗ್ರಹವನ್ನು ಮಾಡುವವನೂ, ರೋಷಪ್ರಕೃತಿಯನ್ನು ಹೊಂದದವನೂ, ಕ್ರಿಯಾ-ಶೀಲನಾದವನೂ, ತನ್ನನ್ನು ತಾನು ಹೊಗಳಿಕೊಳ್ಳದವನೂ ಆದ ರಾಜನು (ಸಮೃದ್ಧಿ-ಯನ್ನು ಹೊಂದುತ್ತಾನೆ).

ಆರಬ್ಧಾನ್ಯೇವ ಕಾರ್ಯಾಣಿ ನ ಪರ್ಯವಸಿತಾನಿ ಚ।
ಯಸ್ಯ ರಾಜ್ಞಃ ಪ್ರದೃಶ್ಯಂತೇ ಸ ರಾಜಾ ರಾಜಸತ್ತಮಃ ॥೩೨॥

ಯಾವ ರಾಜನು ಆರಂಭಿಸಿರುವ ಕಾರ್ಯಗಳು ಮಾತ್ರ ಕಂಡುಬರುತ್ತ-ವೆಯೋ, ಮಾಡಿ ಮುಗಿಸಿದ ಕಾರ್ಯಗಳು ಕಂಡುಬರುವುದಿಲ್ಲವೋ ಅಂತಹ ರಾಜನೇ ಶ್ರೇಷ್ಠರಾಜನೆನಿಸುತ್ತಾನೆ.

ಪುತ್ರಾ ಇವ ಪಿತುರ್ಗೇಹೇ ವಿಷಯೇ ಯಸ್ಯ ಮಾನವಾಃ।
ನಿರ್ಭಯಾ ವಿಚರಿಷ್ಯಂತಿ ಸ ರಾಜಾ ರಾಜಸತ್ತಮಃ ॥೩೩॥

ಯಾವನ ರಾಜ್ಯದಲ್ಲಿ ಪ್ರಜೆಗಳು ತಂದೆಯ ಮನೆಯಲ್ಲಿರುವ ಮಕ್ಕಳಂತೆ ನಿರ್ಭಯವಾಗಿ ಸಂಚರಿಸುವರೋ ಅವನೇ ಶ್ರೇಷ್ಠನಾದ ರಾಜನಾದವನು.

ಅಗೂಢವಿಭವಾ ಯಸ್ಯ ಪೌರಾ ರಾಷ್ಟ್ರನಿವಾಸಿನಃ।
ನಯಾಪನಯವೇತ್ತಾರಃ ಸ ರಾಜಾ ರಾಜಸತ್ತಮಃ ॥೩೪॥

ಯಾವನ ರಾಜ್ಯದಲ್ಲಿ ರಾಷ್ಟ್ರನಿವಾಸಿಗಳಾದ ಪೌರರು ತಮ್ಮ ಐಶ್ವರ್ಯವನ್ನು

ಮುಚ್ಚಿಕೊಳ್ಳಬೇಕಾದ ಪ್ರಸಂಗವಿಲ್ಲದೆ ನ್ಯಾಯಾನ್ಯಾಯಗಳನ್ನು ತಿಳಿದಿರುತ್ತಾರೆಯೋ ಅಂತಹ ರಾಜನೇ ಶ್ರೇಷ್ಠನಾದ ರಾಜನಾದವನು.

ಸ್ವಕರ್ಮನಿರತಾ ಯಸ್ಯ ಜನಾ ವಿಷಯವಾಸಿನಃ।
ಅಸಂಘಾತರತಾ ದಾಂತಾಃ ಪಾಲ್ಯಮಾನಾ ಯಥಾವಿಧಿ ॥೩೫॥

ವಶ್ಯಾ ನೇಯಾ ವಿನೀತಾಶ್ಚ ನ ಚ ಸಂಘರ್ಷಶೀಲಿನಃ।
ವಿಷಯೇ ದಾನರುಚಯೋ ನರಾ ಯಸ್ಯ ಸ ಪಾರ್ಥಿವಃ ॥೩೬॥

ಯಾವ ರಾಜನ ರಾಜ್ಯದಲ್ಲಿರುವ ಜನರು ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿರುತ್ತಾರೆಯೋ, ಗುಂಪುಗಾರಿಕೆಯಲ್ಲಿ ನಿರತರಾಗಿರುವುದಿಲ್ಲವೋ, ಇಂದ್ರಿಯನಿಗ್ರಹವನ್ನು ಹೊಂದಿರುತ್ತಾರೆಯೋ, ರಾಜನಿಂದ ಶಾಸ್ತ್ರಕ್ಕನುಗುಣವಾಗಿ ಪಾಲಿಸಲ್ಪಡುತ್ತಾರೆಯೋ, ರಾಜನಿಗೆ ವಶನಾಗಿರುತ್ತಾರೆಯೋ, ರಾಜನು ಹೇಳಿದಂತೆ ವಿನಯದಿಂದ ನಡೆದುಕೊಳ್ಳುತ್ತಾರೆಯೋ, ಪರಸ್ಪರವಿರೋಧವನ್ನು ಮಾಡುವುದರಲ್ಲಿ ಆಸಕ್ತರಾಗಿರುವುದಿಲ್ಲವೋ, ದಾನ ಮಾಡುವುದರಲ್ಲಿ ಅಭಿರುಚಿಯನ್ನು ಹೊಂದಿರುತ್ತಾರೆಯೋ ಅವನೇ ನಿಜವಾದ ರಾಜ.

ನ ಯಸ್ಯ ಕೂಟಂ ಕಪಟಂ ನ ಮಾಯಾ ನ ಚ ಮತ್ಸರಃ।
ವಿಷಯೇ ಭೂಮಿಪಾಲಸ್ಯ ತಸ್ಯ ಧರ್ಮಃ ಸನಾತನಃ ॥೩೭॥

ಯಾವ ರಾಜನ ರಾಜ್ಯದಲ್ಲಿ ಗುಂಪುಗಾರಿಕೆಯಾಗಲೀ, ಮೋಸವಾಗಲೀ, ಸುಳ್ಳಾಗಲೀ, ಮಾತ್ಸರ್ಯವಾಗಲೀ ಇರುವುದಿಲ್ಲವೋ ಅಂತಹ ರಾಜನ ಧರ್ಮವು ಸನಾತನವೆನಿಸುತ್ತದೆ.

ಯಃ ಸತ್ಕರೋತಿ ಜ್ಞಾತೀನಿ ನೇಯಃ ಪೌರಹಿತೇ ರತಃ।
ಸತಾಂ ಧರ್ಮಾನುಗಸ್ತ್ಯಾಗೀ ಸ ರಾಜಾ ರಾಜ್ಯಮರ್ಹತಿ ॥೩೮॥

ಯಾವನು ಜ್ಞಾತಿಗಳನ್ನು ಸತ್ಕರಿಸುತ್ತಾನೆಯೋ, ಪ್ರಜೆಗಳ ಹಿತದಲ್ಲಿ ರತನಾಗಿ ಮುಂದುವರೆಯುತ್ತಾನೆಯೋ, ಸಜ್ಜನರ ಧರ್ಮವನ್ನು ಅನುಸರಿಸುತ್ತಾನೆಯೋ,

ಸಮಯದಲ್ಲಿ ಧನವನ್ನು ತ್ಯಾಗ ಮಾಡುತ್ತಾನೆಯೋ ಅಂತಹ ರಾಜನೇ ರಾಜ್ಯಕ್ಕೆ ಅರ್ಹನಾದವನು.

ಯಸ್ಯ ಚಾರಶ್ಚ ಮಂತ್ರಶ್ಚ ನಿತ್ಯಂ ಚೈವ ಕೃತಾಕೃತೇ।
ನ ಜ್ಞಾಯತೇ ಹಿ ರಿಪುಭಿಃ ಸ ರಾಜಾ ರಾಜ್ಯಮರ್ಹತಿ ॥೩೯॥

ಯಾವ ರಾಜನ ಚಾರರಾಗಲೀ, ಮಂತ್ರವಾಗಲೀ, ಮಾಡಿದ ಅಥವಾ ಮಾಡದ ಕಾರ್ಯಗಳಾಗಲೀ ಶತ್ರುಗಳಿಗೆ ಎಂದೂ ತಿಳಿಯುವುದಿಲ್ಲವೋ ಅಂತಹ ರಾಜನು ರಾಜ್ಯಕ್ಕೆ ಅರ್ಹನಾಗುತ್ತಾನೆ.

ಶ್ಲೋಕಶ್ಚಾಯಂ ಪುರಾ ಗೀತೋ ಭಾರ್ಗವೇಣ ಮಹಾತ್ಮನಾ।
ಆಖ್ಯಾತೇ ರಾಮಚರಿತೇ ನೃಪತಿಂ ಪ್ರತಿ ಭಾರತ ॥೪೦॥

ಎಲೈ ಭಾರತನೇ! ರಾಜನನ್ನು ಕುರಿತು ಪರಶುರಾಮಚರಿತ್ರೆಯನ್ನು ಹೇಳಿದ ಮೇಲೆ ಮಹಾತ್ಮರಾದ ಶುಕ್ರಾಚಾರ್ಯರು ಹಿಂದೆ ಈ ಶ್ಲೋಕವನ್ನು ಗಾನ ಮಾಡಿದರು.

ರಾಜಾನಂ ಪ್ರಥಮಂ ವಿಂದೇತ್ ತತೋ ಭಾರ್ಯಾಂ ತತೋ ಧನಮ್।
ಅಸತ್ಯಸ್ಮಿನ್ ಮಹೀಪಾಲೇ ಕುತೋ ಭಾರ್ಯಾ ಕುತೋ ಧನಮ್ ॥೪೧॥

ಮೊದಲು ರಾಜನನ್ನು ಸಂಪಾದಿಸಬೇಕು. ಅನಂತರ ಪತ್ನಿಯನ್ನು, ಅನಂತರ ಧನವನ್ನು ಸಂಪಾದಿಸಬೇಕು. ರಾಜನೇ ಇಲ್ಲದಿದ್ದರೆ ಎಲ್ಲಿಯ ಪತ್ನಿ ಮತ್ತು ಎಲ್ಲಿಯ ಧನ?

ತದ್ ರಾಜನ್ ರಾಜ್ಯಕಾಮಾನಾಂ ನಾನ್ಯೋ ಧರ್ಮಃ ಸನಾತನಃ।
ಋತೇ ರಕ್ಷಾಂ ಸುವಿಸ್ಪಷ್ಟಾ ರಕ್ಷಾ ಲೋಕಸ್ಯ ಧಾರಣಮ್ ॥೪೨॥

ಎಲೈ ರಾಜನೇ! ಆದ್ದರಿಂದ ರಾಜ್ಯವನ್ನು ಬಯಸುವವರಿಗೆ ಪ್ರಜೆಗಳ ರಕ್ಷಣೆಯನ್ನು ಬಿಟ್ಟು, ಸನಾತನವಾದ ಬೇರೆ ಯಾವ ಧರ್ಮವೂ ಇಲ್ಲ. ಅತ್ಯಂತ ಸ್ಪಷ್ಟವಾದ ರಕ್ಷಣೆಯೇ ಲೋಕವನ್ನು ಧರಿಸುತ್ತದೆ.

ಪ್ರಾಚೇತಸೇನ ಮನುನಾ ಶ್ಲೋಕೌ ಚೇಮಾವುದಾಹೃತೌ ।
ರಾಜಧರ್ಮೇಷು ರಾಜೇಂದ್ರ ತಾವಿಹೈಕಮನಾಃ ಶೃಣು ॥೪೩॥

ಎಲೈ ರಾಜೇಂದ್ರನೇ! ಪ್ರಚೇತಸರ ಪುತ್ರನಾದ ಮನುವಿನಿಂದ ರಾಜಧರ್ಮಗಳ ವಿಷಯದಲ್ಲಿ ಈ ಎರಡು ಶ್ಲೋಕಗಳು ಹೇಳಲ್ಪಟ್ಟಿವೆ. ಅವುಗಳನ್ನು ಅವಧಾನದಿಂದ ಕೇಳುವವನಾಗು.

ಷಡೇತಾನ್ ಪುರುಷೋ ಜಹ್ಯಾದ್ ಭಿನ್ನಾಂ ನಾವಮಿವಾರ್ಣವೇ ।
ಅಪ್ರವಕ್ತಾರಮಾಚಾರ್ಯಮನಧೀಯಾನಮೃತ್ವಿಜಮ್ ॥೪೪॥

ಅರಕ್ಷಿತಾರಂ ರಾಜಾನಂ ಭಾರ್ಯಾಂ ಚಾಪ್ರಿಯವಾದಿನೀಮ್ ।
ಗ್ರಾಮಕಾಮಂ ಚ ಗೋಪಾಲಂ ವನಕಾಮಂ ಚ ನಾಪಿತಮ್ ॥೪೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತಪಂಚಾಶೋಽಧ್ಯಾಯಃ ॥೫೭॥

ಉಪದೇಶ ಮಾಡದಿರುವ ಆಚಾರ್ಯ, ಅಧ್ಯಯನಮಾಡದಿರುವ ಋತ್ವಿಕ್, ರಕ್ಷಣೆಯನ್ನು ಮಾಡದಿರುವ ರಾಜ, ಪ್ರತಿಕೂಲವಾಗಿ ಮಾತನಾಡುವ ಭಾರ್ಯೆ, ಗ್ರಾಮದಲ್ಲಿಯೇ ಇರಲು ಬಯಸುವ ಗೋಪಾಲ ಮತ್ತು ಕಾಡಿನಲ್ಲಿ ಇರಲು ಬಯಸುವ ಕ್ಷೌರಿಕ ಈ ಆರು ಜನರನ್ನು ಸಮುದ್ರದಲ್ಲಿ ಒಡೆದು ಹೋದ ದೋಣಿಯನ್ನು ಬಿಡುವಂತೆ ಪುರುಷನು ಪರಿತ್ಯಜಿಸಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೭ನೆಯ ಅಧ್ಯಾಯವು ಮುಗಿಯಿತು.

—0—

೫೮. ಐವತ್ತೆಂಟನೆಯ ಅಧ್ಯಾಯ

ಪ್ರಥಮದಿನದ ಉಪದೇಶದ ಅನಂತರ ಸಾಯಂಕಾಲದಲ್ಲಿ
ಕೃಷ್ಣಾದಿಗಳ ಹಿಂದಿರುವಿಕೆ

ವೈಶಂಪಾಯನಃ

ಏತಾವದುಕ್ತ್ವಾ ಭೂಯೋಽಪಿ ಭೀಷ್ಮಃ ಕುರುಪಿತಾಮಹಃ।
ಉವಾಚ ವಚನಂ ಧೀಮಾನ್ ಸರ್ವತಃ ಸಾರಸಂಗ್ರಹಮ್ ॥೧॥

ವೈಶಂಪಾಯನರು – ಇಷ್ಟು ಮಾತುಗಳನ್ನಾಡಿ ಕುರುಪಿತಾಮಹರಾದ ಮೇಧಾವಿಗಳಾದ ಭೀಷ್ಮರು ಪುನಃ ಸರ್ವಸಾರಸಂಗ್ರಹರೂಪವಾದ ಮಾತುಗಳನ್ನು ಆಡಿದರು.

ಏತತ್ ತೇ ರಾಜಧರ್ಮಾಣಾಂ ನವನೀತಂ ಯುಧಿಷ್ಠಿರ।
ಬೃಹಸ್ಪತಿರ್ಹಿ ಭಗವಾನ್ ನಾನ್ಯಂ ಧರ್ಮಂ ಪ್ರಶಂಸತಿ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ರಾಜಧರ್ಮಗಳ ಈ ಸಾರವನ್ನು ನಾನು ನಿನಗೆ ಹೇಳಿದ್ದೇನೆ. ಪೂಜ್ಯರಾದ ಬೃಹಸ್ಪತಿಗಳೂ ಸಹ ಬೇರೆಯ ಧರ್ಮವನ್ನು ಪ್ರಶಂಸಿಸುವುದಿಲ್ಲ.

ವಿಶಾಲಾಕ್ಷಶ್ಚ ಭಗವಾನ್ ಕಾವ್ಯಶ್ಚೈವ ಮಹಾತಪಾಃ।
ಸಹಸ್ರಾಕ್ಷೋ ಮಹೇಂದ್ರಶ್ಚ ತಥಾ ಪ್ರಾಚೇತಸೋ ಮನುಃ ॥೩॥

ಭರದ್ವಾಜಶ್ಚ ಭಗವಾಂಸ್ತಥಾ ಗೌರಶಿರಾ ಮುನಿಃ।
ರಾಜಶಾಸ್ತ್ರಪ್ರಣೇತಾರೋ ಬ್ರಾಹ್ಮಣಾ ಸತ್ಯವಾದಿನಃ ॥೪॥

ರಕ್ಷಾಮೇವ ಪ್ರಶಂಸಂತಿ ಧರ್ಮಂ ಧರ್ಮಭೃತಾಂವರ।
ರಾಜ್ಞಾಂ ರಾಜೀವತಾಮ್ರಾಕ್ಷ ಸಾಧನಂ ಚಾತ್ರ ವೈ ಶೃಣು ॥೫॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ! ಪೂಜ್ಯರಾದ ವಿಶಾಲಾಕ್ಷನು, ಮಹಾತಪಸ್ವಿ-

ಯಾದ ಶುಕ್ರನು, ಸಹಸ್ರಾಕ್ಷನಾದ ದೇವೇಂದ್ರನು, ಪ್ರಚೇತಸರ ಪುತ್ರರಾದ ಮನುವು, ಪೂಜ್ಯನಾದ ಭರದ್ವಾಜನು, ಗೌರಶಿರಾ ಋಷಿಯು ಮತ್ತು ರಾಜಶಾಸ್ತ್ರವನ್ನು ರಚಿಸಿದ ಸತ್ಯವಾದಿಗಳಾದ ಬ್ರಾಹ್ಮಣರು ರಕ್ಷಣೆಯನ್ನೇ ರಾಜರಿಗೆ ಶ್ರೇಷ್ಠವಾದ ಧರ್ಮವೆಂದು ಪ್ರಶಂಸಿಸುತ್ತಾರೆ. ಎಲೈ ರಾಜೀವನೇತ್ರನೇ! ಅದಕ್ಕೆ ಸಾಧನೆಯನ್ನು ಕೇಳುವವನಾಗು.

ಚಾರಶ್ಚ ಪ್ರಣಿಧಿಶ್ಚೈವ ಕಾಲೇ ದಾನಮಮತ್ಸರಃ।
ಯುಕ್ತ್ಯಾऽऽದಾನಂ ನ ಚಾದಾನಮಯೋಗೇನ ಯುಧಿಷ್ಠಿರ ॥೬॥

ಸತಾಂ ಸಂಗ್ರಹಣಂ ಶೌರ್ಯಂ ದಾಕ್ಷ್ಯಂ ಸತ್ಯಂ ಪ್ರಜಾಹಿತಮ್।
ಅನಾರ್ಜವೈರಾರ್ಜವೈಶ್ಚ ಶತ್ರುಪಕ್ಷಸ್ಯ ಭೇದನಮ್ ॥೭॥

ಸಾಧೂನಾಮಪರಿತ್ಯಾಗಃ ಕುಲೀನಾನಾಂ ಚ ಧಾರಣಮ್।
ನಿಚಯಶ್ಚ ನಿಚೇಯಾನಾಂ ಸೇವಾ ಬುದ್ಧಿಮತಾಮಪಿ ॥೮॥

ಬಲಾನಾಂ ಹರ್ಷಣಂ ನಿತ್ಯಂ ಪ್ರಜಾನಾಮನ್ವವೇಕ್ಷಣಮ್।
ಕಾರ್ಯೇಷ್ವಖೇದಃ ಕೋಶಸ್ಯ ತಥೈವ ಚ ವಿವರ್ಧನಮ್ ॥೯॥

ಎಲೈ ಯುಧಿಷ್ಠಿರನೇ! ಚಾರರು, ಗುರುದೇವತಾಪ್ರಾರ್ಥನೆ, ಯೋಗ್ಯವಾದ ಕಾಲದಲ್ಲಿ ದಾನ, ಮಾತ್ಸರ್ಯರಾಹಿತ್ಯ, ಯುಕ್ತವಾದ ಕಾಲದಲ್ಲಿ ಪ್ರಜೆಗಳಿಂದ ದಾನದ ಸ್ವೀಕಾರ, ಅನ್ಯಾಯದಿಂದ ಪ್ರಜೆಗಳ ಧನವನ್ನು ಸ್ವೀಕರಿಸದಿರುವುದು, ಸಜ್ಜನರನ್ನು ಸಂಗ್ರಹಿಸುವುದು, ಶೌರ್ಯ, ದಕ್ಷತೆ, ಸತ್ಯ, ಪ್ರಜಾಹಿತ, ನೇರ ಮತ್ತು ವಕ್ರಮಾರ್ಗಗಳಿಂದ ಶತ್ರುಪಕ್ಷವನ್ನು ಭೇದಿಸುವುದು. ಸಜ್ಜನರನ್ನು ಪರಿತ್ಯಾಗ ಮಾಡದಿರುವುದು, ಕುಲೀನರಾದವರನ್ನು ಪೋಷಿಸುವುದು, ಸಂಗ್ರಹಮಾಡಬೇಕಾದ ವಸ್ತುವನ್ನು ಸಂಗ್ರಹಿಸುವುದು, ಮೇಧಾವಿಗಳ ಸೇವೆಯನ್ನು ಮಾಡುವುದು, ಸೈನ್ಯವನ್ನು ಸಂತೋಷಪಡಿಸುವುದು, ನಿತ್ಯವೂ ಪ್ರಜೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು, ಕಾರ್ಯಗಳನ್ನು ಮಾಡುವುದರಲ್ಲಿ ದಣಿಯದಿರುವುದು, ಕೋಶವನ್ನು ಅಭಿವೃದ್ಧಿಪಡಿಸುವುದು.

ಪುರಗುಪ್ತಿರವಿಶ್ವಾಸಃ ಪೌರಸಂಘಾತಭೇದನಮ್ ।
ಕೇತನಾನಾಂ ಚ ಜೀರ್ಣಾನಾಮವೇಕ್ಷಾ ಚೈವ ಸೀದತಾಮ್ ॥೧೦॥

ದ್ವಿವಿಧಸ್ಯ ಚ ದಂಡಸ್ಯ ಪ್ರಯೋಗಃ ಕಾಲಚೋದಿತಃ ।
ಅರಿಮಧ್ಯಸ್ಥಮಿತ್ರಾಣಾಂ ಯಥಾವಚ್ಚಾನ್ವವೇಕ್ಷಣಮ್ ॥೧೧॥

ಉಪಜಾಪಶ್ಚ ಭೃತ್ಯಾನಾಮಾತ್ಮನಃ ಪುರದರ್ಶನಮ್ ।
ಅವಿಶ್ವಾಸಃ ಸ್ವಯಂ ಚೈವ ಪರಸ್ಯಾಶ್ವಾಸನಂ ತಥಾ ॥೧೨॥

ನೀತಿಧರ್ಮಾನುಸರಣಂ ನಿತ್ಯಮುತ್ಥಾನಮೇವ ಚ ।
ರಿಪೂಣಾಮನವಜ್ಞಾನಂ ನಿತ್ಯಂ ಚಾನಾರ್ಯವರ್ಜನಮ್ ॥೧೩॥

ಉತ್ಥಾನಂ ಹಿ ನರೇಂದ್ರಾಣಾಂ ಬೃಹಸ್ಪತಿರಭಾಷತ ।
ರಾಜಧರ್ಮಸ್ಯ ಯನ್ಮೂಲಂ ಶ್ಲೋಕಶ್ಚಾತ್ರ ನಿಬೋಧ ಮೇ ॥೧೪॥

ರಾಜಧಾನಿಯನ್ನು ರಕ್ಷಿಸುವುದು, ಯಾರನ್ನೂ ಬಹಳವಾಗಿ ನಂಬದಿರುವುದು, ಪ್ರಜೆಗಳ ಗುಂಪುಗಾರಿಕೆಯನ್ನು ಭೇದಿಸುವುದು, ಹಳೆಯದಾದ ಮನೆಗಳ ಉಜ್ಜೀವನ -ವನ್ನು ಮಾಡುವುದು, ಕಷ್ಟದಲ್ಲಿದ್ದವರನ್ನು ನೋಡಿಕೊಳ್ಳುವುದು, ವಾಗ್ದಂಡ ಮತ್ತು ಧನದಂಡರೂಪವಾದ ಎರಡು ದಂಡಗಳನ್ನು ಯೋಗ್ಯವಾದ ಕಾಲದಲ್ಲಿ ಪ್ರಯೋ-ಗಿಸುವುದು, ಶತ್ರುಗಳನ್ನು ಮಿತ್ರರನ್ನು ಮತ್ತು ಮಧ್ಯಸ್ಥರನ್ನು ಅವರವರ ಸ್ವಭಾವಕ್ಕೆ ತಕ್ಕಂತೆ ನೋಡಿಕೊಳ್ಳುವುದು, ಭೃತ್ಯರನ್ನು ಕುರಿತು ಪ್ರಿಯವಾಗಿ ಮಾತನಾಡುವುದು, ತಾನೇ ನಗರದ ಅನ್ವೇಕ್ಷಣೆಯನ್ನು ಮಾಡುವುದು, ತಾನು ಸ್ವತಃ ವಿಶ್ವಾಸವನ್ನು ಮಾಡದೇ ಇನ್ನೊಬ್ಬರು ತನ್ನಲ್ಲಿ ವಿಶ್ವಾಸವನ್ನು ಮಾಡುವಂತೆ ಮಾಡುವುದು, ರಾಜನೀತಿಯ ಧರ್ಮಗಳನ್ನು ಅನುಸರಿಸುವುದು, ನಿತ್ಯವೂ ಉದ್ಯಮಶೀಲನಾಗಿ-ರುವುದು, ಶತ್ರುಗಳನ್ನು ಕಡೆಗಣಿಸದಿರುವುದು, ಯಾವಾಗಲೂ ಅನಾರ್ಯರನ್ನು ಮತ್ತು ಅನಾರ್ಯಕಾರ್ಯಗಳನ್ನು ಪರಿತ್ಯಾಗ ಮಾಡುವುದು ಇವುಗಳೆಲ್ಲ ಉದ್ಯಮ-ಶೀಲತೆಯೆಂದು ಬೃಹಸ್ಪತಿಗಳು ಹೇಳಿದ್ದಾರೆ. ಇವು ರಾಜಧರ್ಮಕ್ಕೆ ಮೂಲಭೂತ-ವಾದುದು. ಈ ವಿಷಯದಲ್ಲಿ ನಾನು ಹೇಳುವ ಒಂದು ಶ್ಲೋಕವನ್ನು ಕೇಳು.

ಉತ್ಥಾನೇನಾಮೃತಂ ಲಬ್ಧಮುತ್ಥಾನೇನಾಸುರಾ ಹತಾಃ।
ಉತ್ಥಾನೇನ ಮಹೇಂದ್ರೇಣ ಶ್ರೇಷ್ಠ್ಯಂ ಪ್ರಾಪ್ತಂ ದಿವೀಹ ಚ ॥೧೫॥

ಉದ್ಯಮಶೀಲತೆಯಿಂದ ಅಮೃತವು ಲಬ್ಧವಾಯಿತು. ಉದ್ಯಮಶೀಲತೆಯಿಂದ ಅಸುರರು ಹತರಾದರು. ಉದ್ಯಮಶೀಲನಾದ ಮಹೇಂದ್ರನಿಂದ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಶ್ರೇಷ್ಠತ್ವವು ಪಡೆಯಲ್ಪಟ್ಟಿತು.

ಉತ್ಥಾನಧೀರಃ ಪುರುಷೋ ವಾಗ್ಧೀರಾನಧಿತಿಷ್ಠತಿ।
ಉತ್ಥಾನಧೀರಂ ವಾಗ್ಧೀರಾ ರಮಯಂತ ಉಪಾಸತೇ ॥೧೬॥

ಉದ್ಯಮ ಎಂದರೆ ಪ್ರಯತ್ನಧೀರನಾದ ಪುರುಷನು ವಾಗ್ಧೀರರಾದ ಪುರುಷರ ಮೇಲೆ ನಿಲ್ಲುತ್ತಾನೆ. ಉತ್ಥಾನಧೀರನಾದ ಪುರುಷನನ್ನು ವಾಗ್ಧೀರರಾದವರು ಸಂತೋಷಪಡಿಸುತ್ತಾ ಉಪಾಸನೆ ಮಾಡುತ್ತಾರೆ.

ಉತ್ಥಾನಹೀನೋ ರಾಜಾ ಹಿ ಬುದ್ಧಿಮಾನಪಿ ನಿತ್ಯಶಃ।
ಧರ್ಷಣೀಯೋ ರಿಪೂಣಾಂ ಸ್ಯಾದ್ ಭುಜಂಗ ಇವ ನಿರ್ವಿಷಃ ॥೧೭॥

ರಾಜನು ಬುದ್ಧಿವಂತನಾಗಿದ್ದರೂ ನಿತ್ಯವೂ ಉದ್ಯಮರಹಿತನಾಗಿದ್ದರೆ ವಿಷವಿಲ್ಲದ ಸರ್ಪದಂತೆ ಅವನು ಶತ್ರುಗಳಿಂದ ಪರಾಭವಾದಿ ಅವಮಾನಗಳಿಗೆ ಒಳಗಾಗುತ್ತಾನೆ.

ನ ಚ ಶತ್ರುರವಜ್ಞೇಯೋ ದುರ್ಬಲೋऽಪಿ ಬಲೀಯಸಾ।
ಅಲ್ಪೋऽಪಿ ಹಿ ದಹತ್ಯಗ್ನಿರ್ವಿಷಮಲ್ಪಂ ಹಿನಸ್ತಿ ಚ ॥೧೮॥

ಬಲಿಷ್ಠನಾದ ರಾಜನು ದುರ್ಬಲನಾದ ಶತ್ರುವನ್ನೂ ಉಪೇಕ್ಷೆ ಮಾಡಬಾರದು. ಅಲ್ಪವಾದ ಅಗ್ನಿಯೂ ಸುಡುತ್ತದೆಯಷ್ಟೇ!. ಅಲ್ಪವಾದ ವಿಷವೂ ಕೊಲ್ಲುತ್ತದೆಯಷ್ಟೇ!

ಏಕಾಂಗೇನಾಪಿ ಸಂಭೂತಃ ಶತ್ರುರ್ದುರ್ಗಸಮಾಶ್ರಿತಃ।
ಸರ್ವಂ ತಾಪಯತೇ ದೇಶಮಪಿ ರಾಜ್ಞಃ ಸಮೃದ್ಧಿನಃ ॥೧೯॥

ರಾಜ್ಯದ ಆರು ಅಂಗಗಳಿವೆ. ಒಂದು ಅಂಗದಿಂದ ಸಹಿತನಾದ ಶತ್ರುವೂ ಸಹ ರಾಜನ ಕೋಟೆಯನ್ನು ಆಶ್ರಯಿಸಿದರೆ ಸಮೃದ್ಧಿಯುಳ್ಳ ರಾಜನ ಎಲ್ಲ ದೇಶವನ್ನೂ ಸಂತಾಪಗೊಳಿಸುತ್ತಾನೆ.

ರಾಜ್ಞೋ ರಹಸ್ಯಂ ಯದ್ ವಾಕ್ಯಂ ಜಯಾರ್ಥಂ ಲೋಕಸಂಗ್ರಹಃ।
ಹೃದಿ ಯಚ್ಚಾಸ್ಯ ಜಿಹ್ಮಂ ಸ್ಯಾತ್ ಕಾರಣಾರ್ಥಂ ಚ ಯದ್ ಭವೇತ್ ॥೨೦॥

ರಾಜನು ಶತ್ರುಜಯಾರ್ಥವಾಗಿ ಯಾವ ರಹಸ್ಯ ಮಾತುಗಳನ್ನಾಡುತ್ತಾನೆಯೋ, ಜಯಾರ್ಥವಾಗಿ ಯಾವ ಲೋಕಸಂಗ್ರಹವನ್ನು ಸಂಗ್ರಹಿಸಲು ಮಾಡುತ್ತಾನೆಯೋ (ಲೋಕಸಂಗ್ರಹ - ಪ್ರಜೆಗಳನ್ನು ಸಂಗ್ರಹ ಮಾಡುವುದಕ್ಕಾಗಿ ಏಕಾಂತದಲ್ಲಿ ಯಾವ ಮಾತುಗಳನ್ನಾಡುತ್ತಾನೆಯೋ) ಅದೆಲ್ಲವನ್ನೂ ಮರೆ ಮಾಡಿ ಸಭೆಯಲ್ಲಿ ಯಾವ ಒಳ್ಳೆಯ ಮಾತುಗಳನ್ನಾಡುತ್ತಾನೆಯೋ, ಅವನ ಹೃದಯದಲ್ಲಿ ಯಾವ ಕುಟಿಲತೆ ಇದೆಯೋ ಅವೆಲ್ಲವೂ ಶತ್ರುಗಳನ್ನು ಜಯಿಸುವ ಉದ್ದೇಶದಿಂದ ತನ್ನ ಭಟರು ಮಾಡಬೇಕಾದ ಕಾರ್ಯದ ಸಲುವಾಗಿ ಇರುತ್ತದೆ ಹೊರತು ರಾಜನು ಯಾವಾಗಲೂ ಅಂತಹ ವಕ್ರತೆಯನ್ನು ಮತ್ತು ಕಪಟತನವನ್ನು ಹೊಂದಿರಬಾರದು. – (ಲಕ್ಷ್ಮಲಂಕಾರ).

ಯಚ್ಚಾಸ್ಯ ಕಾರ್ಯಂ ವೃಜಿನಮಾರ್ಜವೇನೈವ ಧಾರ್ಯತೇ।
ದಂಭನಾರ್ಥಾಯ ಲೋಕಸ್ಯ ಧರ್ಮಿಷ್ಠಾಮಾಚರೇತ್ ಕ್ರಿಯಾಮ್ ॥೨೧॥

ಶತ್ರುಗಳನ್ನು ಜಯಿಸುವುದಕ್ಕಾಗಿ ಒಂದು ಪಾಪಕಾರ್ಯವನ್ನು ಮಾಡಬೇಕಾದರೂ ಅದನ್ನು ಸರಳತೆಯಿಂದಲೇ ಮಾಡಬೇಕು. ಪ್ರಜೆಗಳನ್ನು ರಂಜಿಸುವುದಕ್ಕಾಗಿ ಧರ್ಮಿಷ್ಠವಾದ ಕಾರ್ಯಗಳನ್ನು ಮಾಡಬೇಕು.

ರಾಜ್ಯಂ ಹಿ ಸುಮಹತ್ತಂತ್ರಂ ದುರ್ಧಾರ್ಯಮಕೃತಾತ್ಮಭಿಃ।
ನ ಶಕ್ಯಂ ಮೃದುನಾ ವೋಢುಮಾಘಾತಸ್ಥಾನಮುಲ್ಬಣಮ್ ॥೨೨॥

ರಾಜ್ಯವು ಅನೇಕ ತಂತ್ರಗಳಿಗೆ ಅಧೀನವಾದುದು. ಮೃದುವಾದ ಮಾತುಗಳಿಂದ

ಉಲ್ಬಣವಾದ ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುವುದು ಹೇಗೆ ಸಾಧ್ಯವಿಲ್ಲವೋ ಅದರಂತೆ ಮನೋಜಯವಿಲ್ಲದವರಿಂದ ರಾಜ್ಯವನ್ನು ಧರಿಸುವುದು ಸಾಧ್ಯವಿಲ್ಲವು. – ಲಕ್ಷಾಲಂಕಾರ.

ರಾಜ್ಯಂ ಸರ್ವಾಮಿಷಂ ನಿತ್ಯಮಾರ್ಜವೇನೇಹ ಧಾರ್ಯತೇ।
ತಸ್ಮಾನ್ನಿಶ್ರೇಣ ಸತತಂ ವರ್ತಿತವ್ಯಂ ಯುಧಿಷ್ಠಿರ ॥೨೩॥

ಸರ್ವರಿಗೂ ಪ್ರಿಯವಾದ ರಾಜ್ಯವನ್ನು ಕೇವಲ ಋಜುತನದಿಂದಲೇ ಆಳಲು ಸಾಧ್ಯವಿಲ್ಲ. ಎಲೈ ಯುಧಿಷ್ಠಿರನೇ! ಆದ್ದರಿಂದ ಮಾರ್ದವಕಾಠಿನ್ಯಗಳನ್ನು ಮಿಶ್ರ-ಗೊಳಿಸಿ ಕಾರ್ಯಗಳನ್ನು ಮಾಡಬೇಕು. – ಲಕ್ಷಾಲಂಕಾರ.

ಯದ್ಯಪ್ಯಸ್ಯ ವಿಪತ್ತಿಃ ಸ್ಯಾದ್ ರಕ್ಷಮಾಣಸ್ಯ ವೈ ಪ್ರಜಾಃ।
ಸೋಽಪ್ಯಸ್ಯ ವಿಪುಲೋ ಧರ್ಮ ಏವಂವೃತ್ತಾ ಹಿ ಭೂಮಿಪಾಃ ॥೨೪॥

ಪ್ರಜೆಗಳ ರಕ್ಷಣೆಯನ್ನು ಮಾಡುತ್ತಾ ರಾಜನಿಗೆ ವಿಪತ್ತುಂಟಾದರೂ ಅದು ಅವನಿಗೆ ವಿಪುಲವಾದ ಧರ್ಮವೇ ಆಗುತ್ತದೆ. ಹಿಂದಿನ ರಾಜರು ಇಂತಹ ನಡತೆ-ಯನ್ನೇ ಹೊಂದಿದ್ದರು.

ಏಷ ತೇ ರಾಜಧರ್ಮಾಣಾಂ ಲೇಶಃ ಸಮನುವರ್ಣಿತಃ।
ಭೂಯಸ್ತೇ ಯತ್ರ ಸಂದೇಹಸ್ತದ್ ಬ್ರೂಹಿ ಕುರುಸತ್ತಮ ॥೨೫॥

ಎಲೈ ಕುರುಶ್ರೇಷ್ಠನೇ! ನಾನು ನಿನಗೆ ರಾಜಧರ್ಮಗಳ ಒಂದು ಲೇಶವನ್ನು ಮಾತ್ರ ವರ್ಣಿಸಿದ್ದೇನೆ. ನಿನಗೆ ಪುನಃ ಸಂದೇಹವಿದ್ದಲ್ಲಿ ಅದನ್ನು ಹೇಳು.

ವೈಶಂಪಾಯನಃ

ತತೋ ವ್ಯಾಸಶ್ಚ ಭಗವಾನ್ ದೇವಸ್ಥಾನೋಽಶ್ಮನಾ ಸಹ।
ವಾಸುದೇವಃ ಕೃಪಶ್ಚೈವ ಸಾತ್ಯಕಿಃ ಸಂಜಯಸ್ತಥಾ ॥೨೬॥

ಸಾಧು ಸಾಧ್ವಿತಿ ಸಂಹೃಷ್ಟಾಃ ಪುಷ್ಯಮಾಣೈರಿವಾನನೈಃ।
ಅಸ್ತುವಂಸ್ತೇ ನರವ್ಯಾಘ್ರಂ ಭೀಷ್ಮಂ ಧರ್ಮಭೃತಾಂವರಮ್ ॥೨೭॥

ವೈಶಂಪಾಯನರು – ಆಗ ಪೂಜ್ಯರಾದ ವ್ಯಾಸರು ದೇವಸ್ಥಾನನು, ಅಶ್ಮನು, ಕೃಷ್ಣನು, ಕೃಪರು, ಸಾತ್ಯಕಿಯು ಮತ್ತು ಸಂಜಯನು ಸಂತೋಷಗೊಂಡು ಅರಳಿದ ಮುಖವುಳ್ಳವರಾಗಿ ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಭೀಷ್ಮರನ್ನು ಸಾಧು ಸಾಧು ಎಂದು ಪ್ರಶಂಸಿಸಿದರು.

ತತೋ ದೀನಮನಾ ಭೀಷ್ಮಮುವಾಚ ಕುರುಸತ್ತಮಃ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಪಾದೌ ತಸ್ಯ ಶನೈಃ ಸ್ಪೃಶನ್ ॥೨೮॥

ಅನಂತರ ಕುರುಶ್ರೇಷ್ಠನಾದ ಯುಧಿಷ್ಠಿರನು ನೀರು ತುಂಬಿದ ಕಣ್ಣುಗಳಿಂದ ಕೂಡಿ ಭೀಷ್ಮರ ಪಾದವನ್ನು ನಿಧಾನವಾಗಿ ಸ್ಪರ್ಶಿಸಿ ಮನಸ್ಸಿನಲ್ಲಿ ದೈನ್ಯವನ್ನು ಹೊಂದಿ ಅವರನ್ನು ಕುರಿತು ಮಾತನಾಡಿದನು.

ಶ್ವ ಇದಾನೀಂ ಸ್ವಸಂದೇಹಂ ಪ್ರಕ್ಷ್ಯಾಮಿ ತ್ವಾ ಪಿತಾಮಹ।
ಉಪೈತಿ ಸವಿತಾಪ್ಯಸ್ತಂ ರಸಮಾಪೀಯ ಪಾರ್ಥಿವಮ್ ॥೨೯॥

ಎಲೈ ಪಿತಾಮಹನೇ! ಈಗ ಇರುವ ನನ್ನ ಸಂದೇಹವನ್ನು ನಾಳೆಯ ದಿನ ಪ್ರಶ್ನೆ ಮಾಡುವೆನು. ಸೂರ್ಯನು ಭೂಮಿಯ ರಸವನ್ನು ಹೀರಿ ಅಸ್ತಂಗತನಾಗುತ್ತಿದ್ದಾನೆ. (ಎಂದು ಹೇಳಿದನು).

ತತೋ ದ್ವಿಜಾತೀನಾಮಭಿವಾದ್ಯ ಕೇಶವಃ
ಕೃಪಶ್ಚ ತೇ ಚೈವ ಯುಧಿಷ್ಠಿರಾದಯಃ।
ಪ್ರದಕ್ಷಿಣೀಕೃತ್ಯ ಮಹಾನದೀಸುತಂ
ತತೋ ರಥಾನಾರುರುಹುರ್ಮುದಾ ಯುತಾಃ ॥೩೦॥

ಅನಂತರ ಕೃಷ್ಣನೂ, ಕೃಪರೂ, ಯುಧಿಷ್ಠಿರಾದಿಗಳೂ, ಬ್ರಾಹ್ಮಣರನ್ನು ನಮಸ್ಕರಿಸಿ ಮಹಾನದೀಪುತ್ರರಾದ ಭೀಷ್ಮರಿಗೆ ಪ್ರದಕ್ಷಿಣೆಯನ್ನು ಮಾಡಿ, ಸಂತೋಷದಿಂದ ಕೂಡಿ ತಮ್ಮ ತಮ್ಮ ರಥಗಳನ್ನು ಏರಿದರು.

ದೃಷದ್ವತೀಂ ಚಾಪ್ಯವಗಾಹ್ಯ ಸುವ್ರತಾಃ
ಕೃತೋದಕಾರ್ಯಾಃ ಕೃತಜಪ್ಯಮಂಗಲಾಃ।
ಉಪಾಸ್ಯ ಸಂಧ್ಯಾಂ ವಿಧಿವತ್ ಪರಂತಪಾಃ
ತತಃ ಪುರಂ ತೇ ವಿವಿಶುರ್ಗಜಾಹ್ವಯಮ್ ॥೩೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಪಂಚಾಶೋಽಧ್ಯಾಯಃ ॥೫೮॥

ಒಳ್ಳೆಯ ವ್ರತಧಾರಿಗಳಾದ ಅವರು ವೃಷದ್ವತೀನದಿಯನ್ನು ಸಮೀಪಿಸಿ, ಜಲ-ತರ್ಪಣಾದಿಗಳನ್ನು ಜಪಗಳನ್ನು ಮಂಗಳಕಾರ್ಯಗಳನ್ನು ಮಾಡಿ, ವಿಧಿವತ್ತಾಗಿ ಸಂಧ್ಯಾವಂದನೆಯನ್ನು ಆಚರಿಸಿ, ಅನಂತರ ಪರಂತಪರಾದ ಅವರು ಹಸ್ತಿನಪುರ-ವನ್ನು ಪ್ರವೇಶಿಸಿದರು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೫೮ನೆಯ ಅಧ್ಯಾಯವು ಮುಗಿಯಿತು

—0—

೫೯. ಐವತ್ತೊಂಭತ್ತನೆಯ ಅಧ್ಯಾಯ

ಭೀಷ್ಮರಿಂದ ರಾಜೋತ್ಪತ್ತಿಯ ಬ್ರಹ್ಮಕೃತದಂಡನೀತಿಶಾಸ್ತ್ರದ ಮತ್ತು ಪೃಥುರಾಜಚರಿತ್ರೆಯ ಕಥನ

ವೈಶಂಪಾಯನಃ

ತತಃ ಕಾಲ್ಯಂ ಸಮುತ್ಥಾಯ ಕೃತಪೌರ್ವಾಹ್ಣಿಕಕ್ರಿಯಾಃ।
ಯಯುಸ್ತೇ ನಗರಾಕಾರೈ ರಥೈಃ ಪಾಂಡವಯಾದವಾಃ ॥೧॥

ವೈಶಂಪಾಯನರು – ಅನಂತರ ಪಾಂಡವ-ಯಾದವರು ಪ್ರಾತಃಕಾಲದಲ್ಲಿ ಬೇಗ ಎದ್ದು ಪೂರ್ವಾಹ್ಣಿಕಕ್ರಿಯೆಗಳನ್ನು ಮಾಡಿ ನಗರದಂತಿದ್ದ ರಥಗಳಿಂದ ಹೊರಟರು.

ಪ್ರಪದ್ಯ ಚ ಕುರುಕ್ಷೇತ್ರಂ ಭೀಷ್ಮಮಾಸಾದ್ಯ ಚಾನಘಮ್।
ಸುಖಾಂ ಚ ರಜನೀಂ ಪೃಷ್ಟ್ವಾ ಗಾಂಗೇಯಂ ರಥಿನಾಂವರಮ್ ॥೨॥

ವ್ಯಾಸಾದೀನಭಿವಾದ್ಯರ್ಷೀನ್ ಸರ್ವೈಸ್ತೈಶ್ಚಾಭಿನಂದಿತಾಃ।
ನಿಷೇದುರಭಿತೋ ಭೀಷ್ಮಂ ಪರಿವಾರ್ಯ ಸಮಂತತಃ ॥೩॥

ಕುರುಕ್ಷೇತ್ರವನ್ನು ತಲುಪಿ, ಅನಘರಾದ ಭೀಷ್ಮರನ್ನು ಸಮೀಪಿಸಿ, ರಥಿಕರಲ್ಲಿ ಶ್ರೇಷ್ಠರಾದ ಭೀಷ್ಮರನ್ನು ರಾತ್ರಿಯ ಕುಶಲಪ್ರಶ್ನೆಯನ್ನು ಮಾಡಿ, ವ್ಯಾಸಾದಿ ಮಹರ್ಷಿ-ಗಳನ್ನು ನಮಸ್ಕರಿಸಿ, ಅವರೆಲ್ಲರಿಂದಲೂ ಅಭಿನಂದಿಸಲ್ಪಟ್ಟು ಭೀಷ್ಮರನ್ನು ಸುತ್ತುವರಿದು ಕುಳಿತುಕೊಂಡರು.

ತತೋ ರಾಜಾ ಮಹಾತೇಜಾ ಧರ್ಮರಾಜೋ ಯುಧಿಷ್ಠಿರಃ।
ಅಬ್ರವೀತ್ ಪ್ರಾಂಜಲಿರ್ಭೀಷ್ಮಂ ಪ್ರತಿಪೂಜ್ಯಾಭಿವಾದ್ಯ ಚ ॥೪॥

ಅನಂತರ ಮಹಾತೇಜಸ್ವಿಯೂ ಧರ್ಮರಾಜನೂ ಆದ ಯುಧಿಷ್ಠಿರನು ಭೀಷ್ಮರನ್ನು ನಮಸ್ಕರಿಸಿ, ಕೈಗಳನ್ನು ಮುಗಿದು ಮಾತನಾಡಿದನು.

ಯ ಏಷ ರಾಜಾ ರಾಜೇತಿ ಶಬ್ದಶ್ಚರತಿ ಭಾರತ।
ಕಥಮೇಷ ಸಮುತ್ಪನ್ನಸ್ತನ್ಮೇ ಬ್ರೂಹಿ ಪಿತಾಮಹ ॥೫॥

ಎಲೈ ಭಾರತನೇ! ಪಿತಾಮಹನೇ! 'ಈ ರಾಜ ರಾಜ ಎಂಬ ಶಬ್ದವು ಬಳಕೆಯಲ್ಲಿದೆಯಷ್ಟೇ! ಈ ಶಬ್ದವು ಹೇಗೆ ಉತ್ಪನ್ನವಾಯಿತು?' ಎಂಬುದನ್ನು ನನಗೆ ಹೇಳು.

ತುಲ್ಯಪಾಣಿಶಿರೋಗ್ರೀವಸ್ತುಲ್ಯಬುದ್ಧೀಂದ್ರಿಯಾತ್ಮಕಃ।
ತುಲ್ಯದುಃಖಸುಖಾತ್ಮಾ ಚ ತುಲ್ಯಪೃಷ್ಠಭುಜೋದರಃ ॥೬॥

ತುಲ್ಯಶುಕ್ರಾಸ್ಥಿಮಜ್ಜಶ್ಚ ತುಲ್ಯಮಾಂಸಾಸೃಗೇವ ಚ।
ನಿಃಶ್ವಾಸೋಚ್ಛ್ವಾಸತುಲ್ಯಶ್ಚ ತುಲ್ಯಪ್ರಾಣಶರೀರವಾನ್ ॥೭॥

ಸಮಾನಜನ್ಮಮರಣಃ ಸಮಃ ಸರ್ವಗುಣೈರ್ನರಾಣಾಮ್।
ವಿಶಿಷ್ಟಬುದ್ಧೀನ್ ಶೂರಾಂಶ್ಚ ಕಥಮೇಕೋऽಧಿತಿಷ್ಠತಿ ॥೮॥

ಸಮಾನವಾದ ಹಸ್ತಶಿರೋಗ್ರೀವಗಳು, ಸಮಾನವಾದ ಬುದ್ಧೀಂದ್ರಿಯಗಳು, ಸಮಾನವಾದ ಸುಖದುಃಖಿಗಳು, ಸಮಾನವಾದ ಬೆನ್ನು ಭುಜ ಮತ್ತು ಉದರಗಳು, ಸಮಾನವಾದ ಶುಕ್ಲ ಅಸ್ಥಿ ಮಜ್ಜಗಳು, ಸಮಾನವಾದ ಮಾಂಸರಕ್ತಗಳು, ಸಮಾನವಾದ ಉಚ್ಛ್ವಾಸ ನಿಶ್ವಾಸಗಳು, ಸಮಾನವಾದ ಪ್ರಾಣಶರೀರಗಳು, ಸಮಾನವಾದ ಜನ್ಮಮರಣಗಳು ಹೀಗಿದ್ದು ಎಲ್ಲ ಗುಣಗಳಿಂದಲೂ ಉಳಿದ ಮನುಷ್ಯರಿಗೆ ಸಮಾನನಾಗಿರುವ ಒಬ್ಬನು ಮೇಧಾವಿಗಳಾದ ಶೂರರಾದ ಅನೇಕರ ಮೇಲೆ ಹೇಗೆ ಅವರನ್ನು ಮೆಟ್ಟಿ ನಿಲ್ಲುತ್ತಾನೆ?

ಕಥಮೇಕೋ ಮಹೀಂ ಕೃತ್ಸ್ನಾಂ ವೀರಶೂರಾರ್ಯಸಂಕುಲಾಮ್ ।
ರಕ್ಷತ್ಯಪಿ ಚ ಲೋಕೋಽಸ್ಯ ಪ್ರಸಾದಮಭಿವಾಂಛತಿ ॥೯॥

ವೀರ, ಶೂರ ಮತ್ತು ಶ್ರೇಷ್ಠರಿಂದ ನಿಬಿಡವಾದ ಸಮಗ್ರವಾದ ಭೂಮಿಯನ್ನು ಒಬ್ಬನೇ ಹೇಗೆ ರಕ್ಷಿಸುತ್ತಾನೆ? ಲೋಕವಾದರೂ ಅವನ ಅನುಗ್ರಹವನ್ನು ಹೇಗೆ ಬಯಸುತ್ತದೆ?

ಏಕಸ್ಯ ಚ ಪ್ರಸಾದೇನ ಕೃತ್ಸ್ನೋ ಲೋಕಃ ಪ್ರಸೀದತಿ ।
ವ್ಯಾಕುಲೇನಾಕುಲಃ ಸರ್ವೋ ಭವತೀತಿ ವಿನಿಶ್ಚಿತಃ ॥೧೦॥

ಅವನೊಬ್ಬನು ಪ್ರಸನ್ನನಾದರೆ ಲೋಕವೆಲ್ಲವೂ ಪ್ರಸನ್ನವಾಗುತ್ತದೆ. ಅವನು ವ್ಯಾಕುಲಗೊಂಡರೆ ಸರ್ವವೂ ವ್ಯಾಕುಲವಾಗುತ್ತದೆ ಎಂಬುದು ನಿಶ್ಚಿತವಾದುದು.

ಏತದಿಚ್ಛಾಮ್ಯಹಂ ಸರ್ವಂ ತತ್ತ್ವೇನ ಭರತರ್ಷಭ ।
ಶ್ರೋತುಂ ತನ್ಮೇ ಯಥಾತತ್ತ್ವಂ ಪ್ರಬ್ರೂಹಿ ವದತಾಂವರ ॥೧೧॥

ಎಲೈ ಭರತರ್ಷಭನೇ! ಇದನ್ನು ನಾನು ಯಥಾರ್ಥವಾಗಿ ತಿಳಿಯಲು ಬಯಸುತ್ತೇನೆ. ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ! ಅದನ್ನು ನನಗೆ ಯಥಾರ್ಥವಾಗಿ ಹೇಳುವವನಾಗು.

ನೈತತ್ ಕಾರಣಮಲ್ಪಂ ಹಿ ಭವಿಷ್ಯತಿ ವಿಶಾಂಪತೇ ।
ಯದೇಕಸ್ಮಿನ್ ಜಗತ್ ಸರ್ವಂ ದೇವವದ್ ಯಾತಿ ಸನ್ನತಿಮ್ ॥೧೨॥

ಎಲೈ ರಾಜನೇ! ಒಬ್ಬ ವ್ಯಕ್ತಿಯಲ್ಲಿ ಸಮಸ್ತವಾದ ಜಗತ್ತು ದೇವನಂತೆ ಸನ್ನತಿಯನ್ನು ಹೊಂದುವುದಕ್ಕೆ ಅಲ್ಪವಾದ ಕಾರಣವು ಇರಲಾರದು.

ಭೀಷ್ಮಃ

ನಿಯತಸ್ತ್ವಂ ನರಶ್ರೇಷ್ಠ ಶೃಣು ಸರ್ವಮಶೇಷತಃ।
ಯಥಾ ರಾಜ್ಯಂ ಸಮುತ್ಪನ್ನಮಾದೌ ಕೃತಯುಗೇऽಭವತ್ ॥೧೩॥

ಭೀಷ್ಮರು – ಎಲೈ ನರಶ್ರೇಷ್ಠನೇ! ನೀನು ಕೃತಯುಗದಲ್ಲಿ ಮೊದಲು ಹೇಗೆ ರಾಜ್ಯವು ಉತ್ಪನ್ನವಾಯಿತು ಎಂಬುದನ್ನು ನಿಯಮಬದ್ಧನಾಗಿ ಕೇಳು.

ನೈವ ರಾಜ್ಯಂ ನ ರಾಜಾಸೀನ್ನ ದಂಡೋ ನ ಚ ದಾಂಡಿಕಃ।
ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಚ ಪರಸ್ಪರಮ್ ॥೧೪॥

ಆಗ ರಾಜ್ಯವಾಗಲೀ, ರಾಜನಾಗಲೀ, ದಂಡವಾಗಲೀ, ದಂಡವನ್ನು ಕೊಡುವವನಾಗಲೀ ಇರಲಿಲ್ಲ. ಪ್ರಜೆಗಳು ಧರ್ಮದಿಂದಲೇ ಪರಸ್ಪರವಾಗಿ ರಕ್ಷಿಸಿಕೊಳ್ಳುತ್ತಿದ್ದರು.

ಪಾಲಯಾನಾಸ್ತಥಾನ್ಯೋನ್ಯಂ ನರಾ ಧರ್ಮೇಣ ಭಾರತ।
ಖೇದಂ ಪರಮಮಾಜಗ್ಮುಸ್ತತಸ್ತಾನ್ ಮೋಹ ಆವಿಶತ್ ॥೧೫॥

ಎಲೈ ಭಾರತನೇ! ಮನುಷ್ಯರು ಧರ್ಮದಿಂದ ಅನ್ಯೋನ್ಯವಾಗಿ ಪಾಲನೆ ಮಾಡುತ್ತಿದ್ದಾಗ ಅವರಿಗೆ ಬಹಳ ಖೇದವುಂಟಾಯಿತು. ಅನಂತರ ಅದರಿಂದ ಮೋಹ ಎಂದರೆ ಭ್ರಾಂತಿಯುಂಟಾಯಿತು.

ತೇ ಮೋಹವಶಮಾಪನ್ನಾ ಮಾನವಾ ಮನುಜರ್ಷಭ।
ಪ್ರತಿಪತ್ತಿವಿಮೋಹಾಚ್ಚ ಧರ್ಮಸ್ತೇಷಾಮನೀನಶತ್ ॥೧೬॥

ಎಲೈ ಮನುಜಶ್ರೇಷ್ಠನೇ! ಮೋಹವಶರಾದ ಮಾನವರು ಕರ್ತವ್ಯ ಅಕರ್ತವ್ಯ ಪ್ರಜ್ಞೆಯನ್ನು ಕಳೆದುಕೊಂಡರು. ಅದರಿಂದ ಅವರ ಧರ್ಮವು ನಾಶವನ್ನು ಹೊಂದಿತು.

ನಷ್ಟಾಯಾಂ ಪ್ರತಿಪತ್ತೌ ತು ಮೋಹವಶ್ಯಾ ನರಾಸ್ತದಾ।
ಲೋಭಸ್ಯ ವಶಮಾಪನ್ನಾಃ ಸರ್ವೇ ಭರತಸತ್ತಮ ॥೧೭॥

ಎಲೈ ಭಾರತಶ್ರೇಷ್ಠನೇ! ಆಗ ಅಂತಹ ವಿವೇಕವು ನಷ್ಟವಾಗುತ್ತಿರಲು ಮೋಹಕ್ಕೆ ವಶರಾದ ಮಾನವರೆಲ್ಲರೂ ಹೊಸದಾಗಿ ಲೋಭಕ್ಕೆ ವಶರಾದರು.

ಅಪ್ರಾಪ್ತಸ್ಯಾಭಿಮರ್ಶಂ ತು ಕುರ್ವಂತೋ ಮನುಜಾಸ್ತತಃ।
ಕಾಮೋ ನಾಮಾಪರಸ್ತತ್ರ ಸಮಪದ್ಯತ ವೈ ಪ್ರಭೋ ॥೧೮॥

ಮನುಷ್ಯರು ಆಗ ತಮಗೆ ದೊರೆಯದ ವಸ್ತುವನ್ನು ಪಡೆಯಲು ಪ್ರಯತ್ನ ಮಾಡಿದರು. ಎಲೈ ಪ್ರಭುವೇ! ಆಗ ಕಾಮ ಎಂಬ ಇನ್ನೊಂದು ದೋಷವು ಜನಿಸಿತು.

ತಾಂಸ್ತು ಕಾಮವಶಂ ಪ್ರಾಪ್ತಾನ್ ರಾಗೋ ನಾಮ ಸಮಸ್ಪೃಶತ್।
ರಕ್ತಾಶ್ಚ ನಾಭ್ಯಜಾನಂತ ಕಾರ್ಯಾಕಾರ್ಯೇ ಯುಧಿಷ್ಠಿರ ॥೧೯॥

ಕಾಮವಶರಾದ ಆ ಮಾನವರನ್ನು ರಾಗ (ಅತಿಯಾಸೆ) ಎಂಬ ಇನ್ನೊಂದು ದೋಷವು ಸೇರಿಕೊಂಡಿತು. ಎಲೈ ಯುಧಿಷ್ಠಿರನೇ! ಅಂತಹ ರಾಗಕ್ಕೆ ವಶರಾದ ಮಾನವರು ಕಾರ್ಯಾಕಾರ್ಯಗಳನ್ನು ತಿಳಿಯಲಿಲ್ಲ.

ಅಗಮ್ಯಾಗಮನಂ ಚೈವ ವಾಚ್ಯಾವಾಚ್ಯಂ ತಥೈವ ಚ।
ಭಕ್ಷ್ಯಾಭಕ್ಷ್ಯಂ ಚ ರಾಜೇಂದ್ರ ದೋಷಾದೋಷಂ ಚ ನಾತ್ಯಜನ್ ॥೨೦॥

ಎಲೈ ರಾಜೇಂದ್ರನೇ! ಅವರು ಗಮ್ಯ-ಅಗಮ್ಯಗಮನಗಳನ್ನು, ವಾಚ್ಯ-ಅವಾಚ್ಯ-ಗಳನ್ನು, ಭಕ್ಷ್ಯ-ಅಭಕ್ಷ್ಯಗಳನ್ನು, ದೋಷ-ಅದೋಷಗಳನ್ನು ಯಾವುದನ್ನೂ ಬಿಡಲಿಲ್ಲ.

ವಿಪ್ಲುತೇ ನರಲೋಕೇಽಸ್ಮಿಂಸ್ತತೋ ಬ್ರಹ್ಮ ನನಾಶ ಹ।
ನಾಶಾಚ್ಚ ಬ್ರಹ್ಮಣೋ ರಾಜನ್ ಧರ್ಮೋ ನಾಶಮಥಾಗಮತ್ ॥೨೧॥

ಈ ನರಲೋಕವು ವಿಪ್ಲವಕ್ಕೆ ಒಳಗಾಗುತ್ತಿರಲು ವೇದವು ನಾಶವನ್ನು

ಹೊಂದಿತು. ಎಲೈ ರಾಜನೇ! ವೇದಗಳ ನಾಶದಿಂದ ಧರ್ಮವು ನಾಶವನ್ನು ಹೊಂದಿತು.

ನಷ್ಟೇ ಬ್ರಹ್ಮಣಿ ಧರ್ಮೇ ಚ ದೇವಾಸ್ತ್ರಾಸಮಥಾಗಮನ್ ।
ತೇ ತ್ರಸ್ತಾ ನರಶಾರ್ದೂಲ ಬ್ರಹ್ಮಾಣಂ ಶರಣಂ ಯಯುಃ ॥೨೨॥

ವೇದವು ಮತ್ತು ಧರ್ಮವು ನಾಶವನ್ನು ಹೊಂದುತ್ತಿರಲು ದೇವತೆಗಳು ಗಾಬರಿ-ಗೊಂಡರು. ಎಲೈ ನರಶಾರ್ದೂಲನೇ! ಗಾಬರಿಗೊಂಡ ಅವರು ಬ್ರಹ್ಮದೇವರಿಗೆ ಶರಣಾಗತರಾದರು.

ಪ್ರಪದ್ಯ ಭಗವಂತಂ ತೇ ದೇವಾ ಲೋಕಪಿತಾಮಹಮ್ ।
ಊಚುಃ ಪ್ರಾಂಜಲಯಃ ಸರ್ವೇ ದುಃಖಶೋಕಭಯಾರ್ದಿತಾಃ ॥೨೩॥

ದುಃಖಶೋಕಭಯಗಳಿಂದ ಕೂಡಿದ ಆ ದೇವತೆಗಳೆಲ್ಲರೂ ಪೂಜ್ಯರಾದ ಲೋಕಪಿತಾಮಹರಾದ ಬ್ರಹ್ಮದೇವರ ಬಳಿಯಲ್ಲಿ ಹೋಗಿ, ಕೈಗಳನ್ನು ಮುಗಿದು ಮಾತನಾಡಿದರು.

ಭಗವನ್ ನರಲೋಕಸ್ಥಂ ನಷ್ಟಂ ಬ್ರಹ್ಮ ಸನಾತನಮ್ ।
ಲೋಭಮೋಹಾದಿಭಿರ್ಭಾವೈಸ್ತತೋ ನೋ ಭಯಮಾವಿಶತ್ ॥೨೪॥

ಪೂಜ್ಯನೇ! ಮನುಷ್ಯಲೋಕದಲ್ಲಿದ್ದ ಶಾಶ್ವತವಾದ ವೇದವು ಲೋಭ, ಮೋಹ ಮೊದಲಾದ ದುಷ್ಪಭಾವನೆಗಳಿಂದ ನಷ್ಟವಾಗಿದೆ. ಅದರಿಂದ ನಮಗೆ ಭಯ-ವುಂಟಾಗಿದೆ.

ಬ್ರಹ್ಮಣಶ್ಚ ಪ್ರಣಾಶೇನ ಧರ್ಮೋ೯ಽಪ್ಯನಶದೀಶ್ವರ ।
ತತಃ ಸ್ಮ ಸಮತಾಂ ಯಾತಾ ಮರ್ತ್ಯೈರ್ಲಿಭುವನೇಶ್ವರ ॥೨೫॥

ಎಲೈ ಈಶ್ವರನೇ! ವೇದಗಳ ನಾಶದಿಂದ ಧರ್ಮವು ನಾಶವನ್ನು ಹೊಂದಿದೆ. ಎಲೈ ತ್ರಿಭುವನೇಶ್ವರನೇ! ಅದರಿಂದ ನಾವು ಮನುಷ್ಯರಿಗೆ ಸಮಾನರಾಗಿ ಮಾಡ-ಲ್ಪಟ್ಟಿದ್ದೇವೆ.

ಅಧೋ ಹಿ ವರ್ಷಮಸ್ಮಾಕಂ ಭೌಮಾಸ್ತೂರ್ಧ್ವಪ್ರಹರ್ಷಿಣಃ।
ಕ್ರಿಯಾವ್ಯಪರಮಾತ್ ತೇಷಾಂ ತತೋಽಗಚ್ಛಾಮ ಸಂಶಯಮ್ ॥೨೬॥

ನಾವು ಕೆಳಗಡೆಗೆ ಎಲ್ಲವನ್ನೂ ಸುರಿಸುವವರು. ಭೂಮಿಯಲ್ಲಿರುವವರು ಯಜ್ಞಾದಿಗಳಿಂದ ಊರ್ಧ್ವಲೋಕದಲ್ಲಿರುವ ದೇವತೆಗಳನ್ನು ಸಂತೋಷಗೊಳಿಸುವವರು. ಆದರೆ ಭೂಮಿಯಲ್ಲಿರುವ ಮನುಷ್ಯರ ಕ್ರಿಯಾಲೋಪದಿಂದ ನಾವು ಈಗ ಸಂಶಯಕ್ಕೆ ಒಳಗಾಗಿದ್ದೇವೆ.

ಅತ್ರ ನಿಶ್ರೇಯಸಂ ಯನ್ನಸ್ತದ್ ಧ್ಯಾಯಸ್ವ ಪಿತಾಮಹ।
ತ್ವತ್ಪ್ರಸಾದಸಮುತ್ಥೋಽಸೌ ಪ್ರಭಾವೋ ನೋ ವಿನಶ್ಯತಿ ॥೨೭॥

ಎಲೈ ಪಿತಾಮಹರೇ! ಈ ವಿಷಯದಲ್ಲಿ ಯಾವುದು ನಮಗೆ ಶ್ರೇಯಸ್ಕರವೋ ಅದನ್ನು ಚಿಂತಿಸಿ. ಇಲ್ಲದಿದ್ದರೆ ನಿಮ್ಮ ಅನುಗ್ರಹದಿಂದ ಉಂಟಾದ ನಮ್ಮ ಈ ಮಹಿಮೆಯು ನಾಶವನ್ನು ಹೊಂದುತ್ತದೆ ಎಂದು ಹೇಳಿದರು.

ತಾನುವಾಚ ಸುರಾನ್ ಸರ್ವಾನ್ ಸ್ವಯಂಭೂರ್ಭಗವಾಂಸ್ತತಃ।
ಶ್ರೇಯೋಽಹಂ ಚಿಂತಯಿಷ್ಯಾಮಿ ವ್ಯೇತು ವೋ ಭೀಃ ಸುರರ್ಷಭಾಃ ॥೨೮॥

ಸ್ವಯಂಭುಗಳಾದ ಪೂಜ್ಯರಾದ ಬ್ರಹ್ಮದೇವರು ಆ ಎಲ್ಲ ದೇವತೆಗಳನ್ನು ಕುರಿತು ಎಲೈ ದೇವಶ್ರೇಷ್ಠರೇ! ನಿಮ್ಮ ಮನಸ್ಸಿನ ಭಯವನ್ನು ಬಿಡಿ. ನಿಮ್ಮ ಶ್ರೇಯಸ್ಸನ್ನು ನಾನು ಚಿಂತಿಸುವೆನು. (ಎಂದು ಹೇಳಿದರು).

ತತೋಽಧ್ಯಾಯಸಹಸ್ರಾಣಾಂ ಶತಂ ಚಕ್ರೇ ಸ್ವಬುದ್ಧಿಜಮ್।
ಯತ್ರ ಧರ್ಮಸ್ತಥೈವಾರ್ಥಃ ಕಾಮಶ್ಚೈವಾನುವರ್ಣಿತಃ ॥೨೯॥

ಅನಂತರ ಒಂದು ಲಕ್ಷಗ್ರಂಥಪರಿಮಿತವಾದ ಪಂಚರಾತ್ರಶಾಸ್ತ್ರವನ್ನು ಅವರು ತಮ್ಮ ಬುದ್ಧಿಯಿಂದ ರಚಿಸಿದರು. ಅದರಲ್ಲಿ ಧರ್ಮವೂ, ಅರ್ಥವೂ ಮತ್ತು ಕಾಮವೂ ಚೆನ್ನಾಗಿ ವರ್ಣಿತವಾಗಿದೆ. – (ಲಕ್ಷಾಲಂಕಾರ)

ತ್ರಿವರ್ಗ ಇತಿ ವಿಖ್ಯಾತೋ ಗಣ ಏಷ ಸ್ವಯಂಭುವಾ ।
ಚತುರ್ಥೋ ಮೋಕ್ಷ ಇತ್ಯೇವ ಪೃಥಗರ್ಥಃ ಪೃಥಗ್ ಗಣಃ ॥೩೦॥

ತ್ರಿವರ್ಗ ಎಂದು ಪ್ರಖ್ಯಾತವಾದ ಈ ಗಣವು ಬ್ರಹ್ಮದೇವರಿಂದ ವಿಭಜಿಸಲ್ಪಟ್ಟಿದೆ. ನಾಲ್ಕನೆಯದಾದ ಮೋಕ್ಷವು ಇನ್ನೊಂದು ಪುರುಷಾರ್ಥ. ಅದರ ಗಣವೇ ಪ್ರತ್ಯೇಕವಾದುದು.

ಮೋಕ್ಷಸ್ಯಾಪಿ ತ್ರಿವರ್ಗೋ೯ಽನ್ಯಃ ಪ್ರೋಕ್ತಃ ಸತ್ತ್ವಂ ರಜಸ್ತಮಃ ।
ಸ್ಥಾನಂ ವೃದ್ಧಿಃ ಕ್ಷಯಶ್ಚೈವ ತ್ರಿವರ್ಗಶ್ಚೈವ ದಂಡಜಃ ॥೩೧॥

ಮೋಕ್ಷಕ್ಕೂ ಸಹ ಶಾಸ್ತ್ರಾಭ್ಯಾಸ, ಧ್ಯಾನ, ಅಪರೋಕ್ಷಜ್ಞಾನ ಎಂಬ ಬೇರೆಯ ತ್ರಿವರ್ಗವಿದೆ. ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ಇನ್ನೊಂದು ತ್ರಿವರ್ಗವಿದೆ. ಸ್ಥಾನ, ವೃದ್ಧಿ ಮತ್ತು ಕ್ಷಯ ಎಂಬ ದಂಡನೀತಿಗೆ ಸಂಬಂಧಿಸಿದ ಇನ್ನೊಂದು ತ್ರಿವರ್ಗವೂ ಇದೆ.

ಆತ್ಮಾ ದೇಶಶ್ಚ ಕಾಲಶ್ಚಾಪ್ಯುಪಾಯಾಃ ಕೃತ್ಯಮೇವ ಚ ।
ಸಹಾಯಾಃ ಕಾರಣಂ ಚೈವ ಷಡ್ವರ್ಗೋ೯ ನೀತಿಜಃ ಸ್ಮೃತಃ ॥೩೨॥

ಆತ್ಮಾ ಅಂದರೆ ತಾನು, ದೇಶ, ಕಾಲ, ಉಪಾಯ, ಕಾರ್ಯ, ಸಹಾಯಗಳೆಂಬ ಕಾರಣ ಎಂಬ ಷಡ್ವರ್ಗವು ರಾಜನೀತಿಗೆ ಸಂಬಂಧಿಸಿವೆ.

ತ್ರಯೀ ಚಾನ್ವೀಕ್ಷಿಕೀ ಚೈವ ವಾರ್ತಾ ಚ ಭರತರ್ಷಭ ।
ದಂಡನೀತಿಶ್ಚ ವಿಪುಲಾ ವಿದ್ಯಾಸ್ತತ್ರ ನಿದರ್ಶಿತಾಃ ॥೩೩॥

ಎಲೈ ಭರತಶ್ರೇಷ್ಠನೇ! ವೇದವಿದ್ಯೆ, ತರ್ಕವಿದ್ಯೆ, ವಾಣಿಜ್ಯವಿದ್ಯೆ, ದಂಡನೀತಿ ಈ ವಿಪುಲವಾದ ವಿದ್ಯೆಗಳು ಬ್ರಹ್ಮದೇವರು ರಚಿಸಿದ ದಂಡನೀತಿಶಾಸ್ತ್ರದಲ್ಲಿ ಪ್ರದರ್ಶಿಸಲ್ಪಟ್ಟಿವೆ.

ಅಮಾತ್ಯರಕ್ಷಾಪ್ರಣಿಧೀ ರಾಜಪುತ್ರಸ್ಯ ರಕ್ಷಣಮ್ ।
ಚಾರಶ್ಚ ವಿವಿಧೋಪಾಯಃ ಪ್ರಣಿಧಿಶ್ಚ ಪೃಥಗ್ವಿಧಃ ॥೩೪॥

ಸಾಮ ಚೋಪಪ್ರದಾನಂ ಚ ಭೇದೋ ದಂಡಶ್ಚ ಪಾಂಡವ।
ಉಪೇಕ್ಷಾ ಪಂಚಮೀ ಚಾತ್ರ ಕಾರ್ತ್ಸ್ನ್ಯೇನ ಸಮುದಾಹೃತಾ ॥೩೫॥

ಅಮಾತ್ಯರು, ರಕ್ಷಣೆ, ದೇವತಾಪ್ರಾರ್ಥನೆ, ರಾಜಪುತ್ರನ ರಕ್ಷಣೆ, ಗೂಢಚಾರರು(ಭಟರು), ವಿವಿಧೋಪಾಯಗಳು, ವಿವಿಧವಾದ ಗೂಢಚಾರರು, ಸಾಮ, ದಾನ, ಭೇದ, ದಂಡ, ಉಪೇಕ್ಷಾ ಎಂಬ ಐದನೆಯ ಉಪಾಯ ಎಲ್ಲವೂ ಸಮಗ್ರವಾಗಿ ಅಲ್ಲಿ ನಿರೂಪಿಸಲ್ಪಟ್ಟಿವೆ.

ಮಂತ್ರಶ್ಚ ವರ್ಣಿತಃ ಕೃತ್ಸ್ನಸ್ತಥಾ ಭೇದಾರ್ಥ ಏವ ಚ।
ವಿಭ್ರಂಶೈಶ್ಚೈವ ಮಂತ್ರಸ್ಯ ಸಿದ್ಧ್ಯಸಿದ್ಧ್ಯೋಶ್ಚ ಯತ್ ಫಲಮ್ ॥೩೬॥

ಸಂಧಿಶ್ಚ ತ್ರಿವಿಧಾಭಿಖ್ಯೋ ಹೀನೋ ಮಧ್ಯಸ್ತಥೋತ್ತಮಃ।
ಭಯಸತ್ಕಾರವಿತ್ತಾಖ್ಯಃ ಕಾರ್ತ್ಸ್ನ್ಯೇನ ಪರಿವರ್ಣಿತಃ ॥೩೭॥

ಮಂತ್ರಾಲೋಚನೆಗಳು ಸಮಗ್ರವಾಗಿ ಅಲ್ಲಿ ವರ್ಣಿತವಾಗಿವೆ. ಅದರಂತೆ ಭೇದ-ರೂಪ ಉಪಾಯವು, ಮಂತ್ರದ ಭ್ರಂಶದಿಂದುಂಟಾಗುವ ಸಿದ್ಧ್ಯಸಿದ್ಧಿಗಳು, ಅದರ ಫಲ ಉತ್ತಮ ಮಧ್ಯಮ ಮತ್ತು ಅಧಮ ಎಂಬ ಭಯ, ಸತ್ಕಾರ ಮತ್ತು ಧನದಿಂದ ಉಂಟುಮಾಡಿದ ಮೂರು ವಿಧವಾದ ಸಂಧಿಗಳು ಅಲ್ಲಿ ಸಮಗ್ರವಾಗಿ ವರ್ಣಿತವಾಗಿವೆ. (ಧನವನ್ನು ಕೊಟ್ಟು ಸಂಧಿಮಾಡಿಕೊಳ್ಳುವುದು ಉತ್ತಮವಾದುದು. ಸತ್ಕಾರವನ್ನು ಪಡೆದು ಸಂಧಿಯನ್ನು ಮಾಡಿಕೊಳ್ಳುವುದು ಮಧ್ಯಮವಾದುದು. ಭಯದಿಂದ ಸಂಧಿಯನ್ನು ಮಾಡಿಕೊಳ್ಳುವುದು ಅಧಮವಾದುದು)

ಯಾತ್ರಾಕಾಲಾಶ್ಚ ಚತ್ವಾರಸ್ತ್ರಿವರ್ಗಸ್ಯ ಚ ವಿಸ್ತರಃ।
ವಿಜಯೋ ಧರ್ಮಯುಕ್ತಶ್ಚ ತಥಾರ್ಥವಿಜಯಶ್ಚ ಹ ॥೩೮॥

ನಾಲ್ಕು ವಿಧವಾದ ಯಾತ್ರಾ ಕಾಲಗಳು, ಧರ್ಮಾರ್ಥಕಾಮರೂಪವಾದ ತ್ರಿವರ್ಗದ ವಿಸ್ತಾರವು, ಧರ್ಮೋಕ್ತವಾದ ವಿಜಯವು ಅರ್ಥವಿಜಯವು ಅಲ್ಲಿ ಹೇಳಲ್ಪಟ್ಟಿದೆ. (ಮಿತ್ರರ ವೃದ್ಧಿ, ತನ್ನ ಕೋಶದ ವೃದ್ಧಿ, ತನ್ನ ಶತ್ರುಗಳ ದೌರ್ಬಲ್ಯ

ಅವರ ಕೋಶನಾಶ ಇವು ಯಾತ್ರಾಕಾಲ ಎಂದರೆ ಯುದ್ಧಕ್ಕೆ ಹೊರಡಲು ಉಚಿತವಾದ ನಾಲ್ಕು ಕಾಲಗಳು)

ಆಸುರಶ್ಚೈವ ವಿಜಯಸ್ತಥಾ ಕಾತ್ಸ್ನ್ಯೇನ ವರ್ಣಿತಃ।
ಲಕ್ಷಣಂ ಪಂಚವರ್ಗಸ್ಯ ತ್ರಿವಿಧಂ ಚಾತ್ರ ವರ್ಣಿತಮ್ ॥೫೯॥

ಆಸುರವಿಧಾನದ ವಿಜಯವು ಅಲ್ಲಿ ಸಮಗ್ರವಾಗಿ ವರ್ಣಿತವಾಗಿದೆ. ಉತ್ತಮ-ಮಧ್ಯಮಾಧಮರೂಪವಾದ ಅಮಾತ್ಯ, ರಾಷ್ಟ್ರ, ದುರ್ಗ, ಸೇನೆ ಮತ್ತು ಕೋಶವೆಂಬ ಪಂಚವರ್ಗದ ಲಕ್ಷಣವು ಅಲ್ಲಿ ಹೇಳಲ್ಪಟ್ಟಿದೆ.

ಪ್ರಕಾಶಶ್ಚಾಪ್ರಕಾಶಶ್ಚ ದಂಡೋಽಥ ಪರಿಶಬ್ದಿತಃ।
ಪ್ರಕಾಶೋಽಷ್ಟವಿಧಸ್ತತ್ರ ಗುಹ್ಯಸ್ತು ಬಹುವಿಸ್ತರಃ ॥೬೦॥

ಪ್ರಕಾಶವಾದ ಮತ್ತು ರಹಸ್ಯವಾದ ದಂಡಗಳು ಅಲ್ಲಿ ಹೇಳಲ್ಪಟ್ಟಿವೆ. ಪ್ರಕಾಶವಾದ ದಂಡವು ಅಷ್ಟವಿಧವಾದುದು, ರಹಸ್ಯವಾದ ದಂಡವು ಬಹಳ ವಿಸ್ತಾರವಾದುದು.

ರಥಾ ನಾಗಾ ಹಯಾಶ್ಚೈವ ಪಾದಾತಾಶ್ಚೈವ ಪಾಂಡವ।
ವಿಷ್ಟಿರ್ನಾವಶ್ಚರಾಶ್ಚೈವ ದೇಶಿಕಾಃ ಇತಿ ಚಾಷ್ಟಕಮ್ ॥೬೧॥

ಪ್ರಕಾಶರೂಪವಾದ ದಂಡವು(ಸೈನ್ಯವು) ರಥಗಳು, ಗಜಗಳು, ಅಶ್ವಗಳು, ಪದಾತಿಗಳು, ಭಾರವನ್ನು ಹೊರುವವರು, ನಾವಿಕರು, ಗೂಢಚಾರರು, ಆಚಾರ್ಯರು ಎಂಬ ಎಂಟು ಅಂಗಗಳನ್ನು ಒಳಗೊಂಡಿದೆ.

ಅಂಗಾನ್ಯೇತಾನಿ ಕೌರವ್ಯ ಪ್ರಕಾಶಾನಿ ಬಲಸ್ಯ ತು।
ಜಂಗಮಾಜಂಗಮಾಶ್ಚೋಕ್ತಾಶ್ಚೂರ್ಣಯೋಗಾ ವಿಷಾದಯಃ ॥೬೨॥

ಎಲೈ ಕೌರವ್ಯನೇ! ಇವು ಸೈನ್ಯದ ಪ್ರಕಾಶವಾದ ಅಂಗಗಳು. ಸರ್ಪ ಮೊದಲಾದ ಚಲಿಸುವ ಪ್ರಾಣಿಗಳ ವಿಷಗಳು, ಚೂರ್ಣಯೋಗ ಮೊದಲಾದ ಚಲಿಸದ ವಿಷಗಳು ಇವು ಸೈನ್ಯದ ರಹಸ್ಯವಾದ ಅಂಗಗಳು.

ಸ್ಪರ್ಶೇ ಚಾಭ್ಯವಹಾರ್ಯೇ ಚಾಪ್ಯುಪಾಂಶುರ್ವಿವಿಧಃ ಸ್ಮೃತಃ।
ಅರಿರ್ಮಿತ್ರಮುದಾಸೀನ ಇತ್ಯೇತೇಽಪ್ಯನುವರ್ಣಿತಾಃ ॥೪೩॥

ದೇಹದ ಸಂಬಂಧದಿಂದ ಮರಣವನ್ನು ಉಂಟುಮಾಡುವ, ಅಥವಾ ಆಹಾರದಲ್ಲಿ ಬೆರೆತು ಮರಣವನ್ನು ಉಂಟುಮಾಡುವ ಈ ರಹಸ್ಯವಾದ ಅಂಗವು ಅನೇಕ ವಿಧವಾಗಿವೆ. ಶತ್ರು, ಮಿತ್ರ ಮತ್ತು ಉದಾಸೀನರು ಅದರಲ್ಲಿ ವರ್ಣಿಸಲ್ಪಟ್ಟಿದ್ದಾರೆ.

ಕ್ರೀಡಾಪೂರ್ವೇ ರಣೇ ದ್ಯೂತೇ ವಿಸ್ರಂಭೇಣ ಸಮನ್ವಿತಮ್।
ಉಕ್ತಂ ಕೈತವ್ಯಮಿತ್ಯೇತದುಪಾಯೋ ನವಮೋ ಬುಧೈಃ ॥೪೪॥

ಕ್ರೀಡಾರೂಪವಾದ ರಣದಲ್ಲಿ ಅಥವಾ ದ್ಯೂತದಲ್ಲಿ ವಿಶ್ವಾಸದಿಂದ ಪಾಲ್ಗೊಂಡವನನ್ನು ಕೊಲ್ಲುವ ಉಪಾಯಕ್ಕೆ ಕೈತವ್ಯ ಎಂದು ಹೆಸರು. ಇದನ್ನು ಜ್ಞಾನಿಗಳು ಒಂಬತ್ತನೆಯ ಉಪಾಯವೆಂದು ಕರೆಯುತ್ತಾರೆ.

ಉಪೇಕ್ಷಾ ಸರ್ವಕಾರ್ಯೇಷು ಕರ್ಮಣಾಂ ಕರಣೇಷು ಚ।
ಅನಿಷ್ಪಾನಾಂ ಸಮುತ್ಥಾನೇ ತ್ರಿವರ್ಗೋ ನಶ್ಯತೇ ಯಥಾ ॥೪೫॥

ಎಲ್ಲ ಕಾರ್ಯಗಳ ವಿಷಯದಲ್ಲಿ ತನಗೆ ಸರಿಯಾದ ಸಂದರ್ಭವು ಒದಗುವವ-ವರೆಗೆ ಏನೂ ಮಾಡದೇ ಉದಾಸೀನವಾಗಿರುವುದು ಉಪೇಕ್ಷೆ. ಶತ್ರುಗಳಿಗೆ ಅನಿಷ್ಟವುಂಟಾಗಿ ತ್ರಿವರ್ಗವು ನಾಶವಾಗುವ ಸಮಯದವರೆಗೆ ಉಪೇಕ್ಷೆಯನ್ನು ಮಾಡಬೇಕು. (ಲಕ್ಷಾಲಂಕಾರ)

ಇಂದ್ರಜಾಲಾದಿಕಾ ಮಾಯಾ ವಾಗ್ಜೀವನಕುಶೀಲವೈಃ।
ಸುನಿಮಿತ್ತೈರ್ದುರ್ನಿಮಿತ್ತೈರುತ್ಪಾತೈಶ್ಚ ಸಮನ್ವಿತಮ್ ॥೪೬॥

ಮಾತನ್ನು ಅವಲಂಬಿಸಿ ಜೀವನ ಮಾಡುವವರಿಂದ ಮತ್ತು ನಟರಿಂದ ಮಾಡಲ್ಪಡುವ ಇಂದ್ರಜಾಲಾದಿರೂಪವಾದ ಮಾಯೆಗಳು ತನಗೆ ಒಳ್ಳೆಯ ಶಕುನಗಳು,

ಶತ್ರುವಿಗೆ ಅಪಶಕುನಗಳು, ಮತ್ತು ತನ್ನ ಶುಭಗಳು ಶತ್ರುವಿನ ಅಶುಭಗಳು ಇವು ವರ್ಣಿಸಲ್ಪಟ್ಟಿವೆ.

ಡಂಭೋ ಲಿಂಗಂ ಸಮಾಶ್ರಿತ್ಯ ಶತ್ರುವರ್ಗೇ ಪ್ರಯುಜ್ಯತೇ।
ಶಾಠ್ಯೇ ನಿಶ್ಚೇಷ್ಟತಾ ಪ್ರೋಕ್ತಾ ಚಿತ್ತದೋಷಪ್ರದೂಷಿತಾ ॥೪೭॥

ಸನ್ಯಾಸಾದಿ ವೇಷವನ್ನು ಧರಿಸಿ ಶತ್ರುವರ್ಗದಲ್ಲಿ ಪ್ರಯೋಗಿಸುವುದು; ಶತ್ರುವು ಶಾಠ್ಯವನ್ನು ಹೊಂದಿದಾಗ ತನಗೆ ಸರಿಯಾದ ಸಮಯವು ದೊರಕುವವರೆಗೂ ಏನನ್ನೂ ಮಾಡದೇ ನಿಶ್ಚೇಷ್ಟಿತನಾಗಿರುವುದು ವರ್ಣಿತವಾಗಿದೆ.

ಕೃತಾಸ್ನಾ ಮಾರ್ಗಗುಣಾಶ್ಚೈವ ತಥಾ ಭೂಮಿಗುಣಾಶ್ಚ ಹ।
ಆತ್ಮರಕ್ಷಣಮಾಶ್ವಾಸಃ ಸ್ಪರ್ಶಾನಾಂ ಚಾನ್ವವೇಕ್ಷಣಮ್ ॥೪೮॥

ಸಮಗ್ರವಾದ ಮಾರ್ಗಗುಣಗಳು, ಹಾಗೆಯೇ ಭೂಮಿಗುಣಗಳು, ತನ್ನನ್ನು ರಕ್ಷಣೆ ಮಾಡಿಕೊಳ್ಳುವ ವಿಧಾನ, ಪ್ರಜೆಗಳಲ್ಲಿ ವಿಶ್ವಾಸವು ಮೂಡುವಂತೆ ಮಾಡುವುದು, ಗೂಢಚಾರರ ಮೇಲ್ವಿಚಾರಣೆ,

ಕಲ್ಪನಾ ವಿವಿಧಾಶ್ಚಾಪಿ ನೃನಾಗರಥವಾಜಿನಾಮ್।
ವ್ಯೂಹಾಶ್ಚ ವಿವಿಧಾಭಿಖ್ಯಾ ವಿಚಿತ್ರಂ ಯುದ್ಧಕೌಶಲಮ್ ॥೪೯॥

ಪದಾತಿಗಳ, ಗಜಗಳ, ರಥಗಳ ಮತ್ತು ಅಶ್ವಗಳ ವಿವಿಧವಾದ ಅಭಿವೃದ್ಧಿ, ಚಕ್ರ-ವ್ಯೂಹ ಪದ್ಮವ್ಯೂಹ ಶ್ಯೇನವ್ಯೂಹ ಎಂಬ ಅನೇಕ ಹೆಸರಿನ ವ್ಯೂಹಗಳು, ವಿಚಿತ್ರ-ವಾದ ಯುದ್ಧಕೌಶಲ,

ಉತ್ಪಾತಾಶ್ಚ ನಿಪಾತಾಶ್ಚ ಸುಯುದ್ಧಂ ಸುಪಲಾಯನಮ್।
ಶಸ್ತ್ರಾಣಾಂ ಪಾತನಜ್ಞಾನಂ ತಥೈವ ಭರತರ್ಷಭ ॥೫೦॥

ಎಲೈ ಭರತರ್ಷಭನೇ! ಉತ್ಪಾತಗಳು, ನಿಪಾತಗಳು, ಒಳ್ಳೆಯ ಯುದ್ಧವನ್ನು ಮಾಡುವ ರೀತಿ, ಚೆನ್ನಾಗಿ ಪಲಾಯನವನ್ನು ಮಾಡುವ ರೀತಿ, ಶಸ್ತ್ರಗಳಿಂದ ಪ್ರಹಾರ ಮಾಡುವ ರೀತಿ,

ಬಲವ್ಯಸನಮುಕ್ತಂ ಚ ತಥೈವ ಬಲಹರ್ಷಣಮ್ ।
ಪೀಡನಾಸ್ಕಂದಕಾಲಶ್ಚ ಭಯಕಾಲಶ್ಚ ಪಾಂಡವ ॥೫೧॥

ಎಲೈ ಪಾಂಡವನೇ! ಸೈನ್ಯದ ವ್ಯಸನಗಳು, ಸೈನ್ಯದ ಬಲವನ್ನು ಅಭಿವೃದ್ಧಿಪಡಿಸುವುದು, ಶತ್ರುಗಳನ್ನು ಪೀಡಿಸಿ ನಾಶಮಾಡುವ ಕಾಲ, ಶತ್ರುಗಳಿಗೆ ಭಯವನ್ನುಂಟು ಮಾಡುವ ಕಾಲ ಇವು ಹೇಳಲ್ಪಟ್ಟಿವೆ.

ತಥಾ ಯಾನತದಾತ್ವಂ ಚ ಯೋಗಸಂಚಾರ ಏವ ಚ।
ಚೌರಾಟವ್ಯಬಲೈಶ್ಚೋಗ್ರೈಃ ಪರರಾಷ್ಟ್ರಸ್ಯ ಪೀಡನಮ್ ॥೫೨॥

ಹಾಗೆಯೇ ಯಾನಗಳನ್ನು ಯಾವಾಗಲೂ ಸಿದ್ಧವಾಗಿಟ್ಟಿರುವುದು, ಯೋಗಗಳನ್ನು ಪ್ರಯೋಗಿಸುವುದು, ಕಳ್ಳರಿಂದ ವನವಾಸಿಗಳಿಂದ ಉಗ್ರವಾದ ಸೈನ್ಯದಿಂದ ಶತ್ರುರಾಷ್ಟ್ರದ ಪೀಡನೆಯನ್ನು ಮಾಡುವುದು,

ಅಗ್ನಿದೈರ್ಗರದೈಶ್ಚೈವ ಪ್ರತಿರೂಪಕಚಾರಕೈಃ।
ಶ್ರೇಣಿಮುಖ್ಯೋಪಯಾಜೇನ ವೀರುಧಶ್ಚೇದನೇನ ಚ ॥೫೩॥

ಶತ್ರುದೇಶದಲ್ಲಿ ಭೃತ್ಯರ ವೇಷವನ್ನು ಧರಿಸುವವರಿಂದ ಅಗ್ನಿ ಮತ್ತು ವಿಷಗಳ ಪ್ರಯೋಗ. ಶತ್ರುರಾಜನ ಅಂಗರಕ್ಷಕರಲ್ಲಿ ಶ್ರೇಷ್ಠರಾದವರನ್ನು ಪ್ರಿಯವಚನಗಳಿಂದ ವಶಪಡಿಸಿಕೊಳ್ಳುವುದು. ವೃಕ್ಷಾದಿಗಳ ಛೇದನೆ, (ಲಕ್ಷಾಲಂಕಾರ)

ದೂಷಣೇನ ಚ ನಾಗಾನಾಮಾಶಂಕಾಜನನೇನ ಚ।
ಆರೋಧನೇನ ಭಕ್ತಸ್ಯ ಪಥಶ್ಚೋಪಾರ್ಜನೇನ ಚ ॥೫೪॥

ಶತ್ರುಗಳ ಗಜಗಳಿಗೆ ಕೇಡನ್ನುಂಟುಮಾಡುವುದು, ಶತ್ರುಪ್ರಜೆಗಳಿಗೆ ಭಯವನ್ನು ಉಂಟುಮಾಡುವುದು, ಪ್ರಜೆಗಳಿಗೆ ದೊರೆಯುವ ಆಹಾರವನ್ನು ಅವರಿಗೆ ದೊರೆಯ-ದಂತೆ ತಡೆಯುವುದು. ಮಾರ್ಗಗಳನ್ನು ದೂಷಿಸುವುದು,

ಸಪ್ತಾಂಗಸ್ಯ ಚ ರಾಜ್ಯಸ್ಯ ಹ್ರಾಸವೃದ್ಧೀ ಸಮಂಜಸಮ್ ।
ದೂತಸಾಮರ್ಥ್ಯಯೋಗಶ್ಚ ರಾಷ್ಟ್ರಸ್ಯ ಚ ವಿವರ್ಧನಮ್ ॥೫೫॥

ಸಪ್ತಾಂಗಸಹಿತವಾದ ಪರರಾಜ್ಯದ ಹ್ರಾಸ, ಸಪ್ತಾಂಗವುಳ್ಳ ತನ್ನ ರಾಜ್ಯದ ವೃದ್ಧಿ, ಸರಿಯಾದ ನಡವಳಿಕೆ, ದೂತರ ಸಾಮರ್ಥ್ಯ, ದೂತರು ಮಾಡಬೇಕಾದ ಉಪಾಯಗಳು, ರಾಷ್ಟ್ರದ ಅಭಿವೃದ್ಧಿ.

ಅರಿಮಧ್ಯಸ್ಥಮಿತ್ರಾಣಾಂ ಸಮ್ಯಕ್ ಚೋಕ್ತಂ ಪ್ರಪಂಚನಮ್ ।
ಅವಮರ್ದಃ ಪ್ರತೀಘಾತಸ್ತಥೈವ ಚ ಬಲೀಯಸಾಮ್ ॥೫೬॥

ಶತ್ರು, ತಟಸ್ಥ ಮತ್ತು ಮಿತ್ರರ ವಿಸ್ತಾರ, ತನಗಿಂತ ಬಲಿಷ್ಠರಾದ ರಾಜರನ್ನು ಮರ್ದಿಸಿ ಅವರಿಗೆ ಪ್ರತೀಕಾರವನ್ನು ಮಾಡುವುದು ಇವು ಹೇಳಲ್ಪಟ್ಟಿವೆ.

ವ್ಯವಹಾರಃ ಸುಸೂಕ್ಷ್ಮಶ್ಚ ತಥಾ ಕಂಟಕಶೋಧನಮ್ ।
ಶಮೋ ವ್ಯಾಯಾಮಯೋಗಶ್ಚ ಯೋಗೋ ದ್ರವ್ಯಸ್ಯ ಸಂಚಯಃ ॥೫೭॥

ಅತ್ಯಂತಸೂಕ್ಷ್ಮವಾದ ವ್ಯವಹಾರಗಳು, ಎಲ್ಲ ವಿಷಯಗಳಲ್ಲೂ ಉಂಟಾಗ-ಬಹುದಾದ ಪ್ರತಿರೋಧಗಳ ನಿವಾರಣೆ, ಶಾಂತಿ, ವ್ಯಾಯಾಮಪ್ರಕಾರಗಳು, ದ್ರವ್ಯ-ವನ್ನು ಕೂಡಿಡುವ ರೀತಿ,

ಅಭೃತಾನಾಂ ಚ ಭರಣಂ ಭೃತಾನಾಂ ಚಾನ್ವವೇಕ್ಷಣಮ್ ।
ಅರ್ಥಕಾಲೇ ಪ್ರದಾನಂ ಚ ವ್ಯಸನೇಷ್ವಪ್ರಸಂಗಿತಾ ॥೫೮॥

ನೇರವಾಗಿ ತನ್ನ ಭಟರಲ್ಲದವರನ್ನು ಪೋಷಣೆ ಮಾಡುವುದು, ವೇತನವನ್ನು ತೆಗೆದುಕೊಳ್ಳುವ ಭಟರನ್ನು ನೋಡಿಕೊಳ್ಳುವುದು. ಧನದ ವೃದ್ಧಿ ಇದ್ದಾಗ ದಾನವನ್ನು ಮಾಡುವುದು. ಕಷ್ಟಕಾಲವು ಬಂದಾಗ ಹೊಸದಾಗಿ ಏನನ್ನೂ ಮಾಡಲು ಹೊರಡ-ದಿರುವುದು.

ತಥಾ ರಾಜಗುಣಾಶ್ಚೈವ ಸೇನಾಪತಿಗುಣಾಶ್ಚ ಯೇ ।
ಕರಣಸ್ಯ ಚ ಕರ್ತುಶ್ಚ ಗುಣದೋಷಾಸ್ತಥೈವ ಚ ॥೫೯॥

ಹಾಗೆಯೇ ರಾಜನ ಗುಣಗಳು, ಸೇನಾಪತಿಯ ಗುಣಗಳು, ಕರ್ತೃವಿನ ಮತ್ತು ಕರಣಗಳ ಗುಣದೋಷಗಳು,

ದುಷ್ಟೇಂಗಿತಂ ಚ ವಿವಿಧಂ ವೃತ್ತಿಶ್ಚೈವಾನುಜೀವಿನಾಮ್ ।
ಶಂಕಿತತ್ವಂ ಚ ಸರ್ವಸ್ಯ ಪ್ರಮಾದಸ್ಯ ಚ ವರ್ಜನಮ್ ॥೬೦॥

ವಿವಿಧವಾದ ದುಷ್ಟವಾದ ಮನೋಭಿಪ್ರಾಯಗಳು, ತನ್ನನ್ನು ಆಶ್ರಯಿಸಿದವರ ಜೀವನೋಪಾಯ, ಸರ್ವತ್ರ ಶಂಕೆಯನ್ನು ಮಾಡುವುದು, ಪ್ರಮಾದವನ್ನು ಮಾಡದಿರುವುದು,

ಅಲಬ್ಧಲಿಪ್ಸಾ ಲಬ್ಧಸ್ಯ ತಥೈವ ಚ ವಿವರ್ಧನಮ್ ।
ಪ್ರದಾನಂ ಚ ವಿವೃದ್ಧಸ್ಯ ಪಾತ್ರೇಭ್ಯೋ ವಿಧಿವತ್ ತಥಾ ॥೬೧॥

ಪಡೆಯದಿರುವುದನ್ನು ಪಡೆಯಲು ಬಯಸುವುದು. ಪಡೆದುದನ್ನು ಅಭಿವೃದ್ಧಿ ಪಡಿಸುವುದು. ಅಭಿವೃದ್ಧಿಯಾದ ಧನವನ್ನು ಪಾತ್ರರಲ್ಲಿ ವಿಧಿವತ್ತಾಗಿ ದಾನ ಮಾಡುವುದು.

ವಿಸರ್ಗೋಽರ್ಥಸ್ಯ ಧರ್ಮಾರ್ಥಮರ್ಥಾರ್ಥಂ ಕಾಮಹೇತುನಾ ।
ಚತುರ್ಥೋ ವ್ಯಸನಾಘಾತೇ ತಥೈವಾತ್ರಾನುವರ್ಣಿತಃ ॥೬೨॥

ಕೋಶದ ಧನವನ್ನು ಧರ್ಮಾರ್ಥವಾಗಿ ಅರ್ಥಾರ್ಥವಾಗಿ ಮತ್ತು ಕಾಮಾರ್ಥ-ವಾಗಿ ವ್ಯಯಮಾಡುವುದು ಮತ್ತು ನಾಲ್ಕನೆಯದಾಗಿ ಆಪತ್ಕಾಲಕ್ಕಾಗಿ ಸಂಗ್ರಹಿಸಿಡುವುದು ಇವೆಲ್ಲವೂ ಇಲ್ಲಿ ವರ್ಣಿತವಾಗಿವೆ.

ಕ್ರೋಧಜಾನಿ ತಥೋಗ್ರಾಣಿ ಕಾಮಜಾನಿ ತಥೈವ ಚ ।
ದಶೋಕ್ತಾನಿ ಕುರುಶ್ರೇಷ್ಠ ವ್ಯಸನಾನ್ಯರ್ಥ ಏವ ಚ ॥೬೩॥

ಎಲೈ ಕುರುಶ್ರೇಷ್ಠನೇ! ಕ್ರೋಧದಿಂದುಂಟಾಗುವ ಉಗ್ರವಾದ ವ್ಯಸನಗಳು, ಹಾಗೆಯೇ ಕಾಮದಿಂದುಂಟಾಗುವ ವ್ಯಸನಗಳು ಹೀಗೆ ಹತ್ತು ವ್ಯಸನಗಳು ಹೇಳಲ್ಪಟ್ಟಿವೆ.

ಮೃಗಯಾಽಕ್ಷಾಸ್ತಥಾ ಪಾನಂ ಸ್ತ್ರಿಯಶ್ಚ ಭರತರ್ಷಭ ।
ಕಾಮಜಾನ್ಯಾಹುರಾಚಾರ್ಯಾಃ ಪ್ರೋಕ್ತಾನೀಹ ಸ್ವಯಂಭುವಾ ॥೬೪॥

ಬೇಟೆ, ದ್ಯೂತ, ಮದ್ಯಪಾನ ಮತ್ತು ಸ್ತ್ರೀಯರು – ಎಲೈ ಭರತರ್ಷಭನೇ! ಇವುಗಳನ್ನು ಕಾಮಜನ್ಯವಾದ ವ್ಯಸನಗಳೆಂದು ಆಚಾರ್ಯರು ಹೇಳುತ್ತಾರೆ. ಬ್ರಹ್ಮದೇವರು ರಚಿಸಿದ ದಂಡನೀತಿಯಲ್ಲಿ ಇವುಗಳು ಹೇಳಲ್ಪಟ್ಟಿವೆ.

ವಾಕ್ಪಾರುಷ್ಯಂ ತಥೋಗ್ರತ್ವಂ ದಂಡಪಾರುಷ್ಯಮೇವ ಚ।
ಆತ್ಮನೋ ನಿಗ್ರಹಸ್ತ್ಯಾಗೋಽಥಾರ್ಥದೂಷಣಮೇವ ಚ ॥೬೫॥

ಕಠೋರವಾದ ಮಾತುಗಳು, ಉಗ್ರತೆ, ಕಠೋರವಾದ ಶಿಕ್ಷೆ, ತನ್ನನ್ನು ತಾನೇ ನಿಗ್ರಹಿಸಿಕೊಳ್ಳುವುದು, ಧನವನ್ನು ತ್ಯಾಗಮಾಡುವುದು, ಶತ್ರುಗಳ ಧನವನ್ನು ನಾಶ ಮಾಡುವುದು,

ಯಂತ್ರಾಣಿ ವಿವಿಧಾನ್ಯೇವ ಕ್ರಿಯಾಸ್ತೇಷಾಂ ಚ ವರ್ಣಿತಾಃ।
ಅವಮರ್ದಃ ಪ್ರತೀಘಾತಃ ಕೇತನಾನಾಂ ಚ ಭಂಜನಮ್ ॥೬೬॥

ಅನೇಕ ವಿಧವಾದ ಯಂತ್ರಗಳು, ಅವುಗಳು ಕಾರ್ಯವನ್ನು ಮಾಡುವ ರೀತಿ, ಶತ್ರುಗಳ ಮೇಲೆ ಎರಗಿ ಪ್ರತೀಕಾರವನ್ನು ಮಾಡುವುದು, ಶತ್ರುರಾಜ್ಯದ ಗೃಹಗಳ ಧ್ವಂಸ,

ಚೈತ್ಯದ್ರುಮಾಣಾಮಾಮರ್ದೋ ರೋಧಃ ಕರ್ಮಾಂತನಾಶನಮ್।
ಅಪಸ್ಕರೋಽಥ ಗಮನಂ ತಥೋಪಾಸ್ಯಾ ಚ ವರ್ಣಿತಾಃ ॥೬೭॥

ಶತ್ರುದೇಶದ ಪೂಜ್ಯವೃಕ್ಷಗಳ ಭಂಜನ, ಶತ್ರುವು ಪ್ರಜಾಹಿತಕ್ಕಾಗಿ ಆರಂಭಿಸಿದ ದೊಡ್ಡ ಕಾರ್ಯಗಳನ್ನು ಮಧ್ಯದಲ್ಲಿಯೇ ನಾಶಮಾಡುವುದು, ಅಪಸ್ಕರ = ಶತ್ರುವಿನ ಮೇಲೆ ಯುದ್ಧಕ್ಕಾಗಿ ಪ್ರಯಾಣ, ಸಂಗ್ರಹಿಸಬೇಕಾದ ಜನರು ಎಲ್ಲವೂ ವರ್ಣಿತವಾಗಿವೆ.

ಪಣವಾನಕಶಂಖಾನಾಂ ಭೇರೀಣಾಂ ಚ ಯುಧಾಂವರ।
ಉಪಾರ್ಜನಂ ಚ ದ್ರವ್ಯಾಣಾಂ ಪರಮರ್ಮ ಚ ತಾನಿ ಷಟ್ ॥೬೮॥

ಪಣವ, ಆನಕ, ಶಂಖಗಳು, ಭೇರಿಗಳು ಇವುಗಳನ್ನು ಸಂಪಾದಿಸುವುದು. ಮತ್ತು ದ್ರವ್ಯಗಳ ಆರು ರಹಸ್ಯಗಳು ವರ್ಣಿತವಾಗಿವೆ.

ಲಬ್ಧಸ್ಯ ಚ ಪ್ರಶಮನಂ ಸತಾಂ ಚೈವ ಹಿ ಪೂಜನಮ್ ।
ವಿದ್ವದ್ಭಿರೇಕೀಭಾವಶ್ಚ ಪ್ರಾತರ್ಹೋಮವಿಧಿಜ್ಞತಾ ॥೬೯॥

ಲಬ್ಧವಾದುದರ ರಕ್ಷಣೆ, ಸಜ್ಜನರ ಪೂಜೆ, ವಿದ್ವಾಂಸರ ಜೊತೆಯಲ್ಲಿ ಸಹಮತಿಯನ್ನು ಹೊಂದುವುದು, ಪ್ರಾತಃಕಾಲದ ಹೋಮಪ್ರಕಾರಗಳನ್ನು ತಿಳಿದಿರುವುದು.

ಮಂಗಲಾಲಂಭನಂ ಚೈವ ಶರೀರಸ್ಯ ಪ್ರತಿಕ್ರಿಯಾ ।
ಆಹಾರಯೋಜನಂ ಚೈವ ನಿತ್ಯಮಾಸ್ತಿಕ್ಯಮೇವ ಚ ॥೭೦॥

ಪ್ರಾತಃಕಾಲದಲ್ಲಿ ಮಂಗಳವಸ್ತುಗಳ ಸ್ಪರ್ಶ, ಶರೀರದ ಅಸ್ವಸ್ಥತೆ ಉಂಟಾದಾಗ ಅವುಗಳ ಪರಿಹಾರ, ಆಹಾರವನ್ನು ತೆಗೆದುಕೊಳ್ಳುವ ರೀತಿ, ನಿತ್ಯವೂ ಆಸ್ತಿಕ್ಯಭಾವನೆ

ಏಕೇನ ಚ ಯಥೋತ್ಥೇಯಂ ಸತ್ಯತ್ವಂ ಮಧುರಾ ಗಿರಃ ।
ಉತ್ಸವಾನಾಂ ಸಮಾಜಾನಾಂ ಕ್ರಿಯಾಃ ಕೇತನಜಾಸ್ತಥಾ ॥೭೧॥

ಏಕಾಕಿಯಾದರೂ ಪ್ರಯತ್ನಪಟ್ಟು ಮೇಲೆ ಬರುವ ರೀತಿ, ಸತ್ಯವಚನ, ಮಧುರವಾದ ಮಾತುಗಳು, ಉತ್ಸವ ಮತ್ತು ಸಭೆಗಳನ್ನು ಏರ್ಪಡಿಸುವುದು, ಅರಮನೆಯಲ್ಲಿ ಮಾಡಬೇಕಾದ ಕ್ರಿಯೆಗಳು,

ಪ್ರತ್ಯಕ್ಷಾ ಚ ಪರೋಕ್ಷಾ ಚ ಸರ್ವಾಧಿಕರಣೇಷು ಚ ।
ವೃತ್ತಿರ್ಭರತಶಾರ್ದೂಲ ನಿತ್ಯಂ ಚೈವಾನ್ವವೇಕ್ಷಣಮ್ ॥೭೨॥

ಎಲೈ ಭರತಶಾರ್ದೂಲನೇ! ರಾಜ್ಯಪಾಲನೆಗೆ ಸಂಬಂಧಪಟ್ಟ ಅಧಿಕಾರಿಗಳ ಸರ್ವಕಾರ್ಯಾಲಯಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರ ನಡತೆಯನ್ನು ಯಾವಾಗಲೂ ನೋಡಿಕೊಳ್ಳುವುದು.

ಅದಂಡ್ಯತ್ವಂ ಚ ವಿಪ್ರಾಣಾಂ ಯುಕ್ತ್ಯಾ ದಂಡನಿಪಾತನಮ್ ।
ಅನುಜೀವಿಸ್ವಜಾತಿಭ್ಯೋ ಗುಣೇಷು ಪರಿರಕ್ಷಣಮ್ ॥೭೩॥

ಬ್ರಾಹ್ಮಣರಿಗೆ ಶರೀರದಂಡನೆಯನ್ನು ಕೊಡದಿರುವುದು, ಯೋಗ್ಯಕಾಲದಲ್ಲಿ ಅರ್ಹರಾದವರಿಗೆ ದಂಡನೆಯನ್ನು ಕೊಡುವುದು. ತನ್ನ ಜಾತಿಗೆ ಸೇರಿದ ತನ್ನ ಆಶ್ರಿತರನ್ನು ಗುಣವಂತರಾಗುವಂತೆ ರಕ್ಷಣೆಯನ್ನು ಮಾಡುವುದು.

ರಕ್ಷಣಂ ಚೈವ ಪೌರಾಣಾಂ ಸ್ವರಾಷ್ಟ್ರಸ್ಯ ವಿವರ್ಧನಮ್ ।
ಮಂಡಲಸ್ಥಾ ಚ ಯಾ ಚಿಂತಾ ರಾಜನ್ ದ್ವಾದಶರಾಜಿಕಾ ॥೭೪॥

ಎಲೈ ರಾಜನೇ! ಪ್ರಜೆಗಳ ರಕ್ಷಣೆ, ತನ್ನ ರಾಷ್ಟ್ರದ ಅಭಿವೃದ್ಧಿ, ಸಾಮಂತ-ರಾಜರುಗಳ ವಿಷಯದಲ್ಲಿ ಹನ್ನೆರಡುವಿಧವಾದ ಚಿಂತನೆಗಳು.

ದ್ವಾಸಪ್ತತಿಮತಿಶ್ಚೈವ ಪ್ರೋಕ್ತಾ ಯಾ ಚ ಸ್ವಯಂಭುವಾ ।
ದೇಶಜಾತಿಕುಲಾನಾಂ ಚ ಧರ್ಮಾಃ ಸಮನುವರ್ಣಿತಾಃ ॥೭೫॥

ರಾಜ್ಯಪಾಲನೆ ವಿಷಯದಲ್ಲಿ ಹೊಂದಬೇಕಾದ ಎಪ್ಪತ್ತೆರಡು ವಿಧವಾದ ಚಿಂತನೆಗಳು, ದೇಶಜಾತಿ ಕುಲಧರ್ಮಗಳು ಎಲ್ಲವೂ ಬ್ರಹ್ಮದೇವರು ರಚಿಸಿದ ದಂಡನೀತಿಶಾಸ್ತ್ರದಲ್ಲಿ ವರ್ಣಿಸಲ್ಪಟ್ಟಿವೆ.

ಧರ್ಮಾಚ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚಾತ್ರಾನುವರ್ಣಿತಃ ।
ಉಪಾಯಶ್ಚಾರ್ಥಲಿಪ್ಸಾ ಚ ವಿವಿಧಾ ಭೂರಿದಕ್ಷಿಣಾಃ ॥೭೬॥

ಇದರಲ್ಲಿ ಧರ್ಮಾರ್ಥಕಾಮಮೋಕ್ಷಗಳು, ರಾಜ್ಯಪಾಲನೆಯ ಅನೇಕ ಉಪಾಯಗಳು, ಅನೇಕವಿಧವಾದ ಅರ್ಥಪ್ರಾಪ್ತಿಪ್ರಕಾರಗಳು, ಭೂರಿದಕ್ಷಿಣೆಯನ್ನು ಕೊಡುವ ವಿಧಾನವು ವರ್ಣಿತವಾಗಿದೆ.

ಮೂಲಕರ್ಮಕ್ರಿಯಾ ಚಾತ್ರ ಮಾಯಾಯೋಗಶ್ಚ ವರ್ಣಿತಃ ।
ದೂಷಣಂ ಸ್ರೋತಸಾಮತ್ರ ವರ್ಣಿತಂ ಚ ಸ್ಥಿರಾಂಭಸಾಮ್ ॥೭೭॥

ತನ್ನ ರಾಜ್ಯದ ಅಭಿವೃದ್ಧಿಗೆ ಕಾರಣವಾದ ಮೂಲಕ್ರಿಯೆಗಳಾದ ಕೃಷಿ-ವಾಣಿಜ್ಯಾದಿಗಳು, ಶತ್ರುಗಳ ಮೇಲೆ ಪ್ರಯೋಗಿಸಬೇಕಾದ ಮಾಯಾಯೋಗಗಳು

ಪಣವ, ಆನಕ, ಶಂಖಿಗಳು, ಭೇರಿಗಳು ಇವುಗಳನ್ನು ಸಂಪಾದಿಸುವುದು. ಮತ್ತು ದ್ರವ್ಯಗಳ ಆರು ರಹಸ್ಯಗಳು ವರ್ಣಿತವಾಗಿವೆ.

ಲಬ್ಧಸ್ಯ ಚ ಪ್ರಶಮನಂ ಸತಾಂ ಚೈವ ಹಿ ಪೂಜನಮ್ ।
ವಿದ್ವದ್ಭಿರೇಕೀಭಾವಶ್ಚ ಪ್ರಾತರ್ಹೋಮವಿಧಿಜ್ಞತಾ ॥೬೯॥

ಲಬ್ಧವಾದುದರ ರಕ್ಷಣೆ, ಸಜ್ಜನರ ಪೂಜೆ, ವಿದ್ವಾಂಸರ ಜೊತೆಯಲ್ಲಿ ಸಹಮತಿಯನ್ನು ಹೊಂದುವುದು, ಪ್ರಾತಃಕಾಲದ ಹೋಮಪ್ರಕಾರಗಳನ್ನು ತಿಳಿದಿರುವುದು.

ಮಂಗಲಾಲಂಭನಂ ಚೈವ ಶರೀರಸ್ಯ ಪ್ರತಿಕ್ರಿಯಾ ।
ಆಹಾರಯೋಜನಂ ಚೈವ ನಿತ್ಯಮಾಸ್ತಿಕ್ಯಮೇವ ಚ ॥೭೦॥

ಪ್ರಾತಃಕಾಲದಲ್ಲಿ ಮಂಗಳವಸ್ತುಗಳ ಸ್ಪರ್ಶ, ಶರೀರದ ಅಸ್ವಸ್ಥತೆ ಉಂಟಾದಾಗ ಅವುಗಳ ಪರಿಹಾರ, ಆಹಾರವನ್ನು ತೆಗೆದುಕೊಳ್ಳುವ ರೀತಿ, ನಿತ್ಯವೂ ಆಸ್ತಿಕ್ಯಭಾವನೆ

ಏಕೇನ ಚ ಯಥೋತ್ಥೇಯಂ ಸತ್ಯತ್ವಂ ಮಧುರಾ ಗಿರಃ ।
ಉತ್ಸವಾನಾಂ ಸಮಾಜಾನಾಂ ಕ್ರಿಯಾಃ ಕೇತನಜಾಸ್ತಥಾ ॥೭೧॥

ಏಕಾಕಿಯಾದರೂ ಪ್ರಯತ್ನಪಟ್ಟು ಮೇಲೆ ಬರುವ ರೀತಿ, ಸತ್ಯವಚನ, ಮಧುರವಾದ ಮಾತುಗಳು, ಉತ್ಸವ ಮತ್ತು ಸಭೆಗಳನ್ನು ಏರ್ಪಡಿಸುವುದು, ಅರಮನೆಯಲ್ಲಿ ಮಾಡಬೇಕಾದ ಕ್ರಿಯೆಗಳು,

ಪ್ರತ್ಯಕ್ಷಾ ಚ ಪರೋಕ್ಷಾ ಚ ಸರ್ವಾಧಿಕರಣೇಷು ಚ ।
ವೃತ್ತಿರ್ಭರತಶಾರ್ದೂಲ ನಿತ್ಯಂ ಚೈವಾನವೇಕ್ಷಣಮ್ ॥೭೨॥

ಎಲೈ ಭರತಶಾರ್ದೂಲನೇ! ರಾಜ್ಯಪಾಲನೆಗೆ ಸಂಬಂಧಪಟ್ಟ ಅಧಿಕಾರಿಗಳ ಸರ್ವಕಾರ್ಯಾಲಯಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರ ನಡತೆಯನ್ನು ಯಾವಾಗಲೂ ನೋಡಿಕೊಳ್ಳುವುದು.

ಅದಂಡ್ಯತ್ವಂ ಚ ವಿಪ್ರಾಣಾಂ ಯುಕ್ತ್ಯಾ ದಂಡನಿಪಾತನಮ್ ।
ಅನುಜೀವಿಸ್ವಜಾತಿಭ್ಯೋ ಗುಣೇಷು ಪರಿರಕ್ಷಣಮ್ ॥೭೩॥

ಬ್ರಾಹ್ಮಣರಿಗೆ ಶರೀರದಂಡನೆಯನ್ನು ಕೊಡದಿರುವುದು, ಯೋಗ್ಯಕಾಲದಲ್ಲಿ ಅರ್ಹರಾದವರಿಗೆ ದಂಡನೆಯನ್ನು ಕೊಡುವುದು. ತನ್ನ ಜಾತಿಗೆ ಸೇರಿದ ತನ್ನ ಆಶ್ರಿತರನ್ನು ಗುಣವಂತರಾಗುವಂತೆ ರಕ್ಷಣೆಯನ್ನು ಮಾಡುವುದು.

ರಕ್ಷಣಂ ಚೈವ ಪೌರಾಣಾಂ ಸ್ವರಾಷ್ಟ್ರಸ್ಯ ವಿವರ್ಧನಮ್ ।
ಮಂಡಲಸ್ಥಾ ಚ ಯಾ ಚಿಂತಾ ರಾಜನ್ ದ್ವಾದಶರಾಜಿಕಾ ॥೭೪॥

ಎಲೈ ರಾಜನೇ! ಪ್ರಜೆಗಳ ರಕ್ಷಣೆ, ತನ್ನ ರಾಷ್ಟ್ರದ ಅಭಿವೃದ್ಧಿ, ಸಾಮಂತ-ರಾಜರುಗಳ ವಿಷಯದಲ್ಲಿ ಹನ್ನೆರಡುವಿಧವಾದ ಚಿಂತನೆಗಳು.

ದ್ವಾಸಪ್ತತಿಮತಿಶ್ಚೈವ ಪ್ರೋಕ್ತಾ ಯಾ ಚ ಸ್ವಯಂಭುವಾ ।
ದೇಶಜಾತಿಕುಲಾನಾಂ ಚ ಧರ್ಮಾಃ ಸಮನುವರ್ಣಿತಾಃ ॥೭೫॥

ರಾಜ್ಯಪಾಲನೆ ವಿಷಯದಲ್ಲಿ ಹೊಂದಬೇಕಾದ ಎಪ್ಪತ್ತೆರಡು ವಿಧವಾದ ಚಿಂತನೆಗಳು, ದೇಶಜಾತಿ ಕುಲಧರ್ಮಗಳು ಎಲ್ಲವೂ ಬ್ರಹ್ಮದೇವರು ರಚಿಸಿದ ದಂಡನೀತಿಶಾಸ್ತ್ರದಲ್ಲಿ ವರ್ಣಿಸಲ್ಪಟ್ಟಿವೆ.

ಧರ್ಮಾಚ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚಾತ್ರಾನುವರ್ಣಿತಃ ।
ಉಪಾಯಶ್ಚಾರ್ಥಲಿಪ್ಸಾ ಚ ವಿವಿಧಾ ಭೂರಿದಕ್ಷಿಣಾಃ ॥೭೬॥

ಇದರಲ್ಲಿ ಧರ್ಮಾರ್ಥಕಾಮಮೋಕ್ಷಗಳು, ರಾಜ್ಯಪಾಲನೆಯ ಅನೇಕ ಉಪಾಯಗಳು, ಅನೇಕವಿಧವಾದ ಅರ್ಥಪ್ರಾಪ್ತಿಪ್ರಕಾರಗಳು, ಭೂರಿದಕ್ಷಿಣೆಯನ್ನು ಕೊಡುವ ವಿಧಾನವು ವರ್ಣಿತವಾಗಿದೆ.

ಮೂಲಕರ್ಮಕ್ರಿಯಾ ಚಾತ್ರ ಮಾಯಾಯೋಗಶ್ಚ ವರ್ಣಿತಃ ।
ದೂಷಣಂ ಸ್ರೋತಸಾಮತ್ರ ವರ್ಣಿತಂ ಚ ಸ್ಥಿರಾಂಭಸಾಮ್ ॥೭೭॥

ತನ್ನ ರಾಜ್ಯದ ಅಭಿವೃದ್ಧಿಗೆ ಕಾರಣವಾದ ಮೂಲಕ್ರಿಯೆಗಳಾದ ಕೃಷಿ-ವಾಣಿಜ್ಯಾದಿಗಳು, ಶತ್ರುಗಳ ಮೇಲೆ ಪ್ರಯೋಗಿಸಬೇಕಾದ ಮಾಯಾಯೋಗಗಳು

(ಕಪಟೋಪಾಯಗಳು), ಶತ್ರುದೇಶದ ನದಿಗಳನ್ನು ಮತ್ತು ಸರೋವರಗಳನ್ನು ದೂಷಿಸುವುದು ಎಲ್ಲವೂ ವರ್ಣಿತವಾಗಿವೆ.

ಯೈರ್ಯೈರುಪಾಯೈರ್ಲೋಕಶ್ಚ ನ ಚಲೇದಾರ್ಯವರ್ತ್ಮನಃ।
ತತ್ ಸರ್ವಂ ರಾಜಶಾರ್ದೂಲ ನೀತಿಶಾಸ್ತ್ರೇऽನುವರ್ಣಿತಮ್ ॥೭೮॥

ಎಲೈ ರಾಜಶಾರ್ದೂಲನೇ! ಯಾವ ಯಾವ ಉಪಾಯಗಳಿಂದ ಪ್ರಜೆಗಳು ಆರ್ಯಮಾರ್ಗದಿಂದ ಭ್ರಷ್ಟರಾಗುವುದಿಲ್ಲವೋ, ಅವೆಲ್ಲವೂ ಈ ನೀತಿಶಾಸ್ತ್ರದಲ್ಲಿ ವರ್ಣಿತವಾಗಿವೆ.

ಏತತ್ ಕೃತ್ವಾ ಶುಭಂ ಶಾಸ್ತ್ರಂ ತತಃ ಸ ಭಗವಾನ್ ಪ್ರಭುಃ।
ದೇವಾನುವಾಚ ಸಂಹೃಷ್ಟಃ ಸರ್ವಾನ್ ಶಕ್ರಪುರೋಗಮಾನ್ ॥೭೯॥

ಪೂಜ್ಯರಾದ ಪ್ರಭುಗಳಾದ ಬ್ರಹ್ಮದೇವರು ಈ ಶುಭವಾದ ಶಾಸ್ತ್ರವನ್ನು ರಚಿಸಿ, ಸಂತೋಷಗೊಂಡು ಇಂದ್ರಮೊದಲಾದ ಎಲ್ಲ ದೇವತೆಗಳನ್ನು ಕುರಿತು ಹೇಳಿದರು.

ಉಪಕಾರಾಯ ಲೋಕಸ್ಯ ತ್ರಿವರ್ಗಸ್ಥಾಪನಾಯ ಚ।
ನವನೀತಂ ಸರಸ್ವತ್ಯಾ ಬುದ್ಧಿರೇಷಾ ಪ್ರಭಾವಿತಾ ॥೮೦॥

ಲೋಕದ ಉಪಕಾರಕ್ಕಾಗಿ ಮತ್ತು ಧರ್ಮಾರ್ಥಕಾಮಗಳ ಸ್ಥಾಪನೆಗಾಗಿ ವಿದ್ಯೆಯ ಸಾರವಾಗಿ ಬುದ್ಧಿಯಿಂದ ಪ್ರಭಾವಿತವಾಗಿ ಈ ಶಾಸ್ತ್ರವು ರಚಿತವಾಗಿದೆ.

ದಂಡೇನ ಸಹಿತಾ ಹ್ಯೇಷಾ ಲೋಕರಕ್ಷಣಕಾರಿಕಾ।
ನಿಗ್ರಹಾನುಗ್ರಹರತಾ ಲೋಕಾನನು ಚರಿಷ್ಯತಿ ॥೮೧॥

ದಂಡದಿಂದ ಸಹಿತವಾದ ಈ ನೀತಿಯು ಲೋಕರಕ್ಷಣೆಯನ್ನು ಮಾಡುವುದಾಗಿ ದುಷ್ಟರ ನಿಗ್ರಹ, ಶಿಷ್ಟರ ಅನುಗ್ರಹದಲ್ಲಿ ರತವಾಗಿ ಲೋಕಗಳಲ್ಲಿ ಪ್ರಚಾರದಲ್ಲಿರುತ್ತದೆ.

ದಂಡೇನ ನೀಯತೇ ಚೇಯಂ ದಂಡಂ ನಯತಿ ಚಾಪ್ಯುತ।

ದಂಡನೀತಿರಿತಿ ಪ್ರೋಕ್ತಾ ತ್ರೀನ್ ಲೋಕಾನನುವರ್ತತೇ।
ಷಾಡ್ಗುಣ್ಯಗುಣಸಾರೈಷಾ ಸ್ಥಾಸ್ಯತ್ಯುಗ್ರಾ ಮಹಾತ್ಮಸು ॥೮೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಷಷ್ಟಿತಮೋऽಧ್ಯಾಯಃ ॥೫೯॥

ಇದು ದಂಡದಿಂದ ಮುಂದುವರಿಸಲ್ಪಡುತ್ತದೆ. ಮತ್ತು ದಂಡವನ್ನು ವಿವೇಚನೆ ಮಾಡುತ್ತದೆ. ಆದ್ದರಿಂದ ದಂಡನೀತಿ ಎಂದು ಕರೆಯಲ್ಪಡುತ್ತದೆ. ಇದು ಮೂರು ಲೋಕಗಳಲ್ಲಿಯೂ ಪ್ರಚಾರದಲ್ಲಿರುತ್ತದೆ. ಷಾಡ್ಗುಣ್ಯಸಾರರೂಪವಾದ ಉಗ್ರವಾದ ಈ ದಂಡನೀತಿಯು ಮಹಾತ್ಮರಲ್ಲಿ ಶಾಶ್ವತವಾಗಿ ಉಳಿಯುತ್ತದೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೯ನೆಯ ಅಧ್ಯಾಯವು ಮುಗಿಯಿತು

—೦—

೬೦. ಅರವತ್ತನೆಯ ಅಧ್ಯಾಯ

ಶಿವಾದಿಗಳಿಂದ ಬ್ರಹ್ಮದೇವರಿಂದ ರಚಿತವಾದ ದಂಡನೀತಿಶಾಸ್ತ್ರದ ಸಂಕ್ಷೇಪಕರಣ

ವೈಶಂಪಾಯನಃ

ಮಹತ್ತ್ವಾತ್ ತಸ್ಯ ದಂಡಸ್ಯ ನೀತಿರ್ವಿಸ್ಪಷ್ಟಲಕ್ಷಣಾ।
ನಯಚಾರಶ್ಚ ವಿಪುಲೋ ಯೇನ ಸರ್ವಮಿದಂ ತತಮ್।
ಆಗಮಶ್ಚ ಪುರಾಣಾನಾಂ ಮಹರ್ಷೀಣಾಂ ಚ ಸಂಭವಃ ॥೧॥

ವೈಶಂಪಾಯನರು – ಬ್ರಹ್ಮದೇವರಿಂದ ರಚಿತವಾದ ದಂಡನೀತಿಶಾಸ್ತ್ರವು ವಿಸ್ತಾರ-ವಾಗಿರುವುದರಿಂದ ಅಲ್ಲಿ ದಂಡನೀತಿಯು ಬಹಳ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಈ ಲೋಕವೆಲ್ಲವನ್ನೂ ವ್ಯಾಪಿಸಿರುವ ವಿಪುಲವಾದ ನ್ಯಾಯಸಂಚಾರಗಳು, ಪುರಾಣಗಳ ಜ್ಞಾನ, ಮಹರ್ಷಿಗಳ ಉತ್ಪತ್ತಿ,

ತೀರ್ಥವಂಶಶ್ಚ ವಂಶಶ್ಚ ಕ್ಷತ್ರಿಯಾಣಾಂ ಯುಧಿಷ್ಠಿರ।
ಸಕಲಂ ಚಾತುರಾಶ್ರಮ್ಯಂ ಚಾತುರ್ಹೋತ್ರಂ ತಥೈವ ಚ ॥೨॥

(ಕಪಟೋಪಾಯಗಳು), ಶತ್ರುದೇಶದ ನದಿಗಳನ್ನು ಮತ್ತು ಸರೋವರಗಳನ್ನು ದೂಷಿಸುವುದು ಎಲ್ಲವೂ ವರ್ಣಿತವಾಗಿವೆ.

ಯೈರ್ಯೈರುಪಾಯೈರ್ಲೋಕಶ್ಚ ನ ಚಲೇದಾರ್ಯವರ್ತ್ಮನಃ।
ತತ್ ಸರ್ವಂ ರಾಜಶಾರ್ದೂಲ ನೀತಿಶಾಸ್ತ್ರೇऽನುವರ್ಣಿತಮ್ ॥೭೮॥

ಎಲೈ ರಾಜಶಾರ್ದೂಲನೇ! ಯಾವ ಯಾವ ಉಪಾಯಗಳಿಂದ ಪ್ರಜೆಗಳು ಆರ್ಯಮಾರ್ಗದಿಂದ ಭ್ರಷ್ಟರಾಗುವುದಿಲ್ಲವೋ, ಅವೆಲ್ಲವೂ ಈ ನೀತಿಶಾಸ್ತ್ರದಲ್ಲಿ ವರ್ಣಿತವಾಗಿವೆ.

ಏತತ್ ಕೃತ್ವಾ ಶುಭಂ ಶಾಸ್ತ್ರಂ ತತಃ ಸ ಭಗವಾನ್ ಪ್ರಭುಃ।
ದೇವಾನುವಾಚ ಸಂಹೃಷ್ಟಃ ಸರ್ವಾನ್ ಶಕ್ರಪುರೋಗಮಾನ್ ॥೭೯॥

ಪೂಜ್ಯರಾದ ಪ್ರಭುಗಳಾದ ಬ್ರಹ್ಮದೇವರು ಈ ಶುಭವಾದ ಶಾಸ್ತ್ರವನ್ನು ರಚಿಸಿ, ಸಂತೋಷಗೊಂಡು ಇಂದ್ರಮೊದಲಾದ ಎಲ್ಲ ದೇವತೆಗಳನ್ನು ಕುರಿತು ಹೇಳಿದರು.

ಉಪಕಾರಾಯ ಲೋಕಸ್ಯ ತ್ರಿವರ್ಗಸ್ಥಾಪನಾಯ ಚ।
ನವನೀತಂ ಸರಸ್ವತ್ಯಾ ಬುದ್ಧಿರೇಷಾ ಪ್ರಭಾವಿತಾ ॥೮೦॥

ಲೋಕದ ಉಪಕಾರಕ್ಕಾಗಿ ಮತ್ತು ಧರ್ಮಾರ್ಥಕಾಮಗಳ ಸ್ಥಾಪನೆಗಾಗಿ ವಿದ್ಯೆಯ ಸಾರವಾಗಿ ಬುದ್ಧಿಯಿಂದ ಪ್ರಭಾವಿತವಾಗಿ ಈ ಶಾಸ್ತ್ರವು ರಚಿತವಾಗಿದೆ.

ದಂಡೇನ ಸಹಿತಾ ಹ್ಯೇಷಾ ಲೋಕರಕ್ಷಣಕಾರಿಕಾ।
ನಿಗ್ರಹಾನುಗ್ರಹರತಾ ಲೋಕಾನನು ಚರಿಷ್ಯತಿ ॥೮೧॥

ದಂಡದಿಂದ ಸಹಿತವಾದ ಈ ನೀತಿಯು ಲೋಕರಕ್ಷಣೆಯನ್ನು ಮಾಡುವುದಾಗಿ ದುಷ್ಟರ ನಿಗ್ರಹ, ಶಿಷ್ಟರ ಅನುಗ್ರಹದಲ್ಲಿ ರತವಾಗಿ ಲೋಕಗಳಲ್ಲಿ ಪ್ರಚಾರದಲ್ಲಿರುತ್ತದೆ.

ದಂಡೇನ ನೀಯತೇ ಚೇಯಂ ದಂಡಂ ನಯತಿ ಚಾಪ್ಯುತ।

ದಂಡನೀತಿರಿತಿ ಪ್ರೋಕ್ತಾ ತ್ರೀನ್ ಲೋಕಾನನುವರ್ತತೇ।
ಷಾಡ್ಗುಣ್ಯಗುಣಸಾರೈಷಾ ಸಾಧ್ಯತ್ಯುಗ್ರಾ ಮಹಾತ್ಮಸು ॥೮೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಷಷ್ಟಿತಮೋऽಧ್ಯಾಯಃ ॥೫೯॥

ಇದು ದಂಡದಿಂದ ಮುಂದುವರಿಸಲ್ಪಡುತ್ತದೆ. ಮತ್ತು ದಂಡವನ್ನು ವಿವೇಚನೆ ಮಾಡುತ್ತದೆ. ಆದ್ದರಿಂದ ದಂಡನೀತಿ ಎಂದು ಕರೆಯಲ್ಪಡುತ್ತದೆ. ಇದು ಮೂರು ಲೋಕಗಳಲ್ಲಿಯೂ ಪ್ರಚಾರದಲ್ಲಿರುತ್ತದೆ. ಷಾಡ್ಗುಣ್ಯಸಾರರೂಪವಾದ ಉಗ್ರವಾದ ಈ ದಂಡನೀತಿಯು ಮಹಾತ್ಮರಲ್ಲಿ ಶಾಶ್ವತವಾಗಿ ಉಳಿಯುತ್ತದೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೫೯ನೆಯ ಅಧ್ಯಾಯವು ಮುಗಿಯಿತು

—೦—

೬೦. ಅರವತ್ತನೆಯ ಅಧ್ಯಾಯ

ಶಿವಾದಿಗಳಿಂದ ಬ್ರಹ್ಮದೇವರಿಂದ ರಚಿತವಾದ ದಂಡನೀತಿಶಾಸ್ತ್ರದ ಸಂಕ್ಷೇಪಕರಣ

ವೈಶಂಪಾಯನಃ

ಮಹತ್ತ್ವಾತ್ ತಸ್ಯ ದಂಡಸ್ಯ ನೀತಿರ್ವಿಸ್ಪಷ್ಟಲಕ್ಷಣಾ।
ನಯಚಾರಶ್ಚ ವಿಪುಲೋ ಯೇನ ಸರ್ವಮಿದಂ ತತಮ್।
ಆಗಮಶ್ಚ ಪುರಾಣಾನಾಂ ಮಹರ್ಷೀಣಾಂ ಚ ಸಂಭವಃ ॥೧॥

ವೈಶಂಪಾಯನರು – ಬ್ರಹ್ಮದೇವರಿಂದ ರಚಿತವಾದ ದಂಡನೀತಿಶಾಸ್ತ್ರವು ವಿಸ್ತಾರ-ವಾಗಿರುವುದರಿಂದ ಅಲ್ಲಿ ದಂಡನೀತಿಯು ಬಹಳ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಈ ಲೋಕವೆಲ್ಲವನ್ನೂ ವ್ಯಾಪಿಸಿರುವ ವಿಪುಲವಾದ ನ್ಯಾಯಸಂಚಾರಗಳು, ಪುರಾಣಗಳ ಜ್ಞಾನ, ಮಹರ್ಷಿಗಳ ಉತ್ಪತ್ತಿ,

ತೀರ್ಥವಂಶಶ್ಚ ವಂಶಶ್ಚ ಕ್ಷತ್ರಿಯಾಣಾಂ ಯುಧಿಷ್ಠಿರ।
ಸಕಲಂ ಚಾತುರಾಶ್ರಮ್ಯಂ ಚಾತುರ್ಹೋತ್ರಂ ತಥೈವ ಚ ॥೨॥

ಚಾತುರ್ವರ್ಣ್ಯಂ ತಥೈವಾತ್ರ ಚಾತುರ್ವೇದ್ಯಂ ಚ ವರ್ಣಿತಮ್ ।
ಇತಿಹಾಸೋಪವೇದಾಶ್ಚ ನ್ಯಾಯಃ ಕೃತ್ಸ್ನಸ್ಯ ವರ್ಣಿತಃ ॥೩॥

ಎಲೈ ಯುಧಿಷ್ಠಿರನೇ! ತೀರ್ಥವಂಶಗಳು, ಕ್ಷತ್ರಿಯರ ವಂಶಗಳು, ಚತುರಾಶ್ರಮಗಳಿಗೆ, ಮತ್ತು ಚತುರ್ಹೋತೃಗಳಿಗೆ ಸಂಬಂಧಿಸಿದ ಎಲ್ಲ ಧರ್ಮಗಳು, ಚಾತುರ್ವರ್ಣ್ಯಕ್ಕೆ ಸಂಬಂಧಿಸಿದ ಮತ್ತು ನಾಲ್ಕುವೇದಗಳಿಗೆ ಸಂಬಂಧಿಸಿದ ಧರ್ಮಗಳು, ಇತಿಹಾಸಗಳು, ಉಪವೇದವೆನಿಸುವ ಪುರಾಣಗಳು, ಸಮಗ್ರವಾದ ನ್ಯಾಯಗಳು ಎಲ್ಲವೂ ವರ್ಣಿಸಲ್ಪಟ್ಟಿವೆ.

ತಪೋ ಜ್ಞಾನಮಹಿಂಸಾ ಚ ಸತ್ಯಾಸತ್ಯೇ ನಯಃ ಪರಃ ।
ವೃದ್ಧೋಪಸೇವಾ ದಾನಂ ಚ ಶೌಚಮುತ್ಥಾನಮೇವ ಚ ॥೪॥

ಸರ್ವಭೂತಾನುಕಂಪಾ ಚ ಸರ್ವಮತ್ರೋಪವರ್ಣಿತಮ್ ।
ಭುವಿ ವಾಚೋಗತಂ ಯಚ್ಚ ತಚ್ಚ ಸರ್ವಂ ಸಮರ್ಪಿತಮ್ ॥೫॥

ತಪಸ್ಸು, ಜ್ಞಾನ, ಅಹಿಂಸೆ, ಸತ್ಯಾಸತ್ಯಗಳು, ಉತ್ತಮವಾದ ನ್ಯಾಯ, ವೃದ್ಧರ ಸೇವೆ, ದಾನ, ಶೌಚ, ಉದ್ಯಮಶೀಲತೆ, ಸರ್ವಭೂತಗಳಲ್ಲಿ ದಯೆ ಎಲ್ಲವೂ ಇಲ್ಲಿ ವರ್ಣಿಸಲ್ಪಟ್ಟಿವೆ. ಭೂಮಿಯಲ್ಲಿ ಮಾತುಗಳಿಂದ ಹೇಳಬಹುದಾದುದೆಲ್ಲವೂ ಇಲ್ಲಿ ಅಡಕವಾಗಿವೆ.

ತಸ್ಮಿನ್ ಪೈತಾಮಹೇ ಶಾಸ್ತ್ರೇ ಪಾಂಡವೈತದಸಂಶಯಮ್ ।
ಧರ್ಮಾರ್ಥಕಾಮಮೋಕ್ಷಾಶ್ಚ ಸಕಲಾ ಹ್ಯತ್ರ ಶಬ್ದಿತಾಃ ॥೬॥

ಎಲೈ ಪಾಂಡುಪುತ್ರನಾದ ಯುಧಿಷ್ಠಿರನೇ! ಬ್ರಹ್ಮದೇವರು ರಚಿಸಿದ ಆ ಶಾಸ್ತ್ರದಲ್ಲಿ ಧರ್ಮಾರ್ಥಕಾಮಮೋಕ್ಷಗಳೆಲ್ಲವೂ ನಿಃಸಂಶಯವಾಗಿ ವರ್ಣಿಸಲ್ಪಟ್ಟಿವೆ.

ಅನಾದಿನಿಧನೋ ದೇವಶ್ಚೈತನ್ಯಾದಿಸಮನ್ವಿತಃ ।
ಜ್ಞಾನಾನಿ ಚ ವಶೇ ಯಸ್ಯ ತಾರಕಾದೀನ್ಯಶೇಷತಃ ॥೭॥

ಅನಾದಿನಿಧನನಾದ ಜ್ಞಾನಾದಿ ಗುಣಗಳಿಂದ ಕೂಡಿದ ದೇವನಾದ ನಾರಾಯಣ, ಅವನ ವಶದಲ್ಲಿರುವ ಜ್ಞಾನಗಳು, ತಾರಕಬ್ರಹ್ಮಮಂತ್ರಾದಿಗಳು ಎಲ್ಲವೂ ವರ್ಣಿಸಲ್ಪಟ್ಟಿವೆ.

ಅಣಿಮಾದಿಗುಣೋಪೇತಮೈಶ್ವರ್ಯಂ ನ ಚ ಕೃತ್ರಿಮಮ್ ।
ತುಷ್ಟ್ಯರ್ಥಂ ಬ್ರಹ್ಮಣಃ ಪುತ್ರೋ ಲಲಾಟಾದುತ್ಥಿತಃ ಪ್ರಭುಃ ॥೮॥

ಅರುದತ್ ಸಸ್ವನಂ ಘೋರಂ ಜಗತಃ ಪ್ರಭುರವ್ಯಯಃ ।
ಜಾಯಮಾನಂ ಪಿತಾ ಪುತ್ರೇ ಪುತ್ರಃ ಪಿತರಿ ಚೈವ ಹಿ ॥೯॥

ನಾರಾಯಣನ ಸ್ವಾಭಾವಿಕವಾದ (ಕೃತ್ರಿಮವಲ್ಲದ) ಅಣಿಮಾದಿ ಐಶ್ವರ್ಯವು ಪ್ರಜೆಗಳ ಸಂತೋಷಕ್ಕಾಗಿ ವರ್ಣಿಸಲ್ಪಟ್ಟಿದೆ. ಬ್ರಹ್ಮದೇವರ ಲಲಾಟದಿಂದ ಜಗತ್ತಿನ ಪ್ರಭುವೂ ಅವ್ಯಯನೂ ಆದ ರುದ್ರನು ಜನಿಸಿ ಗಟ್ಟಿಯಾಗಿ ಘೋರವಾಗಿ ಅತ್ತನು. ತಂದೆಯು ಸಂಪಾದಿಸಿದ ಧನಾದಿಗಳನ್ನು ಪುತ್ರನೂ ಪುತ್ರನು ಸಂಪಾದಿಸಿದ ಧನಾದಿಗಳನ್ನು ತಂದೆಯೂ ಪಡೆಯಬೇಕೆಂದು (ಅತ್ತನು)

ಬುದ್ಧಿಂ ವಿಶ್ವಸೃಜೇ ದತ್ತ್ವಾ ಬ್ರಹ್ಮಾಂಡಂ ಯೇನ ನಿರ್ಮಿತಮ್ ।
ಯಸ್ಮಿನ್ ಹಿರಣ್ಮಯೋ ಹಂಸಃ ಶಕುನಿಃ ಸಮಪದ್ಯತ ॥೧೦॥

ವಿಶ್ವಸೃಷ್ಟಿಕರ್ತನಾದ ರುದ್ರನಿಗೆ ಸುಬುದ್ಧಿಯನ್ನು ಕೊಟ್ಟು, ಅಳಬೇಡವೆಂದು ಹೇಳಿ ಬ್ರಹ್ಮದೇವರು ಬ್ರಹ್ಮಾಂಡವನ್ನು ನಿರ್ಮಿಸಿದರು. ಅದರಲ್ಲಿ ಸುವರ್ಣಮಯವಾದ ಹಂಸಪಕ್ಷಿರೂಪದಲ್ಲಿ ನಾರಾಯಣನು ಅವತರಿಸಿದನು.

ಕರ್ತಾ ಸರ್ವಸ್ಯ ಲೋಕಸ್ಯ ಬ್ರಹ್ಮಾ ಲೋಕಪಿತಾಮಹಃ ।
ಸ ದೇವಃ ಸರ್ವಭೂತಾತ್ಮಾ ಮಹಾದೇವಃ ಸನಾತನಃ ।
ಅಸಂಖ್ಯಾತಸಹಸ್ರಾಣಾಂ ರುದ್ರಾಣಾಂ ಸ್ಥಾನಮವ್ಯಯಮ್ ॥೧೧॥

ಲೋಕಪಿತಾಮಹರಾದ, ಸರ್ವಲೋಕದ ಸೃಷ್ಟಿಕರ್ತರಾದ ಬ್ರಹ್ಮದೇವರು ವೇದಪ್ರತಿಪಾದ್ಯರಾದವರು. ಶ್ರೇಷ್ಠವಾದ ದೇವತೆಯಾದ ಅವರು ಎಲ್ಲ ಪ್ರಾಣಿ-

ಗಳಲ್ಲಿಯೂ ವ್ಯಾಪಿಸಿದ್ದಾರೆ. ಮತ್ತು ಸಂಖ್ಯೆಯಿಲ್ಲದಷ್ಟು ಸಹಸ್ರಾರು ರುದ್ರರೂಪ-ಗಳಿಗೆ ಅವರು ಶಾಶ್ವತವಾದ ಆಶ್ರಯರಾಗಿದ್ದಾರೆ.

ತತಸ್ತಾಂ ಭಗವಾನ್ನೀತಿಂ ಪೂರ್ವಂ ಜಗ್ರಾಹ ಶಂಕರಃ।
ಬಹುರೂಪೋ ವಿಶಾಲಾಕ್ಷಃ ಶಿವಃ ಸ್ಥಾಣುರುಮಾಪತಿಃ ॥೧೨॥

ಅನಂತರ ಬಹುರೂಪವುಳ್ಳ ವಿರೂಪಾಕ್ಷನಾದ (ವಿಶಾಲಾಕ್ಷನಾದ), ಸ್ಥಾಣುವೂ, ಶಿವನೂ ಆದ ಪೂಜ್ಯನಾದ ಉಮಾಪತಿಯು ಆ ದಂಡನೀತಿಶಾಸ್ತ್ರವನ್ನು ಬ್ರಹ್ಮದೇವರಿಂದ ಸ್ವೀಕರಿಸಿದನು.

ಯುಗಾನಾಮಾಯುಷೋ ಹ್ರಾಸಂ ವಿಜ್ಞಾಯ ಭಗವಾನ್ ಶಿವಃ।
ಸಂಚಿಕ್ಷೇಪ ತತಃ ಶಾಸ್ತ್ರಂ ಮಹಾರ್ಥಂ ಬ್ರಹ್ಮಣಾ ಕೃತಮ್ ॥೧೩॥

ಯುಗಗಳು ಕಳೆದಂತೆ ಮನುಷ್ಯರ ಆಯುಷ್ಯವು ಹ್ರಾಸಹೊಂದುವುದನ್ನು ತಿಳಿದು ಪೂಜ್ಯನಾದ ಶಿವನು ಬ್ರಹ್ಮದೇವರಿಂದ ರಚಿತವಾದ ಮಹಾರ್ಥಗಳನ್ನೊಳ-ಗೊಂಡ ಆ ಶಾಸ್ತ್ರವನ್ನು ಸಂಕ್ಷೇಪಗೊಳಿಸಿ ಇಂದ್ರಾದಿ ದೇವತೆಗಳಿಗೆ ಉಪದೇಶಿಸಿ-ದನು. (ಲಕ್ಷ್ಲಂಕಾರ)

ವೈಶಾಲಾಕ್ಷಮಿತಿ ಪ್ರೋಕ್ತಂ ತದಿಂದ್ರಃ ಪ್ರತ್ಯಪದ್ಯತ।
ದಶಾಧ್ಯಾಯಸಹಸ್ರಾಣಿ ಸುಬ್ರಹ್ಮಣ್ಯೋ ಮಹಾತಪಾಃ ॥೧೪॥

ಅದಕ್ಕೆ ವೈಶಾಲಾಕ್ಷವೆಂದು ಹೆಸರು. ಅದರಲ್ಲಿ ಹತ್ತುಸಹಸ್ರ ಅಧ್ಯಾಯಗಳಿವೆ. ಅತ್ಯಂತ ಬ್ರಾಹ್ಮಣವತ್ಸಲನೂ, ಮಹಾತಪಸ್ವಿಯೂ ಆದ ಇಂದ್ರನು ಅದನ್ನು ಅಧ್ಯ-ಯನ ಮಾಡಿದನು.

ಭಗವಾನಪಿ ತಚ್ಚಾಸ್ತ್ರಂ ಸಂಚಿಕ್ಷೇಪ ಪುರಂದರಃ।
ಸಹಸ್ರೈಃ ಪಂಚಭಿಸ್ತಾತ ಯದುಕ್ತಂ ಬಾಹುದಂಡಿಕಃ ॥೧೫॥

ಪ್ರೀತಿಪಾತ್ರನೇ! ಪೂಜ್ಯನಾದ ಪುರಂದರನೂ ಸಹ ರಾಜನು ತನ್ನ ಬಾಹು-

ಗಳಿಂದ ದಂಡವನ್ನು ವಿಧಿಸುವ ರೀತಿಯನ್ನು ತಿಳಿಸುವ ಆ ಶಾಸ್ತ್ರವನ್ನು ಐದು ಸಹಸ್ರಶ್ಲೋಕಗಳಿಗೆ ಸಂಕ್ಷೇಪಗೊಳಿಸಿದನು.

ಅಧ್ಯಾಯಾನಾಂ ಸಹಸ್ರೈಸ್ತು ತ್ರಿಭಿರೇವ ಬೃಹಸ್ಪತಿಃ।
ಸಂಚಿಕ್ಷೇಪೇಶ್ವರೋ ಬುದ್ಧ್ಯಾ ಬಾರ್ಹಸ್ಪತ್ಯಂ ತದುಚ್ಯತೇ ॥೧೬॥

ಪ್ರಭುಗಳಾದ ಬೃಹಸ್ಪತ್ಯಾಚಾರ್ಯರು ಅದನ್ನು ಮೂರು ಸಹಸ್ರ ಅಧ್ಯಾಯ-ಗಳಿಗೆ ಸಂಕ್ಷೇಪಗೊಳಿಸಿದರು. ಅದಕ್ಕೆ ಬಾರ್ಹಸ್ಪತ್ಯವೆಂದು ಹೆಸರು.

ಅಧ್ಯಾಯಾನಾಂ ಸಹಸ್ರೇಣ ಕಾವ್ಯಃ ಸಂಕ್ಷೇಪಮಬ್ರವೀತ್।
ತಚ್ಚಾಸ್ತ್ರಮಮಿತಪ್ರಜ್ಞೋ ಯೋಗಾಚಾರ್ಯೋ ಮಹಾತಪಾಃ ॥೧೭॥

ಅಮಿತಪ್ರಜ್ಞೆಯುಳ್ಳವರೂ, ಯೋಗಾಚಾರ್ಯರೂ, ಮಹಾತಪಸ್ವಿಗಳೂ ಆದ ಶುಕ್ರಾಚಾರ್ಯರು ಅದನ್ನು ಒಂದು ಸಹಸ್ರ ಅಧ್ಯಾಯಗಳಿಗೆ ಸಂಕ್ಷೇಪಗೊಳಿಸಿದರು.

ಏವಂ ಲೋಕಾನುರೋಧೇನ ಶಾಸ್ತ್ರಮೇತನ್ಮಹರ್ಷಿಭಿಃ।
ಸಂಕ್ಷಿಪ್ತಮಾಯುರ್ವಿಜ್ಞಾಯ ಮರ್ತ್ಯಾನಾಂ ಹ್ರಾಸಿ ಪಾಂಡವ ॥೧೮॥

ಎಲೈ ಪಾಂಡವನೇ! ಹೀಗೆ ಪ್ರಜೆಗಳ ಹ್ರಾಸವನ್ನು ಹೊಂದುವ ಆಯುಸ್ಸನ್ನು ಗಮನಿಸಿ ಮಹರ್ಷಿಗಳು ಪ್ರಜೆಗಳ ಹಿತಕ್ಕಾಗಿ ಬ್ರಹ್ಮದೇವರು ರಚಿಸಿದ ಶಾಸ್ತ್ರವನ್ನು ಸಂಕ್ಷೇಪಗೊಳಿಸಿದರು.

ಅಥ ದೇವಾಃ ಸಮಾಗಮ್ಯ ವಿಷ್ಣುಮೂಚುಃ ಪ್ರಜಾಪತಿಮ್।
ಏಕೋ ಯೋಽರ್ಹತಿ ಮರ್ತ್ಯೇಭ್ಯಃ ಶ್ರೈಷ್ಠ್ಯಂ ತಂ ವೈ ಸಮಾದಿಶ ॥೧೯॥

ಅನಂತರ ದೇವತೆಗಳು ಪ್ರಜಾಪತಿಯಾದ ವಿಷ್ಣುವಿನ ಸಮೀಪದಲ್ಲಿ ಬಂದು ಮನುಷ್ಯರಲ್ಲಿ ಯಾವನು ಎಲ್ಲರಿಗಿಂತಲೂ ಶ್ರೇಷ್ಠತೆಯನ್ನು ಹೊಂದಲು ಅರ್ಹ-ನಾಗುತ್ತಾನೆಯೋ ಅಂತಹವನನ್ನು ನಮಗೆ ನೀಡು ಎಂದು ಕೇಳಿದರು.

ತತಃ ಸಂಚಿಂತ್ಯ ಭಗವಾನ್ ದೇವೋ ನಾರಾಯಣಃ ಪ್ರಭುಃ।
ತೈಜಸಂ ವೈ ವಿರಜಸಂ ಸೋಽಸೃಜನ್ಮಾನಸಂ ಸುತಮ್ ॥೨೦॥

ಆಗ ಭಗವಂತನೂ ಪ್ರಭುವೂ ಆದ ನಾರಾಯಣದೇವನು ಚೆನ್ನಾಗಿ ಚಿಂತಿಸಿ, ತೇಜೋರೂಪನಾದ ವಿರಜನೆಂಬ ಮಾನಸಪುತ್ರನನ್ನು ಸೃಷ್ಟಿಸಿದನು.

ವಿರಜಾಸ್ತು ಮಹಾಭಾಗ ವಿಭುತ್ವಂ ಭುವಿ ನೈಚ್ಛತ।
ನ್ಯಾಸಾಯೈವಾಭವದ್ ಬುದ್ಧಿಃ ಪ್ರಣೇತಾ ತಸ್ಯ ಪಾಂಡವ ॥೨೧॥

ಎಲೈ ಮಹಾನುಭಾವನೇ! ವಿರಜನಾದರೋ ಭೂಮಿಯ ಒಡೆತನವನ್ನು ಬಯಸಲಿಲ್ಲ. ಎಲೈ ಪಾಂಡವನೇ! ಅವನ ಬುದ್ಧಿಯು ಸನ್ಯಾಸಸ್ವೀಕಾರದಲ್ಲಿಯೇ ಹೋಯಿತು.

ಕೀರ್ತಿಮಾಂಸ್ತಸ್ಯ ಪುತ್ರೋಽಭೂತ್ ಸೋಽಪಿ ಪಂಚಾತಿಗೋಽಭವತ್।
ಕರ್ದಮಸ್ತಸ್ಯ ಚ ಸುತಃ ಸೋಽಪ್ಯತಪ್ಯನ್ಮಹತ್ ತಪಃ ॥೨೨॥

ಕೀರ್ತಿಮಂತನು ಅವನ ಮಗನಾಗಿ ಜನಿಸಿದನು. ಅವನೂ ಪ್ರಪಂಚವನ್ನು ದಾಟಿ (ಪ್ರಪಂಚದ ಆಸೆಗಳನ್ನು ದಾಟಿ) ವಿರಕ್ತನಾದನು. ಅವನ ಪುತ್ರನಾದ ಕರ್ದಮನೂ ಸಹ ದೊಡ್ಡ ತಪಸ್ಸನ್ನು ಮಾಡಿದನು.

ಪ್ರಜಾಪತೇಃ ಕರ್ದಮಸ್ಯ ಅನಂಗೋ ನಾಮ ವೈ ಸುತಃ।
ಪ್ರಜಾನಾಂ ರಕ್ಷಿತಾ ಸಾಧುರ್ದಂಡನೀತಿವಿಶಾರದಃ ॥೨೩॥

ಕರ್ದಮಪ್ರಜಾಪತಿಯ ಪುತ್ರನಾದ ಅನಂಗನು ದಂಡನೀತಿಯಲ್ಲಿ ವಿಶಾರದನಾಗಿ ಚೆನ್ನಾಗಿ ಪ್ರಜೆಗಳನ್ನು ರಕ್ಷಿಸುವವನಾದನು.

ಅನಂಗಪುತ್ರೋಽತಿಬಲೋ ನೀತಮಾನಧಿಗಮ್ಯ ವೈ।
ಅಭಿಪೇದೇ ಮಹೀರಾಜ್ಯಮಥೇಂದ್ರಿಯವಶೋಽಭವತ್ ॥೨೪॥

ಅನಂಗಪುತ್ರನೂ ಅತಿಬಲನೂ ಆದ ನೀತಿವಂತನು ಭೂಮಿಯ ರಾಜ್ಯದ ಒಡೆತನವನ್ನು ಹೊಂದಿ, ಅನಂತರ ಇಂದ್ರಿಯವಶನಾದನು.

ಪ್ರಾಪ್ಯ ನಾರೀಂ ಮಹಾಭಾಗಾಂ ರೂಪಿಣೀಂ ಕಾಮಮೋಹಿತಾಮ್ ।
ಸೌಭಾಗ್ಯೇನ ಚ ಸಂಪನ್ನಾಂ ಗುಣೈಶ್ಚಾನುತ್ತಮಾಂ ಸತೀಮ್ ॥೨೫॥

ಅವನು ಮಹಾನುಭಾವಳೂ, ಸುಂದರಳೂ, ಸೌಭಾಗ್ಯಯುಕ್ತಳೂ, ಶ್ರೇಷ್ಠವಾದ ಗುಣಗಳಿಂದ ಕೂಡಿದವಳೂ, ಕಾಮಮೋಹಿತಳೂ ಆದ ಸ್ತ್ರೀಯನ್ನು ಪತ್ನಿಯನ್ನಾಗಿ ಪಡೆದನು.

ಮೃತ್ಯೋಸ್ತು ದುಹಿತಾ ರಾಜನ್ ಸುನೀಥಾ ನಾಮ ಮಾನಸೀ ।
ಪ್ರಖ್ಯಾತಾ ತ್ರಿಷು ಲೋಕೇಷು ಯಾ ಸಾ ವೇನಮಜೀಜನತ್ ॥೨೬॥

ಎಲೈ ರಾಜನೇ! ಮೃತ್ಯುವಿನ ಮಾನಸಪುತ್ರಿಯಾದ ಸುನೀಥಾ ಎಂಬ ಹೆಸರಿನಿಂದ ಮೂರುಲೋಕದಲ್ಲಿ ಪ್ರಖ್ಯಾತಳಾದ ಅವಳು ವೇನನನ್ನು ಪುತ್ರನನ್ನಾಗಿ ಪಡೆದಳು.

ತಂ ಪ್ರಜಾಸು ವಿಧರ್ಮಾಣಂ ರಾಗದ್ವೇಷವಶಾನುಗಮ್ ।
ಮಂತ್ರಪೂತೈಃ ಕುಶೈರ್ಜಘ್ನುರ್ಋಷಯೋ ಬ್ರಹ್ಮವಾದಿನಃ ॥೨೭॥

ರಾಗದ್ವೇಷಗಳಿಗೆ ವಶನಾಗಿ ಪ್ರಜೆಗಳಿಗೆ ವಿರುದ್ಧವಾದ ಧರ್ಮಗಳನ್ನು ಆಚರಿಸುತ್ತಿದ್ದ ಅವನನ್ನು ಬ್ರಹ್ಮವಾದಿಗಳಾದ ಋಷಿಗಳು ಅಭಿಮಂತ್ರಿತವಾದ ಕುಶಗಳಿಂದ ಸಂಹಾರ ಮಾಡಿದರು.

ಮಮಂಥುರ್ದಕ್ಷಿಣಂ ಚೋರುಮೃಷಯಸ್ತಸ್ಯ ಮಂತ್ರತಃ ।
ತತೋಽಸ್ಯ ವಿಕೃತೋ ಜಜ್ಞೇ ಹ್ರಸ್ವಾಂಗಃ ಪುರುಷೋ ಭುವಿ ॥೨೮॥

ನಂತರ ಋಷಿಗಳು ಮಂತ್ರಪೂರ್ವಕವಾಗಿ ಅವನ ಬಲತೊಡೆಯನ್ನು ಮಥಿಸಿದರು. ಆಗ ವಿಕೃತವಾದ ರೂಪವನ್ನು ಹೊಂದಿದ್ದ, ಕುಬ್ಜನಾದ ಪುರುಷನು ಭೂಮಿಯಲ್ಲಿ ಜನಿಸಿದನು.

ದಗ್ಧಸ್ಥಾಣುಪ್ರತೀಕಾಶೋ ರಕ್ತಾಕ್ಷಃ ಕೃಷ್ಣಮೂರ್ಧಜಃ ।
ನಿಷೀದೇತ್ಯೇವಮೂಚುಸ್ತಮೃಷಯೋ ಬ್ರಹ್ಮವಾದಿನಃ ॥೨೯॥

ಅವನು ಸುಟ್ಟು ಹೋದ ಮರದ ಬುಡದಂತೆ ಕಾಂತಿಯನ್ನು ಹೊಂದಿ, ಕೆಂಪಾದ ಕಣ್ಣುಗಳನ್ನು, ಕಪ್ಪಾದ ಕೇಶಗಳನ್ನೂ ಹೊಂದಿದ್ದನು. ಬ್ರಹ್ಮವಾದಿಗಳಾದ ಋಷಿಗಳು ಅವನನ್ನು 'ನಿಷೀದ - ಕುಳಿತುಕೋ' ಎಂದು ಹೇಳಿದರು.

ತಸ್ಮಾನ್ನಿಷಾದಾಃ ಸಂಭೂತಾಃ ಕ್ರೂರಾ ಶೈಲವನಾಶ್ರಯಾಃ।
ಯೇ ಚಾನ್ಯೇ ವಿಂಧ್ಯನಿಲಯಾ ಮ್ಲೇಚ್ಛಾಃ ಶತಸಹಸ್ರಶಃ ॥೩೦॥

ಅವನಿಂದ ನಿಷಾದರು ಉತ್ಪನ್ನರಾದರು. ಅವರು ಕ್ರೂರರು ಮತ್ತು ಪರ್ವತ ಮತ್ತು ಅರಣ್ಯಗಳಲ್ಲಿ ವಾಸಿಸುವವರು. ವಿಂಧ್ಯಪರ್ವತದಲ್ಲಿ ವಾಸಿಸುವ ಸಾವಿರಾರು ಸಂಖ್ಯೆಯ ಮ್ಲೇಚ್ಛರೂ ಸಹ ಅವನ ಜಾತಿಗೇ ಸೇರಿದವರು.

ಭೂಯೋಽಸ್ಯ ದಕ್ಷಿಣಂ ಪಾಣಿಂ ಮಮಂಥುಸ್ತೇ ಮಹರ್ಷಯಃ।
ತತಃ ಪುರುಷ ಉತ್ಪನ್ನೋ ರೂಪೇಣೇಂದ್ರ ಇವಾಪರಃ ॥೩೧॥

ಆ ಮಹರ್ಷಿಗಳು ಪುನಃ ವೇನನ ದಕ್ಷಿಣಬಾಹುವನ್ನು ಮಥಿಸಿದರು. ಆಗ ರೂಪದಲ್ಲಿ ಇಂದ್ರನನ್ನು ಹೋಲುವ ಪುರುಷನು ಉದಯಿಸಿದನು.

ಕವಚೀ ಬದ್ಧನಿಸ್ತ್ರಿಂಶಃ ಸಶರಃ ಸಶರಾಸನಃ।
ವೇದವೇದಾಂಗವಿಚ್ಚೈವ ಧನುರ್ವೇದೇ ಚ ಪಾರಗಃ ॥೩೨॥

ಅವನು ಕವಚವನ್ನು ಧರಿಸಿ, ಖಡ್ಗವನ್ನು ಬಿಗಿದು, ಧನುರ್ಬಾಣಗಳನ್ನು ಹಿಡಿದು, ಧನುರ್ವೇದದಲ್ಲಿ ಪಾರಂಗತನಾಗಿ, ವೇದವೇದಾಂಗಜ್ಞಾನಿಯೂ ಆಗಿದ್ದನು.

ತಂ ದಂಡನೀತಿಃ ಸಕಲಾ ಶ್ರಿತಾ ರಾಜನ್ ನರೋತ್ತಮಮ್।
ತತಃ ಸ ಪ್ರಾಂಜಲಿರ್ವೈನ್ಯೋ ಮಹರ್ಷೀಂಸ್ತಾನುವಾಚ ಹ ॥೩೩॥

ಎಲೈ ರಾಜನೇ! ಆಗ ಸಮಗ್ರವಾದ ದಂಡನೀತಿಯು ಆ ನರಶ್ರೇಷ್ಠನನ್ನು ಆಶ್ರಯಿಸಿತು. ಅನಂತರ ವೇನಪುತ್ರನಾದ ಅವನು ಕೈಗಳನ್ನು ಮುಗಿದು ಮಹರ್ಷಿಗಳನ್ನು ಕುರಿತು ಹೀಗೆ ಹೇಳಿದನು.

ಸುಸೂಕ್ಷ್ಮಾ ಮೇ ಸಮುತ್ಪನ್ನಾ ಬುದ್ಧಿರ್ಧರ್ಮಾರ್ಥದರ್ಶಿನೀ।
ಅನಯಾ ಕಿಂ ಮಯಾ ಕಾರ್ಯಂ ತನ್ಮೇ ತತ್ತ್ವೇನ ಶಂಸತ ॥೩೪॥

ನನಗೆ ಧರ್ಮಾರ್ಥಗಳನ್ನು ತೋರಿಸುವ ಸೂಕ್ಷ್ಮಬುದ್ಧಿಯುಂಟಾಗಿದೆ. ಈ ಬುದ್ಧಿಯಿಂದ ನಾನು ಏನನ್ನು ಮಾಡಬೇಕೆಂದು ನನಗೆ ಸರಿಯಾಗಿ ತಿಳಿಸಿ.

ಯನ್ಮಾಂ ಭವಂತೋ ವಕ್ಷ್ಯಂತಿ ಕಾರ್ಯಮರ್ಥಸಮನ್ವಿತಮ್।
ತದಹಂ ವೈ ಕರಿಷ್ಯಾಮಿ ನಾತ್ರ ಕಾರ್ಯಾ ವಿಚಾರಣಾ ॥೩೫॥

ಅರ್ಥಸಾಧಕವಾದ ಯಾವ ಕಾರ್ಯವನ್ನು ಮಾಡಬೇಕೆಂದು ನೀವು ನನಗೆ ಹೇಳುವಿರೋ ಅದನ್ನು ನಾನು ಮಾಡುವೆನು. ಇದರಲ್ಲಿ ಬೇರೆ ವಿಚಾರವಿಲ್ಲ. (ಎಂದು ಹೇಳಿದನು).

ತಮೂಚುರಥ ದೇವಾಸ್ತೇ ತೇ ಚೈವ ಪರಮರ್ಷಯಃ।
ನಿಯತೋ ಯತ್ರ ಧರ್ಮೋ ವೈ ತಮಶಂಕಃ ಸಮಾಚರ ॥೩೬॥

ಆಗ ದೇವತೆಗಳು ಮತ್ತು ಪರಮ ಋಷಿಗಳು ಅವನನ್ನು ಕುರಿತು ಯಾವುದರಿಂದ ನಿಯಮೇನ ಧರ್ಮಪ್ರಾಪ್ತಿಯಾಗುವುದೋ ಅದನ್ನು ನಿಃಶಂಕವಾಗಿ ಆಚರಿಸು ಎಂದು ಹೇಳಿದರು.

ಪ್ರಿಯಾಪ್ರಿಯೇ ಪರಿತ್ಯಜ್ಯ ಸಮಃ ಸರ್ವೇಷು ಜಂತುಷು।
ಕಾಮಕ್ರೋಧೌ ಚ ಲೋಭಂ ಚ ಮಾನಂ ಚೋತ್ಸೃಜ್ಯ ದೂರತಃ ॥೩೭॥

ಯಶ್ಚ ಧರ್ಮಾತ್ ಪ್ರವಿಚಲೇಲ್ಲೋಕೇ ಕಶ್ಚನ ಮಾನವಃ।
ನಿಗ್ರಾಹ್ಯಸ್ತೇ ಸ ಬಾಹುಭ್ಯಾಂ ಶಶ್ವದ್ ಧರ್ಮಮವೇಕ್ಷತಃ ॥೩೮॥

ಪ್ರಿಯಾಪ್ರಿಯಗಳನ್ನು ಪರಿತ್ಯಜಿಸಿ, ಸರ್ವಪ್ರಾಣಿಗಳಲ್ಲಿಯೂ ಸಮಾನವಾಗಿ ನಡೆದುಕೊಂಡು, ಕಾಮಕ್ರೋಧಗಳನ್ನೂ, ಲೋಭವನ್ನೂ ಮತ್ತು ಅಹಂಕಾರವನ್ನೂ ದೂರದಲ್ಲಿಯೇ ತ್ಯಜಿಸಿ ಲೋಕದಲ್ಲಿ ಯಾವ ಮನುಷ್ಯನು ಧರ್ಮದಿಂದ

ಭ್ರಷ್ಟನಾಗುತ್ತಾನೆಯೋ ಅವನನ್ನು ಶಾಶ್ವತವಾಗಿ ಧರ್ಮವನ್ನು ಪರಿಶೀಲಿಸುವ ನೀನು ನಿನ್ನ ಬಾಹುಗಳಿಂದ ನಿಗ್ರಹಿಸಬೇಕು.

ಪ್ರತಿಜ್ಞಾಂ ಚಾಧಿರೋಹಸ್ವ ಮನಸಾ ಕರ್ಮಣಾ ಗಿರಾ।
ಪಾಲಯಿಷ್ಯಾಮ್ಯಹಂ ಭೌಮಂ ಬ್ರಹ್ಮ ಇತ್ಯೇವ ಚಾಸಕೃತ್ ॥೩೯॥

ಯಶ್ಚಾತ್ರ ಧರ್ಮ ಇತ್ಯುಕ್ತೋ ದಂಡನೀತಿವ್ಯಪಾಶ್ರಯಃ।
ತಮಶಂಕಃ ಕರಿಷ್ಯಾಮಿ ಸ್ವವಶೋ ನ ಕದಾಚನ ॥೪೦॥

ಅದಂಡ್ಯಾ ಮೇ ದ್ವಿಜಾಶ್ಚೇತಿ ಪ್ರತಿಜಾನೀಷ್ವ ಚಾಭಿಭೋ।
ಲೋಕಂ ಚ ಸಂಕರಾತ್ ಕೃತ್ಸ್ನಾತ್ ತ್ರಾತಾಸ್ಮೀತಿ ಪರಂತಪ ॥೪೧॥

ಎಲೈ ಪರಂತಪನೇ! ಶತ್ರುಗಳನ್ನು ಸೋಲಿಸುವವನೇ! ನಾನು ಮನಸ್ಸಿನಿಂದಲೂ ಕರ್ಮದಿಂದಲೂ ಮತ್ತು ಮಾತಿನಿಂದಲೂ ಭೂಮಿಯಲ್ಲಿರುವ ವೇದವನ್ನು ರಕ್ಷಿಸುತ್ತೇನೆ ಎಂದು ಅನೇಕ ಬಾರಿ ಪ್ರತಿಜ್ಞೆಯನ್ನು ಮಾಡು. ನಾನು ನನ್ನ ಮನಸ್ಸಿಗೆ ಬಂದಂತೆ ನಡೆದುಕೊಳ್ಳದೆ, ದಂಡನೀತಿಯನ್ನು ಆಧರಿಸಿ, ಯಾವುದು ಧರ್ಮ-ವೆಂದು ಹೇಳಲ್ಪಡುತ್ತದೆಯೋ ಅದನ್ನು ನಿಃಶಂಕೆಯಿಂದ ಮಾಡುವೆನು. ನನಗೆ ಬ್ರಾಹ್ಮಣರು ಶಿಕ್ಷಾರ್ಹರಲ್ಲ. ಲೋಕದಲ್ಲಿ ಉಂಟಾಗಬಹುದಾದ ಧರ್ಮಸಂಕರ-ವೆಲ್ಲವನ್ನೂ ನಾನು ಉಂಟಾಗದಂತೆ ರಕ್ಷಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡು (ಎಂದು ಹೇಳಿದರು.)

ವೈನ್ಯಸ್ತತಸ್ತಾನುವಾಚ ದೇವಾನೃಷಿಪುರೋಗಮಾನ್।
ಬ್ರಾಹ್ಮಣಾ ಮೇ ಸಹಾಯಾಶ್ಚೇದೇವಮಸ್ತು ಸುರರ್ಷಭಾಃ ॥೪೨॥

ವೈನ್ಯನು ಆಗ ಅವರನ್ನು ಕುರಿತು 'ಎಲೈ ಸುರಶ್ರೇಷ್ಠರೇ! ಬ್ರಾಹ್ಮಣರು ನನಗೆ ಸಹಾಯವಾಗಿದ್ದರೆ ಹಾಗೆಯೇ ಆಗಲಿ' ಎಂದು ಹೇಳಿದನು.

ಏವಮಸ್ತ್ವಿತಿ ವೈನ್ಯಸ್ತು ತೈರುಕ್ತೋ ಬ್ರಹ್ಮವಾದಿಭಿಃ।
ಪುರೋಧಾಶ್ಚಾಭವತ್ ತಸ್ಯ ಶುಕ್ರೋ ಬ್ರಹ್ಮಮಯೋ ನಿಧಿಃ ॥೪೩॥

ಬ್ರಹ್ಮವಾದಿಗಳಾದ ಋಷಿಗಳು ವೈನ್ಯನನ್ನು ಕುರಿತು ತಥಾಸ್ತು ಎಂದು ಹೇಳಿದರು. ಆಗ ವೇದನಿಧಿಯಾದ ಶುಕ್ರಾಚಾರ್ಯರು ಅವನಿಗೆ ಪುರೋಹಿತರಾದರು.

ಮಂತ್ರಿಣೋ ವಾಲಖಿಲ್ಯಾಸ್ತು ಸಾರಸ್ವತ್ಯೋ ಗಣೋ ಹ್ಯಭೂತ್ ।
ಮಹರ್ಷಿರ್ಭಗವಾನ್ ಗರ್ಗಸ್ತಸ್ಯ ಸಾಂವತ್ಸರೋಽಭವತ್ ॥೪೪॥

ಸರಸ್ವತೀನದಿಯ ತೀರದಲ್ಲಿ ವಾಸಿಸುವ ವಾಲಖಿಲ್ಯ ಋಷಿಗಳ ಗಣವು ಮಂತ್ರಿಗಳಾದರು. ಮಹರ್ಷಿಗಳೂ ಪೂಜ್ಯರೂ ಆದ ಗರ್ಗರು ಜ್ಯೋತಿಃಶಾಸ್ತ್ರಫಲವನ್ನು ಹೇಳುವವರಾದರು.

ಆತ್ಮನಾऽಷ್ಟಮ ಇತ್ಯೇವ ಶ್ರುತಿರೇಷಾ ಪರಾ ನೃಷು ।
ಉತ್ಪನ್ನೌ ವಂದಿನೌ ಚಾಸ್ಯ ತತ್ಪೂರ್ವೌ ಸೂತಮಾಗಧೌ ॥೪೫॥

ರಾಜನು ತನ್ನನ್ನು ಸೇರಿಸಿ ಎಂಟನೆಯವನು ಎಂಬ ಈ ಶ್ರುತಿಯು ಪ್ರಜೆಗಳಲ್ಲಿ ಪ್ರಸಿದ್ಧವಾಗಿದೆ. ಪುರೋಹಿತ, ಮಂತ್ರಿ , ಜ್ಯೋತಿಷಿಕ, ಇಬ್ಬರು ಬಂದಿಗಳು, ಸೂತ-ಮಾಗಧರು ಇವರು ಏಳು ರಾಜನನ್ನು ಸೇರಿಸಿ ರಾಜನು ಎಂಟನೆಯವನು. ಅವನಿಗೆ ಇಬ್ಬರು ವಂದಿಗಳು ಮತ್ತು ಅದಕ್ಕಿಂತಲೂ ಪೂರ್ವದಲ್ಲಿ ಸೂತಮಾಗಧರು ಉತ್ಪನ್ನರಾದರು.

ತಯೋಃ ಪ್ರೀತೋ ದದೌ ರಾಜಾ ಪೃಥುರ್ವೈನ್ಯಃ ಪ್ರತಾಪವಾನ್ ।
ಅನೂಪದೇಶಂ ಸೂತಾಯ ಮಗಧಂ ಮಾಗಧಾಯ ಚ ॥೪೬॥

ಪ್ರತಾಪಶಾಲಿಯಾದ ವೇನಪುತ್ರನಾದ ಪೃಥುರಾಜನು ಸಂತೋಷದಿಂದ ಅವರಲ್ಲಿ ಸೂತನಿಗೆ ಸಮುದ್ರಪ್ರಾಂತದೇಶವನ್ನು ಮತ್ತು ಮಾಗಧನಿಗೆ ಮಗಧದೇಶವನ್ನು ಕೊಟ್ಟನು.

ಸಮತಾಂ ವಸುಧಾಯಾಶ್ಚ ಸ ಸಮ್ಯಗುಪಪಾದಯತ್ ।
ವೈಷಮ್ಯಂ ಹಿ ಪರಂ ಭೂಮೇರಾಸೀದಿತಿ ಹ ನಃ ಶ್ರುತಮ್ ॥೪೭॥

ಭೂಮಿಯನ್ನು ಹೆಚ್ಚು ಕಡಿಮೆ ಸಮತಟ್ಟನ್ನಾಗಿಮಾಡಿದನು. ಮೊದಲು ಭೂಮಿಯು ಬಹಳ ಉಬ್ಬುತಗ್ಗುಗಳಿಂದ ಕೂಡಿದ್ದಿತು ಎಂದು ಕೇಳಿದ್ದೇವೆ.

ಮನ್ವಂತರೇಷು ಸರ್ವೇಷು ವಿಷಮಾ ಜಾಯತೇ ಮಹೀ।
ಉಜ್ಜಹಾರ ತತೋ ವೈನ್ಯಃ ಶಿಲಾಜಾಲಾನ್ ಸಮಂತತಃ ॥೪೮॥

ಎಲ್ಲಾ ಮನ್ವಂತರಗಳಲ್ಲಿಯೂ ಭೂಮಿಯು ಹೀಗೆಯೇ ಉಬ್ಬು ತಗ್ಗುಗಳಿಂದಲೇ ಸೃಷ್ಟಿಸಲ್ಪಡುತ್ತದೆ. ಆದ್ದರಿಂದ ವೈನ್ಯನು ಅಲ್ಲಲ್ಲಿದ್ದ ಶಿಲಾಸಮೂಹಗಳನ್ನು ತೆಗೆದು ಸಮತಟ್ಟನ್ನಾಗಿ ಮಾಡಿದನು.

ಸ ವಿಷ್ಣುನಾ ಚ ದೇವೇನ ಶಕ್ರೇಣ ವಿಬುಧೈಃ ಸಹ।
ಋಷಿಭಿಶ್ಚ ಪ್ರಜಾಪಾಲ್ಯೇ ಬ್ರಹ್ಮಣಾ ಚಾಭಿಷೇಚಿತಃ ॥೪೯॥

ವಿಷ್ಣುವೂ, ಇಂದ್ರನೂ, ದೇವತೆಗಳೂ, ಋಷಿಗಳೂ ಮತ್ತು ಬ್ರಹ್ಮದೇವರೂ ಸೇರಿ ಅವನನ್ನು ಪ್ರಜಾಪಾಲಕನೆಂದು ಅಭಿಷೇಕ ಮಾಡಿದರು.

ತಂ ಸಾಕ್ಷಾತ್ ಪೃಥಿವೀ ಭೇಜೇ ರತ್ನಾನ್ಯಾದಾಯ ಪಾಂಡವ।
ಸಾಗರಃ ಸರಿತಾಂ ಭರ್ತಾ ಹಿಮವಾಂಶ್ಚಾಚಲೋತ್ತಮಃ ॥೫೦॥

ಎಲೈ ಪಾಂಡವನೇ! ಭೂದೇವಿಯು ಸಾಕ್ಷಾತ್ತಾಗಿ ರತ್ನಗಳನ್ನು ತೆಗೆದುಕೊಂಡು ಬಂದು ಅವನನ್ನು ಸೇವಿಸಿದಳು. ಸರಿತ್ಪತಿಯಾದ ಸಾಗರನು ಮತ್ತು ಪರ್ವತಶ್ರೇಷ್ಠನಾದ ಹಿಮಾಲಯನು ರತ್ನಗಳನ್ನು ನೀಡಿದರು.

ಶಕ್ರಶ್ಚ ಧನಮಕ್ಷಯ್ಯಂ ಪ್ರಾದಾತ್ ತಸ್ಯ ಯುಧಿಷ್ಠಿರ।
ರುಗ್ಮಂ ಚಾಪಿ ಮಹಾಮೇರುಃ ಸ್ವಯಂ ಕನಕಪರ್ವತಃ ॥೫೧॥

ಎಲೈ ಯುಧಿಷ್ಠಿರನೇ! ಇಂದ್ರನು ತಾನೇ ಬಂದು ಅವನಿಗೆ ಅಕ್ಷಯವಾದ ಧನವನ್ನು ಕೊಟ್ಟನು. ಸುವರ್ಣಪರ್ವತವಾದ ಮೇರುವು ತಾನೇ ಸುವರ್ಣವನ್ನು ಕೊಟ್ಟನು.

ಯಕ್ಷರಾಕ್ಷಸಭರ್ತಾ ಚ ಭಗವಾನ್ ನರವಾಹನಃ।
ಧರ್ಮೇ ಚಾರ್ಥೇ ಚ ಕಾಮೇ ಚ ಸಮರ್ಥಂ ಪ್ರದದೌ ಧನಮ್ ॥೫೨॥

ಯಕ್ಷರಾಕ್ಷಸರ ಪತಿಯಾದ, ಪೂಜ್ಯನಾದ, ನರವಾಹನನಾದ ಕುಬೇರನು ಅವನಿಗೆ ಧರ್ಮಾರ್ಥಕಾಮಗಳಿಗೆ ಬೇಕಾಗುವಷ್ಟು ಧನವನ್ನು ಕೊಟ್ಟನು.

ಹಯಾ ರಥಾಶ್ಚ ನಾಗಾಶ್ಚ ಕೋಟಿಶಃ ಪುರುಷಾಸ್ತಥಾ।
ಪ್ರಾದುರ್ಬಭೂವುರ್ವೈನ್ಯಸ್ಯ ಚಿಂತನಾದೇವ ಪಾಂಡವ।
ನ ಜರಾ ನ ಚ ದುರ್ಭಿಕ್ಷಂ ನಾಧಯೋ ವ್ಯಾಧಯಸ್ತಥಾ ॥೫೩॥

ಸರೀಸೃಪೇಭ್ಯಃ ಸ್ತೇನೇಭ್ಯೋ ನ ಚಾನ್ಯೋನ್ಯಾತ್ ಕದಾಚನ।
ಭಯಮುತ್ಪದ್ಯತೇ ತತ್ರ ತಸ್ಯ ರಾಜ್ಞೋSಭಿರಕ್ಷಣಾತ್ ॥೫೪॥

ಅಶ್ವಗಳು, ರಥಗಳು, ಗಜಗಳು, ಮತ್ತು ಕೋಟಿಗಟ್ಟಲೆ ಪುರುಷರು ಸಹ ಅವನ ಮನಸ್ಸಿನ ಚಿಂತನೆಯಿಂದಲೇ ಪ್ರಾದುರ್ಭವಿಸಿದರು. ಎಲೈ ಪಾಂಡವನೇ! ಅವನ ರಾಜ್ಯದಲ್ಲಿ ಜರೆಯಾಗಲೀ, ದುರ್ಭಿಕ್ಷವಾಗಲೀ, ಆಧಿವ್ಯಾಧಿಗಳಾಗಲೀ, ಸರ್ಪ-ಭಯವಾಗಲೀ, ಚೋರಭಯವಾಗಲೀ, ಪರಸ್ಪರಭಯವಾಗಲೀ ಉಂಟಾಗಲಿಲ್ಲ. ಆ ರಾಜನ ರಕ್ಷಣೆಯು ಆ ರೀತಿ ಇದ್ದಿತು.

ಆಪಸ್ತಸ್ತಂಭಿರೇ ಚಾಸ್ಯ ಸಮುದ್ರಮಭಿಯಾಸ್ಯತಃ।
ಪರ್ವತಾಶ್ಚ ದದುರ್ಮಾರ್ಗಂ ಧ್ವಜಭಂಗಶ್ಚ ನಾಭವತ್ ॥೫೫॥

ಸಮುದ್ರವನ್ನು ಹೋಗಿ ಸೇರುವ ನದಿಗಳು ಅಲ್ಲಲ್ಲಿ ನಿಂತವು. ಪರ್ವತಗಳು ಅವನಿಗೆ ಮಾರ್ಗವನ್ನು ನೀಡಿದವು. ಅವನ ರಥದ ಧ್ವಜವು ಭಗ್ನವಾಗಲಿಲ್ಲ.

ತೇನೇಯಂ ಪೃಥಿವೀ ದುಗ್ಧಾ ಸಸ್ಯಾನಿ ದಶ ಸಪ್ತ ಚ।
ಯಕ್ಷರಾಕ್ಷಸನಾಗೈಶ್ಚಾಭೀಪ್ಸಿತಂ ಯಸ್ಯ ಯಸ್ಯ ಯತ್ ॥೫೬॥

ಅವನು ಈ ಭೂಮಿಯನ್ನು ದೋಹನ ಮಾಡಿ ಯಕ್ಷ, ರಾಕ್ಷಸ, ಸರ್ಪಗಳಲ್ಲಿ

ಅವರವರಿಗೆ ಇಷ್ಟವಾದ ಹದಿನೇಳು ವಿಧವಾದ ಸಸ್ಯಗಳನ್ನು ಮತ್ತು ಹದಿನೆಂಟು ವಿಧವಾದ ಧಾನ್ಯಗಳನ್ನು ದೋಹನ ಮಾಡಿದನು. (ಲಕ್ಷಾಲಂಕಾರ)

ತೇನ ಧರ್ಮೋತ್ತರಶ್ಚಾಯಂ ಕೃತೋ ಲೋಕೋ ಮಹಾತ್ಮನಾ ।
ರಂಜಿತಾಶ್ಚ ಪ್ರಜಾಃ ಸರ್ವಾಸ್ತೇನ ರಾಜೇತಿ ಶಬ್ದ್ಯತೇ ॥೫೭॥

ಮಹಾತ್ಮನಾದ ಅವನು ಈ ಲೋಕವನ್ನು ಧರ್ಮೋತ್ತರವನ್ನಾಗಿ ಮಾಡಿದನು. ಎಲ್ಲಾ ಪ್ರಜೆಗಳನ್ನು ರಂಜನೆ ಮಾಡಿದುದರಿಂದ ಅವನಿಗೆ ರಾಜ ಎಂಬ ಶಬ್ದವು ಬಂದಿತು.

ಬ್ರಾಹ್ಮಣಾನಾಂ ಕ್ಷತತ್ರಾಣಾತ್ ತತಃ ಕ್ಷತ್ರಿಯ ಉಚ್ಯತೇ ।
ಪ್ರಥಿತಾ ಧನತಶ್ಚೇಯಂ ಪೃಥಿವೀ ಸಾಧುಭಿಃ ಸ್ಮೃತಾ ॥೫೮॥

ಬ್ರಾಹ್ಮಣರಿಗೆ ಗಾಯವಾಗದಂತೆ ರಕ್ಷಣೆ ಮಾಡಿದುದರಿಂದ ಕ್ಷತ್ರಿಯನೆಂದು ಕರೆಯುತ್ತಾರೆ. ಅವನ ಆಳ್ವಿಕೆಯಲ್ಲಿ ಈ ಭೂಮಿಯು ಸಂಪತ್ತಿನಿಂದ ವಿಸ್ತಾರ-ಗೊಂಡಿತು. ಆದ್ದರಿಂದ ಸಜ್ಜನರು ಭೂಮಿಯನ್ನು ಪೃಥಿವೀ ಎಂದು ಕರೆಯುತ್ತಾರೆ.

ಸ್ಥಾಪನಂ ಚಾಕರೋದ್ ವಿಷ್ಣುಃ ಸ್ವಯಮೇವ ಸನಾತನಃ ।
ನಾತಿವರ್ತಿಷ್ಯತೇ ಕಶ್ಚಿದ್ ರಾಜಂಸ್ತ್ವಮಿತಿ ಪಾರ್ಥಿವ ॥೫೯॥

ಎಲೈ ಪಾರ್ಥಿವನೇ! ಸನಾತನನಾದ ವಿಷ್ಣುವು ತಾನಾಗಿಯೇ ''ಎಲೈ ರಾಜನೇ ನಿನ್ನನ್ನು ಯಾರೂ ಅತಿಕ್ರಮಿಸುವುದಿಲ್ಲ'' ಎಂದು ಕಟ್ಟಳೆಯನ್ನು ವಿಧಿಸಿದನು.

ತೇಜಸಾ ಭಗವಾನ್ ವಿಷ್ಣುರಾವಿವೇಶ ಚ ಭೂಮಿಪಮ್ ।
ದೇವವನ್ನರದೇವಾನಾಂ ನಮತೇ ಯಜ್ಜಗನ್ನೃಪ ॥೬೦॥

ಭಗವಂತನಾದ ವಿಷ್ಣುವು ಆ ರಾಜನನ್ನು ತನ್ನ ತೇಜೋಂಶದಿಂದ ಪ್ರವೇಶಿಸಿ-ದನು. ಆದ್ದರಿಂದ ಎಲೈ ರಾಜನೇ! ಜಗತ್ತು ದೇವತೆಯಂತೆ ನರದೇವನಾದ ರಾಜನಿಗೆ ನಮಸ್ಕರಿಸುತ್ತದೆ.

ದಂಡನೀತ್ಯಾ ಚ ಸತತಂ ರಕ್ಷಿತಂ ತಂ ನರೇಶ್ವರ।
ನಾಧರ್ಷಯತ್ ತತಃ ಕಶ್ಚಿಚ್ಚಾರನಿತ್ಯಾಚ್ಚ ದರ್ಶನಾತ್ ॥೬೧॥

ಎಲೈ ನರೇಶ್ವರನೇ! ದಂಡನೀತಿಯಿಂದ ಸತತವಾಗಿ ರಕ್ಷಿಸಲ್ಪಡುವುದರಿಂದಲೂ ಮತ್ತು ನಿತ್ಯವೂ ಚಾರರ ಮೂಲಕ ಎಲ್ಲವನ್ನೂ ನೋಡುವುದರಿಂದಲೂ ಅವನನ್ನು ಯಾರೂ ಅವಮಾನಗೊಳಿಸಲಿಲ್ಲ.

ಆತ್ಮನಾ ಕರಣೈಶ್ಚೈವ ಸಮಸ್ಯೇಹ ಮಹೀಕ್ಷಿತಃ।
ಕೋ ಹೇತುರ್ಯದ್ವಶೇ ತಿಷ್ಠೇಲ್ಲೋಕೋ ದೈವಾದೃತೇ ಗುಣಾತ್ ॥೬೨॥

ತಾನು ಮತ್ತು ತನ್ನ ಸಹಾಯಕರು ನಿಷ್ಪಕ್ಷಪಾತವಾಗಿ ವರ್ತಿಸುವ ರಾಜನಿಗೆ ದೈವಾನುಗ್ರಹವನ್ನು ಬಿಟ್ಟು ಜಗತ್ತು ವಶವಾಗುವುದಕ್ಕೆ ಬೇರೆ ಯಾವ ಕಾರಣವಿದೆ?

ವಿಷ್ಣೋರ್ಲಲಾಟಾತ್ ಕಮಲಂ ಸೌವರ್ಣಮಭವತ್ ತದಾ।
ಶ್ರೀಃ ಸಂಭೂತಾ ಯತೋ ದೇವೀ ಪತ್ನೀ ಧರ್ಮಸ್ಯ ಧೀಮತಃ ॥೬೩॥

ವಿಷ್ಣುವಿನ ಲಲಾಟದಿಂದ ಸುವರ್ಣಮಯವಾದ ಕಮಲವು ಆಗ ಜನಿಸಿತು. ಅದರಲ್ಲಿ ಮೇಧಾವಿಯಾದ ಧರ್ಮನ ಪತ್ನಿಯಾದ ಶ್ರೀದೇವಿಯು ಜನಿಸಿದಳು.

ಶ್ರಿಯಃ ಸಕಾಶಾದರ್ಥಶ್ಚ ಜಾತೋ ಧರ್ಮೇಣ ಪಾಂಡವ।
ಅಥ ಧರ್ಮಸ್ತಥೈವಾರ್ಥಃ ಶ್ರೀಶ್ಚ ರಾಜ್ಯೇ ಪ್ರತಿಷ್ಠಿತಾ ॥೬೪॥

ಎಲೈ ಪಾಂಡವನೇ! ಧರ್ಮದಿಂದ ಶ್ರೀದೇವಿಯ ಮೂಲಕ ಅರ್ಥವು ಜನಿಸಿತು. ಅನಂತರ ಧರ್ಮ, ಅರ್ಥ ಮತ್ತು ಸಂಪತ್ತುಗಳು ರಾಜ್ಯದಲ್ಲಿ ಪ್ರತಿಷ್ಠಿತವಾದವು.

ಸುಕೃತಸ್ಯ ಕ್ಷಯಾಚ್ಚೈವ ಸ್ವರ್ಲೋಕಾದೇತ್ಯ ಮೇದಿನೀಮ್।
ಪಾರ್ಥಿವೋ ಜಾಯತೇ ತಾತ ದಂಡನೀತಿವಶಾನುಗಃ ॥೬೫॥

ಪ್ರೀತಿಪಾತ್ರನೇ! ಶ್ರೇಷ್ಠರಾದ ಜೀವರು ಸ್ವರ್ಗವಾಸಕ್ಕೆ ಕಾರಣವಾದ ಪುಣ್ಯವನ್ನು ಭೋಗದಿಂದ ಕಳೆದುಕೊಂಡು ಸ್ವರ್ಗದಿಂದ ಭೂಮಿಗೆ ಬಂದು ರಾಜರಾಗಿ ದಂಡ-ನೀತಿಯ ವಶವರ್ತಿಗಳಾಗುತ್ತಾರೆ.

ಮಹತ್ತ್ವೇನ ಚ ಸಂಯುಕ್ತೋ ವೈಷ್ಣವೇನ ನರೋ ಭುವಿ।
ಬುದ್ಧ್ಯಾ ಭವತಿ ಸಂಯುಕ್ತೋ ಮಾಹಾತ್ಮ್ಯಂ ಚಾಧಿಗಚ್ಛತಿ ॥೬೬॥

ಶ್ರೇಷ್ಠತೆಯಿಂದಲೂ ಮತ್ತು ವಿಷ್ಣುವಿನ ಸನ್ನಿಧಾನದಿಂದಲೂ ಕೂಡಿದ ಅಂತಹ ಮಾನವರು ಒಳ್ಳೆಯ ಬುದ್ಧಿಯನ್ನು ಹೊಂದಿ, ಮಾಹಾತ್ಮ್ಯವನ್ನು ಪಡೆಯುತ್ತಾರೆ.

ಸ್ಥಾಪನಾಮಥ ದೇವಾನಾಂ ನ ಕಶ್ಚಿದತಿವರ್ತತೇ।
ತಿಷ್ಠತ್ಯೇಕಸ್ಯ ಚ ವಶೇ ತಂ ಚೇದನುವಿಧೀಯತೇ ॥೬೭॥

ದೇವತೆಗಳು ವಿಧಿಸಿದ ಕಟ್ಟಳೆಯನ್ನು ಯಾರೂ ಮೀರುವುದಿಲ್ಲ. ಅವನನ್ನು ಅನುಸರಿಸುವ ಪ್ರಜೆಗಳೆಲ್ಲರೂ ಅವನ ವಶದಲ್ಲಿ ಇರುತ್ತಾರೆ.

ಶುಭಂ ಹಿ ಕರ್ಮ ರಾಜೇಂದ್ರ ಶುಭತ್ವಾಯೋಪಕಲ್ಪತೇ।
ತುಲ್ಯಸ್ಯೈಕಸ್ಯ ಯಸ್ಯಾಯಂ ಲೋಕೋ ವಚಸಿ ತಿಷ್ಠತಿ ॥೬೮॥

ಎಲೈ ರಾಜೇಂದ್ರನೇ! ಶುಭಕರ್ಮವು ಶುಭಫಲವನ್ನೇ ಕೊಡುತ್ತದೆ. ಆದ್ದರಿಂದ ಅಂತಹ ತಮಗೆ ಶರೀರಾದಿಗಳಿಂದ ಸಮಾನನಾದ ಒಬ್ಬನ ವಶದಲ್ಲಿ ಲೋಕವು ಇರುತ್ತದೆ.

ಯೋ ಹ್ಯಸ್ಯ ಮುಖಮದ್ರಾಕ್ಷೀತ್ ಸೋಮ್ಯ ಸೋಽಸ್ಯ ವಶಾನುಗಃ।
ಸುಭಗಂ ಚಾರ್ಥವಂತಂ ಚ ರೂಪವಂತಂ ಚ ಪಶ್ಯತಿ ॥೬೯॥

ಯಾವನು ಸುಭಗನೂ, ರೂಪವಂತನೂ, ಶ್ರೀಮಂತನೂ ಆದ ರಾಜನ ಮುಖ -ವನ್ನು ನೋಡುತ್ತಾನೆಯೋ ಅವನು ಎಲೈ ಸೌಮ್ಯನೇ! ಅವನಿಗೆ ವಶನಾಗುತ್ತಾನೆ.

ತತೋ ಜಗತಿ ರಾಜೇಂದ್ರ ಸತತಂ ಶಬ್ದಿತಂ ಬುಧೈಃ।
ದೇವಾಶ್ಚ ನರದೇವಾಶ್ಚ ತುಲ್ಯಾ ಇತಿ ವಿಶಾಂಪತೇ ॥೭೦॥

ಎಲೈ ರಾಜೇಂದ್ರನೇ! ಆಗ ಜಗತ್ತಿನಲ್ಲಿ ಜ್ಞಾನಿಗಳು 'ದೇವತೆಗಳು ಮತ್ತು ರಾಜರು ಸಮಾನರಾದವರು' ಎಂಬ ಪ್ರಥೆಯನ್ನು ಉಂಟು ಮಾಡಿದರು.

ಏತತ್ ತೇ ಸರ್ವಮಾಖ್ಯಾತಂ ಮಹತ್ತ್ವಂ ಪ್ರತಿ ರಾಜಸು।
ಕಾತ್ಸ್ನ್ಯೇನ ಭರತಶ್ರೇಷ್ಠ ಕಿಮನ್ಯದಿಹ ವರ್ತತಾಮ್ ॥೭೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಷ್ಟಿತಮೋऽಧ್ಯಾಯಃ ॥೬೦॥

ಎಲೈ ಭರತಶ್ರೇಷ್ಠನೇ! ರಾಜರಲ್ಲಿರುವ ಶ್ರೇಷ್ಠತೆಯ ವಿಷಯದಲ್ಲಿ ನಾನು ನಿನಗೆ ಎಲ್ಲವನ್ನೂ ಸಂಪೂರ್ಣವಾಗಿ ಹೇಳಿದ್ದೇನೆ. ಬೇರೆ ಏನನ್ನು ಹೇಳಲಿ?

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೦ನೆಯ ಅಧ್ಯಾಯವು ಮುಗಿಯಿತು.

—0—

೬೧. ಅರವತ್ತೊಂದನೆಯ ಅಧ್ಯಾಯ

ಚಾತುರ್ವರ್ಣ್ಯಧರ್ಮಕಥನ

ವೈಶಂಪಾಯನಃ

ತತಃ ಪುನಃ ಸ ಗಾಂಗೇಯಮಭಿವಾದ್ಯ ಪಿತಾಮಹಮ್।
ಪ್ರಾಂಜಲಿರ್ನಿಯತೋ ಭೂತ್ವಾ ಪರ್ಯಪೃಚ್ಛದ್ ಯುಧಿಷ್ಠಿರಃ ॥೧॥

ವೈಶಂಪಾಯನರು – ಅನಂತರ ಯುಧಿಷ್ಠಿರನು ಪುನಃ ಗಂಗಾಪುತ್ರರೂ ಪಿತಾಮಹರೂ ಆದ ಭೀಷ್ಮರಿಗೆ ಅಭಿವಂದಿಸಿ, ಕೈಗಳನ್ನು ಮುಗಿದು ಶ್ರದ್ಧೆಯಿಂದ ಪ್ರಶ್ನೆ ಮಾಡಿದನು.

ಕೇ ಧರ್ಮಾಃ ಸರ್ವವರ್ಣಾನಾಂ ಚಾತುರ್ವರ್ಣ್ಯಸ್ಯ ಕೇ ಪೃಥಕ್।
ಚತುರ್ಣಾಮಾಶ್ರಮಾಣಾಂ ಚ ರಾಜಧರ್ಮಾಶ್ಚ ಕೇ ಮತಾಃ ॥೨॥

ಅನುಲೋಮಪ್ರತಿಲೋಮವರ್ಣದವರಿಗೆ ಯಾವ ಧರ್ಮಗಳು? ಚಾತುರ್ವರ್ಣ್ಯಕ್ಕೆ ಸಂಬಂಧಿಸಿದ ಧರ್ಮಗಳು ಯಾವವು? ನಾಲ್ಕು ಆಶ್ರಮಗಳಿಗೂ ಮತ್ತು ರಾಜರಿಗೂ ಸಂಬಂಧಿಸಿದ ಧರ್ಮಗಳು ಯಾವವು?

ಕೇನಸ್ವಿದ್ ವರ್ಧತೇ ರಾಷ್ಟ್ರಂ ರಾಜಾ ಕೇನ ವಿವರ್ಧತೇ।
ಕೇನ ಪೌರಾಶ್ಚ ಭೃತ್ಯಾಶ್ಚ ವರ್ಧಂತೇ ಭರತರ್ಷಭ ॥೩॥

ರಾಷ್ಟ್ರವು ಯಾವುದರಿಂದ ಅಭಿವೃದ್ಧಿ ಹೊಂದುತ್ತದೆ? ರಾಜನು ಯಾವುದರಿಂದ ಅಭಿವೃದ್ಧಿಯನ್ನು ಹೊಂದುತ್ತಾನೆ? ಎಲೈ ಭರತರ್ಷಭನೇ! ಪೌರರು ಮತ್ತು ಭೃತ್ಯರು ಯಾವುದರಿಂದ ಅಭಿವೃದ್ಧಿಯನ್ನು ಹೊಂದುತ್ತಾರೆ?

ಕೋಶಂ ದಂಡಂ ಚ ದುರ್ಗಂ ಚ ಸಹಾಯಾನ್ ಮಂತ್ರಿಣಸ್ತಥಾ।
ಋತ್ವಿಕ್‌ಪುರೋಹಿತಾಚಾರ್ಯಾನ್ ಕೀದೃಶಾನ್ ವರ್ಜಯೇನ್ನೃಪಃ ॥೪॥

ಕೋಶ, ದಂಡ, ಕೋಟೆ, ಸಹಾಯಕರು, ಮಂತ್ರಿಗಳು, ಋತ್ವಿಜರು, ಪುರೋಹಿತರು, ಆಚಾರ್ಯರು – ಇವರಲ್ಲಿ ಎಂತಹವರನ್ನು ಅಥವಾ ಎಂತಹದನ್ನು ರಾಜನು ವರ್ಜಿಸಬೇಕು?

ಕೇಷು ವಿಶ್ವಸಿತವ್ಯಂ ಸ್ಯಾದ್ ರಾಜ್ಞಾಂ ಕಸ್ಯಾಂಚಿದಾಪದಿ।
ಕುತೋ ವಾऽऽತ್ಮಾ ದೃಢೋ ರಕ್ಷ್ಯಸ್ತನ್ಮೇ ಬ್ರೂಹಿ ಪಿತಾಮಹ ॥೫॥

ರಾಜನಿಗೆ ಯಾವುದಾದರೂ ಆಪತ್ತು ಸಂಭವಿಸಿದರೆ ಅವನು ಯಾರಲ್ಲಿ ವಿಶ್ವಾಸವನ್ನು ಮಾಡಬೇಕು? ಎಲೈ ಪಿತಾಮಹನೇ! ರಾಜನು ತನ್ನನ್ನು ಏಕೆ ದೃಢವಾಗಿ ರಕ್ಷಿಸಿಕೊಳ್ಳಬೇಕೆಂದು ನನಗೆ ಹೇಳು.

ದ್ವೈಧೀಭಾವೇ ಚ ಭೂತಾನಾಂ ಶಪಥಂ ಕೀದೃಶೋ ಭವೇತ್।
ಅಧರ್ಮಸ್ಯ ಫಲಂ ಯಚ್ಚ ಶಪಥಸ್ಯ ವಿಲಂಘನೇ ॥೬॥

ಇಬ್ಬರು ಪ್ರಜೆಗಳಿಗೆ ಕಲಹವುಂಟಾದಾಗ ಮಾಡುವ ಪ್ರಮಾಣರೂಪವಾದ ಶಪಥವು ಹೇಗಿರಬೇಕು? ಅಂತಹ ಶಪಥವನ್ನು ಮೀರಿದರೆ ಉಂಟಾಗುವ ಅಧರ್ಮದ ಫಲವೇನು?

ಸರ್ವಮೇತದ್ ಯಥಾತತ್ತ್ವಂ ವ್ಯವಹಾರಂ ಚ ತಾದೃಶಮ್।
ಸಮಾಸವ್ಯಾಸಯೋಗೇನ ಕಥಯಸ್ವ ಪಿತಾಮಹ ॥೭॥

ಎಲೈ ಪಿತಾಮಹನೇ! ಇವೆಲ್ಲವನ್ನೂ ಮತ್ತು ಅಂತಹ ಎಲ್ಲ ವ್ಯವಹಾರಗಳನ್ನೂ ಸಂಕ್ಷೇಪವಿಸ್ತಾರಗಳಿಂದ ನನಗೆ ಹೇಳಬೇಕು.

ಭೀಷ್ಮಃ

ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ।
ಬ್ರಾಹ್ಮಣೇಭ್ಯೋ ನಮಸ್ಕೃತ್ವಾ ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್ ॥೮॥

ಭೀಷ್ಮರು – ಮಹತ್ತಾದ ಧರ್ಮಕ್ಕೆ ನಮಸ್ಕಾರ. ಸರ್ವಸಾಧಕನಾದ ಕೃಷ್ಣನಿಗೆ ನಮಸ್ಕಾರ. ಬ್ರಾಹ್ಮಣರನ್ನು ನಮಸ್ಕರಿಸಿ ಶಾಶ್ವತವಾದ ಧರ್ಮಗಳನ್ನು ಹೇಳುವೆನು.

ಅಕ್ರೋಧಃ ಸತ್ಯವಚನಂ ಸಂವಿಭಾಗಃ ಕ್ಷಮಾ ತಥಾ।
ಪ್ರಜನಃ ಸ್ವೇಷು ದಾರೇಷು ಶೌಚಮದ್ರೋಹ ಏವ ಚ ॥೯॥

ಆರ್ಜವಂ ಭೃತ್ಯಭರಣಂ ನವೈತೇ ಸಾರ್ವವರ್ಣಿಕಾಃ।
ಬ್ರಾಹ್ಮಣಸ್ಯ ತು ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಕೇವಲಮ್ ॥೧೦॥

ಅಕ್ರೋಧ, ಸತ್ಯವಚನ, ತನ್ನಲ್ಲಿರುವ ದ್ರವ್ಯವನ್ನು ಹಂಚಿಕೊಳ್ಳುವುದು, ಕ್ಷಮೆ, ತನ್ನ ಪತ್ನಿಯಲ್ಲಿ ಪುತ್ರರನ್ನು ಪಡೆಯುವುದು, ಶೌಚ, ಅದ್ರೋಹ, ನೇರತನ, ಸೇವಕರ ಪೋಷಣೆ ಈ ಒಂಭತ್ತು ಧರ್ಮಗಳು ಸರ್ವವರ್ಣದವರಿಗೂ ಸಮಾನವಾದವುಗಳು. ಇನ್ನು ಬ್ರಾಹ್ಮಣರಿಗೆ ಮಾತ್ರ ಅಸಾಧಾರಣವಾದ ಧರ್ಮಗಳನ್ನು ನಿನಗೆ ಹೇಳುವೆನು.

ದಮಮೇವ ಮಹಾರಾಜ ಧರ್ಮಮಾಹುಃ ಪುರಾತನಮ್।
ಸ್ವಾಧ್ಯಾಯೋऽಧ್ಯಾಪನಂ ಚೈವ ತತ್ರ ಕರ್ಮ ಸಮಾಪ್ಯತೇ ॥೧೧॥

ಎಲೈ ಮಹಾರಾಜನೇ! ದಮವೇ (ಇಂದ್ರಿಯನಿಗ್ರಹವೇ) ಬ್ರಾಹ್ಮಣರಿಗೆ ಶ್ರೇಷ್ಠವಾದ ಪ್ರಾಚೀನಧರ್ಮವೆಂದು ಜ್ಞಾನಿಗಳು ಹೇಳುತ್ತಾರೆ. ಅದರ ಜೊತೆಯಲ್ಲಿ ಅಧ್ಯಯನ ಮತ್ತು ಅಧ್ಯಾಪನ ಇಷ್ಟರಲ್ಲಿ ಬ್ರಾಹ್ಮಣನ ಕರ್ಮವು ಸಮಾಪ್ತಿಗೊಳ್ಳುತ್ತದೆ.

ತಂ ಚೇದ್ ವಿತ್ತಮುಪಾಗಚ್ಛೇದ್ ವರ್ತಮಾನಂ ಸ್ವಕರ್ಮಣಿ।
ಅಕುರ್ವಾಣಂ ವಿಕರ್ಮಾಣಿ ಶಾಂತಂ ಪ್ರಜ್ಞಾನತರ್ಪಿತಮ್ ॥೧೨॥

ಕುರ್ವೀತಾಪತ್ಯಸಂತಾನಮಥೋ ದದ್ಯಾತ್ ಯಜೇತ ಚ।
ಸಂವಿಭಜ್ಯ ಹಿ ಭೋಕ್ತವ್ಯಂ ಧನಂ ಸದ್ಭಿರಿತೀಷ್ಯತೇ ॥೧೩॥

ತನ್ನ ಕರ್ಮಗಳಲ್ಲಿ ತಾನು ನಿರತನಾಗಿ, ವಿರುದ್ಧಕರ್ಮಗಳನ್ನು ಮಾಡದೆ, ಶಾಂತನಾದ, ತನ್ನ ಜ್ಞಾನದಿಂದ ತೃಪ್ತನಾದ ಬ್ರಾಹ್ಮಣರಿಗೆ ವಿತ್ತವು ದೊರಕಿದರೆ ಪತ್ನಿಯಲ್ಲಿ ಅಪತ್ಯರನ್ನು ಪಡೆದು, ದಾನವನ್ನು ಮಾಡಬೇಕು ಮತ್ತು ಯಾಗವನ್ನು ಮಾಡಬೇಕು. ಸಜ್ಜನರಾದವರು ತಮ್ಮ ಧನವನ್ನು ಹಂಚಿಕೊಂಡು ಭೋಗಿಸಬೇಕು ಎಂದು ಹೇಳಲ್ಪಡುತ್ತದೆ.

ಪರಿನಿಷ್ಠಿತಕಾರ್ಯಸ್ತು ಸ್ವಾಧ್ಯಾಯೇನೈವ ಬ್ರಾಹ್ಮಣಃ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥೧೪॥

ಬ್ರಾಹ್ಮಣನು ತನ್ನ ಸ್ವಾಧ್ಯಾಯದಿಂದಲೇ ತನ್ನ ಎಲ್ಲಾ ಕಾರ್ಯವನ್ನು ಪೂರ್ಣಗೊಳಿಸುವವನಾಗುತ್ತಾನೆ. ಉಳಿದುದನ್ನು ಮಾಡಲಿ ಅಥವಾ ಮಾಡದೆ ಇರಲಿ ಬ್ರಾಹ್ಮಣನು ಗಾಯತ್ರಿಯನ್ನು ಜಪಿಸಬೇಕು.

ಕ್ಷತ್ರಿಯಸ್ಯಾಪಿ ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಭಾರತ।
ದದ್ಯಾದ್ ರಾಜಾ ನ ಯಾಚೇತ ಯಜೇತ ನತು ಯಾಜಯೇತ್ ॥೧೫॥

ನಾಧ್ಯಾಪಯೇದಧೀಯೇತ ಪ್ರಜಾಶ್ಚ ಪರಿಪಾಲಯೇತ್।
ನಿತ್ಯೋದ್ಯುಕ್ತೋ ದಸ್ಯುವಧೇ ರಣೇ ಕುರ್ಯಾತ್ ಪರಾಕ್ರಮಮ್ ॥೧೬॥

ಎಲೈ ಭಾರತನೇ! ಕ್ಷತ್ರಿಯನ ಧರ್ಮಗಳನ್ನು ನಿನಗೆ ಹೇಳುವೆನು. ರಾಜನಾದವನು ದಾನ ಮಾಡಬೇಕು. ಯಾಚಿಸಬಾರದು. ಯಾಗವನ್ನು ಮಾಡಬೇಕು. ಮಾಡಿಸಬಾರದು. ಅಧ್ಯಯನವನ್ನು ಮಾಡಬೇಕು. ಅಧ್ಯಾಪನವನ್ನು ಮಾಡ-

ಬಾರದು. ಪ್ರಜೆಗಳನ್ನು ರಕ್ಷಿಸಬೇಕು. ದುಷ್ಟರ ವಧೆಯಲ್ಲಿ ನಿತ್ಯವೂ ಉದ್ಯಮಶೀಲನಾಗಬೇಕು. ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರಿಸಬೇಕು.

ಯೇ ಚ ಕ್ರತುಭಿರೀಜಾನಾಃ ಶ್ರುತವಂತಶ್ಚ ಭೂಮಿಪಾಃ।
ಯ ಏವಾಹವಜೇತಾರಸ್ತ ಏಷಾಂ ಲೋಕಜಿತ್ತಮಾಃ ॥೧೭॥

ಯಾವ ರಾಜರು ವಿದ್ಯೆಯನ್ನು ಸಂಪಾದಿಸಿ, ಯಜ್ಞಗಳನ್ನು ಆಚರಿಸುವರೋ ಅವರೇ ಯುದ್ಧಗಳಲ್ಲಿ ಗೆಲ್ಲುವವರು. ಅಂತಹವರು ಲೋಕವನ್ನು ಜಯಿಸಿದವರಲ್ಲಿ ಶ್ರೇಷ್ಠರಾದವರು.

ಅವಿಕ್ಷತೇನ ದೇಹೇನ ಸಮರಾದ್ ಯೋ ನಿವರ್ತತೇ।
ಕ್ಷತ್ರಿಯೋ ನಾಸ್ಯ ತತ್ ಕರ್ಮ ಪ್ರಶಂಸಂತಿ ಪುರಾವಿದಃ ॥೧೮॥

ಕ್ಷತ್ರಿಯನಾದವನು ಗಾಯವಿಲ್ಲದ ದೇಹದಿಂದ ಯುದ್ಧದಿಂದ ಹಿಂದಿರುಗಿದರೆ ಅವನ ಕರ್ಮವನ್ನು ಪ್ರಾಚೀನರು ಪ್ರಶಂಸಿಸುವುದಿಲ್ಲ.

ವಧಂ ಹಿ ಕ್ಷತ್ರಬಂಧೂನಾಂ ಧರ್ಮಮಾಹುಃ ಪ್ರಧಾನತಃ।
ನಾಸ್ಯ ಕೃತ್ಯತಮಂ ಕಿಂಚಿದನ್ಯದ್ ದಸ್ಯುನಿಬರ್ಹಣಾತ್ ॥೧೯॥

ಕ್ಷತ್ರಬಂಧುಗಳಿಗೆ ದುಷ್ಟರ ವಧೆಯು ಪ್ರಧಾನವಾದ ಧರ್ಮವೆಂದು ಹೇಳುತ್ತಾರೆ. ದುಷ್ಟವಿನಾಶಕ್ಕಿಂತಲೂ ಅಧಿಕವಾದ ಕ್ಷತ್ರಿಯನು ಮಾಡಬೇಕಾದ ಕಾರ್ಯವು ಯಾವುದೂ ಇಲ್ಲ.

ದಾನಮಧ್ಯಯನಂ ಯಜ್ಞೋ ಯೋಗಃ ಕ್ಷೇಮೋ ವಿಧೀಯತೇ।
ತಸ್ಮಾದ್ ರಾಜ್ಞಾ ವಿಶೇಷೇಣ ಯೋದ್ಧವ್ಯಂ ಧರ್ಮಮೀಪ್ಸತಾ ॥೨೦॥

ದಾನ, ಅಧ್ಯಯನ ಮತ್ತು ಯಜ್ಞಗಳು ರಾಜರಿಗೆ ಯೋಗಕ್ಷೇಮವೆಂದು ಹೇಳಲ್ಪಡುತ್ತದೆ. ಆದ್ದರಿಂದ ಧರ್ಮವನ್ನು ಬಯಸುವ ರಾಜನು ವಿಶೇಷವಾಗಿ ಯುದ್ಧವನ್ನು ಮಾಡಬೇಕು.

ಸ್ವೇಷು ಧರ್ಮೇಷ್ವವಸ್ಥಾಪ್ಯ ಪ್ರಜಾಃ ಸರ್ವಾ ಮಹೀಪತಿಃ।
ಧರ್ಮೇಣ ಸರ್ವಕೃತ್ಯಾನಿ ಸಮನಿಷ್ಠಾನಿ ಕಾರಯೇತ್ ॥೨೧॥

ರಾಜನಾದವನು ಎಲ್ಲ ಪ್ರಜೆಗಳನ್ನೂ ಅವರವರ ಧರ್ಮಗಳಲ್ಲಿ ನಿಯೋಜಿಸಿ, ಎಲ್ಲ ಕಾರ್ಯಗಳನ್ನು ಸಮಾನಶ್ರದ್ಧೆಯಿಂದ ಅವರಿಂದ ಮಾಡಿಸಬೇಕು.

ಪರಿನಿಷ್ಠಿತಕಾರ್ಯಃ ಸ್ಯಾನ್ನೃಪತಿಃ ಪರಿಪಾಲನಾತ್।
ಕುರ್ಯಾದನ್ಯನ್ನ ವಾ ಕುರ್ಯಾದೈಂದ್ರೋ ರಾಜನ್ಯ ಉಚ್ಯತೇ ॥೨೨॥

ರಾಜನು ಪ್ರಜಾರಕ್ಷಣೆಯನ್ನು ಮಾಡುವುದರಿಂದ ತನ್ನ ಕಾರ್ಯವನ್ನು ಪೂರ್ಣಗೊಳಿಸುವವನಾಗುತ್ತಾನೆ. ರಾಜನು ಇನ್ನೊಂದು ಕಾರ್ಯವನ್ನು ಮಾಡಲಿ ಅಥವಾ ಬಿಡಲಿ ರಕ್ಷಣೆಯನ್ನು ಮಾತ್ರ ಮಾಡಲೇ ಬೇಕು ಎಂದು ಹೇಳಲ್ಪಡುತ್ತದೆ.

ವೈಶ್ಯಸ್ಯಾಪೀಹ ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಭಾರತ।
ದಾನಮಧ್ಯಯನಂ ಯಜ್ಞಃ ಶೌಚೇನ ಧನಸಂಚಯಃ ॥೨೩॥

ಎಲೈ ಭಾರತನೇ! ವೈಶ್ಯನ ಧರ್ಮಗಳನ್ನು ನಿನಗೆ ಹೇಳುವೆನು. ದಾನ, ಅಧ್ಯಯನ, ಯಜ್ಞಮತ್ತು ಶುಚಿಯಾಗಿ ಧನಸಂಚಯ - ಇವು ವೈಶ್ಯನ ಧರ್ಮಗಳು.

ಪಿತೃವತ್ ಪಾಲಯೇದ್ ವೈಶ್ಯೋ ಯುಕ್ತಃ ಸರ್ವಪಶೂನಿಹ।
ವಿಕರ್ಮ ತದ್ ಭವೇದನ್ಯತ್ ಕರ್ಮ ಯದ್ಯತ್ ಸಮಾಚರೇತ್ ॥೨೪॥

ವೈಶ್ಯನು ಶ್ರದ್ಧೆಯಿಂದ ಎಲ್ಲ ಪಶುಗಳನ್ನೂ ತಂದೆಯಂತೆ ರಕ್ಷಿಸಬೇಕು. ಅದನ್ನು ಬಿಟ್ಟು, ಅವನು ಬೇರೆ ಏನನ್ನು ಮಾಡಿದರೂ ಅದು ಅವನಿಗೆ ವಿಕರ್ಮವೆನಿಸುತ್ತದೆ.

ರಕ್ಷಯಾ ಸ ಹಿ ತೇಷಾಂ ವೈ ಮಹತ್ ಸುಖಮವಾಪ್ನುಯಾತ್।
ಪ್ರಜಾಪತಿರ್ಹಿ ವೈಶ್ಯಾಯ ಸೃಷ್ಟ್ವಾ ಪರಿದದೇ ಪ್ರಜಾಃ ॥೨೫॥

ಪಶುಗಳನ್ನು ರಕ್ಷಣೆ ಮಾಡುವುದರಿಂದ ಅವನಿಗೆ ದೊಡ್ಡ ಸುಖವುಂಟಾಗುತ್ತದೆ. ಬ್ರಹ್ಮದೇವರು ಪ್ರಜೆಗಳನ್ನು (ಪಶುಗಳನ್ನು) ಸೃಷ್ಟಿಸಿ ಅವುಗಳನ್ನು ಪಾಲನೆಗಾಗಿ ವೈಶ್ಯನಿಗೆ ಕೊಟ್ಟರು.

ತಸ್ಯ ವೃತ್ತಿಂ ಪ್ರವಕ್ಷ್ಯಾಮಿ ಯಚ್ಚ ತಸ್ಯೋಪಜೀವನಮ್ ।
ಷಣ್ಣಾಮೇಕಾಂ ಪಿಬೇದ್ ಧೇನುಂ ಶತಾಚ್ಚ ಮಿಥುನಂ ಹರೇತ್ ॥೨೬॥

ಅವನ ವೃತ್ತಿಯನ್ನು ಮತ್ತು ಜೀವನೋಪಾಯವನ್ನು ಹೇಳುವೆನು. ಆರು ಹಸುಗಳನ್ನು ಪಾಲಿಸಿದರೆ ಅವನು ಒಂದು ಹಸುವಿನ ಕ್ಷೀರವನ್ನು ತನ್ನ ಜೀವನಕ್ಕಾಗಿ ಉಪಯೋಗಿಸಬಹುದು. ನೂರು ಹಸುಗಳನ್ನು ಪಾಲಿಸಿದರೆ ಒಂದು ಹಸು ಮತ್ತು ಒಂದು ವೃಷಭವನ್ನು ತನ್ನದಾಗಿ ಮಾಡಿಕೊಳ್ಳಬಹುದು.

ಲಯೇ ಚೇತ್ ಸಪ್ತಮೋ ಭಾಗಸ್ತಥಾ ಶೃಂಗೇ ಕಲಾ ಖುರೇ ।
ಸಸ್ಯಾನಿ ಸರ್ವಬೀಜಾನಾಮೇಷಾಂ ಸಾಂವತ್ಸರೀ ಭೃತಿಃ ॥೨೭॥

ಎರಡು ಮೂರು ಧೇನುಗಳು ಮೃತವಾದರೆ ವೈಶ್ಯನಿಗೆ ಜೀವನವೃತ್ತಿಯುಂಟಾಗುವುದಿಲ್ಲವಾದ್ದರಿಂದ ರಾಜನು ವೈಶ್ಯನ ಆದಾಯದ ಏಳನೆಯ ಒಂದು ಭಾಗವನ್ನು ತೆಗೆದುಕೊಳ್ಳಬೇಕು. ಮತ್ತು ರಾಜನಿಗೆ ಕೊಂಬಿನ ಅಥವಾ ಗೊರಸಿನ ಚಿಹ್ನೆಗಳನ್ನು ತೋರಿಸಬೇಕು. ಕೃಷೀವಲರಿಗೆ ಕೃಷಿಯ ವಿನಾಶವುಂಟಾದರೆ ಒಂದು ಸಂವತ್ಸರಕ್ಕೆ ಆಗುವಷ್ಟು ಧಾನ್ಯವನ್ನು ಮತ್ತು ಅವರು ಬೆಳೆಯುವ ಸರ್ವಬೀಜಗಳನ್ನು ಅವರಿಗೆ ಕೊಡಬೇಕು.

ನ ಚ ವೈಶ್ಯಸ್ಯ ಕಾಮಃ ಸ್ಯಾನ್ನ ರಕ್ಷೇಯಂ ಪಶೂನಿತಿ ।
ವೈಶ್ಯೇ ಚೇಚ್ಛತಿ ನಾನ್ಯೇನ ರಕ್ಷಿತವ್ಯಾಃ ಕಥಂಚನ ॥೨೮॥

ವೈಶ್ಯನಾದವನು ತಾನು ಪಶುಗಳನ್ನು ರಕ್ಷಿಸುವುದಿಲ್ಲ ಎಂದು ಎಂದೂ ಬಯಸಬಾರದು. ವೈಶ್ಯನು ಪಶುಗಳನ್ನು ರಕ್ಷಿಸಲು ಇಚ್ಛಿಸಿದರೆ ಇನ್ನೊಬ್ಬನು ರಕ್ಷಿಸಬಾರದು.

ಶೂದ್ರಸ್ಯಾಪಿ ಹಿ ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಭಾರತ ।
ಪ್ರಜಾಪತಿರ್ಹಿ ವರ್ಣಾನಾಂ ದಾಸಂ ಶೂದ್ರಮಕಲ್ಪಯತ್ ॥೨೯॥

ಎಲೈ ಭಾರತನೇ! ಶೂದ್ರನ ಧರ್ಮವನ್ನು ನಿನಗೆ ಹೇಳುವೆನು. ಬ್ರಹ್ಮದೇವರು ಶೂದ್ರರನ್ನು ಉಳಿದವರ್ಣದವರ ದಾಸರನ್ನಾಗಿ ಕಲ್ಪಿಸಿದರು.

ತಸ್ಮಾಚ್ಛೂದ್ರಸ್ಯ ವರ್ಣಾನಾಂ ಪರಿಚರ್ಯಾ ವಿಧೀಯತೇ।
ತೇಷಾಂ ಶುಶ್ರೂಷಣಾಚ್ಚೈವ ಮಹತ್ ಸುಖಮವಾಪ್ನುಯಾತ್ ॥೩೦॥

ಆದ್ದರಿಂದ ಶೂದ್ರನಿಗೆ ಉಳಿದ ವರ್ಣಗಳ ಪರಿಚರ್ಯವೇ ಧರ್ಮವೆಂದು ಹೇಳಲ್ಪಡುತ್ತದೆ. ಅವರ ಸೇವೆ ಮಾಡುವುದರಿಂದ ಅವನಿಗೆ ದೊಡ್ಡ ಸುಖವುಂಟಾಗುವುದು.

ಶೂದ್ರ ಏತಾನ್ ಪರಿಚರೇತ್ ತ್ರೀನ್ ವರ್ಣಾನನಸೂಯಕಃ।
ಸಂಚಯಾಂಶ್ಚ ನ ಕುರ್ವೀತ ಜಾತು ಶೂದ್ರಃ ಕಥಂಚನ ॥೩೧॥

ಶೂದ್ರನು ಅಸೂಯೆಪಡದೆ ಉಳಿದ ಮೂರು ವರ್ಣದವರನ್ನು ಪರಿಚರಿಸಬೇಕು. ಶೂದ್ರನಾದವನು ಯಾವ ಕಾರಣದಿಂದಲೂ ಧನಸಂಚಯವನ್ನು ಮಾಡಬಾರದು.

ಪಾಪೀಯಾನ್ ಹಿ ಧನಂ ಲಬ್ಧ್ವಾ ವಶೇ ಕುರ್ಯಾದ್ ಗರೀಯಸಃ।
ರಾಜ್ಞಾ ವಾ ಸಮನುಜ್ಞಾತಃ ಕಾಮಂ ಕುರ್ವೀತ ಧಾರ್ಮಿಕಃ ॥೩೨॥

ಶೂದ್ರನು ಧನಸಂಚಯವನ್ನು ಮಾಡಿದರೆ ಧನಲಾಭದಿಂದ ಪಾಪಿಷ್ಠನಾಗಿ ತನಗಿಂತ ಉತ್ತಮರಾದವರನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಬಹುದು. (ಆದ್ದರಿಂದ ಧನಸಂಚಯವನ್ನು ಮಾಡಬಾರದು) ಅಥವಾ ರಾಜನ ಅನುಮತಿಯನ್ನು ಪಡೆದು ತನಗೆ ಇಷ್ಟವಾದಂತೆ ಧಾರ್ಮಿಕವಾದ ಕಾರ್ಯಗಳನ್ನು ಮಾಡಬಹುದು.

ತಸ್ಯ ವೃತ್ತಿಂ ಪ್ರವಕ್ಷ್ಯಾಮಿ ಯಚ್ಚ ತಸ್ಯೋಪಜೀವನಮ್।
ಅವಶ್ಯಭರಣೀಯೋ ಹಿ ವರ್ಣಾನಾಂ ಶೂದ್ರ ಉಚ್ಯತೇ ॥೩೩॥

ಅವನ ಜೀವನ ವೃತ್ತಿಯನ್ನು ಮತ್ತು ಜೀವನೋಪಾಯವನ್ನು ನಿನಗೆ ಹೇಳುವೆನು. ಶೂದ್ರನಾದವನನ್ನು ಉಳಿದ ಮೂರು ವರ್ಣದವರು ಅವಶ್ಯವಾಗಿ ಪೋಷಿಸಬೇಕು ಎಂದು ಹೇಳಲ್ಪಡುತ್ತದೆ.

ಛತ್ರಂ ವೇಷ್ಟನಮೌಶೀರಮುಪಾನದ್ ವ್ಯಂಜನಾನಿ ಚ।
ಯಾತಯಾಮಾನಿ ದೇಯಾನಿ ಶೂದ್ರಾಯ ಪರಿಚಾರಿಣೇ ॥೩೪॥

ತಾವು ಉಪಯೋಗಿಸಿದ ಛತ್ರಿ, ಉಡುವ ವಸ್ತ್ರಗಳು, ಶಯನವಸ್ತ್ರಗಳು, ಪಾದರಕ್ಷೆಗಳು ಮತ್ತು ವ್ಯಂಜನಗಳು ಹಳೆಯದಾದ ಮೇಲೆ ತಮ್ಮನ್ನು ಪರಿಚರಿಸುವ ಶೂದ್ರನಿಗೆ ಅವುಗಳನ್ನು ಕೊಡಬೇಕು.

ಅಧಾರ್ಯಾಣಿ ವಿಶೀರ್ಣಾನಿ ವಸನಾನಿ ದ್ವಿಜಾತಿಭಿಃ।
ಶೂದ್ರಾಯೈವ ವಿಧೇಯಾನಿ ತಸ್ಯ ಧರ್ಮಧನಂ ಹಿ ತತ್ ॥೩೫॥

ಮೂರು ವರ್ಣಗಳಿಗೆ ಸೇರಿದ ದ್ವಿಜರು ಹರಿದ ವಸ್ತ್ರಗಳನ್ನು ಧರಿಸಬಾರದು. ಅವುಗಳನ್ನು ಶೂದ್ರನಿಗೆ ಕೊಡಬೇಕು. ಅದು ಅವನ ಧರ್ಮಧನ.

ಯಶ್ಚ ಕಶ್ಚಿದ್ ದ್ವಿಜಾತೀನಾಂ ಶೂದ್ರಃ ಶುಶ್ರೂಷುರಾವ್ರಜೇತ್।
ಕಲ್ಪ್ಯಂ ತಸ್ಯ ತು ತೇನಾಹುರ್ವೃತ್ತಿಂ ಧರ್ಮವಿದೋ ಜನಾಃ।
ದೇಯಃ ಪಿಂಡೋಽನಪೇತಾಯ ಭರ್ತವ್ಯೋ ವೃದ್ಧದುರ್ಬಲೌ ॥೩೬॥

ಯಾವನಾದರೂ ಶೂದ್ರನು ದ್ವಿಜಾತಿಯವರ ಬಳಿಗೆ ಸೇವೆ ಮಾಡಲು ಬಯಸಿ ಬಂದರೆ, ಅವನಿಗೆ ಜೀವನೋಪಾಯವನ್ನು ಕಲ್ಪಿಸಿಕೊಡಬೇಕೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ. ಏಕಾಕಿಯಾದ ಅವನಿಗೆ ಭೋಜನವನ್ನು ಕೊಡಬೇಕು. ಅವನು ವೃದ್ಧನೂ ದುರ್ಬಲನೂ ಆದರೆ ಅವನನ್ನು ಪೋಷಿಸಬೇಕು.

ಶೂದ್ರೇಣ ಚ ನ ಹಾತವ್ಯೋ ಭರ್ತಾ ಕಸ್ಯಾಂಚಿದಾಪದಿ।
ಅತಿರೇಕೇಣ ಭರ್ತವ್ಯೋ ಭರ್ತಾ ದ್ರವ್ಯಪರಿಕ್ಷಯೇ।
ನಹಿ ಸ್ವಮಸ್ತಿ ಶೂದ್ರಸ್ಯ ಭರ್ತೃಹಾರ್ಯಧನೋ ಹ್ಯಸೌ ॥೩೭॥

ತನ್ನ ಸ್ವಾಮಿಗೆ ಏನಾದರೂ ವಿಪತ್ತು ಸಂಭವಿಸಿದರೆ ಸೇವೆ ಮಾಡುವ ಶೂದ್ರನು ಅವನನ್ನು ಬಿಟ್ಟು ಹೋಗಬಾರದು. ತನ್ನ ಬಳಿ ಇರುವ ಧನದಿಂದ ಧನವನ್ನು

ಕಳೆದುಕೊಂಡ ಸ್ವಾಮಿಯನ್ನು ರಕ್ಷಿಸಬೇಕು. ಶೂದ್ರನಿಗೆ ಸ್ವತಃ ಧನವೆಂಬುದಿಲ್ಲ. ಅವನ ಧನಕ್ಕೆ ಅವನ ಸ್ವಾಮಿಯೇ ಒಡೆಯನಾಗುತ್ತಾನೆ.

ಉಕ್ತಸ್ತ್ರಯಾಣಾಂ ವರ್ಣಾನಾಂ ಯಜ್ಞಸ್ತ್ರಯ್ಯೇವ ಭಾರತ।
ಸ್ವಾಹಾಕಾರನಮಸ್ಕಾರೌ ಮಂತ್ರಃ ಶೂದ್ರೇ ನ ವಿದ್ಯತೇ ॥೩೮॥

ಎಲೈ ಭಾರತನೇ! ಮೂರು ವರ್ಣಗಳಿಗೂ ಯಜ್ಞವೂ ಮತ್ತು ತ್ರಯೀವಿದ್ಯೆಯೂ ಹೇಳಲ್ಪಡುತ್ತದೆ. ಸ್ವಾಹಾ ಶಬ್ದಗಳು, ನಮಃ ಶಬ್ದಗಳು ಮತ್ತು ಮಂತ್ರಗಳು ಶೂದ್ರನಿಗೆ ಇರುವುದಿಲ್ಲ.

ತಸ್ಮಾಚ್ಛೂದ್ರಃ ಪಾಕಯಜ್ಞೈರ್ಯಜೇತಾವ್ರತವಾನ್ ಸ್ವಯಮ್।
ಪೂರ್ಣಪಾತ್ರಮಯೀಮಾಹುಃ ಪಾಕಯಜ್ಞಸ್ಯ ದಕ್ಷಿಣಾಮ್ ॥೩೯॥

ಆದ್ದರಿಂದ ಶೂದ್ರನು ವ್ರತವನ್ನು ಧರಿಸದಿರುವುದರಿಂದ ಸ್ವತಃ ಯಜ್ಞವನ್ನು ಮಾಡದೆ ತನ್ನ ಬಳಿ ಇರುವ ದ್ರವ್ಯದಿಂದ ಬ್ರಾಹ್ಮಣರಿಂದ ಪಾಕವನ್ನು ಮಾಡಿಸಿ, ಅದರಿಂದ ಯಜ್ಞವನ್ನು ಮಾಡಿಸಿ, ಅನ್ನದಿಂದ ಪೂರ್ಣವಾದ ಒಂದು ಪಾತ್ರೆಯನ್ನು ಪಾಕಯಜ್ಞದ ದಕ್ಷಿಣೆಯನ್ನಾಗಿ ಕೊಡಬೇಕು. (ಲಕ್ಷಾಲಂಕಾರ)

ಶೂದ್ರಃ ಪೈಜವನೋ ನಾಮ ಸಹಸ್ರಾಣಾಂ ಶತಂ ದದೌ।
ಐಂದ್ರಾಗ್ನೇನ ವಿಧಾನೇನ ದಕ್ಷಿಣಾಮಿತಿ ನಃ ಶ್ರುತಮ್ ॥೪೦॥

ಪೈಜವನನೆಂಬ ಶೂದ್ರನು ಇಂದ್ರಾಗ್ನಿದೇವತಾಕವಾದ ಯಾಗವನ್ನು ಮಾಡಿಸಿ, ಒಂದು ಲಕ್ಷ ಪೂರ್ಣಪಾತ್ರೆಗಳನ್ನು ದಕ್ಷಿಣೆಯನ್ನಾಗಿ ಕೊಟ್ಟನು ಎಂದು ನಾವು ಕೇಳಿದ್ದೇವೆ.

ಅತೋ ಹಿ ಸರ್ವವರ್ಣಾನಾಂ ಶ್ರದ್ಧಾಯಜ್ಞೋ ವಿಧೀಯತೇ।
ದೈವತಂ ಹಿ ಮಹಚ್ಛ್ರದ್ಧಾ ಪವಿತ್ರಂ ಯಜತಾಂ ಚ ಯತ್ ॥೪೧॥

ಆದ್ದರಿಂದ ಎಲ್ಲ ವರ್ಣದವರಿಗೂ ಶ್ರದ್ಧಾಯಜ್ಞವು ವಿಧಿಸಲ್ಪಡುತ್ತದೆ. ಯಾಗವನ್ನು ಮಾಡುವ ಎಲ್ಲರಿಗೂ ಶ್ರದ್ಧೆ ಎಂಬುದೇ ಪವಿತ್ರವಾದ ದೊಡ್ಡದಾದ ದೇವತೆ.

ದೈವತಂ ಪರಮಂ ವಿಪ್ರಾಃ ಸ್ವೇನ ಸ್ವೇನ ಪರಸ್ಪರಮ್ ।
ಅಯಜನ್ನಿಹ ಸತ್ರೈಸ್ತೇ ತೈಸ್ತೈಃ ಕಾಮೈಃ ಸನಾತನೈಃ ॥೪೨॥

ಬ್ರಾಹ್ಮಣರು ಪರಮದೇವತೆಗಳು. ಅವರು ವೇದೋಕ್ತವಾದ ಕಾಮಗಳಿಂದ ಪರಸ್ಪರವಾಗಿ ಸಹಕರಿಸಿ ಇಲ್ಲಿ ಅನೇಕ ಸತ್ರಯಾಗಗಳನ್ನು ಮಾಡಿದರು.

ಸಂಸೃಷ್ಟಾ ಬ್ರಾಹ್ಮಣೈರೇವ ತ್ರಿಷು ವರ್ಣೇಷು ಸೃಷ್ಟಯಃ ।
ದೇವಾನಾಮಪಿ ಯೇ ದೇವಾ ಯದ್ ಬ್ರೂಯುಸ್ತೇ ಪರಂ ಹಿ ತತ್ ।
ತಸ್ಮಾದ್ ವರ್ಣೈಃ ಸರ್ವಯಜ್ಞಾಃ ಸಂಸೃಜ್ಯಂತೇ ನ ಕಾಮ್ಯಯಾ ॥೪೩॥

ಉಳಿದ ಮೂರು ವರ್ಣಗಳಲ್ಲಿ ಜನಿಸಿದವರೂ ಸಹ ಬ್ರಾಹ್ಮಣರ ಸಂಬಂಧವನ್ನು ಹೊಂದಿದ್ದಾರೆ. ದೇವತೆಗಳಿಗೂ ದೇವತೆಗಳೆನಿಸಿದ ಬ್ರಾಹ್ಮಣರು ಏನು ಹೇಳುವರೋ ಅದು ಶ್ರೇಷ್ಠವಾದುದು. ಆದ್ದರಿಂದ ನಾಲ್ಕು ವರ್ಣದವರಿಗೆ ಪರಸ್ಪರ ಸಂಬಂಧವಿರುವುದರಿಂದ ಎಲ್ಲ ಯಜ್ಞಗಳ ಫಲಗಳು ನಾಲ್ಕು ವರ್ಣದವರಿಂದಲೂ ಹೊಂದಲ್ಪಡುತ್ತವೆ. ಫಲಕಾಮನೆಯಿಂದ ಮಾಡಿದ ಯಜ್ಞಗಳ ಫಲವು ಮಾತ್ರ ಎಲ್ಲರಿಗೂ ದೊರೆಯುವುದಿಲ್ಲ.

ಋಗ್ಯಜುಃಸಾಮವಿತ್ ಪೂಜ್ಯೋ ನಿತ್ಯಂ ಸ್ಯಾದ್ ದೇವವದ್ ದ್ವಿಜಃ ।
ಅನೃಗ್ಯಜುರಸಾಮಾ ತು ಪ್ರಾಜಾಪತ್ಯ ಉಪದ್ರವಃ ॥೪೪॥

ಋಗ್ವೇದ ಯಜುರ್ವೇದ ಮತ್ತು ಸಾಮವೇದವನ್ನು ತಿಳಿದ ಬ್ರಾಹ್ಮಣನು ಯಾವಾಗಲೂ ದೇವತೆಯಂತೆ ಪೂಜಿಸಲ್ಪಡಬೇಕು. ಋಗಾದಿವೇದಗಳನ್ನು ಅಧ್ಯಯನ ಮಾಡದ ಬ್ರಾಹ್ಮಣನು ಬ್ರಹ್ಮದೇವರು ಸೃಷ್ಟಿಸಿದ ಸಮಾಜದ ಉಪದ್ರವವೆಂದು ತಿಳಿಯಬೇಕು.

ಯಜ್ಞೋ ಮನೀಷಯಾ ತಾತ ಸರ್ವವರ್ಣೇಷು ಭಾರತ ।
ನಾಸ್ಯ ಯಜ್ಞಹನೋ ದೇವಾ ಈಹಂತೇ ನೇತರೇ ಜನಾಃ ।
ತಸ್ಮಾತ್ ಸರ್ವೇಷು ವರ್ಣೇಷು ಶ್ರದ್ಧಾಯಜ್ಞೋ ವಿಧೀಯತೇ ॥೪೫॥

ಕಳೆದುಕೊಂಡ ಸ್ವಾಮಿಯನ್ನು ರಕ್ಷಿಸಬೇಕು. ಶೂದ್ರನಿಗೆ ಸ್ವತಃ ಧನವೆಂಬುದಿಲ್ಲ. ಅವನ ಧನಕ್ಕೆ ಅವನ ಸ್ವಾಮಿಯೇ ಒಡೆಯನಾಗುತ್ತಾನೆ.

ಉಕ್ತಸ್ತ್ರಯಾಣಾಂ ವರ್ಣಾನಾಂ ಯಜ್ಞಸ್ತ್ರಯ್ಯೇವ ಭಾರತ।
ಸ್ವಾಹಾಕಾರನಮಸ್ಕಾರೌ ಮಂತ್ರಃ ಶೂದ್ರೇ ನ ವಿದ್ಯತೇ ॥೩೮॥

ಎಲೈ ಭಾರತನೇ! ಮೂರು ವರ್ಣಗಳಿಗೂ ಯಜ್ಞವೂ ಮತ್ತು ತ್ರಯೀವಿದ್ಯೆಯೂ ಹೇಳಲ್ಪಡುತ್ತದೆ. ಸ್ವಾಹಾ ಶಬ್ದಗಳು, ನಮಃ ಶಬ್ದಗಳು ಮತ್ತು ಮಂತ್ರಗಳು ಶೂದ್ರನಿಗೆ ಇರುವುದಿಲ್ಲ.

ತಸ್ಮಾಚ್ಛೂದ್ರಃ ಪಾಕಯಜ್ಞೈರ್ಯಜೇತಾವ್ರತವಾನ್ ಸ್ವಯಮ್।
ಪೂರ್ಣಪಾತ್ರಮಯೀಮಾಹುಃ ಪಾಕಯಜ್ಞಸ್ಯ ದಕ್ಷಿಣಾಮ್ ॥೩೯॥

ಆದ್ದರಿಂದ ಶೂದ್ರನು ವ್ರತವನ್ನು ಧರಿಸದಿರುವುದರಿಂದ ಸ್ವತಃ ಯಜ್ಞವನ್ನು ಮಾಡದೆ ತನ್ನ ಬಳಿ ಇರುವ ದ್ರವ್ಯದಿಂದ ಬ್ರಾಹ್ಮಣರಿಂದ ಪಾಕವನ್ನು ಮಾಡಿಸಿ, ಅದರಿಂದ ಯಜ್ಞವನ್ನು ಮಾಡಿಸಿ, ಅನ್ನದಿಂದ ಪೂರ್ಣವಾದ ಒಂದು ಪಾತ್ರೆಯನ್ನು ಪಾಕಯಜ್ಞದ ದಕ್ಷಿಣೆಯನ್ನಾಗಿ ಕೊಡಬೇಕು. (ಲಕ್ಷ್ಯಲಂಕಾರ)

ಶೂದ್ರಃ ಪೈಜವನೋ ನಾಮ ಸಹಸ್ರಾಣಾಂ ಶತಂ ದದೌ।
ಐಂದ್ರಾಗ್ನೇನ ವಿಧಾನೇನ ದಕ್ಷಿಣಾಮಿತಿ ನಃ ಶ್ರುತಮ್ ॥೪೦॥

ಪೈಜವನನೆಂಬ ಶೂದ್ರನು ಇಂದ್ರಾಗ್ನಿದೇವತಾಕವಾದ ಯಾಗವನ್ನು ಮಾಡಿಸಿ, ಒಂದು ಲಕ್ಷ ಪೂರ್ಣಪಾತ್ರೆಗಳನ್ನು ದಕ್ಷಿಣೆಯನ್ನಾಗಿ ಕೊಟ್ಟನು ಎಂದು ನಾವು ಕೇಳಿದ್ದೇವೆ.

ಅತೋ ಹಿ ಸರ್ವವರ್ಣಾನಾಂ ಶ್ರದ್ಧಾಯಜ್ಞೋ ವಿಧೀಯತೇ।
ದೈವತಂ ಹಿ ಮಹಚ್ಛ್ರದ್ಧಾ ಪವಿತ್ರಂ ಯಜತಾಂ ಚ ಯತ್ ॥೪೧॥

ಆದ್ದರಿಂದ ಎಲ್ಲ ವರ್ಣದವರಿಗೂ ಶ್ರದ್ಧಾಯಜ್ಞವು ವಿಧಿಸಲ್ಪಡುತ್ತದೆ. ಯಾಗವನ್ನು ಮಾಡುವ ಎಲ್ಲರಿಗೂ ಶ್ರದ್ಧೆ ಎಂಬುದೇ ಪವಿತ್ರವಾದ ದೊಡ್ಡದಾದ ದೇವತೆ.

ದೈವತಂ ಪರಮಂ ವಿಪ್ರಾಃ ಸ್ವೇನ ಸ್ವೇನ ಪರಸ್ಪರಮ್ ।
ಅಯಜನ್ನಿಹ ಸತ್ರೈಸ್ತೇ ತೈಸ್ತೈಃ ಕಾಮೈಃ ಸನಾತನೈಃ ॥೪೨॥

ಬ್ರಾಹ್ಮಣರು ಪರಮದೇವತೆಗಳು. ಅವರು ವೇದೋಕ್ತವಾದ ಕಾಮಗಳಿಂದ ಪರಸ್ಪರವಾಗಿ ಸಹಕರಿಸಿ ಇಲ್ಲಿ ಅನೇಕ ಸತ್ರಯಾಗಗಳನ್ನು ಮಾಡಿದರು.

ಸಂಸೃಷ್ಟಾ ಬ್ರಾಹ್ಮಣೈರೇವ ತ್ರಿಷು ವರ್ಣೇಷು ಸೃಷ್ಟಯಃ ।
ದೇವಾನಾಮಪಿ ಯೇ ದೇವಾ ಯದ್ ಬ್ರೂಯುಸ್ತೇ ಪರಂ ಹಿ ತತ್ ।
ತಸ್ಮಾದ್ ವರ್ಣೈಃ ಸರ್ವಯಜ್ಞಾಃ ಸಂಸೃಜ್ಯಂತೇ ನ ಕಾಮ್ಯಯಾ ॥೪೩॥

ಉಳಿದ ಮೂರು ವರ್ಣಗಳಲ್ಲಿ ಜನಿಸಿದವರೂ ಸಹ ಬ್ರಾಹ್ಮಣರ ಸಂಬಂಧವನ್ನು ಹೊಂದಿದ್ದಾರೆ. ದೇವತೆಗಳಿಗೂ ದೇವತೆಗಳೆನಿಸಿದ ಬ್ರಾಹ್ಮಣರು ಏನು ಹೇಳುವರೋ ಅದು ಶ್ರೇಷ್ಠವಾದುದು. ಆದ್ದರಿಂದ ನಾಲ್ಕು ವರ್ಣದವರಿಗೆ ಪರಸ್ಪರ ಸಂಬಂಧವಿರುವುದರಿಂದ ಎಲ್ಲ ಯಜ್ಞಗಳ ಫಲಗಳು ನಾಲ್ಕು ವರ್ಣದವರಿಂದಲೂ ಹೊಂದಲ್ಪಡುತ್ತವೆ. ಫಲಕಾಮನೆಯಿಂದ ಮಾಡಿದ ಯಜ್ಞಗಳ ಫಲವು ಮಾತ್ರ ಎಲ್ಲರಿಗೂ ದೊರೆಯುವುದಿಲ್ಲ.

ಋಗ್ಯಜುಃಸಾಮವಿತ್ ಪೂಜ್ಯೋ ನಿತ್ಯಂ ಸ್ಯಾದ್ ದೇವವದ್ ದ್ವಿಜಃ ।
ಅನೃಗ್ಯಜುರಸಾಮಾ ತು ಪ್ರಾಜಾಪತ್ಯ ಉಪದ್ರವಃ ॥೪೪॥

ಋಗ್ವೇದ ಯಜುರ್ವೇದ ಮತ್ತು ಸಾಮವೇದವನ್ನು ತಿಳಿದ ಬ್ರಾಹ್ಮಣನು ಯಾವಾಗಲೂ ದೇವತೆಯಂತೆ ಪೂಜಿಸಲ್ಪಡಬೇಕು. ಋಗಾದಿವೇದಗಳನ್ನು ಅಧ್ಯಯನ ಮಾಡದ ಬ್ರಾಹ್ಮಣನು ಬ್ರಹ್ಮದೇವರು ಸೃಷ್ಟಿಸಿದ ಸಮಾಜದ ಉಪದ್ರವವೆಂದು ತಿಳಿಯಬೇಕು.

ಯಜ್ಞೋ ಮನೀಷಯಾ ತಾತ ಸರ್ವವರ್ಣೇಷು ಭಾರತ ।
ನಾಸ್ಯ ಯಜ್ಞಹನೋ ದೇವಾ ಈಹಂತೇ ನೇತರೇ ಜನಾಃ ।
ತಸ್ಮಾತ್ ಸರ್ವೇಷು ವರ್ಣೇಷು ಶ್ರದ್ಧಾಯಜ್ಞೋ ವಿಧೀಯತೇ ॥೪೫॥

ಎಲೈ ಭಾರತನೇ! ಪ್ರೀತಿಪಾತ್ರನೇ! ಯಜ್ಞವು ಎಲ್ಲ ವರ್ಣದವರಿಗೂ ಬುದ್ಧಿಯಿಂದಲೇ ಉಂಟಾಗುತ್ತದೆ. ಅಂತಹ ಯಜ್ಞಕ್ಕೆ ದೇವತೆಗಳಾಗಲೀ ಅಥವಾ ಉಳಿದ ಜನರಾಗಲೀ ವಿಘ್ನವನ್ನುಂಟು ಮಾಡಿ ಯಜ್ಞವನ್ನು ನಾಶಪಡಿಸುವುದಿಲ್ಲ. ಆದ್ದರಿಂದ ಶ್ರದ್ಧಾಯಜ್ಞವೆಂಬುದು ಎಲ್ಲ ವರ್ಣದವರಿಗೂ ಹೇಳಲ್ಪಡುತ್ತದೆ.

ಸ್ವಂ ದೈವತಂ ಬ್ರಾಹ್ಮಣ ಸ್ವೇನ ನಿತ್ಯಂ
ಪರಾನ್ ವರ್ಣಾನಾಯಜನ್ನೇವಮಾಸೀತ್ ।
ಅಧರೋ ವಿತಾನಸ್ತ್ವಥ ತತ್ರ ಸೃಷ್ಟಃ
ನ ಬ್ರಹ್ಮಣಸ್ತ್ರಿಷು ವರ್ಣೇಷು ರಾಜನ್ ॥೪೬॥

ಬ್ರಾಹ್ಮಣನಾದವನು ತನ್ನ ದೇವತೆಯಾದ ನಾರಾಯಣನನ್ನು ತನ್ನ ದ್ರವ್ಯದಿಂದ ಮತ್ತು ಇನ್ನೊಂದು ವರ್ಣದವನ ದ್ರವ್ಯದಿಂದಲೂ ಹಿಂದೆ ಹೇಳಿದ ರೀತಿಯಲ್ಲಿ ಯಾಗವನ್ನು ಮಾಡಿ ತೃಪ್ತಿಪಡಿಸುತ್ತಿದ್ದನು. ಕ್ಷತ್ರಿಯ, ವೈಶ್ಯ, ಶೂದ್ರರಾದ ಅಧಮ ವರ್ಣಗಳ ವಿಸ್ತಾರವು ಬ್ರಾಹ್ಮಣನನ್ನು ಆಶ್ರಯಿಸಿಕೊಂಡಿದೆ. ಎಲೈ ರಾಜನೇ! ಬ್ರಾಹ್ಮಣನು ಆ ಮೂರು ವರ್ಣಗಳನ್ನು ಆಶ್ರಯಿಸಿಕೊಂಡಿಲ್ಲ.

ತಸ್ಮಾದ್ ವರ್ಣಾ ಋಜವೋ ಜಾತಿಧರ್ಮಾಃ
ಸಂಸೃಜ್ಯಂತೇ ತಸ್ಯ ವಿಪಾಕ ಏಷಃ ।
ಏಕಂ ಸಾಮ ಯಜುರೇಕಮೃಗೇಕಾ
ವಿಪ್ರಶ್ಚೈಕೋ ನಿಶ್ಚಯಸ್ತೇಷು ದೃಷ್ಟಃ ॥೪೭॥

ಆದ್ದರಿಂದ ಎಲ್ಲ ವರ್ಣಗಳೂ ಮತ್ತು ನೇರವಾದ ಎಲ್ಲ ಜಾತಿಧರ್ಮಗಳೂ ಪರಸ್ಪರಸಂಬದ್ಧವಾಗಿವೆ. ಯಜ್ಞಾದಿ ಕ್ರಿಯೆಗಳು ಅದರ ಪರಿಣಾಮ. ಸಾಮವೇದವು ಒಂದೇ. ಯಜುರ್ವೇದವು ಒಂದೇ. ಋಗ್ವೇದವು ಒಂದೇ. ಬ್ರಾಹ್ಮಣಸಮೂಹವೂ ಒಂದೇ. ಅವುಗಳಲ್ಲಿರುವ ನಿಶ್ಚಯವೂ ಸಹ ಏಕರೂಪವಾಗಿರುವುದು ಕಂಡು ಬರುತ್ತದೆ.

ಅತ್ರ ಗಾಥಾ ಯಜ್ಞಗೀತಾಃ ಕೀರ್ತಯಂತಿ ಪುರಾವಿದಃ।
ವೈಖಾನಸಾನಾಂ ರಾಜೇಂದ್ರ ಮುನೀನಾಂ ಯಷ್ಟುಮಿಚ್ಛತಾಮ್ ॥೪೮॥

ಎಲೈ ರಾಜೇಂದ್ರನೇ! ಯಜ್ಞವನ್ನು ಮಾಡಲು ಬಯಸಿದ ವೈಖಾನಸಮುನಿಗಳು ಹಾಡಿದ ಯಜ್ಞಸಂಬಂಧಿಯಾದ ಗೀತೆಗಳನ್ನು ಪ್ರಾಚೀನ ಇತಿಹಾಸವನ್ನು ತಿಳಿದವರು ಹೇಳುತ್ತಾರೆ.

ಉದಿತೇಽನುದಿತೇ ವಾಪಿ ಶ್ರದ್ದಧಾನೋ ಜಿತೇಂದ್ರಿಯಃ।
ವಹ್ನಿಂ ಜುಹೋತಿ ಧರ್ಮೇಣ ಶ್ರದ್ಧಾ ವೈ ಕಾರಣಂ ಮಹತ್ ॥೪೯॥

ಜಿತೇಂದ್ರಿಯನಾದವನು ಸೂರ್ಯೋದಯವಾದ ಮೇಲೆ ಅಥವಾ ಸೂರ್ಯೋದಯಕ್ಕಿಂತ ಮೊದಲೇ ಧರ್ಮದಿಂದ ವಹ್ನಿಯಲ್ಲಿ ಹೋಮ ಮಾಡುತ್ತಾನೆ. ಕಾಲಕ್ಕಿಂತ ಅಲ್ಲಿ ಶ್ರದ್ಧೆಯು ದೊಡ್ಡ ಕಾರಣವಾದುದು.

ಯತ್ ಸ್ಥನ್ನಮಸ್ಯ ತತ್ ಪೂರ್ವಂ ಯದಸ್ಥನ್ನಂ ತದುತ್ತರಮ್।
ಬಹೂನಿ ಯಜ್ಞರೂಪಾಣಿ ನಾನಾಕರ್ಮಫಲಾನಿ ಚ ॥೫೦॥

ಸೂರ್ಯನ ತೇಜಸ್ಸು ಅಗ್ನಿಯನ್ನು ಪ್ರವೇಶಿಸಿರುವಾಗ ಹೋಮವನ್ನು ಮಾಡುವುದು ಯಾವ ಶಾಖೆಗಳಿಗೆ ಇಷ್ಟವೋ ಅವರು 'ಅನುದಿತೇ ಜುಹೋತಿ' ಎಂಬ ವಾಕ್ಯವನ್ನು ಆಧರಿಸಿ ಸೂರ್ಯೋದಯಕ್ಕಿಂತ ಮೊದಲು ಹೋಮವನ್ನು ಮಾಡುತ್ತಾರೆ. ಯಾವ ಶಾಖೆಯವರಿಗೆ ಪುನಃ ಅಗ್ನಿಯಿಂದ ಹೊರಬಂದು ಸೂರ್ಯನನ್ನು ಸೇರಿದ ತೇಜಸ್ಸು ಪ್ರಿಯವಾದುದೋ ಅವರು 'ಉದಿತೇ ಜುಹೋತಿ' ಎಂಬ ವಾಕ್ಯವನ್ನನುಸರಿಸಿ ಸೂರ್ಯೋದಯವಾದ ಮೇಲೆ ಹೋಮವನ್ನು ಮಾಡುತ್ತಾರೆ. ಯಜ್ಞವಿಧಾನಗಳು ಅನೇಕವಾಗಿವೆ. ಅವುಗಳ ಫಲವೂ ಸಹ ನಾನಾವಿಧವಾಗಿದೆ. (ಲಕ್ಷ್ಯಲಂಕಾರ)

ತಾನಿ ಯಃ ಸಂವಿಜಾನಾತಿ ಜ್ಞಾನನಿಶ್ಚಯನಿಶ್ಚಿತಃ।
ದ್ವಿಜಾತಿಃ ಶ್ರದ್ಧಯೋಪೇತೋ ಸ ಯಷ್ಟುಂ ಪುರುಷೋಽರ್ಹತಿ ॥೫೧॥

ಯಾವ ದ್ವಿಜನು ನಿಶ್ಚಿತವಾದ ಜ್ಞಾನವನ್ನು ಹೊಂದಿ, ಅವೆಲ್ಲವನ್ನೂ ತಿಳಿದು, ಶ್ರದ್ಧೆಯಿಂದ ಕೂಡಿರುತ್ತಾನೆಯೋ ಅವನೇ ಯಜ್ಞಮಾಡಲು ಅರ್ಹನಾದವನು.

ಸ್ತೇನೋ ವಾ ಯದಿ ವಾ ಪಾಪೋ ಯದಿ ವಾ ಪಾಪಕೃತ್ತಮಃ।
ಯಷ್ಟುಮಿಚ್ಛತಿ ಯಜ್ಞಂ ಯಃ ಸಾಧುಮೇವ ವದಂತಿ ತಮ್ ॥೫೨॥

ಕಳ್ಳನಾಗಲೀ, ಅಥವಾ ಪಾಪವನ್ನುಮಾಡಿದವನಾಗಲೀ ಅಥವಾ ಪಾಪವನ್ನು ಮಾಡಿದವರಲ್ಲಿ ಅಗ್ರೇಸರನಾಗಲೀ ಯಜ್ಞವನ್ನು ಮಾಡಲು ಬಯಸಿದರೆ ಅವನನ್ನು ಸಜ್ಜನನೆಂದೇ ಹೇಳುತ್ತಾರೆ.

ಋಷಯಸ್ತಂ ಪ್ರಶಂಸಂತಿ ಸಾಧು ಚೈತದಸಂಶಯಮ್ ।
ಸರ್ವಥಾ ಸರ್ವವರ್ಣೈರ್ಹಿ ಯಷ್ಟವ್ಯಮಿತಿ ನಿಶ್ಚಯಃ।
ನಹಿ ಯಜ್ಞಸಮಂ ಕಿಂಚಿತ್ ತ್ರಿಷು ಲೋಕೇಷು ವಿದ್ಯತೇ ॥೫೩॥

ಋಷಿಗಳು ನಿಃಸಂಶಯವಾಗಿ ಒಳ್ಳೆಯದೆಂದು ಅವನನ್ನು ಪ್ರಶಂಸಿಸುತ್ತಾರೆ. ಸರ್ವಥಾ ಯಜ್ಞವನ್ನು ಮಾಡಬೇಕೆಂಬುದು ನಿಶ್ಚಯ. ಮೂರುಲೋಕಗಳಲ್ಲಿಯೂ ಯಜ್ಞಕ್ಕೆ ಸಮಾನವಾದುದು ಯಾವುದೂ ಇಲ್ಲ.

ತಸ್ಮಾದ್ ಯಷ್ಟವ್ಯಮಿತ್ಯಾಹುಃ ಪುರುಷೇಣಾನಸೂಯತಾ।
ಶ್ರದ್ಧಾಪವಿತ್ರಮಾಶ್ರಿತ್ಯ ಯಥಾಶಕ್ತಿ ಪ್ರಯಚ್ಛತಾ ॥೫೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕಷಷ್ಟಿತಮೋऽಧ್ಯಾಯಃ ॥೬೧॥

ಮನುಷ್ಯನಾದವನು ಅಸೂಯಾರಹಿತನಾಗಿ ಪವಿತ್ರವಾದ ಶ್ರದ್ಧೆಯನ್ನು ಹೊಂದಿ, ಯಥಾಶಕ್ತಿ ದಕ್ಷಿಣೆಯನ್ನು ಕೊಟ್ಟು, ಯಾಗವನ್ನು ಮಾಡಬೇಕೆಂದು ಜ್ಞಾನಿಗಳು ಹೇಳುತ್ತಾರೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೧ನೆಯ ಅಧ್ಯಾಯವು ಮುಗಿಯಿತು.

—0—

೬೨. ಅರವತ್ತೆರಡನೆಯ ಅಧ್ಯಾಯ

ಚತುರಾಶ್ರಮಧರ್ಮಗಳ ನಿರೂಪಣೆ

ಭೀಷ್ಮಃ

ಆಶ್ರಮಾಣಾಂ ಮಹಾಬಾಹೋ ಶೃಣು ಸತ್ಯಪರಾಕ್ರಮ।
ಚತುರ್ಣಾಂ ನಾಮಧೇಯಾನಿ ಕರ್ಮಾಣಿ ಚ ಯುಧಿಷ್ಠಿರ ॥೧॥

ಭೀಷ್ಮರು – ಮಹಾಬಾಹುವೇ! ಸತ್ಯಪರಾಕ್ರಮನೇ! ಯುಧಿಷ್ಠಿರನೇ! ನಾಲ್ಕು ಆಶ್ರಮಗಳ ಹೆಸರುಗಳನ್ನು ಮತ್ತು ಕರ್ಮಗಳನ್ನೂ ಕೇಳುವವನಾಗು.

ವಾನಪ್ರಸ್ಥಂ ಭೈಕ್ಷಚರ್ಯಾಂ ಗಾರ್ಹಸ್ಥ್ಯಂ ಚ ಮಹಾಶ್ರಮಮ್।
ಬ್ರಹ್ಮಚರ್ಯಾಶ್ರಮಂ ಪ್ರಾಹುಶ್ಚತುರ್ಥಂ ಬ್ರಾಹ್ಮಣೈರ್ವ್ರತಮ್ ॥೨॥

ವಾನಪ್ರಸ್ಥ, ಸನ್ಯಾಸ, ಶ್ರೇಷ್ಠವಾದ ಗಾರ್ಹಸ್ಥ್ಯ, ಮತ್ತು ಬ್ರಹ್ಮಚರ್ಯಾಶ್ರಮಗಳು ಬ್ರಾಹ್ಮಣರು ಸ್ವೀಕರಿಸುವ ಆಶ್ರಮಗಳೆಂದು ಹೇಳುತ್ತಾರೆ.

ಜಟಾಕರಣಸಂಸ್ಕಾರಂ ದ್ವಿಜಾತಿತತ್ವಮವಾಪ್ಯ ಚ।
ಆಧಾನಾದೀನಿ ಕರ್ಮಾಣಿ ಪ್ರಾಪ್ಯ ವೇದಮಧೀತ್ಯ ಚ ॥೩॥

ಸದಾರೋ ವಾಪ್ಯದಾರೋ ವಾ ಆತ್ಮವಾನ್ ಸಂಯತೇಂದ್ರಿಯಃ।
ವಾನಪ್ರಸ್ಥಾಶ್ರಮಂ ಗಚ್ಛೇತ್ ಕೃತಕೃತ್ಯೋ ಗೃಹಾಶ್ರಮಾತ್ ॥೪॥

ಚೂಡಾಕರ್ಮವನ್ನುಮಾಡಿಕೊಂಡು, ಅನಂತರ ಉಪನಯನದಿಂದ ದ್ವಿಜತ್ವವನ್ನು ಹೊಂದಿ, ಅಗ್ನಿಕಾರ್ಯಗಳನ್ನುಮಾಡಿ, ವೇದಾಧ್ಯಯನವನ್ನು ಮಾಡಿ, ಗೃಹಸ್ಥಾಶ್ರಮದಲ್ಲಿ ಕೃತಕೃತ್ಯನಾಗಿ, ಪತ್ನೀಸಹಿತನಾಗಿ ಅಥವಾ ಪತ್ನೀರಹಿತನಾಗಿ, ಇಂದ್ರಿಯಜಯವುಳ್ಳವನಾಗಿ, ಧೈರ್ಯಶಾಲಿಯಾಗಿ, ವಾನಪ್ರಸ್ಥಾಶ್ರಮವನ್ನು ಹೊಂದಬೇಕು.

ತತ್ರಾರಣ್ಯಕಶಾಸ್ತ್ರಾಣಿ ಸಮಧೀತ್ಯ ಸ ಧರ್ಮವಿತ್।
ಊರ್ಧ್ವರೇತಾಃ ಪ್ರವ್ರಜಿತ್ವಾ ಗಚ್ಛತ್ಯಕ್ಷರಸಾತ್ಮತಾಮ್ ॥೫॥

ಅಲ್ಲಿದ್ದರ್ಮಜ್ಞನಾದ ಅವನು ಆರಣ್ಯಕಶಾಸ್ತ್ರಗಳ ಅಧ್ಯಯನವನ್ನು ಮಾಡಿ, ಊರ್ಧ್ವರೇತಸ್ಕನಾಗಿ, ಸನ್ಯಾಸವನ್ನು ಸ್ವೀಕರಿಸಿ, ಪರಮಾತ್ಮನ ಸಾದೃಶ್ಯವನ್ನು ಹೊಂದುತ್ತಾನೆ.

ಏತಾನ್ಯೇವ ನಿಮಿತ್ತಾನಿ ಮುನೀನಾಮೂರ್ಧ್ವರೇತಸಾಮ್ ।
ಕರ್ತವ್ಯಾನೀಹ ವಿಪ್ರೇಣ ರಾಜನ್ನಾದೌ ವಿಪಶ್ಚಿತಾ ॥೬॥

ಎಲೈ ರಾಜನೇ! ಜ್ಞಾನಿಯಾದ ಬ್ರಾಹ್ಮಣನು ಊರ್ಧ್ವರೇತಸ್ಕರಾದ ಮುನಿಗಳ ಈ ಕರ್ಮಗಳನ್ನೇ ಮಾಡಬೇಕೆಂದು ಹೇಳಲ್ಪಡುತ್ತದೆ.

ಚರಿತಬ್ರಹ್ಮಚರ್ಯಸ್ಯ ಬ್ರಾಹ್ಮಣಸ್ಯ ವಿಶಾಂಪತೇ ।
ಭೈಕ್ಷಚರ್ಯಾಸ್ವಧೀಕಾರಃ ಪ್ರಶಸ್ತ ಇಹ ಮೋಕ್ಷಿಣಃ ॥೭॥

ಎಲೈ ರಾಜನೇ! ಬ್ರಹ್ಮಚರ್ಯಾಶ್ರಮವನ್ನು ಪೂರೈಸಿದ ಮುಮುಕ್ಷುವಾದ ಬ್ರಾಹ್ಮಣನಿಗೆ ಈ ಲೋಕದಲ್ಲಿ ಸನ್ಯಾಸಾಶ್ರಮದಲ್ಲಿ ಪ್ರಶಸ್ತವಾದ ಅಧಿಕಾರವುಂಟಾಗುತ್ತದೆ.

ಯತ್ರಾಸ್ತಮಿತಶಾಯೀ ಸ್ಯಾನ್ನಿರಗ್ನಿರನಿಕೇತನಃ ।
ಯಥೋಪಲಬ್ಧಜೀವೀ ಸ್ಯಾನ್ಮುನಿರ್ದಾಂತೋ ಜಿತೇಂದ್ರಿಯಃ ॥೮॥

ಅಗ್ನಿಯನ್ನು ಹೊಂದದೆ, ನಿವಾಸವನ್ನು ಹೊಂದದೆ, ಸೂರ್ಯಾಸ್ತವಾಗುವ ಸಮಯದಲ್ಲಿ ಇದ್ದ ಸ್ಥಳದಲ್ಲಿ ಮಲಗಿ, ಸಹಜವಾಗಿ ದೊರೆತ ಆಹಾರದಿಂದ ಜಿತೇಂದ್ರಿಯನಾಗಿ, ಮುನಿಯಾಗಿ ಜೀವಿಸಬೇಕು.

ನಿರಾಶೀಃ ಸ್ಯಾತ್ ಸರ್ವಸಮೋ ನಿಭೃರ್ಯೋಗೋ ನಿರ್ವಿಕಾರವಾನ್ ।
ವಿಪ್ರಃ ಕ್ಷೇಮಾಶ್ರಮಂ ಪ್ರಾಪ್ತೋ ಗಚ್ಛತ್ಯಕ್ಷರಸಾತ್ಮತಾಮ್ ॥೯॥

ಯಾವ ಆಸೆಯನ್ನೂ ಮಾಡಬಾರದು. ಯಾವಾಗಲೂ ಮನಸ್ಸಿನ ಸಾಮ್ಯವನ್ನು ಹೊಂದಿರಬೇಕು. ನಿರ್ವಿಕಾರನಾಗಿ ಎಲ್ಲಾ ಭೋಗಗಳನ್ನೂ ತೊರೆಯಬೇಕು. ಹೀಗೆ

ಸನ್ನ್ಯಾಸಾಶ್ರಮವನ್ನು ಸ್ವೀಕರಿಸಿದ ಬ್ರಾಹ್ಮಣನು ಅಕ್ಷರನಾದ ಪರಮಾತ್ಮನ ಸಾಮ್ಯವನ್ನು ಹೊಂದುತ್ತಾನೆ.

ಅಧೀತ್ಯ ವೇದಾನ್ ಕೃತಸರ್ವಕೃತ್ಯಃ
ಸಂತಾನಮುತ್ಪಾದ್ಯ ಸುಖಾನಿ ಭುಕ್ತ್ವಾ।
ಸಮಾಹಿತಃ ಪ್ರಚರೇದ್ ದುಶ್ಚರಂ ತಂ
ಗಾರ್ಹಸ್ಥ್ಯಧರ್ಮಂ ಮುನಿಧರ್ಮದೃಷ್ಟಮ್ ॥೧೦॥

ವೇದಗಳನ್ನು ಅಧ್ಯಯನ ಮಾಡಿ, ಮಾತಾಪಿತೃಗಳಿಗೆ ಮಾಡಬೇಕಾದ ಎಲ್ಲಾ ಕಾರ್ಯಗಳನ್ನೂ ಮಾಡಿ, ಸಂತಾನವನ್ನು ಪಡೆದು, ಸುಖಗಳನ್ನು ಭೋಗಿಸಿ, ಸಮಾಧಾನಚಿತ್ತನಾಗಿ ಮುನಿಗಳಿಂದ ದೃಷ್ಟವಾದ ದುಶ್ಚರವಾದ ಗಾರ್ಹಸ್ಥ್ಯಧರ್ಮ-ವನ್ನು ಆಚರಿಸಬೇಕು.

ಸ್ವದಾರತುಷ್ಟ ಋತುಕಾಲಗಾಮೀ
ನಿಯೋಗಸೇವೀ ನ ಶಠೋ ನ ಜಿಹ್ಮಃ।
ಮಿತಾಶನೋ ದೇವಪರಃ ಕೃತಜ್ಞಃ
ಸತ್ಯೋ ಮೃದುಶ್ಚಾನೃಶಂಸಃ ಕ್ಷಮಾವಾನ್ ॥೧೧॥

ತನ್ನ ಪತ್ನಿಯಲ್ಲಿ ತೃಪ್ತನಾಗಿ, ಋತುಕಾಲದಲ್ಲಿ ಮಾತ್ರ ಗಮನವನ್ನು ಮಾಡುವ-ವನಾಗಿ, ಹಿರಿಯರ ಮಾತನ್ನು ಕೇಳುತ್ತಾ, ಶಾಠ್ಯವನ್ನು ಮತ್ತು ಕಪಟತೆಯನ್ನು ಬಿಟ್ಟು, ಅಲ್ಪಾಹಾರನಾಗಿ, ದೇವಧ್ಯಾನಪರನಾಗಿ, ಕೃತಜ್ಞನಾಗಿ, ಸತ್ಯವಚನನಾಗಿ, ಮೃದು-ವಾಗಿ, ಕ್ರೌರ್ಯವನ್ನು ತ್ಯಜಿಸಿ, ಕ್ಷಮೆಯಿಂದ ಕೂಡಿದವನಾಗಿರಬೇಕು.

ದಾಂತೋ ವಿಧೇಯೋ ಹವ್ಯಕವ್ಯೇಽಪ್ರಮತ್ತೋ
ಅನ್ನಸ್ಯ ದಾತಾ ಸತತಂ ದ್ವಿಜೇಭ್ಯಃ।
ಅಮತ್ಸರೀ ಸರ್ವಲಿಂಗಿಪ್ರದಾತಾ
ವೈತಾನನಿತ್ಯಶ್ಚ ಗೃಹಾಶ್ರಮೀ ಸ್ಯಾತ್ ॥೧೨॥

ಇಂದ್ರಿಯನಿಗ್ರಹವುಳ್ಳವನಾಗಿ, ಹಿರಿಯರಿಗೆ ವಿಧೇಯನಾಗಿ, ಜಾಗರೂಕನಾಗಿ ಹವ್ಯಕವ್ಯಗಳನ್ನು ಮಾಡಿ, ಬ್ರಾಹ್ಮಣರಿಗೆ ಸತತವಾಗಿ ಅನ್ನದಾನವನ್ನು ಮಾಡಬೇಕು. ಗೃಹಾಶ್ರಮಿಯಾದವನು ಮಾತ್ಸರ್ಯರಹಿತನಾಗಿ, ಸರ್ವಾಶ್ರಮದವರಿಗೂ ದಾನವನ್ನು ಮಾಡುತ್ತಾ, ನಿತ್ಯವೂ ಯಜ್ಞಪರನಾಗಿರಬೇಕು.

ಅಥಾತ್ರ ನಾರಾಯಣಗೀತಮಾಹುಃ
ಮಹರ್ಷಯಸ್ತಾತ ಮಹಾನುಭಾವಾಃ।
ಮಹಾರ್ಥಮತ್ಯರ್ಥತಪಃಪ್ರಯುಕ್ತಂ
ತದುಚ್ಯಮಾನಂ ಹಿ ಮಯಾ ನಿಬೋಧ ॥೧೩॥

ಎಲೈ ಪ್ರೀತಿಪಾತ್ರನೇ! ಈ ವಿಷಯದಲ್ಲಿ ಮಹಾನುಭಾವರಾದ ಮಹರ್ಷಿಗಳು ನಾರಾಯಣನಿಂದ ಹೇಳಲ್ಪಟ್ಟ ಮಹಾರ್ಥವುಳ್ಳ ಅತ್ಯಂತ ತಪಸ್ಸಿನಿಂದ ಉಂಟಾದ ಮಾತುಗಳನ್ನು ಹೇಳುತ್ತಾರೆ. ಅದನ್ನು ನನ್ನಿಂದ ಕೇಳು.

ಸತ್ಯಾರ್ಜವಂ ಚಾತಿಥಿಪೂಜನಂ ಚ
ಧರ್ಮಸ್ತಥಾऽರ್ಥಶ್ಚ ರತಿಶ್ಚ ದಾರೇ।
ನಿಷೇವಿತವ್ಯಾನಿ ಸುಖಾನಿ ಲೋಕೇ
ಹ್ಯಸ್ಮಿನ್ ಪರೇ ಚೈವ ಮತಂ ಮಮೈತತ್ ॥೧೪॥

ಸತ್ಯವಚನ, ಆರ್ಜವ (ಮನೋವಾಕ್ಕಾಯಗಳಲ್ಲಿ ಕಪಟವಿಲ್ಲದಿರುವಿಕೆ), ಅತಿಥಿಪೂಜೆ, ಧರ್ಮಾರ್ಥಗಳ ಸಂಪಾದನೆ, ಪತ್ನಿಯಲ್ಲಿ ರತಿ ಮತ್ತು ಲೋಕದ ಸುಖಗಳು ಇವುಗಳನ್ನು ಸೇವಿಸಬೇಕು. ಅಂತಹವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವಾಗಿರುತ್ತಾನೆ ಎಂಬುದು ನನ್ನ (ನಾರಾಯಣನ) ಅಭಿಪ್ರಾಯ.

ಭರಣಂ ಪುತ್ರದಾರಾಣಾಂ ವೇದಾನಾಂ ಪಾರಣಂ ತಥಾ।
ವಸತಾಮಾಶ್ರಮಂ ಶ್ರೇಷ್ಠಂ ವದಂತಿ ಪರಮರ್ಷಯಃ ॥೧೫॥

ಶ್ರೇಷ್ಠವಾದ ಗೃಹಸ್ಥಾಶ್ರಮವನ್ನು ಸ್ವೀಕರಿಸುವವರಿಗೆ ಪತ್ನೀಪುತ್ರರ ರಕ್ಷಣೆ, ವೇದಗಳ ಪಾರಾಯಣ ಇವುಗಳು ಶ್ರೇಷ್ಠವಾದ ಕರ್ತವ್ಯಗಳೆಂದು ಪರಮ ಋಷಿಗಳು ಹೇಳುತ್ತಾರೆ.

ಏವಂ ಹಿ ಯೋ ಬ್ರಾಹ್ಮಣೋ ಯಜ್ಞಶೀಲೋ
ಗಾರ್ಹಸ್ಥ್ಯಮಧ್ಯಾವಸತೇ ಯಥಾವತ್ ।
ಗೃಹಸ್ಥವೃತ್ತಿಃ ಪ್ರವಿಶೋಧ್ಯ ಸಮ್ಯಕ್
ಸ್ವರ್ಗೇ ವಿಶುದ್ಧಂ ಫಲಮಾಪ್ನುತೇ ಸಃ ॥೧೬॥

ಈ ರೀತಿಯಲ್ಲಿ ಯಾವ ಬ್ರಾಹ್ಮಣನು ಯಜ್ಞಶೀಲನಾಗಿ, ಗೃಹಸ್ಥಧರ್ಮಗಳನ್ನು ಶಾಸ್ತ್ರೋಕ್ತವಾಗಿ ಅನುಷ್ಠಾನ ಮಾಡುತ್ತಾನೆಯೋ ಅವನು ತನ್ನನ್ನು ಪವಿತ್ರೀಕರಿಸಿಕೊಂಡು ಸ್ವರ್ಗದಲ್ಲಿ ವಿಶುದ್ಧವಾದ ಫಲವನ್ನು ಪಡೆಯುತ್ತಾನೆ.

ತಸ್ಯ ದೇಹಪರಿತ್ಯಾಗಾದಿಷ್ಟಾಃ ಕಾಮಾಕ್ಷಯಾ ಮತಾಃ ।
ಆನಂತ್ಯಾಯೋಪತಿಷ್ಠಂತಿ ಸರ್ವತೋಽಕ್ಷಿಶಿರೋಮುಖಾಃ ॥೧೭॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಿಷಷ್ಟಿತಮೋಽಧ್ಯಾಯಃ ॥೬೨॥

ಅವನು ದೇಹಪರಿತ್ಯಾಗವನ್ನು ಮಾಡಿದ ಮೇಲೆ ಅಕ್ಷಯವಾದ ಕಾಮ್ಯವಾದ ಫಲಗಳನ್ನು ಹೊಂದುತ್ತಾನೆ. ಆ ಕಾಮ್ಯಫಲಕ್ಕೆ ಅಭಿಮಾನಿಗಳಾದ ದೇವತೆಗಳು ಎಲ್ಲ ಕಡೆಗಳಲ್ಲಿಯೂ ಅಕ್ಷಿಶಿರೋಮುಖಗಳನ್ನು ಹೊಂದಿದವರಾಗಿ ಅವನಿಗೆ ಅನಂತವಾದ ಸುಖವನ್ನು ಉಂಟುಮಾಡುತ್ತಾರೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೨ನೆಯ ಅಧ್ಯಾಯವು ಮುಗಿಯಿತು

—0—

೬೩. ಅರವತ್ತಮೂರನೆಯ ಅಧ್ಯಾಯ

ಬ್ರಾಹ್ಮಣಧರ್ಮಕಥನ

ಭೀಷ್ಮಃ

ವಸನ್ನೇಕೋ ಜಪನ್ನೇಕಃ ಸರ್ಪನ್ನೇಕೋ ಯುಧಿಷ್ಠಿರ।
ಏಕಸ್ಮಿನ್ನೇವ ಆಚಾರ್ಯೇ ಶುಶ್ರೂಷುರ್ಮಲಪಂಕವಾನ್ ॥೧॥

ಭೀಷ್ಮರು – ಎಲೈ ಯುಧಿಷ್ಠಿರನೇ! ಬ್ರಹ್ಮಚಾರಿಯಾದವನು ಶರೀರದಲ್ಲಿ ಮಲ, ಪಂಕಗಳನ್ನು ಧರಿಸಿ ಒಬ್ಬನೇ ವಾಸ ಮಾಡುತ್ತಾ, ಒಬ್ಬನೇ ಜಪವನ್ನು ಮಾಡುತ್ತಾ, ಒಬ್ಬನೇ ಸಂಚರಿಸುತ್ತಾ, ಒಬ್ಬ ಗುರುವಿನ ಬಳಿಯಲ್ಲಿಯೇ ಸೇವೆಯನ್ನು ಮಾಡ-ಬೇಕು.

ಬ್ರಹ್ಮಚಾರೀ ವ್ರತೀ ನಿತ್ಯಂ ನಿತ್ಯಂ ದೀಕ್ಷಾಪರೋ ವಶೀ।
ಅವಧಾರ್ಯ ತಥಾ ವೇದಂ ಕೃತ್ಯಂ ಕುರ್ವನ್ ವಸೇತ್ ಸದಾ ॥೨॥

ಬ್ರಹ್ಮಚಾರಿಯಾದವನು ನಿತ್ಯವೂ ವ್ರತವನ್ನು ಧರಿಸಿ, ನಿತ್ಯವೂ ದೀಕ್ಷಾಪರನಾಗಿ, ಗುರುಗಳಿಗೆ ಅಧೀನನಾಗಿದ್ದು, ವೇದಾಧ್ಯಯನವನ್ನು ಮಾಡಿ, ಉಳಿದ ಕಾರ್ಯ-ಗಳನ್ನು ಮಾಡುತ್ತಾ, ಗುರುವಿನ ಜೊತೆಯಲ್ಲಿ ವಾಸಿಸಬೇಕು.

ಶುಶ್ರೂಷಾಂ ಸತತಂ ಕುರ್ವನ್ ಗುರೋಃ ಸಂಪ್ರಣಮೇತ ಚ।
ಷಟ್ ಕರ್ಮಸ್ವನಿವೃತ್ತಶ್ಚ ನ ಪ್ರವೃತ್ತಶ್ಚ ಸರ್ವಶಃ ॥೩॥

ಸತತವಾಗಿ ಗುರುಗಳ ಸೇವೆಯನ್ನು ಮಾಡುತ್ತಾ ಗುರುಗಳಿಗೆ ನಮಸ್ಕರಿಸಬೇಕು. ಷಟ್ಕರ್ಮಗಳಲ್ಲಿ ನಿರತನಾಗಿ ಬೇರೆ ಯಾವ ಕಾರ್ಯಗಳನ್ನೂ ಮಾಡಲು ತೊಡಗ-ಬಾರದು.

ನ ಚರತ್ಯಧಿಕಾರೇಣ ಸೇವತೇ ದ್ವಿಷತೋ ನ ಚ।
ಏಷೋಽSSಶ್ರಮಪದಸ್ಥಾತ ಬ್ರಹ್ಮಚಾರಿಣ ಇಷ್ಯತೇ ॥೪॥

ಯಾರಮೇಲೆಯೂ ತನ್ನ ಅಧಿಕಾರವನ್ನು ತೋರಿಸಬಾರದು. ಗುರುಗಳನ್ನು ದ್ವೇಷಿಸುವವರನ್ನು ಸೇವಿಸಬಾರದು. ಎಲೈ ಪ್ರೀತಿಪಾತ್ರನೇ! ಇದು ಬ್ರಹ್ಮಚರ್ಯಾಶ್ರಮದ ಧರ್ಮವೆಂದು ಹೇಳಲ್ಪಡುತ್ತದೆ.

ಯುಧಿಷ್ಠಿರಃ

ಶಿವಾನ್ ಸರ್ವಾನ್ ಮಹೋದರ್ಕಾನಹಿಂಸ್ರಾನ್ ಲೋಕಸಮ್ಮತಾನ್ ।
ಬ್ರೂಹಿ ಧರ್ಮಾನ್ ಸುಖೋಪಾಯಾನ್ ಮದ್ವಿಧಾನಾಂ ಸುಖಾವಹಾನ್ ॥

ಯುಧಿಷ್ಠಿರ – ಮಂಗಳಕರವೂ, ಮಹಾಫಲಪ್ರದವೂ, ಅಹಿಂಸಾರೂಪವೂ , ಲೋಕಸಮ್ಮತವೂ, ಸುಖವಾಗಿ ಮಾಡಲು ಸಾಧ್ಯವಾದವೂ, ನನ್ನಂತಹವನಿಗೆ ಸುಖವನ್ನು ತಂದುಕೊಡುವಂತಹವೂ ಆದ ಎಲ್ಲಾ ಧರ್ಮಗಳನ್ನು ಹೇಳು.

ಭೀಷ್ಮಃ

ಬ್ರಾಹ್ಮಣಸ್ಯೇಹ ಚತ್ವಾರ ಆಶ್ರಮಾ ವಿಹಿತಾಃ ಪ್ರಭೋ ।
ವರ್ಣಾಸ್ತಾನನುವರ್ತಂತೇ ತ್ರಯೋ ಭರತಸತ್ತಮ ॥೬॥

ಭೀಷ್ಮರು – ಎಲೈ ಪ್ರಭುವೇ! ಭರತಸತ್ತಮನೇ! ಬ್ರಾಹ್ಮಣರಿಗೆ ಈ ಲೋಕದಲ್ಲಿ ನಾಲ್ಕು ಆಶ್ರಮಗಳು ವಿಹಿತವಾಗಿವೆ. ಉಳಿದ ಮೂರು ವರ್ಣದವರು ಬ್ರಾಹ್ಮಣನನ್ನು ಅನುಸರಿಸುತ್ತಾರೆ.

ಉಕ್ತಾನಿ ಕರ್ಮಾಣಿ ಬಹೂನಿ ರಾಜನ್
ಸ್ವರ್ಗ್ಯಾಣಿ ರಾಜನ್ಯಪರಾಯಣಾನಿ ।
ನೇಮಾನಿ ದೃಷ್ಟಾಂತವಿಧೌ ಸ್ಮೃತಾನಿ
ಕ್ಷತ್ರೇ ಹಿ ಸರ್ವಂ ವಿಹಿತಂ ಯಥಾವತ್ ॥೭॥

ಎಲೈ ರಾಜನೇ! ರಾಜರಿಗೆ ಸಂಬಂಧಿಸಿದ, ಬಹುವಿಧವಾದ, ಸ್ವರ್ಗಪ್ರದವಾದ ಕರ್ಮಗಳು ಹೇಳಲ್ಪಟ್ಟಿವೆ. ಇವುಗಳನ್ನು ಬ್ರಾಹ್ಮಣರು ಮಾಡಬೇಕೆಂದು ದೃಷ್ಟಾಂತ

ರೀತಿಯಲ್ಲಿ ಇವು ಹೇಳಲ್ಪಟ್ಟವಲ್ಲ. ಇವೆಲ್ಲವೂ ಕ್ಷತ್ರಿಯರಿಗೆ ಮಾತ್ರ ಯಥಾವತ್ತಾಗಿ ವಿಹಿತವಾಗಿವೆ.

ಕ್ಷಾತ್ರಾಣಿ ವೈಶ್ಯಾನಿ ಚ ಸೇವಮಾನಃ
ಶೌದ್ರಾಣಿ ಕರ್ಮಾಣಿ ಚ ಬ್ರಾಹ್ಮಣಃ ಸನ್ ।
ಅಸ್ಮಿನ್ ಲೋಕೇ ನಿಂದಿತೋ ಮಂದಚೇತಾಃ
ಪರೇ ಚ ಲೋಕೇ ನಿರಯಂ ಪ್ರಯಾತಿ ॥೮॥

ಬ್ರಾಹ್ಮಣನಾಗಿ ಮಂದಮತಿಯುಳ್ಳವನಾಗಿ ಕ್ಷತ್ರಿಯರ ವೈಶ್ಯರ ಅಥವಾ ಶೂದ್ರರ ಕರ್ಮಗಳನ್ನು ಮಾಡುವವನು ಈ ಲೋಕದಲ್ಲಿ ನಿಂದಿತನಾಗುತ್ತಾನೆ. ಮತ್ತು ಪರ-ಲೋಕದಲ್ಲಿ ನರಕವನ್ನು ಹೊಂದುತ್ತಾನೆ.

ಯಾ ಸಂಜ್ಞಾವಿಹಿತಾ ಲೋಕೇ ದಾಸೇ ಶುನಿ ವೃಕೇ ಪಶೌ ।
ವಿಕರ್ಮಣಿ ಸ್ಥಿತೇ ವಿಪ್ರೇ ತಾಂ ಸಂಜ್ಞಾಂ ಕುರು ಪಾಂಡವ ॥೯॥

ಎಲೈ ಪಾಂಡವನೇ! ಲೋಕದಲ್ಲಿ ದಾಸನನ್ನು, ನಾಯಿಯನ್ನು, ತೋಳವನ್ನು, ಪಶುವನ್ನು ಯಾವ ಹೀನಶಬ್ದದಿಂದ ಕರೆಯುತ್ತಾರೆಯೋ ವಿಕರ್ಮನಿರತನಾದ ಬ್ರಾಹ್ಮಣನನ್ನು ಅದೇ ಶಬ್ದವುಳ್ಳವನೆಂದು ತಿಳಿ.

ಷಟ್‌ಕರ್ಮಸಂಪ್ರವೃತ್ತಸ್ಯ ಆಶ್ರಮೇಷು ಚತುರ್ಷ್ವಪಿ ।
ಸರ್ವಧರ್ಮೋಪಪನ್ನಸ್ಯ ಸಂಭೂತಸ್ಯ ಕೃತಾತ್ಮನಃ ॥೧೦॥

ಬ್ರಾಹ್ಮಣಸ್ಯ ವಿಶುದ್ಧಸ್ಯ ತಪಸ್ಯಭಿರತಸ್ಯ ಚ ।
ನಿರಾಶಿಷೋ ವದಾನ್ಯಸ್ಯ ಲೋಕಾ ಹ್ಯಕ್ಷರಸಂಜ್ಞಿತಾಃ ॥೧೧॥

ಷಟ್ಕರ್ಮಗಳಲ್ಲಿ ಪ್ರವೃತ್ತನಾದ, ಸರ್ವಧರ್ಮೋಪಪನ್ನನಾದ, ಕೃತಕೃತ್ಯನಾದ, ವಿಶುದ್ಧನಾದ, ತಪೋನಿಷ್ಠನಾದ, ಆಸೆಗಳನ್ನು ತೊರೆದು ಉದಾರಿಯಾದ ನಾಲ್ಕು ಆಶ್ರಮಗಳಿಗೂ ಸೇರಿದ ಬ್ರಾಹ್ಮಣನಿಗೆ ಅಕ್ಷರವೆಂಬ ಹೆಸರಿನ ಅಕ್ಷಯವಾದ ಲೋಕ-ಗಳಿವೆ.

ಯೋ ಯಸ್ಮಿನ್ ಕುರುತೇ ಕರ್ಮ ಯಾದೃಶಂ ಯೇನ ಯತ್ರ ಚ।
ತಾದೃಶಂ ತಾದೃಶೇನೈವ ಸಗುಣಂ ಪ್ರತಿಪದ್ಯತೇ ॥೧೨॥

ಯಾವನು ಎಲ್ಲಿ ಹೇಗೆ ಎಂತಹ ಕರ್ಮವನ್ನು ಮಾಡುತ್ತಾನೆಯೋ, ಅಂತಹ ಕರ್ಮಕ್ಕೆ ಅನುಗುಣವಾದ ಅಂತಹ ಫಲವನ್ನೇ ಅವನು ಪಡೆಯುತ್ತಾನೆ.

ವೃದ್ಧ್ಯಾ ಕೃಷಿವಣಿಕ್ಪ್ಯೇನ ಜೀವಸಂಜೀವನೇನ ಚ।
ವೇತ್ತುಮರ್ಹಸಿ ರಾಜೇಂದ್ರ ಸ್ವಾಧ್ಯಾಯಗಣಿತಂ ಮಹತ್ ॥೧೩॥

ಎಲೈ ರಾಜೇಂದ್ರನೇ! ವೈಶ್ಯನ ಸಂಪತ್ತಿನ ವೃದ್ಧಿಯಿಂದಲೂ, ಕೃಷಿವಾಣಿಜ್ಯ-ದಿಂದಲೂ, ಗೋರಕ್ಷಣದಿಂದಲೂ ಅವನು ಮಾಡಿರುವ ಶ್ರೇಷ್ಠವಾದ ವೇದಾಧ್ಯ-ಯನವನ್ನು ನೀನು ತಿಳಿಯುವವನಾಗಬೇಕು.

ಕಾಲಸಂಚೋದಿತಃ ಕಾಲೇ ಕಾಲಪರ್ಯಾಯನಿಶ್ಚಿತಃ।
ಉತ್ತಮಾಧಮಮಧ್ಯಾನಿ ಕರ್ಮಾಣಿ ಕುರುತೇऽವಶಃ ॥೧೪॥

ಕಾಲನಿಯಾಮಕ ಪರಮಾತ್ಮನಿಂದ ಪ್ರೇರಿತನಾಗಿ, ಕಾಲಕ್ರಮದಲ್ಲಿ ಪಕ್ವವಾಗುವ ತನ್ನ ಕರ್ಮಗಳಿಗೆ ಅಧೀನನಾಗಿ ಆಯಾ ಕಾಲದಲ್ಲಿ ಜೀವನು ಅಸ್ವತಂತ್ರನಾಗಿ ಉತ್ತಮ, ಅಧಮ, ಮಧ್ಯಮಕರ್ಮಗಳನ್ನು ಮಾಡುತ್ತಾನೆ.

ಅಂತವಂತಿ ಪ್ರದಾನಾನಿ ಪುರಾ ಶ್ರೇಯಸ್ಕರಾಣಿ ಚ।
ಸ್ವಕರ್ಮನಿರತೋ ಲೋಕೋ ಹ್ಯಕ್ಷರಃ ಸರ್ವತೋಮುಖಃ ॥೧೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಿಷಷ್ಟಿತಮೋऽಧ್ಯಾಯಃ ॥೬೩॥

ಹಿಂದೆ ಹೇಳಿದ ಶ್ರೇಷ್ಠವಾದ ದಾನ ಮೊದಲಾದವುಗಳು ಅನಿತ್ಯವಾದ ಶ್ರೇಯಸ್ಸನ್ನುಂಟು ಮಾಡುತ್ತವೆ. ಆದರೆ ಸ್ವಕರ್ಮನಿರತನಾದವನು ಸರ್ವಸುಖಮಯ-ವಾದ ಶಾಶ್ವತವಾದ ಲೋಕವನ್ನು ಪಡೆಯುತ್ತಾನೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೩ನೇ ಅಧ್ಯಾಯವು ಮುಗಿಯಿತು.

೬೪. ಅರವತ್ತನಾಲ್ಕನೆಯ ಅಧ್ಯಾಯ

ಬ್ರಾಹ್ಮಣರಿಗೆ ನಿಂದ್ಯವಾದ ಕರ್ಮಗಳ ಮತ್ತು ಕ್ಷತ್ರಿಯಧರ್ಮಗಳ ನಿರೂಪಣ

ಯುಧಿಷ್ಠಿರಃ

ಜ್ಯಾಕರ್ಷಣಂ ಶತ್ರುನಿಬರ್ಹಣಂ ಚ
ಕೃಷಿರ್ವಣಿಜ್ಯಾ ಪಶುಪಾಲನಂ ಚ।
ಶುಶ್ರೂಷಣಂ ಚಾಪಿ ತಥಾರ್ಥಹೇತೋ-
ರಕಾರ್ಯಮೇತತ್ ಪರಮಂ ದ್ವಿಜಸ್ಯ ॥೧॥

ಭೀಷ್ಮರು – ಬ್ರಾಹ್ಮಣನಾದವನು ಶಸ್ತ್ರವಿದ್ಯೆಯನ್ನು ಅವಲಂಬಿಸುವುದು, ಶತ್ರು ಸಂಹಾರವನ್ನು ಮಾಡುವುದು, ಕೃಷಿ ವಾಣಿಜ್ಯ ಪಶುಪಾಲನೆಯನ್ನು ಮಾಡುವುದು, ಧನಕ್ಕಾಗಿ ಇನ್ನೊಬ್ಬರ ಸೇವೆಯನ್ನು ಮಾಡುವುದು ಇವುಗಳನ್ನು ಖಂಡಿತವಾಗಿ ಮಾಡಬಾರದು.

ಸೇವ್ಯಂ ತು ಬ್ರಹ್ಮ ಷಟ್ ಕರ್ಮ ಗೃಹಸ್ಥೇನ ಮನೀಷಿಣಾ।
ಕೃತಕೃತ್ಯಸ್ಯ ಚಾರಣ್ಯೇ ವಾಸೋ ವಿಪ್ರಸ್ಯ ಶಸ್ಯತೇ ॥೨॥

ವಿವೇಕಿಯಾದ ಗೃಹಸ್ಥ ಬ್ರಾಹ್ಮಣನು ವೇದವನ್ನು ಅವಲಂಬಿಸಿ ಷಟ್ಕರ್ಮ-ನಿರತನಾಗಬೇಕು. ಗೃಹದಲ್ಲಿ ಕೃತಕೃತ್ಯನಾದ ಅವನಿಗೆ ಅರಣ್ಯವಾಸವು ಹೇಳಲ್ಪಡುತ್ತದೆ.

ರಾಜಪ್ರೈಷ್ಯಂ ಕೃಷಿಧನಂ ಜೀವನಂ ಚ ವಣಿಜ್ಯಯಾ।
ಕೌಲಟ್ಯಂ ಕೌಲಟೇಯತ್ವಂ ಕುಸೀದಂ ಚ ವಿವರ್ಜಯೇತ್ ॥೩॥

ಬ್ರಾಹ್ಮಣನು ರಾಜಸೇವೆ, ಕೃಷಿಧನ, ವ್ಯಾಪಾರದಿಂದ ಜೀವನ, ವೇಶ್ಯಾಪತಿತ್ವ, ಭಿಕ್ಷುಕೀಪತಿತ್ವ, ಬಡ್ಡಿಯಿಂದ ಜೀವನ ಇವುಗಳನ್ನು ವರ್ಜಿಸಬೇಕು.

ಶೂದ್ರೋ ರಾಜನ್ ಭವತಿ ಬ್ರಹ್ಮಬಂಧುಃ
ದುಶ್ಚಾರಿತ್ರ್ಯೋ ಯಶ್ಚ ಧರ್ಮಾದಪೇತಃ।
ವೃಷಲೀಪತಿಃ ಪಿಶುನೋ ನರ್ತಕಶ್ಚ
ಗ್ರಾಮಪ್ರೈಷ್ಯೋ ಯಶ್ಚ ಭವೇದ್ ವಿಕರ್ಮಾ ॥೪॥

ಎಲೈ ರಾಜನೇ! ದುಷ್ಪನಡತೆಯನ್ನು ಹೊಂದಿ, ಧರ್ಮದಿಂದ ದೂರ ಸರಿದ ಬ್ರಾಹ್ಮಣ, ವೃಷಲೀಪತಿ (ಶೂದ್ರಸ್ತ್ರೀಪತಿ) ಚಾಡಿಕೋರ, ನರ್ತಕ, ಗ್ರಾಮಸೇವಕ, ಅಥವಾ ವಿಕರ್ಮನಿರತನಾದ ಬ್ರಾಹ್ಮಣನು ಶೂದ್ರಸಮನಾಗುತ್ತಾನೆ.

ಜಪನ್ ವೇದಾನಜಪಂಶ್ಚಾಪಿ ರಾಜನ್
ಸಮಃ ಶೂದ್ರೈರ್ದಾಸವಚ್ಚಾಪಿ ಭೋಜ್ಯಃ।
ಏತೇ ಸರ್ವೇ ಶೂದ್ರಸಮಾ ಭವಂತಿ
ರಾಜನ್ನೇತಾನ್ ವರ್ಜಯೇದ್ ದೈವಕೃತ್ಯೇ ॥೫॥

ಎಲೈ ರಾಜನೇ! ಅಂತಹ ಬ್ರಾಹ್ಮಣನು ವೇದಗಳನ್ನು ಜಪಮಾಡಲಿ ಅಥವಾ ಜಪ ಮಾಡದೇ ಇರಲಿ ಶೂದ್ರರಿಗೆ ಸಮನಾಗುತ್ತಾನೆ. ಅವನಿಗೆ ದಾಸನಿಗೆ ನೀಡುವಂತೆ ಅನ್ನವನ್ನು ನೀಡಬೇಕು. ಎಲೈ ರಾಜನೇ! ಇವರೆಲ್ಲರೂ ಶೂದ್ರಸಮರಾಗುತ್ತಾರೆ. ದೇವಕಾರ್ಯಗಳಲ್ಲಿ ಇವರನ್ನು ವರ್ಜಿಸಬೇಕು.

ನಿರ್ಮರ್ಯಾದೇ ವಾಕ್‌ಶಠೇ ಕ್ರೂರವೃತ್ತೌ
ಹಿಂಸಾತ್ಮಕೇ ತ್ಯಕ್ತಧರ್ಮಸ್ವವೃತ್ತೇ।
ಹವ್ಯಂ ಕವ್ಯಂ ಯಾನಿ ಚಾನ್ಯಾನಿ ರಾಜನ್
ದೇಯಾನ್ಯದೇಯಾನಿ ಭವಂತಿ ತಸ್ಮಿನ್ ॥೬॥

ಎಲೈ ರಾಜನೇ! ಬ್ರಾಹ್ಮಣನಿಗೆ ಕೊಡಬೇಕಾದ ಹವ್ಯಕವ್ಯಗಳನ್ನು ಮರ್ಯಾದೆಯನ್ನು ಮೀರಿದ, ಅಹಂಕಾರದಿಂದ ಮಾತನಾಡುವ, ಕ್ರೂರವಾದ ನಡತೆಯುಳ್ಳ, ಹಿಂಸಾಶೀಲನಾದ, ತನ್ನ ಧರ್ಮವನ್ನು ಮತ್ತು ನಡತೆಯನ್ನು ಬಿಟ್ಟ ಬ್ರಾಹ್ಮಣನಿಗೆ ಕೊಡಬಾರದು.

ತಸ್ಮಾದ್ ಧರ್ಮೋ ವಿಹಿತೋ ಬ್ರಾಹ್ಮಣಸ್ಯ
ದಮಃ ಶೌಚಂ ಚಾರ್ಜವಂ ಚಾಪಿ ರಾಜನ್ ।
ತಥಾ ವಿಪ್ರಸ್ಯಾಶ್ರಮಾಃ ಸರ್ವ ಏವ
ಪುರಾ ರಾಜನ್ ಬ್ರಹ್ಮಣಾ ವೈ ನಿಸೃಷ್ಟಾಃ ॥೭॥

ಎಲೈ ರಾಜನೇ! ಆದ್ದರಿಂದ ಇಂದ್ರಿಯನಿಗ್ರಹ, ಶೌಚ ಮತ್ತು ಆರ್ಜವಗಳು ಬ್ರಾಹ್ಮಣನ ಧರ್ಮಗಳೆಂದು ವಿಹಿತವಾಗಿವೆ. ರಾಜನೇ! ನಾಲ್ಕು ಆಶ್ರಮಗಳನ್ನೂ ಸಹ ಇಂತಹ ಧರ್ಮವಿಶಿಷ್ಟಗಳನ್ನಾಗಿ ಬ್ರಹ್ಮದೇವರು ಸೃಷ್ಟಿಸಿದ್ದಾರೆ.

ಯಃ ಸ್ಯಾದ್ ದಾಂತಃ ಸೋಮಪ ಆರ್ಯಶೀಲಃ
ಸಾನುಕ್ರೋಶಃ ಸರ್ವಸಹೋ ನಿರಾಶೀಃ ।
ಋಜುರ್ಮೃದುರನೃಶಂಸಃ ಕ್ಷಮಾವಾನ್
ಸ ವೈ ವಿಪ್ರೋ ನೇತರಃ ಪಾಪಕರ್ಮಾ ॥೮॥

ಯಾವನು ಇಂದ್ರಿಯನಿಗ್ರಹವುಳ್ಳವನೋ, ಸೋಮಪಾನವನ್ನು ಮಾಡುವವನೋ, ಉದಾತ್ತವಾದ ಶೀಲವುಳ್ಳವನೋ, ದಯಾಪರನೋ, ದ್ವಂದ್ವಸಹಿಷ್ಣುವೋ, ಆಶಾರಹಿತನೋ, ಋಜುವೋ, ಮೃದುವೋ, ಅಕ್ರೂರಿಯೋ, ಕ್ಷಮೆಯುಳ್ಳವನೋ ಅವನೇ ಬ್ರಾಹ್ಮಣ. ಪಾಪಕರ್ಮವನ್ನು ಮಾಡುವವನು ಬ್ರಾಹ್ಮಣನಲ್ಲ.

ಶೂದ್ರಂ ವೈಶ್ಯಂ ರಾಜಪುತ್ರಂ ಚ ರಾಜನ್
ಲೋಕಾಃ ಸರ್ವೇ ಸಂಶ್ರಿತಾಃ ಧರ್ಮಕಾಮಾಃ ।
ತಸ್ಮಾದ್ ವರ್ಣಾನ್ ಜಾತಿಧರ್ಮೇಷು ಸಕ್ತಾನ್
ಕೃತ್ವಾ ಬುದ್ಧ್ಯಾ ಶಾಧಿ ತಾನ್ ಪಾಂಡುಪುತ್ರ ॥೯॥

ಎಲೈ ರಾಜನೇ! ಧರ್ಮವನ್ನು ಮಾಡಲು ಬಯಸುವವರೆಲ್ಲರೂ ಶೂದ್ರನನ್ನು, ವೈಶ್ಯನನ್ನು ಮತ್ತು ಕ್ಷತ್ರಿಯನನ್ನೂ ಆಶ್ರಯಿಸಿರುತ್ತಾರೆ. ಎಲೈ ಪಾಂಡುಪುತ್ರನೇ! ಆದ್ದರಿಂದ ಆಯಾ ವರ್ಣದವರು ತಮ್ಮ ತಮ್ಮ ಜಾತಿಧರ್ಮಗಳಲ್ಲಿ ನಿರತರಾಗಿರುವಂತೆ ಮಾಡಿ, ನಿನ್ನ ಬುದ್ಧಿಯಿಂದ ಅವರನ್ನು ಪಾಲಿಸುವವನಾಗು.

ಲೋಕೇ ಚೇದಂ ಸರ್ವಲೋಕಸ್ಯ ನ ಸ್ಯಾತ್
ಚಾತುರ್ವರ್ಣ್ಯಂ ವೇದವಾದಾಶ್ಚ ನ ಸ್ಯುಃ।
ಸರ್ವಾಶ್ಚೇಜ್ಯಾಃ ಸರ್ವಲೋಕಕ್ರಿಯಾಶ್ಚ
ಸದ್ಯಃ ಸರ್ವೇ ಚಾಶ್ರಮಸ್ಥಾ ನ ವೈ ಸ್ಯುಃ ॥೧೦॥

ಆಯಾ ವರ್ಣದವರು ತಮ್ಮ ಧರ್ಮಗಳನ್ನು ಪಾಲಿಸದಿದ್ದರೆ ಲೋಕದಲ್ಲಿ ಈ ಯಾವ ಧರ್ಮವೂ ಉಳಿಯಲಾರದು. ಚಾತುರ್ವರ್ಣ್ಯವ್ಯವಸ್ಥೆಯಾಗಲೀ, ವೇದವಾದಗಳಾಗಲೀ ಇರಲಾರವು. ಎಲ್ಲ ಯಜ್ಞಗಳೂ ಅರ್ಚನೆಗಳೂ ಲೋಕದ ಎಲ್ಲಾ ಕ್ರಿಯೆಗಳೂ, ಆಶ್ರಮಗಳ ಎಲ್ಲಾ ಕ್ರಿಯೆಗಳೂ ತತ್ಕ್ಷಣದಲ್ಲೇ ನಾಶವನ್ನು ಹೊಂದುವವು.

ಯಶ್ಚತ್ರಯಾಣಾಂ ವರ್ಣಾನಾಮಿಚ್ಛೇದಾಶ್ರಮಸೇವನಮ್।
ಚತುರಾಶ್ರಮದೃಷ್ಟಾಂಶ್ಚ ಧರ್ಮಾಂಸ್ತಾನ್ ಶೃಣು ಪಾಂಡವ ॥೧೧॥

ಎಲೈ ಪಾಂಡವನೇ! ಕ್ಷತ್ರಿಯವೈಶ್ಯಶೂದ್ರರಲ್ಲಿ ಯಾವನು ತನಗೆ ವಿಹಿತವಾದ ಆಶ್ರಮವನ್ನು ಸೇವಿಸಲು ಬಯಸುತ್ತಾನೆಯೋ ಅಥವಾ ಬ್ರಾಹ್ಮಣನು ತನಗೆ ವಿಹಿತವಾದ ನಾಲ್ಕು ಆಶ್ರಮಗಳಲ್ಲಿ ಶಾಸ್ತ್ರದೃಷ್ಟವಾದ ಯಾವ ಧರ್ಮಗಳನ್ನು ಆಚರಿಸಲು ಬಯಸುತ್ತಾನೆಯೋ ಆ ಧರ್ಮಗಳನ್ನು ಕೇಳುವವನಾಗು. (ಲಕ್ಷಾಲಂಕಾರ).

ಶುಶ್ರೂಷಾಕೃತಕೃತ್ಯಸ್ಯ ಕೃತಸಂತಾನಕರ್ಮಣಃ।
ಅಭ್ಯನುಜ್ಞಾಪ್ಯ ರಾಜಾನಂ ಶೂದ್ರಸ್ಯ ಜಗತೀಪತೇ ॥೧೨॥

ಕಲ್ಪಾಂತರಗತಸ್ಯಾಪಿ ದಶಧರ್ಮಗತಸ್ಯ ವಾ।
ಆಶ್ರಮಾ ವಿಹಿತಾಃ ಸರ್ವೇ ವರ್ಜಯಿತ್ವಾನಿರಾಶಿಷಮ್ ॥೧೩॥

ಎಲೈ ಜಗತೀಪತಿಯೇ! ತ್ರಿವರ್ಣದವರ ಸೇವೆಯಿಂದ ಕೃತಕೃತ್ಯನಾದ, ಪುತ್ರರನ್ನು ಪಡೆದ ಶೂದ್ರನಾದವನು (ವೃದ್ಧನಾದವನು) ಬ್ರಾಹ್ಮಣ ಕ್ಷತ್ರಿಯ ವೈಶ್ಯರ ಧರ್ಮ-

ವನ್ನು ಬಿಟ್ಟು ಬೇರೆ ಸದ್ಧರ್ಮವನ್ನು ಆಶ್ರಯಿಸಲು ಬಯಸಿದರೆ ಅವನಿಗೆ ಯತ್ಯಾಶ್ರಮವನ್ನು ಬಿಟ್ಟು ಉಳಿದ ಎಲ್ಲಾ ಆಶ್ರಮಗಳೂ ವಿಹಿತವಾಗುತ್ತವೆ.

ಭೈಕ್ಷಚರ್ಯಾಂ ನ ತು ಪ್ರಾಹುಸ್ತಸ್ಯ ತದ್ಧರ್ಮಚಾರಿಣಃ।
ತಥಾ ವೈಶ್ಯಸ್ಯ ರಾಜೇಂದ್ರ ರಾಜಪುತ್ರಸ್ಯ ಚೈವ ಹಿ ॥೧೪॥

ಅವನಿಗೆ ಸನ್ಯಾಸಾಶ್ರಮವು ಎಂದೂ ಯುಕ್ತವಾದುದಲ್ಲವೆಂದು ಧರ್ಮಚಾರಿಗಳು ಹೇಳುತ್ತಾರೆ. ಎಲೈ ರಾಜೇಂದ್ರನೇ! ಹಾಗೆಯೇ ವೈಶ್ಯನಿಗೂ ಮತ್ತು ಕ್ಷತ್ರಿಯನಿಗೂ ಸಹ,

ಕೃತಕೃತ್ಯೋ ವಯೋತೀತೋ ರಾಜ್ಞಃ ಕೃತಪರಿಶ್ರಮಃ।
ವೈಶ್ಯೋ ಗಚ್ಛೇದನುಜ್ಞಾತೋ ನೃಪೇಣಾಶ್ರಮಮಂಡಲಮ್ ॥೧೫॥

ತನ್ನ ವೃತ್ತಿಯಿಂದ ಕೃತಕೃತ್ಯನಾದವನು, ವಯಸ್ಸಾದವನು, ಜೀವನದಲ್ಲಿ ತನ್ನ ರಾಜನ ಸೇವೆಯನ್ನು ಮಾಡಿದವನಾದ ವೈಶ್ಯನು ರಾಜನಿಂದ ಅನುಮತಿಯನ್ನು ಪಡೆದು ಆಶ್ರಮಮಂಡಲಕ್ಕೆ ಹೋಗಬಹುದು.

ವೇದಾನಧೀತ್ಯ ಧರ್ಮೇಣ ರಾಜಶಾಸ್ತ್ರಾಣಿ ಚಾನಘ।
ಸಂತಾನಾದೀನಿ ಕರ್ಮಾಣಿ ಕೃತ್ವಾ ಸೋಮಂ ನಿಷೇವ್ಯ ಚ ॥೧೬॥
ಪಾಲಯಿತ್ವಾ ಪ್ರಜಾಃ ಸರ್ವಾ ಧರ್ಮೇಣ ವದತಾಂವರ।
ರಾಜಸೂಯಾಶ್ವಮೇಧಾದೀನ್ ಮಖಾನನ್ಯಾಂಸ್ತಥೈವ ಚ ॥೧೭॥
ಸಮಾನೀಯ ಯಥಾಪಾಠಂ ವಿಪ್ರೇಭ್ಯೋ ದತ್ತದಕ್ಷಿಣಃ।
ಸಂಗ್ರಾಮೇ ವಿಜಯಂ ಪ್ರಾಪ್ಯ ತಥಾಲ್ಪಂ ಯದಿ ವಾ ಬಹು ॥೧೮॥
ಸ್ಥಾಪಯಿತ್ವಾ ಪ್ರಜಾಪಾಲಂ ಪುತ್ರಂ ರಾಜ್ಯೇ ಚ ಪಾಂಡವ।
ಅನ್ಯಗೋತ್ರಂ ಪ್ರಶಸ್ತಂ ವಾ ಕ್ಷತ್ರಿಯಂ ಕ್ಷತ್ರಿಯರ್ಷಭ ॥೧೯॥
ಅರ್ಚಯಿತ್ವಾ ಪಿತೄನ್ ಸಮ್ಯಕ್ ಪಿತೃಯಜ್ಞೈರ್ಯಥಾವಿಧಿ।
ದೇವಾನ್ ಯಜ್ಞೈರ್ಋಷೀನ್ ವೇದೈರರ್ಚಿತ್ವಾ ಚೈವ ಯತ್ನತಃ ॥೨೦॥

ಅಂತಕಾಲೇ ಚ ಸಂಪ್ರಾಪ್ತೇ ಯ ಇಚ್ಛೇದಾಶ್ರಮಾಂತರಮ್ ।
ಆನುಪೂರ್ವ್ಯಾಶ್ರಮಾನ್ ರಾಜನ್ ಗತ್ವಾಸಿದ್ಧಿಮವಾಪ್ನುಯಾತ್ ॥೨೧॥

ಎಲೈ ಅನಘನೇ! ಮಾತನಾಡುವವರಲ್ಲಿ ಶ್ರೇಷ್ಠನೇ! ಪಾಂಡವನೇ, ಕ್ಷತ್ರಿಯ-ಶ್ರೇಷ್ಠನೇ! ಕ್ಷತ್ರಿಯನಾದವನು ಧರ್ಮವಿಧಾನದಿಂದ ವೇದಗಳನ್ನು ರಾಜನೀತಿಶಾಸ್ತ್ರ-ಗಳನ್ನು ಅಧ್ಯಯನ ಮಾಡಿ, ಸಂತಾನಾದಿ ಕರ್ಮಗಳನ್ನು ಮಾಡಿ, ಸೋಮಪಾನ-ವನ್ನು ಮಾಡಿ, ಧರ್ಮದಿಂದ ಪ್ರಜೆಗಳನ್ನುರಕ್ಷಿಸಿ, ರಾಜಸೂಯಾಶ್ವಮೇಧ ಮೊದಲಾದ ಯಾಗಗಳನ್ನು ಶಾಸ್ತ್ರೋಕ್ತರೀತಿಯಲ್ಲಿ ಮಾಡಿ, ಬ್ರಾಹ್ಮಣರಿಗೆ ಭೂರಿ ದಕ್ಷಿಣೆಯನ್ನು ಕೊಟ್ಟು, ಯುದ್ಧದಲ್ಲಿ ವಿಜಯವನ್ನು ಸಂಪಾದಿಸಿ, ಅಲ್ಪವಾದ ಅಥವಾ ಬಹುವಾದ ಕೋಶವನ್ನು ಸಂಪಾದಿಸಿ, ರಾಜ್ಯದಲ್ಲಿ ತನ್ನ ಪುತ್ರನನ್ನಾಗಲೀ ಅಥವಾ ಬೇರೆಯ ಗೋತ್ರಕ್ಕೆ ಸೇರಿದ ಕ್ಷತ್ರಿಯನನ್ನಾಗಲೀ ರಾಜನನ್ನಾಗಿ ಸ್ಥಾಪಿಸಿ, ಶಾಸ್ತ್ರೋಕ್ತ-ರೀತಿಯಲ್ಲಿ ಪಿತೃಯಜ್ಞಗಳನ್ನು ಮಾಡಿ, ಪಿತೃಗಳನ್ನು ಚೆನ್ನಾಗಿ ಪೂಜಿಸಿ, ವೇದಗಳಿಂದ ಪ್ರಯತ್ನಪೂರ್ವಕವಾಗಿ ಋಷಿಗಳನ್ನೂ, ಯಜ್ಞಗಳಿಂದ ದೇವತೆಗಳನ್ನೂ ಪೂಜಿಸಿ ಸಂತೋಷಪಡಿಸಿ, ಅಂತಕಾಲವು ಪ್ರಾಪ್ತವಾದಾಗ ಬೇರೆಯ ಆಶ್ರಮವನ್ನು ಹೊಂದಲು ಬಯಸಿದರೆ ಅವನು ಪರಮಹಂಸಾಶ್ರಮವನ್ನು ಬಿಟ್ಟು ಉಳಿದ ಹಂಸಾದಿ ಆಶ್ರಮ-ವನ್ನು ಸ್ವೀಕರಿಸಬಹುದು. ಅದರಿಂದ ಅವನು ಸಿದ್ಧಿಯನ್ನು ಹೊಂದಿಯಾನು!

ರಾಜರ್ಷಿತ್ವೇನ ರಾಜೇಂದ್ರ ಭೈಕ್ಷಚರ್ಯಂ ನ ಸೇವಯಾ ।
ಅಪೇತಗೃಹಧರ್ಮೋ೯ಪಿ ಚರೇಜ್ಜೀವಿತಕಾಮ್ಯಯಾ ॥೨೨॥

ಎಲೈ ರಾಜೇಂದ್ರನೇ! ಅಂತಹವನು ಗೃಹಸ್ಥಧರ್ಮದಿಂದ ವಿಯುಕ್ತನಾಗಿದ್ದರೂ ಸಹ ಶರೀರಯಾತ್ರೆಯನ್ನು ಮುಂದುವರಿಸುವ ಉದ್ದೇಶದಿಂದ, ರಾಜರ್ಷಿಯಾದ ಕಾರಣದಿಂದ ಭೈಕ್ಷಚರ್ಯೆಯನ್ನು ಮಾಡಬಹುದು. ಆದರೆ ಇನ್ನೊಬ್ಬರ ಸೇವೆ-ಯಿಂದ ಜೀವನವನ್ನು ನಡೆಸಬಾರದು.

ನ ಚೈತನ್ನೈಷ್ಠಿಕಂ ಕರ್ಮ ತ್ರಯಾಣಾಂ ಭರತರ್ಷಭ ।
ಚತುರ್ಣಾಂ ರಾಜಶಾರ್ದೂಲ ಪ್ರಾಹುರಾಶ್ರಮವಾಸಿನಾಮ್ ॥೨೩॥

ಎಲೈ ರಾಜಶಾರ್ದೂಲನೇ! ಭರತಶ್ರೇಷ್ಠನೇ! ಬ್ರಾಹ್ಮಣಕ್ಷತ್ರಿಯವೈಶ್ಯರಿಗೂ ಅಥವಾ ಆಶ್ರಮವಾಸಿಗಳಾದ ಬ್ರಾಹ್ಮಣರಿಗೂ ಕೊನೆಯಲ್ಲಿ ಹೀಗೆಯೇ ಮಾಡಬೇಕೆಂಬ ಕಡ್ಡಾಯವಿಲ್ಲ.

ಬಾಹ್ವಂ ಪತ್ಯಂ ಕ್ಷತ್ರಿಯೈರ್ಮಾನವಾನಾಂ
ಲೋಕಶ್ರೇಷ್ಠಂ ಧರ್ಮಮಾಸೇವಮಾನೈಃ।
ಸರ್ವೇ ಧರ್ಮಾಃ ಸೋಪಧರ್ಮಾಸ್ತ್ರಯಾಣಾಂ
ರಾಜ್ಞೋ ಧರ್ಮಾದಿತಿ ವೇದಾಚ್ಛೃಣೋಮಿ ॥೨೪॥

ಲೋಕದಲ್ಲಿ ಶ್ರೇಷ್ಠವಾದ ಧರ್ಮವನ್ನು ಸೇವಿಸುವ ಕ್ಷತ್ರಿಯರಿಗೆ ಬಾಹುಸಂಬಂಧಿಯಾದ ಮತ್ತು ಪ್ರಜಾರಕ್ಷಣರೂಪವಾದ ಧರ್ಮವಿದೆ. ರಾಜನ ಧರ್ಮದಿಂದ ಎಲ್ಲಾ ಧರ್ಮಗಳು ಮತ್ತು ಉಪಧರ್ಮಗಳು ಉಂಟಾಗುತ್ತವೆ ಎಂದು ನಾನು ವೇದದಿಂದ ತಿಳಿದಿದ್ದೇನೆ.

ಯಥಾ ರಾಜನ್ ಹಸ್ತಿಪದೇ ಪದಾನಿ
ಸಂಲೀಯಂತೇ ಸರ್ವಸತ್ತ್ವೋದ್ಭವಾನಿ।
ಏವಂ ಧರ್ಮಾನ್ ರಾಜಧರ್ಮೇಷು ಸರ್ವಾನ್
ಸರ್ವಾವಸ್ಥಂ ಸಂಪ್ರಲೀನಾನ್ ನಿಬೋಧ ॥೨೫॥

ಎಲೈ ರಾಜನೇ! ಉಳಿದ ಎಲ್ಲಾ ಪ್ರಾಣಿಗಳ ಹೆಜ್ಜೆಗಳು ಆನೆಯ ಹೆಜ್ಜೆಯಲ್ಲಿ ಮುಳುಗಿಹೋಗುವಂತೆ, ಉಳಿದ ಸರ್ವಾವಸ್ಥೆಯನ್ನು ಹೊಂದಿದ ಎಲ್ಲ ಧರ್ಮಗಳೂ ರಾಜಧರ್ಮಗಳಲ್ಲಿ ಮುಳುಗಿಹೋಗುತ್ತವೆ ಎಂದು ತಿಳಿ.

ಅಲ್ಪಾಶ್ರಯಾನಲ್ಪಫಲಾನ್ ವದಂತಿ
ಧರ್ಮಾನನ್ಯಾನ್ ಧರ್ಮವಿದೋ ಮನುಷ್ಯಾಃ।
ಮಹಾಶ್ರಯಂ ಬಹುಕಲ್ಯಾಣರೂಪಂ
ಕ್ಷಾತ್ರಂ ಧರ್ಮಂ ನೇತರಂ ಪ್ರಾಹುರಾರ್ಯಾಃ ॥೨೬॥

ಧರ್ಮವನ್ನು ತಿಳಿದ ವಿವೇಕಿಗಳು ಉಳಿದ ಧರ್ಮಗಳು ಅಲ್ಪಸಂಬಂಧಿಯಾದವು, ಮತ್ತು ಅಲ್ಪಫಲವನ್ನು ಕೊಡುವವು ಎಂದು ಹೇಳುತ್ತಾರೆ. ಕ್ಷತ್ರಿಯ ಧರ್ಮವು ಮಾತ್ರ ಶ್ರೇಷ್ಠರಾದವರನ್ನು ಆಶ್ರಯಿಸಿರುವುದು ಮತ್ತು ಬಹುಕಲ್ಯಾಣರೂಪವಾದುದು; ಬೇರೆ ಧರ್ಮಗಳು ಹಾಗಲ್ಲ ಎಂದು ಆರ್ಯರು ಹೇಳುತ್ತಾರೆ.

ಸರ್ವೇ ಧರ್ಮಾ ರಾಜಧರ್ಮಪ್ರಧಾನಾಃ
ಸರ್ವೇ ಧರ್ಮಾ ಪಾಲ್ಯಮಾನಾ ಭವಂತಿ।
ಸರ್ವತ್ಯಾಗೋ ರಾಜಧರ್ಮೇಷು ರಾಜನ್
ತ್ಯಾಗೇ ಚಾಹುರ್ಧರ್ಮಮಗ್ರ್ಯಂ ಪುರಾಣಮ್ ॥೨೭॥

ಎಲ್ಲ ಧರ್ಮಗಳೂ ರಾಜಧರ್ಮವನ್ನೇ ಪ್ರಧಾನವಾಗಿ ಆಶ್ರಯಿಸಿವೆ. ರಾಜನಿಂದ ಪಾಲಿಸಲ್ಪಟ್ಟರೆ ಎಲ್ಲ ಧರ್ಮಾಚರಣೆಗಳೂ ನಡೆಯುತ್ತವೆ. ರಾಜನೇ! ಎಲ್ಲ ವಿಧವಾದ ತ್ಯಾಗವೂ ರಾಜಧರ್ಮಗಳಲ್ಲಿ ಅಡಕವಾಗಿವೆ. ತ್ಯಾಗವು ಪ್ರಾಚೀನವಾದ ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ.

ಮಜ್ಜೇತ್ ತ್ರಯೀದಂಡನೀತೌ ಹತಾಯಾಂ
ಸರ್ವೇ ಧರ್ಮಾ ನ ಭವೇಯುರ್ವಿರುದ್ಧಾಃ।
ಸರ್ವೇ ಧರ್ಮಾಶ್ಚಾಶ್ರಮಾಣಾಂ ಗತಾಃ ಸ್ಯುಃ
ಕ್ಷತ್ತ್ರೇ ತ್ಯಕ್ತೇ ರಾಜಧರ್ಮೇ ಪುರಾಣೇ ॥೨೮॥

ದಂಡನೀತಿಯು ಹತವಾದರೆ ವೇದವಿದ್ಯೆಯು ಮುಳುಗಿ ಹೋಗುತ್ತದೆ. ಎಲ್ಲ ಧರ್ಮಗಳೂ ವಿಶೇಷವಾಗಿ ಪ್ರತಿಬದ್ಧವಾಗಿ ಯಾವ ಧರ್ಮಾಚರಣೆಯೂ ನಡೆಯಲಾರದು. ರಾಜನಾದವನು ಪುರಾತನವಾದ ರಾಜಧರ್ಮವನ್ನು ತ್ಯಜಿಸಿದರೆ ಎಲ್ಲ ಆಶ್ರಮಧರ್ಮಗಳೂ ನಶಿಸಿಹೋದಾವು!

ಸರ್ವೇ ತ್ಯಾಗಾ ರಾಜಧರ್ಮೇಷು ದೃಷ್ಟಾಃ
ಸರ್ವಾ ದೀಕ್ಷಾ ರಾಜಧರ್ಮೇಷು ಚೋಕ್ತಾಃ ।

ಸರ್ವೇ ಯೋಗಾ ರಾಜಧರ್ಮೇಷು ಚೋಕ್ತಾಃ
ಸರ್ವೇ ಲೋಕಾ ರಾಜಧರ್ಮಾನ್ ಪ್ರವಿಷ್ಟಾಃ ॥೨೯॥

ರಾಜಧರ್ಮಗಳಲ್ಲಿ ಎಲ್ಲವಿಧವಾದ ತ್ಯಾಗಗಳೂ ದೃಷ್ಟವಾಗಿವೆ. ರಾಜಧರ್ಮ-ಗಳಲ್ಲಿ ಎಲ್ಲ ವಿಧವಾದ ದೀಕ್ಷೆಗಳು ಹೇಳಲ್ಪಟ್ಟಿವೆ. ರಾಜಧರ್ಮಗಳಲ್ಲಿ ಎಲ್ಲ ವಿಧವಾದ ಯೋಗಗಳು ಹೇಳಲ್ಪಟ್ಟಿವೆ. ಎಲ್ಲ ಲೋಕಗಳೂ ರಾಜಧರ್ಮಗಳಲ್ಲಿ ಸೇರಿಕೊಂಡಿವೆ.

ಯಥಾ ಜೀವಾಃ ಪ್ರಾಕೃತೈರ್ಬಾಧ್ಯಮಾನಃ
ಧರ್ಮಾಶ್ರಿತಾನಾಮುಪಪೀಡನಾಯ।
ಏವಂ ಧರ್ಮಾನ್ ರಾಜಧರ್ಮೈರ್ವಿಯುಕ್ತಾಃ
ಸಂಚಿನ್ವಂತೋ ನಾದ್ರಿಯಂತೇ ಸ್ವಧರ್ಮಮ್ ॥೩೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುಃಷಷ್ಟಿತಮೋऽಧ್ಯಾಯಃ ॥೬೪॥

ಪ್ರಾಕೃತಜನರಿಂದ ಪಶುಪಕ್ಷಿಜೀವರು ಬಂಧಿಸಿ ಪೀಡಿಸಲ್ಪಟ್ಟರೆ ಧರ್ಮಿಷ್ಠರಾದ-ವರಿಗೆ ದುಃಖವುಂಟಾಗುತ್ತದೆ. ಅದರಂತೆ ಧರ್ಮವನ್ನು ಮಾಡಲು ಬಯಸುವವರು ರಾಜಧರ್ಮಗಳಿಂದ ವಿಯುಕ್ತರಾಗಿ ಆದರದಿಂದ ತಮ್ಮ ಧರ್ಮವನ್ನು ಆಚರಿಸ-ದಿದ್ದರೆ ಸಜ್ಜನರಿಗೆ ಖೇದವುಂಟಾಗುತ್ತದೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೪ನೆಯ ಅಧ್ಯಾಯವು ಮುಗಿಯಿತು.

೬೫. ಅರವತ್ತೈದನೆಯ ಅಧ್ಯಾಯ

ರಾಜಧರ್ಮಪ್ರಶಂಸಾರೂಪವಾದ ಇಂದ್ರಮಾಂಧಾತೃಸಂವಾದಕಥನ

ಭೀಷ್ಮಃ

ಚಾತುರಾಶ್ರಮ್ಯಧರ್ಮಾಶ್ಚ ಜಾತಿಧರ್ಮಾಶ್ಚ ಪಾಂಡವ।
ಲೋಕವೇದೋತ್ತರಾಶ್ಚೈವ ಕ್ಷಾತ್ರೇ ಧರ್ಮೇ ವ್ಯವಸ್ಥಿತಾಃ ॥೧॥

ಭೀಷ್ಮರು – ಎಲೈ ಪಾಂಡವನೇ! ನಾಲ್ಕು ಆಶ್ರಮದ ಧರ್ಮಗಳು, ನಾಲ್ಕು ಜಾತಿಧರ್ಮಗಳು, ಲೋಕದಲ್ಲಿ ಆಚರಣೆಯಲ್ಲಿರುವ ಮತ್ತು ವೇದೋಕ್ತವಾದ ಧರ್ಮಗಳೂ ಸಹ ಕ್ಷತ್ರಿಯಧರ್ಮದಲ್ಲಿ ನೆಲೆಗೊಂಡಿವೆ.

ಸರ್ವಾಣ್ಯೇತಾನಿ ಧರ್ಮಾಣಿ ಕ್ಷಾತ್ರೇ ಭರತಸತ್ತಮ।
ನಿರಾಶಿಷೋ ಜೀವಲೋಕಾಃ ಕ್ಷಾತ್ರೇ ಧರ್ಮೇऽವ್ಯವಸ್ಥಿತೇ ॥೨॥

ಎಲೈ ಭರತಶ್ರೇಷ್ಠನೇ! ಈ ಎಲ್ಲ ಧರ್ಮಗಳೂ ಕ್ಷತ್ರಿಯಧರ್ಮದಲ್ಲಿ ಸೇರಿವೆ. ಅಂತಹ ಕ್ಷತ್ರಿಯಧರ್ಮವು ಅವ್ಯವಸ್ಥಿತವಾದರೆ ಜೀವಲೋಕವೆಲ್ಲವೂ ತಮ್ಮ ಆಸೆಗಳನ್ನು ಬಿಡಬೇಕಾಗುತ್ತದೆ.

ಅಪ್ರತ್ಯಕ್ಷಂ ಬಹುದ್ವಾರಂ ಧರ್ಮಮಾಶ್ರಮವಾಸಿನಾಮ್।
ಪ್ರದೂಷಯಂತಿ ತದ್ಭಾವಮಾಗಮೈರೇವ ಶಾಶ್ವತಮ್ ॥೩॥

ಆಶ್ರಮವಾಸಿಗಳ ಧರ್ಮವು ಅಗೋಚರವಾದುದು ಮತ್ತು ಬಹುಮುಖವಾದುದು. ಯಜ್ಞ, ಅಧ್ಯಯನ, ದಾನಾದಿಗಳ ಬಹುಪ್ರಕಾರವನ್ನು ಪ್ರತಿಪಾದಿಸುವ ವೇದಗಳಿಂದಲೇ ಶಾಶ್ವತವಾದ ಆ ಧರ್ಮದ ಇರುವಿಕೆಯು ತಿಳಿಯುತ್ತದೆ. ಅದನ್ನು ತಿಳಿಯದ ಜನರು ದೂಷಿಸುತ್ತಾರೆ.

ಅಪರೇ ವಚನೈಃ ಪುಣ್ಯೈರ್ವಾದಿನೋ ಲೋಕನಿಶ್ಚಯೇ।
ಅನಿಶ್ಚಯಜ್ಞಾ ಧರ್ಮಾಣಾಮದೃಷ್ಟಾಂತೇ ಪರೇ ರತಾಃ ॥೪॥

ಇನ್ನು ಕೆಲವರು ಸ್ವತಃ ಧರ್ಮವನ್ನು ನಿಶ್ಚಯಿಸಲು ಸಾಧ್ಯವಾಗದೇ ವೇದಗಳಿಂದಲೂ, ಸಜ್ಜನರ ವಚನಗಳಿಂದಲೂ ಲೋಕದಲ್ಲಿ ಮಾಡಬೇಕಾದ ಧರ್ಮಗಳನ್ನು ನಿಶ್ಚಯಿಸಿ ಧರ್ಮದಲ್ಲಿ ರತರಾಗಿರುತ್ತಾರೆ. ಇನ್ನು ಕೆಲವರು ಲೋಕದೃಷ್ಟಾಂತರಹಿತವಾದ ಸ್ವೇಚ್ಛಾಚಾರದಲ್ಲಿ ತೊಡಗುತ್ತಾರೆ.

ಪ್ರತ್ಯಕ್ಷಸುಖಭೂಯಿಷ್ಠಮಾತ್ಮಸಾಕ್ಷಿಕಮಚ್ಚಲಮ್।
ಸರ್ವಲೋಕಹಿತಂ ಧರ್ಮಂ ಕ್ಷತ್ರಿಯೇಷು ಪ್ರತಿಷ್ಠಿತಮ್ ॥೫॥

ಬಹಳವಾದ ಪ್ರತ್ಯಕ್ಷಫಲವನ್ನು ಕೊಡುವ, ಆತ್ಮಸಾಕ್ಷಿಕವಾದ, ಪರಿಶುದ್ಧವಾದ, ಸರ್ವಲೋಕಹಿತವಾದ ಧರ್ಮವು ಕ್ಷತ್ರಿಯರಲ್ಲಿ ಪ್ರತಿಷ್ಠಿತವಾಗಿದೆ.

ಧರ್ಮಾಶ್ರಮವ್ಯವಸಿನಾಂ ಬ್ರಾಹ್ಮಣಾನಾಂ ಯುಧಿಷ್ಠಿರ।
ಯಥಾ ತ್ರಯಾಣಾಂ ವರ್ಣಾನಾಂ ಸಂಖ್ಯಾತೋಪಶ್ರುತಿಃ ಪುರಾ।
ರಾಜಧರ್ಮೇಷ್ವನುಪಮಾ ಲೋಕ್ಯಾ ಸುಚರಿತೈರಿಹ ॥೬॥

ಎಲೈ ಯುಧಿಷ್ಠಿರನೇ! ಆಶ್ರಮಧರ್ಮವನ್ನು ಅನುಷ್ಠಾನಮಾಡಲು ಬಯಸುವ ಮೂರುವರ್ಣಗಳು ಬ್ರಾಹ್ಮಣರ ಧರ್ಮಗಳಿಗೆ ಅಧೀನವಾಗಿ ನಡೆಯುತ್ತವೆ ಎಂದು ಹಿಂದೆ ಹೇಳಿದಂತೆ, ಒಳ್ಳೆಯ ನಡತೆಯಿಂದುಂಟಾಗುವ ಲೋಕಧರ್ಮಗಳೆಲ್ಲವೂ ರಾಜಧರ್ಮಗಳನ್ನು ಅಸದೃಶವಾಗಿ ಅವಲಂಬಿಸುತ್ತವೆ.

ಉದಾಹೃತಂ ತೇ ರಾಜೇಂದ್ರ ಯಥಾ ವಿಷ್ಣುಂ ಮಹೌಜಸಮ್।
ಸರ್ವಭೂತೇಶ್ವರಂ ದೇವಂ ಪ್ರಭುಂ ನಾರಾಯಣಂ ಪುರಾ।
ಜಗ್ಮುಃ ಸುಬಹವಃ ಶೂರಾ ರಾಜಾನೋ ದಂಡನೀತಯೇ ॥೭॥

ಎಲೈ ರಾಜೇಂದ್ರನೇ! ಹಿಂದೆ ಶೂರರಾದ ಅನೇಕರಾಜರು ದಂಡನೀತಿಯನ್ನು ತಿಳಿಯಲು ಹೇಗೆ ಮಹಾಸಾಮರ್ಥ್ಯಶಾಲಿಯೂ, ಸರ್ವಭೂತೇಶ್ವರನೂ, ಪ್ರಭುವೂ, ಸರ್ವವ್ಯಾಪ್ತನೂ ಆದ ನಾರಾಯಣನನ್ನು ಸಮೀಪಿಸಿದರೆಂದು ನಿನಗೆ ಹೇಳಿದ್ದೇನೆ.

ಏಕೈಕಮಾತ್ಮನಃ ಕರ್ಮ ತುಲಯಿತ್ವಾಶ್ರಮೇ ಪುರಾ।
ರಾಜಾನಃ ಪರ್ಯುಪಾತಿಷ್ಠನ್ ದೃಷ್ಟಾಂತವಚನೇ ಸ್ಥಿತಾಃ ॥೮॥

ಒಬ್ಬೊಬ್ಬ ರಾಜರೂ ಹಿಂದೆ ತಮ್ಮ ಆಶ್ರಮಧರ್ಮಗಳನ್ನು ಉಳಿದ ಧರ್ಮಗಳ ಜೊತೆಗೆ ಹೋಲಿಸುತ್ತಾ ವಿಷ್ಣುವಿನ ವಚನವನ್ನು ನಿರೀಕ್ಷಿಸುತ್ತಾ, ಅವನ ಉಪಾಸನೆಯನ್ನು ಮಾಡಿದರು.

ಸಾಧ್ಯಾ ದೇವಾ ವಸವಶ್ಚಾಶ್ವಿನೌ ಚ
ರುದ್ರಾಶ್ಚ ವಿಶ್ವೇ ಮರುತಾಂ ಗಣಾಶ್ಚ।
ಸೃಷ್ಟಾಃ ಪುರಾ ಆದಿದೇವೇನ ದೇವಾ
ಕ್ಷಾತ್ರೇ ಧರ್ಮೇ ವರ್ತಯಂತೇ ಚ ಸಿದ್ಧಾಃ ॥೯॥

ಹಿಂದೆ ಆದಿದೇವನಾದ ನಾರಾಯಣನಿಂದ ಸೃಷ್ಟರಾದ ಸಾಧ್ಯರು, ವಸುಗಳು, ಅಶ್ವಿನಿಗಳು, ರುದ್ರರು, ವಿಶ್ವೇದೇವತೆಗಳು, ಮರುದ್ಗಣಗಳು ಮತ್ತು ಸಿದ್ಧರು ಮುಂತಾದ ದೇವತೆಗಳು ಕ್ಷತ್ರಿಯಧರ್ಮವನ್ನು ಅನುಸರಿಸಿ ಚಾಲನೆ ಮಾಡುತ್ತಾರೆ.

ಅತ್ರ ತೇ ವರ್ತಯಿಷ್ಯಾಮಿ ಧರ್ಮಮರ್ಥವಿನಿಶ್ಚಯಮ್।
ನಿರ್ಮರ್ಯಾದೇ ವರ್ತಮಾನೇ ದಾನವೈಕಾಯನೇ ಕೃತೇ।
ಬಭೂವ ರಾಜಾ ರಾಜೇಂದ್ರ ಮಾಂಧಾತಾ ನಾಮ ವೀರ್ಯವಾನ್ ॥೧೦॥

ಈ ವಿಷಯದಲ್ಲಿ ನಾನು ನಿನಗೆ ಧರ್ಮಾರ್ಥನಿಶ್ಚಾಯಕವಾದ ಒಂದು ಸಂವಾದ -ವನ್ನು ಹೇಳುವೆನು. ಎಲೈ ರಾಜೇಂದ್ರನೇ! ಲೋಕದಲ್ಲಿ ದಾನವರೇ ಹೆಚ್ಚಾಗಿ ಎಲ್ಲ ಧರ್ಮದ ಎಲ್ಲೆಗಳು ಮೀರಲ್ಪಟ್ಟಾಗ ಮಾಂಧಾತನೆಂಬ ಪರಾಕ್ರಮಶಾಲಿಯಾದ ರಾಜನು ಜನಿಸಿದನು.

ಪುರಾ ವಸುಮತೀಪಾಲೋ ಯಜ್ಞಂ ಚಕ್ರೇ ದಿದೃಕ್ಷಯಾ।
ಅನಾದಿಮಧ್ಯನಿಧನಂ ದೇವಂ ನಾರಾಯಣಂ ಪ್ರಭುಮ್ ॥೧೧॥

ಹಿಂದೆ ಆಗ ಭೂಪಾಲನಾದ ಅವನು ಅನಾದಿಮಧ್ಯನಿಧನನೂ, ಪ್ರಭುವೂ, ದೇವನೂ ಆದ ನಾರಾಯಣನನ್ನು ನೋಡಲು ಬಯಸಿ ಯಜ್ಞವನ್ನು ಮಾಡಿದನು.

ಸ ರಾಜಾ ರಾಜಶಾರ್ದೂಲ ಮಾಂಧಾತಾ ಪರಮೇಷ್ಠಿನಃ।
ಜಗ್ರಾಹ ಶಿರಸಾ ಪಾದೌ ಯಜ್ಞೇ ವಿಷ್ಣೋರ್ಮಹಾತ್ಮನಃ ॥೧೨॥

ಎಲೈ ರಾಜಶಾರ್ದೂಲನೇ! ಆ ಮಾಂಧಾತೃರಾಜನು ಯಜ್ಞದಲ್ಲಿ ಸರ್ವೋ-ತ್ತಮನಾದ ಮಹಾತ್ಮನಾದ ವಿಷ್ಣುವಿನ ಪಾದಗಳನ್ನು ಶಿರಸಾ ನಮಸ್ಕರಿಸಿ ಧ್ಯಾನಿಸಿ-ದನು.

ದರ್ಶಯಾಮಾಸ ತಂ ವಿಷ್ಣೂ ರೂಪಮಾಸ್ಥಾಯ ವಾಸವಮ್ ।
ಸ ಪಾರ್ಥಿವೈರ್ವ್ಯತಃ ಸದ್ಭಿರರ್ಚಯಾಮಾಸ ತಂ ಪ್ರಭುಮ್ ॥೧೩॥

ವಿಷ್ಣುವು ಇಂದ್ರನ ರೂಪವನ್ನು ಧರಿಸಿ ಇಂದ್ರನ ಅಂತರ್ಯಾಮಿಯಾಗಿ ಅವನಿಗೆ ದರ್ಶನವನ್ನು ನೀಡಿದನು. ಮಾಂಧಾತೃವು ಉಳಿದ ರಾಜರುಗಳ ಜೊತೆಯಲ್ಲಿ ಸೇರಿ ಆ ಪ್ರಭುವನ್ನು ಪೂಜಿಸಿದನು.

ತಸ್ಯ ಪಾರ್ಥಿವಸಂಘಸ್ಯ ತಸ್ಯ ಚೈವ ಮಹಾತ್ಮನಃ ।
ಸಂವಾದೋಽಯಂ ಮಹಾನಾಸೀದ್ ವಿಷ್ಣುಂ ಪ್ರತಿ ಮಹಾದ್ಯುತೇ ॥೧೪॥

ಎಲೈ ಮಹಾದ್ಯುತಿಯೇ! ಆ ರಾಜಸಂಘಕ್ಕೂ ಮತ್ತು ಮಹಾತ್ಮನಾದ ಇಂದ್ರ-ಅಂತರ್ಯಾಮಿಯಾದ ವಿಷ್ಣುವಿಗೂ ವಿಷ್ಣುವಿನ ಸ್ವರೂಪದ ವಿಷಯದಲ್ಲಿ ದೊಡ್ಡ ಸಂವಾದ ಉಂಟಾಯಿತು.

ಇಂದ್ರಃ

ಕಿಮಿಷ್ಯತೇ ಧರ್ಮಭೃತಾಂ ವರಿಷ್ಠ
ಯದ್ ದ್ರಷ್ಟುಕಾಮೋಽಸಿ ತಮಪ್ರಮೇಯಮ್ ।
ಅನಂತಮಾಯಾಮಿತಸತ್ತ್ವವೀರ್ಯಂ
ನಾರಾಯಣಂ ಹ್ಯಾದಿದೇವಂ ಪುರಾಣಮ್ ॥೧೫॥

ಇಂದ್ರ – ಧರ್ಮಿಷ್ಠರಲ್ಲಿ ಶ್ರೇಷ್ಠನೇ! ಅಪ್ರಮೇಯನೂ, ಅನಂತಸಾಮರ್ಥ್ಯೋಪೇತನೂ, ಅಮಿತಬಲಪರಾಕ್ರಮವುಳ್ಳವನೂ, ಪುರಾತನನೂ ಆದಿದೇವನೂ ಆದ ನಾರಾಯಣನನ್ನು ನೋಡಲು ಇಚ್ಛಿಸುತ್ತಿದ್ದೀಯೆ. ಅವನಿಂದ ಏನನ್ನು ಬಯಸುತ್ತೀಯೆ?

ನಾಸೌ ದೇವೋ ವಿಶ್ವರೂಪೋ ಮಯಾಪಿ
ಶಕ್ಯೋ ದ್ರಷ್ಟುಂ ಬ್ರಹ್ಮಣಾ ವಾಪಿ ಸಾಕ್ಷಾತ್ ।

ಯೇऽನ್ಯೇ ಕಾಮಾಸ್ತವ ರಾಜನ್ ಹೃದಿಸ್ಥಾ
ದಾಸ್ಯಾಮಿ ತಾಂಸ್ತ್ವಂ ಹಿ ಮರ್ತ್ಯೇಷು ರಾಜಾ ॥೧೬॥

ವಿಶ್ವರೂಪನಾದ ಆ ದೇವನನ್ನು ನಾನಾಗಲೀ, ಸಾಕ್ಷಾತ್ ಬ್ರಹ್ಮದೇವರೇ ಆಗಲಿ ನೋಡಲಾರೆವು. ಎಲೈ ರಾಜನೇ! ನಿನ್ನ ಮನಸ್ಸಿನಲ್ಲಿರುವ ಕಾಮನೆಗಳನ್ನು ನಾನು ನಿನಗೆ ಕೊಡುವೆನು. ಏಕೆಂದರೆ, ನೀನು ಮನುಷ್ಯರಲ್ಲಿ ರಾಜನಾಗಿದ್ದೀಯೆ.

ಸತ್ಯೇ ಸ್ಥಿತೋ ಧರ್ಮಪರೋ ಜಿತೇಂದ್ರಿಯಃ
ಶೂರೋ ದೃಢಂ ಪ್ರೀತಿರತಃ ಸುರಾಣಾಮ್ ।
ಬುದ್ಧ್ಯಾ ಭಕ್ತ್ಯಾ ಚೋತ್ತಮಶ್ರದ್ಧಯಾ ಚ
ತತಸ್ತೇऽಹಂ ದದ್ಮಿ ವರಂ ಯಥೇಷ್ಟಮ್ ॥೧೭॥

ನೀನು ಸತ್ಯದಲ್ಲಿ ರತನಾಗಿ, ಧರ್ಮಪರನಾಗಿ, ಜಿತೇಂದ್ರಿಯನಾಗಿ, ಶೂರನಾಗಿದ್ದೀಯೆ. ಅವುಗಳಿಂದಲೂ ನಿನ್ನ ಬುದ್ಧಿ, ಭಕ್ತಿ ಮತ್ತು ಉತ್ತಮಶ್ರದ್ಧೆಯಿಂದಲೂ ದೇವತೆಗಳಿಗೆ ನಿನ್ನ ಮೇಲೆ ದೃಢವಾದ ಪ್ರೀತಿಯಿದೆ. ಆದ್ದರಿಂದ ನಾನು ನಿನಗೆ ಅಭೀಷ್ಟವಾದ ವರವನ್ನು ಕೊಡುತ್ತೇನೆ.

ಮಾಂಧಾತಾ

ಅಸಂಶಯಂ ಭಗವನ್ನಾದಿದೇವಂ
ದ್ರಕ್ಷ್ಯಾಮ್ಯಹಂ ಶಿರಸಾऽಹಂ ಪ್ರಪದ್ಯೇ ।
ತ್ಯಕ್ತ್ವಾ ಭೋಗಾನ್ ಧರ್ಮಕಾಮೋ ಹ್ಯರಣ್ಯಮ್
ಇಚ್ಛೇ ಗಂತುಂ ಸತ್ಪಥಂ ಲೋಕಜುಷ್ಟಮ್ ॥೧೮॥

ಮಾಂಧಾತಾ – ಪೂಜ್ಯನೇ! ನಾನು ನಿಸ್ಸಂಶಯವಾಗಿ ಆದಿದೇವನಾದ ನಾರಾಯಣನನ್ನು ನೋಡಲು ಬಯಸುತ್ತೇನೆ. ನಾನು ಅವನಿಗೆ ಶಿರಸಾ ಶರಣಾಗತನಾಗುತ್ತೇನೆ. ನಾನು ಎಲ್ಲ ಭೋಗಗಳನ್ನೂ ತೊರೆದು ಧರ್ಮದ ಉದ್ದೇಶ-

ವುಳ್ಳವನಾಗಿ ಲೋಕದಲ್ಲಿ ಸಜ್ಜನರು ಅನುಸರಿಸುವ ಅರಣ್ಯವಾಸವನ್ನು ಮಾಡಲು ಬಯಸುತ್ತೇನೆ.

ಕ್ಷಾತ್ರಾದ್ ಧರ್ಮಾದ್ ವಿಪುಲಾದಪ್ರಮೇಯಾ-
ಲ್ಲೋಕಾಃ ಪ್ರಾಪ್ತಾಃ ಸ್ಥಾಪಿತಂ ಸ್ವಂ ಯಶಶ್ಚ।
ಧರ್ಮೋ ಯೋಽಸಾವಾದಿದೇವಾತ್ ಪ್ರವೃತ್ತೋ
ಲೋಕಜ್ಯೇಷ್ಠಸ್ತಂ ನ ಜಾನಾಮಿ ಕರ್ತುಮ್ ॥೧೯॥

ಅಪ್ರಮೇಯವಾದ ವಿಪುಲವಾದ ಕ್ಷತ್ರಿಯಧರ್ಮದಿಂದ ನನಗೆ ಲೋಕಗಳು ಪ್ರಾಪ್ತವಾಗಿವೆ. ನನ್ನ ಕೀರ್ತಿಯನ್ನು ಸ್ಥಾಪಿಸಿದ್ದೇನೆ. ಆದರೆ ಆದಿದೇವನಾದ ನಾರಾಯಣನಿಂದ ಪ್ರವೃತ್ತವಾದ ಸರ್ವಶ್ರೇಷ್ಠವಾದ ಧರ್ಮವನ್ನು ಆಚರಿಸಲು ನಾನು ತಿಳಿದಿಲ್ಲ.

ಇಂದ್ರಃ

ಅಸೈನಿಕಾ ಧರ್ಮಪರಾಶ್ಚ ಧರ್ಮೇ
ಪರಾಂ ಗತಿಂ ನ ನಯಂತೇಽಮುತ್ರ।
ಕ್ಷಾತ್ರೋ ಧರ್ಮೋ ಹ್ಯಾದಿದೇವಾತ್ ಪ್ರವೃತ್ತಃ
ಪಶ್ಚಾದನ್ಯೇ ಶೇಷಭೂತಾಶ್ಚ ಧರ್ಮಾಃ ॥೨೦॥

ಇಂದ್ರ – ಧರ್ಮಪರರಾದ ರಾಜರು ಸೇನೆ ಮೊದಲಾದ ರಾಜ್ಯವನ್ನು ಬಿಟ್ಟು ಅರಣ್ಯಕ್ಕೆ ಹೋಗಿ ಧರ್ಮಾನುಷ್ಠಾನಮಾಡಿದರೂ ಅವರಿಗೆ ಪರಲೋಕದಲ್ಲಿ ಶ್ರೇಷ್ಠವಾದ ಗತಿಯಾಗುವುದಿಲ್ಲ. ಕ್ಷತ್ರಿಯಧರ್ಮವು ಆದಿದೇವನಾದ ನಾರಾಯಣನಿಂದ ಪ್ರವೃತ್ತವಾದುದು. ಉಳಿದ ಧರ್ಮಗಳು ಅನಂತರ ರಾಜಧರ್ಮಕ್ಕೆ ಅಂಗವಾಗಿ ಪ್ರವೃತ್ತವಾದವು.

ಶೇಷಾಃ ಸೃಷ್ಟಾ ಹ್ಯಂತವಂತೋ ಹ್ಯನಂತಾಃ
ಸುಪ್ರಸ್ಥಾನಾಃ ಕ್ಷತ್ರಧರ್ಮಾ ವಿಶಿಷ್ಟಾಃ।

ಅಸ್ಮಿನ್ ಧರ್ಮೇ ಸರ್ವಧರ್ಮಾಃ ಪ್ರವಿಷ್ಟಾಃ
ತಸ್ಮಾದ್ ಧರ್ಮಂ ಶ್ರೇಷ್ಠಮಿಮಂ ವದಂತಿ ॥೨೧॥

ಉಳಿದ ಧರ್ಮಗಳ ಫಲವು ಅಂತವುಳ್ಳದ್ದು. ಕ್ಷತ್ರಿಯಧರ್ಮವು ಅನೇಕ ಅಂಗಭೂತವಾದ ಧರ್ಮಗಳ ವಿಸ್ತಾರಕ್ಕೆ ಕಾರಣವಾಗಿದೆ. ಕ್ಷತ್ರಿಯ ಧರ್ಮದಲ್ಲಿ ಎಲ್ಲಾ ಧರ್ಮಗಳೂ ಅಂತರ್ಭೂತವಾಗಿವೆ. ಆದ್ದರಿಂದ ಅದನ್ನು ಶ್ರೇಷ್ಠವೆಂದು ಹೇಳುತ್ತಾರೆ.

ಕರ್ಮಣಾ ವೈ ಪುರಾ ದೇವಾ ಋಷಯಶ್ಚಾಮಿತೌಜಸಃ।
ತ್ರಾತಾಃ ಸರ್ವೇ ಪ್ರಸಾದ್ಯಾರೀನ್ ಕ್ಷತ್ರಧರ್ಮೇಣ ವಿಷ್ಣುನಾ ॥೨೨॥

ಕ್ಷತ್ರಧರ್ಮವನ್ನು ಅನುಸರಿಸಿದ ವಿಷ್ಣುವು ಹಿಂದೆ ತನ್ನ ಕ್ರಿಯೆಯಿಂದ ಶತ್ರುಗಳನ್ನು ಸಂಹರಿಸಿ ಎಲ್ಲಾ ಋಷಿಗಳನ್ನೂ ಮತ್ತು ಅಮಿತಪರಾಕ್ರಮಿಗಳಾದ ದೇವತೆಗಳನ್ನೂ ರಕ್ಷಿಸಿದನು.

ಯದಿ ಹ್ಯಸೌ ಭಗವಾನ್ನಾಹನಿಷ್ಯದ್
ರಿಪೂನ್ ಸರ್ವಾನ್ ವಸುಮಾನಪ್ರಮೇಯಃ।
ನ ಚ ಬ್ರಹ್ಮಾ ನ ಚ ಲೋಕಾಧಿಕರ್ತಾ
ನ ಸದ್ಧರ್ಮಾ ನಾದಿಧರ್ಮಾ ಭವೇಯುಃ ॥೨೩॥

ಶ್ರೀಮಂತನೂ, ಅಪ್ರಮೇಯನೂ ಆದ ಈ ಭಗವಂತನು ಎಲ್ಲಾ ಶತ್ರುಗಳನ್ನೂ ಸಂಹರಿಸದಿದ್ದರೆ ಲೋಕಾಧಿಪತಿಯಾದ ಬ್ರಹ್ಮನಾಗಲೀ ಸದ್ಧರ್ಮಗಳಾಗಲೀ ಅನಾದಿ ಧರ್ಮಗಳಾಗಲೀ ಉಳಿಯುತ್ತಿರಲಿಲ್ಲ.

ಇಮಾಮುರ್ವೀಂ ನ ಜಯೇದ್ ವಿಕ್ರಮೇಣ
ದೇವಶ್ರೇಷ್ಠೋಽಸೌ ಪುರಾ ಚೇದಮೇಯಃ।
ಚಾತುರ್ವರ್ಣ್ಯಂ ಚಾತುರಾಶ್ರಮ್ಯಧರ್ಮಾಃ
ಸರ್ವೇ ನ ಸ್ಯುರ್ಬ್ರಹ್ಮಣೋ ವೈ ವಿನಾಶಾತ್ ॥೨೪॥

ದೇವಶ್ರೇಷ್ಠನೂ, ಅಪ್ರಮೇಯನೂ ಆದ ಇವನು ತನ್ನ ಪರಾಕ್ರಮದಿಂದ ಈ ಭೂಮಿಯನ್ನು ಜಯಿಸದಿದ್ದರೆ ವೇದಗಳು ನಾಶವನ್ನು ಹೊಂದಿ ಎಲ್ಲಾ ಚಾತುರ್ವರ್ಣ್ಯಧರ್ಮಗಳೂ, ಚಾತುರಾಶ್ರಮ್ಯಧರ್ಮಗಳೂ ವಿನಾಶವನ್ನು ಹೊಂದುತ್ತಿದ್ದವು.

ದೃಷ್ಟ್ವಾ ಧರ್ಮಾಃ ಶತಧಾ ಶಾಶ್ವತೇನ
ಕ್ಷತ್ರೇಣ ಧರ್ಮೇಣ ಪುನಃ ಪ್ರವೃತ್ತಾಃ।
ಯುಗೇ ಯುಗೇ ಹ್ಯಾದಿದೇವಾತ್ ಪ್ರವೃತ್ತಾಃ
ಲೋಕಜ್ಯೇಷ್ಠಂ ಕ್ಷತ್ರಧರ್ಮಂ ವದಂತಿ ॥೨೫॥

ಶಾಶ್ವತನಾದ ಇವನು ಆಲೋಚಿಸಿದ ನೂರಾರು ಧರ್ಮಗಳನ್ನು ಇವನು ಕ್ಷತ್ರಧರ್ಮವನ್ನು ಅವಲಂಬಿಸಿ ಪುನಃ ಪ್ರವರ್ತಿಸಿದನು. ಪ್ರತಿಯೊಂದು ಯುಗದಲ್ಲಿಯೂ ಆದಿದೇವನಿಂದ ಲೋಕಜ್ಯೇಷ್ಠವಾದ ಕ್ಷತ್ರಿಯ ಧರ್ಮವು ಪ್ರವೃತ್ತವಾಗುತ್ತದೆ ಎಂದು ಹೇಳುತ್ತಾರೆ.

ಆತ್ಮತ್ಯಾಗಃ ಸರ್ವಭೂತಾನುಕಂಪಾ
ಲೋಕಜ್ಞಾನಂ ಮೋಕ್ಷಣಂ ಪಾಲನಂ ಚ।
ವಿಷಣ್ಣಾನಾಂ ಮೋಕ್ಷಣಂ ಪೀಡಿತಾನಾಂ
ಕ್ಷತ್ರೇ ಧರ್ಮೇ ವಿದ್ಯತೇ ಪಾರ್ಥಿವಾನಾಮ್ ॥೨೬॥

ದೇಹತ್ಯಾಗ, ಸರ್ವಭೂತಗಳಲ್ಲಿ ದಯೆ, ಲೋಕಜ್ಞಾನ, ಕಷ್ಟಗಳಿಂದ ಬಿಡಿಸುವುದು, ರಕ್ಷಣೆಯನ್ನು ಮಾಡುವುದು, ವಿಷಾದದಿಂದ ಪೀಡಿತರಾದವರಿಗೆ ವಿಷಾದವನ್ನು ಪರಿಹಾರ ಮಾಡುವುದು. ಇವೆಲ್ಲವೂ ರಾಜರಿಗೆ ಇರುವ ಕ್ಷತ್ರಿಯಧರ್ಮದಲ್ಲಿ ಇವೆ.

ನಿರ್ಮರ್ಯಾದಾಃ ಕಾಮಮನ್ಯುಪ್ರವೃತ್ತಾ
ಭೀತಾ ರಾಜ್ಞೋ ನಾಧಿಗಚ್ಛಂತಿ ಪಾಪಮ್।
ಶಿಷ್ಟಶ್ಚಾನ್ಯೇ ಸರ್ವಧರ್ಮೋಪಪನ್ನಾಃ
ಸಾಧ್ವಾಚಾರಾಃ ಸಾಧು ಧರ್ಮಂ ಚರಂತಿ ॥೨೭॥

ಮರ್ಯಾದೆಯನ್ನು ಮೀರಿ, ಕಾಮಕ್ರೋಧಗಳಿಗೆ ವಶರಾಗಿ, ದುಷ್ಕಾರ್ಯ-ಗಳನ್ನು ಮಾಡುವವರೂ ಸಹ ರಾಜನಿಗೆ ಹೆದರಿ ದುಷ್ಕರ್ಮಗಳನ್ನು ಮಾಡುವುದನ್ನು ನಿಲ್ಲಿಸುತ್ತಾರೆ. ಉಳಿದ ಶಿಷ್ಟರಂತೂ ಎಲ್ಲ ಧರ್ಮಗಳಿಂದ ಕೂಡಿದವರಾಗಿ ಒಳ್ಳೆಯ ಆಚಾರವಂತರಾಗಿ ಒಳ್ಳೆಯ ಧರ್ಮವನ್ನೇ ಆಚರಿಸುತ್ತಾರೆ.

ಪುತ್ರವತ್ ಪರಿಪಾಲ್ಯಾನಿ ಲಿಂಗಧರ್ಮೇಣ ಪಾರ್ಥಿವೈಃ।
ಲೋಕೇ ಭೂತಾನಿ ಸರ್ವಾಣಿ ವಿಚರಂತಿ ನ ಸಂಶಯಃ ॥೨೮॥

ರಾಜರು ತಮ್ಮ ಕ್ಷತ್ರಿಯಧರ್ಮದಿಂದ ಎಲ್ಲರನ್ನೂ ಪುತ್ರರಂತೆ ಪರಿಪಾಲಿಸ-ಬೇಕು. ಹಾಗೆ ಮಾಡಿದರೆ ಲೋಕದಲ್ಲಿ ಎಲ್ಲರೂ ನಿರ್ಭಯವಾಗಿ ಸಂಚರಿಸುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲ.

ಸರ್ವಧರ್ಮಪರಂ ಕ್ಷತ್ರಂ ಲೋಕಜ್ಯೇಷ್ಠಂ ಸನಾತನಮ್।
ಶಶ್ವದಕ್ಷರಪರ್ಯಂತಮಕ್ಷರಂ ಸರ್ವತೋಮುಖಮ್ ॥೨೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಧರ್ಮಣಿ ರಾಜಧರ್ಮೇ ಪಂಚಷಷ್ಟಿತಮೋऽಧ್ಯಾಯಃ ॥೬೫॥

ಕ್ಷತ್ರಿಯಧರ್ಮವು ಲೋಕದಲ್ಲಿ ಶ್ರೇಷ್ಠವಾದುದು. ಸನಾತನವಾದುದು ಮತ್ತು ಸರ್ವಧರ್ಮಕ್ಕಿಂತಲೂ ಉತ್ತಮವಾದುದು. ಶಾಶ್ವತವಾದುದು. ಅದು ಸರ್ವತೋ-ಮುಖವಾಗಿ ಅಂತ್ಯದಲ್ಲಿ ಅಕ್ಷರನಾದ ಪರಮಾತ್ಮನ ಪ್ರಾಪ್ತಿಯವರೆಗೂ ಕರೆದು-ಕೊಂಡು ಹೋಗುವಂತಹದು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೫ನೆಯ ಅಧ್ಯಾಯವು ಮುಗಿಯಿತು

—0—

೬೬. ಅರವತ್ತಾರನೆಯ ಅಧ್ಯಾಯ

ಇಂದ್ರಮಾಂಧಾತೃಸಂವಾದಾನುವಾದ

ಇಂದ್ರಃ

ಏವಂವೀರ್ಯಃ ಸರ್ವಧರ್ಮೋಪಪನ್ನಃ
ಕ್ಷತ್ರಃ ಶ್ರೇಷ್ಠಃ ಸರ್ವಧರ್ಮೇಷು ಧರ್ಮಃ।
ಉತ್ಕೃಷ್ಟವ್ಯಾಃ ಕ್ಷತ್ರಿಯೈರೇಷ ಧರ್ಮಃ
ವಿಪರ್ಯಯೇ ಸ್ಯಾದಭಾವಃ ಪ್ರಜಾನಾಮ್ ॥೧॥

ಇಂದ್ರ – ಇಂತಹ ಸಾಮರ್ಥ್ಯವನ್ನು ಹೊಂದಿ ಸರ್ವಧರ್ಮಗಳಿಂದ ಕೂಡಿರುವ ಕ್ಷತ್ರಿಯಧರ್ಮವು ಎಲ್ಲ ಧರ್ಮಗಳಲ್ಲಿಯೂ ಶ್ರೇಷ್ಠವಾದುದು. ಕ್ಷತ್ರಿಯರು ಈ ಧರ್ಮಗಳನ್ನು ಉತ್ಕರ್ಷಸ್ಥಿತಿಗೆ ಏರಿಸಬೇಕು. ಇಲ್ಲದಿದ್ದರೆ ಪ್ರಜೆಗಳ ನಾಶವುಂಟಾದೀತು.

ಭುವಃ ಸಂಸ್ಕಾರಂ ರಾಜಸಂಸ್ಕಾರಯೋಗಮ್
ಅಭೈಕ್ಷಚರ್ಯಾ ಪಾಲನಂ ಚ ಪ್ರಜಾನಾಮ್।
ವಿದ್ಯಾದ್ ರಾಜಾ ಸರ್ವಭೂತಾನುಕಂಪಾ
ದೇಹತ್ಯಾಗಂ ಚಾಹವೇ ಧರ್ಮಮಗ್ರ್ಯಮ್ ॥೨॥

ಭೂಮಿಯ ಫಲವತ್ತತೆಯನ್ನು ಕಾಪಾಡುವುದು, ಕ್ಷತ್ರಿಯನಿಗೆ ಯೋಗ್ಯವಾದ ಸಂಸ್ಕಾರಗಳನ್ನು ಮಾಡುವುದು, ಭಿಕ್ಷೆಯನ್ನು ಬೇಡದಿರುವುದು, ಪ್ರಜಾಪಾಲನೆಯನ್ನು ಮಾಡುವುದು, ಸರ್ವಭೂತದಯೆ ಇವು ಕ್ಷತ್ರಿಯರ ಧರ್ಮಗಳು. ಯುದ್ಧದಲ್ಲಿ ದೇಹತ್ಯಾಗವನ್ನು ಮಾಡುವುದು ಕ್ಷತ್ರಿಯನಿಗೆ ಅತ್ಯಂತ ಶ್ರೇಷ್ಠವಾದ ಧರ್ಮವೆಂದು ತಿಳಿಯಬೇಕು.

ತ್ಯಾಗಂ ಶ್ರೇಷ್ಠಂ ಮುನಯೋ ವೈ ವದಂತಿ
ಸರ್ವಶ್ರೇಷ್ಠೋ ಯಃ ಶರೀರಂ ತ್ಯಜೇತ।

ನಿತ್ಯಂ ತ್ಯಕ್ತಂ ರಾಜಧರ್ಮೇಷು ಸರ್ವಂ
ಪ್ರತ್ಯಕ್ಷಂ ತೇ ಭೂಮಿಪಾಲಾಃ ಸದೈತೇ ॥೩॥

ತ್ಯಾಗವು ಶ್ರೇಷ್ಠವಾದುದೆಂದು ಋಷಿಗಳು ಹೇಳುತ್ತಾರೆ. ಅದರಲ್ಲಿಯೂ (ಧರ್ಮಯುದ್ಧದಲ್ಲಿ) ಶರೀರತ್ಯಾಗವು ಅತ್ಯಂತಶ್ರೇಷ್ಠವಾದುದು. ರಾಜಧರ್ಮ-ಗಳಲ್ಲಿ ಪ್ರವೃತ್ತರಾದವರು ನಿತ್ಯವೂ ಎಲ್ಲವನ್ನೂ ತ್ಯಜಿಸಿರುತ್ತಾರೆ. ಅಂತಹ ಈ ರಾಜರು ನಿನ್ನ ಕಣ್ಣೆದುರಿಗೇ ಇದ್ದಾರೆ.

ಬಹುಶ್ರುತ್ಯಾ ಗುರುಶುಶ್ರೂಷಯಾ ವಾ
ಪರಸ್ಯ ವಾ ಸಂಹನನಾದ್ ವದಂತಿ।
ನಿತ್ಯಂ ಧರ್ಮಂ ಕ್ಷತ್ರಿಯೋ ಬ್ರಹ್ಮಚಾರೀ
ಚರೇದೇಕೋ ಹ್ಯಾಶ್ರಮಂ ಧರ್ಮಕಾಮಃ ॥೪॥

ಬಹಳವಾಗಿ ಶ್ರವಣ ಮಾಡುವುದರಿಂದ, ಗುರುಶುಶ್ರೂಷೆಯಿಂದ ಮತ್ತು ಸಹಾಧ್ಯಾಯಿಗಳ ಜೊತೆಯಲ್ಲಿ ಚರ್ಚಿಸುವುದರಿಂದ ಧರ್ಮದ ಜ್ಞಾನವುಂಟಾ-ಗುತ್ತದೆ ಎಂದು ಹೇಳುತ್ತಾರೆ. ಧರ್ಮಕಾಮನೆಯುಳ್ಳ ಕ್ಷತ್ರಿಯ ಬ್ರಹ್ಮಚಾರಿಯು ಏಕಾಕಿಯಾಗಿ ತನ್ನ ಆಶ್ರಮಧರ್ಮಗಳನ್ನು ಅನುಷ್ಠಾನ ಮಾಡಬೇಕು.

ಸಾಮಾನ್ಯಾರ್ಥೇ ವ್ಯವಹಾರೇ ಪ್ರವೃತ್ತೇ
ಪ್ರಿಯಾಪ್ರಿಯೇ ವರ್ಜಯನ್ನೇವ ಯತ್ನಾತ್।
ಚಾತುರ್ವರ್ಣ್ಯಸ್ಥಾಪನಾತ್ ಪಾಲನಾಚ್ಚ
ತೈಸ್ತೈರ್ಯೋಗೈರ್ನಿಯಮೈರೌರಸೈಶ್ಚ ॥೫॥

ರಾಜ್ಯದ ಪ್ರಜೆಗಳ ಸಾಮಾನ್ಯ ವ್ಯವಹಾರಗಳಲ್ಲಿ ಪ್ರಿಯಾಪ್ರಿಯಗಳನ್ನು ಪ್ರಯತ್ನ-ಪೂರ್ವಕವಾಗಿ ವರ್ಜಿಸಿ (ಪಕ್ಷಪಾತವನ್ನು ಮಾಡದೇ), ಆಯಾ ಸ್ವಾಭಾವಿಕ ನಿಯಮಗಳಿಂದ ಉಪಾಯಗಳಿಂದ ಮತ್ತು ತನ್ನ ಸಾಮರ್ಥ್ಯದಿಂದ ಚಾತುರ್ವರ್ಣ್ಯ-ಧರ್ಮವನ್ನು ಸ್ಥಾಪನೆ ಮಾಡಿ ರಕ್ಷಣೆ ಮಾಡುವುದರಿಂದ (ಕ್ಷತ್ರಿಯಧರ್ಮವು ಶ್ರೇಷ್ಠವಾಗುತ್ತದೆ).

ಸರ್ವೋದ್ಯೋಗೈರಾಶ್ರಮಂ ಧರ್ಮಮಾಹುಃ
ಕ್ಷಾತ್ರಂ ಜ್ಯೇಷ್ಠಂ ಸರ್ವಧರ್ಮೋಪಪನ್ನಮ್ ।
ಸ್ವಂ ಸ್ವಂ ಧರ್ಮಂ ಯೇ ನ ಚರಂತಿ ವರ್ಣಾಃ
ತಾಂಸ್ತಾನ್ ಧರ್ಮಾನಯಥಾವದ್ ವದಂತಿ ॥೬॥

ಸರ್ವಪ್ರಯತ್ನದಿಂದಲೂ ಆಯಾ ಆಶ್ರಮಧರ್ಮಗಳನ್ನು ಪಾಲಿಸುವುದು ಧರ್ಮವೆಂದು ಹೇಳುತ್ತಾರೆ. ಸರ್ವಧರ್ಮಗಳಿಂದ ಕೂಡಿದ ಕ್ಷತ್ರಿಯಧರ್ಮವು ಅದರಲ್ಲಿ ಶ್ರೇಷ್ಠವಾದುದು. ಯಾವ ವರ್ಣದವರು ತಮ್ಮ ತಮ್ಮ ಧರ್ಮಗಳನ್ನು ಆಚರಿಸುವುದಿಲ್ಲವೋ ಅಂತಹವರಿಗೆ ಆಚರಿಸದ ಧರ್ಮಗಳು ವಿಪರೀತಫಲವನ್ನು ಕೊಡುತ್ತವೆ.

ನಿರ್ಮರ್ಯಾದೇ ನಿತ್ಯಮರ್ಥೇ ನಿವಿಷ್ಟಾನ್
ಆಹುಸ್ತಾನ್ ವೈ ಪಶುಭೂತಾನ್ ಮನುಷ್ಯಾನ್ ।
ಯಥಾ ನೀತಿಂ ಗಮಯತ್ಯರ್ಥಯೋಗಾತ್
ಶ್ರೇಯಾಂಸ್ತಸ್ಮಾದಾಶ್ರಮಾತ್ ಕ್ಷತ್ರಧರ್ಮಃ ॥೭॥

ಎಲ್ಲ ಮರ್ಯಾದೆಯನ್ನೂ ಮೀರಿ, ನಿತ್ಯವೂ ಧನಾರ್ಜನೆಯಲ್ಲಿಯೇ ನಿರತರಾದ ಮನುಷ್ಯರನ್ನು ಪಶುಗಳೆಂದು ಹೇಳುತ್ತಾರೆ. ಕ್ಷತ್ರಿಯಧರ್ಮವನ್ನು ಸರಿಯಾಗಿ ಪಾಲಿಸಿದರೆ ಅಂತಹವರನ್ನು ಧನಾದಿದಾನದಿಂದ ಸನ್ಮಾರ್ಗಕ್ಕೆ ತರುವುದರಿಂದ ಉಳಿದ ಎಲ್ಲಾ ಆಶ್ರಮಧರ್ಮಗಳಿಗಿಂತ ಕ್ಷತ್ರಿಯಧರ್ಮವು ಶ್ರೇಷ್ಠವಾದುದು.

ತ್ರೈವಿದ್ಯಾನಾಂ ಯಾ ಗತಿರ್ಬ್ರಾಹ್ಮಣಾನಾಂ
ಯಜ್ಞೈರ್ಯೋಕ್ತೋऽಥಾಶ್ರಮೋ ಬ್ರಾಹ್ಮಣಾನಾಮ್ ।
ಏತತ್ ಕರ್ಮ ಬ್ರಾಹ್ಮಣಸ್ಯಾಹುರಗ್ರ್ಯಮ್
ಅನ್ಯತ್ ಕುರ್ವನ್ ಶೂದ್ರವಚ್ಛಸ್ತ್ರವಧ್ಯಃ ॥೮॥

ಮೂರು ವೇದಗಳನ್ನು ಅಧ್ಯಯನ ಮಾಡಿದ ಬ್ರಾಹ್ಮಣರಿಗೆ ಯಾವ ಯಜ್ಞಾದಿ

ಆಚಾರವಿದೆಯೋ ಮತ್ತು ಬ್ರಾಹ್ಮಣರಿಗೆ ವೇದಗಳಲ್ಲಿ ಹೇಳಿದ ಯಾವ ಆಶ್ರಮ-ಧರ್ಮಗಳಿವೆಯೋ ಅವೇ ಬ್ರಾಹ್ಮಣರ ಶ್ರೇಷ್ಠವಾದ ಕರ್ತವ್ಯ ಕರ್ಮವು. ಬ್ರಾಹ್ಮಣನು ಅವುಗಳನ್ನು ಬಿಟ್ಟು ಬೇರೆ ಕರ್ಮವನ್ನು ಮಾಡಿದರೆ ಅವನು ಶೂದ್ರನಂತೆ ಶಸ್ತ್ರದಿಂದ ವಧೆಗೆ ಅರ್ಹನಾಗುತ್ತಾನೆ.

ಚಾತುರಾಶ್ರಮ್ಯಧರ್ಮಾಶ್ಚ ವೇದಧರ್ಮಾಶ್ಚ ಪಾರ್ಥಿವ।
ಬ್ರಾಹ್ಮಣೇನಾನುಗಂತವ್ಯಾ ನಾನ್ಯೋ ವಿದ್ಯಾತ್ ಕಥಂಚನ ॥೯॥

ಎಲೈ ರಾಜನೇ! ಚತುರಾಶ್ರಮಧರ್ಮಗಳನ್ನು ಮತ್ತು ವೇದಧರ್ಮಗಳನ್ನು ಬ್ರಾಹ್ಮಣನು ತಿಳಿದು ಅನುಸರಿಸಬೇಕು. ಬ್ರಾಹ್ಮಣನನ್ನು ಬಿಟ್ಟು ಅವುಗಳನ್ನು ಇನ್ನೊಬ್ಬನು ತಿಳಿಯಲಾರನು.

ಅನ್ಯಥಾ ವರ್ತಮಾನಸ್ಯ ನ ಸಾ ವೃತ್ತಿಃ ಪ್ರಕಲ್ಪ್ಯತೇ।
ಕರ್ಮಣಾ ವ್ಯಜ್ಯತೇ ಧರ್ಮೋ ಯಥಾ ಧರ್ಮಸ್ತಥೈವ ಸಃ ॥೧೦॥

ಶಾಸ್ತ್ರೋಕ್ತಮಾರ್ಗಕ್ಕಿಂತ ಭಿನ್ನರೀತಿಯಲ್ಲಿ ನಡೆದುಕೊಳ್ಳುವ ಮನುಷ್ಯನಿಗೆ ಅವನ ವೃತ್ತಿಯು ಇರುವುದಿಲ್ಲ. ಅವನು ಮಾಡುವ ಕರ್ಮದಿಂದ ಅವನ ಧರ್ಮವು ತಿಳಿದು ಬರುತ್ತದೆ. ಮನುಷ್ಯನ ಧರ್ಮವು ಹೇಗೆ ಇರುತ್ತದೆಯೋ ಅವನ ಸ್ವಭಾವವೂ ಅಂತಹುದೇ ಆಗಿರುತ್ತದೆ.

ಯೋ ವಿಕರ್ಮಸ್ಥಿತೋ ವಿಪ್ರೋ ನ ಸ ಸನ್ಮಾನಮರ್ಹತಿ।
ಕರ್ಮಸ್ವನುಪಯುಂಜಾನಮವಿಶ್ವಾಸ್ಯಂ ಹಿ ತಂ ವಿದುಃ ॥೧೧॥

ವಿಕರ್ಮನಿರತನಾದ ಬ್ರಾಹ್ಮಣನು ಸನ್ಮಾನಕ್ಕೆ ಯೋಗ್ಯನಾಗುವುದಿಲ್ಲ. ತನ್ನ ಕರ್ಮಗಳನ್ನು ಮಾಡದಿರುವ ಬ್ರಾಹ್ಮಣನು ವಿಶ್ವಾಸಕ್ಕೂ ಪಾತ್ರನಾಗುವುದಿಲ್ಲ ಎಂದು ಹೇಳುತ್ತಾರೆ.

ಏತೇ ಧರ್ಮಾಃ ಸರ್ವವರ್ಣಾಶ್ಚ ವೀರೈ-
ರುತ್ಕೃಷ್ಟವ್ಯಾಃ ಕ್ಷತ್ರಿಯೈರೇಷ ಧರ್ಮಃ।

ತಸ್ಮಾಜ್ಜ್ಯೇಷ್ಠಾ ರಾಜಧರ್ಮಾ ನ ಚಾನ್ಯೇ
ವೀರ್ಯಜ್ಯೇಷ್ಠಾ ವೀರಧರ್ಮಾ ಮತಾ ಮೇ ॥೧೨॥

ಈ ಧರ್ಮಗಳು ಮತ್ತು ಸರ್ವವರ್ಣಗಳೂ ವೀರರಾದ ಕ್ಷತ್ರಿಯರಿಂದಲೇ ಉನ್ನತಸ್ಥಿತಿಗೆ ತರಲ್ಪಡಬೇಕು. ಇದು ಕ್ಷತ್ರಿಯರ ಧರ್ಮ. ಆದ್ದರಿಂದ ರಾಜಧರ್ಮವೇ ಶ್ರೇಷ್ಠವಾದುದು. ಉಳಿದ ಧರ್ಮಗಳಲ್ಲ. ಪರಾಕ್ರಮದಿಂದ ಅನುಷ್ಠಾನಗೊಳಿಸ - ಬೇಕಾದ ಧರ್ಮವು ಶ್ರೇಷ್ಠವಾದ ಧರ್ಮವೆಂದು ನನ್ನ ಅಭಿಪ್ರಾಯ.

ಮಾಂಧಾತಾ

ಯವನಾಃ ಕಿರಾತಾಃ ಗಾಂಧಾರಾಶ್ಚೀನಾಃ ಶಬರಬರ್ಬರಾಃ।
ಶಕಾಸ್ತುಷಾರಾಃ ಕಹ್ವಾಶ್ಚ ಪಹ್ಲವಾಶ್ಚಾಂಧ್ರಮದ್ರಕಾಃ ॥೧೩॥

ಓಢಾಃ ಪುಲಿಂದಾ ರಮಠಾಃ ಕಾಚಾ ಮ್ಲೇಚ್ಛಾಶ್ಚ ಸರ್ವಶಃ।
ಬ್ರಹ್ಮಕ್ಷತ್ರಪ್ರಸೂತಾಶ್ಚ ವೈಶ್ಯಾಃ ಶೂದ್ರಾಶ್ಚ ಮಾನವಾಃ ॥೧೪॥

ಕಥಂ ಧರ್ಮಂ ಚರೇಯುಸ್ತೇ ಸರ್ವೇ ವಿಷಯವಾಸಿನಃ।
ಮದ್ವಿಧೈಶ್ಚ ಕಥಂ ಸ್ಥಾಪ್ಯಾಃ ಸರ್ವೇ ತೇ ದಸ್ಯುಜೀವಿನಃ ॥೧೫॥

ಯವನರು, ಕಿರಾತರು, ಗಾಂಧಾರರು, ಚೀನರು, ಶಬರರು, ಬರ್ಬರರು, ಶಕರು, ತುಷಾರರು, ಕಹ್ವರು, ಪಹ್ಲವರು, ಆಂಧ್ರರು, ಮದ್ರಕರು, ಓಢರು, ಪುಲಿಂದರು, ರಮಠರು, ಕಾಚರು, ಎಲ್ಲಾ ಮ್ಲೇಚ್ಛರು, ಬ್ರಾಹ್ಮಣಕ್ಷತ್ರಿಯಪ್ರಸೂತ-ರಾದ ವೈಶ್ಯ, ಶೂದ್ರರು, ಮಾನವರು ಇವರೆಲ್ಲರೂ ನನ್ನ ರಾಜ್ಯದಲ್ಲಿ ವಾಸಿಸುತ್ತಾರೆ. ಇವರೆಲ್ಲರೂ ದಸ್ಯುಜೀವಿಗಳು. ಕಳ್ಳತನ, ದರೋಡೆಗಳಿಂದ ಜೀವಿಸುವವರು. ಇಂತಹವರನ್ನು ನನ್ನಂತಹವನು ಧರ್ಮಮಾರ್ಗದಲ್ಲಿ ಸ್ಥಾಪಿಸುವುದು ಹೇಗೆ?

ಏತದಿಚ್ಛಾಮ್ಯಹಂ ಶ್ರೋತುಂ ಭಗವಂಸ್ತದ್ ಬ್ರವೀಹಿ ಮೇ।
ತ್ವಂ ಬಂಧುಭೂತೋ ಹ್ಯಸ್ಮಾಕಂ ಕ್ಷತ್ರಿಯಾಣಾಂ ಸುರೇಶ್ವರ ॥೧೬॥

ಪೂಜ್ಯನೇ! ನಾನು ಇದನ್ನು ತಿಳಿಯಲು ಬಯಸುತ್ತೇನೆ. ಅದನ್ನು ನನಗೆ ಹೇಳು. ಎಲೈ ಸುರೇಶ್ವರನೇ! ಕ್ಷತ್ರಿಯರಾದ ನಮಗೆ ನೀನು ಬಂಧುವಾದವನು.

ಇಂದ್ರಃ

ಮಾತಾಪಿತ್ರೋರ್ಹಿ ಕರ್ತವ್ಯಾ ಶುಶ್ರೂಷಾ ಸರ್ವದಸ್ಯುಭಿಃ।
ಆಚಾರ್ಯಗುರುಶುಶ್ರೂಷಾ ತಥೈವಾಶ್ರಮವಾಸಿನಾಮ್ ॥೧೭॥

ಇಂದ್ರ – ಎಲ್ಲ ದಸ್ಯುಗಳೂ ಸಹ ತಂದೆತಾಯಿಗಳ ಸೇವೆಯನ್ನು, ಆಚಾರ್ಯ ಗುರುಗಳ ಸೇವೆಯನ್ನು ಮತ್ತು ಆಶ್ರಮವಾಸಿಗಳ ಸೇವೆಯನ್ನು ಮಾಡಬೇಕು.

ಭೂಮಿಪಾನಾಂ ಚ ಶುಶ್ರೂಷಾ ಕರ್ತವ್ಯಾ ಸರ್ವದಸ್ಯುಭಿಃ।
ದೇಶಧರ್ಮಕ್ರಿಯಾಶ್ಚೈವ ತೇಷಾಂ ಧರ್ಮೋ ವಿಧೀಯತೇ ॥೧೮॥

ಎಲ್ಲ ದಸ್ಯುಗಳು ತಾವು ವಾಸಿಸುವ ದೇಶದ ರಾಜನ ಸೇವೆಯನ್ನು ಮಾಡಬೇಕು. ಆಯಾ ದೇಶದ ಧರ್ಮಗಳು ಮತ್ತು ಕ್ರಿಯೆಗಳು ಅವರು ಆಚರಿಸಬೇಕಾದ ಧರ್ಮವೆಂದು ಹೇಳಲ್ಪಡುತ್ತವೆ.

ಪಿತೃಯಜ್ಞಾಸ್ತಥಾ ಕೂಪಾಃ ಪ್ರಪಾಶ್ಚ ಶಯನಾನಿ ಚ।
ದಾನಾನಿ ಚ ಯಥಾಕಾಲಂ ದ್ವಿಜೇಷು ದದ್ಯುರೇವ ತೇ ॥೧೯॥

ಅವರೂ ಸಹ ಪಿತೃಯಜ್ಞಗಳನ್ನು ಮಾಡಬೇಕು. ಬಾವಿಗಳನ್ನು ತೋಡಿಸಿ, ಅರವಟ್ಟಿಗೆಗಳನ್ನು ಕಟ್ಟಿಸಿ, ಯೋಗ್ಯವಾದ ಕಾಲದಲ್ಲಿ ಬ್ರಾಹ್ಮಣರಿಗೆ ಶಯನಾದಿ ದಾನಗಳನ್ನು ಕೊಡಬೇಕು.

ಅಹಿಂಸಾ ಸತ್ಯಮಕ್ರೋಧೋ ವೃತ್ತಿದಾಯಾನುಪಾಲನಮ್।
ಭರಣಂ ಪುತ್ರದಾರಾಣಾಂ ಶೌಚಮದ್ರೋಹ ಏವ ಚ ॥೨೦॥

ಅಹಿಂಸೆ, ಸತ್ಯ, ಅಕ್ರೋಧ, ತಮ್ಮ ವೃತ್ತಿಯಿಂದ ಸಂಪಾದಿಸಿದ ಆಸ್ತಿಯ ಪಾಲನೆ, ಪತ್ನೀಪುತ್ರರ ಪೋಷಣೆ, ಶೌಚ, ಅದ್ರೋಹ ಇವುಗಳನ್ನು ಹೊಂದಿರಬೇಕು.

ದಕ್ಷಿಣಾ ಸರ್ವಯಜ್ಞಾನಾಂ ದಾತವ್ಯಾ ಭೂತಿಮಿಚ್ಛತಾ ।
ಪಾಕಯಜ್ಞಾ ಮಹಾರ್ಹಾಶ್ಚ ದಾತವ್ಯಾಃ ಸರ್ವದಸ್ಯುಭಿಃ ॥೨೧॥

ತಮ್ಮ ಏಳಿಗೆಯನ್ನು ಅಪೇಕ್ಷಿಸುವವರು ಎಲ್ಲ ಯಜ್ಞಗಳಲ್ಲಿಯೂ ದಕ್ಷಿಣೆಯನ್ನು ಕೊಡಬೇಕು. ಪಾಕಯಜ್ಞಗಳನ್ನು ಮಾಡಿಸಿ,ಅರ್ಹರಾದ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಡಬೇಕು.

ಏತಾನ್ಯೇವಂಪ್ರಕಾರಾಣಿ ವಿಹಿತಾನಿ ಪುರಾನಘ ।
ಸರ್ವಲೋಕಸ್ಯ ಕರ್ಮಾಣಿ ಕರ್ತವ್ಯಾನೀಹ ಪಾರ್ಥಿವ ॥೨೨॥

ಎಲೈ ಅನಘನೇ! ಪಾರ್ಥಿವನೇ! ಸರ್ವಲೋಕಕ್ಕೆ ಇಂತಹ ವಿಧವಾದ ಕರ್ಮ-ಗಳು ಮಾಡಲ್ಪಡಬೇಕೆಂದು ವಿಹಿತವಾಗಿವೆ.

ಮಾಂಧಾತಾ

ದೃಶ್ಯಂತೇ ಮಾನುಷೇ ಲೋಕೇ ಸರ್ವವರ್ಣೇಷು ದಸ್ಯವಃ ।
ಲಿಂಗಾಂತರೇ ವರ್ತಮಾನಾ ಆಶ್ರಮೇಷು ಚತುರ್ಷ್ವಪಿ ॥೨೩॥

ಮಾಂಧಾತಾ – ಮನುಷ್ಯಲೋಕದಲ್ಲಿ ಎಲ್ಲ ವರ್ಣಗಳಲ್ಲಿಯೂ ಮತ್ತು ಎಲ್ಲ ಆಶ್ರಮಗಳಲ್ಲಿಯೂ ಬೇರೆ ಬೇರೆ ಕಪಟವೇಷವನ್ನು ಧರಿಸಿದ ದಸ್ಯುಗಳು ಕಂಡು ಬರುತ್ತಾರೆ.

ಇಂದ್ರಃ

ವಿನಷ್ಟಾಯಾಂ ದಂಡನೀತೌ ರಾಜಧರ್ಮೇ ನಿರಾಕೃತೇ ।
ಸಂಪ್ರಮುಹ್ಯಂತಿ ಭೂತಾನಿ ರಾಜದೌರಾತ್ಮ್ಯತೋ ನೃಪ ॥೨೪॥

ಇಂದ್ರ – ಎಲೈ ರಾಜನೇ! ದಂಡನೀತಿಯು ವಿನಷ್ಟವಾಗಿ ರಾಜಧರ್ಮವು ನಶಿಸಿ ಹೋದಾಗ ಅಥವಾ ರಾಜನೇ ದುಷ್ಟನಾದಾಗ ಕಾರ್ಯಾಕಾರ್ಯವಿಷಯದಲ್ಲಿ ಪ್ರಜೆಗಳಿಗೆ ಭ್ರಾಂತಿ ಉಂಟಾಗುತ್ತದೆ.

ಅಸಂಖ್ಯಾತಾ ಭವಿಷ್ಯಂತಿ ಭಿಕ್ಷವೋ ಲಿಂಗಿನಸ್ತಥಾ।
ಆಶ್ರಮಾಣಾಂ ವಿಕಲ್ಪಾಶ್ಚ ನಿವೃತ್ತೇಽಸ್ಮಿನ್ ಕೃತೇ ಯುಗೇ ॥೨೫॥

ಭಿಕ್ಷುಗಳು ಮತ್ತು ಬೇರೆ ಬೇರೆ ಚಿಹ್ನೆಗಳನ್ನು ಧರಿಸಿದವರು ಅಸಂಖ್ಯಾತರಾಗುತ್ತಾರೆ. ಈ ಕೃತಯುಗವು ನಿವೃತ್ತವಾದ ಮೇಲೆ ಆಶ್ರಮಗಳೂ ಸಹ ಅನೇಕಪ್ರಕಾರಗಳನ್ನು ತಾಳುತ್ತವೆ.

ಅಶ್ರುತ್ವಾನಾಃ ಪುರಾಣಾನಾಂ ಧರ್ಮಾಣಾಂ ಪ್ರವರಾ ಗತೀಃ।
ಉತ್ಪಥಂ ಪ್ರತಿಪತ್ಸ್ಯಂತೇ ಕಾಮಮನ್ಯುಸಮೀರಿತಾಃ ॥೨೬॥

ಪುರಾಣಗಳನ್ನು ಕೇಳದೇ, ಧರ್ಮಗಳ ಶ್ರೇಷ್ಠಮಾರ್ಗದ ಗತಿಯನ್ನು ತಿಳಿಯದೇ, ಕಾಮಕ್ರೋಧಪ್ರೇರಿತರಾಗಿ ಮನುಷ್ಯರು ದುರ್ಮಾರ್ಗವನ್ನು ಹಿಡಿಯುವರು.

ಯದಾ ನಿವರ್ತ್ಯತೇ ಪಾಪೋ ದಂಡನೀತ್ಯಾ ಮಹಾತ್ಮಭಿಃ।
ತದಾ ಧರ್ಮೋ ನ ಚಲತೇ ಸದ್ಭೂತಃ ಶಾಶ್ವತಃ ಪರಃ ॥೨೭॥

ಮಹಾತ್ಮರಾದ ರಾಜರು ದಂಡನೀತಿಯಿಂದ ಪಾಪಿಗಳನ್ನು ದುರ್ಮಾರ್ಗದಿಂದ ಹಿಂದಿರುಗಿಸಿದರೆ ಆಗ ಶಾಶ್ವತವಾದ ಶ್ರೇಷ್ಠವಾದ ಸತ್ಯವಾದ ಧರ್ಮವು ನಿಶ್ಚಲವಾಗಿ ನಿಲ್ಲುತ್ತದೆ.

ಸರ್ವಲೋಕಗುರುಂ ಚೈವ ರಾಜಾನಂ ಯೋಽವಮನ್ಯತೇ।
ನ ತಸ್ಯ ದತ್ತಂ ನ ಹುತಂ ನ ಶ್ರಾದ್ಧಂ ಫಲತಿ ಕ್ವಚಿತ್ ॥೨೮॥

ಯಾವನು ಸರ್ವಲೋಕಗುರುಪ್ರಾಯನಾದ ರಾಜನಿಗೆ ಅವಮಾನ ಮಾಡುತ್ತಾನೆಯೋ ಅವನು ಮಾಡಿದ ದಾನವಾಗಲೀ, ಹೋಮವಾಗಲೀ, ಶ್ರಾದ್ಧವಾಗಲೀ ಯಾವ ಫಲವನ್ನೂ ಕೊಡುವುದಿಲ್ಲ.

ಮಾನುಷಾಣಾಮಧಿಪತಿಂ ದೇವಭೂತಂ ಸನಾತನಮ್।
ದೇವಾಶ್ಚ ಬಹು ಮನ್ಯಂತೇ ಧರ್ಮಕಾಮಂ ನರೇಶ್ವರಮ್ ॥೨೯॥

ಮನುಷ್ಯನಿಗೆ ಅಧಿಪತಿಯಾದ, ದೇವತೆಯ ಸ್ಥಾನವನ್ನು ಹೊಂದಿದ, ಸನಾತನನಾದ, ಧರ್ಮಕಾಮನಾದ, ರಾಜನನ್ನು ದೇವತೆಗಳೂ ಗೌರವಿಸುತ್ತಾರೆ.

ಪ್ರಜಾಪತಿರ್ಹಿ ಭಗವಾನ್ ಯಃ ಸರ್ವಮಸೃಜಜ್ಜಗತ್ ।
ಸ ಪ್ರವೃತ್ತಿನಿವೃತ್ತ್ಯರ್ಥಂ ಧರ್ಮಾಣಾಂ ಕ್ಷತ್ರಮಿಚ್ಛತಿ ॥೩೦॥

ಎಲ್ಲ ಜಗತ್ತನ್ನು ಸೃಷ್ಟಿಸಿದ, ಪೂಜ್ಯರಾದ, ಪ್ರಜಾಪತಿಗಳಾದ ಬ್ರಹ್ಮದೇವರು ಧರ್ಮಗಳ ಪ್ರವೃತ್ತಿ ಮತ್ತು ಅಧರ್ಮಗಳ ನಿವೃತ್ತಿಗಾಗಿ ಕ್ಷತ್ರಿಯರು ಇರಬೇಕೆಂದು ಬಯಸುತ್ತಾರೆ.

ಪ್ರವೃತ್ತಸ್ಯ ಹಿ ಧರ್ಮಸ್ಯ ಬುದ್ಧ್ಯಾ ಯಃ ಸ್ಮರತೇ ಗತಿಮ್ ।
ಸ ಮೇ ಮಾನ್ಯಶ್ಚ ಪೂಜ್ಯಶ್ಚ ತತ್ರ ಕ್ಷತ್ರಂ ಪ್ರತಿಷ್ಠಿತಮ್ ॥೩೧॥

ಯಾವನು ಲೋಕದ ಪ್ರವೃತ್ತಿಗಾಗಿ ತನ್ನ ಬುದ್ಧಿಯಿಂದ ಧರ್ಮದ ಗತಿಯನ್ನು ತಿಳಿಯುತ್ತಾನೆಯೋ ಅಂತಹವನು ನನಗೆ ಮಾನ್ಯನೂ ಪೂಜ್ಯನೂ ಆದವನು. ಆ ಸ್ಥಾನದಲ್ಲಿ ಕ್ಷತ್ರಿಯನಿರುತ್ತಾನೆ.

ಭೀಷ್ಮಃ

ಏವಮುಕ್ತ್ವಾ ಸ ಭಗವಾನ್ ಮರುದ್ಗಣವೃತಃ ಪ್ರಭುಃ ।
ಜಗಾಮ ಭವನಂ ವಿಷ್ಣುರಕ್ಷರಂ ಪರಮಂ ಪದಮ್ ॥೩೨॥

ಭೀಷ್ಮರು – ಹೀಗೆ ಹೇಳಿ ಪೂಜ್ಯನೂ, ಮರುದ್ಗಣಗಳಿಂದ ಸಹಿತನಾದವನೂ, ಪ್ರಭುವೂ ಆದ ಇಂದ್ರಾಂತರ್ಯಾಮಿಯಾದ ವಿಷ್ಣುವು ತನ್ನ ಶಾಶ್ವತವಾದ ಪರಮ ಪದಕ್ಕೆ ಹೊರಟುಹೋದನು.

ಏವಂ ಪ್ರವರ್ತಿತೇ ಧರ್ಮೇ ಪುರಾ ಸುಚರಿತೇऽನಘ ।
ಕಃ ಕ್ಷತ್ರಮವಮನ್ಯೇತ ಚೇತನಾವಾನ್ ಬಹುಶ್ರುತಃ ॥೩೩॥

ಎಲೈ ಅನಘನೇ! ಹೀಗೆ ಹಿಂದೆ ಚೆನ್ನಾಗಿ ಆಚರಿಸಲ್ಪಡುತ್ತಿದ್ದ ಧರ್ಮವು

ಭೂಮಿಯಲ್ಲಿ ಪ್ರವೃತ್ತವಾಗುವಂತೆ ಮಾಡುವ ಕ್ಷತ್ರಿಯನನ್ನು ವಿವೇಕಿಯಾದವನೂ ಬಹುಶ್ರುತನೂ ಆದ ಯಾವನು ಅವಮಾನ ಮಾಡಿಯಾನು?

ಅನ್ಯಾಯೇನ ಪ್ರವೃತ್ತಾನಿ ನಿವೃತ್ತಾನಿ ತಥೈವ ಚ।
ಅಂತರಾ ವಿಲಯಂ ಯಾಂತಿ ಯಥಾ ಪಥಿ ವಿಚಕ್ಷುಷಃ ॥೩೪॥

ಅನ್ಯಾಯದಿಂದ ಉಂಟಾದ ಪ್ರವೃತ್ತಕರ್ಮಗಳಾಗಲೀ, ನಿವೃತ್ತಕರ್ಮಗಳಾಗಲೀ ಕುರುಡನು ಮಾರ್ಗದಲ್ಲಿ ನಾಶವನ್ನು ಹೊಂದುವಂತೆ ಮಧ್ಯದಲ್ಲಿಯೇ ನಾಶವನ್ನು ಹೊಂದುತ್ತವೆ.

ಆದೌ ಪ್ರವರ್ತಿತೇ ಚಕ್ರೇ ತಥೈವಾದಿಪರಾಯಣೇ।
ವರ್ತಸ್ವ ಪುರುಷವ್ಯಾಘ್ರ ಸಂವಿಜಾನಾಮಿ ತೇऽನಘ ॥೩೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಟ್‌ಷಷ್ಟಿತಮೋऽಧ್ಯಾಯಃ ॥೬೬॥

ಎಲೈ ಪುರುಷವ್ಯಾಘ್ರನೇ! ಆದಿಕಾಲದಿಂದಲೂ ಶ್ರೇಷ್ಠವಾದ ಆಶ್ರಯವಾದ ಮತ್ತು ಪ್ರವೃತ್ತವಾದ ಈ ಧರ್ಮಚಕ್ರದಲ್ಲಿ ನೀನು ಇರುವವನಾಗು. ಅನಘನೇ! ನಾನು ನಿನ್ನನ್ನು ಚೆನ್ನಾಗಿ ತಿಳಿದಿದ್ದೇನೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೬ನೇ ಅಧ್ಯಾಯವು ಮುಗಿಯಿತು

—೦—

೬೭. ಅರವತ್ತೇಳನೆಯ ಅಧ್ಯಾಯ

ರಾಜ್ಯಪಾಲನೆಯಿಂದ ಸರ್ವಾಶ್ರಮಧರ್ಮಫಲಪ್ರಾಪ್ತಿಕಥನ

ಯುಧಿಷ್ಠಿರಃ

ಶ್ರುತಾ ಮೇ ಕಥಿತಾಃ ಪೂರ್ವೈಶ್ಚತ್ವಾರೋ ಮಾನವಾಶ್ರಮಾಃ।
ವ್ಯಾಖ್ಯಾನಮೇಷಾಮಾಚಕ್ಷ್ವ ಪೃಚ್ಛತೋ ಮೇ ಪಿತಾಮಹ ॥೧॥

ಯುಧಿಷ್ಠಿರ – ನಾನು ಪ್ರಾಚೀನರು ಹೇಳಿದ ನಾಲ್ಕು (ಮಾನವಾ)ಆಶ್ರಮಗಳನ್ನು

ಕೇಳಿದ್ದೇನೆ. ಪಿತಾಮಹನೇ! ಪ್ರಶ್ನೆಮಾಡುತ್ತಿರುವ ನನಗೆ ಅವುಗಳನ್ನು ವಿಸ್ತಾರವಾಗಿ ಹೇಳು.

ಭೀಷ್ಮಃ

ವಿದಿತಾಃ ಸರ್ವ ಏವೇಹ ಧರ್ಮಾಸ್ತವ ಯುಧಿಷ್ಠಿರ।
ಯಥಾ ಮಮ ಮಹಾಬಾಹೋ ವಿದಿತಾಃ ಸಾಧುಸಮ್ಮತಾಃ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಮಹಾಬಾಹುವೇ! ನನಗೆ ತಿಳಿದಿರುವಂತೆ ಸಾಧುಸಮ್ಮತವಾದ ಎಲ್ಲ ಧರ್ಮಗಳೂ ನಿನಗೆ ತಿಳಿದಿವೆ.

ಯತ್ತು ಲಿಂಗಾಂತರಗತಂ ಪೃಚ್ಛಸೇ ಮಾಂ ಯುಧಿಷ್ಠಿರ।
ಧರ್ಮಂ ಧರ್ಮಭೃತಾಂ ಶ್ರೇಷ್ಠ ತನ್ನಿಬೋಧ ನರಾಧಿಪ ॥೩॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ! ನರಾಧಿಪನೇ! ಯುಧಿಷ್ಠಿರನೇ! ಬ್ರಹ್ಮಚರ್ಯಾದಿ ಭಿನ್ನಭಿನ್ನ ಚಿಹ್ನೆಯನ್ನು ಧರಿಸಿದವರ ಧರ್ಮದ ಫಲವನ್ನು ಕೇಳುತ್ತಿರುವಿಯಷ್ಟೇ ? ಅದನ್ನು ತಿಳಿಯುವವನಾಗು.

ಸರ್ವಾಣ್ಯೇತಾನಿ ಕೌಂತೇಯ ವಿದ್ಯಂತೇ ಮನುಜರ್ಷಭ।
ಸಾಧ್ವಾಚಾರಪ್ರವೃತ್ತಾನಾಂ ಚಾತುರಾಶ್ರಮ್ಯಕರ್ಮಣಾಮ್ ॥೪॥

ಎಲೈ ಮನುಜಶ್ರೇಷ್ಠನೇ! ಚೆನ್ನಾಗಿ ರಾಜ್ಯಪರಿಪಾಲನೆಯನ್ನು ಮಾಡುವ ನಿನಗೆ, ಒಳ್ಳೆಯ ಆಚಾರಶೀಲರಾದ ಚತುರಾಶ್ರಮಕರ್ಮಿಗಳು ಮಾಡುವ ಎಲ್ಲ ಧರ್ಮಗಳ ಫಲವೂ ಉಂಟಾಗುತ್ತದೆ.

ಅಕಾಮದ್ವೇಷಯುಕ್ತಸ್ಯ ದಂಡನೀತ್ಯಾ ಯುಧಿಷ್ಠಿರ।
ಸಮೇಕ್ಷಿಣಶ್ಚ ಭೂತೇಷು ಭೈಕ್ಷಾಶ್ರಮಪದಂ ಭವೇತ್ ॥೫॥

ಎಲೈ ಯುಧಿಷ್ಠಿರನೇ! ರಾಗದ್ವೇಷಗಳನ್ನು ತ್ಯಜಿಸಿ ದಂಡನೀತಿಯಿಂದ ಎಲ್ಲ

ಪ್ರಜೆಗಳನ್ನೂ ಸಮಾನವಾಗಿ ನೋಡಿಕೊಳ್ಳುವವನಿಗೆ ಬ್ರಹ್ಮಚರ್ಯಾಶ್ರಮಫಲವು ದೊರೆಯುವುದು.

ವೇತ್ತ್ಯಾದಾನವಿಸರ್ಗಂ ಯೋ ನಿಗ್ರಹಾನುಗ್ರಹೌ ತಥಾ।
ಯಥೋಕ್ತವೃತ್ತೇರ್ವೀರಸ್ಯ ಕ್ಷೇಮಾಶ್ರಮಪದಂ ಭವೇತ್ ॥೬॥

ಪ್ರಜೆಗಳಿಂದ ಧನವನ್ನು ಸ್ವೀಕಾರ ಮಾಡುವುದನ್ನು ಮತ್ತು ಪುನಃ ಅವರಿಗೆ ಕೊಡುವುದನ್ನು ಯಾವನು ತಿಳಿದಿದ್ದಾನೆಯೋ, ಯಾವನು ದುಷ್ಟರ ನಿಗ್ರಹವನ್ನು ಶಿಷ್ಟರ ಅನುಗ್ರಹವನ್ನು ಮಾಡುವನೋ ಅಂತಹ ಶಾಸ್ತ್ರೋಕ್ತರೀತಿಯಲ್ಲಿ ನಡೆದುಕೊಳ್ಳುವ ವೀರನಿಗೆ ಗೃಹಸ್ಥಾಶ್ರಮಫಲವು ದೊರೆಯುತ್ತದೆ.

ಅರ್ಹಾನ್ ಪೂಜಯತೋ ನಿತ್ಯಂ ಸಂವಿಭಾಗೇನ ಪಾಂಡವ।
ಸರ್ವತಸ್ತಸ್ಯ ಕೌಂತೇಯ ಭೈಕ್ಷ್ಯಾಶ್ರಮಪದಂ ಭವೇತ್ ॥೭॥

ಎಲೈ ಪಾಂಡವನೇ! ಕೌಂತೇಯನೇ! ನಿತ್ಯವೂ ತನ್ನಲ್ಲಿರುವ ದ್ರವ್ಯವನ್ನು ವಿಭಾಗ ಮಾಡಿ ಅರ್ಹನಾದವನನ್ನು ಪೂಜಿಸುವವನಿಗೆ ಬ್ರಹ್ಮಚರ್ಯಾಶ್ರಮಫಲವು ದೊರೆಯುತ್ತದೆ.

ಜ್ಞಾತಿಸಂಬಂಧಿಮಿತ್ರಾಣಿ ವ್ಯಾಪನ್ನಾನಿ ಯುಧಿಷ್ಠಿರ।
ಸಮಭ್ಯುದ್ಧರಮಾಣಸ್ಯ ದೀಕ್ಷಾಶ್ರಮಪದಂ ಭವೇತ್ ॥೮॥

ಎಲೈ ಯುಧಿಷ್ಠಿರನೇ! ವಿಪತ್ತಿಗೆ ಒಳಗಾದ ಜ್ಞಾತಿಸಂಬಂಧಿಮಿತ್ರರನ್ನು ವಿಪತ್ತಿನಿಂದ ಉದ್ಧಾರ ಮಾಡುವವನಿಗೆ ಗೃಹಸ್ಥಾಶ್ರಮಫಲವು ದೊರೆಯುವುದು.

ಲೋಕಮುಖ್ಯೇಷು ಸತ್ಕಾರಂ ಲಿಂಗಮುಖ್ಯೇಷು ಚಾನಘ।
ಕುರ್ವತಸ್ತಸ್ಯ ಕೌಂತೇಯ ವನ್ಯಾಶ್ರಮಪದಂ ಭವೇತ್ ॥೯॥

ವಾನಪ್ರಸ್ಥಾಶ್ರಮಧಾರಿಗಳಲ್ಲಿ ಮುಖ್ಯರಾದವರನ್ನು ಸತ್ಕರಿಸುವವನಿಗೆ ಎಲೈ ಕೌಂತೇಯನೇ! ವಾನಪ್ರಸ್ಥಾಶ್ರಮಫಲವು ದೊರೆಯುತ್ತದೆ.

ಆಹ್ನಿಕಂ ಭೂತಯಜ್ಞಾಂಶ್ಚ ಪಿತೃಯಜ್ಞಾಂಶ್ಚ ಮಾನುಷಾನ್ ।
ಕುರ್ವತಃ ಪಾರ್ಥ ವಿಪುಲಾನ್ ಸತ್ಯಾಶ್ರಮಪದಂ ಭವೇತ್ ॥೧೦॥

ಎಲೈ ಪಾರ್ಥನೇ! ಆಹ್ನಿಕವನ್ನು ಭೂತಯಜ್ಞಗಳನ್ನು ಪಿತೃಯಜ್ಞಗಳನ್ನು ವಿಪುಲವಾದ ಮಾನುಷಯಜ್ಞಗಳನ್ನು ಮಾಡುವ ರಾಜನಿಗೆ ಯತ್ಯಾಶ್ರಮಫಲವು ದೊರೆಯುತ್ತದೆ.

ಸಂವಿಭಾಗೇನ ಭೂತಾನಾಮತಿಥೀನಾಂ ತಥಾರ್ಚನಾತ್ ।
ದೈವಯಜ್ಞೈಶ್ಚ ರಾಜೇಂದ್ರ ವನ್ಯಾಶ್ರಮಪದಂ ಭವೇತ್ ॥೧೧॥

ಎಲ್ಲರಿಗೂ ತನ್ನ ದ್ರವ್ಯವನ್ನು ಹಂಚಿ, ಅತಿಥಿಗಳನ್ನು ಅರ್ಚಿಸಿ, ದೇವಯಜ್ಞಗಳನ್ನು ಮಾಡುವವನಿಗೆ ಎಲೈ ರಾಜೇಂದ್ರನೇ! ವಾನಪ್ರಸ್ಥಾಶ್ರಮಫಲವು ದೊರೆಯುತ್ತದೆ.

ಮರ್ದನಂ ಪರರಾಷ್ಟ್ರಾಣಾಂ ಶಿಷ್ಟಾರ್ಥಂ ಸತ್ಯವಿಕ್ರಮ ।
ಕುರ್ವತಃ ಪುರುಷವ್ಯಾಘ್ರ ವನ್ಯಾಶ್ರಮಪದಂ ಭವೇತ್ ॥೧೨॥

ಎಲೈ ಪುರುಷವ್ಯಾಘ್ರನೇ! ಸತ್ಯವಿಕ್ರಮನೇ! ಪರರಾಷ್ಟ್ರದಲ್ಲಿರುವ ಶಿಷ್ಟರ ಹಿತಕ್ಕಾಗಿ ಪರರಾಷ್ಟ್ರವನ್ನು ಮರ್ದಿಸುವವನಿಗೆ ವಾನಪ್ರಸ್ಥಾಶ್ರಮಫಲವು ದೊರೆಯುತ್ತದೆ.

ಪಾಲನಾತ್ ಸರ್ವಭೂತಾನಾಂ ಸ್ವರಾಷ್ಟ್ರಪರಿಪಾಲನಾತ್ ।
ದೀಕ್ಷಾ ಬಹುವಿಧಾ ರಾಜ್ಞೋ ವನ್ಯಾಶ್ರಮಪದಂ ಭವೇತ್ ॥೧೩॥

ಎಲ್ಲ ಪ್ರಜೆಗಳನ್ನೂ ಪಾಲನೆ ಮಾಡಿ, ತನ್ನ ರಾಷ್ಟ್ರವನ್ನು ಪರಿಪಾಲನೆ ಮಾಡಿ, ಅನೇಕ ವಿಧವಾದ ದೀಕ್ಷೆಗಳನ್ನು ಧರಿಸಿದ ರಾಜನಿಗೆ ವಾನಪ್ರಸ್ಥಾಶ್ರಮಫಲವು ದೊರೆಯುತ್ತದೆ.

ವೇದಾಧ್ಯಯನನಿತ್ಯತ್ವಂ ಕ್ಷಮಾಥಾಚಾರ್ಯಪೂಜನಮ್ ।
ತಥೋಪಾಧ್ಯಾಯಶುಶ್ರೂಷಾ ಬ್ರಹ್ಮಾಶ್ರಮಪದಂ ಭವೇತ್ ॥೧೪॥

ನಿತ್ಯವೂ ವೇದಾಧ್ಯಯನವನ್ನು ಮಾಡಿ, ಕ್ಷಮೆಯನ್ನು ಹೊಂದಿ, ಆಚಾರ್ಯರನ್ನು ಪೂಜಿಸಿ, ಗುರುಶುಶ್ರೂಷೆಯನ್ನು ಮಾಡುವ ರಾಜನಿಗೆ ಬ್ರಹ್ಮಚರ್ಯಾಶ್ರಮಫಲವು ದೊರೆಯುತ್ತದೆ.

ಆಹ್ನಿಕಂ ಜಪಮಾನಸ್ಯ ದೇವಾನ್ ಪೂಜಯತಃ ಸದಾ।
ಧರ್ಮೇಣ ಪುರುಷವ್ಯಾಘ್ರ ಧರ್ಮಾಶ್ರಮಪದಂ ಭವೇತ್ ॥೧೫॥

ಎಲೈ ಪುರುಷವ್ಯಾಘ್ರನೇ! ಸದಾ ಮಂತ್ರಗಳನ್ನು ಜಪಿಸಿ, ದೇವತೆಗಳನ್ನು ಧರ್ಮದಿಂದ ಪೂಜಿಸುವ ರಾಜನಿಗೆ ಯತ್ಯಾಶ್ರಮಫಲವು ದೊರೆಯುತ್ತದೆ.

ಮೃತ್ಯುರ್ವಾ ರಕ್ಷಣಂ ವೇತಿ ಯಸ್ಯ ರಾಜ್ಞೋ ವಿನಿಶ್ಚಯಃ।
ಪ್ರಾಣದ್ಯೂತೇ ತತಸ್ತಸ್ಯ ಬ್ರಹ್ಮಾಶ್ರಮಪದಂ ಭವೇತ್ ॥೧೬॥

ಯಾವನು ತನ್ನ ಮರಣ ಅಥವಾ ತನ್ನ ಪ್ರಜೆಗಳ ರಕ್ಷಣೆಯನ್ನು ನಿರ್ಧರಿಸಿ, ಪ್ರಾಣದ್ಯೂತವಿರುವ ಸಮರದಲ್ಲಿ ಭಾಗವಹಿಸುತ್ತಾನೆಯೋ ಅವನಿಗೆ ಬ್ರಹ್ಮಚರ್ಯಾಶ್ರಮಫಲವು ದೊರೆಯುತ್ತದೆ.

ಅಜಿಹ್ಮಮಶಠಂ ಮಾರ್ಗಂ ಸೇವಮಾನಸ್ಯ ಭಾರತ।
ಸರ್ವದಾ ಸರ್ವಭೂತೇಷು ಬ್ರಹ್ಮಾಶ್ರಮಪದಂ ಭವೇತ್ ॥೧೭॥

ಎಲೈ ಭಾರತನೇ! ಎಲ್ಲ ಪ್ರಜೆಗಳ ವಿಷಯದಲ್ಲಿ ವಕ್ರವಲ್ಲದ ಶಾಠ್ಯವಿಲ್ಲದ ಮಾರ್ಗವನ್ನು ಸದಾ ಸೇವಿಸುವವನಿಗೆ ಬ್ರಹ್ಮಚರ್ಯಾಶ್ರಮಫಲವು ದೊರೆಯುತ್ತದೆ.

ವಾನಪ್ರಸ್ಥೇಷು ವಿಪ್ರೇಷು ತ್ರೈವಿದ್ಯೇಷು ಚ ಭಾರತ।
ಪ್ರಯಚ್ಛತೋಽರ್ಥಾನ್ ವಿಪುಲಾನ್ ವನ್ಯಾಶ್ರಮಪದಂ ಭವೇತ್ ॥೧೮॥

ಎಲೈ ಭಾರತನೇ! ವಾನಪ್ರಸ್ಥರಾದ ಬ್ರಾಹ್ಮಣರಿಗೆ ಮತ್ತು ವೇದವಿದ್ಯಾಸಂಪನ್ನರಾದ ಬ್ರಾಹ್ಮಣರಿಗೆ ವಿಪುಲವಾದ ಧನವನ್ನು ದಾನ ಮಾಡುವವನಿಗೆ ವಾನಪ್ರಸ್ಥಾಶ್ರಮಫಲವು ದೊರೆಯುತ್ತದೆ.

ಸರ್ವಭೂತೇಷ್ವನುಕ್ರೋಶಂ ಕುರ್ವತಸ್ತಸ್ಯ ಭಾರತ।
ಆನೃಶಂಸ್ಯಪ್ರವೃತ್ತಸ್ಯ ಸರ್ವಾವಸ್ಥಂ ಪದಂ ಭವೇತ್ ॥೧೯॥

ಎಲೈ ಭಾರತನೇ! ಎಲ್ಲ ಭೂತಗಳಲ್ಲಿಯೂ ದಯವನ್ನು ಹೊಂದಿ, ಮಾರ್ದವದಿಂದ ನಡೆದುಕೊಳ್ಳುವವನಿಗೆ ಎಲ್ಲ ಆಶ್ರಮಗಳ ಧರ್ಮಗಳಿಂದ ಪಡೆಯಬಹುದಾದ ಸ್ಥಾನವು ದೊರೆಯುತ್ತದೆ.

ಬಾಲವೃದ್ಧೇಷು ಕೌರವ್ಯ ಸರ್ವಾವಸ್ಥಂ ಯುಧಿಷ್ಠಿರ।
ಅನುಕ್ರೋಶಂ ವಿದಧತಃ ಸರ್ವಾವಸ್ಥಂ ಪದಂ ಭವೇತ್ ॥೨೦॥

ಎಲೈ ಕೌರವ್ಯನೇ! ಯುಧಿಷ್ಠಿರನೇ! ಸರ್ವಕಾಲದಲ್ಲಿಯೂ ಬಾಲಕರಲ್ಲಿಯೂ ಮತ್ತು ವೃದ್ಧರಲ್ಲಿಯೂ ದಯೆಯನ್ನು ತೋರುವ ರಾಜನಿಗೆ ಸರ್ವಾಶ್ರಮಧರ್ಮಾನುಷ್ಠಾನಗಳಿಂದ ಪ್ರಾಪ್ಯವಾದ ಸ್ಥಾನವು ದೊರೆಯುತ್ತದೆ.

ಬಲಾತ್ಕೃತೇಷು ಭೂತೇಷು ಪರಿತ್ರಾಣಂ ಕುರೂದ್ವಹ।
ಶರಣಾಗತೇಷು ಕೌರವ್ಯ ಕುರ್ವನ್ ಗಾರ್ಹಸ್ಥ್ಯಮಾವಸೇತ್ ॥೨೧॥

ಎಲೈ ಕುರೂದ್ವಹನೇ! ಕೌರವ್ಯನೇ! ಬಲಾತ್ಕಾರಕ್ಕೆ ಒಳಗಾದ ಪ್ರಜೆಗಳು ಶರಣಾಗತರಾದಾಗ ಅವರನ್ನು ರಕ್ಷಿಸುವವನು ಗೃಹಸ್ಥಾಶ್ರಮಫಲವನ್ನು ಪಡೆಯುತ್ತಾನೆ.

ಚರಾಚರಾಣಾಂ ಭೂತಾನಾಂ ರಕ್ಷಾಮಪಿ ಚ ಸರ್ವಶಃ।
ಯಥಾರ್ಹಪೂಜಾಂ ಚ ಸದಾ ಕುರ್ವನ್ ಗಾರ್ಹಸ್ಥ್ಯಮಾವಸೇತ್ ॥೨೨॥

ಚಲಿಸುವ ಮತ್ತು ಚಲಿಸದಿರುವ ಪ್ರಾಣಿಗಳ ಸರ್ವಪ್ರಕಾರವಾದ ರಕ್ಷಣೆಯನ್ನು ಮತ್ತು ಯಥಾಯೋಗ್ಯವಾದ ಪೂಜೆಯನ್ನು ಯಾವಾಗಲೂ ಮಾಡುವವನು ಗೃಹಸ್ಥಾಶ್ರಮಧರ್ಮಾನುಷ್ಠಾನದ ಫಲವನ್ನು ಹೊಂದುತ್ತಾನೆ.

ಜ್ಯೇಷ್ಠಾನುಜ್ಯೇಷ್ಠಪತ್ನೀನಾಂ ಭ್ರಾತೄಣಾಂ ಪುತ್ರನಪ್ತೄಣಾಮ್।
ನಿಗ್ರಹಾನುಗ್ರಹೌ ಪಾರ್ಥ ಗಾರ್ಹಸ್ಥ್ಯಮಿತಿ ತತ್ ತಪಃ ॥೨೩॥

ಎಲೈ ಪಾರ್ಥನೇ! ಅಣ್ಣತಮ್ಮಂದಿರ ಪತ್ನಿಯರ ಮತ್ತು ಸಹೋದರರ ಪುತ್ರ ಪೌತ್ರರ ನಿಗ್ರಹಾನುಗ್ರಹಗಳು ಗೃಹಸ್ಥಧರ್ಮವೆಂದು ಹೇಳಲ್ಪಡುತ್ತದೆ. ಅದು ಒಂದು ತಪಸ್ಸೇ.

ಸಾಧೂನಾಮರ್ಚನೀಯಾನಾಂ ಪ್ರಜಾಸು ವಿದಿತಾತ್ಮನಾಮ್ ।
ಪಾಲನಂ ಪುರುಷವ್ಯಾಘ್ರ ಗೃಹಾಶ್ರಮಪದಂ ಭವೇತ್ ॥೨೪॥

ಎಲೈ ಪುರುಷವ್ಯಾಘ್ರನೇ! ಪ್ರಜೆಗಳಲ್ಲಿ ಪೂಜಾರ್ಹರಾದ ಜ್ಞಾನಿಗಳಾದ ಸಜ್ಜನರನ್ನು ರಕ್ಷಿಸುವವನು ಗೃಹಸ್ಥಾಶ್ರಮಫಲವನ್ನು ಹೊಂದುತ್ತಾನೆ.

ಆಶ್ರಮಸ್ಥಾನಿ ಸರ್ವಾಣಿ ಯಸ್ತು ವೇಶ್ಮನಿ ಭಾರತ।
ಆದದೀತೇಹ ಭೋಜ್ಯೇನ ತದ್ ಗಾರ್ಹಸ್ಥ್ಯಂ ಯುಧಿಷ್ಠಿರ ॥೨೫॥

ಎಲೈ ಯುಧಿಷ್ಠಿರನೇ! ಭಾರತನೇ! ಆಶ್ರಮದಲ್ಲಿರುವವರು ಭೋಜನವಿಷಯದಲ್ಲಿ ಅನುಸರಿಸುವ ಎಲ್ಲಾ ನಿಯಮಗಳನ್ನೂ ಯಾರು ತನ್ನ ಮನೆಯಲ್ಲಿಯೇ ಅನುಷ್ಠಾನಮಾಡುತ್ತಾನೆಯೋ ಅದು ಒಳ್ಳೆಯ ಗಾರ್ಹಸ್ಥ್ಯ .

ಯಃ ಸ್ಥಿತಃ ಪುರುಷೋ ಧರ್ಮೇ ಧಾತ್ರಾ ಸೃಷ್ಟೇ ಯಥಾರ್ಥವತ್ ।
ಆಶ್ರಮಾಣಾಂ ಸ ಸರ್ವೇಷಾಂ ಫಲಂ ಪ್ರಾಪ್ನೋತ್ಯನುತ್ತಮಮ್ ॥೨೬॥

ಯಾವನು ತನಗೆ ಬ್ರಹ್ಮದೇವರು ವಿಧಾನ ಮಾಡಿದ ಧರ್ಮದಲ್ಲಿ ಯಥಾರ್ಥವಾಗಿ ನಿಲ್ಲುತ್ತಾನೆಯೋ ಅವನು ಎಲ್ಲಾ ಆಶ್ರಮಗಳ ಉತ್ತಮವಾದ ಫಲವನ್ನು ಹೊಂದುತ್ತಾನೆ.

ಯಸ್ಮಿನ್ನ ನಶ್ಯಂತಿ ಗುಣಾಃ ಕೌಂತೇಯ ಪುರುಷೇ ಸದಾ ।
ಆಶ್ರಮಸ್ಥಂ ತಮಪ್ಯಾಹುರ್ನರಶ್ರೇಷ್ಠಂ ಯುಧಿಷ್ಠಿರ ॥೨೭॥

ಎಲೈ ಕೌಂತೇಯನೇ! ಯುಧಿಷ್ಠಿರನೇ! ಯಾವ ಪುರುಷನಲ್ಲಿ ಗುಣಗಳು ಎಂದಿಗೂ ನಾಶವನ್ನು ಹೊಂದುವುದಿಲ್ಲವೋ ಅಂತಹ ಶ್ರೇಷ್ಠಪುರುಷನನ್ನು ಆಶ್ರಮವಾಸಿಯೆಂದೇ ಜ್ಞಾನಿಗಳು ಹೇಳುತ್ತಾರೆ.

ಸ್ಥಾನಮಾನಂ ವಯೋಮಾನಂ ಕುಲಮಾನಂ ತಥೈವ ಚ।
ಕುರ್ವನ್ ವಸತಿ ಸರ್ವೇಷು ಹ್ಯಾಶ್ರಮೇಷು ಯುಧಿಷ್ಠಿರ ॥೨೮॥

ಎಲೈ ಯುಧಿಷ್ಠಿರನೇ! ಯಾವನು ಉನ್ನತಸ್ಥಾನಕ್ಕೆ, ವಯಸ್ಸಿಗೆ ಹಾಗೆಯೇ ಕುಲಕ್ಕೆ ಮರ್ಯಾದೆಯನ್ನು ಕೊಡುತ್ತಾನೆಯೋ ಅವನು ಸರ್ವಾಶ್ರಮಫಲವನ್ನು ಹೊಂದುತ್ತಾನೆ.

ದೇಶಧರ್ಮಾಂಶ್ಚ ಕೌಂತೇಯ ಕುಲಧರ್ಮಾಂಸ್ತಥೈವ ಚ।
ಪಾಲಯನ್ ಪುರುಷವ್ಯಾಘ್ರ ರಾಜಾ ಸರ್ವಾಶ್ರಮೀ ಭವೇತ್ ॥೨೯॥

ಎಲೈ ಕೌಂತೇಯನೇ! ಪುರುಷವ್ಯಾಘ್ರನೇ! ದೇಶಧರ್ಮಗಳನ್ನು ಮತ್ತು ಕುಲಧರ್ಮಗಳನ್ನು ಪಾಲಿಸುವ ರಾಜನು ಸರ್ವಾಶ್ರಮಫಲವನ್ನು ಹೊಂದುತ್ತಾನೆ.

ಕಾಲೇ ವಿಭೂತಿಂ ಭೂತಾನಾಮುಪಹಾರಾಂಸ್ತಥೈವ ಚ।
ಅರ್ಹಯನ್ ಪುರುಷವ್ಯಾಘ್ರ ಸಾಧೂನಾಮಾಶ್ರಮೇ ವಸೇತ್ ॥೩೦॥

ಎಲೈ ಪುರುಷವ್ಯಾಘ್ರನೇ! ಯೋಗ್ಯವಾದ ಕಾಲದಲ್ಲಿ ಪ್ರಜೆಗಳಿಗೆ ಸಂಪತ್ತನ್ನೂ ಹಾಗೆಯೇ ಉಡುಗೊರೆಗಳನ್ನೂ ಕೊಟ್ಟು ಸನ್ಮಾನಿಸುವ ರಾಜನು ಯತ್ಸಾಶ್ರಮಫಲವನ್ನು ಹೊಂದುತ್ತಾನೆ.

ದಶಧರ್ಮಗತಶ್ಚಾಪಿ ಯೋ ಧರ್ಮಂ ಪ್ರತ್ಯವೇಕ್ಷತೇ।
ಸರ್ವಲೋಕಸ್ಯ ಕೌಂತೇಯ ರಾಜಾ ಭವತಿ ಸೋಽಽಶ್ರಮೀ ॥೩೧॥

ಎಲೈ ಕೌಂತೇಯನೇ! ಯಾವ ರಾಜನು ಸರ್ವಲೋಕಗಳ (ಸರ್ವಪ್ರಜೆಗಳ) ಮತ್ತು ವಿಶೇಷವಾಗಿ ವೃದ್ಧರಾದವರ ಧರ್ಮವನ್ನು ನೋಡಿಕೊಳ್ಳುತ್ತಾನೆಯೋ ಅವನು ಎಲ್ಲಾ ಆಶ್ರಮಗಳ ಫಲವನ್ನು ಪಡೆಯುತ್ತಾನೆ.

ಯೇ ಧರ್ಮಕುಶಲಾ ಲೋಕೇ ಧರ್ಮಂ ಕುರ್ವಂತಿ ಸಾಧವಃ।
ಪಾಲಿತಾ ಯಸ್ಯ ವಿಷಯೇ ಪಾದೋಽಂಶಸ್ತಸ್ಯ ಭೂಪತೇಃ ॥೩೨॥

ಯಾವ ರಾಜನ ರಾಜ್ಯದಲ್ಲಿ ಧರ್ಮಕುಶಲರಾದ ಸಜ್ಜನರು ರಕ್ಷಿಸಲ್ಪಟ್ಟು, ಧರ್ಮಗಳನ್ನು ಆಚರಿಸುತ್ತಾರೆಯೋ ಆ ಧರ್ಮಗಳ ನಾಲ್ಕನೆಯ ಒಂದು ಭಾಗವು ರಾಜನಿಗೆ ಸೇರುತ್ತದೆ.

ಧರ್ಮಾರಾಮಾನ್ ಧರ್ಮಪರಾನ್ ಯೇ ನ ರಕ್ಷಂತಿ ಮಾನವಾನ್ ।
ಪಾರ್ಥಿವಾಃ ಪುರುಷವ್ಯಾಘ್ರ ತೇಷಾಂ ಪಾಪಂ ಹರಂತಿ ತೇ ॥೩೩॥

ಎಲೈ ಪುರುಷವ್ಯಾಘ್ರನೇ! ಯಾವ ರಾಜರು ಧರ್ಮದಲ್ಲಿಯೇ ಸಂತೋಷಪಡುವ ಧರ್ಮಪರರಾದ ಪ್ರಜೆಗಳನ್ನು ರಕ್ಷಿಸುವುದಿಲ್ಲವೋ ಅಂತಹ ರಾಜರು ಆ ಪ್ರಜೆಗಳ ಪಾಪವನ್ನು ತಾವೇ ತೆಗೆದುಕೊಳ್ಳುತ್ತಾರೆ.

ಯೇ ಚ ರಕ್ಷಾಸಹಾಯಾಃ ಸ್ಯುಃ ಪಾರ್ಥಿವಾನಾಂ ಯುಧಿಷ್ಠಿರ ।
ತೇ ಚೈವಾಂಶಹರಾಃ ಸರ್ವೇ ಧರ್ಮೇ ಪರಕೃತೇऽನಘ ॥೩೪॥

ಎಲೈ ಯುಧಿಷ್ಠಿರನೇ! ಅನಘನೇ! ರಾಜನು ರಕ್ಷಣೆಯನ್ನು ಮಾಡುವಾಗ ಯಾರು ಅವನಿಗೆ ಸಹಾಯಕರಾಗಿರುತ್ತಾರೋ ಅವರೂ ಸಹ ಇನ್ನೊಬ್ಬರು ಮಾಡಿದ ಧರ್ಮದಲ್ಲಿ ಒಂದು ಭಾಗಕ್ಕೆ ಅರ್ಹರಾಗುತ್ತಾರೆ.

ಸರ್ವಾಶ್ರಮಪದೇ ಹ್ಯಾಹುರ್ಗಾರ್ಹಸ್ಥ್ಯಂ ದೀಪ್ತನಿರ್ಣಯಮ್ ।
ಪಾವನಂ ಪುರುಷವ್ಯಾಘ್ರ ಯಂ ವಯಂ ಪರ್ಯುಪಾಸ್ಮಹೇ ॥೩೫॥

ಎಲೈ ಪುರುಷವ್ಯಾಘ್ರನೇ! ಎಲ್ಲ ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ಪವಿತ್ರವಾದುದು. ಮತ್ತು ಒಳ್ಳೆಯ ನಿರ್ಣಯಗಳನ್ನು ಹೊಂದಿರುವುದು ಎಂದು ಹೇಳುತ್ತಾರೆ. ನಾವು ಅಂತಹ ಗೃಹಸ್ಥಾಶ್ರಮವನ್ನು ಸ್ವೀಕರಿಸಿದ್ದೇವೆ.

ಆತ್ಮೋಪಮಸ್ತು ಭೂತೇಷು ಯೋ ವೈ ಭವತಿ ಮಾನವಃ ।
ನ್ಯಸ್ತದಂಡೋ ಜಿತಕ್ರೋಧಃ ಸ ಪ್ರೇತ್ಯ ಲಭತೇ ಸುಖಮ್ ॥೩೬॥

ಯಾವ ಮನುಷ್ಯನು ಎಲ್ಲ ಪ್ರಾಣಿಗಳನ್ನೂ ತನಗೆ ಸಮಾನವಾಗಿ ನೋಡಿ ಅವು-

ಗಳಲ್ಲಿ ಕ್ರೋಧವನ್ನು ಮತ್ತು ದಂಡನೆಯನ್ನು ತ್ಯಜಿಸುತ್ತಾನೆಯೋ ಅವನು ಮರಣಾನಂತರದಲ್ಲಿ ಸುಖವನ್ನು ಹೊಂದುತ್ತಾನೆ.

ಧರ್ಮೋತ್ಥಿತಾ ಸತ್ತ್ವವೀರ್ಯಾ ಧರ್ಮಸೇತುವಟಾರಕಾ।
ತ್ಯಾಗವಾತಾಧ್ವಗಾ ಶೀಘ್ರಾ ನೌಸ್ತಾ ಸಂತಾರಯಿಷ್ಯತಿ ॥೩೭॥

ಧರ್ಮದಿಂದ ಮೇಲೆ ತೇಲುವ, ಸದ್ಗುಣವೆಂಬ ಸಾಮರ್ಥ್ಯವುಳ್ಳ, ಧರ್ಮ-ಸೇತುವೆಂಬ ಹಗ್ಗಗಳಿಂದ ಬಿಗಿದ, ತ್ಯಾಗವೆಂಬ ವಾಯುಮಾರ್ಗದಲ್ಲಿ ಶೀಘ್ರವಾಗಿ ಸಂಚರಿಸುವ ನೌಕೆಯು ನಿನ್ನನ್ನು ಎಲ್ಲ ವಿಪತ್ತುಗಳಿಂದಲೂ ದಾಟಿಸುವುದು.

ಯದಾ ನಿವೃತ್ತಃ ಸರ್ವಸ್ಮಾತ್ ಕಾಮೋ ಯೋಽಸ್ಯ ಹೃದಿ ಸ್ಥಿತಃ।
ತದಾ ಭವತಿ ಸತ್ತ್ವಸ್ಥತೋ ಬ್ರಹ್ಮ ಸಮಶ್ನುತೇ ॥೩೮॥

ಮನುಷ್ಯನ ಹೃದಯದಲ್ಲಿರುವ ಎಲ್ಲ ಆಸೆಗಳೂ ನಿವೃತ್ತವಾದ ಮೇಲೆ ಅವನು ಶುದ್ಧಾಂತಃಕರಣನಾಗುತ್ತಾನೆ. ಅನಂತರ ಬ್ರಹ್ಮಪ್ರಾಪ್ತಿಯನ್ನು ಪಡೆಯುತ್ತಾನೆ.

ಸುಪ್ರಸನ್ನಸ್ತು ಭಾವೇನ ಯೋಗೇನ ಚ ನರಾಧಿಪ।
ಧರ್ಮಂ ಪುರುಷಶಾರ್ದೂಲ ಪ್ರಾಪ್ಸ್ಯತೇ ಪಾಲನೇ ರತಃ ॥೩೯॥

ಎಲೈ ನರಾಧಿಪನೇ! ಪುರುಷಶಾರ್ದೂಲನೇ! ಯಾವ ರಾಜನು ಸುಪ್ರಸನ್ನವಾದ ಮನಸ್ಸಿನಿಂದ ಒಳ್ಳೆಯ ಉಪಾಯದಿಂದ ಪ್ರಜೆಗಳ ಪಾಲನೆಯಲ್ಲಿ ರತನಾಗಿರುತ್ತಾನೆಯೋ ಅವನು ಧರ್ಮವನ್ನು ಪಡೆಯುವನು.

ವೇದಾಧ್ಯಯನಶೀಲಾನಾಂ ವಿಪ್ರಾಣಾಂ ಸಾಧುಕರ್ಮಣಾಮ್।
ಪಾಲನೇ ಯತ್ನಮಾತಿಷ್ಠ ಸರ್ವಲೋಕಸ್ಯ ಚಾನಘ ॥೪೦॥

ಎಲೈ ಅನಘನೇ! ವೇದಾಧ್ಯಯನಶೀಲರಾದ ಸತ್ಕರ್ಮವನ್ನು ಮಾಡುವ ವಿಪ್ರರನ್ನು ಪಾಲನೆ ಮಾಡುವುದರಲ್ಲಿ ಮತ್ತು ಸರ್ವಪ್ರಜೆಗಳನ್ನು ಪಾಲನೆ ಮಾಡುವುದರಲ್ಲಿ ಪ್ರಯತ್ನವನ್ನು ಮಾಡುವವನಾಗು.

ವನೇ ಚರತಿ ಯೋ ಧರ್ಮಮಾಶ್ರಮೇಷು ಚ ಭಾರತ।
ರಕ್ಷಯಾ ತಚ್ಚತಗುಣಂ ಧರ್ಮಂ ಪ್ರಾಪ್ನೋತಿ ಪಾರ್ಥಿವಃ ॥೪೧॥

ಎಲೈ ಭಾರತನೇ! ಯಾವನು ಅರಣ್ಯದಲ್ಲಿ ವಾಸಮಾಡಿ ಆಶ್ರಮದಲ್ಲಿ ವಾಸವನ್ನು ಮಾಡಿ ಯಾವ ಧರ್ಮವನ್ನು ಪಡೆಯುತ್ತಾನೆಯೋ ರಾಜನಾದವನು ಪ್ರಜೆಗಳ ರಕ್ಷಣೆಯನ್ನು ಮಾಡುವುದರಿಂದ ಅದರ ನೂರುಪಟ್ಟು ಧರ್ಮವನ್ನು ಪಡೆಯುತ್ತಾನೆ.

ಏಷ ತೇ ವಿವಿಧೋ ಧರ್ಮಃ ಪಾಂಡವಶ್ರೇಷ್ಠ ಕೀರ್ತಿತಃ।
ಅನುತಿಷ್ಠ ತ್ವಮೇನಂ ವೈ ಪೂರ್ವೈರ್ದೃಷ್ಟಂ ಸನಾತನಮ್ ॥೪೨॥

ಎಲೈ ಪಾಂಡವಶ್ರೇಷ್ಠನೇ! ಈ ವಿವಿಧವಾದ ಧರ್ಮಗಳನ್ನು ನಿನಗೆ ಹೇಳಿದ್ದೇನೆ. ವೇದಪ್ರತಿಪಾದ್ಯವಾದ ಪೂರ್ವಜ್ಞಾನಿಗಳಿಂದ ದೃಷ್ಟವಾದ ಈ ಧರ್ಮಗಳನ್ನು ಅನುಷ್ಠಾನಮಾಡು.

ಚಾತುರಾಶ್ರಮ್ಯಮೇಕಾಗ್ರಃ ಚಾತುರ್ವರ್ಣ್ಯಂ ಚ ಪಾಂಡವ।
ಧರ್ಮಂ ಪುರುಷಶಾರ್ದೂಲ ಪ್ರಾಪ್ಸ್ಯಸೇ ಪಾಲನೇ ರತಃ ॥೪೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತಷಷ್ಟಿತಮೋಽಧ್ಯಾಯಃ ॥೬೭॥

ಎಲೈ ಪಾಂಡವನೇ ಪುರುಷಶಾರ್ದೂಲನೇ! ಏಕಾಗ್ರತೆಯಿಂದ ಚತುರ್ವರ್ಣಗಳನ್ನು, ಚತುರಾಶ್ರಮಗಳನ್ನು ಪಾಲಿಸುವುದರಲ್ಲಿ ನಿರತನಾಗಿ ನೀನು ಎಲ್ಲ ವರ್ಣಗಳ ಮತ್ತು ಆಶ್ರಮಗಳ ಧರ್ಮಗಳ ಫಲವನ್ನು ಪಡೆಯುವಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೬೭ನೆಯ ಅಧ್ಯಾಯವು ಮುಗಿಯಿತು.

—೦—

೬೮. ಅರವತ್ತೆಂಟನೆಯ ಅಧ್ಯಾಯ

ರಾಜನ ಮಹತ್ವದ ಕಥನ

ಯುಧಿಷ್ಠಿರಃ

ಚಾತುರಾಶ್ರಮ್ಯ ಉಕ್ತೋಽತ್ರ ಚಾತುರ್ವರ್ಣ್ಯಸ್ತಥೈವ ಚ।
ರಾಷ್ಟ್ರಸ್ಯ ಯತ್ ಕೃತ್ಯತಮಂ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಚತುರಾಶ್ರಮಕ್ಕೆ ಸಂಬಂಧಿಸಿದ ಮತ್ತು ಚತುರ್ವರ್ಣಗಳಿಗೆ ಸಂಬಂಧಿಸಿದ ಧರ್ಮಗಳು ಹೇಳಲ್ಪಟ್ಟವು. ಎಲೈ ಪಿತಾಮಹನೇ! ರಾಷ್ಟ್ರಕ್ಕೆ ಅವಶ್ಯಕವಾಗಿ ಮಾಡಬೇಕಾದ ಕಾರ್ಯಗಳು ಯಾವುವೋ ಅವನ್ನು ನನಗೆ ಹೇಳು.

ಭೀಷ್ಮಃ

ರಾಷ್ಟ್ರಸ್ಯೈತತ್ ಕೃತ್ಯತಮಂ ರಾಜ್ಞ ಏವಾಭಿಷೇಚನಮ್।
ಅನಿಂದ್ರಮಬಲಂ ರಾಷ್ಟ್ರಂ ದಸ್ಯವೋಽಭಿಭವಂತಿ ಚ ॥೨॥

ಭೀಷ್ಮರು – ರಾಷ್ಟ್ರಕ್ಕೆ ಅವಶ್ಯವಾಗಿ ಮಾಡಬೇಕಾದ ಕಾರ್ಯವೆಂದರೆ ರಾಜನ ಪಟ್ಟಾಭಿಷೇಕ. ನಾಯಕನಿಲ್ಲದ ದುರ್ಬಲವಾದ ರಾಷ್ಟ್ರವನ್ನು ದಸ್ಯುಗಳು ಕೊಳ್ಳೆ ಹೊಡೆಯುತ್ತಾರೆ.

ಅರಾಜಕೇಷು ರಾಷ್ಟ್ರೇಷು ಧರ್ಮೋ ನ ವ್ಯವತಿಷ್ಠತೇ।
ಪರಸ್ಪರಂ ಚ ಖಾದಂತಿ ಸರ್ವಥಾ ಧಿಗರಾಜಕಮ್ ॥೩॥

ರಾಜನಿಲ್ಲದ ರಾಷ್ಟ್ರಗಳಲ್ಲಿ ಧರ್ಮವು ಉಳಿಯುವುದಿಲ್ಲ. ಪ್ರಜೆಗಳು ಒಬ್ಬರನ್ನೊಬ್ಬರು ತಿನ್ನುತ್ತಾರೆ. ರಾಜನಿಲ್ಲದ ರಾಷ್ಟ್ರಕ್ಕೆ ಧಿಕ್ಕಾರವಿರಲಿ.

ಇಂದ್ರಮೇನಂ ಪ್ರವೃಣುತೇ ಯದ್ ರಾಜಾನಮಿತಿ ಶ್ರುತಿಃ।
ಯಥೈವೇಂದ್ರಸ್ತಥಾ ರಾಜಾ ಸಂಪೂಜ್ಯೋ ಭೂತಿಮಿಚ್ಛತಾ ॥೪॥

ರಾಜನನ್ನು ಸ್ವೀಕರಿಸುವವನು ಇಂದ್ರನನ್ನೇ ಸ್ವೀಕರಿಸುತ್ತಾನೆ ಎಂದು ಶ್ರುತಿ ಇದೆ.

ತನ್ನ ಕಲ್ಯಾಣವನ್ನು ಬಯಸುವವನು ಇಂದ್ರನನ್ನು ಪೂಜಿಸಿದಂತೆ ರಾಜನನ್ನು ಚೆನ್ನಾಗಿ ಪೂಜಿಸಬೇಕು.

ನಾರಾಜಕೇಷು ರಾಷ್ಟ್ರೇಷು ವಸ್ತವ್ಯಮಿತಿ ವೈದಿಕಮ್ ।
ನಾರಾಜಕೇಷು ರಾಷ್ಟ್ರೇಷು ಹವ್ಯಮಗ್ನಿರ್ವಹತ್ಯಪಿ ॥೫॥

ರಾಜನಿಲ್ಲದ ರಾಷ್ಟ್ರಗಳಲ್ಲಿ ವಾಸ ಮಾಡಬಾರದು ಎಂದು ವೇದದ ಆದೇಶ. ರಾಜನಿಲ್ಲದ ರಾಷ್ಟ್ರಗಳಲ್ಲಿ ಅಗ್ನಿಯು ಹವ್ಯವನ್ನು (ಹವಿಸ್ಸನ್ನು) ಸ್ವೀಕರಿಸಿ ದೇವತೆಗಳಿಗೆ ತಲುಪಿಸುವುದಿಲ್ಲ.

ಅಥ ಚೇದಧಿವರ್ತೇತ ರಾಜ್ಯಾರ್ಥೀ ಬಲವತ್ತರಃ ।
ಅರಾಜಕಾನಿ ರಾಷ್ಟ್ರಾಣಿ ಹತವೀರಾಣಿ ವಾ ಪುನಃ ॥೬॥

ಪ್ರತ್ಯುದ್ಗಮ್ಯಾಭಿಪೂಜ್ಯಃ ಸ್ಯಾದೇತದತ್ರ ಸುಮಂತ್ರಿತಮ್ ।
ನ ಹಿ ಪಾಪಾತ್ ಪಾಪತರಮಸ್ತಿ ಕಿಂಚಿದರಾಜಕಾತ್ ॥೭॥

ರಾಜನಿಲ್ಲದೆ ವೀರರಿಲ್ಲದ ರಾಷ್ಟ್ರಗಳಲ್ಲಿ ಬಲಿಷ್ಠನಾದ ರಾಜ್ಯಾರ್ಥಿಯಾದ ಒಬ್ಬನು ಮೇಲೆದ್ದು ಅಧಿಕಾರವನ್ನು ವಹಿಸಿಕೊಂಡರೆ ಅವನನ್ನು ಪೂಜಿಸಬೇಕು. ಈ ವಿಷಯದಲ್ಲಿ ಇದು ಒಳ್ಳೆಯ ಆಲೋಚನೆಯಾಗುತ್ತದೆ. ಅರಾಜಕತೆಗಿಂತಲೂ ಹೆಚ್ಚಿನ ಪಾಪಕರವಾದುದು ಯಾವುದೂ ಇಲ್ಲ.

ಸ ಚೇತ್ ಸಮನುಪಶ್ಯೇತ ಸಮಗ್ರಂ ಕುಶಲಂ ಭವೇತ್ ।
ಬಲವಾನ್ ಹಿ ಪ್ರಕುಪಿತಃ ಕುರ್ಯಾನ್ನಿಃಶೇಷತಾಮಪಿ ॥೮॥

ಅವನು ಒಳ್ಳೆಯ ದೃಷ್ಟಿಯಿಂದ ನೋಡಿಕೊಂಡರೆ ಸಮಗ್ರವಾದ ಕುಶಲವಾದೀತು. ಬಲಿಷ್ಠನಾಗಿ ಕೋಪಗೊಂಡರೆ ಎಲ್ಲವನ್ನೂ ನಿಃಶೇಷವಾಗಿ ನಾಶವನ್ನು ಮಾಡಿಯಾನು.

ಭೂಯಾಂಸಂ ಲಭತೇ ಕ್ಲೇಶಂ ಯಾ ಗೌರ್ಭವತಿ ದುರ್ದುಹಾ ।
ಸುದುಹಾ ಯಾ ತು ಭವತಿ ನೈವ ತಾಂ ಕ್ಲೇಶಯಂತ್ಯುತ ॥೯॥

ಹಾಲನ್ನು ಕರೆಯುವುದಕ್ಕೆ ತೊಂದರೆಯನ್ನು ಕೊಡುವ ಧೇನುವು ಬಹಳ ಕ್ಲೇಶಗಳಿಗೆ ಗುರಿಯಾಗುತ್ತದೆ. ಸುಲಭವಾಗಿ ಹಾಲನ್ನು ಕೊಡುವ ಧೇನುವನ್ನು ಯಾರೂ ಕ್ಲೇಶಕ್ಕೆ ಒಳಪಡಿಸುವುದಿಲ್ಲ.

ಯದತಪ್ತಂ ಪ್ರಣಮತಿ ನ ತತ್ ಸಂತಾಪಯತ್ಯುತ।
ಯಚ್ಚ ಸ್ವಯಂ ನತಂ ದಾರು ನ ತತ್ ಸನ್ನಾಮಯಂತ್ಯಪಿ ॥೧೦॥

ಅಗ್ನಿಯಲ್ಲಿ ಕಾಯಿಸದೆ ಬಾಗುವುದನ್ನು ಯಾರೂ ಕಾಯಿಸುವುದಿಲ್ಲ. ತಾನಾಗಿಯೇ ಬಾಗಿದ ಮರವನ್ನು (ಬೆತ್ತವನ್ನು) ಯಾರೂ ಬಗ್ಗಿಸುವುದೂ ಇಲ್ಲ.

ಏತಯೋಪಮಯಾ ಧೀರಃ ಸನ್ನಮೇತ ಬಲೀಯಸೇ।
ಇಂದ್ರಾಯ ಸ ಪ್ರಣಮತೇ ನಮತೇ ಯೋ ಬಲೀಯಸೇ ॥೧೧॥

ಧೀರನಾದವನು ಈ ದೃಷ್ಟಾಂತದಿಂದ ಬಲಿಷ್ಠನಾದವನಿಗೆ ಬಾಗಬೇಕು. ಯಾವನು ಬಲಿಷ್ಠನಾದವನಿಗೆ ನಮಸ್ಕಾರವನ್ನು ಮಾಡುತ್ತಾನೆಯೋ ಅವನು ಇಂದ್ರನಿಗೆ ನಮಸ್ಕಾರವನ್ನು ಮಾಡುತ್ತಾನೆ.

ತಸ್ಮಾದ್ ರಾಜೈವ ಕರ್ತವ್ಯಃ ಸತತಂ ಭೂತಿಮಿಚ್ಛತಾ।
ನ ಧನಾರ್ಥೋ ನ ದಾರಾರ್ಥಸ್ತೇಷಾಂ ಯೇಷಾಮರಾಜಕಮ್ ॥೧೨॥

ಆದ್ದರಿಂದ ತನ್ನ ಸತತವಾದ ಕಲ್ಯಾಣವನ್ನು ಅಪೇಕ್ಷಿಸುವವನು ಮೊದಲು ರಾಜನನ್ನು ಮಾಡಬೇಕು. ರಾಜನಿಲ್ಲದ ರಾಷ್ಟ್ರದಲ್ಲಿ ಧನದಿಂದಲಾಗಲೀ, ಪತ್ನಿಯಿಂದಾಗಲೀ ಯಾವ ಪ್ರಯೋಜನವೂ ಇಲ್ಲ.

ಪ್ರೀಯತೇ ಹಿ ಹರನ್ ಪಾಪಃ ಪರವಿತ್ತಮರಾಜಕೇ।
ಯದಾಸ್ಯ ಉದ್ಧರಂತ್ಯನ್ಯೇ ತದಾ ರಾಜಾನಮಿಚ್ಛತಿ ॥೧೩॥

ಅರಾಜಕವಾದ ರಾಷ್ಟ್ರದಲ್ಲಿ ಪಾಪಿಯಾದವನು ಇನ್ನೊಬ್ಬರ ಧನವನ್ನು ಅಪಹರಿಸಿ ಸಂತೋಷಪಡುತ್ತಾನೆ. ಬೇರೆಯವರು ಅವನ ಧನವನ್ನು ಅಪಹರಿಸಿದಾಗ ಅವನೂ ರಾಜನನ್ನು ಬಯಸುತ್ತಾನೆ.

ಪಾಪಾ ಆಪಿ ತದಾ ಕ್ಷೇಮಂ ನ ಲಭಂತೇ ಕದಾಚನ।
ಏಕಸ್ಯ ಹಿ ದ್ವೌ ಹರತೋ ದ್ವಯೋಶ್ಚ ಬಹವೋಽಪರೇ ॥೧೪॥

ರಾಜನಿಲ್ಲದಿದ್ದರೆ ಪಾಪಿಗಳಿಗೂ ಸಹ ಎಂದೂ ಕ್ಷೇಮವುಂಟಾಗುವುದಿಲ್ಲ. ಒಬ್ಬನ ಹಣವನ್ನು ಇಬ್ಬರು ಕದಿಯುತ್ತಾರೆ. ಇಬ್ಬರ ಹಣವನ್ನು ಬೇರೆ ಅನೇಕರು ಕದಿಯುತ್ತಾರೆ.

ಅದಾಸಃ ಕ್ರಿಯತೇ ದಾಸೋ ಹ್ರಿಯಂತೇ ಚ ಬಲಾತ್ ಸ್ತ್ರಿಯಃ।
ಏತಸ್ಮಾತ್ ಕಾರಣಾದ್ ದೇವಾಃ ಪ್ರಜಾಪಾಲಾನ್ ಪ್ರಚಕ್ರಿರೇ ॥೧೫॥

ದಾಸನಲ್ಲದವನನ್ನು ದಾಸನನ್ನಾಗಿ ಮಾಡುತ್ತಾರೆ. ಬಲಾತ್ಕಾರದಿಂದ ಸ್ತ್ರೀಯರನ್ನು ಅಪಹರಿಸುತ್ತಾರೆ. ಈ ಕಾರಣದಿಂದ ದೇವತೆಗಳು ಪ್ರಜಾಪಾಲಕನಾದ ರಾಜನನ್ನು ಸೃಷ್ಟಿಸಿದರು.

ರಾಜಾ ಚೇನ್ನ ಭವೇಲ್ಲೋಕೇ ಪೃಥಿವ್ಯಾಂ ದಂಡಧಾರಕಃ।
ಶೂಲೇ ಮತ್ಸ್ಯಾನಿವಾಪಕ್ಷ್ಯನ್ ದುರ್ಬಲಾನ್ ಬಲವತ್ತರಾಃ ॥೧೬॥

ಲೋಕದಲ್ಲಿ ದಂಡಧಾರಕನಾದ ರಾಜನಿಲ್ಲದಿದ್ದರೆ ಶೂಲದಲ್ಲಿ ಪೋಣಿಸಿದ ಮೀನುಗಳಂತೆ ಬಲಿಷ್ಠರಾದವರು ದುರ್ಬಲರಾದವರನ್ನು ಬೇಯಿಸಿಬಿಡುತ್ತಿದ್ದರು.

ಅರಾಜಕಾಃ ಪ್ರಜಾಃ ಪೂರ್ವಂ ವಿನೇಶುರಿತಿ ನಃ ಶ್ರುತಮ್।
ಪರಸ್ಪರಂ ಭಕ್ಷಯಂತೋ ಮತ್ಸ್ಯಾ ಇವ ಜಲೇ ಕೃಶಾನ್ ॥೧೭॥

ಅರಾಜಕರಾದ ಪ್ರಜೆಗಳು ಒಬ್ಬರನ್ನೊಬ್ಬರು ನೀರಿನಲ್ಲಿ ಸಣ್ಣಮೀನುಗಳನ್ನು ದೊಡ್ಡಮೀನುಗಳು ನುಂಗಿದಂತೆ ಹಿಂದೆ ಪರಸ್ಪರವಾಗಿ ಭಕ್ಷಿಸುತ್ತಾ ವಿನಾಶವನ್ನು ಹೊಂದಿದರು ಎಂದು ನಾವು ಕೇಳಿದ್ದೇವೆ.

ತಾಃ ಸಮೇತ್ಯ ತತಶ್ಚಕ್ರುಃ ಸಮಯಾನಿತಿ ನಃ ಶ್ರುತಮ್।
ವಾಕ್‌ಕ್ರೂರೋ ದಂಡಪರುಷೋ ಯಶ್ಚ ಸ್ಯಾತ್ ಪಾರದಾರಿಕಃ।
ಯಶ್ಚ ನಃ ಸ್ವಮಥಾದದ್ಯಾತ್ ತ್ಯಾಜ್ಯಾ ನಸ್ತಾದೃಶಾ ಇತಿ ॥೧೮॥

ಆಗ ಅವರೆಲ್ಲರೂ ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡರು ಎಂದು ಕೇಳಿದ್ದೇವೆ. ಯಾವನು ಕ್ರೂರವಾದ ಮಾತನ್ನಾಡಿ ಕ್ರೂರವಾದ ಶಿಕ್ಷೆಯನ್ನು ವಿಧಿಸುತ್ತಾ, ಪರಸ್ತ್ರೀಯರಲ್ಲಿ ನಿರತನಾಗಿರುತ್ತಾನೆಯೋ, ಯಾವನು ನಮ್ಮ ಧನವನ್ನು ಅಪಹರಿಸುತ್ತಾನೆಯೋ ಅಂತಹವರನ್ನು ನಾವು ಪರಿತ್ಯಜಿಸಬೇಕು ಎಂದು ಒಪ್ಪಂದವನ್ನು ಮಾಡಿಕೊಂಡರು.

ವಿಶ್ವಾಸನಾರ್ಥಂ ವರ್ಣಾನಾಂ ಸರ್ವೇಷಾಮವಿಶೇಷತಃ।
ತಾಸ್ತಥಾ ಸಮಯಂ ಕೃತ್ವಾ ಸಮಯೇನಾವತಸ್ಥಿರೇ ॥೧೯॥

ಎಲ್ಲ ವರ್ಣದವರಿಗೂ ಸಮಾನವಾಗಿ ವಿಶ್ವಾಸವನ್ನು ಮೂಡಿಸುವುದಕ್ಕಾಗಿ ಅವರು ಅಂತಹ ಒಪ್ಪಂದವನ್ನು ಮಾಡಿಕೊಂಡು ಅದರಂತೆ ನಡೆದುಕೊಂಡರು.

ಸಹಿತಾಸ್ತಾಸ್ತದಾ ಜಗ್ಮುರಸುಖಾರ್ತಾಃ ಪಿತಾಮಹಮ್।
ಅನೀಶ್ವರಾ ವಿನಶ್ಯಾಮೋ ಭಗವನ್ನೀಶ್ವರಂ ದಿಶ ॥೨೦॥

ಯಂ ಪೂಜಯೇಮ ಸಂಭೂಯ ಯಶ್ಚ ನಃ ಪರಿಪಾಲಯೇತ್।
ತಾಭ್ಯೋ ಮನುಂ ವ್ಯಾದಿದೇಶ ಮನುರ್ನಾಭಿನನಂದ ತಾಃ ॥೨೧॥

ಅವರೆಲ್ಲರೂ ಆಗ ದುಃಖಭರಿತರಾಗಿ ಪಿತಾಮಹರಾದ ಬ್ರಹ್ಮದೇವರ ಬಳಿಗೆ ಒಟ್ಟಿಗೆ ಹೋಗಿ 'ಪೂಜ್ಯನೇ! ಪ್ರಭುವಿಲ್ಲದೇ ನಾವು ವಿನಾಶವನ್ನು ಹೊಂದಿದ್ದೇವೆ. ನಾವೆಲ್ಲರೂ ಯಾರನ್ನು ಪೂಜಿಸಬಹುದೋ ಯಾರು ನಮ್ಮನ್ನು ರಕ್ಷಿಸುತ್ತಾನೆಯೋ ಅಂತಹ ಒಬ್ಬ ಪ್ರಭುವನ್ನು ಕೊಡು' ಎಂದು ಕೇಳಿದರು. ಬ್ರಹ್ಮದೇವರು ಅವರಿಗೆ ಮನುವನ್ನು ನೀಡಿದರು. ಆದರೆ ಮನುವು ಆ ಪ್ರಜೆಗಳನ್ನು ನೋಡಿ ಸಂತೋಷಪಡಲಿಲ್ಲ.

ಮನುಃ

ಬಿಭೇಮಿ ಕರ್ಮಣಃ ಕ್ರೂರಾದ್ ರಾಜ್ಯಂ ಹಿ ಭೃಶದುಷ್ಕರಮ್।
ವಿಶೇಷತೋ ಮನುಷ್ಯೇಷು ಮಿಥ್ಯಾವೃತ್ತಿಷು ನಿತ್ಯದಾ ॥೨೨॥

ಮನು – ಈ ಕ್ರೂರಕರ್ಮಕ್ಕೆ ನಾನು ಹೆದರುತ್ತೇನೆ. ರಾಜ್ಯಪಾಲನೆಯು ಬಹಳ ಕಷ್ಟಕರವಾದುದು. ಅದರಲ್ಲಿಯೂ ನಿತ್ಯವೂ ಮಿಥ್ಯಾಚಾರಗಳನ್ನುಳ್ಳ ಮನುಷ್ಯರನ್ನು ಪಾಲಿಸುವುದು ಇನ್ನೂ ಕಷ್ಟವಾದುದು.

ಭೀಷ್ಮಃ

ತಮಬ್ರುವನ್ ಪ್ರಜಾ ಮಾ ಭೈಃ ಕರ್ಮಣೈನೋ ಗಮಿಷ್ಯತಿ।
ಪಶೂನಾಮಧಿಪಂಚಾಶದ್ ಹಿರಣ್ಯಸ್ಯ ತಥೈವ ಚ।
ಧಾನ್ಯಸ್ಯ ದಶಮಂ ಭಾಗಂ ದಾಸ್ಯಾಮಃ ಕೋಶವರ್ಧನಮ್ ॥೨೩॥

ಭೀಷ್ಮ – ಆಗ ಪ್ರಜೆಗಳು ಅವನನ್ನು ಕುರಿತು 'ನೀನು ಹೆದರಬೇಡ. ನಿನ್ನ ಕರ್ಮದಿಂದ ನಿನಗೆ ಪಾಪವು ಪರಿಹಾರವಾಗುವುದು. ನಿನ್ನ ಕೋಶವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಾವು ನಮ್ಮ ಪಶುಗಳ ಆದಾಯದ ಮತ್ತು ಹಿರಣ್ಯದ ಐವತ್ತನೆಯ ಒಂದು ಭಾಗವನ್ನು ಮತ್ತು ಧಾನ್ಯಗಳ ಹತ್ತನೆಯ ಒಂದು ಭಾಗವನ್ನು ನಿನಗೆ ಕೊಡುವೆವು.

ಕನ್ಯಾಂ ಮುಖ್ಯಾಂ ಚಾರುರೂಪಾಂ ವಿವಾಹೇಷೂದ್ಯತಾಸು ಚ।
ಮುಖ್ಯೇನ ಶಸ್ತ್ರಪತ್ರೇಣ ಯೇ ಮನುಷ್ಯಾಃ ಪ್ರಧಾನತಃ।
ಭವಂತಂ ತೇಽನುಯಾಸ್ಯಂತಿ ಮಹೇಂದ್ರಮಿವ ದೇವತಾಃ ॥೨೪॥

ಶ್ರೇಷ್ಠಳಾದ ಸುಂದರಿಯಾದ ಕನ್ಯೆಯನ್ನು ವಿವಾಹ ಮಾಡಿಕೊಡುವೆವು. ಶ್ರೇಷ್ಠವಾದ ಶಸ್ತ್ರಗಳನ್ನು ಮತ್ತು ವಾಹನಗಳನ್ನು ಹೊಂದಿದ ಪ್ರಧಾನರಾದ ಮನುಷ್ಯರು ದೇವತೆಗಳು ಮಹೇಂದ್ರನನ್ನು ಹಿಂಬಾಲಿಸುವಂತೆ ನಿನ್ನನ್ನು ಹಿಂಬಾಲಿಸುವರು.

ಸ ತ್ವಂ ಜಾತಬಲೋ ರಾಜನ್ ದುಷ್ಪ್ರಧರ್ಷಃ ಪ್ರತಾಪವಾನ್।
ಸುಖೇ ಧಾಸ್ಯತಿ ನಃ ಸರ್ವಾನ್ ಕುಬೇರ ಇವ ನೈರ್ಋತಾನ್ ॥೨೫॥

ಎಲೈ ರಾಜನೇ! ನೀನು ಬಲವನ್ನು ಹೊಂದಿದವನಾಗಿ, ಪ್ರತಾಪಶಾಲಿಯಾಗಿ,

ಆಗ ಅವರೆಲ್ಲರೂ ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡರು ಎಂದು ಕೇಳಿದ್ದೇವೆ. ಯಾವನು ಕ್ರೂರವಾದ ಮಾತನ್ನಾಡಿ ಕ್ರೂರವಾದ ಶಿಕ್ಷೆಯನ್ನು ವಿಧಿಸುತ್ತಾ, ಪರಸ್ತ್ರೀಯರಲ್ಲಿ ನಿರತನಾಗಿರುತ್ತಾನೆಯೋ, ಯಾವನು ನಮ್ಮ ಧನವನ್ನು ಅಪಹರಿಸುತ್ತಾನೆಯೋ ಅಂತಹವರನ್ನು ನಾವು ಪರಿತ್ಯಜಿಸಬೇಕು ಎಂದು ಒಪ್ಪಂದವನ್ನು ಮಾಡಿಕೊಂಡರು.

ವಿಶ್ವಾಸನಾರ್ಥಂ ವರ್ಣಾನಾಂ ಸರ್ವೇಷಾಮವಿಶೇಷತಃ।
ತಾಸ್ತಥಾ ಸಮಯಂ ಕೃತ್ವಾ ಸಮಯೇನಾವತಸ್ಥಿರೇ ॥೧೯॥

ಎಲ್ಲ ವರ್ಣದವರಿಗೂ ಸಮಾನವಾಗಿ ವಿಶ್ವಾಸವನ್ನು ಮೂಡಿಸುವುದಕ್ಕಾಗಿ ಅವರು ಅಂತಹ ಒಪ್ಪಂದವನ್ನು ಮಾಡಿಕೊಂಡು ಅದರಂತೆ ನಡೆದುಕೊಂಡರು.

ಸಹಿತಾಸ್ತಾಸ್ತದಾ ಜಗ್ಮುರಸುಖಾರ್ತಾಃ ಪಿತಾಮಹಮ್।
ಅನೀಶ್ವರಾ ವಿನಶ್ಯಾಮೋ ಭಗವನ್ನೀಶ್ವರಂ ದಿಶ ॥೨೦॥

ಯಂ ಪೂಜಯೇಮ ಸಂಭೂಯ ಯಶ್ಚ ನಃ ಪರಿಪಾಲಯೇತ್।
ತಾಭ್ಯೋ ಮನುಂ ವ್ಯಾದಿದೇಶ ಮನುರ್ನಾಭಿನನಂದ ತಾಃ ॥೨೧॥

ಅವರೆಲ್ಲರೂ ಆಗ ದುಃಖಭರಿತರಾಗಿ ಪಿತಾಮಹರಾದ ಬ್ರಹ್ಮದೇವರ ಬಳಿಗೆ ಒಟ್ಟಿಗೆ ಹೋಗಿ 'ಪೂಜ್ಯನೇ! ಪ್ರಭುವಿಲ್ಲದೇ ನಾವು ವಿನಾಶವನ್ನು ಹೊಂದಿದ್ದೇವೆ. ನಾವೆಲ್ಲರೂ ಯಾರನ್ನು ಪೂಜಿಸಬಹುದೋ ಯಾರು ನಮ್ಮನ್ನು ರಕ್ಷಿಸುತ್ತಾನೆಯೋ ಅಂತಹ ಒಬ್ಬ ಪ್ರಭುವನ್ನು ಕೊಡು' ಎಂದು ಕೇಳಿದರು. ಬ್ರಹ್ಮದೇವರು ಅವರಿಗೆ ಮನುವನ್ನು ನೀಡಿದರು. ಆದರೆ ಮನುವು ಆ ಪ್ರಜೆಗಳನ್ನು ನೋಡಿ ಸಂತೋಷಪಡಲಿಲ್ಲ.

ಮನುಃ

ಬಿಭೇಮಿ ಕರ್ಮಣಃ ಕ್ರೂರಾದ್ ರಾಜ್ಯಂ ಹಿ ಭೃಶದುಷ್ಕರಮ್।
ವಿಶೇಷತೋ ಮನುಷ್ಯೇಷು ಮಿಥ್ಯಾವೃತ್ತಿಷು ನಿತ್ಯದಾ ॥೨೨॥

ಮನು – ಈ ಕ್ರೂರಕರ್ಮಕ್ಕೆ ನಾನು ಹೆದರುತ್ತೇನೆ. ರಾಜ್ಯಪಾಲನೆಯು ಬಹಳ ಕಷ್ಟಕರವಾದುದು. ಅದರಲ್ಲಿಯೂ ನಿತ್ಯವೂ ಮಿಥ್ಯಾಚಾರಗಳನ್ನುಳ್ಳ ಮನುಷ್ಯರನ್ನು ಪಾಲಿಸುವುದು ಇನ್ನೂ ಕಷ್ಟವಾದುದು.

ಭೀಷ್ಮಃ

ತಮಬ್ರುವನ್ ಪ್ರಜಾ ಮಾ ಭೈಃ ಕರ್ಮಣೈನೋ ಗಮಿಷ್ಯತಿ।
ಪಶೂನಾಮಧಿಪಂಚಾಶದ್ ಹಿರಣ್ಯಸ್ಯ ತಥೈವ ಚ।
ಧಾನ್ಯಸ್ಯ ದಶಮಂ ಭಾಗಂ ದಾಸ್ಯಾಮಃ ಕೋಶವರ್ಧನಮ್ ॥೨೩॥

ಭೀಷ್ಮ – ಆಗ ಪ್ರಜೆಗಳು ಅವನನ್ನು ಕುರಿತು 'ನೀನು ಹೆದರಬೇಡ. ನಿನ್ನ ಕರ್ಮದಿಂದ ನಿನಗೆ ಪಾಪವು ಪರಿಹಾರವಾಗುವುದು. ನಿನ್ನ ಕೋಶವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಾವು ನಮ್ಮ ಪಶುಗಳ ಆದಾಯದ ಮತ್ತು ಹಿರಣ್ಯದ ಐವತ್ತನೆಯ ಒಂದು ಭಾಗವನ್ನು ಮತ್ತು ಧಾನ್ಯಗಳ ಹತ್ತನೆಯ ಒಂದು ಭಾಗವನ್ನು ನಿನಗೆ ಕೊಡುವೆವು.

ಕನ್ಯಾಂ ಮುಖ್ಯಾಂ ಚಾರುರೂಪಾಂ ವಿವಾಹೇಷೂದ್ಯತಾಸು ಚ।
ಮುಖ್ಯೇನ ಶಸ್ತ್ರಪತ್ರೇಣ ಯೇ ಮನುಷ್ಯಾಃ ಪ್ರಧಾನತಃ।
ಭವಂತಂ ತೇಽನುಯಾಸ್ಯಂತಿ ಮಹೇಂದ್ರಮಿವ ದೇವತಾಃ ॥೨೪॥

ಶ್ರೇಷ್ಠಳಾದ ಸುಂದರಿಯಾದ ಕನ್ಯೆಯನ್ನು ವಿವಾಹ ಮಾಡಿಕೊಡುವೆವು. ಶ್ರೇಷ್ಠವಾದ ಶಸ್ತ್ರಗಳನ್ನು ಮತ್ತು ವಾಹನಗಳನ್ನು ಹೊಂದಿದ ಪ್ರಧಾನರಾದ ಮನುಷ್ಯರು ದೇವತೆಗಳು ಮಹೇಂದ್ರನನ್ನು ಹಿಂಬಾಲಿಸುವಂತೆ ನಿನ್ನನ್ನು ಹಿಂಬಾಲಿಸುವರು.

ಸ ತ್ವಂ ಜಾತಬಲೋ ರಾಜನ್ ದುಷ್ಪ್ರಧರ್ಷಃ ಪ್ರತಾಪವಾನ್।
ಸುಖೇ ಧಾಸ್ಯತಿ ನಃ ಸರ್ವಾನ್ ಕುಬೇರ ಇವ ನೈರ್ಋತಾನ್ ॥೨೫॥

ಎಲೈ ರಾಜನೇ! ನೀನು ಬಲವನ್ನು ಹೊಂದಿದವನಾಗಿ, ಪ್ರತಾಪಶಾಲಿಯಾಗಿ,

ಸೋಲಿಸಲು ಅಸಾಧ್ಯನಾಗಿ, ಕುಬೇರನು ನೈರ್ಋತರನ್ನು ರಕ್ಷಿಸಿದಂತೆ ನಮ್ಮೆಲ್ಲರನ್ನೂ ಸುಖದಲ್ಲಿ ಇಡುವವನಾಗಬೇಕು.

ಯಂ ಚ ಧರ್ಮಂ ಚರಿಷ್ಯಂತಿ ಪ್ರಜಾ ರಾಜ್ಞಾಸುರಕ್ಷಿತಾಃ।
ಚತುರ್ಥಂ ತಸ್ಯ ಧರ್ಮಸ್ಯ ತ್ವತ್ಸಂಸ್ಥಂ ನೋ ಭವಿಷ್ಯತಿ ॥೨೬॥

ರಾಜನಿಂದ ಸುರಕ್ಷಿತರಾದ ಪ್ರಜೆಗಳಾದ ನಾವು ಯಾವ ಧರ್ಮವನ್ನು ಆಚರಿಸುತ್ತೇವೆಯೋ ಆ ಧರ್ಮದ ನಾಲ್ಕನೆಯ ಒಂದು ಭಾಗವು ನಿನಗೆ ಸೇರುವುದು.

ತೇನ ಧರ್ಮೇಣ ಮಹತಾ ಸುಖಲುಬ್ಧೇನ ಭಾವಿತಃ।
ಪಾಹ್ಯಸ್ಮಾನ್ ಸರ್ವತೋ ರಾಜನ್ ದೇವಾನಿವ ಶತಕ್ರತುಃ ॥೨೭॥

ಎಲೈ ರಾಜನೇ! ಆ ದೊಡ್ಡ ಸುಖಪ್ರದವಾದ ಧರ್ಮದಿಂದ ಪರಿಶುದ್ಧನಾಗಿ ಇಂದ್ರನು ದೇವತೆಗಳನ್ನು ರಕ್ಷಿಸಿದಂತೆ ನಮ್ಮನ್ನು ಎಲ್ಲ ವಿಪತ್ತುಗಳಿಂದಲೂ ರಕ್ಷಿಸುವವನಾಗು.

ವಿಜಯಾಯಾಶು ನಿರ್ಯಾಹಿ ಪ್ರತಪನ್ ರಶ್ಮಿಮಾನಿವ।
ಮಾನಂ ವಿಧಮ ಶತ್ರೂಣಾಂ ಧರ್ಮೋ ಜಯತು ನಸ್ತದಾ ॥೨೮॥

ತನ್ನ ಕಿರಣಗಳಿಂದ ಸುಡುವ ಸೂರ್ಯನಂತೆ ನೀನು ಶತ್ರುಗಳನ್ನು ಜಯಿಸಲು ಶೀಘ್ರವಾಗಿ ದಿಗ್ವಿಜಯಕ್ಕೆ ಹೊರಡುವವನಾಗು. ಶತ್ರುಗಳ ಅಹಂಕಾರವನ್ನು ನಾಶಪಡಿಸು. ನಮ್ಮ ಧರ್ಮಕ್ಕೆ ಆಗ ಜಯವುಂಟಾಗಲಿ. (ಎಂದು ಹೇಳಿದರು)

ಸ ನಿರ್ಯಯೌ ಮಹಾತೇಜಾ ಬಲೇನ ಮಹತಾ ವೃತಃ।
ಮಹಾಭಿಜನಸಂಪನ್ನಸ್ತೇಜಸಾ ಪ್ರಜ್ವಲನ್ನಿವ ॥೨೯॥

ಆಗ ಮಹಾತೇಜಸ್ವಿಯಾದ ಮನುವು ತೇಜಸ್ಸಿನಿಂದ ಬೆಳಗುವವನಂತೆ ಮಹಾಭಿಜನಸಂಪನ್ನನಾಗಿ ದೊಡ್ಡ ಸೇನೆಯಿಂದ ಕೂಡಿಕೊಂಡು ವಿಜಯಕ್ಕೆ ಹೊರಟನು.

ತಸ್ಯ ತಾಂ ಮಹಿಮಾಂ ದೃಷ್ಟ್ವಾಮಹೇಂದ್ರಸ್ಯೇವ ದೇವತಾಃ।
ಅಪತತ್ರಸಿರೇ ಸರ್ವೇ ಸ್ವಧರ್ಮೇ ಚ ದಧುರ್ಮನಃ ॥೩೦॥

ಮಹೇಂದ್ರನ ಮಹಿಮೆಯನ್ನು ನೋಡಿದ ದೇವತೆಗಳಂತೆ ಅವನ ಮಹಿಮೆಯನ್ನು ನೋಡಿದ ಪ್ರಜೆಗಳೆಲ್ಲರೂ ಹೆದರಿ ತಮ್ಮ ತಮ್ಮ ಧರ್ಮಗಳಲ್ಲಿ ನಿರತರಾದರು.

ತತೋ ಮಹೀಂ ಪರಿಯಯೌ ಪರ್ಜನ್ಯ ಇವ ವೃಷ್ಟಿಮಾನ್ ।
ಶಮಯನ್ ಸರ್ವತಃ ಪಾಪಾನ್ ಸ್ವಕರ್ಮಸು ಚ ಯೋಜಯನ್ ॥೩೧॥

ಆಗ ಮನುವು ಎಲ್ಲ ಕಡೆಗಳಲ್ಲಿಯೂ ಪಾಪಗಳನ್ನು ಶಾಂತಗೊಳಿಸುತ್ತಾ, ಅವರವರ ಕರ್ಮಗಳಲ್ಲಿ ನಿಯೋಜಿಸುತ್ತಾ ಮಳೆಯನ್ನು ಕರೆಯುವ ಪರ್ಜನ್ಯನಂತೆ ಭೂಮಿಯಲ್ಲಿ ಸಂಚರಿಸಿದನು.

ಏವಂ ಯೇ ಭೂತಿಮಿಚ್ಛೇಯುಃ ಪೃಥಿವ್ಯಾಂ ಮಾನವಾಃ ಕ್ವಚಿತ್ ।
ಕುರ್ಯೂ ರಾಜಾನಮೇವಾಗ್ರೇ ಪ್ರಜಾನುಗ್ರಹಕಾರಣಾತ್ ॥೩೨॥

ಹೀಗೆ ತಮ್ಮ ಕಲ್ಯಾಣವನ್ನು ಬಯಸುವ ಮಾನವರು ಪ್ರಜೆಗಳಿಗೆ ಅನುಗ್ರಹವನ್ನು ಸಂಪಾದಿಸುವ ದೃಷ್ಟಿಯಿಂದ ಮೊದಲು ರಾಜನನ್ನೇ ಮಾಡಬೇಕು.

ನಮಸ್ಯೇಯುಶ್ಚ ತಂ ಭಕ್ತ್ಯಾ ಶಿಷ್ಯಾ ಇವ ಗುರುಂ ಸದಾ ।
ದೇವಾ ಇವ ಸಹಸ್ರಾಕ್ಷಂ ಪ್ರಜಾ ರಾಜಾನಮಂತಿಕೇ ॥೩೩॥

ಶಿಷ್ಯರು ಗುರುವಿಗೆ ಸದಾ ನಮಸ್ಕಾರ ಮಾಡುವಂತೆ ದೇವತೆಗಳು ಇಂದ್ರನಿಗೆ ನಮಸ್ಕಾರ ಮಾಡುವಂತೆ ಪ್ರಜೆಗಳು ಸಮೀಪದಿಂದ ಯಾವಾಗಲೂ ರಾಜನಿಗೆ ಭಕ್ತಿಯಿಂದ ನಮಸ್ಕಾರವನ್ನು ಮಾಡಬೇಕು.

ಸತ್ಕೃತಂ ಸ್ವಜನೇನೇಹ ಪರೋಽಪಿ ಬಹು ಮನ್ಯತೇ ।
ಸ್ವಜನೇನ ತ್ವವಜ್ಞಾತಂ ಪರೇ ಪರಿಭವಂತ್ಯುತ ॥೩೪॥

ತನ್ನ ಜನರಿಂದ ಸತ್ಕೃತನಾದವನನ್ನು ಇನ್ನೊಬ್ಬನೂ ಗೌರವಿಸುತ್ತಾನೆ. ತನ್ನ ಜನರಿಂದ ತಿರಸ್ಕರಿಸಲ್ಪಟ್ಟರೆ ಬೇರೆಯವರೂ ಅವನನ್ನು ಅವಮಾನಗೊಳಿಸುತ್ತಾರೆ.

ರಾಜ್ಞಃ ಪರೈಃ ಪರಿಭವಃ ಸರ್ವೇಷಾಮಸುಖಾವಹಃ।
ತಸ್ಮಾಚ್ಛಸ್ತ್ರಂ ಚ ಪತ್ರಂ ಚ ವಾಸಾಂಸ್ಯಾಭರಣಾನಿ ಚ ॥೩೫॥

ಭೋಜನಾನ್ಯಥ ಪಾನಾನಿ ರಾಜ್ಞೇ ದದ್ಯುರ್ಗೃಹಾಣಿ ಚ।
ಆಸನಾನಿ ಚ ಶಯ್ಯಾಶ್ಚ ಸರ್ವೋಪಕರಣಾನಿ ಚ ॥೩೬॥

ಬೇರೆಯವರಿಂದ ರಾಜನ ಪರಿಭವವು ಎಲ್ಲರಿಗೂ ದುಃಖವನ್ನು ತರುವಂತಹದು. ಆದ್ದರಿಂದ ರಾಜನಿಗೆ ಆಯುಧಗಳನ್ನು, ವಾಹನಗಳನ್ನು, ಶ್ರೇಷ್ಠವಾದ ವಸ್ತ್ರಾಭರಣಗಳನ್ನು, ಭೋಜನಪಾನಗಳನ್ನು, ಗೃಹಗಳನ್ನು, ಆಸನಗಳನ್ನು, ಶಯನಗಳನ್ನು, ಸರ್ವೋಪಕರಣಗಳನ್ನು ಕೊಡಬೇಕು.

ಗುಪ್ತಾತ್ಮಾ ಸ್ಯಾದ್ ದುರಾಧರ್ಷಃ ಸ್ಮಿತಪೂರ್ವಾಭಿಭಾಷಿತಾ।
ಆಭಾಷಿತಶ್ಚ ಮಧುರಂ ಪ್ರತಿಭಾಷೇತ ಮಾನವಾನ್ ॥೩೭॥

ರಾಜನು ಯಾವಾಗಲೂ ತಾನು ರಕ್ಷಿತನಾಗಿದ್ದು, ಶತ್ರುಗಳಿಂದ ಸೋಲಿಸಲು ಅಸಾಧ್ಯನಾಗಿ, ಮಂದಹಾಸಪೂರ್ವಕವಾಗಿ ಮಾತನಾಡಬೇಕು. ಪ್ರಜೆಗಳು ಮಾತನಾಡಿಸಿದಾಗ ಮಧುರವಾಗಿ ಅವರಿಗೆ ಉತ್ತರವನ್ನು ಕೊಡಬೇಕು.

ಕೃತಜ್ಞೋ ದೃಢಭಕ್ತಿಃ ಸ್ಯಾತ್ ಸಂವಿಭಾಗೀ ಜಿತೇಂದ್ರಿಯಃ।
ಈಕ್ಷಿತಃ ಪ್ರತಿವೀಕ್ಷೇತ ಮೃದು ಚರ್ಜು ಚ ವಲ್ಗು ಚ ॥೩೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಷಷ್ಟಿತಮೋऽಧ್ಯಾಯಃ ॥೬೮॥

ರಾಜನು ಕೃತಜ್ಞನೂ, ದೃಢವಾದ ಇಷ್ಟವುಳ್ಳವನೂ, ಜಿತೇಂದ್ರಿಯನೂ, ತನ್ನ ಸಂಪತ್ತನ್ನು ಹಂಚುವವನೂ ಆಗಿರಬೇಕು. ತನ್ನನ್ನು ನೋಡುವವರನ್ನು ಮೃದುವಾಗಿ ನೇರವಾಗಿ ಮತ್ತು ಸುಂದರವಾಗಿ ಪ್ರತಿಯಾಗಿ ನೋಡಬೇಕು.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೬೮ನೆಯ ಅಧ್ಯಾಯವು ಮುಗಿಯಿತು.

—0—

೮೯. ಅರವತ್ತೊಂಬತ್ತನೆಯ ಅಧ್ಯಾಯ

ಬೃಹಸ್ಪತಿ ಮತ್ತು ವಸುಮನಸರ ಸಂವಾದದಲ್ಲಿ ರಾಜಧರ್ಮಗಳ ವರ್ಣನೆ

ಯುಧಿಷ್ಠಿರಃ

ಕಿಮಾಹುರ್ದೈವತಂ ವಿಪ್ರಾ ರಾಜಾನಂ ಭರತರ್ಷಭ।
ಮನುಷ್ಯಾಣಾಮಧಿಪತಿಂ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ಭರತರ್ಷಭನೇ! ಪಿತಾಮಹನೇ! ಮನುಷ್ಯರ ಅಧಿಪತಿಯಾದ ರಾಜನನ್ನು ಬ್ರಾಹ್ಮಣರು ಏಕೆ ದೇವತೆ ಎಂಬುದಾಗಿ ಹೇಳುತ್ತಾರೆ ಎಂಬುದನ್ನು ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಬೃಹಸ್ಪತಿಂ ವಸುಮನಾ ಯಥಾ ಪಪ್ರಚ್ಛ ಭಾರತ ॥೨॥

ಭೀಷ್ಮರು – ಎಲೈ ಭಾರತನೇ! ಈ ವಿಷಯದಲ್ಲಿಯೂ ಸಹ ವಸುಮನನು ಬೃಹಸ್ಪತಿಗಳನ್ನು ಪ್ರಶ್ನೆ ಮಾಡಿದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ರಾಜಾ ವಸುಮನಾ ನಾಮ ಕೌಸಲ್ಯೋ ಧೀಮತಾಂವರಃ।
ಮಹರ್ಷಿಂ ಪರಿಪಪ್ರಚ್ಛ ಕೃತಪ್ರಜ್ಞೋ(ಜ್ಞಂ) ಬೃಹಸ್ಪತಿಮ್ ॥೩॥

ಕೋಸಲದೇಶದ ವಸುಮನನೆಂಬ ಮೇಧಾವಿಗಳಲ್ಲಿ ಶ್ರೇಷ್ಠನಾದ ರಾಜನು ಕೃತಪ್ರಜ್ಞರಾದ ಮಹರ್ಷಿಗಳಾದ ಬೃಹಸ್ಪತಿಗಳನ್ನು ಕುರಿತು ಪ್ರಶ್ನೆ ಮಾಡಿದನು.

ಸರ್ವಂ ವೈನಯಿಕಂ ಕೃತ್ವಾ ವಿನಯಜ್ಞೋ ಬೃಹಸ್ಪತೇಃ।
ದಕ್ಷಿಣಾನಂತರೋ ಭೂತ್ವಾ ಪ್ರಣಮ್ಯ ವಿಧಿಪೂರ್ವಕಮ್ ॥೪॥

ವಿಧಿಂ ಪಪ್ರಚ್ಛ ರಾಜ್ಯಸ್ಯ ಸರ್ವಭೂತಹಿತೇ ರತಃ।
ಪ್ರಜಾನಾಂ ಹಿತಮನ್ವಿಚ್ಛನ್ ಧರ್ಮಮೂಲಂ ವಿಶಾಂಪತೇ ॥೫॥

ಎಲೈ ರಾಜನೇ! ವಿನಯವನ್ನು ತೋರಿಸುವ ರೀತಿಯನ್ನು ತಿಳಿದ ಅವನು ಬೃಹಸ್ಪತಿಗಳಿಗೆ ವಿನಯವನ್ನು ತೋರಿಸಿ, ಬಹುದಕ್ಷಿಣೆಯನ್ನು ನೀಡಿ, ವಿಧಿಪೂರ್ವಕವಾಗಿ ನಮಸ್ಕಾರವನ್ನು ಮಾಡಿ, ಪ್ರಜೆಗಳ ಧರ್ಮಮೂಲಕವಾದ ಹಿತವನ್ನು ಬಯಸಿ, ಸರ್ವಭೂತಹಿತದಲ್ಲಿ ರತನಾಗಿ ರಾಜ್ಯಪಾಲನೆಯ ಪ್ರಕಾರವನ್ನು ಪ್ರಶ್ನೆ ಮಾಡಿದನು.

ಕೇನ ಭೂತಾನಿ ವರ್ಧಂತೇ ಕ್ಷಯಂ ಗಚ್ಛಂತಿ ಕೇನ ಚ।
ಕಮರ್ಚಂತೋ ಮಹಾಪ್ರಾಜ್ಞಾಸುಖಮತ್ಯಂತಮಾಪ್ನುಯುಃ ॥೬॥

ಏತನ್ಮೇ ಶಂಸ ದೇವರ್ಷೇ ಧರ್ಮಕಾಮಾರ್ಥಸಂಶಯಮ್ ।

ಎಲೈ ಮಹಾಪ್ರಾಜ್ಞರೇ! ಜೀವರು (ಪ್ರಜೆಗಳು) ಯಾವುದರಿಂದ ಅಭಿವೃದ್ಧಿಯನ್ನು ಹೊಂದುತ್ತಾರೆ? ಯಾವುದರಿಂದ ನಾಶವನ್ನು ಹೊಂದುತ್ತಾರೆ? ಯಾವನನ್ನು ಪೂಜಿಸಿ ಅತ್ಯಂತಸುಖವನ್ನು ಹೊಂದಿಯಾರು? ಎಲೈ ದೇವಋಷಿಗಳೇ! ಧರ್ಮಕಾಮಾರ್ಥಗಳಿಗೆ ಸಂಬಂಧಿಸಿದ ನನ್ನ ಈ ಸಂಶಯವನ್ನು ಪರಿಹರಿಸಿ.

ಇತಿ ಪೃಷ್ಟೋ ಮಹಾರಾಜಾ ಕೌಸಲ್ಯೇನಾಮಿತೌಜಸಾ ।
ರಾಜಸತ್ಕಾರಮವ್ಯಗ್ರಃ ಶಶಂಸಾಸ್ಯೈ ಬೃಹಸ್ಪತಿಃ ॥೭॥

ಅಮಿತಪರಾಕ್ರಮಿಯಾದ ಕೋಸಲಾಧಿಪತಿಯಾದ ಮಹಾರಾಜನಿಂದ ಹೀಗೆ ಪ್ರಶ್ನೆ ಮಾಡಲ್ಪಟ್ಟ ಬೃಹಸ್ಪತಿಗಳು ಅವನಿಗೆ ಸಮಾಧಾನದಿಂದ ರಾಜನನ್ನು ಪೂಜಿಸುವುದಕ್ಕೆ ಕಾರಣವನ್ನು ತಿಳಿಸಿದರು.

ರಾಜಮೂಲೋ ಮಹಾರಾಜ ಧರ್ಮೋ ಲೋಕಸ್ಯ ಲಕ್ಷ್ಯತೇ ।
ಪ್ರಜಾ ರಾಜಭಯಾದೇವ ನ ಖಾದಂತಿ ಪರಸ್ಪರಮ್ ॥೮॥

ಎಲೈ ಮಹಾರಾಜನೇ! ಪ್ರಜೆಗಳ ಧರ್ಮವು ಲೋಕದಲ್ಲಿ ರಾಜನ ಮೂಲಕವಾದುದು ಎಂದು ಕಂಡುಬರುತ್ತದೆ. ರಾಜನ ಭಯದಿಂದಲೇ ಪ್ರಜೆಗಳು ಒಬ್ಬರನ್ನೊಬ್ಬರು ತಿನ್ನುವುದಿಲ್ಲ.

ರಾಜಾ ಹ್ಯೇವಾಖಿಲಂ ಲೋಕಂ ಸಮುದೀರ್ಣಂ ಸಮುತ್ಸುಕಮ್ ।
ಪ್ರಸಾದಯತಿ ಧರ್ಮೇಣ ಪ್ರಸಾದ್ಯ ಚ ವಿರಾಜತೇ ॥೯॥

ರಾಜನೇ ಸಮೃದ್ಧಿಯಿಂದ ಬೀಗಿದ ಉತ್ಸುಕರಾದ ಎಲ್ಲ ಪ್ರಜೆಗಳನ್ನೂ ಪ್ರಸನ್ನಗೊಳಿಸುತ್ತಾನೆ ಮತ್ತು ಧರ್ಮದಿಂದ ಪ್ರಸನ್ನಗೊಳಿಸಿ ತಾನು ಪ್ರಕಾಶಿಸುತ್ತಾನೆ.

ಯಥಾ ಹ್ಯನುದಯೇ ರಾಜನ್ ಭೂತಾನಿ ಶಶಿಸೂರ್ಯಯೋಃ ।
ಅಂಧೇ ತಮಸಿ ಮಜ್ಜೇಯುರಪಶ್ಯಂತಃ ಪರಸ್ಪರಮ್ ॥೧೦॥

ಯಥಾ ಹ್ಯನುದಕೇ ಮತ್ಸ್ಯಾ ನಿರಾಕ್ರಂದೇ ವಿಹಂಗಮಾಃ ।
ವಿಹರೇಯುರ್ಯಥಾಕಾಮಮಭಿಸೃತ್ಯ ಪುನಃ ಪುನಃ ॥೧೧॥

ವಿಮಥ್ಯಾತಿಕ್ರಮೇರಂಶ್ಚ ವಿಷಹ್ಯಾಪಿ ಪರಸ್ಪರಮ್ ।
ಅಭಾವಮಚಿರೇಣೈವ ಗಚ್ಛೇಯುರ್ನಾತ್ರ ಸಂಶಯಃ ॥೧೨॥

ಏವಮೇವ ವಿನಾ ರಾಜ್ಞಾ ವಿನಶ್ಯೇಯುರಿಮಾಃ ಪ್ರಜಾಃ ।
ಅಂಧೇ ತಮಸಿ ಮಜ್ಜೇಯುರಗೋಪಾಃ ಪಶವೋ ಯಥಾ ॥೧೩॥

ಎಲೈ ರಾಜನೇ! ಚಂದ್ರಸೂರ್ಯರು ಉದಯಿಸದಿದ್ದಾಗ ಪ್ರಜೆಗಳು ಒಬ್ಬರನ್ನೊಬ್ಬರು ಕಾಣದೆ ಹೇಗೆ ಕತ್ತಲೆಯಲ್ಲಿ ಮುಳುಗುತ್ತಾರೆಯೋ, ಹೇಗೆ ನೀರಿಲ್ಲದ ಸ್ಥಳದಲ್ಲಿ ಮತ್ಸ್ಯಗಳು ನಾಶವನ್ನು ಹೊಂದುತ್ತವೆಯೋ, ಹೇಗೆ ಹಿಂಸ್ರಪ್ರಾಣಿಗಳಿರುವ ಆಕಾಶದಲ್ಲಿ ಪಕ್ಷಿಗಳು ಪುನಃ ಪುನಃ ಒಂದನ್ನೊಂದು ಸಮೀಪಿಸಿ ವಿಹಾರಮಾಡಿದರೂ ಪರಸ್ಪರವಾಗಿ ಆಕ್ರಮಿಸಿ ಇನ್ನೊಂದು ಪಕ್ಷಿಯ ಆಕ್ರಮಣವನ್ನು ತಡೆದುಕೊಂಡು ಶೀಘ್ರವಾಗಿ ನಿಃಸಂಶಯವಾಗಿ ನಾಶವನ್ನು ಹೊಂದುತ್ತವೆಯೋ, ಹೇಗೆ ಗೋಪಾಲಕನಿಲ್ಲದ ಪಶುಗಳು ಕತ್ತಲೆಯಲ್ಲಿ ಮುಳುಗುತ್ತವೆಯೋ ಅದರಂತೆ ರಾಜನಿಲ್ಲದ ಈ ಪ್ರಜೆಗಳು ನಾಶವನ್ನು ಹೊಂದಿಯಾರು!

ಹರೇಯುರ್ಬಲವಂತೋ ಹಿ ದುರ್ಬಲಾನಾಂ ಪರಿಗ್ರಹಾನ್ ।
ಹನ್ಯುರ್ವ್ಯಾಯಚ್ಛಮಾನಾಶ್ಚ ಯದಿ ರಾಜಾ ನ ಪಾಲಯೇತ್ ॥೧೪॥

ರಾಜನು ಪಾಲಿಸದಿದ್ದರೆ ಬಲಿಷ್ಠರಾದ ಪ್ರಜೆಗಳು ದುರ್ಬಲರ ಸ್ವತ್ತುಗಳನ್ನು ಅಪಹರಿಸಿಯಾರು! ಪರಾಕ್ರಮವನ್ನು ಆಶ್ರಯಿಸಿ ಕೊಂದಾರು!

ಯಾನಂ ವಸ್ತ್ರಮಲಂಕಾರಾನ್ ರತ್ನಾನಿ ವಿವಿಧಾನಿ ಚ।
ಹರೇಯುಃ ಸಹಸಾ ಪಾಪಾ ಯದಿ ರಾಜಾ ನ ಪಾಲಯೇತ್ ॥೧೫॥

ರಾಜನು ರಕ್ಷಿಸದಿದ್ದರೆ ಪಾಪಿಗಳಾದವರು ವಾಹನ, ವಸ್ತ್ರ, ಅಲಂಕಾರಗಳು ವಿವಿಧವಾದ ರತ್ನಗಳು ಎಲ್ಲವನ್ನೂ ಬಲಾತ್ಕಾರದಿಂದ ಅಪಹರಿಸಿಯಾರು!

ಮಮೇದಮಿತಿ ಲೋಕೇऽಸ್ಮಿನ್ನ ಭವೇತ್ ಸಂಪರಿಗ್ರಹಃ।
ನ ದಾರಾ ನ ಚ ಪುತ್ರಃ ಸ್ಯಾನ್ನ ಧನಂ ನ ಪರಿಗ್ರಹಃ ॥೧೬॥

ಲೋಕದಲ್ಲಿ ಇದು ನನ್ನದು ಎಂದು ಹೇಳುವ ಸ್ವತ್ತು ಅದು ಪತ್ನಿಯಾಗಲೀ, ಪುತ್ರನಾಗಲೀ, ಧನವಾಗಲೀ, ಉಳಿದ ಸಾಧನಗಳಾಗಲೀ ಯಾವದೂ ಇರಲಾರದು. ರಾಜನು ಪಾಲಿಸದಿದ್ದರೆ ಸರ್ವಲೋಪವುಂಟಾದೀತು!

ಮಾತರಂ ಪಿತರಂ ವೃದ್ಧಮಾಚಾರ್ಯಮತಿಥಿಂ ಗುರುಮ್ ।
ಕ್ಲಿಶ್ನೀಯುರಪಿ ಹಿಂಸ್ಯುರ್ವಾ ಯದಿ ರಾಜಾ ನ ಪಾಲಯೇತ್ ॥೧೭॥

ರಾಜನು ರಕ್ಷಿಸದಿದ್ದರೆ ತಂದೆಯನ್ನು, ತಾಯಿಯನ್ನು, ವೃದ್ಧನನ್ನು, ಆಚಾರ್ಯ -ನನ್ನು, ಅತಿಥಿಯನ್ನು, ಗುರುವನ್ನು ಕ್ಲೇಶಗೊಳಿಸಿಯಾರು! ಅಥವಾ ಕೊಂದಾರು!

ಪತೇದ್ ಬಹುವಿಧಂ ಶಸ್ತ್ರಂ ಬಹುಧಾ ಧರ್ಮಚಾರಿಷು।
ಅಧರ್ಮಃ ಪ್ರಗೃಹೀತಃ ಸ್ಯಾದ್ ಯದಿ ರಾಜಾ ನ ಪಾಲಯೇತ್ ॥೧೮॥

ರಾಜನು ಪಾಲಿಸದಿದ್ದರೆ ಧರ್ಮಾಚರಣೆಯನ್ನು ಮಾಡುವವರ ಮೇಲೆ ಅನೇಕ ವಿಧವಾದ ಶಸ್ತ್ರಗಳು ಅನೇಕ ರೀತಿಯಲ್ಲಿ ಬಿದ್ದಾವು! ಅಧರ್ಮವು ಒಳ್ಳೆಯ ಸ್ವೀಕಾರ -ವನ್ನು ಪಡೆದೀತು!

ವಧಬಂಧಪರಿಕ್ಲೇಶೋ ನಿತ್ಯಮರ್ಥವತಾಂ ಭವೇತ್ ।
ಮಮತ್ವಂ ಚ ನ ವಿಂದೇಯುರ್ಯದಿ ರಾಜಾ ನ ಪಾಲಯೇತ್ ॥೧೯॥

ಧನವುಳ್ಳವರಿಗೆ ನಿತ್ಯವೂ ವಧೆ, ಬಂಧ ಪರಿಕ್ಲೇಶಗಳು ಉಂಟಾದಾವು. ರಾಜನು ಪಾಲಿಸದಿದ್ದರೆ ನನ್ನದು ಎಂದು ಹೇಳುವ ಯಾವ ಸ್ವತ್ತೂ ಉಳಿಯಲಾರದು.

ಅಂತಶ್ಚಾಕಾಶಮೇವ ಸ್ಯಾಲ್ಲೋಕೋऽಯಂ ದಸ್ಯುಸಾದ್ ಭವೇತ್ ।
ಪತೇಚ್ಚ ನರಕಂ ಘೋರಂ ಯದಿ ರಾಜಾ ನ ಪಾಲಯೇತ್ ॥೨೦॥

ಇಂತಹ ಅಪಚಾರಗಳಿಗೆ ಆಕಾಶವೇ ಎಲ್ಲೆಯಾದೀತು! ಈ ಲೋಕವು ದಸ್ಯುಗಳ ವಶವಾದೀತು! ರಾಜನು ಪಾಲಿಸದಿದ್ದರೆ ಇಲ್ಲಿಯೇ ಘೋರವಾದ ನರಕವುಂಟಾದೀತು!

ನ ಯೋನಿದೋಷೋ ವರ್ತೇತ ನ ಕೃಷಿರ್ನ ವಣಿಕ್ಪಥಃ ।
ಮಜ್ಜೇದ್ ಧರ್ಮಸ್ತ್ರಯೀ ನ ಸ್ಯಾದ್ ಯದಿ ರಾಜಾ ನ ಪಾಲಯೇತ್॥೨೧॥

ರಾಜನು ಪಾಲಿಸದಿದ್ದರೆ ಯೋನಿದೋಷವೆಂಬುದೇ ಇರಲಾರದು. ಕೃಷಿಯಾಗಲೀ ವಾಣಿಜ್ಯಮಾರ್ಗಗಳಾಗಲೀ ಇರಲಾರವು! ಧರ್ಮವು ನಶಿಸಿ ಹೋದೀತು! ಮೂರು ವೇದಗಳು ಇರಲಾರವು!

ನ ಯಜ್ಞಾಃ ಸಂಪ್ರವರ್ತೇರನ್ ವಿಧಿವತ್ ಸಾಪ್ತದಕ್ಷಿಣಾಃ ।
ನ ವಿವಾಹಾಃ ಸಮಾಜೋ ವಾ ಯದಿ ರಾಜಾ ನ ಪಾಲಯೇತ್ ॥೨೨॥

ಬಹಳ ದಕ್ಷಿಣೆಯನ್ನು ಕೊಟ್ಟು ವಿಧಿವತ್ತಾಗಿ ಮಾಡುವ ಯಜ್ಞಗಳು ನಡೆಯಲಾರವು. ರಾಜನು ಪಾಲಿಸದಿದ್ದರೆ ವಿವಾಹಗಳಾಗಲೀ, ಸಭೆಗಳಾಗಲೀ ನಡೆಯಲಾರವು.

ನ ವೃಷಾಃ ಸಂಪ್ರವರ್ತೇರನ್ನ ಮಥ್ಯೇರಂಶ್ಚ ಗರ್ಗರಾಃ ।
ಘೋಷಾಃ ಪ್ರಣಾಶಂ ಗಚ್ಛೇಯುರ್ಯದಿ ರಾಜಾ ನ ಪಾಲಯೇತ್ ॥೨೩॥

(ರಾಜನು ಪಾಲಿಸದಿದ್ದರೆ) ಹಳ್ಳಿಗಳಲ್ಲಿ ಹೋರಿಗಳು ಹಸುಗಳಲ್ಲಿ ಗರ್ಭಾಧಾನ ಮಾಡಲಾರವು. ಮೊಸರಿನ ಪಾತ್ರೆಗಳು ಕಡೆಯಲ್ಪಡಲಾರವು. ಗೋಪಾಲಕರ ಹಳ್ಳಿಗಳು ನಾಶವನ್ನು ಹೊಂದಿಯಾವು!

ತ್ರಸ್ತಮುದ್ವಿಗ್ನಹೃದಯಂ ಹಾಹಾಭೂತಮಚೇತನಮ್ ।
ಕ್ಷಣೇನ ವಿನಶೇತ್ ಸರ್ವಂ ಯದಿ ರಾಜಾ ನ ಪಾಲಯೇತ್ ॥೨೪॥

ರಾಜನು ಪಾಲಿಸದಿದ್ದರೆ ಎಲ್ಲವೂ ಒಂದು ಕ್ಷಣದಲ್ಲಿ ಮನಸ್ಸಿನ ಉದ್ವೇಗದಿಂದ ಕೂಡಿ ಹಾಹಾಕಾರವನ್ನು ಮಾಡಿ ಪ್ರಜ್ಞಾಶೂನ್ಯವಾಗಿ ನಶಿಸಿಹೋದೀತು!

ನ ಸಂವತ್ಸರಸತ್ರಾಣಿ ತಿಷ್ಠೇಯುರಕುತೋಭಯಾಃ ।
ವಿಧಿವದ್ ದಕ್ಷಿಣಾವಂತಿ ಯದಿ ರಾಜಾ ನ ಪಾಲಯೇತ್ ॥೨೫॥

ರಾಜನು ಪಾಲಿಸದಿದ್ದರೆ ವಿಧಿಪೂರ್ವಕವಾಗಿ ದಕ್ಷಿಣಾಯುಕ್ತವಾಗಿ ಮಾಡುವ ಸಂವತ್ಸರಸತ್ರಗಳು ನಿರ್ಭಯವಾಗಿ ನಡೆಯಲಾರವು.

ಬ್ರಾಹ್ಮಣಾಶ್ಚತುರೋ ವೇದಾನ್ ನಾಧೀಯೇರಂಸ್ತಪಸ್ವಿನಃ ।
ವಿದ್ಯಾಸ್ನಾತಾಸ್ತಪಃ ಸ್ನಾತಾ ಯದಿ ರಾಜಾ ನ ಪಾಲಯೇತ್ ॥೨೬॥

ರಾಜನು ಪಾಲಿಸದಿದ್ದರೆ ತಪಸ್ವಿಗಳೂ, ವಿದ್ಯಾಪಾರಂಗತರೂ, ತಪಃ ಪಾರಂಗತರೂ ಆದ ಬ್ರಾಹ್ಮಣರು ನಾಲ್ಕುವೇದಗಳನ್ನು ಅಧ್ಯಯನ ಮಾಡಲಾರರು.

ಹಸ್ತಾಹಸ್ತಂ ಸ ಪರಿಮೃಶೇತ್ ಭಿದ್ಯೇರನ್ ಸರ್ವಸೇತವಃ ।
ಭಯಾರ್ತಂ ವಿದ್ರವೇತ್ ಸರ್ವಂ ಯದಿ ರಾಜಾ ನ ಪಾಲಯೇತ್ ॥೨೭॥

ಮುಷ್ಟಾಮುಷ್ಟಿಕಲಹವು ಪ್ರಾರಂಭವಾದೀತು! ಎಲ್ಲ ಕಟ್ಟುಪಾಡುಗಳೂ ಭಗ್ನವಾದಾವು! ರಾಜನು ಪಾಲಿಸದಿದ್ದರೆ ಭಯದಿಂದ ಹೆದರಿ ಎಲ್ಲವೂ ಓಡಿಹೋದೀತು!

ನ ಲಭೇದ್ ಧರ್ಮಸಂಶ್ಲೇಷಂ ಹತವಿಗ್ರಹತೋ ಜನಃ।
ಹರ್ತಾ ಸ್ವಸ್ಥೇಂದ್ರಿಯೋ ಗಚ್ಛೇದ್ ಯದಿ ರಾಜಾ ನ ಪಾಲಯೇತ್ ॥೨೮॥

ಮೋಹಕ್ಕೂ ಕಲಹಕ್ಕೂ ಸಿಲುಕಿದ ಜನರು ಧರ್ಮದ ಸಂಬಂಧವನ್ನೇ ಹೊಂದ-ಲಾರರು! ರಾಜನು ಪಾಲಿಸದಿದ್ದರೆ ಧನಾದಿಗಳ ಅಪಹಾರವನ್ನು ಮಾಡುವವನು ನಿಶ್ಚಿಂತೆಯಿಂದ ಹೋದಾನು!

ಅನಯಾಃ ಸಂಪ್ರವರ್ತೇರನ್ ಭವೇದ್ ವೈ ವರ್ಣಸಂಕರಃ।
ದುರ್ಭಿಕ್ಷಮಾವಿಶೇದ್ ರಾಷ್ಟ್ರಂ ಯದಿ ರಾಜಾ ನ ಪಾಲಯೇತ್ ॥೨೯॥

ರಾಜನು ಪಾಲಿಸದಿದ್ದರೆ ಅನ್ಯಾಯಗಳು ಉಂಟಾದಾವು. ವರ್ಣಸಂಕರವು ಉಂಟಾದೀತು! ರಾಜ್ಯಕ್ಕೆ ದುರ್ಭಿಕ್ಷವು ಬಂದೀತು!

ವಿವೃತ್ಯ ಹಿ ಯಥಾಕಾಮಂ ಗೃಹದ್ವಾರಾಣಿ ಶೇರತೇ।
ಮನುಷ್ಯಾ ರಕ್ಷಿತಾ ರಾಜ್ಞಾ ಸಮಂತಾದಕುತೋಭಯಾಃ ॥೩೦॥

ರಾಜನು ರಕ್ಷಿಸಿದರೆ ಪ್ರಜೆಗಳು ಎಲ್ಲ ಕಡೆಗಳಲ್ಲಿಯೂ ಮನೆಯ ಬಾಗಿಲನ್ನು ತೆರೆದು ತಮ್ಮ ಮನಸ್ಸಿಗೆ ಬಂದಂತೆ ನಿದ್ರೆಯನ್ನು ಮಾಡುತ್ತಾರೆ.

ನಾಕ್ರುಷ್ಟಂ ಸಹತೇ ಕಶ್ಚಿತ್ ಕುತೋ ಹಸ್ತಸ್ಯ ಲಂಘನಮ್ ।
ಯದಿ ರಾಜಾ ನ ಸಮ್ಯಗ್ ಗಾಂ ರಕ್ಷಯತ್ಯತಿಧಾರ್ಮಿಕಃ।
ಯದಿ ರಾಜಾ ಮನುಷ್ಯೇಷು ತ್ರಾತಾ ಭವತಿ ಧಾರ್ಮಿಕಃ ॥೩೧॥

ರಾಜನು ಅತಿಧಾರ್ಮಿಕನಾಗಿ ಭೂಮಿಯನ್ನು ರಕ್ಷಿಸದಿದ್ದರೆ ಒಬ್ಬನ ಮಾತನ್ನು ಇನ್ನೊಬ್ಬನು ಸಹಿಸಲಾರನು. ಪ್ರೀತಿಯ ಹಸ್ತಲಾಘವವು ಎಲ್ಲಿಂದ ಬರಬೇಕು. ರಾಜನು ಧಾರ್ಮಿಕನಾದರೆ ಮನುಷ್ಯರನ್ನು ರಕ್ಷಿಸುವನು.

ಸ್ತ್ರಿಯಶ್ಚಾಪುರುಷಾ ಮಾರ್ಗಂ ಸರ್ವಾಲಂಕಾರಭೂಷಿತಾಃ।
ನಿರ್ಭಯಾಃ ಪ್ರತಿಪದ್ಯಂತೇ ಯದಾ ರಕ್ಷತಿ ಭೂಮಿಪಃ ॥೩೨॥

ರಾಜನು ಧಾರ್ಮಿಕನಾಗಿ ಮನುಷ್ಯರನ್ನು ರಕ್ಷಿಸುವವನಾದರೆ ಸ್ತ್ರೀಯರು ಮತ್ತು ಪುರುಷರು ಸರ್ವಾಲಂಕಾರಭೂಷಿತರಾಗಿ ಮಾರ್ಗಗಳಲ್ಲಿ ನಿರ್ಭಯರಾಗಿ ಸಂಚರಿಸುವರು.

ಧರ್ಮಮೇವ ಪ್ರಪದ್ಯಂತೇ ನ ಹಿಂಸಂತಿ ಪರಸ್ಪರಮ್ ।
ಅನುಗೃಹ್ಣಂತಿ ಚಾನ್ಯೋನ್ಯಂ ಯದಾ ರಕ್ಷತಿ ಭೂಮಿಪಃ ॥೩೩॥

ರಾಜನು ರಕ್ಷಣೆ ಮಾಡುವ ಕಾಲದಲ್ಲಿ ಪ್ರಜೆಗಳು ಧರ್ಮವನ್ನೇ ಆಶ್ರಯಿಸುತ್ತಾರೆ. ಪರಸ್ಪರವಾಗಿ ಹಿಂಸಿಸುವುದಿಲ್ಲ. ಪರಸ್ಪರವಾಗಿ ಉಪಕಾರವನ್ನು ಮಾಡುತ್ತಾರೆ.

ಯಜಂತೇ ಚ ತ್ರಯೋ ವರ್ಣಾ ಮಹಾಯಜ್ಞೈಃ ಪೃಥಗ್ವಿಧೈಃ ।
ಯುಕ್ತಾಶ್ಚಾಧ್ಯೀಯತೇ ಶಾಸ್ತ್ರಂ ಯದಾ ರಕ್ಷತಿ ಭೂಮಿಪಃ ॥೩೪॥

ಬಹುವಿಧವಾದ ದೊಡ್ಡ ಯಜ್ಞಗಳಿಂದ ಮೂರು ವರ್ಣದವರೂ ಯಾಗವನ್ನು ಮಾಡುತ್ತಾರೆ. ರಾಜನು ಭೂಮಿಯನ್ನು ರಕ್ಷಿಸುವಾಗ ಯೋಗ್ಯರಾದವರು ಶಾಸ್ತ್ರಾಧ್ಯಯನವನ್ನು ಮಾಡುತ್ತಾರೆ.

ವಾರ್ತಾಮೂಲೋ ಹ್ಯಯಂ ಲೋಕಸ್ತ್ರಯ್ಯಾ ವೈ ಧಾರ್ಯತೇ ಸದಾ ।
ತತ್ ಸರ್ವಂ ವರ್ತತೇ ಸಮ್ಯಗ್ ಯದಾ ರಕ್ಷತಿ ಭೂಮಿಪಃ ॥೩೫॥

ವಾಣಿಜ್ಯಮೂಲವಾದ ಈ ಲೋಕವು ಮೂರು ವೇದಗಳಿಂದ ಧರಿಸಲ್ಪಡುತ್ತದೆ. ರಾಜನು ರಕ್ಷಿಸುವವನಾದರೆ ಅವೆಲ್ಲವೂ ಸರಿಯಾಗಿ ನಡೆಯುತ್ತದೆ.

ಯದಾ ರಾಜಾ ಧುರಂ ಶ್ರೇಷ್ಠಾಮಾದಾಯ ವಹತಿ ಪ್ರಜಾಃ ।
ಮಹತಾ ಬಲಯೋಗೇನ ತದಾ ಲೋಕಃ ಪ್ರಸೀದತಿ ॥೩೬॥

ಯಾವಾಗ ರಾಜನು ಶ್ರೇಷ್ಠವಾದ ಭಾರವನ್ನು ಹೊತ್ತು, ದೊಡ್ಡ ಸೈನ್ಯದೊಂದಿಗೆ ಪ್ರಜೆಗಳ ರಕ್ಷಣೆಯ ಭಾರವನ್ನು ಹೊರುತ್ತಾನೆಯೋ ಆಗ ಲೋಕವು ಪ್ರಸನ್ನವಾಗುತ್ತದೆ.

ಯಸ್ಯಾಭಾವೇ ಚ ಭೂತಾನಾಮಭಾವಃ ಸ್ಯಾತ್ ಸಮಂತತಃ।
ಭಾವೇ ಚ ಭಾವೋ ನಿತ್ಯಃ ಸ್ಯಾತ್ ಕಸ್ತಂ ನ ಪ್ರತಿಪೂಜಯೇತ್ ॥೩೭॥

ಯಾವನಿಲ್ಲದಿದ್ದರೆ ಎಲ್ಲ ಕಡೆಗಳಲ್ಲಿಯೂ ಎಲ್ಲ ಮನುಷ್ಯರು ಮತ್ತು ಪಶುಗಳು ನಾಶವನ್ನು ಹೊಂದುವವೋ, ಯಾವನಿದ್ದರೆ ನಿತ್ಯವೂ ಎಲ್ಲವೂ ಉಳಿಯುವವೋ ಅಂತಹ ರಾಜನನ್ನು ಯಾವನು ಪೂಜಿಸಲಾರ?

ತಸ್ಯ ಯೋ ವಹತೇ ಭಾರಂ ಸರ್ವಲೋಕಸುಖಾವಹಮ್।
ತಿಷ್ಠನ್ ಪ್ರಿಯಹಿತೇ ರಾಜ್ಞ ಉಭೌ ಲೋಕಾವಿಮೌ ಜಯೇತ್ ॥೩೮॥

ರಾಜನಿಗೆ ಪ್ರಿಯನೂ ಹಿತನೂ, ಆಗಿದ್ದು ರಾಜನು ಹೊರುವ, ಸರ್ವಲೋಕಕ್ಕೆ ಸುಖವನ್ನು ತಂದುಕೊಡುವ, ಭಾರದಲ್ಲಿ ಯಾವನು ಸಹಕಾರಿಯಾಗಿ ಭಾರವನ್ನು ಹೊರುತ್ತಾನೆಯೋ ಅವನೂ ಈ ಎರಡು ಲೋಕಗಳನ್ನು ಹೊಂದಿಯಾನು!

ಯಸ್ತಸ್ಯ ಪುರುಷಃ ಪಾಪಂ ಮನಸಾಪ್ಯನುಚಿಂತಯೇತ್।
ಅಸಂಶಯಮಿಹ ಕ್ಲಿಷ್ಟಃ ಪ್ರೇತ್ಯಾಪಿ ನರಕಂ ಪತೇತ್ ॥೩೯॥

ಯಾವ ಪುರುಷನು ಅಂತಹ ರಾಜನಿಗೆ ಮನಸ್ಸಿನಲ್ಲಿಯಾದರೂ ಪಾಪವನ್ನು ಚಿಂತಿಸುತ್ತಾನೆಯೋ ಅವನು ನಿಃಸಂಶಯವಾಗಿ ಇಲ್ಲಿ ಕ್ಲೇಶವನ್ನು ಹೊಂದಿ ಮರಣಾನಂತರದಲ್ಲಿಯೂ ನರಕದಲ್ಲಿ ಬಿದ್ದಾನು?

ನ ಹಿ ಜಾತ್ವವಮಂತವ್ಯೋ ಮನುಷ್ಯ ಇತಿ ಭೂಮಿಪಃ।
ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ ॥೪೦॥

ರಾಜನನ್ನು ಮನುಷ್ಯನೆಂಬ ಭಾವನೆಯಿಂದ ಎಂದೂ ಅವಮಾನ ಮಾಡಬಾರದು. ರಾಜನೆಂದರೆ ಮನುಷ್ಯರೂಪದಲ್ಲಿರುವ ದೊಡ್ಡ ದೇವತೆ ಎಂದು ತಿಳಿಯಬೇಕು.

ಕುರುತೇ ಪಂಚ ರೂಪಾಣಿ ಕಾಲಯುಕ್ತಾನಿ ಯಃ ಸದಾ।
ಭವತ್ಯಗ್ನಿಸ್ತಥಾದಿತ್ಯೋ ಮೃತ್ಯುರ್ವೈಶ್ರವಣೋ ಯಮಃ ॥೪೧॥

ರಾಜನು ಯಾವಾಗಲೂ ಆಯಾಕಾಲಕ್ಕೆ ತಕ್ಕಂತೆ ಐದು ರೂಪಗಳನ್ನು ಧರಿಸುತ್ತಾನೆ. ಅವನು ಅಗ್ನಿಯಾಗುತ್ತಾನೆ; ಸೂರ್ಯನಾಗುತ್ತಾನೆ; ಮೃತ್ಯುವೂ, ಕುಬೇರನೂ, ಯಮನೂ ಆಗುತ್ತಾನೆ.

ಯದಾ ಹ್ಯಾಸೀದತಃ ಪಾಪಾನ್ ದಹತ್ಯುಗ್ರೇಣ ತೇಜಸಾ ।
ಮಿಥ್ಯೋಪಚರಿತೋ ರಾಜಾ ತದಾ ಭವತಿ ಪಾವಕಃ ॥೪೨॥

ಪಾಪಿಗಳಾದವರು ತನ್ನ ಸಮೀಪಕ್ಕೆ ಬಂದರೆ ಅವರನ್ನು ತನ್ನ ತೇಜಸ್ಸಿನಿಂದ ದಹಿಸುತ್ತಾನೆ. ಸುಳ್ಳಿನಿಂದ ವ್ಯವಹರಿಸಲ್ಪಟ್ಟಾಗ ರಾಜನು ಅಗ್ನಿಯಾಗುತ್ತಾನೆ.

ಯದಾ ಪಶ್ಯತಿ ಚಾರೇಣ ಸರ್ವಭೂತಾನಿ ಭೂಮಿಪಃ ।
ಕ್ಷೇಮಂ ಚ ಕೃತ್ವಾವ್ರಜತಿ ತದಾ ಭವತಿ ಭಾಸ್ಕರಃ ॥೪೩॥

ಯಾವಾಗ ರಾಜನಾದವನು ಚಾರರ ಮೂಲಕ ಎಲ್ಲ ಪ್ರಜೆಗಳನ್ನು ನೋಡಿ, ಕ್ಷೇಮವನ್ನು ಮಾಡಿ ಮುಂದೆ ಸಾಗುತ್ತಾನೆಯೋ ಆಗ ಅವನು ಸೂರ್ಯನಾಗುತ್ತಾನೆ.

ಅಶುಚೀಂಶ್ಚ ಯದಾ ಕ್ರುದ್ಧಃ ಕ್ಷಿಣೋತಿ ಶತಶೋ ನರಾನ್ ।
ಸಪುತ್ರಪೌತ್ರಾನ್ ಸಾಮಾತ್ಯಾಂಸ್ತಥಾ ಭವತಿ ಸೋಽಂತಕಃ ॥೪೪॥

ಅಶುಚಿಗಳಾದ ಜನರ ಮೇಲೆ ಕೋಪಗೊಂಡು ನೂರಾರು ಸಂಖ್ಯೆಯಲ್ಲಿ ಪುತ್ರಪೌತ್ರರಿಂದ ಮತ್ತು ಅಮಾತ್ಯರಿಂದ ಕೂಡಿದ ಅಂತಹ ನರರನ್ನು ಅಥವಾ ರಾಜರನ್ನು ನಾಶಮಾಡುವಾಗ ಅವನು ಮೃತ್ಯುವಾಗುತ್ತಾನೆ.

ಯದಾ ತ್ವಧಾರ್ಮಿಕಾನ್ ಸರ್ವಾಂಸ್ತೀಕ್ಷ್ಣೈರ್ದಂಡೈರ್ನಿಯಚ್ಛತಿ ।
ಧಾರ್ಮಿಕಾಂಶ್ಚಾನುಗೃಹ್ಣಾತಿ ಭವತ್ಯಥ ಯಮಸ್ತಥಾ ॥೪೫॥

ಯಾವಾಗ ಅಧಾರ್ಮಿಕರೆಲ್ಲರನ್ನೂ ತೀಕ್ಷ್ಣವಾದ ಶಿಕ್ಷೆಯಿಂದ ನಿಯಂತ್ರಿಸಿ, ಧಾರ್ಮಿಕರಿಗೆ ಅನುಗ್ರಹವನ್ನು ಮಾಡುತ್ತಾನೆಯೋ ಆಗ ಅವನು ಯಮನಾಗುತ್ತಾನೆ.

ಯದಾ ತು ಧನಧಾರಾಭಿಸ್ತರ್ಪಯತ್ಯುಪಕಾರಿಣಃ।
ಆಚ್ಛಿನತ್ತಿ ಚ ರತ್ನಾನಿ ವಿವಿಧಾನ್ಯಪಕಾರಿಣಾಮ್ ॥೪೬॥

ಶ್ರಿಯಂ ದದಾತಿ ಕಸ್ಮೈಚಿತ್ ಕಸ್ಮಾಚ್ಚಿದಪಕರ್ಷತಿ।
ತದಾ ವೈಶ್ರವಣೋ ರಾಜನ್ ಲೋಕೇ ಭವತಿ ಭೂಮಿಪಃ ॥೪೭॥

ಯಾವಾಗ ಉಪಕಾರ ಮಾಡಿದವರಿಗೆ ಧನದ ಮಳೆಯನ್ನು ಸುರಿಸುತ್ತಾನೆಯೋ, ಅಪಕಾರವನ್ನು ಮಾಡಿದವರ ವಿವಿಧರತ್ನಗಳನ್ನು ಅವರಿಂದ ಸೆಳೆದುಕೊಳ್ಳುತ್ತಾನೆಯೋ, ಒಬ್ಬನಿಗೆ ಸಂಪತ್ತನ್ನುನೀಡಿ, ಇನ್ನೊಬ್ಬರಿಂದ ಸಂಪತ್ತನ್ನು ಕಸಿದುಕೊಳ್ಳುತ್ತಾನೆಯೋ ಎಲೈ ರಾಜನೇ! ಆಗ ರಾಜನು ಕುಬೇರನಾಗುತ್ತಾನೆ.

ನಾಸ್ಯಾಪವಾದೇ ಸ್ಥಾತವ್ಯಂ ದಕ್ಷೇಣಾಕ್ಲಿಷ್ಟಕರ್ಮಣಾ।
ಧರ್ಮ್ಯಮಾಕಾಂಕ್ಷತಾ ಲಾಭಮೀಶ್ವರಸ್ಯಾನಸೂಯತಾ ॥೪೮॥

ದಕ್ಷನೂ, ಅಕ್ಲಿಷ್ಟಕಾರಿಯೂ, ಧರ್ಮವನ್ನು ಬಯಸುವವನೂ, ಅಸೂಯಾರಹಿತನೂ, ರಾಜನ ಅನುಗ್ರಹವನ್ನು ಬಯಸುವವನೂ ಆದವನು ರಾಜನನ್ನು ನಿಂದಿಸುತ್ತಿರುವಾಗ ಅಲ್ಲಿ ನಿಲ್ಲಬಾರದು.

ನ ಹಿ ರಾಜ್ಞಃ ಪ್ರತೀಪಾನಿ ಕುರ್ವನ್ ಸುಖಮವಾಪ್ನುಯಾತ್।
ಪುತ್ರೋ ಭ್ರಾತಾ ವಯಸ್ಯೋ ವಾ ಯದ್ಯಪ್ಯಾತ್ಮಸಮೋ ಭವೇತ್ ॥೪೯॥

ರಾಜನಿಗೆ ವಿರೋಧಮಾಡುವವನು ಪುತ್ರನಾಗಲಿ, ಸಹೋದರನಾಗಲಿ, ಸ್ನೇಹಿತನಾಗಲಿ, ರಾಜನಿಗೆ ಸಮಾನನಾದವನಾದವನೇ ಆಗಲಿ ಅವನಿಗೆ ಸುಖವುಂಟಾಗಲಾರದು.

ಕುರ್ಯಾತ್ ಕೃಷ್ಣಗತಿಃ ಶೇಷಂ ಜ್ವಲಿತೋಽನಿಲಸಾರಥಿಃ।
ನ ತು ರಾಜ್ಞಾಽಭಿಪನ್ನಸ್ಯ ಶೇಷಂ ಕ್ವಚನ ವಿದ್ಯತೇ ॥೫೦॥

ವಾಯುಸಹಾಯವುಳ್ಳ ಅಗ್ನಿಯು ಜ್ವಲಿಸಿದರೆ ಸ್ವಲ್ಪಭಾಗವನ್ನು ಉಳಿಸಬಹುದು. ಆದರೆ ರಾಜನಿಗೆ ವಿರೋಧಮಾಡಿದವರಿಗೆ ಅಲ್ಪಭಾಗವೂ ಉಳಿಯುವುದಿಲ್ಲ.

ತಸ್ಯ ಸರ್ವಾಣಿ ರಕ್ಷ್ಯಾಣಿ ದೂರತಃ ಪರಿವರ್ಜಯೇತ್ ।
ಮೃತ್ಯೋರಿವ ಜುಗುಪ್ಸೇತ ರಾಜಸ್ವಹರಣಾನ್ನರಃ ॥೫೧॥

ರಾಜನಿಗೆ ಸಂಬಂಧಿಸಿದ ಕೋಶ-ಧನಾದಿಗಳನ್ನು ದೂರದಿಂದಲೇ ಪರಿತ್ಯಜಿಸ-ಬೇಕು. ಮೃತ್ಯುವನ್ನು ನೋಡಿ ಹೆದರುವಂತೆ ರಾಜಸ್ವವನ್ನು ಅಪಹರಣಮಾಡುವವ-ರಿಂದ ಜುಗುಪ್ಸೆಗೊಂಡು ದೂರವಿರಬೇಕು.

ನಶ್ಯೇದವಿಮೃಶನ್ ಸದ್ಯೋ ಮೃಗಃ ಕೂಟಮಿವ ಸ್ಪೃಶನ್ ।
ಆತ್ಮಸ್ವಮಿವ ಸಂರಕ್ಷೇದ್ ರಾಜಸ್ವಮಿಹ ಬುದ್ಧಿಮಾನ್ ॥೫೨॥

ವಿಚಾರಮಾಡದೇ ರಾಜನ ಸ್ವತ್ತನ್ನು ಸ್ಪರ್ಶಿಸುವವನು ಕಪಟಯಂತ್ರವನ್ನು ಪ್ರವೇಶಿಸುವ ಮೃಗದಂತೆ ನಾಶವನ್ನು ಹೊಂದಿಯಾನು! ವಿವೇಕಿಯಾದವನು ರಾಜಸ್ವ -ವನ್ನು ತನ್ನ ಆಸ್ತಿಯಂತೆ ರಕ್ಷಿಸಬೇಕು.

ಮಹಾಂತಂ ನರಕಂ ಘೋರಮಪ್ರತಿಷ್ಠಮಚೇತಸಃ ।
ಪತಂತಿ ಚಿರರಾತ್ರಾಯ ರಾಜವಿತ್ತಾಪಹಾರಿಣಃ ॥೫೩॥

ರಾಜವಿತ್ತವನ್ನು ಅಪಹಾರಮಾಡುವವರು ದೊಡ್ಡ, ಘೋರವಾದ, ನೆಲೆ ಇಲ್ಲದ, ಪ್ರಜ್ಞಾನಾಶಕವಾದ ನರಕದಲ್ಲಿ ಬಹುಕಾಲದವರೆಗೆ ಬೀಳುತ್ತಾರೆ.

ರಾಜಾ ಭೋಜೋ ವಿರಾಟ್ ಸಮ್ರಾಟ್ ಕ್ಷತ್ರಿಯೋ ಭೂಪತಿರ್ನೃಪಃ ।
ಯ ಏವಂ ಸ್ತೂಯತೇ ಶಬ್ದೈಃ ಕಸ್ತಂ ನಾರ್ಚಿತುಮಿಚ್ಛತಿ ॥೫೪॥

ರಾಜನಾದವನು ಎಲ್ಲ ಜನರಿಗೂ ಸುಖವನ್ನು ಕೊಡುವುದರಿಂದ ಭೋಜ ಎನಿಸುವನು. ವಿಶೇಷವಾಗಿ ಪ್ರಕಾಶಿಸುವುದರಿಂದ ವಿರಾಟ್ ಎನಿಸುವನು. ಚೆನ್ನಾಗಿ ಪ್ರಕಾಶಿಸುವುದರಿಂದ ಸಮ್ರಾಟ್ ಎನಿಸುವನು. ಪ್ರಜೆಗಳನ್ನು ಉಂಟಾಗಬಹುದಾದ ಗಾಯಗಳಿಂದ ರಕ್ಷಿಸುವುದರಿಂದ ಕ್ಷತ್ರಿಯನೆನಿಸುವನು. ಭೂಮಿಗೆ ಒಡೆಯನಾ-ದವನು. ಪ್ರಜೆಗಳಿಗೆ ಒಡೆಯನಾದವನು. ಯಾವ ರಾಜನನ್ನು ಹೀಗೆ ಅನೇಕ ಶಬ್ದ-

ಗಳಿಂದ ಸ್ತೋತ್ರ ಮಾಡುತ್ತಾರೆಯೋ ಅಂತಹವನನ್ನು ಪೂಜಿಸಲು ಯಾವನು ಬಯಸುವುದಿಲ್ಲ ?

ತಸ್ಮಾದ್ ಬುಭೂಷುರ್ನಿಯತೋ ಜಿತಾತ್ಮಾ ಸಂಯತೇಂದ್ರಿಯಃ।
ಮೇಧಾವೀ ಸ್ಮೃತಿಮಾನ್ ದಕ್ಷಃ ಸಂಶ್ರಯೇತ ಮಹೀಪತಿಮ್ ॥೫೫॥

ಆದ್ದರಿಂದ ತನ್ನ ಕಲ್ಯಾಣವನ್ನು ಬಯಸುವವನು ನಿಯಮದಿಂದ ಕೂಡಿ ಇಂದ್ರಿಯಜಯವನ್ನು ಹಾಗೂ ಮನೋಜಯವನ್ನು ಹೊಂದಿದವನಾಗಿ ಮೇಧಾವಿಯಾಗಿ, ದಕ್ಷನಾಗಿ ಒಳ್ಳೆಯ ಸ್ಮೃತಿಯನ್ನು ಹೊಂದಿ ರಾಜನನ್ನು ಆಶ್ರಯಿಸಬೇಕು.

ಕೃತಜ್ಞಂ ಪ್ರಾಜ್ಞಮಕ್ಷುದ್ರಂ ದೃಢಭಕ್ತಿಂ ಜಿತೇಂದ್ರಿಯಮ್ ।
ಧರ್ಮನಿತ್ಯಂ ಸ್ಥಿತಂ ಸ್ಥಿತ್ಯಾಂ ಮಂತ್ರಿಣಂ ಪೂಜಯೇನ್ನೃಪಃ ॥೫೬॥

ರಾಜನಾದರೋ ಕೃತಜ್ಞನೂ, ಪ್ರಾಜ್ಞನೂ, ಕ್ಷುದ್ರತನವಿಲ್ಲದವನೂ, ತನ್ನಲ್ಲಿ ದೃಢಭಕ್ತಿಯುಳ್ಳವನೂ, ಜಿತೇಂದ್ರಿಯನೂ, ನಿತ್ಯವೂ ಧರ್ಮರತನೂ, ಒಳ್ಳೆಯ ಸ್ಥಿತಿವಂತನೂ ಆದ ಮಂತ್ರಿಯನ್ನು ಪೂಜಿಸಬೇಕು.

ದೃಢಭಕ್ತಿಂ ಕೃತಪ್ರಜ್ಞಂ ಧರ್ಮಜ್ಞಂ ಸಂಯತೇಂದ್ರಿಯಮ್ ।
ಶೂರಮಕ್ಷುದ್ರಕರ್ಮಾಣಂ ಪ್ರಸಿದ್ಧಜನಮಾಶ್ರಯೇತ್ ॥೫೭॥

ಮತ್ತು ದೃಢಭಕ್ತಿಯುಳ್ಳ, ಸ್ಥಿತಪ್ರಜ್ಞನಾದ, ಧರ್ಮಜ್ಞನಾದ, ಇಂದ್ರಿಯ ಜಯವುಳ್ಳ, ಉದಾರಕರ್ಮವನ್ನು ಮಾಡುವ, ಶೂರನಾದ, ಪ್ರಸಿದ್ಧನಾದ ಪ್ರಜೆಯನ್ನು(ಪ್ರಜೆಗಳನ್ನು) ಆಶ್ರಯಿಸಬೇಕು.

ರಾಜಾ ಪ್ರಗಲ್ಭಂ ಪುರುಷಂ ಕರೋತಿ
ರಾಜಾ ಕೃಶಂ ಬೃಂಹಯತೇ ಮನುಷ್ಯಮ್ ।
ರಾಜಾಭಿಪನ್ನಸ್ಯ ಕುತಃ ಸುಖಾನಿ
ರಾಜಾಭ್ಯುಪೇತಂ ಸುಖಿನಂ ಕರೋತಿ ॥೫೮॥

ರಾಜನು ಒಬ್ಬ ಸಾಮಾನ್ಯಪುರುಷನನ್ನು ವಿದ್ವಾಂಸನನ್ನಾಗಿ ಮಾಡುತ್ತಾನೆ. ಕೃಶನಾದ ಪುರುಷನನ್ನು ಅಭಿವೃದ್ಧಿಪಡಿಸುತ್ತಾನೆ. ರಾಜನಿಗೆ ವಿರೋಧ ಮಾಡಿದರೆ ಸುಖವು ಎಲ್ಲಿಂದ ಬಂದೀತು? ರಾಜನು ತನ್ನನ್ನು ಆಶ್ರಯಿಸಿದವರನ್ನು ಸುಖಿಗಳನ್ನಾಗಿ ಮಾಡುತ್ತಾನೆ.

ರಾಜಾ ಪ್ರಜಾನಾಂ ಪ್ರಥಮಂ ಶರೀರಂ
ಪ್ರಜಾಶ್ಚ ರಾಜ್ಞೋಽಪ್ರತಿಮಂ ಶರೀರಮ್ ।
ರಾಜ್ಞಾವಿಹೀನಾ ನ ಭವಂತಿ ದೇಶಾ
ದೇಶೈರ್ವಿಹೀನಾ ನ ನೃಪಾ ಭವಂತಿ ॥೫೯॥

ರಾಜನು ಪ್ರಜೆಗಳಿಗೆ ಶ್ರೇಷ್ಠವಾದ ಶರೀರದಂತಿರುವವನು. ಪ್ರಜೆಗಳೂ ಸಹ ರಾಜನಿಗೆ ಅಸದೃಶವಾದ ಶರೀರದಂತೆ. ರಾಜನಿಲ್ಲದೆ ದೇಶಗಳು ಉಳಿಯುವುದಿಲ್ಲ. ದೇಶಗಳಿಲ್ಲದೆ ರಾಜನೂ ಉಳಿಯುವುದಿಲ್ಲ.

ನರಾಧಿಪಶ್ಚಾಪ್ಯನುಶಿಷ್ಯ ಮೇದಿನೀಂ
ದಮೇನ ಸತ್ಯೇನ ಚ ಸೌಹೃದೇನ।
ಮಹದ್ಭಿರಿಷ್ಟ್ವಾ ಕ್ರತುಭಿರ್ಮಹಾಯಶಾಃ
ತ್ರಿವಿಷ್ಟಪೇ ಸ್ಥಾನಮುಪೈತಿ ಸತ್ಕೃತಮ್ ॥೬೦॥

ರಾಜರು ಭೂಮಿಯನ್ನು ಇಂದ್ರಿಯನಿಗ್ರಹದಿಂದಲೂ, ಸತ್ಯದಿಂದಲೂ ಮತ್ತು ಪ್ರೀತಿಯಿಂದಲೂ ಆಳಿ ಮಹಾಯಜ್ಞಗಳನ್ನು ಆಚರಿಸಿ, ಸ್ವರ್ಗಲೋಕದಲ್ಲಿ ಗೌರವಯುತವಾದ ಸ್ಥಾನವನ್ನು ಹೊಂದುತ್ತಾರೆ.

ಸ ಏವಮುಕ್ತೋ ಗುರುಣಾ ಕೌಸಲ್ಯೋ ರಾಜಸತ್ತಮಃ।
ಪ್ರಯತ್ನಾತ್ ಕೃತವಾನ್ ವೀರಃ ಪ್ರಜಾನಾಂ ಪರಿಪಾಲನಮ್ ॥೬೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಸಪ್ತತಿತಮೋಽಧ್ಯಾಯಃ ॥೬೯॥

ಬೃಹಸ್ಪತ್ಯಾಚಾರ್ಯರಿಂದ ಹೀಗೆ ಹೇಳಲ್ಪಟ್ಟ ಕೋಸಲಾಧಿಪತಿಯಾದ, ರಾಜಶ್ರೇಷ್ಠನಾದ, ವೀರನಾದ ವಸುಮನನು ಪ್ರಜೆಗಳ ಪರಿಪಾಲನೆಯ ವಿಷಯದಲ್ಲಿ ಬಹಳ ಪ್ರಯತ್ನವನ್ನು ಮಾಡಿದನು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೬೯ನೆಯ ಅಧ್ಯಾಯವು ಮುಗಿಯಿತು.

—0—

೭೦. ಎಪ್ಪತ್ತನೆಯ ಅಧ್ಯಾಯ

ಯುದ್ಧಕಾಲದಲ್ಲಿ ಮತ್ತು ಕ್ಷೇಮಕಾಲದಲ್ಲಿ ರಾಜವೃತ್ತಕಥನ

ಯುಧಿಷ್ಠಿರಃ

ಪಾರ್ಥಿವೇನ ವಿಶೇಷೇಣ ಕಿಂ ಕಾರ್ಯಮವಶಿಷ್ಯತೇ।
ಕಥಂ ರಕ್ಷ್ಯೋ ಜನಪದಃ ಕಥಂ ವಧ್ಯಾಶ್ಚ ಶತ್ರವಃ ॥೧॥

ಕಥಂ ಚಾರಂ ಪ್ರಯುಂಜೀತ ವರ್ಣಾನ್ ವಿಶ್ವಾಸಯೇತ್ ಕಥಮ್।
ಕಥಂ ಭೃತ್ಯಾನ್ ಕಥಂ ದಾರಾನ್ ಕಥಂ ಪುತ್ರಾಂಶ್ಚ ಭಾರತ ॥೨॥

ಯುಧಿಷ್ಠಿರ – ಎಲೈ ಭಾರತನೇ! ರಾಜನಾದವನು ವಿಶೇಷವಾಗಿ ಮಾಡಬೇಕಾದ ಕಾರ್ಯವು ಯಾವುದು? ರಾಜ್ಯವನ್ನು ಹೇಗೆ ರಕ್ಷಿಸಬೇಕು? ಮತ್ತು ಶತ್ರುಗಳನ್ನು ಹೇಗೆ ಸಂಹರಿಸಬೇಕು? ಚಾರರನ್ನು ಹೇಗೆ ನಿಯೋಜಿಸಬೇಕು? ನಾಲ್ಕು ವರ್ಣದವರನ್ನು ಹೇಗೆ ವಿಶ್ವಾಸಪಾತ್ರರನ್ನಾಗಿ ಮಾಡಬೇಕು? ಭೃತ್ಯರನ್ನು, ಪತ್ನಿಯರನ್ನು ಮತ್ತು ಪುತ್ರರನ್ನು ಹೇಗೆ ನೋಡಿಕೊಳ್ಳಬೇಕು?

ಭೀಷ್ಮಃ

ರಾಜವೃತ್ತಂ ಮಹಾರಾಜ ಶೃಣುಷ್ವಾವಹಿತೋಽಖಿಲಮ್।
ಯತ್ ಕಾರ್ಯಂ ಪಾರ್ಥಿವೇನಾದೌ ಪಾರ್ಥಿವಪ್ರಕೃತೇನ ವಾ ॥೩॥

ಭೀಷ್ಮರು – ಎಲೈ ಮಹಾರಾಜನೇ! ರಾಜನಾದವನು ಅಥವಾ ರಾಜನ ಸಪ್ತ-

ಪ್ರಕೃತಿಗಳಲ್ಲಿ ಸೇರಿದ ಅಮಾತ್ಯಮೊದಲಾದವರು ಮೊದಲು ಏನು ಮಾಡಬೇಕೆಂಬ ರಾಜವೃತ್ತವನ್ನು ಸಮಗ್ರವಾಗಿ ಅವಧಾನದಿಂದ ಕೇಳು.

ಆತ್ಮಾ ಜೇಯಃ ಸದಾ ರಾಜ್ಞಾತತೋ ಜೇಯಾಶ್ಚ ಶತ್ರವಃ।
ಅಜಿತಾತ್ಮಾ ನರಪತಿರ್ವಿಜಯೇತ ಕಥಂ ಪರಾನ್ ॥೪॥

ರಾಜನು ಮೊದಲು ತನ್ನನ್ನು ತಾನು ಜಯಿಸಿಕೊಳ್ಳಬೇಕು. ಅನಂತರ ಶತ್ರುವನ್ನು ಜಯಿಸಬೇಕು. ತನ್ನನ್ನೇ ಜಯಿಸಿಕೊಳ್ಳಲಾರದ ರಾಜನು ಇನ್ನೊಬ್ಬರನ್ನು ಹೇಗೆ ಜಯಿಸಿಯಾನು?

ಏತಾವಾನಾತ್ಮಜಿತಃ ಪಂಚವರ್ಗವಿನಿಗ್ರಹಃ।
ಜಿತೇಂದ್ರಿಯೋ ನರಪತಿರ್ಬಾಧಿತುಂ ಶಕ್ನುಯಾದರೀನ್ ॥೫॥

ತನ್ನನ್ನು ತಾನು ಜಯಿಸುವುದು ಎಂದರೆ ಶಬ್ದಸ್ಪರ್ಶಾದಿಪಂಚವರ್ಗವನ್ನು ನಿಯಂತ್ರದಲ್ಲಿಟ್ಟುಕೊಳ್ಳುವುದು ಎಂದರ್ಥ. ಎಂದರೆ ಜಿತೇಂದ್ರಿಯನಾಗಿರಬೇಕು ಎಂದರ್ಥ. ಜಿತೇಂದ್ರಿಯನಾದ ರಾಜನು ಶತ್ರುಗಳನ್ನು ಬಾಧಿಸಲು ಸಮರ್ಥ-ನಾದಾನು!

ನ್ಯಸೇತ ಗುಲ್ಮಾನ್ ದುರ್ಗೇಷು ಸಂಧೌ ಚ ಕುರುನಂದನ।
ನಗರೋಪವನೇ ಚೈವ ಪುರೋದ್ಯಾನೇಷು ಚೈವ ಹ ॥೬॥

ಸಂಸ್ಥಾನೇಷು ಚ ಸರ್ವೇಷು ಕುಟೀಷು ನಗರಸ್ಯ ಚ।
ಮಧ್ಯೇ ಚ ನರಶಾರ್ದೂಲ ತಥಾ ರಾಜನಿವೇಶನೇ ॥೭॥

ಎಲೈ ಕುರುನಂದನನೇ! ಕೋಟೆಗಳಲ್ಲಿ, ಆಯಕಟ್ಟಿನ ಪ್ರದೇಶದಲ್ಲಿ, ನಗರದ ಬಾಹ್ಯವನಗಳಲ್ಲಿ, ನಗರದ ಒಳಗಿರುವ ಉದ್ಯಾನವನಗಳಲ್ಲಿ, ಎಲ್ಲ ಪ್ರಾಂತಗಳಲ್ಲಿ, ನಗರದ ಮಧ್ಯ ಮತ್ತು ಬೇರೆ ಬೇರೆ ಭಾಗಗಳಲ್ಲಿ, ಅರಮನೆಯಲ್ಲಿ, ಸೈನ್ಯದ ತುಕಡಿಗಳನ್ನು ನಿಯೋಜಿಸಬೇಕು.

ಪ್ರಣಧೀಂಶ್ಚ ತತಃ ಕುರ್ಯಾಜ್ಜಡಾಂಧಬಧಿರಾಕೃತೀನ್ ।
ಪುಂಸಃ ಪರೀಕ್ಷಿತಾನ್ ಪ್ರಾಜ್ಞಾನ್ ಕ್ಷುತ್ಪಿಪಾಸಾತಪಕ್ಷಮಾನ್ ॥೮॥

ಅನಂತರ ಪರೀಕ್ಷಿತರಾದ, ಪ್ರಾಜ್ಞರಾದ, ಹಸಿವು ನೀರಡಿಕೆ ಮತ್ತು ಬಿಸಿಲು-ಗಳನ್ನು ತಡೆಯಲು ಸಮರ್ಥರಾದ, ಜಡಾಂಧಬಧಿರರ ಆಕೃತಿಯನ್ನು ಧರಿಸಿದ ಗೂಢಚಾರರನ್ನು ನಿಯೋಜಿಸಬೇಕು.

ಅಮಾತ್ಯೇಷು ಚ ಸರ್ವೇಷು ಮಿತ್ರೇಷು ತ್ರಿವಿಧೇಷು ಚ ।
ಪುತ್ರೇಷು ಚ ಮಹಾರಾಜ ಪ್ರಣಿದಧ್ಯಾತ್ ಸಮಾಹಿತಃ ॥೯॥

ಎಲೈ ಮಹಾರಾಜನೇ! ಅಮಾತ್ಯರು, ಎಲ್ಲ ಸ್ನೇಹಿತರು, ಶತ್ರುಮಿತ್ರ ಉದಾ-ಸೀನರು, ಪುತ್ರರು ಎಲ್ಲರಲ್ಲಿಯೂ ಗೂಢಚಾರರನ್ನು ನಿಯಮಿಸಬೇಕು.

ಪುರೇ ಜನಪದೇ ಚೈವ ತಥಾ ಸಾಮಂತರಾಜಸು ।
ಯಥಾ ನ ವಿದ್ಯುರನ್ಯೋನ್ಯಂ ಪ್ರಣಿಧೇಯಾಸ್ತಥಾ ಹಿ ತೇ ॥೧೦॥

ಹಾಗೆಯೇ ರಾಜಧಾನಿಯಲ್ಲಿಯೂ, ಸಾಮಂತರಾಜರಲ್ಲಿಯೂ, ಬೇರೆ ಬೇರೆ ಭಾಗಗಳಲ್ಲಿಯೂ ಗೂಢಚಾರರು ಪರಸ್ಪರವಾಗಿ ತಿಳಿಯದಂತೆ ಅವರನ್ನು ನಿಯೋ-ಜಿಸಬೇಕು.

ಚಾರಾಂಶ್ಚ ವಿದ್ಯಾತ್ ಪ್ರಹಿತಾನ್ ಪರೇಣ ಭರತರ್ಷಭ ।
ಆಪಣೇಷು ವಿಹಾರೇಷು ಸಮವಾಯೇಷು ಭಿಕ್ಷುಷು ॥೧೧॥

ಆರಾಮೇಷು ತಥೋದ್ಯಾನೇ ಪಂಡಿತಾನಾಂ ಸಮಾಗಮೇ ।
ವೇಶೇಷು ಚತ್ವರೇ ಚೈವ ಸಭಾಸ್ವಾವಸಥೇಷು ಚ ॥೧೨॥

ಎಲೈ ಭರತರ್ಷಭನೇ! ಮಾರುಕಟ್ಟೆಗಳಲ್ಲಿ, ವಿಹಾರಸ್ಥಾನಗಳಲ್ಲಿ, ಜನಗಳ ಗುಂಪುಗಳಲ್ಲಿ, ಭಿಕ್ಷುಕರ ಸಮೂಹದಲ್ಲಿ, ಉದ್ಯಾನವನಗಳಲ್ಲಿ, ಉಪವನಗಳಲ್ಲಿ, ಪಂಡಿತರ ಸಮೂಹದಲ್ಲಿ, ವೇಶ್ಯಾವಾಟಿಕೆಗಳಲ್ಲಿ, ಸಭೆಗಳಲ್ಲಿ, ಮನೆಗಳಲ್ಲಿ ಮತ್ತು

ಚತ್ವರಗಳಲ್ಲಿ ಪರರಾಜರು ನೇಮಿಸಿರಬಹುದಾದ ಗೂಢಚಾರರನ್ನು ತಿಳಿದುಕೊಳ್ಳ-ಬೇಕು.

ಏವಂ ವಿಹನ್ಯಾಚ್ಚಾರೇಣ ಪರಚಾರಂ ವಿಚಕ್ಷಣಃ।
ಚಾರೇಣ ವಿಹಿತಂ ಸರ್ವಂ ಹತಂ ಭವತಿ ಪಾಂಡವ ॥೧೩॥

ವಿಚಕ್ಷಣನಾದವನು ಈ ರೀತಿಯಲ್ಲಿ ಇನ್ನೊಬ್ಬರ ಚಾರರನ್ನು ತನ್ನ ಚಾರರಿಂದ ನಾಶಗೊಳಿಸಬೇಕು. ಎಲೈ ಪಾಂಡವನೇ! ಚಾರರಿಂದ ಹತರಾದರೆ ಎಲ್ಲವೂ (ವಿರೋಧವೆಲ್ಲವೂ) ಹತವಾಗುತ್ತದೆ.

ಯದಾ ತು ಹೀನಂ ನೃಪತಿರ್ವಿದ್ಯಾದಾತ್ಮಾನಮಾತ್ಮನಾ।
ಅಮಾತ್ಯೈಃ ಸಹ ಸಮ್ಮಂತ್ರ್ಯ ಕುರ್ಯಾತ್ ಸಂಧಿಂ ಬಲೀಯಸಾ ॥೧೪॥

ಯಾವಾಗ ರಾಜನು ಬಲಿಷ್ಠನಾದ ಶತ್ರುವಿಗಿಂತ ತಾನು ಹೀನನಾಗಿದ್ದೇನೆಂದು ಭಾವಿಸುವನೋ ಆಗ ಅಮಾತ್ಯರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಬಲಿಷ್ಠರಾಜನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳಬೇಕು.

ವಿದ್ವಾಂಸಃ ಕ್ಷತ್ರಿಯಾ ವೈಶ್ಯಾ ಬ್ರಾಹ್ಮಣಾಶ್ಚ ಬಹುಶ್ರುತಾಃ।
ದಂಡನೀತೌ ತು ನಿಷ್ಣಾತಾ ಮಂತ್ರಿಣಃ ಪೃಥಿವೀಪತೇಃ ॥೧೫॥

ವಿದ್ವಾಂಸರೂ, ಬಹುಶ್ರುತರೂ, ದಂಡನೀತಿಯಲ್ಲಿ ನಿಪುಣರೂ ಆದ ಬ್ರಾಹ್ಮಣರು. ಕ್ಷತ್ರಿಯರು ಮತ್ತು ವೈಶ್ಯರು ರಾಜನಿಗೆ ಮಂತ್ರಿಗಳಾಗುತ್ತಾರೆ.

ಪ್ರಷ್ಟವ್ಯೋ ಬ್ರಾಹ್ಮಣಃ ಪೂರ್ವಂ ನೀತಿಶಾಸ್ತ್ರಾರ್ಥತತ್ತ್ವವಿತ್।
ಪಶ್ಚಾತ್ ಪೃಚ್ಛೇತ ಭೂಪಾಲಂ ಕ್ಷತ್ರಿಯಂ ನೀತಿಕೋವಿದಮ್।
ವೈಶ್ಯಶೂದ್ರೌ ತಥಾ ಭೂಯಃ ಶಾಸ್ತ್ರಜ್ಞೌ ಹಿತಕಾರಿಣೌ ॥೧೬॥

ಮಂತ್ರಾಲೋಚನೆಯ ಸಂದರ್ಭದಲ್ಲಿ ನೀತಿಶಾಸ್ತ್ರತತ್ವವನ್ನು ತಿಳಿದ ಬ್ರಾಹ್ಮಣ-ನನ್ನು ಮೊದಲು ಕೇಳಬೇಕು. ಅನಂತರ ನೀತಿಕೋವಿದನಾದ ಕ್ಷತ್ರಿಯನಾದ ರಾಜ-

ನನ್ನು ಕೇಳಬೇಕು. ಅನಂತರ ಹಿತಕಾರಿಗಳಾದ ಶಾಸ್ತ್ರಜ್ಞರಾದ ವೈಶ್ಯಶೂದ್ರರನ್ನು ಪುನಃ ಕೇಳಬೇಕು.

ಅಜ್ಞಾಯಮಾನೇ ಹೀನತ್ವೇ ಕುರ್ಯಾತ್ ಸಂಧಿಂ ಪರೇಣ ವೈ।
ಲಿಪ್ಸುರ್ವಾ ಕಂಚಿದೇವಾರ್ಥಂ ತ್ವರಮಾಣೋ ವಿಚಕ್ಷಣಃ ॥೧೭॥

ತನ್ನ ದೌರ್ಬಲ್ಯವು ಶತ್ರುವಿಗೆ ತಿಳಿಯುವುದಕ್ಕಿಂತ ಮೊದಲೇ ಅಥವಾ ಶತ್ರು - ರಾಜನಿಂದ ಏನಾದರೂ ಪ್ರಯೋಜನವನ್ನು ಪಡೆಯಬೇಕಾಗಿದ್ದಲ್ಲಿ ವಿಚಕ್ಷಣನಾದ-ವನು ಶತ್ರುವಿನ ಜೊತೆಯಲ್ಲಿ ಮೊದಲೇ ಸಂಧಿಯನ್ನು ಮಾಡಿಕೊಳ್ಳಬೇಕು.

ಗುಣವಂತೋ ಮಹೋತ್ಸಾಹಾ ಧರ್ಮಜ್ಞಾಃ ಸಾಧವಶ್ಚ ಯೇ।
ಸಂದಧೀತ ನೃಪಸ್ತೈಶ್ಚ ರಾಷ್ಟ್ರಂ ಧರ್ಮೇಣ ಪಾಲಯನ್ ॥೧೮॥

ಧರ್ಮದಿಂದ ರಾಜ್ಯವನ್ನು ಪಾಲಿಸುವ ರಾಜನು, ತನ್ನ ದೌರ್ಬಲ್ಯಾದಿಗಳನ್ನು ಗಮನಿಸದೇ ಗುಣವಂತರೂ ಮಹೋತ್ಸಾಹಭರಿತರೂ ಧರ್ಮಜ್ಞರೂ ಸಾಧು-ಸ್ವಭಾವದವರೂ ಆದ ರಾಜರ ಜೊತೆಯಲ್ಲಿ ಯಾವಾಗಲೂ ಸಂಧಿಯನ್ನು ಮಾಡಿ-ಕೊಳ್ಳಬೇಕು.

ಉಚ್ಛಿದ್ಯಮಾನಮಾತ್ಮಾನಂ ಜ್ಞಾತ್ವಾ ರಾಜಾ ಮಹಾಮತಿಃ।
ಪೂರ್ವಾಪಕಾರಿಣೋ ಹನ್ಯಾಲ್ಲೋಕದ್ವಿಷ್ಟಾಂಶ್ಚ ಸರ್ವಶಃ ॥೧೯॥

ಮಹಾಬುದ್ಧಿಯುಳ್ಳ ರಾಜನು ತನ್ನ ಪ್ರಾಣಕ್ಕೆ ಅಪಾಯವಿದೆಯೆಂದು ಗೂಢ-ಚಾರರ ಮೂಲಕ ತಿಳಿದ ತಕ್ಷಣ ಹಿಂದೆ ತನಗೆ ಅಪಕಾರಮಾಡಿದವರನ್ನು ಮತ್ತು ಪ್ರಜೆಗಳ ದ್ವೇಷಿಗಳನ್ನು ಸಂಪೂರ್ಣವಾಗಿ ನಾಶಗೊಳಿಸಬೇಕು.

ಯೋ ನೋಪಕರ್ತುಂ ಶಕ್ನೋತಿ ನಾಪಕರ್ತುಂ ಮಹೀಪತಿಃ।
ಅಶಕ್ಯರೂಪಶ್ಚೋದ್ಧರ್ತುಮುಪೇಕ್ಷ್ಯಸ್ತಾದೃಶೋ ಭವೇತ್ ॥೨೦॥

ಯಾವ ರಾಜನು ಪ್ರಜೆಗಳಿಗೆ ಉಪಕಾರವನ್ನಾಗಲೀ ಅಥವಾ ಅಪಕಾರವನ್ನಾ-

ಗಲೀ ಮಾಡಲು ಅಸಮರ್ಥನೋ ಮತ್ತು ತಿದ್ದಲು ಸಾಧ್ಯವಿಲ್ಲದವನೋ ಅಂತಹವನನ್ನು ಪ್ರಜೆಗಳು ಉಪೇಕ್ಷೆ ಮಾಡುತ್ತಾರೆ.

ಯಾತ್ರಾಯಾಂ ಯದಿ ವಿಜ್ಞಾತಮನಾಕ್ರಂದಮನಂತರಮ್ ।
ವ್ಯಾಸಕ್ತಂ ಚ ಪ್ರಮತ್ತಂ ಚ ದುರ್ಬಲಂ ಚ ವಿಚಕ್ಷಣಃ ॥೨೧॥

ಯಾತ್ರಾಮಾಜ್ಞಾಪಯೇದ್ ವೀರಃ ಕಲ್ಯಪುಷ್ಟಬಲಃ ಸುಖೀ ।
ಪೂರ್ವಂ ಕೃತ್ವಾವಿಧಾನಂ ಚ ಯಾತ್ರಾಯಾಂ ನಗರೇ ತಥಾ ।
ಅಂತಃಪುರೇ ಚ ರಾಷ್ಟ್ರೇ ಚ ಅಧ್ಯಕ್ಷೇಷು ಚ ಸರ್ವಶಃ ॥೨೨॥

ತನ್ನ ಯುದ್ಧಯಾತ್ರೆಯು ಶತ್ರುವಿಗೆ ತಿಳಿದರೆ ಆಗ ಯೋಧರನ್ನು ಯುದ್ಧ-ಪ್ರಸಂಗವಿಲ್ಲದಂತೆ ಸುಮ್ಮನಾಗಿಸಬೇಕು. ವಿಚಕ್ಷಣನಾದ ರಾಜನು ತನ್ನ ಶತ್ರುವು ಬೇರೆಯ ಕಾರ್ಯದಲ್ಲಿ ನಿರತನಾಗಿದ್ದಾನೆಂದು, ಪ್ರಮಾದದಿಂದ ಕೂಡಿದ್ದಾನೆಂದು, ಅಥವಾ ದುರ್ಬಲನೆಂದು ತಿಳಿದಾಗ ತಾನು ಶ್ರೇಷ್ಠವಾದ, ಪುಷ್ಟವಾದ ಸೈನ್ಯವುಳ್ಳ-ವನಾಗಿ ವೀರನಾಗಿ, ಸುಖಿಯಾಗಿ ಯಾತ್ರೆಯನ್ನು ಆಜ್ಞಾಪಿಸಬೇಕು. ಅದಕ್ಕಿಂತ ಮೊದಲು ನಗರದಲ್ಲಿಯೂ, ಅಂತಃಪುರದಲ್ಲಿಯೂ, ರಾಷ್ಟ್ರದಲ್ಲಿಯೂ, ಪ್ರಧಾನ ಪುರುಷರಲ್ಲಿಯೂ ಸರ್ವರಕ್ಷಣೆಯ ವ್ಯವಸ್ಥೆಯನ್ನು ಮಾಡಿ ಅನಂತರ ಯಾತ್ರೆಯನ್ನು ಆಜ್ಞಾಪಿಸಬೇಕು.

ನ ಚ ವಶ್ಯೋ ಭವೇದಸ್ಯ ನೃಪೋ ಯದ್ಯಪಿ ವೀರ್ಯವಾನ್ ।
ಹೀನಶ್ಚ ಬಲವೀರ್ಯಾಭ್ಯಾಂ ಕರ್ಶಯಂಸ್ತತ್ಪರೋ ವಸೇತ್ ॥೨೩॥

ತನಗಿಂತ ಪರಾಕ್ರಮಶಾಲಿಯಾದ ರಾಜನು ತನಗೆ ವಶನಾಗದಿದ್ದರೂ, ಹೀನ-ನಾದ ರಾಜನು ತನ್ನ ಸಾಮರ್ಥ್ಯ ಮತ್ತು ಪರಾಕ್ರಮಗಳಿಂದ ಅವನನ್ನು ನಿಧಾನವಾಗಿ ಪೀಡಿಸುತ್ತಾ, ಅವನ ಜೊತೆಯಲ್ಲಿ ಸ್ನೇಹವನ್ನೇ ಹೊಂದಿ ಸಮಯವನ್ನು ನಿರೀಕ್ಷಿಸ-ಬೇಕು.

ರಾಷ್ಟ್ರಂ ಚ ಪೀಡಯೇತ್ ತಸ್ಯ ಶಸ್ತ್ರಾಗ್ನಿವಿಷಮೂರ್ಚ್ಛನೈಃ ।

ಅಮಾತ್ಯವಲ್ಲಭಾನಾಂ ಚ ವಿವಾದಾಂಸ್ತಸ್ಯ ಕಾರಯೇತ್ ।
ವರ್ಜನೀಯಂ ಸದಾ ಯುದ್ಧಂ ರಾಜ್ಯಕಾಮೇನ ಧೀಮತಾ ॥೨೪॥

ಅಂತಹ ಶತ್ರುವಿನ ರಾಷ್ಟ್ರವನ್ನು ಶಸ್ತ್ರಾಗ್ನಿವಿಷಪ್ರಯೋಗಗಳಿಂದ ಪೀಡಿಸಬೇಕು. ಅವನ ಅಮಾತ್ಯರಿಗೂ ಮತ್ತು ಪ್ರಿಯರಾದವರಿಗೂ ವಿವಾದಗಳನ್ನು ಉಂಟು ಮಾಡಬೇಕು. ಮೇಧಾವಿಯಾದ, ರಾಜ್ಯವನ್ನು ಬಯಸುವ ರಾಜನು ಯುದ್ಧವನ್ನು ಯಾವಾಗಲೂ ವರ್ಜಿಸಬೇಕು.

ಉಪಾಯೈಸ್ತ್ರಿಭಿರಾದಾನಮರ್ಥಸ್ಯಾಹ ಬೃಹಸ್ಪತಿಃ ।
ಸಾಂತ್ವೇನಾನುಪ್ರದಾನೇನ ಭೇದೇನ ಚ ನರಾಧಿಪ ।
ಯಮರ್ಥಂ ಶಕ್ನುಯಾತ್ ಪ್ರಾಪ್ತುಂ ತೇನ ತುಷ್ಯೇದ್ಧಿ ಪಂಡಿತಃ ॥೨೫॥

ಎಲೈ ರಾಜನೇ! ಬೃಹಸ್ಪತಿಗಳು ಸಾಮ, ದಾನ ಮತ್ತು ಭೇದ ಈ ಮೂರೂ ಉಪಾಯಗಳಿಂದ ಅರ್ಥದ ಸಂಪಾದನೆಯನ್ನು ಹೇಳಿದ್ದಾರೆ. ಈ ಮೂರು ಉಪಾಯ -ಗಳಿಂದ ಎಷ್ಟು ಧನವನ್ನು ಸಂಪಾದಿಸಲು ಸಾಧ್ಯವೋ ಅದರಿಂದ ವಿವೇಕಿಯಾದ-ವನು ತೃಪ್ತಿಪಡಬೇಕು.

ಆದದೀತ ಬಲಿಂ ಚೈವ ಪ್ರಜಾಭ್ಯಃ ಕುರುನಂದನ ।
ಷಡ್‌ಭಾಗಮಮಿತಪ್ರಜ್ಞಸ್ತಾಸಾಮೇವಾಭಿಗುಪ್ತಯೇ ॥೨೬॥

ಎಲೈ ಕುರುನಂದನನೇ! ಅಮಿತಪ್ರಜ್ಞೆಯುಳ್ಳ ರಾಜನು ಪ್ರಜೆಗಳ ಆದಾಯದ ಆರನೆಯ ಒಂದು ಭಾಗವನ್ನು ಪ್ರಜೆಗಳ ರಕ್ಷಣೆಗಾಗಿಯೇ ಅವರಿಂದ ಕರವಾಗಿ ತೆಗೆದುಕೊಳ್ಳಬೇಕು.

ದಶಾಧರ್ಮಗತೇಭ್ಯೋ ಯದ್ ವಸು ಬಹ್ವಲ್ಪಮೇವ ಚ ।
ತಾನ್ಸಾದದೀತ ಸಹಸಾ ಪೌರಾಣಾಂ ರಕ್ಷಣಾಯ ವೈ ॥೨೭॥

ನಿಧಾನವಾಗಿ ತೈಲವನ್ನು ಎಳೆದು ಉರಿಯುವ ದೀಪದ ಬತ್ತಿಯಂತೆ ರಾಜನು

ಪ್ರಜೆಗಳಿಂದ ಅಲ್ಪವಾದ ಅಥವಾ ಬಹುವಾದ ಧನವನ್ನು ಒಟ್ಟಿಗೆ ತೆಗೆದುಕೊಳ್ಳದೆ ಅವರ ರಕ್ಷಣೆಗಾಗಿಯೇ ನಿಧಾನವಾಗಿ ತೆಗೆದುಕೊಳ್ಳಬೇಕು.

ಯಥಾ ಪುತ್ರಸ್ತಥಾ ಪೌರಾ ದ್ರಷ್ಟವ್ಯಾಸ್ತೇ ನ ಸಂಶಯಃ।
ಭಕ್ತಿಶ್ಚೈಷಾಂ ಪ್ರಕರ್ತವ್ಯಾ ವ್ಯವಹಾರೇ ಪ್ರದರ್ಶಿತೇ ॥೨೮॥

ರಾಜನು ಪ್ರಜೆಗಳನ್ನು ತನ್ನ ಪುತ್ರರಂತೆಯೇ ನೋಡಿಕೊಳ್ಳಬೇಕು ಎಂಬ ವಿಷಯದಲ್ಲಿ ಸಂಶಯವಿಲ್ಲ. ಕ್ರಯವಿಕ್ರಯಾದಿ ವ್ಯವಹಾರಗಳಲ್ಲಿ ಯಾರಲ್ಲಿಯೂ ಪಕ್ಷಪಾತವನ್ನು ಮಾಡಬಾರದು.

ಸುತಂ ಚ ಸ್ಥಾಪಯೇದ್ ರಾಜಾ ಪ್ರಾಜ್ಞಂ ಸರ್ವಾರ್ಥದರ್ಶಿನಮ್।
ವ್ಯವಹಾರೇಷು ಸತತಂ ತತ್ರ ರಾಜ್ಯಂ ವ್ಯವಸ್ಥಿತಮ್ ॥೨೯॥

ರಾಜನು ತನ್ನ ವ್ಯವಹಾರಗಳಲ್ಲಿ ಸರ್ವಾರ್ಥವನ್ನು ತಿಳಿದು ಪ್ರಾಜ್ಞನಾದ ತನ್ನ ಪುತ್ರನನ್ನು ಸತತವಾಗಿ ಸ್ಥಾಪಿಸಬೇಕು. ಏಕೆಂದರೆ, ರಾಜ್ಯವು ಮುಂದೆ ಅವನಲ್ಲಿಯೇ ಹೋಗುವುದಿದೆ.

ಆಕರೇ ಲವಣೇ ಶುಲ್ಕೇ ತರೇ ನಾಗವನೇ ತಥಾ।
ನ್ಯಸೇದಮಾತ್ಯಾನ್ ನೃಪತಿಃ ಸ್ವಾಪ್ತಾನ್ ವಾ ಪುರುಷಾನ್ ಹಿತಾನ್ ॥೩೦॥

ಗಣಿಗಳಲ್ಲಿ, ಲವಣವನ್ನು ಉತ್ಪಾದಿಸುವ ಸ್ಥಳದಲ್ಲಿ, ತೆರಿಗೆಯನ್ನು ತೆಗೆದುಕೊಳ್ಳುವ ಸ್ಥಳದಲ್ಲಿ, ನದಿಗಳನ್ನು ದಾಟಿಸುವ ನೌಕಾದಿಸ್ಥಳಗಳಲ್ಲಿ, ಗಜಸೇನೆಯಲ್ಲಿ ರಾಜನು ತನಗೆ ಆಪ್ತರೂ ಹಿತರೂ ಆದ ಪುರುಷರನ್ನು ಅಮಾತ್ಯರನ್ನಾಗಿ ನೇಮಿಸಬೇಕು.

ಸಮ್ಯಗ್ ದಂಡಧರೋ ನಿತ್ಯಂ ರಾಜಾ ಧರ್ಮಮವಾಪ್ನುಯಾತ್।
ನೃಪಸ್ಯ ಸತತಂ ದಂಡಃ ಸಮ್ಯಗ್ ಧರ್ಮೇ ಪ್ರಶಸ್ಯತೇ ॥೩೧॥

ಸರಿಯಾದ ರೀತಿಯಲ್ಲಿ ದಂಡವನ್ನು ನಿತ್ಯವೂ ವಿಧಿಸುವ ರಾಜನು ಧರ್ಮವನ್ನು

ಗಳಿಸುತ್ತಾನೆ. ರಾಜನು ಸತತವಾಗಿ ದಂಡಧರನಾಗಿರುವುದು ಧರ್ಮಶಾಸ್ತ್ರದಲ್ಲಿ ಪ್ರಶಂಸಿಲ್ಪಡುತ್ತದೆ.

ವೇದವೇದಾಂಗವಿತ್ ಪ್ರಾಜ್ಞಃ ಸುತಪಸ್ವೀ ನೃಪೋ ಭವೇತ್ ।
ದಾನಶೀಲಶ್ಚ ಸತತಂ ಯಜ್ಞಶೀಲಶ್ಚ ಭಾರತ ॥೩೨॥

ಎಲೈ ಭಾರತನೇ! ರಾಜನು ವೇದವೇದಾಂಗತತ್ತ್ವಜ್ಞನೂ, ಪ್ರಾಜ್ಞನೂ, ಸತತವಾಗಿ ತಪಸ್ವಿಯೂ, ದಾನಶೀಲನೂ ಮತ್ತು ಯಜ್ಞಶೀಲನೂ ಆಗಿರಬೇಕು.

ಏತೇ ಗುಣಾಃ ಸಮಸ್ತಾಃ ಸ್ಯುರ್ನೃಪಸ್ಯ ಸತತಂ ಸ್ಥಿರಾಃ ।
ಕ್ರಿಯಾಲೋಪೇ ತು ನೃಪತೇಃ ಕುತಃ ಸ್ವರ್ಗಃ ಕುತೋ ಯಶಃ ॥೩೩॥

ಈ ಎಲ್ಲ ಗುಣಗಳೂ ರಾಜನಲ್ಲಿ ಸ್ಥಿರವಾಗಿ, ಸತತವಾಗಿ ಇರಬೇಕು. ರಾಜನಿಗೆ ಕ್ರಿಯಾಲೋಪವುಂಟಾದರೆ ಅವನಿಗೆ ಸ್ವರ್ಗವಾಗಲೀ ಅಥವಾ ಈ ಲೋಕದಲ್ಲಿ ಕೀರ್ತಿಯಾಗಲೀ ಎಲ್ಲಿಂದ ಬಂದೀತು?

ಯದಾ ತು ಪೀಡಿತೋ ರಾಜಾ ಭವೇದ್ ರಾಜ್ಞಾ ಬಲೀಯಸಾ ।
ತ್ರಿಧಾ ತ್ವಾಕ್ರಂದ್ಯ ಮಿತ್ರಾಣಿ ವಿಧಾನಮುಪಕಲ್ಪಯೇತ್ ।
ತದಾऽಭಿಸಂಶ್ರಯೇದ್ ದುರ್ಗಂ ಬುದ್ಧಿಮಾನ್ ಪೃಥಿವೀಪತಿಃ ॥೩೪॥

ರಾಜನು ಬಲಿಷ್ಠನಾದ ರಾಜನಿಂದ ಪೀಡಿತನಾದಾಗ ಮಿತ್ರರ ಜೊತೆಯಲ್ಲಿ ಮೂರು ಬಾರಿ ಮಂತ್ರಾಲೋಚನೆಯನ್ನು ಮಾಡಿ, ಮಾಡಬೇಕಾದ ವಿಧಿಯನ್ನು ನಿರ್ಧರಿಸಬೇಕು. ಬುದ್ಧಿವಂತನಾದ ರಾಜನು ಆಗ ಕೋಟೆಯನ್ನು ಆಶ್ರಯಿಸಬೇಕು.

ಘೋಷಾನ್ ನ್ಯಸೇತ ಮಾರ್ಗೇಷು ಗ್ರಾಮಾನುತ್ಥಾಪಯೇದಪಿ ।
ಪ್ರವೇಶಯೇಚ್ಚ ತಾನ್ ಸರ್ವಾನ್ ಶಾಖಾನಗರಕೇಷ್ವಪಿ ॥೩೫॥

ಶತ್ರುಗಳು ಬರುವ ಮಾರ್ಗದಲ್ಲಿ ಘೋಷಗಳನ್ನು (ಗೋಪಾಲರ ಹಳ್ಳಿಗಳನ್ನು) ನಿರ್ಮಿಸಬೇಕು. ಉಳಿದ ಗ್ರಾಮಗಳನ್ನು ಶೂನ್ಯಗೊಳಿಸಬೇಕು. ಆ ಗ್ರಾಮಸ್ಥರೆಲ್ಲರನ್ನೂ ನಗರದ ಬಾಹ್ಯ ಉಪನಗರಗಳಲ್ಲಿ ನೆಲೆಸುವಂತೆ ಮಾಡಬೇಕು.

ಯೇ ಗುಪ್ತಾಶ್ಚೈವ ದುರ್ಗಾಶ್ಚ ದೇಶಾಸ್ತೇಷು ಪ್ರವೇಶಯೇತ್ ।
ಧನಿನೋ ಬಲಮುಖ್ಯಾಂಶ್ಚ ಸಾಂತ್ವಯಿತ್ವಾ ಪುನಃ ಪುನಃ ॥೩೬॥

ಶ್ರೀಮಂತರನ್ನು ಮತ್ತು ಸೇನಾನಾಯಕರನ್ನು ಪುನಃ ಪುನಃ ಸಮಾಧಾನಗೊಳಿಸಿ ರಕ್ಷಿತವಾದ ಕೋಟೆಗಳಲ್ಲಿಯೂ ಮತ್ತು ಬೇರೆ ದುರ್ಗಮವಾದ ಪ್ರದೇಶಗಳಲ್ಲಿಯೂ ಪ್ರವೇಶಿಸುವಂತೆ ಮಾಡಬೇಕು.

ಸಸ್ಯಾಪಹಾರಂ ಕುರ್ಯಾಚ್ಚ ಸ್ವಯಮೇವ ನರಾಧಿಪಃ ।
ಅಸಂಭವೇ ಪ್ರವೇಶಸ್ಯ ದಾಹಯೇದಗ್ನಿನಾ ಭೃಶಮ್ ॥೩೭॥

ಶತ್ರುವಿನ ದೇಶದ ಸಸ್ಯಗಳ ವಿನಾಶವನ್ನು ತಾನು(ನೇ) ಮಾಡಿಸಬೇಕು. ಶತ್ರುಗಳ ದೇಶದಲ್ಲಿ ಪ್ರವೇಶಿಸಲು ಸಾಧ್ಯವಾಗದಿದ್ದರೆ ತನ್ನ ಚಾರರ ಮೂಲಕ ಶತ್ರುಗಳ ದೇಶದಲ್ಲಿ ಕಡಿದು ಶೇಖರಿಸಿಟ್ಟ ಬೆಳೆಗಳಿಗೆ ಬೆಂಕಿಯನ್ನು ಕೊಡಬೇಕು.

ಕ್ಷೇತ್ರಸ್ಥೇಷು ಚ ಸಸ್ಯೇಷು ಶತ್ರೋರುಪಜಪೇನ್ನರಾನ್ ।
ವಿನಾಶಯೇದ್ ವಾ ಸರ್ವಸ್ವಂ ಬಲೇನಾಥ ಸ್ವಕೇನ ವೈ ॥೩೮॥

ನದೀಷು ಮಾರ್ಗೇಷು ಸದಾ ಸಂಕ್ರಮಾನವಸಾದಯೇತ್ ।
ಜಲಂ ನಿಸ್ರಾವಯೇತ್ ಸರ್ವಮನಿಸ್ರಾವ್ಯಂ ಚ ದೂಷಯೇತ್ ॥೩೯॥

ಶತ್ರುವಿನ ಸಮೀಪಸ್ಥ ಜನರಲ್ಲಿ ಒಡಕ್ಕನ್ನುಂಟುಮಾಡಬೇಕು. ಅಥವಾ ತನ್ನ ಸೈನ್ಯದಿಂದ ಶತ್ರುವಿನ ಸರ್ವಸ್ವವನ್ನು ನಾಶಗೊಳಿಸಬೇಕು. ನದಿಗಳಲ್ಲಿ ಮತ್ತು ಮಾರ್ಗಗಳಲ್ಲಿರುವ ಸೇತುವೆಗಳನ್ನು ಭಗ್ನಗೊಳಿಸಬೇಕು. ಶೇಖರಿಸಿರುವ ಜಲವನ್ನು ಹೊರಗೆ ಹರಿಯುವಂತೆ ಮಾಡಬೇಕು. ಹೊರಗೆ ಹರಿಸಲಾಗದ ಜಲವನ್ನು ವಿಷಾದಿಗಳಿಂದ ದೂಷಿಸಬೇಕು.

ತದಾತ್ವೇನಾಯತೀಭಿಶ್ಚ ನಿವಸೇದ್ ಭೂಮ್ಯನಂತರಮ್ ।
ಪ್ರತೀಘಾತಃ ಪರಸ್ಯಾಜೌ ಯುದ್ಧಕಾಲೇಽಪ್ಯುಪಸ್ಥಿತೇ ॥೪೦॥

ಆ ಕಾಲದಲ್ಲಿಯೂ ಮತ್ತು ಉತ್ತರಕಾಲದಲ್ಲಿಯೂ ದೇಶದ ಪ್ರಾಂತಭಾಗಕ್ಕೆ ಹೋಗದೆ ದೇಶದ ಮಧ್ಯದಲ್ಲಿಯೇ ವಾಸಿಸಬೇಕು. ಯುದ್ಧಕಾಲವು ಪ್ರಾಪ್ತವಾದಾಗ ಶತ್ರುವಿಗೆ ಪ್ರತಿಘಾತವನ್ನುಂಟು ಮಾಡಬೇಕು.

ದ್ರುಮಾಣಾಂ ಚಾಭಿತೋ ರಾಜಾ ಮೂಲಚ್ಛೇದಂ ಪ್ರಕಾರಯೇತ್ ।
ಸರ್ವೇಷಾಂ ಕ್ಷುದ್ರವೃಕ್ಷಾಣಾಂ ಚೈತ್ಯವೃಕ್ಷಾನ್ ವಿವರ್ಜಯೇತ್ ॥೪೧॥

ರಾಜನು ಸುತ್ತಲೂ ಇರುವ ಮರಗಳನ್ನು ಬುಡದಲ್ಲಿಯೇ ಕತ್ತರಿಸಬೇಕು. ಆದರೆ ಪೂಜಾವೃಕ್ಷಗಳನ್ನು ಮತ್ತು ದೇವಸ್ಥಾನದ ವೃಕ್ಷಗಳನ್ನು ಬಿಡಬೇಕು.

ಪ್ರವೃದ್ಧಾನಾಂ ಚ ವೃಕ್ಷಾಣಾಂ ಶಾಖಾಃ ಪ್ರಚ್ಛೇದಯೇತ್ ತಥಾ ।
ಚೈತ್ಯಾನಾಂ ಸರ್ವಥಾ ವರ್ಜ್ಯಮಪಿ ಪತ್ರಸ್ಯ ಪಾತನಮ್ ॥೪೨॥

ವೃಕ್ಷಗಳು ಬಹಳ ದೊಡ್ಡದಾಗಿದ್ದರೆ ಅವುಗಳ ಕೊಂಬೆಗಳನ್ನು ಮಾತ್ರ ಕತ್ತರಿಸಬೇಕು. ಆದರೆ ಪೂಜಾವೃಕ್ಷದ ಒಂದು ಎಲೆಯನ್ನೂ ಕತ್ತರಿಸಬಾರದು.

ದೈವಾನಾಮಾಶ್ರಯಾಶ್ಚೈತ್ಯಾ ಯಕ್ಷರಾಕ್ಷಸಭೋಗಿನಾಮ್ ।
ಪಿಶಾಚಪನ್ನಗಾನಾಂ ಚ ಗಂಧರ್ವಾಪ್ಸರಸಾಮಪಿ ॥೪೩॥

ರೌದ್ರಾಣಾಂ ಚೈವ ಭೂತಾನಾಂ ತಸ್ಮಾತ್ ತಾನ್ ಪರಿವರ್ಜಯೇತ್ ।
ಶ್ರೂಯತೇ ಹಿ ನಿಕುಂಭೇನ ಸೌದಾಸಸ್ಯ ಬಲಂ ಹತಮ್ ।
ಮಹೇಶ್ವರಗಣೇಶೇನ ವಾರಾಣಸ್ಯಾಂ ನರಾಧಿಪ ॥೪೪॥

ಚೈತ್ಯವೃಕ್ಷಗಳು ದೇವತೆಗಳಿಗೆ, ಯಕ್ಷರಿಗೆ, ರಾಕ್ಷಸರಿಗೆ, ಸರ್ಪಗಳಿಗೆ, ಪಿಶಾಚಿಗಳಿಗೆ, ಗಂಧರ್ವಾಪ್ಸರಸರಿಗೆ, ಭಯಂಕರವಾದ ಭೂತಗಳಿಗೆ ಆಶ್ರಯವಾಗಿರುತ್ತವೆ. ಆದ್ದರಿಂದ ಅವುಗಳನ್ನು ವರ್ಜಿಸಬೇಕು. ಎಲೈ ರಾಜನೇ! ಚೈತ್ಯವೃಕ್ಷವನ್ನು ಕತ್ತರಿಸಿದ ಕಾರಣದಿಂದಾಗಿ ಸೌದಾಸನ ಸೈನ್ಯವು ಮಹೇಶ್ವರನ ಗಣನಾಯಕನಾದ ನಿಕುಂಭನಿಂದ ವಾರಾಣಸಿಯಲ್ಲಿ ವಿನಾಶವನ್ನು ಹೊಂದಿತು ಎಂದು ನಾವು ಕೇಳಿದ್ದೇವೆ.

ಪ್ರಖಿಂಡೀಃ ಕಾರಯೇದ್ ಸಮ್ಯಗಾಕಾಶಜನನೀಸ್ತಥಾ ।
ಆಪೂರಯೇಚ್ಚ ಪರಿಖಾಂ ಸ್ಥಾಣುನಕ್ರಝಷಾಕುಲಾಃ ॥೪೫॥

ಕೋಟೆಗಳಲ್ಲಿ ತುರ್ತುಪರಿಸ್ಥಿತಿಯಲ್ಲಿ ಹೊರಗೆ ಹೋಗಲು ಕಿಂಡಿಗಳನ್ನು ನಿರ್ಮಿಸಬೇಕು. ಮೀನು ಮೊಸಳೆಗಳಿಂದ ಕಂದಕಗಳನ್ನು ತುಂಬಬೇಕು. (ಕಲ್ಲು ಮತ್ತು ಮರಗಳಿಂದ ತುಂಬಬೇಕು).

ಸಂಕಟದ್ವಾರಕಾಣಿ ಸ್ಯುರುಚ್ಚಾಸ್ಸಾರ್ಥೇ ಪುರಸ್ಯ ಹ ।
ತೇಷಾಂ ಚ ದ್ವಾರವದ್ ಗುಪ್ತಿಃ ಕಾರ್ಯಾ ಸರ್ವಾತ್ಮನಾ ಭವೇತ್ ॥೪೬॥

ಆಪತ್ತಿನ ಸಮಯದಲ್ಲಿ ನಗರದಿಂದ ಹೊರಗೆ ಹೋಗಲು ತುರ್ತುದ್ವಾರ-ಗಳನ್ನು ನಿರ್ಮಿಸಬೇಕು. ಮಹಾದ್ವಾರವನ್ನು ಕಾಯ್ದಂತೆಯೇ ಅಂತಹ ದ್ವಾರಗಳ ಬಳಿಯಲ್ಲಿಯೂ ಸಹ ಸರ್ವಾತ್ಮನಾ ರಕ್ಷಣಾಕಾರ್ಯವನ್ನು ಮಾಡಬೇಕು.

ದ್ವಾರೇಷು ಚ ಗುರೂಣ್ಯೇವ ಯಂತ್ರಾಣಿ ಸ್ಥಾಪಯೇತ್ ಸದಾ ।
ಆರೋಪಯೇಚ್ಛತಘ್ನೀಶ್ಚ ಸ್ವಾಧೀನಾ ಏವ ಕಾರಯೇತ್ ॥೫೦॥

ಎಲ್ಲ ದ್ವಾರಗಳಲ್ಲಿಯೂ ಭಾರವಾದ ಯಂತ್ರಗಳನ್ನು ಜೋಡಿಸಬೇಕು. ಶತಘ್ನೀ-ಗಳನ್ನು ಏರಿಸಿ ಅವುಗಳನ್ನು ಸ್ವಾಧೀನವಾಗಿಟ್ಟುಕೊಳ್ಳಬೇಕು.

ಕಾಷ್ಠಾನಿ ಚಾಭಿಹಾರ್ಯಾಣಿ ತಥಾ ಕೂಪಾಂಶ್ಚ ಖಾನಯೇತ್ ।
ಸಂಶೋಧಯೇತ್ ತಥಾ ಕೂಪಾನ್ ಕೃತಾನ್ ಪೂರ್ವಂ ಪಯೋರ್ಥಿಭಿಃ ॥

ನಗರದ ಒಳಗೆ ಕಾಷ್ಠಗಳನ್ನು ಶೇಖರಿಸಬೇಕು. ಭಾವಿಗಳನ್ನು ತೋಡಿಸಬೇಕು. ಜಲಾರ್ಥಿಗಳು ಹಿಂದೆ ತೋಡಿಸಿ ಮುಚ್ಚಿಹೋದ ಭಾವಿಗಳನ್ನು ಶೋಧಿಸಬೇಕು.

ತೃಣಾಚ್ಛನ್ನಾನಿ ವೇಶ್ಮಾನಿ ಪಂಕೇನಾಪಿ ಪ್ರಲೇಪಯೇತ್ ।
ನಿರ್ಹರೇಚ್ಚ ತೃಣಂ ಮಾಸೇ ಚೈತ್ರೇ ವಹ್ನಿಭಯಾತ್ ಪುರಃ ॥೪೯॥

ಹುಲ್ಲಿನ ಛಾವಣಿಗಳಿರುವ ಮನೆಗಳನ್ನು ಕೆಸರಿನಿಂದಾದರೂ ಲೇಪಿಸಬೇಕು.

ಪಟ್ಟಣಕ್ಕೆ ಉಂಟಾಗಬಹುದಾದ ವಹ್ನಿಯ ಭಯದಿಂದ ಚೈತ್ರಮಾಸದಲ್ಲಿ ಛಾವಣಿ-ಗಳ ಹುಲ್ಲನ್ನು ತೆಗೆಸಬೇಕು.

ನಕ್ತಮೇವ ಚ ಭಕ್ತಾನಿ ಪಾಚಯೇತ ನರಾಧಿಪಃ।
ನ ದಿವಾऽಗ್ನಿರ್ಜ್ವಲೇದ್ ಗೇಹೇ ವರ್ಜಯಿತ್ವಾऽಗ್ನಿಹೋತ್ರಿಕಮ್ ॥೫೦॥

ರಾಜನಾದವನು ರಾತ್ರಿಯಲ್ಲಿಯೇ ಅಡಿಗೆಯನ್ನು ಮಾಡಿಸಬೇಕು. ಅಗ್ನಿ-ಹೋತ್ರದ ಅಗ್ನಿಯನ್ನು ಬಿಟ್ಟು ಬೇರೆ ಯಾವ ಅಗ್ನಿಯೂ ಹಗಲಿನಲ್ಲಿ ಮನೆಗಳಲ್ಲಿ ಜ್ವಲಿಸಬಾರದು.

ಸಂಭವೇ ಸತಿ ಶೈಲಾನಿ ಐಷ್ಟಕಾನಿ ಚ ಕಾರಯೇತ್।
ಮೃನ್ಮಯಾನಿ ಚ ಕುರ್ವೀತ ಜ್ಞಾತ್ವಾ ದೇಶೇ ಬಲಾಬಲಮ್ ॥೫೧॥

ದ್ರವ್ಯಾದಿಅನುಕೂಲವಿದ್ದರೆ ಕಲ್ಲುಗಳ, ಇಟ್ಟಿಗೆಗಳ ಅಥವಾ ಮಣ್ಣಿನ ಗೋಪುರ-ಗಳನ್ನು ಆ ಸ್ಥಳದ ಬಲಾಬಲಗಳನ್ನು ತಿಳಿದು ನಿರ್ಮಿಸಬೇಕು.

ಕರ್ಮಾರಾರಿಷ್ಟಶಾಲಾಸು ಜ್ವಲೇದಗ್ನಿಃ ಸಮಾಹಿತಃ।
ಗೃಹಾಣಿ ಚ ಪ್ರವಿಶ್ಯಾಥ ಪಿಧೇಯಃ ಸ್ಯಾದ್ಧುತಾಶನಃ ॥೫೨॥

ಕರ್ಮಾರನ ಮನೆಯಲ್ಲಿ ಮತ್ತು ಸೂತಿಕಾಗೃಹದಲ್ಲಿ ಅಗ್ನಿಯು ನಿರಾತಂಕವಾಗಿ ಜ್ವಲಿಸಬಹುದು. ಗೃಹಗಳನ್ನು ಪ್ರವೇಶಿಸಿದ ಮೇಲೆ ಒಳಗೆ ಅಗ್ನಿಯು ಉರಿಯುತ್ತಿದ್ದರೆ ಅದನ್ನು ಭಸ್ಮಾದಿಗಳಿಂದ ಮುಚ್ಚಬೇಕು.

ಮಹಾದಂಡಶ್ಚ ತಸ್ಯ ಸ್ಯಾದ್ ಯಸ್ಯಾಗ್ನಿರ್ವೈ ದಿವಾ ಭವೇತ್।
ಪ್ರಘೋಷಯೇದಥೈವಂ ಚ ರಕ್ಷಣಾರ್ಥಂ ಪುರಸ್ಯ ವೈ ॥೫೩॥

ಪುರವನ್ನು ರಕ್ಷಿಸುವುದಕ್ಕೋಸ್ಕರ ಹಗಲಿನಲ್ಲಿ ಯಾರು ಅಗ್ನಿಯನ್ನು ಉರಿಸು-ತ್ತಾರೆಯೋ ಅವರಿಗೆ ದೊಡ್ಡ ದಂಡವನ್ನು ವಿಧಿಸುತ್ತೇನೆ ಎಂದು ಘೋಷಣೆಯನ್ನು ಮಾಡಿಸಬೇಕು.

ಭಿಕ್ಷುಕಾಂಶ್ಚಾಕ್ಷಿಕಾಂಶ್ಚೈವ ಕ್ಲೀಬೋನ್ಮತ್ತಾನ್ ಕುಶೀಲವಾನ್ ।
ಬಾಹ್ಯಾನ್ ಕುರ್ಯಾನ್ನರಶ್ರೇಷ್ಠ ದೋಷಾಯ ಸ್ಯುರ್ಹಿ ತೇಽನ್ಯಥಾ ॥೫೪॥

ಎಲೈ ನರಶ್ರೇಷ್ಠನೇ! (ಯುದ್ಧಕಾಲದಲ್ಲಿ) ಭಿಕ್ಷುಕರನ್ನು, ಜ್ಯೋತಿಷಕರನ್ನು, ಪಾನಮತ್ತರನ್ನು, ಹುಚ್ಚರನ್ನು, ನಟರನ್ನು ನಗರದಿಂದ ಹೊರಗೆ ಕಳುಹಿಸಬೇಕು. ಇಲ್ಲದಿದ್ದರೆ ದೋಷವುಂಟಾದೀತು.

ಚತ್ವರೇಷು ಚ ತೀರ್ಥೇಷು ಸಭಾಸ್ವಾವಸಥೇಷು ಚ ।
ಯಥಾರ್ಹವರ್ಣಂ ಪ್ರಣಿಧಿಂ ಕುರ್ಯಾನ್ಮಾಯಾವಿಶಾರದಮ್ ॥೫೫॥

ಚೌಕಗಳಲ್ಲಿ (ಚತುಷ್ಪಥಗಳಲ್ಲಿ), ತೀರ್ಥಗಳಲ್ಲಿ, ಸಭೆಗಳಲ್ಲಿ ಮತ್ತು ಗೃಹಗಳಲ್ಲಿ ಮಾಯಾವಿಶಾರದರಾದ ಸಮಯಕ್ಕೆ ತಕ್ಕಂತೆ ಜಾತಿಯನ್ನು ಬದಲಾಯಿಸಿಕೊಳ್ಳುವ ಗೂಢಚಾರರನ್ನು ನೇಮಿಸಬೇಕು (ಗೂಢಚಾರನು ಬ್ರಾಹ್ಮಣರಲ್ಲಿ ಬ್ರಾಹ್ಮಣನಂತೆಯೂ, ಕ್ಷತ್ರಿಯರಲ್ಲಿ ಕ್ಷತ್ರಿಯನಂತೆಯೂ, ವೈಶ್ಯರಲ್ಲಿ ವೈಶ್ಯರಂತೆಯೂ, ಶೂದ್ರನಲ್ಲಿ ಶೂದ್ರನಂತೆಯೂ ವರ್ತಿಸಬೇಕು. ಅದಕ್ಕಾಗಿ ಅವನು ಮಾಯಾವಿಶಾರದನಾಗಿರಬೇಕು. ಅಂತಹ ಗೂಢಚಾರರಿಗೆ ಯಥಾರ್ಹವರ್ಣ ಎಂದು ಹೆಸರು – ಲಕ್ಷಾಲಂಕಾರ).

ವಿಶಾಲಾನ್ ರಾಜಮಾರ್ಗಾಂಶ್ಚ ಕಾರಯೇತ ನರಾಧಿಪಃ ।
ಪ್ರಪಾಶ್ಚ ವಿಪಣೇಶ್ಚೈವ ಯಥೋದ್ದೇಶಂ ಸಮಾದಿಶೇತ್ ॥೫೬॥

ರಾಜನಾದವನು ವಿಶಾಲವಾದ ರಾಜಮಾರ್ಗಗಳನ್ನು, ಪಾನಶಾಲೆಗಳನ್ನು, ಅಂಗಡಿಯ ಸಾಲುಗಳನ್ನು ಯೋಗ್ಯವಾದ ಉನ್ನತ ಸ್ಥಳಗಳಲ್ಲಿ ನಿರ್ಮಿಸುವಂತೆ ಆದೇಶ ಕೊಡಬೇಕು.

ಭಾಂಡಾಗಾರಾಯುಧಾಗಾರಾನ್ ಧಾನ್ಯಾಗಾರಾಂಶ್ಚ ಸರ್ವಶಃ ।
ಅಶ್ವಾಗಾರಾನ್ ಗಜಾಗಾರಾನ್ ಬಲಾಧಿಕರಣಾನಿ ಚ ॥೫೭॥

ಪಾತ್ರೆಗಳ ಉಗ್ರಾಣ (ಅಶ್ವಾದಿವಾಹನಗಳ ಆಭರಣಗಳ ಉಗ್ರಾಣ), ಆಯುಧ

-ಗಳ ಉಗ್ರಾಣ, ಧಾನ್ಯಗಳ ಉಗ್ರಾಣ, ಅಶ್ವಶಾಲೆಗಳು, ಗಜಶಾಲೆಗಳು, ಸೇನಾ-ನಿವೇಶಸ್ಥಳಗಳು ಇವುಗಳನ್ನು ಅನೇಕ ಕಡೆ ನಿರ್ಮಿಸಬೇಕು.

ಪರಿಖಾಶ್ಚೈವ ಕೌರವ್ಯ ಪ್ರತೋಲೀಃ ನಿಷ್ಕುಟಾನಿ ಚ।
ನ ಜಾತು ಕಶ್ಚಿತ್ ಪಶ್ಯೇತ್ ತು ಗುಹ್ಯಮೇತದ್ ಯುಧಿಷ್ಠಿರ ॥೫೮॥

ಎಲೈ ಕೌರವ್ಯನೇ! ಯುಧಿಷ್ಠಿರನೇ! ಕಂದಕಗಳು, ರಥಮಾರ್ಗಗಳು, ಬಾಣ-ಪ್ರಯೋಗವನ್ನು ಅಭ್ಯಾಸ ಮಾಡುವ ರಂಧ್ರಗಳು ಇವುಗಳನ್ನು ರಾಜನು ಗೋಪ್ಯ-ವಾಗಿಡಬೇಕು. ಇವುಗಳನ್ನು ಯಾರೂ ನೋಡಬಾರದು.

ಅಥ ಸನ್ನಿಚಯಂ ಕುರ್ಯಾದ್ ರಾಜಾ ಪರಬಲಾರ್ದಿನಃ।
ತೈಲಂ ಮಧು ಘೃತಂ ಸಸ್ಯಮೌಷಧಾನಿ ಚ ಸರ್ವಶಃ ॥೫೯॥

ಶತ್ರುಸೈನ್ಯದ ಪೀಡೆಗೆ ಒಳಗಾದ ರಾಜನು ತೈಲ, ಮಧು, ಘೃತ, ಸಸ್ಯ , ಎಲ್ಲ ರೀತಿಯ ಔಷಧಿಗಳು ಇವುಗಳ ಸಂಗ್ರಹವನ್ನು ಮಾಡಿರಬೇಕು.

ಅಂಗಾರಕುಶಮುಂಜಾನಾಂ ಪಲಾಶಶರಪರ್ಣಿನಾಮ್।
ಯವಸೇಂಧನದಿಗ್ಧಾನಾಂ ಕಾರಯೇತ ಚ ಸಂಚಯಾನ್ ॥೬೦॥

ಇದ್ದಿಲು, ಕುಶ, ಮುಂಜ ಎಂಬ ಹುಲ್ಲು, ಪಲಾಶಪತ್ರಗಳು, ಬಾಣಗಳು, ಉಪಯೋಗಿಸುವ ಪರ್ಣಗಳುಳ್ಳ ಲತೌಷಧಿಗಳು, ಗೋವುಗಳ ಆಹಾರ ಇವು-ಗಳನ್ನು ಸಂಗ್ರಹಿಸಿ ಅವುಗಳನ್ನು ಹುಲ್ಲುಗಳಿಂದ ಅಥವಾ ಕಟ್ಟಿಗೆಗಳಿಂದ ಮುಚ್ಚಬೇಕು.

ಆಯುಧಾನಾಂ ಚ ಸರ್ವೇಷಾಂ ಶಕ್ತ್ಯೃಷ್ಟಿಪ್ರಾಸವರ್ಮಣಾಮ್।
ಸಂಚಯಾನೇವಮಾದೀನಾಂ ಕಾರಯೇತ ನರಾಧಿಪಃ ॥೬೧॥

ರಾಜನು ಇದೇ ರೀತಿಯಲ್ಲಿ ಶಕ್ತಿ, ಋಷ್ಟಿ, ಪ್ರಾಸ ಮೊದಲಾದ ಎಲ್ಲಾ ಆಯುಧಗಳ ಮತ್ತು ಕವಚಗಳ ಸಂಗ್ರಹವನ್ನು ಮಾಡಿಸಬೇಕು.

ಔಷಧಾನಿ ಚ ಸರ್ವಾಣಿ ಮೂಲಾನಿ ಚ ಫಲಾನಿ ಚ।
ಚತುರ್ವಿಧಾಂಶ್ಚ ವೈದ್ಯಾನ್ ವೈ ಸಂಗೃಹ್ಣೀಯಾದ್ ವಿಶೇಷತಃ ॥೬೨॥

ಎಲ್ಲ ಔಷಧಿಗಳನ್ನೂ, ಮೂಲಫಲಗಳನ್ನೂ, ವಿಶೇಷವಾಗಿ ಅಶ್ವವೈದ್ಯ ಗಜವೈದ್ಯ ನರವೈದ್ಯ ಮತ್ತು ಶಸ್ತ್ರವೈದ್ಯರನ್ನು ಸಂಗ್ರಹಿಸಬೇಕು.

ನಟಾಶ್ಚ ನರ್ತಕಾಶ್ಚೈವ ಮಲ್ಲಾ ಮಾಯಾವಿನಸ್ತಥಾ ।
ಶೋಭಯೇಯುಃ ಪುರವರಂ ಮೋದಯೇಯುಶ್ಚ ಸರ್ವಶಃ ॥೬೩॥

ನಟರೂ, ನರ್ತಕರೂ, ಜಟ್ಟಿಗಳೂ, ಮಾಯಾವಿಗಳೂ ಪುರಕ್ಕೆ ಶೋಭೆಯನ್ನು ತಂದು ಪ್ರಜೆಗಳನ್ನು ಎಲ್ಲ ರೀತಿಯಿಂದಲೂ ಸಂತೋಷಪಡಿಸುವಂತೆ ಮಾಡಬೇಕು.

ಯತಃ ಶಂಕಾ ಭವೇಚ್ಚಾಪಿ ಭೃತ್ಯತೋ ವಾಪಿ ಮಂತ್ರಿತಃ ।
ಪೌರೇಭ್ಯೋ ನೃಪತೇರ್ವಾಪಿ ಸ್ವಾಧೀನಾನ್ ಕಾರಯೇತ ತಾನ್ ॥೬೪॥

ಯಾರಿಂದ ಶಂಕೆಯುಂಟಾಗುತ್ತದೆಯೋ ಅವನು ಭೃತ್ಯನಾಗಲೀ, ಮಂತ್ರಿ-ಯಾಗಲೀ ಪ್ರಜೆಯಾಗಲೀ ಅಥವಾ ಸಾಮಂತರಾಜನೇ ಆಗಲಿ ಅವನನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಬಂಧಿಸಬೇಕು.

ಕೃತೇ ಕರ್ಮಣಿ ರಾಜೇಂದ್ರ ಪೂಜಯೇದ್ ಧನಸಂಚಯೈಃ ।
ಮಾನೇನ ಚ ಯಥಾಹರ್ಹೇಣ ಸಾಂತ್ವೇನ ವಿವಿಧೇನ ಚ ॥೬೫॥

ಕಾರ್ಯವನ್ನು ಮಾಡಿದವನಿಗೆ ಧನಸಂಚಯವನ್ನು ಕೊಟ್ಟು ಅವನನ್ನು ಪೂಜಿಸ-ಬೇಕು. ಅವನಿಗೆ ಯೋಗ್ಯವಾದ ಸನ್ಮಾನವನ್ನು ಮತ್ತು ಅನೇಕ ವಿಧವಾದ ಸಾಂತ್ವನ (ಮಾತುಗಳನ್ನು) ನೀಡಬೇಕು.

ನಿರ್ವೇದಯಿತ್ವಾತು ಪರಂ ಹತ್ವಾ ವಾ ಕುರುನಂದನ ।
ಗತಾನೃಣ್ಯೋ ಭವೇದ್ ರಾಜಾ ಯಥಾ ಶಾಸ್ತ್ರೇಷು ದರ್ಶಿತಮ್ ॥೬೬॥

ಎಲೈ ಕುರುನಂದನನೇ! ಶತ್ರುವಿಗೆ ವೈರಾಗ್ಯಬರುವಂತೆ ಮಾಡಿ ಅಥವಾ ಅವನನ್ನು ಕೊಂದು ರಾಜನು ಶಾಸ್ತ್ರದಲ್ಲಿ ಹೇಳಿದ ರೀತಿಯಲ್ಲಿ ಋಣಮುಕ್ತನಾಗ-ಬೇಕು.

ರಾಜ್ಞಾ ಸಪ್ತೈವ ರಕ್ಷ್ಯಾಣಿ ತಾನಿ ಚಾಪಿ ನಿಬೋಧ ಮೇ।
ಆತ್ಮಾऽಮಾತ್ಯಾಶ್ಚ ಕೋಶಶ್ಚ ದಂಡೋ ಮಿತ್ರಾಣಿ ಚೈವ ಹಿ ॥೬೭॥

ತಥಾ ಜನಪದಶ್ಚೈವ ಪುರಂ ಚ ಕುರುನಂದನ।
ಏತತ್ ಸಪ್ತಾತ್ಮಕಂ ರಾಜ್ಯಂ ಪರಿಪಾಲ್ಯಂ ಪ್ರಯತ್ನತಃ ॥೬೮॥

ರಾಜನು ಈ ಏಳುಪದಾರ್ಥಗಳನ್ನು ರಕ್ಷಿಸಬೇಕು. ಅವುಗಳನ್ನು ನನ್ನಿಂದ ಕೇಳು, ಎಲೈ ಕುರುನಂದನನೇ! ಅವು ತಾನು, ಅಮಾತ್ಯ , ಕೋಶ, ದಂಡ, ಮಿತ್ರರು, ಜನಪದ(ದೇಶ) ಮತ್ತು ಪುರ (ರಾಜಧಾನಿ) - ಈ ಸಪ್ತಾಂಗಯುಕ್ತವಾದ ರಾಜ್ಯವನ್ನು ಪ್ರಯತ್ನಪೂರ್ವಕವಾಗಿ ಚೆನ್ನಾಗಿ ರಕ್ಷಿಸಬೇಕು.

ಷಾಡ್ಗುಣ್ಯಂ ಚ ತ್ರಿವರ್ಗಂ ಚ ತ್ರಿವರ್ಗಮಪರಂ ತಥಾ।
ಯೋ ವೇತ್ತಿ ಪುರುಷವ್ಯಾಘ್ರ ಸ ಭುನಕ್ತಿ ಮಹೀಮಿಮಾಮ್ ॥೬೯॥

ಎಲೈ ಪುರುಷವ್ಯಾಘ್ರನೇ! ಯಾವನುಷಾಡ್ಗುಣ್ಯವನ್ನು , ತ್ರಿವರ್ಗವನ್ನು ಮತ್ತು ಇನ್ನೊಂದು ತ್ರಿವರ್ಗವನ್ನು ತಿಳಿದಿರುತ್ತಾನೆಯೋ ಅವನು ಈ ಭೂಮಿಯನ್ನು ಭೋಗಿಸುತ್ತಾನೆ.

ಷಾಡ್ಗುಣ್ಯಮಿತಿ ಯತ್ ಪ್ರೋಕ್ತಂ ತನ್ನಿಬೋಧ ಯುಧಿಷ್ಠಿರ।
ಸಂಧಾನಾಸನಮಿತ್ಯೇವ ಯಾತ್ರಾಸಂಧಾನಮೇವ ಚ ॥೭೦॥

ವಿಗೃಹ್ಯಾಸನಮಿತ್ಯೇವ ಯಾತ್ರಾ ಸಂಪರಿಗೃಹ್ಯ ಚ।
ದ್ವೈಧೀಭಾವಸ್ತಥಾನ್ಯೇಷಾಂ ಸಂಶ್ರಯೋऽಥ ಪರಸ್ಯ ಚ ॥೭೧॥

ಎಲೈ ಯುಧಿಷ್ಠಿರನೇ! ನಾನು ಷಾಡ್ಗುಣ್ಯವೆಂದು ಹೇಳಿದ ವಿಷಯವನ್ನು ಕೇಳು. ಸಂಧಾನಾಸನ (ಸಂಧಿಯ ಸಲುವಾಗಿ ತನ್ನ ಪಟ್ಟಣದಲ್ಲಿಯೇ ವಾಸವನ್ನು ಮಾಡುವುದು. ಇದು ಮಹಾಶಕ್ತಿವಂತನ ಗುಣ). ಯಾತ್ರಾಸಂಧಾನ (ಪರರಾಷ್ಟ್ರಕ್ಕೆ ಯಾತ್ರೆಯನ್ನು ಮಾಡಿ ಸಂಧಿಯನ್ನು ಮಾಡಿಕೊಳ್ಳುವುದು), ವಿಗೃಹ್ಯಾಸನ (ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಿ ಕೋಟೆಯ ಬಳಿ ಜಯ ದೊರೆಯುವವರೆಗೆ

ಕುಳಿತಿರುವುದು), ಸಂಪರಿಗೃಹ್ಯ ಯಾತ್ರಾ (ಶತ್ರುವನ್ನು ಸೆರೆ ಹಿಡಿದು ತನ್ನ ಪಟ್ಟಣಕ್ಕೆ ಬರುವುದು), ದ್ವೈಧೀಭಾವ (ಶತ್ರುವಿನಲ್ಲಿ ಅವನ ಅಮಾತ್ಯಾದಿಗಳಲ್ಲಿ ಪರಸ್ಪರ-ವಿರೋಧವನ್ನುಂಟು ಮಾಡುವುದು), ಸಂಶ್ರಯ (ಶತ್ರುವು ಶರಣಾಗತನಾದರೆ ಅವನಿಗೆ ಒಳ್ಳೆಯ ಆಶ್ರಯವನ್ನು ನೀಡುವುದು) - ಇವು ಷಾಡ್ಗುಣ್ಯವೆನಿಸುತ್ತವೆ.

ತ್ರಿವರ್ಗಶ್ಚಾಪಿ ಯಃ ಪ್ರೋಕ್ತಸ್ತಮಿಹೈಕಮನಾಃ ಶೃಣು।
ಕ್ಷಯಃ ಸ್ಥಾನಂ ಚ ವೃದ್ಧಿಶ್ಚ ತ್ರಿವರ್ಗಮಪರಂ ತಥಾ ॥೭೨॥

ನಾನು ತ್ರಿವರ್ಗವೆಂದು ಹೇಳಿದುದನ್ನು ಒಂದೇ ಮನಸ್ಸಿನಿಂದ ಕೇಳು. ಅವು ಕ್ಷಯ, ಸ್ಥಾನ ಮತ್ತು ವೃದ್ಧಿ ಎಂಬುವುಗಳು. ಇನ್ನೊಂದು ತ್ರಿವರ್ಗವನ್ನು ಕೇಳು.

ಧರ್ಮಶ್ಚಾರ್ಥಶ್ಚ ಕಾಮಶ್ಚ ತ್ರಿವರ್ಗೋ ವೈ ಸನಾತನಃ।
ಮಂತ್ರಶ್ಚೈವ ಪ್ರಭಾವಶ್ಚ ಉತ್ಸಾಹಶ್ಚೈವ ತಾಂತ್ರಿಕಃ ॥೭೩॥

ಧರ್ಮ, ಅರ್ಥ ಮತ್ತು ಕಾಮಗಳೆಂಬುದು ಸನಾತನವಾದ ಇನ್ನೊಂದು ತ್ರಿವರ್ಗ. ಮಂತ್ರ , ಪ್ರಭಾವ ಮತ್ತು ಉತ್ಸಾಹ ಎಂಬುವುಗಳು ರಾಜನೀತಿಗೆ ಸಂಬಂಧಿಸಿದ ಇನ್ನೊಂದು ತ್ರಿವರ್ಗ.

ಶಕ್ತಿತ್ರಯಂ ಸಮಾಖ್ಯಾತಂ ತ್ರಿವರ್ಗಸ್ಯ ಚ ತತ್ಪರಮ್।
ಕಾರ್ಯಂ ಚ ಕಾರಣಂ ಚೈವ ಕರ್ತಾ ಚ ಪರಿಕೀರ್ತಿತಮ್ ॥೭೪॥

ಈ ಕೊನೆಯ ತ್ರಿವರ್ಗವನ್ನು ಮಂತ್ರಶಕ್ತಿ, ಪ್ರಭುಶಕ್ತಿ ಮತ್ತು ಉತ್ಸಾಹಶಕ್ತಿ ಎಂದೂ ಕರೆಯುತ್ತಾರೆ. ಅದು ಮೊದಲಿನ ತ್ರಿವರ್ಗಕ್ಕಿಂತ ಶ್ರೇಷ್ಠವಾದುದು. ಕಾರ್ಯ, ಕಾರಣ ಮತ್ತು ಕರ್ತಾ ಎಂದು ಹೇಳಲ್ಪಡುವ ಇನ್ನೊಂದು ತ್ರಿವರ್ಗವೂ ಇದೆ.

ಏತತ್ ಪರತರಂ ವಿದ್ಯಾದ್ ತ್ರಿವರ್ಗಾದಪಿ ಭಾರತ।
ಸರ್ವೇಷಾಂ ಚ ಕ್ಷಯೇ ರಾಜನ್ ಯಸ್ತ್ರಿವರ್ಗಂ ಸನಾತನಮ್ ॥೭೫॥

ಸತ್ತ್ವಂ ರಜಸ್ತಮಶ್ಚೈವ ತ್ರಿವರ್ಗಂ ಕಾರಣಂ ಸ್ಮೃತಮ್ ।
ತೇನಾತ್ಯಂತವಿಮುಕ್ತಶ್ಚ ಮುಕ್ತಃ ಪುರುಷ ಇಷ್ಯತೇ ॥೭೬॥

ಎಲೈ ಭಾರತನೇ! ಇದು ಹಿಂದಿನ ತ್ರಿವರ್ಗಕ್ಕಿಂತಲೂ ಶ್ರೇಷ್ಠವಾದುದು. ರಾಜನೇ! ಎಲ್ಲ ಕಾರ್ಯಗಳೂ ನಾಶವನ್ನು ಹೊಂದಿದ ಮೇಲೆ ಯಾವ ಸನಾತನವಾದ ತ್ರಿವರ್ಗವು ಉಳಿಯುತ್ತದೆಯೋ ಅದು ಸತ್ತ್ವ, ರಜಸ್, ತಮೋಗುಣರೂಪವಾದ ತ್ರಿವರ್ಗ. ಅದು ಎಲ್ಲದಕ್ಕೂ ಮೂಲಕಾರಣವಾದುದು. ಅದರಿಂದ ಸಂಪೂರ್ಣವಾಗಿ ಬಿಡುಗಡೆಯನ್ನು ಹೊಂದಿದ ಪುರುಷನು ಮುಕ್ತನೆನಿಸುತ್ತಾನೆ.

ಕಾರ್ಯಸ್ಯ ಸರ್ವಥಾ ನಾಶೋ ಮೋಕ್ಷ ಇತ್ಯಭಿಧೀಯತೇ ।
ತೇನ ಮೋಕ್ಷಪರಶ್ಚೈವ ದೇವದೇವಃ ಪಿತಾಮಹಃ ॥೭೭॥

ತುಷ್ಟ್ಯರ್ಥಸ್ಯ ತ್ರಿವರ್ಗಸ್ಯ ರಕ್ಷಾಮಾಹ ನರಾಧಿಪ ।
ಜಗತೋ ಲೌಕಿಕೀ ಯಾತ್ರಾ ಯತ್ರ ನಿತ್ಯಂ ಪ್ರತಿಷ್ಠಿತಾ ॥೭೮॥

ಎಲ್ಲ ಕಾರ್ಯಗಳ ಪೂರ್ಣನಾಶವು ಮೋಕ್ಷವೆಂದು ಹೇಳಲ್ಪಡುತ್ತದೆ. ಎಲೈ ನರಾಧಿಪನೇ! ಮುಮುಕ್ಷುಪರನಾದ ದೇವದೇವನಾದ, ಪಿತಾಮಹನಾದ ಬ್ರಹ್ಮದೇವನು ಜಗತ್ತಿನ ತುಷ್ಟಿಗಾಗಿ ಇರುವ ತ್ರಿವರ್ಗವನ್ನು ರಕ್ಷಣೆ ಎಂದು ಹೇಳಿದ್ದಾನೆ. ಆ ರಕ್ಷಣೆಯಲ್ಲಿ ಜಗತ್ತಿನ ಲೌಕಿಕಯಾತ್ರೆಯು ನಿತ್ಯವೂ ಪ್ರತಿಷ್ಠಿತವಾಗಿದೆ.

ಧರ್ಮಾರ್ಥಶ್ಚ ಕಾಮಶ್ಚ ಸೇವಿತವ್ಯೋಽಥ ಕಾಲತಃ ।
ಧರ್ಮೇಣ ಹಿ ಮಹೀಪಾಲಶ್ಚಿರಂ ಪಾಲಯತೇ ಮಹೀಮ್ ॥೭೯॥

ರಾಜನು ಧರ್ಮಾರ್ಥಕಾಮಗಳನ್ನು ಅವುಗಳಿಗೆ ಯೋಗ್ಯವಾದ ಕಾಲದಲ್ಲಿ ಸೇವಿಸಬೇಕು. ಧರ್ಮದಿಂದ ಆಳುವ ರಾಜನು ಬಹುಕಾಲ ಭೂಮಿಯನ್ನು ಆಳುತ್ತಾನೆ.

ಅಸ್ಮಿನ್ನರ್ಥೇ ಚ ಯೌ ಶ್ಲೋಕೌ ಗೀತಾವಂಗಿರಸಾ ಸ್ವಯಮ್ ।
ಯಾದವೀಪುತ್ರ ಭದ್ರಂ ತೇ ಶ್ರೋತುಮರ್ಹಸಿ ತಾವಪಿ ॥೮೦॥

ಈ ವಿಷಯದಲ್ಲಿ ಆಂಗಿರಸರಾದ ಬೃಹಸ್ಪತಿಗಳು ಎರಡು ಶ್ಲೋಕಗಳನ್ನು ತಾವೇ ಹಾಡಿದ್ದಾರೆ. ಎಲೈ ಕುಂತೀಪುತ್ರನೇ! ನಿನಗೆ ಮಂಗಳವಾಗಲಿ. ಆ ಶ್ಲೋಕಗಳನ್ನು ಕೇಳುವವನಾಗು.

ಕೃತ್ವಾ ಸರ್ವಾಣಿ ಕಾರ್ಯಾಣಿ ಸಮ್ಯಕ್ ಸಂಪಾಲ್ಯ ಮೇದಿನೀಮ್ ।
ಪಾಲಯಿತ್ವಾ ಯಥಾ ಪೌರಾನ್ ಪರತ್ರ ಸುಖಮೇಧತೇ ॥೮೧॥

ಭೂಮಿಯನ್ನು ಚೆನ್ನಾಗಿ ಪಾಲಿಸಿ, ಪ್ರಜೆಗಳನ್ನೂ ಚೆನ್ನಾಗಿ ಪಾಲಿಸಿ, ಎಲ್ಲಾ ಕಾರ್ಯಗಳನ್ನು ಮಾಡಿ ಪರಲೋಕದಲ್ಲಿ ಸುಖವನ್ನು ಹೊಂದುತ್ತಾನೆ.

ಕಿಂ ತಸ್ಯ ತಪಸಾ ರಾಜ್ಞಃ ಕಿಂಚ ತಸ್ಯಾಧ್ವರೈರಪಿ ।
ಅಪಾಲಯಿತಾಃ ಪ್ರಜಾ ಯಸ್ಯ ಸರ್ವಾ ಧರ್ಮವಿನಾಕೃತಾಃ ॥೮೨॥

ಯಾವನು ಪ್ರಜೆಗಳನ್ನು ಪಾಲಿಸದೇ ಎಲ್ಲ ಪ್ರಜೆಗಳೂ ಧರ್ಮಬಹಿರ್ಭೂತರಾಗುತ್ತಾರೆಯೋ ಅಂತಹ ರಾಜನಿಗೆ ತಪಸ್ಸಿನಿಂದಾಗಲೀ, ಯಜ್ಞಗಳಿಂದಾಗಲೀ ಯಾವ ಫಲ ಉಂಟಾದೀತು?

ಶ್ಲೋಕಾಶ್ಚೋಶನಸಾ ಗೀತಾಸ್ತಾನ್ ನಿಬೋಧ ಯುಧಿಷ್ಠಿರ ।
ದಂಡನೀತೇಶ್ಚ ತೇ ಮೂಲಂ ತ್ರಿವರ್ಗಸ್ಯ ಚ ಭೂಪತೇ ॥೮೩॥

ಎಲೈ ಯುಧಿಷ್ಠಿರನೇ! ಶುಕ್ರಾಚಾರ್ಯರು ಗಾನ ಮಾಡಿದ ಶ್ಲೋಕಗಳನ್ನು ಕೇಳು. ಭೂಪತಿಯೇ! ದಂಡನೀತಿಗೂ ಮತ್ತು ತ್ರಿವರ್ಗಕ್ಕೂ ಆ ಶ್ಲೋಕಗಳು ಮೂಲಭೂತವಾದವುಗಳು.

ಭಾರ್ಗವಾಂಗಿರಸಂ ಕರ್ಮ ಷೋಡಶಾಂಗಂ ಚ ಯದ್ ಬಲಮ್ ।
ವಿಷಹ್ಯತಾ ಚ ದೈವಂ ಚ ಪೌರುಷಂ ಚಾರ್ಥಸಿದ್ಧಯೇ ॥೮೪॥

ಶುಕ್ರ ಮತ್ತು ಬೃಹಸ್ಪತಿಗಳಿಗೆ ಸಂಬಂಧಿಸಿದ ನೀತಿಗಳು, ರಾಜರಿಗೆ ಉಚಿತವಾದ ಕರ್ಮಗಳು, ಹದಿನಾರು ಅಂಗಗಳುಳ್ಳ ಬಲ – ನಾಲ್ಕು ವಿಧವಾದ ಸೇನೆ, ಸಾಮಾದಿ ನಾಲ್ಕು ಉಪಾಯಗಳು, ಹಿಂದೆ ಹೇಳಿದ ಷಡ್ಗುಣಗಳು, ಸಮಯಾಸಮಯವಿಚಾರ,

ಸಾಧ್ಯಾಸಾಧ್ಯವಿಚಾರ ಇವು ಹದಿನಾರು ಅಂಗಗಳು - ಶತ್ರುಗಳ ಉಪದ್ರವವನ್ನು ಸಹಿಸುವ ಯೋಗ್ಯತೆ, ದೈವಾನುಗ್ರಹ ಮತ್ತು ಪುರುಷಪ್ರಯತ್ನ ಇವು ಅರ್ಥಸಿದ್ಧಿಗೆ ಕಾರಣಗಳಾಗುತ್ತವೆ.

ಪ್ರಾಗುದಕ್‌ಪ್ರವಣಂ ದುರ್ಗಂ ಸಮಾಸಾದ್ಯ ಮಹೀಪತಿಃ।
ತ್ರಿವರ್ಗತ್ರಯಸಂಪೂರ್ಣಮುಪಾದಾಯ ಸಮುದ್ವಹೇತ್ ॥೮೫॥

ರಾಜನು ಈಶಾನ್ಯದಿಕ್ಕಿನಲ್ಲಿ ಇಳಿಜಾರಾಗಿರುವ ಕೋಟೆಯನ್ನು ಆಶ್ರಯಿಸಿ, ಈ ಮೂರುವಿಧವಾದ ತ್ರಿವರ್ಗಗಳನ್ನು ಸಂಪೂರ್ಣವಾಗಿ ಸ್ವೀಕರಿಸಿ, ಅವುಗಳನ್ನು ಉದ್ಧರಿಸಬೇಕು.

ಷಟ್‌ಪಂಚ ಚ ವಿನಿರ್ಜಿತ್ಯ ದಶ ಚಾಷ್ಟೌ ಚ ಭೂಪತಿಮ್।
ತ್ರಿವರ್ಗೈರ್ದಶಭಿರ್ಯುಕ್ತಃ ಸುರೈರಪಿ ನ ಜೀಯತೇ ॥೮೬॥

ಕಾಮಾದಿ ಆರು ವೈರಿಗಳನ್ನು, ಭೂಮ್ಯಾದಿ ಪಂಚಮಹಾಭೂತಾತ್ಮಕವಾದ ದೇಹವನ್ನು, ಹತ್ತು ಇಂದ್ರಿಯಗಳನ್ನು, ಅಷ್ಟಮದಗಳನ್ನು ಜಯಿಸಿ, ಧರ್ಮ ಅರ್ಥ ಕಾಮಾದಿ ತ್ರಿವರ್ಗಗಳಿಂದಲೂ, ಅಮಾತ್ಯಾದಿ ಷಟ್ಕ, ಯಜ್ಞ ಅಧ್ಯಯನ ದಾನ ಪ್ರಜಾಪಾಲನ ಎಂಬ ಹತ್ತರಿಂದಲೂ ಯುಕ್ತನಾದ ರಾಜನು ದೇವತೆಗಳಿಂದಲೂ ಪರಾಭವವನ್ನು ಹೊಂದುವುದಿಲ್ಲ.

ನ ಬುದ್ಧಿಂ ಪರಿಗೃಹ್ಣೀತ ಸ್ತ್ರೀಣಾಂ ಮೂರ್ಖಜನಸ್ಯ ಚ।
ದೈವೋಪಹತಬುದ್ಧೀನಾಂ ಯೇ ಚ ವೇದೈರ್ವಿವರ್ಜಿತಾಃ ॥೮೭॥

ನ ತೇಷಾಂ ಶೃಣುಯಾದ್ ರಾಜಾ ಬುದ್ಧಿಸ್ತೇಷಾಂ ಪರಾಙ್ಮುಖೀ।
ಸ್ತ್ರೀಪ್ರಧಾನಾನಿ ರಾಜ್ಯಾನಿ ವಿದ್ವದ್ಭಿರ್ವರ್ಜಿತಾನಿ ಚ ॥೮೮॥

ಮೂರ್ಖಾಮಾತ್ಯಪ್ರತಪ್ತಾನಿ ಶುಷ್ಯಂತೇ ಜಲಬಿಂದುವತ್।

ಸ್ತ್ರೀಯರಿಂದಲೂ, ಮೂರ್ಖಜನರಿಂದಲೂ, ದೈವದಿಂದ ಉಪಹತವಾದ ಬುದ್ಧಿಯುಳ್ಳವರಿಂದಲೂ, ವೇದಬಾಹಿರರಿಂದಲೂ ಉಪದೇಶವನ್ನು ಸ್ವೀಕರಿಸ-

ಬಾರದು. ರಾಜನು ಅವರ ಹಿತವಚನವನ್ನು ಕೇಳಬಾರದು. ಅವರ ಬುದ್ಧಿಯು ಹಿತಕ್ಕೆ ಪರಾಙ್ಮುಖವಾಗಿರುತ್ತದೆ. ವಿವೇಕಿಗಳಾದವರು ಸ್ತ್ರೀಪ್ರಧಾನವಾದ ರಾಜ್ಯಗಳನ್ನು ವರ್ಜಿಸುತ್ತಾರೆ. ಮೂರ್ಖರಾದ ಅಮಾತ್ಯರಿಂದ ಉಪದ್ರವಕ್ಕೆ ಒಳಗಾದ ರಾಜ್ಯಗಳು ನೀರಿನ ಹನಿಗಳಂತೆ ಒಣಗಿ ಹೋಗುತ್ತವೆ.

ವಿದ್ವಾಂಸಃ ಪ್ರಥಿತಾ ಯೇ ಚ ಯೇ ಚಾಪ್ತಾಃ ಸರ್ವಕರ್ಮಸು ॥೮೯॥

ಯುದ್ಧೇಷು ದೃಷ್ಟಕರ್ಮಾಣಸ್ತೇಷಾಂ ಚ ಶೃಣುಯಾನ್ನೃಪ।
ದೈವಂ ಪುರುಷಕಾರಂ ಚ ತ್ರಿವರ್ಗಂ ಚ ಸಮಾಶ್ರಿತಮ್ ।
ದೈವತಾನಿ ಚ ವಿಪ್ರಾಂಶ್ಚ ಪ್ರಣಮ್ಯ ವಿಜಯೀ ಭವೇತ್ ॥೯೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತತಿತಮೋऽಧ್ಯಾಯಃ ॥೭೦॥

ಯಾರು ಪ್ರಸಿದ್ಧರಾದ ವಿದ್ವಾಂಸರೋ, ಯಾರು ಸರ್ವಕರ್ಮಗಳಲ್ಲಿ ಆಪ್ತರೋ, ಯಾರ ವಿಕ್ರಮವು ಯುದ್ಧಗಳಲ್ಲಿ ದೃಷ್ಟವಾಗಿದೆಯೋ ಅಂತಹವರ ಮಾತನ್ನು ಕೇಳಬೇಕು. ಎಲೈ ರಾಜನೇ! ದೈವವು ಪುರುಷಪ್ರಯತ್ನ ಮತ್ತು ತ್ರಿವರ್ಗಗಳನ್ನು ಅವಲಂಬಿಸಿದೆ. ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ನಮಸ್ಕರಿಸುವ ರಾಜನು ವಿಜಯಶಾಲಿಯಾಗುತ್ತಾನೆ.

ರಾಜಧರ್ಮಕನ್ನಡಾನುವಾದದಲ್ಲಿ ೭೦ನೆಯ ಅಧ್ಯಾಯವು ಮುಗಿಯಿತು.

—೦—

೭೧. ಎಪ್ಪತ್ತೊಂದನೆಯ ಅಧ್ಯಾಯ

ಕೃತಾದಿಯುಗಗಳ ಗುಣನಿರೂಪಣೆ

ಯುಧಿಷ್ಠಿರಃ

ದಂಡನೀತಿಶ್ಚ ರಾಜಾ ಚ ಸಮಸ್ತೌ ತಾವುಭಾವಪಿ।
ಕಸ್ಯ ಕಿಂ ಕುರ್ವತಃ ಸಿದ್ಧ್ಯೈ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ಪಿತಾಮಹನೇ! ದಂಡನೀತಿ ಮತ್ತು ರಾಜ ಇಬ್ಬರೂ ಸೇರಿ ಯಾರಿಗೆ ಯಾವ ಸಿದ್ಧಿಯನ್ನು ಉಂಟು ಮಾಡಿಕೊಳ್ಳುತ್ತಾರೆ ಎಂಬುದನ್ನು ನನಗೆ ಹೇಳು.

ಭೀಷ್ಮಃ

ಮಹಾಭಾಗ್ಯಂ ದಂಡನೀತ್ಯಾಃ ಸಾಧ್ಯಂ ಶಬ್ದೈಃ ಸಹೇತುಕೈಃ।
ಶೃಣು ಮೇ ಶಂಸತೋ ರಾಜನ್ ಯಥಾವದಿಹ ಭಾರತ ॥೨॥

ಭೀಷ್ಮರು – ದಂಡನೀತಿಯಿಂದ ಉಂಟಾಗುವ ಮಹಾಭಾಗ್ಯವನ್ನು ಯುಕ್ತಿ-ಸಹಿತವಾದ ಶಬ್ದಗಳಿಂದ ಸಾಧಿಸುತ್ತೇನೆ. ಎಲೈ ರಾಜನೇ! ಭಾರತನೇ! ನಾನು ಹೇಳುವಂತೆ ಅದನ್ನು ಸರಿಯಾಗಿ ಕೇಳು.

ದಂಡನೀತಿಃ ಸ್ವಧರ್ಮೇಭ್ಯಶ್ಚಾತುರ್ವರ್ಣ್ಯಂ ನಿಯಚ್ಛತಿ।
ಪ್ರಯುಕ್ತಾ ಸ್ವಾಮಿನಾऽಸಮ್ಯಗಧರ್ಮೇಭ್ಯಶ್ಚ ಯಚ್ಛತಿ ॥೩॥

ದಂಡನೀತಿಯು ನಾಲ್ಕು ವರ್ಣಗಳಿಗೆ ಸೇರಿದ ಪ್ರಜೆಗಳನ್ನು ಅವರವರ ಧರ್ಮದಲ್ಲಿ ನಿಯಂತ್ರಿಸುತ್ತದೆ. ರಾಜನು ದಂಡನೀತಿಯನ್ನು ತಪ್ಪಾಗಿ ಪ್ರಯೋಗಿಸಿದರೆ ಆ ದಂಡನೀತಿಯು ಪ್ರಜೆಗಳನ್ನು ಅಧರ್ಮಗಳಿಗೆ ಕೊಟ್ಟು ಬಿಡುತ್ತದೆ.

ಚಾತುರ್ವರ್ಣ್ಯೇ ಸ್ವಧರ್ಮಸ್ಥೇ ಮರ್ಯಾದಾನಾಮಸಂಕರೇ।
ದಂಡನೀತಿಕೃತೇ ಕ್ಷೇಮೇ ಪ್ರಜಾನಾಮಕುತೋಭಯೇ ॥೪॥

ಸೋಮೇ ಪ್ರಯತ್ನಂ ಕುರ್ವಂತಿ ತ್ರಯೋ ವರ್ಣಾ ಯಥಾವಿಧಿ।
ತಸ್ಮಾದ್ ದೇವಮನುಷ್ಯಾಣಾಂ ಸುಖಂ ವಿದ್ಧಿ ಸಮಾಹಿತಮ್ ॥೫॥

ಚಾತುರ್ವರ್ಣ್ಯವು ತನ್ನ ಧರ್ಮದಲ್ಲಿ ನಿರತವಾಗಿ ಸಮಾಜದ ಮರ್ಯಾದೆಗಳು ಕದಡಿಹೋಗದೇ ದಂಡನೀತಿಯಿಂದ ಕ್ಷೇಮವುಂಟಾಗಿ ಪ್ರಜೆಗಳು ನಿರ್ಭಯವಾಗಿದ್ದರೆ ಮೂರುವರ್ಣದವರೂ ವಿಧಿಗನುಸಾರವಾಗಿ ಸೋಮಾದಿಯಾಗಗಳಲ್ಲಿ

ಪ್ರಯತ್ನಪಡುತ್ತಾರೆ. ಅದರಲ್ಲಿ ದೇವತೆಗಳ ಮತ್ತು ಮನುಷ್ಯರ ಸುಖವು ಪ್ರತಿಷ್ಠಿತವಾಗಿದೆ ಎಂಬುದನ್ನು ತಿಳಿ.

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾ ಭೂದ್ ರಾಜಾ ಕಾಲಸ್ಯ ಕಾರಣಮ್ ॥೬॥

ಕಾಲವು ರಾಜನಿಗೆ ಕಾರಣವೇ ಅಥವಾ ರಾಜನೇ ಕಾಲಕ್ಕೆ ಕಾರಣನೇ ಎಂಬ ಸಂಶಯವು ನಿನಗೆ ಬೇಡ. ರಾಜನು ಕಾಲಕ್ಕೆ ಕಾರಣ.

ದಂಡನೀತ್ಯಾ ಯದಾ ರಾಜಾ ಸಮ್ಯಕ್ ಕಾರ್ತ್ಸ್ನ್ಯೇನ ವರ್ತತೇ ।
ತದಾ ಕೃತಯುಗಂ ನಾಮ ಕಾಲಃ ಶ್ರೇಷ್ಠಃ ಪ್ರವರ್ತತೇ ॥೭॥

ರಾಜನು ದಂಡನೀತಿಯನ್ನು ಪೂರ್ಣವಾಗಿ ಚೆನ್ನಾಗಿ ಪ್ರಯೋಗಿಸಿದರೆ ಆಗ ಕೃತಯುಗವೆಂಬ ಶ್ರೇಷ್ಠಕಾಲವು ಪ್ರವೃತ್ತವಾಗುತ್ತದೆ.

ಭವೇತ್ ಕೃತಯುಗೇ ಧರ್ಮೋ ನಾಧರ್ಮೋ ವಿದ್ಯತೇ ಕ್ವಚಿತ್ ।
ಸರ್ವೇಷಾಮೇವ ವರ್ಣಾನಾಂ ನಾಧರ್ಮೇ ರಮತೇ ಮನಃ ॥೮॥

ಕೃತಯುಗದಲ್ಲಿ ಧರ್ಮವೇ ಇರುತ್ತದೆ. ಎಲ್ಲಿಯೂ ಅಧರ್ಮವಿರುವುದಿಲ್ಲ. ಯಾವ ವರ್ಣದವರಿಗೂ ಮನಸ್ಸಿನಲ್ಲಿ ಅಧರ್ಮದಲ್ಲಿ ಅಭಿರುಚಿ ಉಂಟಾಗುವುದಿಲ್ಲ.

ಯೋಗಕ್ಷೇಮಾಃ ಪ್ರವರ್ತಂತೇ ಪ್ರಜಾನಾಂ ನಾತ್ರ ಸಂಶಯಃ ।
ವೈದಿಕಾನಿ ಚ ಕರ್ಮಾಣಿ ಭವಂತ್ಯವಿಗುಣಾನ್ಯುತ ॥೯॥

ಪ್ರಜೆಗಳಿಗೆ ಅಪೇಕ್ಷಿತವಾದ ಯೋಗಕ್ಷೇಮಗಳು ಉಂಟಾಗುತ್ತವೆ. ಇದರಲ್ಲಿ ಸಂಶಯವಿಲ್ಲ. ವೈದಿಕವಾದ ಕರ್ಮಗಳು ನಿರ್ದುಷ್ಟವಾಗಿ ನಡೆಯುತ್ತವೆ.

ಋತವಶ್ಚ ಸುಖಾಃ ಸರ್ವೇ ಭವಂತ್ಯುತ ನಿರಾಮಯಾಃ ।
ಪ್ರಸೀದಂತಿ ನರಾಣಾಂ ಚ ಸ್ವರವರ್ಣಮನಾಂಸಿ ಚ ॥೧೦॥

ಎಲ್ಲ ಋತುಗಳೂ ದೋಷರಹಿತವಾಗಿ ಸುಖಪ್ರದವಾಗಿರುತ್ತವೆ. ಮನುಷ್ಯರ ಸ್ವರವರ್ಣಮನಸ್ಸುಗಳು ಪ್ರಸನ್ನವಾಗಿರುತ್ತವೆ.

ವ್ಯಾಧಯೋ ನ ಭವಂತ್ಯತ್ರ ನಾಲ್ಪಾಯುರ್ದೃಶ್ಯತೇ ನರಃ।
ವಿಧವಾ ನ ಭವಂತ್ಯತ್ರ ನೃಶಂಸೋ ನಾಭಿಜಾಯತೇ ॥೧೧॥

ಕೃತಯುಗದಲ್ಲಿ ವ್ಯಾಧಿಗಳಿರುವುದಿಲ್ಲ. ಮನುಷ್ಯರು ಅಲ್ಪಾಯುಷಿಗಳಾಗಿ ಕಂಡು ಬರುವುದಿಲ್ಲ. ವಿಧವೆಯರು ಇರುವುದಿಲ್ಲ. ಕ್ರೂರನಾದ ಪುರುಷನು ಜನಿಸು-ವುದಿಲ್ಲ.

ಅಕೃಷ್ಟಪಚ್ಯಾ ಪೃಥಿವೀ ಭವಂತ್ಯೋಷಧಯಸ್ತಥಾ।
ತ್ವಕ್‌ಪತ್ರಫಲಮೂಲಾನಿ ವೀರ್ಯವಂತಿ ಭವಂತಿ ಚ ॥೧೨॥

ಭೂಮಿಯು ಕೃಷಿಯನ್ನು ಮಾಡದೆಯೇ ಫಲವನ್ನು ಕೊಡುತ್ತದೆ. ಓಷಧಿ-ವನಸ್ಪತಿಗಳು ತಾವಾಗಿಯೇ ಫಲವನ್ನು ಕೊಡುತ್ತವೆ. ತೊಗಟೆಗಳು, ಎಲೆಗಳು, ಫಲ-ಮೂಲಗಳು ಸಾರವತ್ತಾಗಿರುತ್ತವೆ.

ನಾಧರ್ಮೋ ವಿದ್ಯತೇ ತತ್ರ ಧರ್ಮ ಏವ ತು ಕೇವಲಃ।
ಇತಿ ಕಾರ್ತಯುಗಾನೇತಾನ್ ಗುಣಾನ್ ವಿದ್ಧಿ ಯುಧಿಷ್ಠಿರ ॥೧೩॥

ಆಗ ಅಧರ್ಮವು ಇರುವುದಿಲ್ಲ. ಕೇವಲ ಧರ್ಮವೇ ಇರುತ್ತದೆ. ಎಲೈ ಯುಧಿ-ಷ್ಠಿರನೇ! ಇವುಗಳನ್ನು ಕೃತಯುಗದ ಗುಣಗಳೆಂದು ತಿಳಿ.

ದಂಡನೀತ್ಯಾ ಯದಾ ರಾಜಾ ತ್ರೀನಂಶಾನನುವರ್ತತೇ।
ಚತುರ್ಥಮಂಶಮುತ್ಸೃಜ್ಯ ತದಾ ತ್ರೇತಾ ಪ್ರವರ್ತತೇ ॥೧೪॥

ರಾಜನು ದಂಡನೀತಿಯಲ್ಲಿ ನಾಲ್ಕನೆಯ ಒಂದಂಶವನ್ನು ಬಿಟ್ಟು ಮೂರು ಅಂಶಗಳನ್ನು ಮಾತ್ರ ಅನುಸರಿಸುವಾಗ ತ್ರೇತಾಯುಗವು ಪ್ರವೃತ್ತವಾಗುತ್ತದೆ.

ಅಧರ್ಮಸ್ಯ ಚತುರ್ಥಾಂಶಸ್ತ್ರೀನಂಶಾನನುವರ್ತತೇ।
ಕೃಷ್ಟಪಚ್ಯೈವ ಪೃಥಿವೀ ಭವಂತ್ಯೋಷಧಯಸ್ತಥಾ ॥೧೫॥

ಅಧರ್ಮದ ನಾಲ್ಕನೆಯ ಅಂಶವು ಧರ್ಮದ ಮೂರು ಅಂಶಗಳನ್ನುಅನುಸರಿಸಿ ನಡೆಯುತ್ತದೆ. ಉತ್ತು, ಬಿತ್ತಿದರೆ ಮಾತ್ರ ಭೂಮಿಯು ಧಾನ್ಯವನ್ನು ಕೊಡುತ್ತದೆ. ಕೃಷಿ ಮಾಡಿದರೆ ಮಾತ್ರ ಓಷಧಿವನಸ್ಪತಿಗಳು ಫಲವನ್ನು ಕೊಡುತ್ತವೆ.

ಅರ್ಧಂ ತ್ಯಕ್ತ್ವಾ ಯದಾ ರಾಜಾ ನೀತ್ಯರ್ಧಮನುವರ್ತತೇ।
ತತಸ್ತು ದ್ವಾಪರಂ ನಾಮ ಸ ಕಾಲಃ ಸಂಪ್ರವರ್ತತೇ ॥೧೬॥

ರಾಜನು ರಾಜನೀತಿಯ ಅರ್ಧಭಾಗವನ್ನು ತ್ಯಜಿಸಿ ಉಳಿದ ಅರ್ಧಭಾಗವನ್ನು ಮಾತ್ರ ಆಶ್ರಯಿಸಿದರೆ ಆಗ ದ್ವಾಪರ ಎಂಬ ಕಾಲವು ಪ್ರವೃತ್ತವಾಗುತ್ತದೆ.

ಅಶುಭಸ್ಯ ತದಾ ತ್ವರ್ಧಂ ದ್ವಾವಂಶಾವನುವರ್ತತೇ।
ಕೃಷ್ಟಪಚ್ಯೈವ ಪೃಥಿವೀ ಭವತ್ಯಲ್ಪಫಲಾ ತಥಾ ॥೧೭॥

ಆಗ ಅಶುಭದ ಎರಡು ಅಂಶಗಳು ಮತ್ತು ಶುಭದ ಎರಡು ಅಂಶಗಳನ್ನು ಅನುಸರಿಸುತ್ತವೆ. ಕೃಷಿ ಮಾಡಿದರೆ ಮಾತ್ರ ಭೂಮಿಯು ಅಲ್ಪಫಲವನ್ನು ಕೊಡುತ್ತದೆ.

ದಂಡನೀತಿಂ ಪರಿತ್ಯಜ್ಯ ಯದಾ ಕಾರ್ತ್ಸ್ನ್ಯೇನ ಭೂಮಿಪಃ।
ಪ್ರಜಾಃ ಕ್ಲಿಶ್ನಾತ್ಯಯೋಗೇನ ಪ್ರವಿಶತಿ ತದಾ ಕಲಿಃ ॥೧೮॥

ರಾಜನು ದಂಡನೀತಿಯನ್ನು ಸಂಪೂರ್ಣವಾಗಿ ತ್ಯಜಿಸಿದರೆ ಪ್ರಜೆಗಳು ದುಃಖಕ್ಕೆ ಈಡಾಗುತ್ತಾರೆ. ಆಗ ಕಲಿಯುಗವು ಪ್ರವೇಶಮಾಡುತ್ತದೆ.

ಕಲಾವಧರ್ಮೋ ಭೂಯಿಷ್ಠಂ ಧರ್ಮೋ ಭವತಿ ತು ಕ್ವಚಿತ್।
ಸರ್ವೇಷಾಮೇವ ವರ್ಣಾನಾಂ ಸ್ವಧರ್ಮಾಽಚ್ಚ್ಯವತೇ ಮನಃ ॥೧೯॥

ಕಲಿಯುಗದಲ್ಲಿ ಅಧರ್ಮವೇ ಬಹಳವಾಗಿ ನಡೆಯುತ್ತದೆ. ಎಲ್ಲೋ ಒಂದೊಂದು ಕಡೆ ಧರ್ಮವು ನಡೆಯುತ್ತದೆ. ಎಲ್ಲ ವರ್ಣದವರಿಗೂ ತಮ್ಮ ಧರ್ಮ-ಗಳಿಂದ ಮನಸ್ಸು ಜಾರಿಹೋಗುತ್ತದೆ.

ಶೂದ್ರಾ ಭೈಕ್ಷೇಣ ಜೀವಂತಿ ಬ್ರಾಹ್ಮಣಾಃ ಪರಿಚರ್ಯಯಾ।
ಯೋಗಕ್ಷೇಮಸ್ಯ ನಾಶಶ್ಚ ವರ್ತತೇ ವರ್ಣಸಂಕರಃ ॥೨೦॥

ಶೂದ್ರರು ಸನ್ಯಾಸಿಗಳಾಗಿ ಜೀವಿಸುತ್ತಾರೆ. ಬ್ರಾಹ್ಮಣರು ಸೇವೆಯನ್ನು ಮಾಡಿ-ಕೊಂಡು ಜೀವಿಸುತ್ತಾರೆ. ಪ್ರಜೆಗಳ ಯೋಗಕ್ಷೇಮವು ನಾಶವನ್ನು ಹೊಂದುತ್ತದೆ. ವರ್ಣಸಂಕರವುಂಟಾಗುತ್ತದೆ.

ವೈದಿಕಾನಿ ಚ ಕರ್ಮಾಣಿ ಭವಂತಿ ವಿಗುಣಾನ್ಯುತ।
ಋತವೋ ನಸುಖಾಃ ಸರ್ವೇ ಭವಂತ್ಯಾಮಯಿನಸ್ತಥಾ ॥೨೧॥

ವೈದಿಕಕರ್ಮಗಳು ಗುಣರಹಿತವಾಗುತ್ತವೆ. ಋತುಗಳು ಸುಖಪ್ರದಗಳಾಗು-ವುದಿಲ್ಲ. ಪ್ರಜೆಗಳು ರೋಗಗ್ರಸ್ತರಾಗುತ್ತಾರೆ.

ಹ್ರಸಂತಿ ಚ ಮನುಷ್ಯಾಣಾಂ ಸ್ವರವರ್ಣಮನಾಂಸ್ಯುತ।
ವ್ಯಾಧಯಶ್ಚ ಭವಂತ್ಯತ್ರ ಮ್ರಿಯಂತೇ ಚಾಶತಾಯುಷಃ ॥೨೨॥

ಪ್ರಜೆಗಳ ಸ್ವರ, ವರ್ಣ, ಮನಸ್ಸುಗಳು ಕುಗ್ಗಿಹೋಗುತ್ತವೆ. ವ್ಯಾಧಿಗಳು ಉಂಟಾ-ಗುತ್ತವೆ. ನೂರುವರ್ಷ ತುಂಬದೆಯೇ ಪ್ರಜೆಗಳು ಮರಣವನ್ನು ಹೊಂದುತ್ತಾರೆ.

ವಿಧವಾಶ್ಚ ಭವಂತ್ಯತ್ರ ನೃಶಂಸಾ ಜಾಯತೇ ಪ್ರಜಾ।
ಕ್ವಚಿದ್ ವರ್ಷತಿ ಪರ್ಜನ್ಯಃ ಕ್ವಚಿತ್ ಸಸ್ಯಂ ಪ್ರರೋಹತಿ ॥೨೩॥

ನಾರಿಯರು ವಿಧವೆಯರಾಗುತ್ತಾರೆ. ಪ್ರಜೆಗಳು ಕ್ರೂರಿಗಳಾಗುತ್ತಾರೆ. ಪರ್ಜ-ನ್ಯನು ಕೆಲವು ಕಡೆ ಮಾತ್ರ ಮಳೆಯನ್ನು ಸುರಿಸುತ್ತಾನೆ. ಕೆಲವು ಕಡೆ ಮಾತ್ರ ಸಸ್ಯಗಳು ಬೆಳೆಯುತ್ತವೆ.

ರಸಾಃ ಸರ್ವೇ ಕ್ಷಯಂ ಯಾಂತಿ ಯದಾ ನೇಚ್ಛತಿ ಭೂಮಿಪಃ।
ಪ್ರಜಾಃ ಸಂರಕ್ಷಿತುಂ ಸಮ್ಯಗ್ ದಂಡನೀತಿಸಮನ್ವಿತಃ ॥೨೪॥

ರಾಜನು ದಂಡನೀತಿಸಮನ್ವಿತನಾಗಿ ಪ್ರಜೆಗಳನ್ನು ಚೆನ್ನಾಗಿ ರಕ್ಷಿಸಲು ಬಯಸ-ದಿದ್ದರೆ ಭೂಮಿಯ ಎಲ್ಲ ರಸಗಳೂ ನಾಶವನ್ನು ಹೊಂದುತ್ತವೆ.

ರಾಜಾ ಕೃತಯುಗಸ್ರಷ್ಟಾ ತ್ರೇತಾಯಾ ದ್ವಾಪರಸ್ಯ ಚ।
ಯುಗಸ್ಯ ಚ ಚತುರ್ಥಸ್ಯ ರಾಜಾ ಭವತಿ ಕಾರಣಮ್ ॥೨೫॥

ರಾಜನೇ ಕೃತಯುಗವನ್ನು ಸೃಷ್ಟಿಸುವವನು. ತ್ರೇತಾಯುಗ, ದ್ವಾಪರಯುಗ ಮತ್ತು ನಾಲ್ಕನೆಯದಾದ ಕಲಿಯುಗಕ್ಕೂ ರಾಜನೇ ಕಾರಣನಾಗುತ್ತಾನೆ.

ಕೃತಸ್ಯ ಕರಣಾದ್ ರಾಜಾ ಸ್ವರ್ಗಮತ್ಯಂತಮಶ್ನುತೇ।
ತ್ರೇತಾಯಾಃ ಕರಣಾದ್ ರಾಜಾ ಸ್ವರ್ಗಂ ನಾತ್ಯಂತಮಶ್ನುತೇ ॥೨೬॥

ಕೃತಯುಗವನ್ನು ಸೃಷ್ಟಿಮಾಡುವುದರಿಂದ ರಾಜನು ಅತಿಶಯವಾದ ಸ್ವರ್ಗವನ್ನು ಪಡೆಯುತ್ತಾನೆ. ತ್ರೇತಾಯುಗವನ್ನು ಸೃಷ್ಟಿಸಿದ ರಾಜನು ಸ್ವರ್ಗವನ್ನು ಪಡೆದರೂ ಅದರಲ್ಲಿ ಅಷ್ಟು ಅತಿಶಯವಿರುವುದಿಲ್ಲ.

ಪ್ರವರ್ತನಾದ್ ದ್ವಾಪರಸ್ಯ ಯಥಾಭಾಗಮುಪಾಶ್ನುತೇ।
ಕಲೇಃ ಪ್ರವರ್ತನಾದ್ ರಾಜಾ ಪಾಪಮತ್ಯಂತಮಶ್ನುತೇ ॥೨೭॥

ದ್ವಾಪರಯುಗವನ್ನು ಪ್ರವರ್ತಿಸುವುದರಿಂದ ಧರ್ಮದ ಅರ್ಧಭಾಗಕ್ಕನುಗುಣವಾಗಿ ಅಷ್ಟೇ ಫಲವನ್ನು ಪಡೆಯುತ್ತಾನೆ. ಕಲಿಯುಗವನ್ನು ಪ್ರವರ್ತಿಸುವುದರಿಂದ ರಾಜನು ಬಹಳ ಪಾಪವನ್ನು ಹೊಂದುತ್ತಾನೆ.

ತತೋ ವಸತಿ ದುಷ್ಕರ್ಮಾ ನರಕೇ ಶಾಶ್ವತೀಃ ಸಮಾಃ।
ಪ್ರಜಾನಾಂ ಕಲ್ಮಷೇ ಮಗ್ನೋಽಕೀರ್ತಿಂ ಪಾಪಂ ಚ ವಿಂದತಿ ॥೨೮॥

ಅನೇಕದುಷ್ಕರ್ಮಗಳನ್ನು ಮಾಡಿ ಅನಂತರ ಶಾಶ್ವತವಾಗಿ ನರಕದಲ್ಲಿ ವಾಸ ಮಾಡುತ್ತಾನೆ. ಪ್ರಜೆಗಳ ದೋಷದಲ್ಲಿ ಮುಳುಗಿ ಹೋಗಿ ಅಕೀರ್ತಿಯನ್ನೂ ಮತ್ತು ಪಾಪವನ್ನೂ ಸಂಪಾದಿಸುತ್ತಾನೆ.

ದಂಡನೀತಿಂ ಪುರಸ್ಕೃತ್ಯ ಕ್ಷತ್ರಿಯೇಣ ವಿಜಾನತಾ।
ಲಿಪ್ಸಿತವ್ಯಮಲಬ್ಧಂ ಚ ಲಬ್ಧಂ ರಕ್ಷ್ಯಂ ಚ ಭಾರತ ॥೨೯॥

ಎಲೈ ಭಾರತನೇ! ವಿವೇಕಿಯಾದ ಕ್ಷತ್ರಿಯನಾದವನು ದಂಡನೀತಿಯನ್ನು ಪುರಸ್ಕರಿಸಿ ಪಡೆಯದಿದ್ದುದನ್ನು ಪಡೆಯಬೇಕು ಮತ್ತು ಪಡೆದುದನ್ನು ರಕ್ಷಿಸಬೇಕು.

ಲೋಕಸ್ಯ ಸೀಮಂತಕರೀ ಮರ್ಯಾದಾ ಲೋಕಭಾವನೀ।
ಸಮ್ಯಙ್ನೀತಾ ದಂಡನೀತಿರ್ಯಥಾ ಮಾತಾ ಯಥಾ ಪಿತಾ ॥೩೦॥

ಪ್ರಜೆಗಳಿಗೆ ಎಲ್ಲೆಯನ್ನು ಗುರುತಿಸುವ, ಲೋಕವನ್ನು ಶುದ್ಧಗೊಳಿಸುವ, ಚೆನ್ನಾಗಿ ಪ್ರಯೋಗಿಸಲ್ಪಟ್ಟ ದಂಡನೀತಿಯು ತಾಯಿಯಿದ್ದಂತೆ ಮತ್ತು ತಂದೆಯಿದ್ದಂತೆ.

ಯಸ್ಯಾಂ ಭವಂತಿ ಭೂತಾನಿ ತದ್ ವಿದ್ಧಿ ಭರತರ್ಷಭ।
ಏಷ ಏವ ಪರೋ ಧರ್ಮೋ ಯದ್ ರಾಜಾ ದಂಡನೀತಿಮಾನ್ ॥೩೧॥

ಎಲೈ ಭರತರ್ಷಭನೇ! ಅಂತಹ ದಂಡನೀತಿಯ ಪ್ರಯೋಗವಿದ್ದಾಗ ಪ್ರಜೆಗಳು ವೈಭವವನ್ನು ಪಡೆಯುತ್ತಾರೆಂದು ತಿಳಿ. ರಾಜನಿಗೆ ದಂಡನೀತಿಯನ್ನು ಅನುಸರಿಸುವುದೇ ಶ್ರೇಷ್ಠವಾದ ಧರ್ಮ.

ತಸ್ಮಾತ್ ಕೌರವ್ಯ ಧರ್ಮೇಣ ಪ್ರಜಾಃ ಪಾಲಯ ನೀತಿಮಾನ್।
ಏವಂವೃತ್ತಃ ಪ್ರಜಾ ರಕ್ಷನ್ ಸ್ವರ್ಗಂ ಜೇಷ್ಯಸಿ ದುರ್ಜಯಮ್ ॥೩೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕಸಪ್ತತಿತಮೋऽಧ್ಯಾಯಃ ॥೭೧॥

ಎಲೈ ಕೌರವ್ಯನೇ! ಆದ್ದರಿಂದ ರಾಜನೀತಿಯನ್ನು ಅನುಷ್ಠಾನ ಮಾಡುವವನಾಗಿ ಪ್ರಜೆಗಳನ್ನು ಧರ್ಮದಿಂದ ಪಾಲಿಸು. ಇಂತಹ ನಡತೆಯಿಂದ ಪ್ರಜೆಗಳನ್ನು ರಕ್ಷಿಸುವ ನೀನು ದುರ್ಜಯವಾದ ಸ್ವರ್ಗವನ್ನು ಜಯಿಸುವಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭೧ನೆಯ ಅಧ್ಯಾಯವು ಮುಗಿಯಿತು.

—0—

೭೨. ಎಪ್ಪತ್ತೆರಡನೆಯ ಅಧ್ಯಾಯ

ರಾಜನಲ್ಲಿರಬೇಕಾದ ಗುಣಗಳು

ಯುಧಿಷ್ಠಿರಃ

ಕೇನ ವೃತ್ತೇನ ವೃತ್ತಜ್ಞ ವರ್ತಮಾನೋ ಮಹೀಪತಿಃ।
ಸುಖೇನಾರ್ಥಾನ್ ಸುಖೋದರ್ಕಾನಿಹ ಚ ಪ್ರೇತ್ಯ ಚಾಪ್ನುಯಾತ್ ॥೧॥

ಯುಧಿಷ್ಠಿರ – ಎಲೈ ನಡತೆಯನ್ನು ತಿಳಿದವನೇ! ಯಾವ ನಡತೆಯನ್ನು ಹೊಂದಿದ ರಾಜನು ಅನಾಯಾಸವಾಗಿ ಈ ಲೋಕದಲ್ಲಿ ಸುಖಫಲವನ್ನು ಕೊಡುವ ಅರ್ಥಗಳನ್ನೂ ಮತ್ತು ಪರಲೋಕದಲ್ಲಿ ಸುಖವನ್ನೂ ಹೊಂದಿಯಾನು?

ಭೀಷ್ಮಃ

ಇಯಂ ಗುಣಾನಾಂ ಷಟ್‌ತ್ರಿಂಶೀ ಷಟ್‌ತ್ರಿಂಶದ್ ಗುಣಸಂಯುತಾ।
ಯಾನ್ ಗುಣಾಂಸ್ತು ಗುಣೋಪೇತಃ ಕುರ್ವನ್ ಗುಣಮವಾಪ್ನುಯಾತ್॥೨॥

ಭೀಷ್ಮರು – ಇವು ಮೂವತ್ತಾರು ಶ್ರೇಷ್ಠವಾದ ಗುಣಗಳು. ಈ ಗುಣಗಳಿಂದ ವಿಶಿಷ್ಟನಾಗಿ ರಾಜನು ಕಾರ್ಯವನ್ನು ಮಾಡಿದರೆ ಒಳ್ಳೆಯ ಫಲವನ್ನು ಹೊಂದಿಯಾನು!

ಚರೇದ್ ಧರ್ಮಾನಕಟುಕೋ ಮುಂಚೇತ್ ಸ್ನೇಹಂ ನ ನಾಸ್ತಿಕಃ।
ಅನೃಶಂಸಶ್ಚರೇದರ್ಥಂ ಚರೇತ್ ಕಾಮಮನುದ್ಧತಃ ॥೩॥

ಉಗ್ರವಾಗಿ ಮಾತನ್ನಾಡದೇ ಧರ್ಮವನ್ನು ಆಚರಿಸಬೇಕು. ಸ್ನೇಹವನ್ನು ಹರಿಯಲು ಬಿಡಬೇಕು. (ಸ್ನೇಹಶೀಲನಾಗಿರಬೇಕು). ನಾಸ್ತಿಕನಾಗಿರಬಾರದು. ಕ್ರೂರಿಯಾಗದೇ ಅರ್ಥವನ್ನು ಸಂಪಾದಿಸಬೇಕು. ಅಹಂಕಾರ ಪಡದೇ ಕಾಮವನ್ನು ಭೋಗಿಸಬೇಕು.

ಪ್ರಿಯಂ ಬ್ರೂಯಾದಕೃಪಣಃ ಶೂರಃ ಸ್ಯಾದವಿಕತ್ಥನಃ।
ದಾತಾ ನಾಪಾತ್ರವರ್ಷೀ ಸ್ಯಾತ್ ಪ್ರಗಲ್ಭಃ ಸ್ಯಾದನಿಷ್ಠುರಃ ॥೪॥

ಲೋಭಿಯಾಗದೇ ಪ್ರಿಯವಾಗಿ ಮಾತನಾಡಬೇಕು. ಶೂರನಾಗಿ ತನ್ನನ್ನು ತಾನು ಹೊಗಳಿಕೊಳ್ಳಬಾರದು. ಅಪಾತ್ರರಿಗೆ ದಾನಮಾಡದೇ ದಾನಿಯಾಗಬೇಕು. ನಿಷ್ಠುರನಾಗಿರದೇ ವಿಚಕ್ಷಣನಾಗಿರಬೇಕು.

ಸಂದಧೀತ ನ ಚಾನಾರ್ಯೈರ್ವಿಗೃಹ್ಣೀಯಾನ್ನ ಬಂಧುಭಿಃ।
ನಾನಾಪ್ತೈಃ ಕಾರಯೇಚ್ಚಾರಂ ಕುರ್ಯಾತ್ ಕಾರ್ಯಮಪೀಡಯಾ ॥೫॥

ದುಷ್ಟರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳಬಾರದು. ಬಂಧುಗಳ ಜೊತೆ ವಿರೋಧವನ್ನು ಮಾಡಿಕೊಳ್ಳಬಾರದು. ಆಪ್ತರಲ್ಲದವರಿಂದ ಯಾವ ಕಾರ್ಯವನ್ನೂ ಮಾಡಿಸಿಕೊಳ್ಳಬಾರದು. ಚಾರರಿಗೆ ಪೀಡೆಯುಂಟಾಗದಂತೆ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು.

ಅರ್ಥಾನ್ ಬ್ರೂಯಾನ್ನ ಚಾರೇಷು ಗುಣಾನ್ ಬ್ರೂಯಾನ್ನ ಚಾತ್ಮನಃ।
ಆದದ್ಯಾನ್ನ ಚ ಸಾಧುಭ್ಯೋ ನಾಸತ್ಪುರುಷಮಾಶ್ರಯೇತ್ ॥೬॥

ಚಾರರಿಗೆ ತನ್ನ ಅಭಿಪ್ರಾಯಗಳನ್ನು ತಿಳಿಸಬಾರದು. ತನ್ನ ಗುಣಗಳನ್ನು ಹೇಳಿಕೊಳ್ಳಬಾರದು. ಸಜ್ಜನರಿಂದ ವಿತ್ತಾದಿಗಳನ್ನು ಸ್ವೀಕರಿಸಬಾರದು. ಅಸಜ್ಜನರನ್ನು ಆಶ್ರಯಿಸಬಾರದು.

ನಾಪರೀಕ್ಷ್ಯ ನಯೇದ್ ದಂಡಂ ನ ಚ ಮಂತ್ರಂ ಪ್ರಕಾಶಯೇತ್।
ವಿಸೃಜೇನ್ನಚ ಲುಬ್ಧೇಭ್ಯೋ ವಿಶ್ವಸೇನ್ನಾಪಕಾರಿಷು ॥೭॥

ಪರೀಕ್ಷೆಯನ್ನು ಮಾಡದೇ ಶಿಕ್ಷೆಯನ್ನು ವಿಧಿಸಬಾರದು. ಮಂತ್ರಾಲೋಚನೆಯನ್ನು ಬಹಿರಂಗಪಡಿಸಬಾರದು. ಲೋಭಿಗಳಿಗೆ ಧನವನ್ನು ಕೊಡಬಾರದು. ಅಪಕಾರವನ್ನು ಮಾಡಿದವರನ್ನು ನಂಬಬಾರದು.

ಅನೀರ್ಷುರ್ಗುಪ್ತದಾರಃ ಸ್ಯಾಚ್ಛೋಕ್ಷಃ ಸ್ಯಾದಘೃಣೀ ನೃಪಃ।
ಸ್ತ್ರಿಯಂ ಸೇವೇತ ನಾತ್ಯರ್ಥಂ ಮೃಷ್ಟಂ ಭುಂಜೀತ ನಾಹಿತಮ್ ॥೮॥

ರಾಜನು ಅಸೂಯಾರಹಿತನೂ, ತನ್ನ ಪತ್ನಿಯನ್ನು ರಕ್ಷಿಸುವವನೂ, ದಕ್ಷನೂ

೭೨. ಎಪ್ಪತ್ತೆರಡನೆಯ ಅಧ್ಯಾಯ

ರಾಜನಲ್ಲಿರಬೇಕಾದ ಗುಣಗಳು

ಯುಧಿಷ್ಠಿರಃ

ಕೇನ ವೃತ್ತೇನ ವೃತ್ತಜ್ಞ ವರ್ತಮಾನೋ ಮಹೀಪತಿಃ।
ಸುಖೇನಾರ್ಥಾನ್ ಸುಖೋದರ್ಕಾನಿಹ ಚ ಪ್ರೇತ್ಯ ಚಾಪ್ನುಯಾತ್ ॥೧॥

ಯುಧಿಷ್ಠಿರ – ಎಲೈ ನಡತೆಯನ್ನು ತಿಳಿದವನೇ! ಯಾವ ನಡತೆಯನ್ನು ಹೊಂದಿದ ರಾಜನು ಅನಾಯಾಸವಾಗಿ ಈ ಲೋಕದಲ್ಲಿ ಸುಖಫಲವನ್ನು ಕೊಡುವ ಅರ್ಥಗಳನ್ನೂ ಮತ್ತು ಪರಲೋಕದಲ್ಲಿ ಸುಖವನ್ನೂ ಹೊಂದಿಯಾನು?

ಭೀಷ್ಮಃ

ಇಯಂ ಗುಣಾನಾಂ ಷಟ್‌ತ್ರಿಂಶೀ ಷಟ್‌ತ್ರಿಂಶದ್ ಗುಣಸಂಯುತಾ।
ಯಾನ್ ಗುಣಾಂಸ್ತು ಗುಣೋಪೇತಃ ಕುರ್ವನ್ ಗುಣಮವಾಪ್ನುಯಾತ್॥೨॥

ಭೀಷ್ಮರು – ಇವು ಮೂವತ್ತಾರು ಶ್ರೇಷ್ಠವಾದ ಗುಣಗಳು. ಈ ಗುಣಗಳಿಂದ ವಿಶಿಷ್ಟನಾಗಿ ರಾಜನು ಕಾರ್ಯವನ್ನು ಮಾಡಿದರೆ ಒಳ್ಳೆಯ ಫಲವನ್ನು ಹೊಂದಿಯಾನು!

ಚರೇದ್ ಧರ್ಮಾನಕಟುಕೋ ಮುಂಚೇತ್ ಸ್ನೇಹಂ ನ ನಾಸ್ತಿಕಃ।
ಅನೃಶಂಸಶ್ಚರೇದರ್ಥಂ ಚರೇತ್ ಕಾಮಮನುದ್ಧತಃ ॥೩॥

ಉಗ್ರವಾಗಿ ಮಾತನ್ನಾಡದೇ ಧರ್ಮವನ್ನು ಆಚರಿಸಬೇಕು. ಸ್ನೇಹವನ್ನು ಹರಿಯಲು ಬಿಡಬೇಕು. (ಸ್ನೇಹಶೀಲನಾಗಿರಬೇಕು). ನಾಸ್ತಿಕನಾಗಿರಬಾರದು. ಕ್ರೂರಿಯಾಗದೇ ಅರ್ಥವನ್ನು ಸಂಪಾದಿಸಬೇಕು. ಅಹಂಕಾರ ಪಡದೇ ಕಾಮವನ್ನು ಭೋಗಿಸಬೇಕು.

ಪ್ರಿಯಂ ಬ್ರೂಯಾದಕೃಪಣಃ ಶೂರಃ ಸ್ಯಾದವಿಕತ್ಥನಃ।
ದಾತಾ ನಾಪಾತ್ರವರ್ಷೀ ಸ್ಯಾತ್ ಪ್ರಗಲ್ಭಃ ಸ್ಯಾದನಿಷ್ಠುರಃ ॥೪॥

ಲೋಭಿಯಾಗದೇ ಪ್ರಿಯವಾಗಿ ಮಾತನಾಡಬೇಕು. ಶೂರನಾಗಿ ತನ್ನನ್ನು ತಾನು ಹೊಗಳಿಕೊಳ್ಳಬಾರದು. ಅಪಾತ್ರರಿಗೆ ದಾನಮಾಡದೇ ದಾನಿಯಾಗಬೇಕು. ನಿಷ್ಠುರನಾಗಿರದೇ ವಿಚಕ್ಷಣನಾಗಿರಬೇಕು.

ಸಂದಧೀತ ನ ಚಾನಾರ್ಯೈರ್ವಿಗೃಹ್ಣೀಯಾನ್ನ ಬಂಧುಭಿಃ।
ನಾನಾಪ್ತೈಃ ಕಾರಯೇಚ್ಚಾರಂ ಕುರ್ಯಾತ್ ಕಾರ್ಯಮಪೀಡಯಾ ॥೫॥

ದುಷ್ಟರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳಬಾರದು. ಬಂಧುಗಳ ಜೊತೆ ವಿರೋಧವನ್ನು ಮಾಡಿಕೊಳ್ಳಬಾರದು. ಆಪ್ತರಲ್ಲದವರಿಂದ ಯಾವ ಕಾರ್ಯವನ್ನೂ ಮಾಡಿಸಿಕೊಳ್ಳಬಾರದು. ಚಾರರಿಗೆ ಪೀಡೆಯುಂಟಾಗದಂತೆ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು.

ಅರ್ಥಾನ್ ಬ್ರೂಯಾನ್ನ ಚಾರೇಷು ಗುಣಾನ್ ಬ್ರೂಯಾನ್ನ ಚಾತ್ಮನಃ।
ಆದದ್ಯಾನ್ನ ಚ ಸಾಧುಭ್ಯೋ ನಾಸತ್ಪುರುಷಮಾಶ್ರಯೇತ್ ॥೬॥

ಚಾರರಿಗೆ ತನ್ನ ಅಭಿಪ್ರಾಯಗಳನ್ನು ತಿಳಿಸಬಾರದು. ತನ್ನ ಗುಣಗಳನ್ನು ಹೇಳಿಕೊಳ್ಳಬಾರದು. ಸಜ್ಜನರಿಂದ ವಿತ್ತಾದಿಗಳನ್ನು ಸ್ವೀಕರಿಸಬಾರದು. ಅಸಜ್ಜನರನ್ನು ಆಶ್ರಯಿಸಬಾರದು.

ನಾಪರೀಕ್ಷ್ಯ ನಯೇದ್ ದಂಡಂ ನ ಚ ಮಂತ್ರಂ ಪ್ರಕಾಶಯೇತ್।
ವಿಸೃಜೇನ್ನಚ ಲುಬ್ಧೇಭ್ಯೋ ವಿಶ್ವಸೇನ್ನಾಪಕಾರಿಷು ॥೭॥

ಪರೀಕ್ಷೆಯನ್ನು ಮಾಡದೇ ಶಿಕ್ಷೆಯನ್ನು ವಿಧಿಸಬಾರದು. ಮಂತ್ರಾಲೋಚನೆಯನ್ನು ಬಹಿರಂಗಪಡಿಸಬಾರದು. ಲೋಭಿಗಳಿಗೆ ಧನವನ್ನು ಕೊಡಬಾರದು. ಅಪಕಾರವನ್ನು ಮಾಡಿದವರನ್ನು ನಂಬಬಾರದು.

ಅನೀರ್ಷುರ್ಗುಪ್ತದಾರಃ ಸ್ಯಾಚ್ಛೋಚಕ್ಷಃ ಸ್ಯಾದಘೃಣೇ ನೃಪಃ।
ಸ್ತ್ರಿಯಂ ಸೇವೇತ ನಾತ್ಯರ್ಥಂ ಮೃಷ್ಟಂ ಭುಂಜೀತ ನಾಹಿತಮ್ ॥೮॥

ರಾಜನು ಅಸೂಯಾರಹಿತನೂ, ತನ್ನ ಪತ್ನಿಯನ್ನು ರಕ್ಷಿಸುವವನೂ, ದಕ್ಷನೂ

ಮತ್ತು ಅನ್ಯಾಯರೂಪವಾದ ದಯೆಯನ್ನು ಹೊಂದದವನೂ ಆಗಿರಬೇಕು. ಅತಿಯಾಗಿ ಸ್ತ್ರೀಲೋಲುಪನಾಗಿರಬಾರದು. ಮೃಷ್ಟಾನ್ನವನ್ನು ಭುಂಜಿಸಬೇಕು. ಅಹಿತವಾದುದನ್ನು ಭುಂಜಿಸಬಾರದು.

ಅಸ್ತಬ್ಧಃ ಪೂಜಯೇನ್ಮಾನ್ಯಾನ್ ಗುರೂನ್ ಸೇವೇದಮಾಯಯಾ।
ಅರ್ಚೇದ್ ದೇವಾನ್ನ ದಂಭೇನ ಶ್ರಿಯಮಿಚ್ಛೇದಕುತ್ಸಿತಾಮ್ ॥೯॥

ಅಹಂಕಾರವಿಲ್ಲದೇ ಮಾನ್ಯರನ್ನು ಪೂಜಿಸಬೇಕು. ಕಪಟವಿಲ್ಲದೇ ಗುರುಗಳ ಸೇವೆಯನ್ನು ಮಾಡಬೇಕು. ದಂಭತನವನ್ನು ಬಿಟ್ಟು ದೇವತೆಗಳನ್ನು ಅರ್ಚಿಸಬೇಕು. ಕೆಟ್ಟ ಸಂಪತ್ತನ್ನು ಅಪೇಕ್ಷಿಸಬಾರದು.

ಸೇವೇತ ಪ್ರಣಯಂ ಹಿತ್ವಾ ದಕ್ಷಃ ಸ್ಯಾನ್ನ ತ್ವಕಾಲವಿತ್।
ಸಾಂತ್ವಯೇನ್ನಚ ಭೋಗಾರ್ಥಮನುಗೃಹ್ಣನ್ನ ಚಾಕ್ಷಿಪೇತ್ ॥೧೦॥

ಪಕ್ಷಪಾತವನ್ನು ಬಿಟ್ಟು ರಾಜನೀತಿಯನ್ನು ಅನುಷ್ಠಾನ ಮಾಡಬೇಕು. ದಕ್ಷತೆಯಿಂದ ಕೂಡಿರಬೇಕು. ಕಾಲಜ್ಞಾನವನ್ನು ಹೊಂದಿರಬೇಕು. ತನ್ನ ಭೋಗಾರ್ಥವಾಗಿ ಸಮಾಧಾನದ ಮಾತುಗಳನ್ನಾಡಬಾರದು. ಇನ್ನೊಬ್ಬರಿಗೆ ಅನುಗ್ರಹವನ್ನು ಮಾಡುತ್ತಾ ನಿಂದಿಸಬಾರದು. (ನಿಂದಿಸುತ್ತಾ ಅನುಗ್ರಹವನ್ನು ಮಾಡಬಾರದು).

ಪ್ರಹರೇನ್ನ ತ್ವವಿಜ್ಞಾಯ ಹತ್ವಾ ಶತ್ರೂನ್ನ ಶೇಷಯೇತ್।
ಕ್ರೋಧಂ ಕುರ್ಯಾನ್ನ ಚಾಕಸ್ಮಾನ್ಮೃದುಃ ಸ್ಯಾನ್ನಾಪಕಾರಿಷು ॥೧೧॥

ಚೆನ್ನಾಗಿ ಪರೀಕ್ಷಿಸದೇ ಪ್ರಹಾರವನ್ನು ಮಾಡಬಾರದು. ಶತ್ರುಗಳ ಮೇಲೆ ಪ್ರಹಾರವನ್ನು ಮಾಡಿದರೆ ಯಾರನ್ನೂ ಉಳಿಸಬಾರದು. ನಿಷ್ಕಾರಣವಾಗಿ ಕೋಪವನ್ನು ಮಾಡಬಾರದು. ಅಪಕಾರವನ್ನು ಮಾಡಿದವರ ವಿಷಯದಲ್ಲಿ ಮೃದುವಾಗಿರಬಾರದು.

ಏವಂ ಚರಸ್ವ ರಾಜ್ಯಸ್ಥೋ ಯದಿ ಶ್ರೇಯ ಇಹೇಚ್ಛಸಿ।
ಅತೋಽನ್ಯಥಾ ನರಪತಿರ್ಭಯಮೃಚ್ಛತ್ಯನುತ್ತಮಮ್ ॥೧೨॥

ನೀನು ರಾಜ್ಯದಲ್ಲಿದ್ದವನಾಗಿ ಶ್ರೇಯಸ್ಸನ್ನು ಬಯಸುವವನಾದರೆ ಈ ರೀತಿ ನಡೆದುಕೋ. ಬೇರೆ ರೀತಿಯಲ್ಲಿ ನಡೆದುಕೊಂಡ ರಾಜನು ಉತ್ತಮವಾದ ಭಯವನ್ನು ಹೊಂದುತ್ತಾನೆ.

ಇತಿ ಸರ್ವಾನ್ ಗುಣಾನೇತಾನ್ ಯಥೋಕ್ತಾನ್ ಯೋಽನುವರ್ತತೇ।
ಅನುಭೂಯೇಹ ಭದ್ರಾಣಿ ಪ್ರೇತ್ಯ ಸ್ವರ್ಗೇ ಮಹೀಯತೇ ॥೧೩॥

ಹೀಗೆ ನಾನು ಹೇಳಿದ ಈ ಎಲ್ಲ ಗುಣಗಳನ್ನೂ ಯಾವನು ಅನುಸರಿಸುತ್ತಾನೆಯೋ ಅವನು ಈ ಲೋಕದಲ್ಲಿ ಶುಭವನ್ನು ಅನುಭವಿಸಿ, ಮರಣವನ್ನು ಹೊಂದಿ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ವೈಶಂಪಾಯನಃ

ಇದಂ ವಚಃ ಶಾಂತನವಸ್ಯ ಶುಶ್ರುವಾನ್
ಯುಧಿಷ್ಠಿರಃ ಪಾಂಡವಮುಖ್ಯಸಂವೃತಃ।
ತದಾ ವವಂದೇ ಚ ಪಿತಾಮಹಂ ನೃಪೋ
ಯಥೋಕ್ತಮೇತಚ್ಚ ಚಕಾರ ಬುದ್ಧಿಮಾನ್ ॥೧೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಾಸಪ್ತತಿತಮೋಽಧ್ಯಾಯಃ ॥೭೨॥

ವೈಶಂಪಾಯನರು – ಹೀಗೆ ಶಂತನುಪುತ್ರರಾದ ಭೀಷ್ಮರ ವಚನಗಳನ್ನು ಪಾಂಡವಮುಖ್ಯರ ಜೊತೆಯಲ್ಲಿ ಯುಧಿಷ್ಠಿರನು ಕೇಳಿದನು. ಆಗ ಮೇಧಾವಿಯಾದ ರಾಜನು ಪಿತಾಮಹರಾದ ಭೀಷ್ಮರಿಗೆ ನಮಸ್ಕರಿಸಿ ಅವರು ಹೇಳಿದಂತೆಯೇ ಮಾಡಿದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭೨ನೆಯ ಅಧ್ಯಾಯವು ಮುಗಿಯಿತು

—0—

೭೩. ಎಪ್ಪತ್ತಮೂರನೆಯ ಅಧ್ಯಾಯ

ರಾಜನ ಕರ್ತವ್ಯಗಳ ಕಥನ

ಯುಧಿಷ್ಠಿರಃ

ಕಥಂ ರಾಜಾ ಪ್ರಜಾ ರಕ್ಷನ್ ನಾಧಿಬಂಧೇನ ಯುಜ್ಯತೇ।
ಧರ್ಮೇ ಚ ನಾಪರಾಧ್ನೋತಿ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ಪಿತಾಮಹನೇ! ಪ್ರಜೆಗಳನ್ನು ರಕ್ಷಿಸುವ ರಾಜನು ಹೇಗೆ ಮಹಾವ್ಯಥೆಯನ್ನು (ಚಿಂತೆಯನ್ನು) ಹೊಂದುವನಾಗುವುದಿಲ್ಲ ಮತ್ತು ಧರ್ಮದ ವಿಷಯದಲ್ಲೂ ಅಪರಾಧ ಮಾಡುವುದಿಲ್ಲ - ಎಂಬುದನ್ನು ನನಗೆ ಹೇಳು.

ಭೀಷ್ಮಃ

ಸಮಾಸೇನೈವ ತೇ ತಾತ ಧರ್ಮಾನ್ ವಕ್ಷ್ಯಾಮಿ ನಿಶ್ಚಿತಾನ್।
ವಿಸ್ತರೇಣ ಹಿ ಧರ್ಮಾಣಾಂ ನ ಜಾತ್ವಂತಮವಾಪ್ನುಯಾತ್ ॥೨॥

ಭೀಷ್ಮರು – ಪ್ರೀತಿಪಾತ್ರನೇ! ಅಂತಹ ನಿಶ್ಚಿತವಾದ ಧರ್ಮಗಳನ್ನು ಪ್ರಶ್ನೆ-ಮಾಡುವ ನಿನಗೆ ಸಂಕ್ಷೇಪವಾಗಿ ಹೇಳುವೆನು. ಧರ್ಮಗಳನ್ನು ವಿಸ್ತಾರವಾಗಿ ಹೇಳಿ-ದರೆ ಅದಕ್ಕೆ ಕೊನೆಯೇ ದೊರೆಯಲಾರದು.

ಧರ್ಮನಿಷ್ಠಾನ್ ಶ್ರುತವತೋ ವೇದವ್ರತಸಮಾಹಿತಾನ್।
ಅರ್ಚಿತಾನ್ ವಾಸಯೇಥಾಸ್ತ್ವಂ ಗೃಹೇ ಗುಣವತೋ ದ್ವಿಜಾನ್ ॥೩॥

ಧರ್ಮನಿಷ್ಠರೂ, ವಿದ್ಯಾಸಂಪನ್ನರೂ, ವೇದವ್ರತನಿಷ್ಠರೂ, ಮಾನ್ಯರೂ, ಗುಣ-ವಂತರೂ ಆದ ಬ್ರಾಹ್ಮಣರನ್ನು ನಿನ್ನ ಮನೆಯಲ್ಲಿ ವಾಸಮಾಡಿಸಿಕೋ.

ಪ್ರತ್ಯುತ್ಥಾಯೋಪಸಂಗೃಹ್ಯ ಚರಣಾವಭಿವಾದ್ಯ ಚ।
ಅಥ ಸರ್ವಾಣಿ ಕುರ್ವೀಥಾಃ ಕಾರ್ಯಾಣಿ ಸಪುರೋಹಿತಃ ॥೪॥

ಪ್ರಾತಃಕಾಲದಲ್ಲಿ ಎದ್ದು ಅವರ ಸಮೀಪಕ್ಕೆ ಹೋಗಿ ಅವರ ಚರಣಗಳಿಗೆ ನಮಸ್ಕರಿಸಿ ಅನಂತರ ಎಲ್ಲ ಕಾರ್ಯಗಳನ್ನೂ ಪುರೋಹಿತನ ಜೊತೆಯಲ್ಲಿ ಮಾಡು.

ಧರ್ಮಕಾರ್ಯಾಣಿ ನಿರ್ವರ್ತ್ಯ ಮಂಗಲಾನಿ ಪ್ರಯುಜ್ಯ ಚ।
ಬ್ರಾಹ್ಮಣಾನ್ ವಾಚಯೇಥಾಸ್ತ್ವಮರ್ಥಸಿದ್ಧಿಜಯಾಶಿಷಃ ॥೫॥

ಮಂಗಳವಾದ ಧರ್ಮಕಾರ್ಯಗಳನ್ನು ನೆರವೇರಿಸಿ, ಮಂಗಳಗಳನ್ನು ಎಸಗಿ, ಬ್ರಾಹ್ಮಣರಿಂದ ನಿನ್ನ ಅರ್ಥಸಿದ್ಧಿಯ ಮತ್ತು ಜಯದ ಆಶೀರ್ವಾದಗಳನ್ನು ಪಡೆಯುವವನಾಗು.

ಆರ್ಜವೇನ ಚ ಸಂಪನ್ನೋ ಧೃತ್ಯಾ ಬುದ್ಧ್ಯಾ ಚ ಭಾರತ।
ಅರ್ಥಾರ್ಥಂ ಪ್ರತಿಗೃಹ್ಣೀಯಾತ್ ಕಾಮಕ್ರೋಧೌ ಚ ವರ್ಜಯೇತ್ ॥೬॥

ಎಲೈ ಭಾರತನೇ! ಋಜುತನದಿಂದಲೂ ಧೈರ್ಯ ಮುತ್ತು ಬುದ್ಧಿಗಳಿಂದಲೂ ಕೂಡಿದವನಾಗಿ ಕಾಮಕ್ರೋಧಗಳನ್ನು ವರ್ಜಿಸಿ ಅರ್ಥಪ್ರಾಪ್ತಿಗಾಗಿ ಪ್ರಯತ್ನಪಡು.

ಕಾಮಕ್ರೋಧೌ ಪುರಸ್ಕೃತ್ಯ ಯೋಽರ್ಥಂ ರಾಜಾನುತಿಷ್ಠತಿ।
ನ ಸ ಧರ್ಮಂ ನ ಚಾಪ್ಯರ್ಥಂ ಪರಿಗೃಹ್ಣಾತಿ ಬಾಲಿಶಃ ॥೭॥

ಯಾವ ರಾಜನು ಕಾಮಕ್ರೋಧಗಳನ್ನು ಮುಂದೆ ಮಾಡಿಕೊಂಡು, ಅರ್ಥಾರ್ಥವಾಗಿ ಪ್ರಯತ್ನಪಡುತ್ತಾನೆಯೋ ಬಾಲಿಶನಾದ ಅವನು ಧರ್ಮವನ್ನಾಗಲೀ ಅರ್ಥವನ್ನಾಗಲೀ ಸಂಪಾದಿಸುವುದಿಲ್ಲ.

ಮಾ ಸ್ಮ ಲುಬ್ಧಾಂಶ್ಚ ಮೂರ್ಖಾಂಶ್ಚ ಕಾಮೇ ಚಾರ್ಥೇಷು ಯೂಯುಜಃ।
ಅಲುಬ್ಧಾನ್ ಬುದ್ಧಿಸಂಪನ್ನಾನ್ ಸರ್ವಕರ್ಮಸು ಯೋಜಯೇತ್ ॥೮॥

ಲೋಭಿಗಳನ್ನೂ ಮತ್ತು ಮೂರ್ಖರನ್ನೂ ಯಾವ ಕಾರ್ಯದಲ್ಲಿಯೂ ನಿಯೋಜಿಸಬೇಡ. ಎಲ್ಲ ಕಾರ್ಯಗಳಲ್ಲಿಯೂ ಲೋಭಿಗಳಲ್ಲದ ಮೇಧಾವಿಗಳನ್ನು ನಿಯೋಜಿಸು.

ಮೂಖೋ೯ ಹ್ಯಧಿಕೃತೋಽರ್ಥೇಷು ಕಾರ್ಯಾಣಾಮವಿಶಾರದಃ।
ಪ್ರಜಾಃ ಕ್ಲಿಶ್ನಾತ್ಯಯೋಗೇನ ಕಾಮದ್ವೇಷಸಮನ್ವಿತಃ ॥೯॥

ಕಾರ್ಯವನ್ನು ತಿಳಿಯದ ಮೂರ್ಖನನ್ನು ಅಧಿಕಾರದಲ್ಲಿ ನಿಯೋಜಿಸಿದರೆ ಕಾಮದ್ವೇಷಗಳಿಂದ ಕೂಡಿದ ಅವನು ಅನ್ಯಾಯದ ಮಾರ್ಗದಲ್ಲಿ ಪ್ರಜೆಗಳನ್ನು ಪೀಡಿಸುತ್ತಾನೆ.

ಬಲಿಷಷ್ಠೇನ ಶುಲ್ಕೇನ ದಂಡೇನಾಥಾಪರಾಧಿನಮ್।
ಶಸ್ತ್ರಭೀತೇನ ಲಿಪ್ಸೇಥಾ ವೇತನೇನ ಧನಾಗಮಮ್ ॥೧೦॥

ಅಪರಾಧವನ್ನು ಮಾಡಿದವನಿಗೆ ಅವನ ಆದಾಯದ ಆರನೆಯ ಒಂದು ಭಾಗವನ್ನು ದಂಡವಾಗಿ ತೆಗೆದುಕೊಂಡು, ಸೇವಕನು ಅಪರಾಧವನ್ನು ಮಾಡಿದರೆ ಶಸ್ತ್ರಭೀತನಾದ ಅವನ ವೇತನವನ್ನು ಹಿಡಿದು ಧನವನ್ನು ಸಂಪಾದಿಸಲು ಪ್ರಯತ್ನಿಸಬೇಕು.

ದಾಪಯಿತ್ವಾ ಕರಂ ಧರ್ಮ್ಯಂ ರಾಷ್ಟ್ರಂ ನಿತ್ಯಂ ಯಥಾವಿಧಿ।
ಅಶೇಷಾನ್ ಕಲ್ಪಯೇದ್ ರಾಜಾ ಯೋಗಕ್ಷೇಮಾನತಂದ್ರಿತಃ ॥೧೧॥

ರಾಷ್ಟ್ರಕ್ಕೆ ಸಲ್ಲಬೇಕಾದ ಧಾರ್ಮಿಕವಾದ ಕರ(ಕಂದಾಯ)ವನ್ನು ಶಾಸ್ತ್ರರೀತಿಯಿಂದ ಪ್ರಜೆಗಳು ಕೊಡುವಂತೆ ಮಾಡಿ ರಾಜನು ಯಾವ ಆಲಸ್ಯವೂ ಇಲ್ಲದೆ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು.

ಗೋಪಾಯಿತಾರಂ ದಾತಾರಂ ಧರ್ಮನಿತ್ಯಮತಂದ್ರಿತಮ್।
ಅಕಾಮದ್ವೇಷಸಂಯುಕ್ತಮನುರಜ್ಯಂತಿ ಮಾನವಾಃ ॥೧೨॥

ತಮ್ಮನ್ನು ರಕ್ಷಿಸುವ ಮತ್ತು ತಮಗೆ ಎಲ್ಲವನ್ನೂ ಆಲಸ್ಯವಿಲ್ಲದೇ ಕಲ್ಪಿಸಿಕೊಡುವ ಕಾಮದ್ವೇಷರಹಿತನಾದ ರಾಜನಲ್ಲಿ ಪ್ರಜೆಗಳು ಪ್ರೀತಿಯುಳ್ಳವರಾಗುತ್ತಾರೆ.

ಮಾ ಸ್ಮಾಧರ್ಮೇಣ ಲಾಭೇನ ಲಿಪ್ಸೇಥಾಸ್ತ್ವಂ ಧನಾಗಮಮ್।
ಧರ್ಮಾರ್ಥಾವಧ್ರುವೌ ತಸ್ಯ ಯೋಽಪಶಾಸ್ತ್ರಪರೋ ಭವೇತ್ ॥೧೩॥

ನೀನು ಅಧರ್ಮದಿಂದ ಧನವನ್ನು ಸಂಪಾದಿಸಲು ಎಂದೂ ಬಯಸಬೇಡ. ಶಾಸ್ತ್ರವಿರುದ್ಧವಾಗಿ ನಡೆದುಕೊಳ್ಳುವ ರಾಜನ ಧರ್ಮ ಮತ್ತು ಅರ್ಥಗಳು ಅನಿತ್ಯವಾದವುಗಳು.

ಅಪಶಾಸ್ತ್ರಪರೋ ರಾಜಾ ಸಂಚಯಾನ್ ನಾಧಿಗಚ್ಛತಿ।
ಅಸ್ಥಾನೇ ಚಾಸ್ಯ ತದ್ ವಿತ್ತಂ ಸರ್ವಮೇವ ವಿನಶ್ಯತಿ ॥೧೪॥

ಶಾಸ್ತ್ರವಿರುದ್ಧವಾಗಿ ನಡೆದುಕೊಳ್ಳುವ ರಾಜನು ಧನಸಂಚಯವನ್ನು ಹೊಂದುವುದಿಲ್ಲ. ಅಲ್ಲದೇ ಅವನು ಸಂಪಾದಿಸಿದ ಧನವೂ ಸಹ ಅಪಮಾರ್ಗದಲ್ಲಿ ನಾಶವನ್ನು ಹೊಂದುತ್ತದೆ.

ಅರ್ಥಮೂಲೋಽಪಹಿಂಸಾಂ ಚ ಕುರುತೇ ಸ್ವಯಮಾತ್ಮನಃ।
ಕರೈರಶಾಸ್ತ್ರದೃಷ್ಟೈರ್ಹಿ ಮೋಹಾತ್ ಸಂಪೀಡಯನ್ ಪ್ರಜಾಃ ॥೧೫॥

ಧನಸಂಪಾದನೆಯಲ್ಲಿಯೇ ಆಸಕ್ತನಾದ ರಾಜನು ಲೋಭಮೋಹಗಳಿಂದ ಪ್ರಜೆ-ಗಳನ್ನು ಅನ್ಯಾಯವಾದ ಕರಗಳನ್ನು ಹೇರಿ ಪೀಡಿಸಿ ತನ್ನ ಹಿಂಸೆಯನ್ನೇ(ನಾಶವನ್ನೇ) ತಂದುಕೊಳ್ಳುತ್ತಾನೆ.

ಊಧಶ್ಛಿಂದ್ಯಾದ್ಧಿ ಯೋ ಧೇನ್ವಾಃ ಕ್ಷೀರಾರ್ಥೀ ನ ಲಭೇತ್ ಪಯಃ।
ಏವಂ ರಾಷ್ಟ್ರಮಯೋಗೇನ ಪೀಡಿತಂ ನ ವಿವರ್ಧತೇ ॥೧೬॥

ಕ್ಷೀರಾರ್ಥಿಯಾದ ಯಾವನು ಹಸುವಿನ ಕೆಚ್ಚಲನ್ನೇ ಕತ್ತರಿಸಿದರೆ ಹಾಲನ್ನು ಪಡೆದಾನು? ಈ ರೀತಿಯಲ್ಲಿ ಅನುಪಾಯದಿಂದ ರಾಷ್ಟ್ರವನ್ನು ಪೀಡಿಸಿದರೆ ಆ ರಾಷ್ಟ್ರವು ವೃದ್ಧಿಯನ್ನು ಪಡೆಯುವುದಿಲ್ಲ.

ಯೋ ಹಿ ದೋಗ್ಧ್ರೀಮುಪಾಸ್ತೇ ತು ಸ ನಿತ್ಯಂ ಲಭತೇ ಪಯಃ।
ಏವಂ ರಾಷ್ಟ್ರಮುಪಾಯೇನ ಭುಂಜಾನೋ ಲಭತೇ ಫಲಮ್ ॥೧೭॥

ಯಾವನು ಹಾಲು ಕೊಡುವ ಹಸುವನ್ನು ಸೇವಿಸುತ್ತಾನೆಯೋ ಅವನು ನಿತ್ಯವೂ

ಹಾಲನ್ನು ಪಡೆಯುತ್ತಾನೆ. ಅದೇ ರೀತಿ ಉಪಾಯದಿಂದ ರಾಷ್ಟ್ರವನ್ನು ಭೋಗಿಸುವವನು ರಾಷ್ಟ್ರದ ಫಲವನ್ನು ಪಡೆಯುತ್ತಾನೆ.

ಅಥ ರಾಷ್ಟ್ರಮುಪಾಯೇನ ಭುಜ್ಯಮಾನಂ ಸುರಕ್ಷಿತಮ್ ।
ಜನಯತ್ಯತುಲಾಂ ನಿತ್ಯಂ ಕೋಶವೃದ್ಧಿಂ ಯುಧಿಷ್ಠಿರ ॥೧೮॥

ಆಗ ಶಾಸ್ತ್ರರೀತಿಯಿಂದ ಭೋಗಿಸಲ್ಪಡುವ, ತನ್ನನ್ನು ಸುರಕ್ಷಿತವಾಗಿ ಇಟ್ಟ ರಾಷ್ಟ್ರವು ಎಲೈ ಯುಧಿಷ್ಠಿರನೇ! ನಿತ್ಯವೂ ಆ ರಾಜನಿಗೆ ಅಸದೃಶವಾದ ಕೋಶವೃದ್ಧಿಯನ್ನು ಉಂಟು ಮಾಡುತ್ತದೆ.

ದೋಗ್ಧಿ ಧಾನ್ಯಂ ಹಿರಣ್ಯಂ ಚ ಪ್ರಜಾ ರಾಜ್ಞಿ ಸುರಕ್ಷಿತಾ ।
ನಿತ್ಯಂ ಸ್ವೇಭ್ಯಃ ಪರೇಭ್ಯಶ್ಚ ತೃಪ್ತಾ ಮಾತಾ ಯಥಾ ಪಯಃ ॥೧೯॥

ನಿತ್ಯವೂ ತನ್ನವರಿಂದಲೂ ಮತ್ತು ಪರರಿಂದಲೂ ತೃಪ್ತಳಾದ ತಾಯಿಯು ಶಿಶುವಿಗೆ ಹಾಲನ್ನು ಸುರಿಸಿದಂತೆ ರಾಜನಿಂದ ಸುರಕ್ಷಿತವಾದ ರಾಷ್ಟ್ರವು (ರಾಷ್ಟ್ರದ ಪ್ರಜೆಗಳು) ರಾಜನ ಮೇಲೆ ಧಾನ್ಯದ ಮತ್ತು ಹಿರಣ್ಯದ ಮಳೆಯನ್ನು ಸುರಿಸುತ್ತಾರೆ.

ಮಾಲಾಕಾರೋಪಮೋ ರಾಜನ್ ಭವ ಮಾಂಗಾರಿಕೋಪಮಃ ।
ಯಥಾ ಯುಕ್ತಶ್ಚಿರಂ ರಾಷ್ಟ್ರಂ ಭೋಕ್ತುಂ ಶಕ್ಯಸಿ ಪಾಲಯನ್ ॥೨೦॥

ಎಲೈ ರಾಜನೇ! ನೀನು ಪುಷ್ಪಮಾಲೆಯನ್ನು ಕಟ್ಟುವವನಿಗೆ ಸದೃಶನಾಗಿರು. ಇದ್ದಿಲನ್ನು ಮಾಡುವವನಿಗೆ ಸದೃಶನಾಗಿರಬೇಡ. ಹಾಗಿದ್ದರೆ ಮಾತ್ರ ರಾಜ್ಯವನ್ನು ರಕ್ಷಿಸುತ್ತಾ ಬಹುಕಾಲ ಶುಭವನ್ನು ಭೋಗಿಸಲು ಸಮರ್ಥನಾಗುವಿ.

ಪರಚಕ್ರಾಭಿಯಾನೇನ ಯದಿ ತೇ ಸ್ಯಾದ್ ಧನಕ್ಷಯಃ ।
ಅಥ ಸಾಮ್ನೈವ ಲಿಪ್ಸೇಥಾ ಧನಮಬ್ರಾಹ್ಮಣೇಷು ಯತ್ ॥೨೧॥

ಶತ್ರುಗಳ ಮೇಲೆ ದಂಡೆತ್ತಿ ಹೋಗುವುದರಿಂದ ಧನಕ್ಷಯವುಂಟಾಗುವುದೆಂಬ ಚಿಂತೆಯಿದ್ದರೆ ಒಳ್ಳೆಯ ಮಾತುಗಳಿಂದ (ಸಾಮೋಪಾಯದಿಂದ) ಬ್ರಾಹ್ಮಣರಲ್ಲದವರಿಂದ ಧನವನ್ನು ಪಡೆಯಲು ಪ್ರಯತ್ನಿಸು.

ಮಾ ಸ್ಮ ತೇ ಬ್ರಾಹ್ಮಣಂ ದೃಷ್ಟ್ವಾ ಧನಸ್ಥಂ ಪ್ರಚಲೇನ್ಮನಃ।
ಅಂತ್ಯಾಯಾಮಪ್ಯವಸ್ಥಾಯಾಂ ಕಿಮು ಸ್ಫೀತಸ್ಯ ಭಾರತ ॥೨೨॥

ಅಂತ್ಯಾವಸ್ಥೆಯಲ್ಲಿಯೂ (ದಾರಿದ್ರ್ಯಾವಸ್ಥೆಯಲ್ಲಿಯೂ) ಶ್ರೀಮಂತನಾದ ಬ್ರಾಹ್ಮಣನನ್ನು ನೋಡಿ ನಿನ್ನ ಮನಸ್ಸು ವಿಚಲಿತವಾಗದಿರಲಿ. ಎಲೈ ಭಾರತನೇ! ಇನ್ನು ಸಮೃದ್ಧನಾದ ರಾಜನ ಮನಸ್ಸು ವಿಚಲಿತವಾಗುವುದು ಹೇಗೆ?

ಧನಾನಿ ತೇಭ್ಯೋ ದದ್ಯಾಸ್ತ್ವಂ ಯಥಾಶಕ್ತಿ ಯಥಾರ್ಹತಃ।
ಸಾಂತ್ವಯನ್ ಪರಿರಕ್ಷಂಶ್ಚ ಸ್ವರ್ಗಮಾಪ್ಸ್ಯಸಿ ದುರ್ಜಯಮ್ ॥೨೩॥

ಅಂತಹ ಬ್ರಾಹ್ಮಣರಿಗೆ ಅವರ ಯೋಗ್ಯತೆಯನ್ನು ಮತ್ತು ಶಕ್ತಿಯನ್ನು ನೋಡಿ ಧನವನ್ನು ಕೊಡುವವನಾಗು. ಅವರನ್ನು ಸಮಾಧಾನ ಮಾಡುವವನಾಗಿ ಚೆನ್ನಾಗಿ ರಕ್ಷಣೆಯನ್ನು ಮಾಡಿದರೆ ನೀನು ದುರ್ಜಯವಾದ ಸ್ವರ್ಗವನ್ನು ಹೊಂದುವಿ.

ಏವಂ ಧರ್ಮೇಣ ವೃತ್ತೇನ ಪ್ರಜಾಸ್ತ್ವಂ ಪರಿಪಾಲಯನ್।
ಸ್ವಂತಂ ಪುಣ್ಯಂ ಯಶೋವಂತಂ ಪ್ರಾಪ್ಸ್ಯಸೇ ಕುರುನಂದನ ॥೨೪॥

ಎಲೈ ಕುರುನಂದನನೇ! ಈ ರೀತಿಯಲ್ಲಿ ನೀನು ಧರ್ಮದ ನಡತೆಯಿಂದ ಕೂಡಿದವನಾಗಿ ಪ್ರಜೆಗಳನ್ನು ಪಾಲಿಸುತ್ತಾ ಕೀರ್ತಿಯುತವಾದ ಸುಖೋದಕವಾದ ಪುಣ್ಯವನ್ನು ಸಂಪಾದಿಸುವಿ.

ಧರ್ಮೇಣ ವ್ಯವಹಾರೇಣ ಪ್ರಜಾಃ ಪಾಲಯ ಪಾಂಡವ।
ಯುಧಿಷ್ಠಿರ ತಥಾ ಯುಕ್ತೋ ನಾಧಿಬಂಧೇನ ಯೋಕ್ಷ್ಯಸೇ ॥೨೫॥

ಎಲೈ ಪಾಂಡವನೇ! ಧರ್ಮಯುಕ್ತವಾದ ವ್ಯವಹಾರದಿಂದ ಪ್ರಜೆಗಳನ್ನು ಪಾಲಿಸು. ಯುಧಿಷ್ಠಿರನೇ! ಹಾಗೆ ಮಾಡಿದರೆ ನೀನು ಚಿಂತೆಯ ಬಂಧನಕ್ಕೆ ಈಡಾಗುವುದಿಲ್ಲ.

ಏಷ ಏವ ಪರೋ ಧರ್ಮೋ ಯದ್ ರಾಜಾ ರಕ್ಷತೇ ಪ್ರಜಾಃ।
ಭೂತಾನಾಂ ಹಿ ಪರಂ ಧರ್ಮಂ ರಕ್ಷಣಂ ಚ ಪರಾ ದಯಾ ॥೨೬॥

ಪ್ರಜೆಗಳನ್ನು ರಕ್ಷಣೆ ಮಾಡುವುದೇ ರಾಜನ ಪರಮ ಧರ್ಮ. ಭೂತಗಳಿಗೆ (ಪ್ರಜೆಗಳಿಗೆ) ರಕ್ಷಣೆ ಮತ್ತು ದಯವೇ ಅಪೇಕ್ಷಿತವಾದ ಪರಮಧರ್ಮ.

ತಸ್ಮಾದೇವ ಪರಂ ಧರ್ಮಂ ಮನ್ಯತೇ ಧರ್ಮಕೋವಿದಾಃ।
ಯದ್ ರಾಜಾ ರಕ್ಷಣೇ ಯುಕ್ತೋ ಭೂತೇಷು ಕುರುತೇ ದಯಾಮ್ ॥೨೭॥

ಆದ್ದರಿಂದ ರಾಜನು ಪ್ರಜೆಗಳ ರಕ್ಷಣೆಯನ್ನು ಮಾಡಿ ಎಲ್ಲ ಭೂತಗಳಲ್ಲಿ ದಯೆಯನ್ನು ತೋರಿಸುವುದೇ ಪರಮಧರ್ಮವೆಂದು ಧರ್ಮಕೋವಿದರು ತಿಳಿಯುತ್ತಾರೆ.

ಯದಹ್ನಾ ಕುರುತೇ ಪಾಪಮರಕ್ಷನ್ ಭಯತಃ ಪ್ರಜಾಃ।
ರಾಜಾ ವರ್ಷಸಹಸ್ರೇಣ ತಸ್ಯಾಂತಮಧಿಗಚ್ಛತಿ ॥೨೮॥

ಪ್ರಜೆಗಳನ್ನು ಒಂದು ದಿನದಲ್ಲಿ ಭಯಗಳಿಂದ ರಕ್ಷಿಸದೇ ರಾಜನು ಏನು ಪಾಪವನ್ನು ಮಾಡುತ್ತಾನೆಯೋ ಅದರ ಫಲವನ್ನು ಸಹಸ್ರವರ್ಷಗಳವರೆಗೆ ಅನುಭವಿಸುತ್ತಾನೆ.

ಯದಹ್ನಾ ಕುರುತೇ ಪುಣ್ಯಂ ಪ್ರಜಾ ಧರ್ಮೇಣ ಪಾಲಯನ್।
ದಶ ವರ್ಷಸಹಸ್ರಾಣಿ ತಸ್ಯ ಭುಂಕ್ತೇ ಫಲಂ ದಿವಿ ॥೨೯॥

ಪ್ರಜೆಗಳನ್ನು ಒಂದು ದಿನ ರಕ್ಷಿಸುವ ರಾಜನು ಆ ಪುಣ್ಯದಿಂದ ಸ್ವರ್ಗದಲ್ಲಿ ಹತ್ತುಸಹಸ್ರವರ್ಷಗಳ ಕಾಲ ಅದರ ಶುಭಫಲವನ್ನು ಅನುಭವಿಸುತ್ತಾನೆ.

ಸ್ವಿಷ್ಟಃ ಸ್ವಧೀತಃ ಸುತಪಾ ಲೋಕಾನ್ ಜಯತಿ ಯಾವತಃ।
ಕ್ಷಣೇನ ತಾನವಾಪ್ನೋತಿ ಪ್ರಜಾ ಧರ್ಮೇಣ ಪಾಲಯನ್ ॥೩೦॥

ರಾಜನು ಪ್ರಜೆಗಳನ್ನು ಧರ್ಮದಿಂದ ಪಾಲಿಸಿದರೆ ಒಳ್ಳೆಯ ಯಾಗವನ್ನು ಮಾಡಿ, ಒಳ್ಳೆಯ ಅಧ್ಯಯನವನ್ನು ಮಾಡಿ, ಒಳ್ಳೆಯ ತಪಸ್ಸನ್ನು ಮಾಡಿದವನು ಎಷ್ಟು ಲೋಕಗಳನ್ನು ಜಯಿಸುತ್ತಾನೋ ಅಷ್ಟು ಲೋಕಗಳನ್ನು ರಾಜನು ಒಂದೇ ಕ್ಷಣದಲ್ಲಿ ಜಯಿಸುತ್ತಾನೆ.

ಏವಂಧರ್ಮಂ ಪ್ರಯತ್ನೇನ ಕೌಂತೇಯ ಪರಿಪಾಲಯನ್ ।
ಇಹ ಪುಣ್ಯಫಲಂ ಲಬ್ಧ್ವಾ ನಾಧಿಬಂಧೇನ ಯೋಕ್ಷ್ಯಸೇ ॥೩೧॥

ಎಲೈ ಕೌಂತೇಯನೇ! ಹೀಗೆ ಪ್ರಯತ್ನಪಟ್ಟು ಧರ್ಮವನ್ನು ಪಾಲಿಸುವವನು ಈ ಲೋಕದಲ್ಲಿ ಪುಣ್ಯಫಲವನ್ನು ಹೊಂದಿ ಚಿಂತೆಗಳಿಂದ ದೂರನಾಗುತ್ತಾನೆ. (ನೀನೂ ಸಹ ಹೀಗೆ ಮಾಡಿದರೆ ಚಿಂತೆಗಳಿಂದ ದೂರನಾಗುವಿ)

ಸ್ವರ್ಗಲೋಕೇ ಚ ಮಹತೀಂ ಶ್ರಿಯಂ ಪ್ರಾಪ್ಸ್ಯಸಿ ಪಾಂಡವ ।
ಅಸಂಭವಶ್ಚ ಧರ್ಮಾಣಾಮೀದೃಶಾನಾಮರಾಜಸು ।
ತಸ್ಮಾದ್ ರಾಜೈವ ನಾನ್ಯೋಽಸ್ತಿ ಯೋ ಮಹತ್ ಫಲಮಾಪ್ನುಯಾತ್॥೩೨॥

ಎಲೈ ಪಾಂಡವನೇ! ಸ್ವರ್ಗಲೋಕದಲ್ಲಿಯೂ ಕೂಡ ದೊಡ್ಡ ಸಂಪತ್ತನ್ನು ಪಡೆಯುವಿ. ಇಂತಹ ಧರ್ಮಾನುಷ್ಠಾನವು ರಾಜರಲ್ಲದವರಿಂದ ಮಾಡಲು ಅಸಾಧ್ಯ -ವಾದುದು. ಆದ್ದರಿಂದ ರಾಜನೇ ಮಹಾಫಲವನ್ನು ಪಡೆದಾನೆಯೇ ಹೊರತು ಇನ್ನೊಬ್ಬನು ಪಡೆಯಲಾರ.

ಸ ರಾಜ್ಯಮೃದ್ಧಿಮತ್ ಪ್ರಾಪ್ಯ ಧರ್ಮೇಣ ಪರಿಪಾಲಯನ್ ।
ಇಂದ್ರಂ ತರ್ಪಯ ಸೋಮೇನ ಕಾಮ್ಯೈಶ್ಚ ಸುಹೃದೋ ಜನಾನ್ ॥೩೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಿಸಪ್ತತಿತಮೋಽಧ್ಯಾಯಃ ॥೭೩॥

ಅಂತಹ ನೀನು ಸಂಪದ್ಯುಕ್ತವಾದ ರಾಜ್ಯವನ್ನು ಪಡೆದು, ಧರ್ಮದಿಂದ ಅದನ್ನು ಪರಿಪಾಲಿಸಿ, ಸೋಮರಸದಿಂದ ಇಂದ್ರನನ್ನೂ ಕಾಮ್ಯವಸ್ತುಗಳಿಂದ ಸುಹೃಜ್ಜನರನ್ನೂ ತೃಪ್ತಿಪಡಿಸು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭೩ನೆಯ ಅಧ್ಯಾಯವು ಮುಗಿಯಿತು.

—0—

೭೪. ಎಪ್ಪತ್ತನಾಲ್ಕನೆಯ ಅಧ್ಯಾಯ

ಬ್ರಾಹ್ಮಣನ ಶ್ರೇಷ್ಠತ್ವಕಥನ. ಐಲ-ವಾಯುಸಂವಾದ

ಯುಧಿಷ್ಠಿರಃ

ಕೀದೃಶೋ ಬ್ರಾಹ್ಮಣೋ ರಾಜ್ಞಾ ಕಾರ್ಯಾಕಾರ್ಯವಿಚಾರಣೇ।
ಕ್ಷಮಃ ಕರ್ತುಂ ಸಮರ್ಥೋ ವಾ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ! ರಾಜನು ಎಂತಹ ಬ್ರಾಹ್ಮಣನನ್ನು ಕಾರ್ಯಾ-ಕಾರ್ಯವಿಚಾರಣೆಯಲ್ಲಿ ಅಧಿಕೃತನನ್ನಾಗಿ ಮಾಡಲು ಶಕ್ತನಾಗುತ್ತಾನೆ ಎಂದು ನನಗೆ ಹೇಳು.

ಭೀಷ್ಮಃ

ಯ ಏವ ತು ಸತೋ ರಕ್ಷೇದಸತಶ್ಚ ನಿಬರ್ಹಯೇತ್।
ಸ ಏವ ರಾಜ್ಞಾ ಕರ್ತವ್ಯೋ ರಾಜನ್ ರಾಜಪುರೋಹಿತಃ ॥೨॥

ಭೀಷ್ಮರು – ಎಲೈ ರಾಜನೇ! ಯಾವನು ಸಜ್ಜನರನ್ನು ರಕ್ಷಿಸುತ್ತಾನೆಯೋ, ದುಷ್ಟರನ್ನು ವಿನಾಶಗೊಳಿಸುತ್ತಾನೆಯೋ ಅಂತಹವನನ್ನೇ ರಾಜನು ರಾಜಪುರೋಹಿತ -ನನ್ನಾಗಿ ಮಾಡಬೇಕು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಪುರೂರವಸ ಐಲಸ್ಯ ಸಂವಾದಂ ಮಾತರಿಶ್ವನಃ ॥೩॥

ಈ ವಿಷಯದಲ್ಲಿಯೂ ಸಹ ಇಲಾಪುತ್ರನಾದ ಪುರೂರವನ ಮತ್ತು ವಾಯು-ವಿನ ಸಂವಾದರೂಪವಾದ ಈ ಪ್ರಾಚೀನವಾದ ಇತಿಹಾಸವನ್ನು ಹೇಳುತ್ತಾರೆ.

ಐಲಃ

ಕುತಃಸ್ವಿದ್ ಬ್ರಾಹ್ಮಣೋ ಜಾತೋ ವರ್ಣಶ್ಚಾಪಿ ಕುತಸ್ತ್ರಯಃ।
ಕಸ್ಮಾಚ್ಚ ಭವತಿ ಶ್ರೇಯಾನೇತದ್ ವಾಯೋ ವಿಚಕ್ಷ್ವ ಮೇ ॥೪॥

ಐಲ – ಬ್ರಾಹ್ಮಣನು ಹೇಗೆ ಹುಟ್ಟಿದನು? ಉಳಿದ ಮೂರುವರ್ಣಗಳೂ ಹೇಗೆ ಹುಟ್ಟಿದವು? ವಾಯುವೇ! ಬ್ರಾಹ್ಮಣನು ಹೇಗೆ ಶ್ರೇಷ್ಠನಾಗುತ್ತಾನೆ ಎಂಬುದನ್ನು ನನಗೆ ಹೇಳು.

ವಾಯುಃ

ಬ್ರಹ್ಮಣೋ ಮುಖತಃ ಸೃಷ್ಟೋ ಬ್ರಾಹ್ಮಣೋ ರಾಜಸತ್ತಮ।
ಬಾಹುಭ್ಯಾಂ ಕ್ಷತ್ರಿಯಃ ಸೃಷ್ಟ ಊರುಭ್ಯಾಂ ವೈಶ್ಯ ಉಚ್ಯತೇ ॥೫॥

ಎಲೈ ರಾಜಶ್ರೇಷ್ಠನೇ! ಬ್ರಹ್ಮನ ಮುಖದಿಂದ ಬ್ರಾಹ್ಮಣನು ಜನಿಸಿದನು. ಬಾಹು-ಗಳಿಂದ ಕ್ಷತ್ರಿಯರು. ಮತ್ತು ಊರುಗಳಿಂದ ವೈಶ್ಯರು ಜನಿಸಿದರು ಎಂದು ಹೇಳ-ಲ್ಪಡುತ್ತದೆ.

ವರ್ಣಾನಾಂ ಪರಿಚರ್ಯಾರ್ಥಂ ತ್ರಯಾಣಾಂ ಪುರುಷರ್ಷಭ।
ವರ್ಣಶ್ಚತುರ್ಥಃ ಪಶ್ಚಾತ್ ತು ಪದ್ಭ್ಯಾಂ ಶೂದ್ರೋ ವಿನಿರ್ಮಿತಃ ॥೬॥

ಎಲೈ ಪುರುಷರ್ಷಭನೇ! ಈ ವರ್ಣಗಳ ಪರಿಚರ್ಯೆಗಾಗಿ ನಾಲ್ಕನೆಯ ವರ್ಣದವನಾದ ಶೂದ್ರನು ಅನಂತರ ಬ್ರಹ್ಮದೇವರ ಪಾದಗಳಿಂದ ಸೃಷ್ಟಿಸಲ್ಪಟ್ಟನು.

ಬ್ರಾಹ್ಮಣೋ ಜಾತಮಾತ್ರಸ್ತು ಪೃಥಿವೀಮಧ್ಯಜಾಯತ।
ಈಶ್ವರಃ ಸರ್ವಭೂತಾನಾಂ ಧರ್ಮಕೋಶಸ್ಯ ಗುಪ್ತಯೇ ॥೭॥

ಬ್ರಾಹ್ಮಣನು ಹುಟ್ಟಿದ ತತ್ಕ್ಷಣವೇ ಭೂಮಿಯಲ್ಲಿ ಶ್ರೇಷ್ಠನಾದನು. ಅವನು ಧರ್ಮದ ರಕ್ಷಣೆಯ ಸಲುವಾಗಿ ಎಲ್ಲ ಜೀವರಿಗೂ ಪ್ರಭುವಾದನು.

ಸರ್ವಸ್ವಂ ಬ್ರಾಹ್ಮಣಸ್ಯೇದಂ ಯತ್ ಕಿಂಚಿದಿಹ ದೃಶ್ಯತೇ।
ಧರ್ಮಯುಕ್ತಂ ಪ್ರಶಸ್ತಂ ಚ ಜಗತ್ಯಸ್ಮಿನ್ ನೃಪಾತ್ಮಜ ॥೮॥

ಎಲೈ ರಾಜಕುಮಾರನೇ! ಈ ಜಗತ್ತಿನಲ್ಲಿ ಧರ್ಮಯುಕ್ತವಾದ ಮತ್ತು ಪ್ರಶಸ್ತವಾದ ಯಾವ ಯಾವ ಸ್ವತ್ತುಗಳು ಕಂಡುಬರುತ್ತವೆಯೋ ಅವೆಲ್ಲವೂ ಬ್ರಾಹ್ಮಣನಿಗೇ ಸೇರಿದುದು.

ತತಃ ಪೃಥಿವ್ಯಾ ಗೋಪ್ತಾರಂ ಕ್ಷತ್ರಿಯಂ ದಂಡಧಾರಿಣಮ್ ।
ದ್ವಿತೀಯಂ ವರ್ಣಮಕರೋತ್ ಪ್ರಜಾನಾಮನುಗುಪ್ತಯೇ ॥೯॥

ಅನಂತರ ಭೂಮಿಯ ರಕ್ಷಕನಾಗಿ, ದಂಡಧಾರಿಯಾಗಿ ಪ್ರಜೆಗಳನ್ನು ರಕ್ಷಿಸಲು ಎರಡನೆಯ ಕ್ಷತ್ರಿಯವರ್ಣವು ಸೃಷ್ಟಿಸಲ್ಪಟ್ಟಿತು.

ವೈಶ್ಯಸ್ತು ಧನಧಾನ್ಯೇನ ತ್ರೀನ್ ವರ್ಣಾನ್ ಬಿಭೃಯಾದಿಮಾನ್ ।
ಶೂದ್ರೋ ಹ್ಯೇನಾನ್ ಪರಿಚರೇದಿತಿ ಬ್ರಹ್ಮಾನುಶಾಸನಮ್ ॥೧೦॥

ವೈಶ್ಯನು ಧನಧಾನ್ಯಗಳಿಂದ ಈ ಮೂರು ವರ್ಣಗಳನ್ನೂ ಪೋಷಿಸಬೇಕು. ಶೂದ್ರನು ಈ ಮೂರು ವರ್ಣಗಳನ್ನೂ ಪರಿಚರಿಸಬೇಕು ಎಂಬುದು ಬ್ರಹ್ಮದೇವರ ಶಾಸನ.

ಐಲಃ

ದ್ವಿಜಸ್ಯ ಕ್ಷತ್ರಬಂಧೋರ್ವಾ ಕಸ್ಯೇಯಂ ಪೃಥಿವೀ ಭವೇತ್ ।
ಧರ್ಮತಃ ಸಹ ವಿತ್ತೇನ ಸಮ್ಯಗ್ ವಾಯೋ ಪ್ರಚಕ್ಷ್ವ ಮೇ ॥೧೧॥

ಐಲ – ಎಲೈ ವಾಯುವೇ! ವಿತ್ತಸಹಿತವಾದ ಈ ಭೂಮಿಯು ಧರ್ಮದಿಂದ ಬ್ರಾಹ್ಮಣನಿಗೆ ಸೇರುತ್ತದೆಯೋ ಅಥವಾ ಕ್ಷತ್ರಿಯನಿಗೆ ಸೇರುತ್ತದೆಯೋ ಎಂಬುದನ್ನು ನನಗೆ ಸರಿಯಾಗಿ ಹೇಳು.

ವಾಯುಃ

ವಿಪ್ರಸ್ಯ ಸರ್ವಮೇವೈತದ್ ಯತ್ಕಿಂಚಿಜ್ಜಗತೀಗತಮ್ ।
ಜ್ಯೇಷ್ಠೇನಾಭಿಜನೇನೇಹ ತದ್ ಧರ್ಮಕುಶಲಾ ವಿದುಃ ॥೧೨॥

ವಾಯು – ಈ ಜಗತ್ತಿನಲ್ಲಿರುವ ಎಲ್ಲವೂ ಜ್ಯೇಷ್ಠಜನ್ಮವನ್ನು ಪಡೆದ ಬ್ರಾಹ್ಮಣನಿಗೇ ಸೇರಿದುದು ಎಂದು ಧರ್ಮಕುಶಲರು ತಿಳಿಯುತ್ತಾರೆ.

ಸ್ವಮೇವ ಬ್ರಾಹ್ಮಣೋ ಭುಂಕ್ತೇ ಸ್ವಂ ವಸ್ತೇ ಸ್ವಂ ದದಾತಿ ಚ।
ಗುರುರ್ಹಿ ಸರ್ವವರ್ಣಾನಾಂ ಜ್ಯೇಷ್ಠಃ ಶ್ರೇಷ್ಠಶ್ಚ ವೈ ದ್ವಿಜಃ ॥೧೩॥

ಬ್ರಾಹ್ಮಣನು ತನ್ನ ಸ್ವತ್ತನ್ನೇ ಭುಂಜಿಸುತ್ತಾನೆ. ತನ್ನ ಭೂಮಿಯಲ್ಲೇ ವಾಸ ಮಾಡುತ್ತಾನೆ. ತನ್ನ ಧನವನ್ನೇ ದಾನ ಮಾಡುತ್ತಾನೆ. ಏಕೆಂದರೆ ಬ್ರಾಹ್ಮಣನು ಎಲ್ಲ ವರ್ಣಗಳಿಗೂ ಗುರು ಮತ್ತು ವಯಸ್ಸಿನಿಂದ ಜ್ಯೇಷ್ಠನಾದವನು ಮತ್ತು ಗುಣಗಳಿಂದ ಶ್ರೇಷ್ಠನಾದವನು.

ಪತ್ಯಭಾವೇ ಯಥಾ ಸ್ತ್ರೀ ಹಿ ದೇವರಂ ಕುರುತೇ ಪತಿಮ್ ।
ಆನಂತರ್ಯಾತ್ ತಥಾ ಕ್ಷತ್ರಂ ಪೃಥಿವೀ ಕುರುತೇ ಪತಿಮ್ ॥೧೪॥

ಪತಿಯು ಇಲ್ಲದಿದ್ದರೆ ನಾರಿಯು ಹೇಗೆ ಆನಂತರದ ಮೈದುನನನ್ನು ಪತಿಯನ್ನಾಗಿ ಮಾಡಿಕೊಳ್ಳುತ್ತಾಳೆಯೋ ಅದರಂತೆ ಭೂಮಿಯು ಕ್ಷತ್ರಿಯನನ್ನು ಪತಿಯನ್ನಾಗಿ ಮಾಡಿಕೊಳ್ಳುತ್ತದೆ.

ಏಷ ತೇ ಪ್ರಥಮಃ ಕಲ್ಪ ಆಪದ್ಯನ್ಯೋ ಭವೇದತಃ।
ಯದಿ ಸ್ವರ್ಗೇ ಪರಂ ಸ್ಥಾನಂ ಧರ್ಮತಃ ಪರಿಮಾರ್ಗಸಿ ॥೧೫॥

ನೀನು ಧರ್ಮದಿಂದ ಸ್ವರ್ಗದಲ್ಲಿ ಶ್ರೇಷ್ಠಸ್ಥಾನವನ್ನು ಬಯಸುವುದಾದರೆ ಇದು ಶ್ರೇಷ್ಠವಾದ ಕಲ್ಪ. ಆಪತ್ತಿನಲ್ಲಿ ಇದಕ್ಕಿಂತ ಭಿನ್ನವಾದ ವಿಧಾನವಿದೆ.

ಯಃ ಕಶ್ಚಿದ್ ವಿಜಯೇದ್ ಭೂಮಿಂ ಬ್ರಾಹ್ಮಣಾಯ ನಿವೇದಯೇತ್ ।
ಶ್ರುತವೃತ್ತೋಪಪನ್ನಾಯ ಧರ್ಮಜ್ಞಾಯ ತಪಸ್ವಿನೇ ॥೧೬॥

(ಅದೇನೆಂದರೆ) ಯಾವನು ಭೂಮಿಯನ್ನು ಗೆದ್ದರೂ ಅದನ್ನು ಧರ್ಮಜ್ಞನೂ ತಪಸ್ವಿಯೂ ವಿದ್ಯಾಶೀಲತೆಯನ್ನು ಹೊಂದಿದವನೂ ಆದ ಬ್ರಾಹ್ಮಣನಿಗೆ ನಿವೇದಿಸಬೇಕು.

ಸ್ವಧರ್ಮಪರಿತೃಪ್ತಾಯ ಯೋ ನ ವಿತ್ತಪರೋ ಭವೇತ್ ।
ಯೋ ರಾಜಾನಂ ನಯೇದ್ ಬುದ್ಧ್ಯಾ ಸರ್ವತಃ ಪರಿಪೂರ್ಣಯಾ ॥೧೭॥

ಯಾವ ಬ್ರಾಹ್ಮಣನು ವಿತ್ತದ ಆಸೆಯನ್ನು ಹೊಂದಿರುವುದಿಲ್ಲವೋ, ತನ್ನ ಧರ್ಮಾಚರಣೆಯಿಂದ ತೃಪ್ತನಾಗಿರುತ್ತಾನೆಯೋ, ತನ್ನ ಪರಿಪೂರ್ಣವಾದ ಬುದ್ಧಿಯಿಂದ ರಾಜನನ್ನು ಸನ್ಮಾರ್ಗದಲ್ಲಿ ನಡೆಸುತ್ತಾನೆಯೋ (ಅಂತಹ ಬ್ರಾಹ್ಮಣನಿಗೆ ನಿವೇದಿಸಬೇಕು).

ಬ್ರಾಹ್ಮಣೋ ಹಿ ಕುಲೇ ಜಾತಃ ಕೃತಪ್ರಜ್ಞೋ ವಿನೀತವಾಕ್ ।
ಶ್ರೇಯೋ ನಯತಿ ರಾಜಾನಂ ಬ್ರುವಂಶ್ಚಿತ್ರಾಂ ಸರಸ್ವತೀಮ್ ॥೧೮॥

ಬ್ರಾಹ್ಮಣನಾದರೂ ಒಳ್ಳೆಯ ಕುಲದಲ್ಲಿ ಜನಿಸಿದವನಾಗಿ, ವಿವೇಕವನ್ನು ಹೊಂದಿ-ದವನಾಗಿ, ವಿನೀತವಾದ ವಾಕ್ಯವನ್ನು ಹೊಂದಿ, ವಿಚಿತ್ರವಾದ ಕಥೆಗಳನ್ನು ಹೇಳಿ ರಾಜನನ್ನು ಶ್ರೇಯಸ್ಸಿನ ಮಾರ್ಗದಲ್ಲಿ ನಡೆಸುತ್ತಾನೆ.

ರಾಜಾ ಚರತಿ ಯಂ ಧರ್ಮಂ ಬ್ರಾಹ್ಮಣೇನ ನಿದರ್ಶಿತಮ್ ।
ಶುಶ್ರೂಷುರನಹಂವಾದೀ ಕ್ಷತ್ರಧರ್ಮವ್ರತೇ ಸ್ಥಿತಃ ॥೧೯॥

ತಾವತಾ ಸ ಕೃತಪ್ರಜ್ಞಶ್ಚಿರಂ ಯಶಸಿ ತಿಷ್ಠತಿ ।
ತಸ್ಯ ಧರ್ಮಸ್ಯ ಸರ್ವಸ್ಯ ಭಾಗೀ ರಾಜಪುರೋಹಿತಃ ॥೨೦॥

ಕ್ಷತ್ರಿಯಧರ್ಮದಲ್ಲಿ ರತನಾದ ರಾಜನು ಬ್ರಾಹ್ಮಣನ ಮಾತನ್ನು ಕೇಳಿ ಅಹಂಕಾರರಹಿತನಾಗಿ ಬ್ರಾಹ್ಮಣನು ತೋರಿಸಿದಂತೆ ಧರ್ಮಾಚರಣೆಯನ್ನು ಮಾಡಿದರೆ ಅವನು ಆಪ್ತರಿಂದಲೇ ಕೃತಕೃತ್ಯನಾಗಿ ಶಾಶ್ವತವಾದ ಕೀರ್ತಿಯನ್ನು ಪಡೆಯುತ್ತಾನೆ. ರಾಜಪುರೋಹಿತನು ರಾಜನು ಆಚರಿಸಿದ ಎಲ್ಲ ಧರ್ಮಗಳ ಫಲದ ಒಂದು ಅಂಶಕ್ಕೆ ಭಾಗಿಯಾಗುತ್ತಾನೆ.

ಏವಮೇವ ಪ್ರಜಾಃ ಸರ್ವಾ ರಾಜಾನಮಭಿಸಂಶ್ರಿತಾಃ ।
ಬ್ರಾಹ್ಮಣಂ ಚ ಸುವಿದ್ವಾಂಸಃ ರಾಜಶಾಸ್ತ್ರವಿಪಶ್ಚಿತಮ್ ।
ಸಮ್ಯಗ್ವೃತ್ತಾಃ ಸ್ವಧರ್ಮಸ್ಥಾ ನ ಕುತಶ್ಚಿದ್ ಭಯಾನ್ವಿತಾಃ ॥೨೧॥

ಈ ರೀತಿಯಲ್ಲಿ ಎಲ್ಲ ಪ್ರಜೆಗಳೂ ರಾಜನನ್ನು ಆಶ್ರಯಿಸಿರುತ್ತಾರೆ. ಒಳ್ಳೆಯ

ನಡತೆಯುಳ್ಳ, ಸ್ವಧರ್ಮನಿಷ್ಠರಾದ, ನಿರ್ಭಯರಾದ ವಿದ್ವಾಂಸರಾದವರು ರಾಜ-ಶಾಸ್ತ್ರವನ್ನು ತಿಳಿದ ಬ್ರಾಹ್ಮಣನನ್ನು ಆಶ್ರಯಿಸಿರುತ್ತಾರೆ.

ರಾಷ್ಟ್ರೇ ಚರಂತಿ ಯಂ ಧರ್ಮಂ ರಾಜ್ಞಾ ಸಾಧ್ವಭಿರಕ್ಷಿತಾಃ।
ಚತುರ್ಥಂ ತಸ್ಯ ಧರ್ಮಸ್ಯ ರಾಜಾ ಭಾಗಂ ಸ ವಿಂದತಿ ॥೨೨॥

ರಾಜನಿಂದ ಚೆನ್ನಾಗಿ ರಕ್ಷಿಸಲ್ಪಟ್ಟ ಪ್ರಜೆಗಳು ರಾಷ್ಟ್ರದಲ್ಲಿ ಯಾವ ಧರ್ಮವನ್ನು ಆಚರಿಸುತ್ತಾರೆಯೋ ರಾಜನು ಆ ಧರ್ಮದ ಫಲದ ನಾಲ್ಕನೆಯ ಒಂದು ಭಾಗವನ್ನು ಪಡೆಯುತ್ತಾನೆ.

ದೇವಾ ಮನುಷ್ಯಾಃ ಪಿತರೋ ಗಂಧರ್ವೋರಗರಾಕ್ಷಸಾಃ।
ಯಜ್ಞಮೇವೋಪಜೀವಂತಿ ನಾಸ್ತಿ ಚೇಷ್ಟಮರಾಜಕೇ ॥೨೩॥

ದೇವತೆಗಳು, ಮನುಷ್ಯರು, ಪಿತೃಗಳು, ಗಂಧರ್ವೋರಗರಾಕ್ಷಸರು ಇವರು ಯಜ್ಞವನ್ನು ಉಪಜೀವಿಸುತ್ತಾರೆ. ರಾಜನಿಲ್ಲದ ದೇಶದಲ್ಲಿ ಯಜ್ಞಾದಿಗಳು ನಡೆಯುವುದಿಲ್ಲ.

ಇತೋ ದತ್ತೇನ ಜೀವಂತಿ ದೇವತಾಃ ಪಿತರಸ್ತಥಾ।
ರಾಜನ್ಯೇವಾಸ್ಯ ಧರ್ಮಸ್ಯ ಯೋಗಕ್ಷೇಮಃ ಪ್ರತಿಷ್ಠಿತಃ ॥೨೪॥

ಭೂಮಿಯಲ್ಲಿ ಕೊಟ್ಟ ಹವಿರಾದಿಗಳಿಂದ ದೇವತೆಗಳು ಮತ್ತು ಪಿತೃಗಳು ಜೀವಿಸುತ್ತಾರೆ. ಆದ್ದರಿಂದ ಈ ಧರ್ಮದ ಯೋಗಕ್ಷೇಮವು ರಾಜನನ್ನೇ ಆಶ್ರಯಿಸಿದೆ.

ಛಾಯಾಯಾಮಪ್ಸು ವಾಯೌ ಚ ಸುಖಮುಷ್ಣೇऽಧಿಗಚ್ಛತಿ।
ಅಗ್ನೌ ವಾಸಸಿ ಸೂರ್ಯೇ ಚ ಸುಖಂ ಶೀತೇऽಧಿಗಚ್ಛತಿ ॥೨೫॥

ಉಷ್ಣಕಾಲದಲ್ಲಿ ನೆರಳಿನಲ್ಲಿಯೂ, ನೀರಿನಲ್ಲಿಯೂ ಮತ್ತು ತಂಗಾಳಿಯಲ್ಲಿಯೂ ಸುಖವನ್ನು ಪಡೆಯುತ್ತಾರೆ. ಶೀತಕಾಲದಲ್ಲಿ ಅಗ್ನಿಯಿಂದಲೂ, ವಸ್ತ್ರದಿಂದಲೂ ಸೂರ್ಯನಿಂದಲೂ ಪ್ರಜೆಗಳು ಸುಖವನ್ನು ಪಡೆಯುತ್ತಾರೆ.

ಶಬ್ದೇ ಸ್ಪರ್ಶೇ ರಸೇ ರೂಪೇ ಗಂಧೇ ಚ ರಮತೇ ಮನಃ।
ತೇಷು ಭೋಗೇಷು ಸರ್ವೇಷು ನ ಭೀತೋ ಲಭತೇ ಸುಖಮ್ ॥೨೬॥

ಪ್ರಜೆಗಳ ಮನಸ್ಸು ಶಬ್ದ ಸ್ಪರ್ಶ ರೂಪ ರಸ ಗಂಧಗಳಲ್ಲಿ ಸಂತೋಷ ಪಡುತ್ತದೆ. ಆದರೆ ಭಯವನ್ನು ಹೊಂದಿದವರು ಈ ಎಲ್ಲಾ ಭೋಗಗಳಿಂದ ಸುಖವನ್ನು ಹೊಂದುವುದಿಲ್ಲ.

ಅಭಯಸ್ಯೈವ ಯೋ ದಾತಾ ತಸ್ಯೈವ ಸುಮಹತ್ ಫಲಮ್।
ನಹಿ ಪ್ರಾಣಸಮಂ ದಾನಂ ತ್ರಿಷು ಲೋಕೇಷು ವಿದ್ಯತೇ ॥೨೭॥

ಅಂತಹ ಪರಿಸ್ಥಿತಿಯಲ್ಲಿ ಯಾವನು ಅಭಯವನ್ನುಕೊಡುತ್ತಾನೆಯೋ ಅವನಿಗೆ ಮಹಾಫಲವು ಉಂಟಾಗುತ್ತದೆ. ಪ್ರಾಣದಾನಕ್ಕೆ ಸಮನಾದ ದಾನವು ಮೂರು ಲೋಕಗಳಲ್ಲಿ ಬೇರೆ ಯಾವುದೂ ಇಲ್ಲವಷ್ಟೇ ?

ಇಂದ್ರೋ ರಾಜಾ ಯಮೋ ರಾಜಾ ಧರ್ಮೋ ರಾಜಾ ತಥೈವ ಚ।
ರಾಜಾ ಬಿಭರ್ತಿ ರೂಪಾಣಿ ರಾಜ್ಞಾ ಸರ್ವಮಿದಂ ಧೃತಮ್ ॥೨೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುಃಸಪ್ತತಿತಮೋऽಧ್ಯಾಯಃ ॥೭೪॥

ರಾಜನೇ ಇಂದ್ರ. ರಾಜನೇ ಯಮ. ಹಾಗೆಯೇ ರಾಜನೇ ಧರ್ಮ. (ಹೀಗೆ) ರಾಜನು ಅನೇಕರೂಪಗಳನ್ನು ಧರಿಸುತ್ತಾನೆ. ರಾಜನು ಇದೆಲ್ಲವನ್ನೂ (ರಾಷ್ಟ್ರವನ್ನು) ಧರಿಸಿರುತ್ತಾನೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೭೪ನೆಯ ಅಧ್ಯಾಯವು ಮುಗಿಯಿತು

—0—

೭೫. ಎಪ್ಪತ್ತೈದನೆಯ ಅಧ್ಯಾಯ

ರಾಜಪುರೋಹಿತನ ಲಕ್ಷಣ; ಐಲ-ಕಾಶ್ಯಪಸಂವಾದಾನುವಾದ

ಯುಧಿಷ್ಠಿರಃ

ರಾಜ್ಞಾ ಪುರೋಹಿತಃ ಕಾರ್ಯಃ ಕೀದೃಶೋ ವರ್ಣತೋ ಭವೇತ್ ।
ಪುರೋಧಾ ಯಾದೃಶಃ ಕಾರ್ಯಃ ಕಥಯಸ್ವ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ! ರಾಜನು ನಿಯೋಜಿಸುವ ಪುರೋಹಿತನ ಬಣ್ಣವು ಹೇಗಿರಬೇಕು. ಪುರೋಹಿತನು ಎಂತಹವನಾಗಿರಬೇಕು ಎಂಬುದನ್ನು ನನಗೆ ಹೇಳು.

ಭೀಷ್ಮಃ

ಗೌರೋ ವಾ ಲೋಹಿತೋ ವಾಪಿ ಶ್ಯಾಮೋ ವಾ ನೀರುಜಃ ಸುಖೀ ।
ಅಕ್ರೋಧನೋ ನ ಚಪಲಃ ಸರ್ವತಶ್ಚ ಜಿತೇಂದ್ರಿಯಃ ॥೨॥

ಭೀಷ್ಮರು – ಬಿಳಿಯ ಬಣ್ಣದವನಾಗಲೀ, ಕೆಂಪು ಬಣ್ಣದವನಾಗಲೀ, ಕಂದು ಬಣ್ಣದವನಾಗಲೀ ಆಗಿರಬಹುದು. ಕಡುಕಪ್ಪುಬಣ್ಣದವನನ್ನು ಪುರೋಹಿತನನ್ನಾಗಿ ಮಾಡಬಾರದು. ಪುರೋಹಿತನು ನೀರೋಗಿಯೂ, ಅಕ್ರೋಧಪರನೂ, ಚಂಚಲ-ಸ್ವಭಾವವಿಲ್ಲದವನೂ, ಜಿತೇಂದ್ರಿಯನೂ ಮತ್ತು ಸುಖಶೀಲನೂ ಆಗಿರಬೇಕು.

ರಾಜ್ಞಾ ಪುರೋಹಿತಃ ಕಾರ್ಯೋ ಭವೇತ್ ವಿದ್ವಾನ್ ಬಹುಶ್ರುತಃ ।
ಉಭೌ ಸಮೀಕ್ಷ್ಯ ಧರ್ಮಾರ್ಥಾವಪ್ರಮೇಯಾವನಂತರಮ್ ॥೩॥

ರಾಜನು ಅಪ್ರಮೇಯಗಳಾದ ಧರ್ಮಾರ್ಥಕಾಮಗಳೆರಡನ್ನೂ ನೋಡಿ, ಅನಂತರ ಬಹುಶ್ರುತನಾದ ವಿದ್ವಾಂಸನನ್ನು ಪುರೋಹಿತನನ್ನಾಗಿ ಮಾಡಬೇಕು.

ಧರ್ಮಾತ್ಮಾ ಧರ್ಮವಿದ್ ಯೇಷಾಂ ರಾಜ್ಞಾಂ ರಾಜನ್ ಪುರೋಹಿತಃ ।
ತೇಷಾಮರ್ಥಶ್ಚ ಕಾಮಶ್ಚ ಧರ್ಮಶ್ಚೇತಿ ವಿನಿಶ್ಚಯಃ ॥೪॥

ಎಲೈ ರಾಜನೇ! ರಾಜನ ಪುರೋಹಿತನು ಧರ್ಮಾತ್ಮನೂ ಧರ್ಮಜ್ಞನೂ ಆಗಿದ್ದರೆ ಅಂತಹ ರಾಜನಿಗೆ ಧರ್ಮಾರ್ಥಕಾಮಗಳು ಉಂಟಾಗುತ್ತವೆ ಎಂಬುದು ನಿಶ್ಚಿತವು.

ಶ್ಲೋಕಾಶ್ಚೋಶನಸಾ ಗೀತಾಸ್ತಾನ್ ನಿಬೋಧ ಯುಧಿಷ್ಠಿರ।
ಉಚ್ಛಿಷ್ಟಃ ಸ ಭವೇದ್ ರಾಜಾ ಯಸ್ಯ ನಾಸ್ತಿ ಪುರೋಹಿತಃ ॥೫॥

ಎಲೈ ಯುಧಿಷ್ಠಿರನೇ! ಈ ವಿಷಯದಲ್ಲಿ ಶುಕ್ರಾಚಾರ್ಯರು ಹಾಡಿದ ಶ್ಲೋಕಗಳನ್ನು ಕೇಳು – ಯಾವ ರಾಜನಿಗೆ ಪುರೋಹಿತನಿರುವುದಿಲ್ಲವೋ ಅವನು ಉಚ್ಛಿಷ್ಟನಾಗುತ್ತಾನೆ.

ರಕ್ಷಸಾಮಸುರಾಣಾಂ ಚ ಪಿಶಾಚೋರಗಪಕ್ಷಿಣಾಮ್ ।
ಶತ್ರೂಣಾಂ ಚ ಭವೇದ್ ವಧ್ಯೋ ಯಸ್ಯ ನಾಸ್ತಿ ಪುರೋಹಿತಃ ॥೬॥

ಯಾವ ರಾಜನಿಗೆ ಪುರೋಹಿತನಿಲ್ಲವೋ ಅವನು ರಾಕ್ಷಸರಿಂದಲೂ, ಅಸುರರಿಂದಲೂ, ಪಿಶಾಚಸರ್ಪಪಕ್ಷಿಗಳಿಂದಲೂ ಮತ್ತು ಶತ್ರುಗಳಿಂದಲೂ ವಧ್ಯನಾಗುತ್ತಾನೆ.

ಬ್ರಹ್ಮತ್ವಂ ಸರ್ವಯಜ್ಞೇಷು ಕುರ್ಯಾದಥರ್ವಣೋ ದ್ವಿಜಃ।
ರಾಜ್ಞಾಶ್ಚಾಥರ್ವವೇದೇನ ಸರ್ವಕರ್ಮಾಣಿ ಕಾರಯೇತ್ ॥೭॥

ರಾಜನ ಎಲ್ಲ ಯಜ್ಞಗಳಲ್ಲಿ ಅಥರ್ವಣವೇದಜ್ಞನಾದ ಬ್ರಾಹ್ಮಣನೇ ಬ್ರಹ್ಮಸ್ಥಾನವನ್ನು ಹೊಂದಬೇಕು. ರಾಜನಿಗೆ ಎಲ್ಲ ಕರ್ಮಗಳನ್ನೂ ಅಥರ್ವವೇದದಿಂದ ಮಾಡಿಸಬೇಕು.

ಭೂಯೋ ಗೃಹ್ಯಾಣಿ ಸತತಂ ಮಹೋತ್ಪಾತಾನ್ಯಘಾನಿ ಚ।
ಇಷ್ಟಾಮಂಗಲಯುಕ್ತಾನಿ ತಥಾಽಂತಃಪುರಿಕಾಣೇ ಚ ॥೮॥

ಗೀತನೃತ್ತಾಧಿಕಾರೇಷು ಸಾಮಂತೇಷು ಮಹೀಪತೇಃ।
ಕರ್ತವ್ಯಂ ಕರಣೀಯಂ ವೈ ವೈಶ್ವದೇವಬಲಿಸ್ತಥಾ ॥೯॥

ಮನೆಯಲ್ಲಿ ಸಂಭವಿಸುವ ಭೋಜನಸಮಯದ ದೀಪನಾಶಾದಿ ಅಮಂಗಳಗಳು, ಬಾಹ್ಯವಾದ ಉಲ್ಕಾಪಾತಾದಿ ಅಮಂಗಳಗಳು, ಸುಹೃದರಿಗೆ ಉಂಟಾಗುವ ಅಮಂಗಳಗಳು, ಹಾಗೆಯೇ ರಾಜಧಾನಿಯೊಳಗೆ ಉಂಟಾಗುವ ಅಮಂಗಳಗಳು, ಗೀತನೃತ್ಯಾದಿ ಸ್ಥಳಗಳಲ್ಲಿ ಆಗುವ ಅಮಂಗಳಗಳು, ರಾಜನ ಸಾಮಂತರಾಜರುಗಳಿಗೆ ಆಗುವ ಅಮಂಗಳಗಳು ಇವುಗಳನ್ನು ಗಮನಿಸಿ ಪುರೋಹಿತನು ವೈಶ್ವದೇವ, ಬಲಿ ಮೊದಲಾದ ಪ್ರಾಯಶ್ಚಿತ್ತಗಳನ್ನು ಮಾಡುವವನಾಗಿರಬೇಕು.

ಪಕ್ಷಸಂಧಿಷು ಕುರ್ವೀತ ಮಹಾಶಾಂತಿಂ ಪುರೋಹಿತಃ।
ರೌದ್ರಹೋಮಸಹಸ್ರಂ ಚ ಸ್ವಸ್ಯ ರಾಜ್ಞಃ ಪ್ರಿಯಂ ಹಿತಮ್ ॥೧೦॥

ಪಕ್ಷಸಂಧಿಗಳಾದ ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ರಾಜನಿಗೂ ಮತ್ತು ತನಗೂ ಹಿತಕಾರಕವಾದ ಸಹಸ್ರಾಹುತಿಗಳಿಂದ ಕೂಡಿದ ರುದ್ರದೇವತಾಕವಾದ ಹೋಮವನ್ನು ಪುರೋಹಿತನು ಮಾಡಬೇಕು.

ರಾಜ್ಞಃ ಪಾಪಮಲಾಃ ಸಪ್ತ ಯಾನ್ ನುತ್ಸ್ಯತಿ ಪುರೋಹಿತಃ।
ಅಮಾತ್ಯಾಶ್ಚ ಕುಕರ್ಮಾಣೋ ಮಂತ್ರಿಣಶ್ಚಾಪ್ಯುಪೇಕ್ಷಕಾಃ ॥೧೧॥

ಚೌರ್ಯಮವ್ಯವಹಾರಶ್ಚ ವ್ಯವಹಾರೋಪಸೇವನಮ್।
ಅದಂಡ್ಯದಂಡನಂ ಚೈವ ದಂಡ್ಯಾನಾಂ ಚಾಪ್ಯದಂಡನಮ್ ॥೧೨॥

ಹಿಂಸಾ ಚಾನ್ಯತ್ರ ಸಂಗ್ರಾಮಾದ್ ರಾಜ್ಞಶ್ಚ ಮಲ ಉಚ್ಯತೇ।
ಕುಭೃತ್ಯೈಸ್ತು ಪ್ರಜಾನಾಶಃ ಸಪ್ತಮಸ್ತು ಮಹಾಮಲಃ ॥೧೩॥

ರಾಜನಿಗೆ ಏಳು ಪಾಪಮಲಗಳಿರುತ್ತವೆ. ಅವುಗಳನ್ನು ಪುರೋಹಿತನು ನಾಶಗೊಳಿಸುವನು. ಏಳು ಮಲಗಳೆಂದರೆ ಕೆಟ್ಟ ಕೆಲಸವನ್ನು ಮಾಡುವ ಮತ್ತು ಮಂತ್ರಾಲೋಚನೆಯ ಸಮಯದಲ್ಲಿ ಉಪೇಕ್ಷೆಯನ್ನು ಮಾಡುವ ಮಂತ್ರಿಗಳು; ಚೌರ್ಯ, ಅವ್ಯವಹಾರ, ವೈಶ್ಯನಂತೆ ಕ್ರಯವಿಕ್ರಯಾದಿ ವ್ಯವಹಾರವನ್ನು ಸೇವಿಸುವುದು, ಶಿಕ್ಷಾನರ್ಹರಿಗೆ ಶಿಕ್ಷೆಯನ್ನು ಕೊಡುವುದು, ಶಿಕ್ಷಾರ್ಹರಿಗೆ ಶಿಕ್ಷೆಯನ್ನು ಕೊಡದಿರುವುದು, ಯುದ್ಧವನ್ನು ಬಿಟ್ಟು ಬೇರೆಯ ಸ್ಥಳದಲ್ಲಿ ಹಿಂಸೆಯನ್ನು ಮಾಡುವುದು. ಇವುಗಳು

ರಾಜನ ಮಲಗಳೆಂದು ಹೇಳಲ್ಪಡುತ್ತವೆ. ಕೆಟ್ಟ ಭೃತ್ಯರಿಂದ ಪ್ರಜೆಗಳ ನಾಶವು ರಾಜನ ಏಳನೆಯ ದೊಡ್ಡ ಮಲವೆನಿಸುತ್ತದೆ.

ರೌದ್ರೈರ್ಹೋಮೈರ್ಮಹಾಶಾಂತ್ಯಾ ಧೃತಕಂಬಲಕರ್ಮಣಾ।
ಭೃಗ್ವಂಗಿರೋ ವಿಧಿಜ್ಞೋ ವೈ ಪುರೋಧಾ ನಿರ್ಹರೇ ಮಲಾತ್ ॥೧೪॥

ರುದ್ರದೇವತಾಕವಾದ ಹೋಮಗಳಿಂದಲೂ, ಮಹಾ ಶಾಂತಿಯಿಂದಲೂ, ಶುಕ್ರಬೃಹಸ್ಪತಿಗಳ ವಿಧಾನವನ್ನು ತಿಳಿದ ಪುರೋಹಿತನು ಧೃತಕಂಬಲಕರ್ಮದಿಂದಲೂ ಆ ಮಲವನ್ನು ನಾಶಗೊಳಿಸಬೇಕು.

ಏತಾನ್ ಹಿತ್ವಾ ದಿವಂ ಯಾತಿ ರಾಜಾ ಸಪ್ತ ಮಹಾಮಲಾನ್।
ಸಾಮಾತ್ಯಃ ಸಪುರೋಧಾಶ್ಚ ಪ್ರಜಾನಾಂ ಪಾಲನೇ ರತಃ ॥೧೫॥

ಪ್ರಜಾಪಾಲನೆಯಲ್ಲಿ ರತನಾದ ರಾಜನು ಈ ಸಪ್ತಮಹಾಮಲಗಳನ್ನು ತೊರೆದು ಅಮಾತ್ಯ ಹಾಗೂ ಪುರೋಹಿತನ ಜೊತೆಯಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.

ಏತಸ್ಮಿನ್ನೇವ ಕೌರವ್ಯ ಪೌರೋಹಿತ್ಯೇ ಮಹಾಮತೇ।
ಶ್ಲೋಕಾನಾಹ ಮಹೇಂದ್ರಸ್ಯ ಗುರುರ್ದೇವೋ ಬೃಹಸ್ಪತಿಃ ॥೧೬॥

ತಾನ್ ನಿಬೋಧ ಮಹೀಪಾಲ ಮಹಾಭಾಗ ಹಿತಾನ್ ಶುಭಾನ್।

ಎಲೈ ಕೌರವ್ಯನೇ! ಮಹಾಮತಿಯೇ! ಇದೇ ಪೌರೋಹಿತ್ಯದ ವಿಷಯದಲ್ಲಿ ದೇವತೆಗಳ ಗುರುಗಳಾದ ಬೃಹಸ್ಪತಿಗಳು ಶ್ಲೋಕಗಳನ್ನು ಹೇಳಿದ್ದಾರೆ. ಎಲೈ ರಾಜನೇ! ಮಹಾಭಾಗನೇ! ಅಂತಹ ಹಿತವಾದ ಮತ್ತು ಶುಭವಾದ ಶ್ಲೋಕಗಳನ್ನು ಕೇಳು.

ಋಗ್ವೇದೇ ಸಾಮವೇದೇ ಚ ಯಜುರ್ವೇದೇ ಚ ವಾಜಿನಾಮ್ ॥೧೭॥

ನ ನಿರ್ದಿಷ್ಟಾನಿ ಕರ್ಮಾಣಿ ತ್ರಿಷು ಸ್ಥಾನೇಷು ಭೂಭೃತಾಮ್।
ಶಾಂತಿಕಂ ಪೌಷ್ಟಿಕಂ ಚೈವ ಅರಿಷ್ಟಾನಾಂ ಚ ಶಾತನಮ್ ॥೧೮॥

ಋಗ್ವೇದ, ಸಾಮವೇದ ಮತ್ತು ಯಜುರ್ವೇದ ಈ ಮೂರರಲ್ಲಿ ವಾಜ-

ಸನೇಯಶಾಖೆಗಳಲ್ಲಿ ಹೇಳಲ್ಪಟ್ಟ ರಾಜರ ಶಾಂತಿಕ, ಪೌಷ್ಟಿಕ ಮತ್ತು ಅರಿಷ್ಟ-ನಿವಾರಕವಾದ ಅಭಿಚಾರಾದಿಕರ್ಮಗಳು ಹೇಳಲ್ಪಟ್ಟಿಲ್ಲ. ಆದರೆ (ಅತಃ) ರಾಜ-ಪುರೋಹಿತನು ವಾಜಸನೇಯಶಾಖೆಯವನೇ ಆಗಿರಬೇಕು.

ಶಬ್ದಿತಾ ಯಾಜ್ಞವಲ್ಕ್ಯೇನ ಯಜ್ಞಾ ಆಹವಮೀಹತಾ।
ಪ್ರಶಿಷ್ಟಾನಾಂ ವರಿಷ್ಠೇನ ಬ್ರಹ್ಮಣಃ ಸಮ್ಮತೇ ವಿಭೋಃ ॥೧೯॥

ಮಾಧ್ಯಂದಿನಶಾಖಾಪ್ರವರ್ತಕರಾದ ಶ್ರೇಷ್ಠರಾದ ಯಾಜ್ಞವಲ್ಕ್ಯರು ಯುದ್ಧವನ್ನು ಬಯಸುವ ರಾಜನಿಗೆ ಮಾಡಬೇಕಾದ ಶಾಂತಿಕ, ಪೌಷ್ಟಿಕ ಮತ್ತು ಆಭಿಚಾರಿಕಾದಿ ಕರ್ಮಗಳನ್ನು ಬ್ರಹ್ಮದೇವರ ಸಮ್ಮತಿಗೆ ಅನುಗುಣವಾಗಿ ಹೇಳಿದ್ದಾರೆ. (ರಾಜನು ತನ್ನ ಪಾಪಗಳನ್ನು ಮತ್ತು ಕಷ್ಟಗಳನ್ನು ಪರಿಹರಿಸಿಕೊಳ್ಳಲು ಮಾಡುವ ಹೋಮಗಳು ಶಾಂತಿಕ ಹೋಮಗಳು; ತನಗೂ ಮತ್ತು ತನ್ನ ರಾಜ್ಯಕ್ಕೂ ಕ್ಷೇಮಲಾಭಗಳನ್ನುಂಟು ಮಾಡುವ ಕರ್ಮಗಳು ಪೌಷ್ಟಿಕಗಳು; ಶತ್ರುನಿಗ್ರಹಕಾರ್ಯಮಾಡುವ ಹೋಮಾದಿ ಕರ್ಮಗಳು ಆಭಿಚಾರಿಕ ಎಂದು ಹೇಳಲ್ಪಡುತ್ತವೆ).

ಬಹ್ವೃಚಂ ಸಾಮಗಂ ಚೈವ ವಾಜಿನಂ ಚ ವಿವರ್ಜಯೇತ್।
ಬಹ್ವೃಚೋ ರಾಷ್ಟ್ರನಾಶಾಯ ರಾಜನಾಶಾಯ ಸಾಮಗಃ।
ಅಧ್ವರ್ಯುರ್ಬಲನಾಶಾಯ ಪ್ರೋಕ್ತಾ ವಾಜಸನೇಯಕಾಃ ॥೨೦॥

ಋಗ್ವೇದಿಯಾದ ಯಜುರ್ವೇದಿಯಾದ ಅಥವಾ ಸಾಮವೇದಿಯಾದ ಪುರೋ-ಹಿತನನ್ನು ವರ್ಜಿಸಬೇಕು. ಋಗ್ವೇದಿಯು ಪುರೋಹಿತನಾದರೆ ರಾಷ್ಟ್ರನಾಶ-ವಾಗುತ್ತದೆ. ಸಾಮವೇದಿಯು ಪುರೋಹಿತನಾದರೆ ರಾಜನೇ ನಾಶಹೊಂದುತ್ತಾನೆ. ಯಜುರ್ವೇದಿಯು ಪುರೋಹಿತನಾದರೆ ಸೈನ್ಯವು ನಾಶವನ್ನು ಹೊಂದುತ್ತದೆ. ಆದ್ದರಿಂದ ಮಾಧ್ಯಂದಿನಶಾಖೆಯಾದ ವಾಜಸನೇಯಶಾಖೆಯವನೇ ಪುರೋಹಿತ-ನಾಗಬೇಕು.

ಅಬ್ರಾಹ್ಮಣೇಷು ವರ್ಣೇಷು ಮಂತ್ರಾನ್ ವಾಜಸನೇಯಕಮ್।
ಶಾಂತಿಕೇ ಪೌಷ್ಟಿಕೇ ಚೈವ ನಿತ್ಯಂ ಕರ್ಮಣಿ ವರ್ಜಯೇತ್ ॥೨೧॥

ಬ್ರಾಹ್ಮಣೇತರವರ್ಣಗಳಿಗೆ ಶಾಂತಿಕ ಮತ್ತು ಪೌಷ್ಟಿಕಕರ್ಮಗಳನ್ನು ಮಾಡುವಾಗ ನಿತ್ಯವೂ ವಾಜಸನೇಯಶಾಖೆಯ ಮಂತ್ರಗಳನ್ನು ವರ್ಜಿಸಬೇಕು.

ಬ್ರಾಹ್ಮಣಸ್ಯ ಮಹೀಪಸ್ಯ ಸರ್ವಥಾ ನ ವಿರೋಧಿನಃ।
ವೇದಾಶ್ಚತ್ವಾರ ಇತ್ಯೇತೇ ಬಾಹ್ಮಣಾ ಯೇ ಚ ತದ್ ವಿದುಃ ॥೨೨॥

ಪೌರೋಹಿತ್ಯೇ ಪ್ರಮಾಣಂ ತು ಬ್ರಾಹ್ಮಣಶ್ಚ ಮಹೀಪತೇಃ।
ಜಾತ್ಯಾ ನ ಕ್ಷತ್ರಿಯಃ ಪ್ರೋಕ್ತಃ ಕ್ರೂರಃ ಪ್ರಾಣಂ ಕರೋತಿ ಯಃ ॥೨೩॥

ನಾಲ್ಕುವೇದಗಳು ಬ್ರಾಹ್ಮಣನಿಗಾಗಲೀ, ರಾಜನಿಗಾಗಲೀ ವಿರೋಧಿಗಳಲ್ಲ ಎಂಬುದನ್ನು ಬ್ರಾಹ್ಮಣರು ತಿಳಿದಿದ್ದಾರೆ. ರಾಜನಿಗೆ ಪೌರೋಹಿತ್ಯವಿಷಯದಲ್ಲಿ ಬ್ರಾಹ್ಮಣನ ವಚನವೇ ಪ್ರಮಾಣವಾಗುತ್ತದೆ. ಯಾವನು ದುಷ್ಟರಿಗೆ ಕ್ರೂರನಾಗಿದ್ದು, ಸಜ್ಜನರ ಪ್ರಾಣವನ್ನು ರಕ್ಷಿಸುತ್ತಾನೆಯೋ ಅವನು ಜಾತಿಯಿಂದ ಕ್ಷತ್ರಿಯನಾಗದಿದ್ದರೂ ಕರ್ಮದಿಂದ ಕ್ಷತ್ರಿಯ ಎಂದೇ ಕರೆಯಲ್ಪಡುತ್ತಾನೆ.

ಚಾತುರ್ವರ್ಣ್ಯಬಹಿಷ್ಕೋಽಪಿ ಸ ಏವ ಕ್ಷತ್ರಿಯಃ ಸ್ಮೃತಃ।
ಭಾರ್ಗವಾಂಗಿರಸೈರ್ಮಂತ್ರೈಸ್ತೇಷಾಂ ಕರ್ಮ ವಿಧೀಯತೇ ॥೨೪॥

ಅಂತಹ ನಾಲ್ಕು ವರ್ಣಬಾಹ್ಯರಾದ ಕ್ಷತ್ರಿಯರಿಗೆ ಶುಕ್ರಬೃಹಸ್ಪತಿಗಳ ಮಂತ್ರದಿಂದ ಕರ್ಮಗಳು ವಿಧಿಸಲ್ಪಡುತ್ತವೆ.

ವೈತಾನಂ ಕರ್ಮ ಯಚ್ಚೈವ ಗಾರ್ಹ್ಯಂ ಕರ್ಮ ಚ ಯತ್ ಸ್ಮೃತಮ್।
ದ್ವಿಜಾತೀನಾಂ ತ್ರಯಾಣಾಂ ತು ಸರ್ವಕರ್ಮ ವಿಧೀಯತೇ ॥೨೫॥

ಮೂರು ವರ್ಣದ ದ್ವಿಜರಿಗೂ ಯಜ್ಞಸಂಬಂಧಿಯಾದ ಕರ್ಮಗಳು ಗೃಹಸಂಬಂಧಿಯಾದ ಎಲ್ಲ ಕರ್ಮಗಳೂ ವಿಧಿಸಲ್ಪಡುತ್ತವೆ.

ರಾಜಶಬ್ದಪ್ರವೃತ್ತಾನಾಂ ಹಿತಾರ್ಥಂ ತ್ರೇಣೆ ಕಾರಯೇತ್।
ಶಾಂತಿಕಂ ಪೌಷ್ಟಿಕಂ ಚೈವ ತಥಾಽಭಿಚರಣಂ ಚ ಯತ್ ॥೨೬॥

ರಾಜಶಬ್ದವನ್ನು ಹೊಂದಿದವರಿಗೆ ಅವರ ಹಿತಕ್ಕಾಗಿ (ಅವರು ಕ್ಷತ್ರಿಯರಾಗಲೀ ಅಥವಾ ವರ್ಣಬಾಹ್ಯರಾಗಲೀ) ಶಾಂತಿಕ ಪೌಷ್ಟಿಕ ಮತ್ತು ಅಭಿಚರಣ ಕರ್ಮಗಳನ್ನು ಮಾಡಿಸಬೇಕು.

ಅಗ್ನಿಷ್ಟೋಮಮುಖೈರ್ಯಜ್ಞೈರ್ದೂಷಿತಾ ಭೂಪಕರ್ಮಭಿಃ।
ನ ಸಮ್ಯಕ್ ಫಲಮೃಚ್ಛಂತಿ ಯೇ ಯಜಂತಿ ದ್ವಿಜಾತಯಃ ॥೨೭॥

ಪೌರೋಹಿತ್ಯಂ ತು ಕುರ್ವಾಣಾ ನಾಸಂಯಾಸ್ಯಂತಿ ಭೂಭೃತಾಮ್।
ಯಜ್ಞಕರ್ಮಾಣಿ ಕುರ್ವಾಣಾ ಋತ್ವಿಜಸ್ತು ವಿರೋಧಿನಃ ॥೨೮॥

ಅಂತಹ ವರ್ಣಬಾಹ್ಯರಿಗೆ ರಾಜನಿಗೆ ಉಚಿತವಾದ ಅಗ್ನಿಷ್ಟೋಮಾದಿ ಯಾಗಗಳನ್ನು ಮಾಡಿಸುವ ಬ್ರಾಹ್ಮಣರು ಆ ಕರ್ಮದೋಷದಿಂದ ಒಳ್ಳೆಯ ಫಲವನ್ನು ಪಡೆಯುವುದಿಲ್ಲ. ಪೌರೋಹಿತ್ಯವನ್ನು ಮಾಡುವ ಬ್ರಾಹ್ಮಣರು ರಾಜರಿಗೆ ಅನುಕೂಲವಾಗಿರುತ್ತಾರೆ. ಆದರೆ ಅಗ್ನಿಷ್ಟೋಮಾದಿ ಅಗ್ನಿಕರ್ಮಗಳನ್ನು ಮಾಡಿಸುವ ದ್ವಿಜರು ರಾಜನಿಗೆ ವಿರೋಧಿಗಳಾಗುತ್ತಾರೆ.

ಬ್ರಹ್ಮಕ್ಷತ್ರವಿಶಃ ಸರ್ವೇ ಪೌರೋಹಿತ್ಯೇ ವಿವರ್ಜಿತಾಃ।
ತದಭಾವೇ ಚ ಪಾರಕ್ಯಂ ನಿರ್ದಿಷ್ಟಂ ರಾಜಕರ್ಮಸು ॥೨೯॥

ಋಷಿಣಾ ಯಾಜ್ಞವಲ್ಕ್ಯೇನ ತತ್ ತಥಾ ನ ತದನ್ಯಥಾ।

ವಾಜಸನೇಯಶಾಖೆಯನ್ನು ತಿಳಿಯದ ಬ್ರಾಹ್ಮಣ, ಕ್ಷತ್ರಿಯ ವೈಶ್ಯರು ರಾಜಪೌರೋಹಿತ್ಯದಿಂದ ಹೊರಗೆ ಉಳಿಯುತ್ತಾರೆ. ರಾಜಪುರೋಹಿತನಿಲ್ಲದಿದ್ದರೂ ರಾಜನು ಮಾಡುವ ಸತ್ಕರ್ಮಗಳಿಗೆ ಪರಲೋಕದಲ್ಲಿ ಫಲವು ದೊರಕುತ್ತದೆ. ಋಷಿಗಳಾದ ಯಾಜ್ಞವಲ್ಕ್ಯರು ಅದು ಇದೇ ರೀತಿ, ಬೇರೆ ರೀತಿಯಲ್ಲ ಎಂದು ಸ್ಥಾಪಿಸಿದ್ದಾರೆ.

ಭಾರ್ಗವಾಂಗಿರಸೇ ವೇದೇ ಕೃತವಿದ್ಯಃ ಷಡಂಗವಿತ್ ॥೩೦॥

ಯಜ್ಞಕರ್ಮವಿಧಿಜ್ಞಸ್ತು ವಿಧಿಜ್ಞಃ ಪೌಷ್ಟಿಕೇಷು ಚ।
ಅಷ್ಟಾದಶವಿಕಲ್ಪಾನಾಂ ವಿಧಿಜ್ಞಃ ಶಾಂತಿಕರ್ಮಣಾಮ್ ॥೩೧॥

ಸರ್ವರೋಗವಿಹೀನಶ್ಚ ಸಂಯತಃ ಸಂಯತೇಂದ್ರಿಯಃ ॥೩೨॥

ಶುಕ್ರಬೃಹಸ್ಪತಿಗಳ ಶಾಸ್ತ್ರವನ್ನು ಬಲ್ಲವನೂ, ಷಡಂಗರಾಜವಿದ್ಯೆಯನ್ನು ಬಲ್ಲವನೂ, ಯಜ್ಞಕರ್ಮದ ವಿಧಿಯನ್ನು ಬಲ್ಲವನೂ, ಪೌಷ್ಟಿಕಕರ್ಮಗಳ ವಿಧಿಯನ್ನು ಬಲ್ಲವನೂ, ಶಾಂತಿಕರ್ಮಗಳ ಅಷ್ಟಾದಶಪ್ರಭೇದಗಳನ್ನು ಬಲ್ಲವನೂ, ಸರ್ವರೋಗರಹಿತನೂ , ಜಿತೇಂದ್ರಿಯನೂ, ಗಂಭೀರನೂ ಆದವನನ್ನು ಪುರೋಹಿತನನ್ನಾಗಿ ಮಾಡಬೇಕು.

ಶ್ವಿತ್ರಕುಷ್ಠಕ್ಷಯಕ್ಷೀಣೈರ್ಗ್ರಹಾಪಸ್ಮಾರದೂಷಿತೈಃ।
ಅಶಸ್ತೈರ್ವಾತದುಷ್ಟೈಶ್ಚ ದೂರಸ್ಥೈಃ ಸಂವದೇನ್ನೃಪಃ।
ರೋಗಿಣಂ ಋತ್ವಿಜಂ ಚೈವ ವರ್ಜಯೇಚ್ಚ ಪುರೋಹಿತಮ್ ॥೩೩॥

ರಾಜನು ಶ್ವಿತ್ರ , ಕುಷ್ಠ , ಕ್ಷಯ, ಗ್ರಹಪೀಡೆ, ಅಪಸ್ಮಾರ ಇವುಗಳಿಂದ ದೂಷಿತರಾದವರ ಜೊತೆಯಲ್ಲಿ, ಅಪ್ರಶಸ್ತರಾದ ಜನರ ಜೊತೆಯಲ್ಲಿ ಮತ್ತು ವಾತದೋಷಯುಕ್ತರಾದ ಜನರ ಜೊತೆಯಲ್ಲಿ ಮಾತನಾಡುವಾಗ ಅವರನ್ನು ದೂರದಲ್ಲಿ ನಿಲ್ಲಿಸಿ ಮಾತನಾಡಬೇಕು. ರಾಜನು ರೋಗಿಯಾದ ಋತ್ವಿಜನನ್ನು ಮತ್ತು ಪುರೋಹಿತನನ್ನು ವರ್ಜಿಸಬೇಕು.

ನ ಚಾನ್ಯಸ್ಯ ಕೃತಂ ಯೇನ ಪೌರೋಹಿತ್ಯಂ ಕದಾಚನ।
ಯಸ್ಯ ಯಾಜ್ಯೋ ಮೃತಶ್ಚೈವ ಭ್ರಷ್ಟಃ ಪ್ರವ್ರಜಿತೋ ಯಥಾ ॥೩೪॥

ಯುದ್ಧೇ ಪರಾಜಿತಶ್ಚೈವ ಸರ್ವಾಂಸ್ತಾನ್ ವರ್ಜಯೇನ್ನೃಪಃ।

ಇನ್ನೊಬ್ಬ ರಾಜನಿಗೆ ಯಾವಾಗಲಾದರೂ ಪೌರೋಹಿತ್ಯವನ್ನು ಮಾಡಿದವನನ್ನು ಯಾವನು ರಾಜನಿಗೆ ಪೌರೋಹಿತ್ಯವನ್ನು ಮಾಡಿದ ಮೇಲೆ ರಾಜನು ಮೃತನಾಗಿ-

ದ್ದಾನೆಯೋ ಅಂತಹವನನ್ನು, ಭ್ರಷ್ಟನನ್ನು, ಸನ್ಯಾಸಿಯನ್ನು, ಯುದ್ಧದಲ್ಲಿ ಪರಾಜಿತನಾದವನನ್ನು ಪೌರೋಹಿತ್ಯಕರ್ಮದಲ್ಲಿ ರಾಜನು ವರ್ಜಿಸಬೇಕು.

ನಕ್ಷತ್ರಸ್ಯಾನುಕೂಲ್ಯೇನ ಯಸ್ಮಿನ್ ಜಾತೋ ಜನೇಶ್ವರಃ ॥೩೫॥

ರಾಜಶಾಸ್ತ್ರವಿನೀತಶ್ಚ ಶ್ರೇಯಾನ್ ರಾಜ್ಞಃ ಪುರೋಹಿತಃ।

ಯಾವನು ಪುರೋಹಿತನಾಗಿದ್ದಾಗ ಒಳ್ಳೆಯ ನಕ್ಷತ್ರದಲ್ಲಿ ತಾನು ರಾಜನಾದನೋ, ಯಾವನು ರಾಜ್ಯಶಾಸ್ತ್ರದಲ್ಲಿ ನಿಪುಣನೋ ಅಂತಹ ಪುರೋಹಿತನು ರಾಜನಿಗೆ ಶ್ರೇಯಸ್ಕರನಾದವನು.

ಅಧನ್ಯಾನಾಂ ನಿಮಿತ್ತಾನಾಮುತ್ಪಾತಾನಾಮಥಾರ್ಥವಿತ್ ॥೩೬॥

ಶತ್ರುಪಕ್ಷಕ್ಷಯಜ್ಞಶ್ಚ ಶ್ರೇಯಾನ್ ರಾಜ್ಞಃ ಪುರೋಹಿತಃ।

ಅಮಂಗಳ ಸೂಚನೆಗಳ ಮತ್ತು ಉತ್ಪಾತಗಳ ಅರ್ಥಗಳನ್ನು ತಿಳಿಯುವ, ಶತ್ರುಪಕ್ಷವನ್ನು ನಾಶಮಾಡುವ ವಿಧಾನವನ್ನು ತಿಳಿಯುವ ಪುರೋಹಿತನು ರಾಜನಿಗೆ ಶ್ರೇಯಸ್ಕರನಾದವನು.

ವಾಜಿನಂ ತದಭಾವೇ ಚ ಚಾರಕಾಧ್ವರ್ಯಕಾ ಅಪಿ ॥೩೭॥

ಬಹ್ವೃಚಂ ಸಾಮಗಂ ಚೈವ ನೀತಶಾಸ್ತ್ರಕೃತಶ್ರಮಾನ್।
ಕೃತಿನೋಽಥರ್ವಣೋ ವೇದೇ ಸ್ಥಾಪಯೇತ್ ತು ಪುರೋಹಿತಾನ್ ॥೩೮॥

ವಾಜಸನೇಯ ಶಾಖೆಯನ್ನು ತಿಳಿದ ಬ್ರಾಹ್ಮಣನು ಸಿಗದಿದ್ದರೆ ರಾಜನೀತಿಶಾಸ್ತ್ರವನ್ನು ಅಭ್ಯಾಸ ಮಾಡಿದ, ಯಜ್ಞವನ್ನು ಪ್ರವರ್ತಿಸುವ ಯಜುರ್ವೇದಿಯನ್ನು ಋಗ್ವೇದಿಯನ್ನು ಸಾಮವೇದಿಯನ್ನು ಅಥರ್ವವೇದಿಯನ್ನು ಪುರೋಹಿತನನ್ನಾಗಿ ಮಾಡಬಹುದು.

ಹಿಂಸಾಂಗಾ ಯೇ ಚ ನಿರ್ದಿಷ್ಟಾ ಮಂತ್ರಾ ವೈತಾನಿಕೈರ್ದ್ವಿಜೈಃ।
ನ ತಾನುಚ್ಚಾರಯೇತ್ ಪ್ರಾಜ್ಞಃ ಕ್ಷತ್ರಧರ್ಮವಿರೋಧಿನಃ ॥೩೯॥

ಯಾಗವನ್ನು ಮಾಡಿಸುವ ಬ್ರಾಹ್ಮಣರು ಮಾರಣಾದಿ ಹಿಂಸಾಜನಕವಾದ ಮಂತ್ರವೆಂದು ಯಾವುದನ್ನು ನಿರ್ದೇಶಿಸಿರುತ್ತಾರೆಯೋ ಅವು ಕ್ಷತ್ರಿಯ ಧರ್ಮಕ್ಕೆ ವಿರೋಧಿಗಳಾದವು. ಪ್ರಾಜ್ಞನಾದ ಪುರೋಹಿತನು ಅವುಗಳನ್ನು ಉಚ್ಚರಿಸಬಾರದು.

ಪ್ರಜಾಗುಣಾಃ ಪುರೋಧಾಶ್ಚ ಪುರೋಹಿತಗುಣಾಃ ಪ್ರಜಾಃ।
ರಾಜಾ ಚೈವಂಗುಣೋ ಯೇಷಾಂ ಕುಶಲಂ ತೇಷು ಸರ್ವಶಃ ॥೪೦॥

ಎಲ್ಲಿ ಪ್ರಜೆಗಳ ಗುಣವು ಪುರೋಹಿತನಿಗೂ, ಪುರೋಹಿತನ ಗುಣಗಳು ಪ್ರಜೆಗಳಿಗೂ ಉಂಟಾಗುತ್ತವೆಯೋ ಮತ್ತು ರಾಜನೂ ಅಂತಹ ಗುಣವುಳ್ಳವನಾಗಿರುತ್ತಾನೆಯೋ ಅಲ್ಲಿ ಎಲ್ಲರಿಗೂ ಕುಶಲವುಂಟಾಗುತ್ತದೆ.

ಉಭೌ ಪ್ರಜಾ ವರ್ಧಯತೋ ದೇವಾನ್ ಪೂರ್ವಾನ್ ಪರಾನ್ ಪಿತೄನ್।
ಯೌ ಸಮೇಯಾವಸ್ಥಿತೌ ಧರ್ಮೇ ಶ್ರದ್ಧೇಯೌ ಸುತಪಸ್ವಿನೌ ॥೪೧॥

ರಾಜಾ ಮತ್ತು ಪುರೋಹಿತರಿಬ್ಬರೂ ಶ್ರದ್ಧಾಯುಕ್ತರಾಗಿ, ಒಳ್ಳೆಯ ತಪಸ್ವಿಗಳಾಗಿ ಮಿಲಿತರಾಗಿ ಧರ್ಮಾಚರಣೆಯನ್ನು ಮಾಡಿದರೆ ಅವರು ದೇವತೆಗಳನ್ನೂ, ಪೂರ್ವ ಪಿತೃಗಳನ್ನೂ ಸಂತೋಷಪಡಿಸುತ್ತಾರೆ. ಮತ್ತು ಪ್ರಜೆಗಳ ಸಂತತಿಯನ್ನೂ ಅಭಿವೃದ್ಧಿ ಪಡಿಸುತ್ತಾರೆ.

ಪರಸ್ಪರಸ್ಯ ಸುಹೃದೌ ಸಮ್ಮತೌ ಸಮಚೇತಸೌ।
ಬ್ರಹ್ಮಕ್ಷತ್ರಸ್ಯ ಸಮ್ಮಾನಾತ್ ಪ್ರಜಾಃ ಸುಖಮವಾಪ್ನುಯುಃ ॥೪೨॥

ಅವರಿಬ್ಬರೂ ಪರಸ್ಪರ ಸುಹೃದರಾಗಿ, ಪ್ರಜೆಗಳಿಗೆ ಸಮ್ಮತರಾಗಿ, ಸಮಾನದೃಷ್ಟಿಯುಳ್ಳವರಾಗಿ, ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು ಸಮ್ಮಾನ ಮಾಡುವುದರಿಂದ ಪ್ರಜೆಗಳು ಸುಖವನ್ನು ಪಡೆಯುವರು.

ವಿಮಾನನಾತ್ ತಯೋರೇವ ಪ್ರಜಾ ನಶ್ಯೇಯುರೇವ ಹ।
ಬ್ರಹ್ಮಕ್ಷತ್ರಂ ಹಿ ಸರ್ವೇಷಾಂ ಧರ್ಮಾಣಾಂ ಮೂಲಮುಚ್ಯತೇ ॥೪೩॥

ಬ್ರಾಹ್ಮಣಕ್ಷತ್ರಿಯರನ್ನು ಅವಮಾನಗೊಳಿಸಿದರೆ ಪ್ರಜೆಗಳು ನಾಶವನ್ನೇ ಹೊಂದು

-ತ್ತಾರೆ. ಏಕೆಂದರೆ ಬ್ರಾಹ್ಮಣಕ್ಷತ್ರಿಯರ ಸಮುದಾಯವು ಎಲ್ಲ ಧರ್ಮಗಳಿಗೂ ಮೂಲವೆಂದು ಹೇಳಲ್ಪಡುತ್ತದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಐಲಕಶ್ಯಪಸಂವಾದಂ ತಂ ನಿಬೋಧ ಯುಧಿಷ್ಠಿರ ॥೪೪॥

ಎಲೈ ಯುಧಿಷ್ಠಿರನೇ! ಈ ವಿಷಯದಲ್ಲಿಯೂ ಪುರೂರವನಿಗೂ ಕಶ್ಯಪರಿಗೂ ನಡೆದ ಸಂವಾದವನ್ನು ಹೇಳುತ್ತಾರೆ. ಅದನ್ನು ಕೇಳು.

ಐಲಃ

ಯದಾ ಹಿ ಬ್ರಹ್ಮ ಪ್ರಜಹಾತಿ ಕ್ಷತ್ರಂ
ಕ್ಷತ್ರಂ ಯದಾ ವಾ ಪ್ರಜಹಾತಿ ಬ್ರಹ್ಮ।
ಅನ್ವಗ್ ಬಲಂ ದಸ್ಯವಸ್ತದ್ ಭಜಂತೇऽ-
ಬಲ್ಯಂ ತಥಾ ತತ್ರ ವಿಯಂತಿ ಸಂತಃ ॥೪೫॥

ಐಲ – ಬ್ರಾಹ್ಮಣರು ಕ್ಷತ್ರಿಯನನ್ನು ತೊರೆದರೆ ಅಥವಾ ಕ್ಷತ್ರಿಯನೇ ಬ್ರಾಹ್ಮಣರನ್ನು ತೊರೆದರೆ ಉತ್ತಮವಾದ ಬಲವು ಇವೆರಡರಲ್ಲಿ ಯಾವುದರಲ್ಲಿ ಇರುತ್ತದೆ? ಹಾಗೆಯೇ ಆಗ ದುರ್ಬಲತೆಯನ್ನು ಯಾರು ಧರಿಸುತ್ತಾರೆ?

ಕಶ್ಯಪಃ

ವ್ಯೃದ್ಧಂ ರಾಷ್ಟ್ರಂ ಭವತಿ ಕ್ಷತ್ರಿಯಸ್ಯ
ಬ್ರಹ್ಮ ಕ್ಷತ್ರಂ ಯತ್ರ ವಿರುದ್ಧ್ಯತೇ ಹ।
ಅನ್ವಗ್ ಬಲಂ ದಸ್ಯವಸ್ತದ್ ಭಜಂತೇ
ಅಬಲ್ಯಂ ತಥಾ ತತ್ರ ವಿಯಂತಿ ಸಂತಃ ॥೪೬॥

ಬ್ರಾಹ್ಮಣ ಕ್ಷತ್ರಿಯರಿಗೆ ವಿರೋಧವುಂಟಾದರೆ ಕ್ಷತ್ರಿಯನ ರಾಷ್ಟ್ರವು ಸಮೃದ್ಧಿಯನ್ನು ಕಳೆದುಕೊಳ್ಳುತ್ತದೆ. ದಸ್ಯುಗಳು ಅಧಿಕಬಲವುಳ್ಳವರಾಗುತ್ತಾರೆ. ಸಜ್ಜನರ ಬಲವು ಕಡಿಮೆಯಾಗುತ್ತದೆ.

ನೈಷಾಮುಕ್ಷಾ ವರ್ಧತೇ ನೋತ ಉಸ್ರಾ
ನ ಗರ್ಗರೀ ಮಥ್ಯತೇ ನೋ ಯಜಂತೇ।
ನೈಷಾಂ ಪುತ್ರಾ ವೇದಮಧೀಯತೇ ಚ
ಯದಾ ಬ್ರಹ್ಮ ಕ್ಷತ್ರಿಯಾ ಸಂತ್ಯಜಂತಿ ॥೪೭॥

ಕ್ಷತ್ರಿಯರು ಬ್ರಾಹ್ಮಣರನ್ನು ತ್ಯಜಿಸಿದಾಗ ಅಂತಹ ರಾಜ್ಯದಲ್ಲಿ ಹೋರಿಗಳು ಅಭಿವೃದ್ಧಿಯನ್ನು ಮಾಡುವುದಿಲ್ಲ. ಧೇನುಗಳು ಹಾಲು ಕರೆಯುವುದಿಲ್ಲ. ಮೊಸರಿನ ಪಾತ್ರೆಗಳು ಮಥಿಸಲ್ಪಡುವುದಿಲ್ಲ. ಯಜ್ಞಗಳು ನಡೆಯುವುದಿಲ್ಲ. ಬ್ರಾಹ್ಮಣರ ಪುತ್ರರು ವೇದಾಧ್ಯಯನವನ್ನು ಮಾಡುವುದಿಲ್ಲ.

ನೈಷಾಮುಕ್ಷಾ ವರ್ಧತೇ ಜಾತು ಗೇಹೇ
ನಾಧೀಯತೇ ಸುಪ್ರಜಾ ನೋ ಯಜಂತೇ।
ಅಪಧ್ವಸ್ತಾ ದಸ್ಯುಭೂತಾ ಭವಂತಿ
ಯೇ ಬ್ರಾಹ್ಮಣಾಃ ಕ್ಷತ್ರಿಯಾನ್ ಸಂತ್ಯಜಂತಿ ॥೪೮॥

ಅಲ್ಲಿ ಎತ್ತುಗಳು ಅಭಿವೃದ್ಧಿಯನ್ನು ಹೊಂದುವುದಿಲ್ಲ. ಒಳ್ಳೆಯ ವಂಶದ ಪ್ರಜೆಗಳು ಅಧ್ಯಯನ ಮಾಡುವುದಿಲ್ಲ. ಯಾಗವನ್ನು ಮಾಡುವುದಿಲ್ಲ. ಬ್ರಾಹ್ಮಣರು ಕ್ಷತ್ರಿಯರನ್ನು ತ್ಯಾಗ ಮಾಡಿದರೆ ಪ್ರಜೆಗಳು ಧರ್ಮಮಾರ್ಗದಿಂದ ಧ್ವಸ್ತರಾಗಿ ದಸ್ಯುಗಳಂತೆ ಆಗುತ್ತಾರೆ.

ಏತೌ ಹಿ ನಿತ್ಯಸಂಯುಕ್ತಾವಿತರೇತರಧಾರಣೇ।
ಕ್ಷತ್ರಂ ಹಿ ಬ್ರಹ್ಮಣೋ ಯೋನಿರ್ಯೋನಿಃ ಕ್ಷತ್ರಸ್ಯ ಚ ದ್ವಿಜಾಃ ॥೪೯॥

ಇವೆರಡು ವರ್ಣಗಳೂ ಪರಸ್ಪರಧಾರಣೆಗಾಗಿ ಯಾವಾಗಲೂ ಜೊತೆಗೂಡಿವೆ. ಕ್ಷತ್ರಿಯಯೋನಿಯು ಬ್ರಾಹ್ಮಣಯೋನಿಗೆ ಮೂಲವಾದದು. ಬ್ರಾಹ್ಮಣಯೋನಿಯು ಕ್ಷತ್ರಿಯಯೋನಿಗೆ ಮೂಲವಾದುದು.

ಉಭಾವೇತೌ ನಿತ್ಯಮಭಿಪ್ರಪನ್ನೌ
ಸಂಪ್ರಾಪತುರ್ಮಹತೀಂ ಶ್ರೀಪ್ರತಿಷ್ಠಾಮ್ ।
ತಯೋಃ ಸಂಧಿರ್ಭಿದ್ಯತೇ ಚೇತ್ ಪುರಾಣಃ
ತತಃ ಸರ್ವಂ ಭವತಿ ಹಿ ಸಂಪ್ರಮೂಢಮ್ ॥೫೦॥

ಇವೆರಡು ವರ್ಣಗಳೂ ಪರಸ್ಪರ ಸೌಹಾರ್ದದಿಂದ ಇದ್ದು, ದೊಡ್ಡ ಸಂಪತ್ತನ್ನು ಮತ್ತು ಪ್ರತಿಷ್ಠೆಯನ್ನೂ ಪಡೆದವು. ಪ್ರಾಚೀನಕಾಲದಿಂದ ಬಂದ ಅವರ ಸೌಹಾರ್ದವು ಭಿನ್ನವಾದರೆ ಎಲ್ಲವೂ ಮೋಹವಶವಾಗುತ್ತದೆ.

ನಾತ್ರ ಪ್ಲವಂ ಲಭತೇ ಪಾರಗಾಮೀ
ಮಹಾಗಾಧೇ ನೌರಿವ ಸಂಪ್ರಣುನ್ನಾ ।
ಚಾತುರ್ವರ್ಣ್ಯಂ ಭವತಿ ಚ ಸಂಪ್ರಮೂಢಂ
ತತಃ ಪ್ರಜಾಃ ಕ್ಷಯಸಂಸ್ಥಾ ಭವಂತಿ ॥೫೧॥

ಅಂತಹ ಸ್ಥಳದಲ್ಲಿ ದೊಡ್ಡ ಸಮುದ್ರದಲ್ಲಿ ವಾಯುವಿನಿಂದ ಹೊಡೆಯಲ್ಪಡುವ ನೌಕೆಯಂತೆ ಕಾರ್ಯವನ್ನು ಆರಂಭಿಸಿದ ಯಾವುದೂ ಅಂತವನ್ನು ತಲಪುವುದಿಲ್ಲ. ಚಾತುರ್ವರ್ಣ್ಯದವರು ಬಹಳ ಮೂಢರಾಗುತ್ತಾರೆ. ಅನಂತರ ಪ್ರಜೆಗಳು ಕ್ಷಯವನ್ನು ಹೊಂದುತ್ತಾರೆ.

ಬ್ರಹ್ಮವೃಕ್ಷೋ ರಕ್ಷ್ಯಮಾಣೋ ಮಧು ಹೇಮ ಚ ವರ್ಷತಿ ।
ಅರಕ್ಷ್ಯಮಾಣಃ ಸತತಮಶ್ರು ಪಾಪಂ ಚ ವರ್ಷತಿ ॥೫೨॥

ಬ್ರಹ್ಮವೆಂಬ ವೃಕ್ಷವು ಚೆನ್ನಾಗಿ ರಕ್ಷಿಸಲ್ಪಟ್ಟರೆ ಸುಖಸಂಪತ್ತುಗಳನ್ನು ಮಳೆಗರೆಯುತ್ತದೆ. ರಕ್ಷಿಸದಿದ್ದರೆ ಸತತವಾಗಿ ಕಣ್ಣೀರಿನ ಮತ್ತು ಪಾಪಗಳ ಮಳೆಯನ್ನು ಸುರಿಸುತ್ತದೆ.

ಅಬ್ರಹ್ಮಚಾರೀ ಚರಣಾದಪೇತೋ
ಯದಾ ಬ್ರಹ್ಮಾ ಬ್ರಹ್ಮಣೆ ತ್ರಾಣಮಿಚ್ಛೇತ್ ।

ಉತ್ಪಾದವತ್ ವರ್ಷತಿ ತತ್ರ ದೇವಃ
ತತ್ರಾಭೀಕ್ಷ್ಣಂ ದುಷ್ಪ್ರಭಾಶ್ಚಾವಿಶಂತಿ ॥೫೩॥

ಯಾವಾಗ ಬ್ರಾಹ್ಮಣನು ಕ್ಷತ್ರಿಯನಿಂದ ರಕ್ಷಣೆಯನ್ನು ಬಯಸುವುದಿಲ್ಲವೋ ಅವನು ಬ್ರಾಹ್ಮಣಾಚಾರಹೀನನಾದ ಕ್ಷತ್ರಿಯನಾಗುತ್ತಾನೆ. ಅಲ್ಲಿ ದೇವರು ಉತ್ಪಾತಗಳನ್ನು ಸೃಷ್ಟಿಸುತ್ತಾನೆ. ಅದರಿಂದ ಎಲ್ಲ ಕಡೆಯಲ್ಲಿ ದುಷ್ಪ್ರಭೆಯು ಆವರಿಸುತ್ತದೆ.

ಸ್ತ್ರಿಯಂ ಹತ್ವಾ ಬ್ರಾಹ್ಮಣಂ ವಾಪಿ ಪಾಪಃ
ಸಭಾಯಾಂ ಯತ್ರ ಲಭತೇऽನುವಾದಮ್ ।
ರಾಜ್ಞಃ ಸಕಾಶೇ ನ ಬಿಭೇತಿ ಚಾಪಿ
ತತೋ ಭಯಂ ಜಾಯತೇ ಕ್ಷತ್ರಿಯಸ್ಯ ॥೫೪॥

ಎಲ್ಲಿ ಪಾಪಿಯಾದವನು ಸ್ತ್ರೀಯರನ್ನು ಅಥವಾ ಬ್ರಾಹ್ಮಣರನ್ನು ಕೊಂದು ಸಭೆಯಲ್ಲಿ ರಾಜನ ಭಯವಿಲ್ಲದೇ ಹೊಗಳಿಕೆಯ ಮಾತುಗಳನ್ನು ಕೇಳುತ್ತಾನೆಯೋ ಆಗ ಅಲ್ಲಿ ಕ್ಷತ್ರಿಯನಿಗೆ ಭಯವುಂಟಾಗುತ್ತದೆ.

ಪಾಪೈಃ ಪಾಪೇ ಕ್ರಿಯಮಾಣೇऽತಿವೇಲಂ
ತತೋ ರುದ್ರೋ ಜಾಯತೇ ದೇವ ಏಷಃ ।
ಪಾಪೈಃ ಪಾಪಾ ಸಂಜನಯಂತಿ ರುದ್ರಂ
ತತಃ ಸರ್ವಾನ್ ಸಾಧ್ವಸಾಧೂನ್ ಹಿನಸ್ತಿ ॥೫೫॥

ಪಾಪಿಗಳು ಬಹಳ ಪಾಪಕಾರ್ಯವನ್ನು ಮಾಡಿದರೆ ರೋಗಪರಿಹಾರಕನಾದ ಈ ನಾರಾಯಣನು ಕೋಪಗೊಳ್ಳುತ್ತಾನೆ. ಪಾಪವನ್ನು ಮಾಡುವ ಪಾಪಿಗಳು ಅವನಿಗೆ ಕೋಪವನ್ನುಂಟುಮಾಡಿದಾಗ ಅವನು ಎಲ್ಲಾ ದುಷ್ಟರನ್ನೂ ಸಂಹಾರ ಮಾಡುತ್ತಾನೆ. (ಲಕ್ಷ್ಮಾಲಂಕಾರ)

ಐಲಃ

ಕುತೋ ರುದ್ರಃ ಕೀದೃಶೋ ವಾಪಿ ರುದ್ರಃ
ಸತ್ತ್ವೈಃ ಸತ್ತ್ವಂ ದೃಶ್ಯತೇ ವಧ್ಯಮಾನಮ್ ।

ಏತದ್ ವಿದ್ವನ್ ಕಶ್ಯಪ ಮೇ ಪ್ರಚಕ್ಷ್ವ
ಯತೋ ರುದ್ರೋ ಜಾಯತೇ ದೇವ ಏಷಃ ॥೫೬॥

ಐಲ – ಈ ರುದ್ರನು ಎಲ್ಲಿಯವನು ಮತ್ತು ಎಂತಹವನು? ಪ್ರಜೆಗಳಿಂದ ಪ್ರಜೆಗಳು ವಧಿಸಲ್ಪಡುವುದು ಮಾತ್ರ ಕಾಣುವುದಷ್ಟೇ? ಎಲೈ ವಿದ್ವಾಂಸರಾದ ಕಶ್ಯಪರೇ! ಈ ರುದ್ರನೆನಿಸುವ ನಾರಾಯಣನು ಹೇಗೆ ಅಭಿವ್ಯಕ್ತನಾಗುವನೆಂದು ನನಗೆ ಹೇಳಿ.

ಕಶ್ಯಪಃ

ಆತ್ಮಾ ರುದ್ರೋ ಹೃದಯೇ ಮಾನವಾನಾಂ
ಸ್ವಂ ಸ್ವಂ ದೇಹಂ ಪರದೇಹಂ ಚ ಹಂತಿ।
ವಾತೋತ್ಪಾತ್ಯೈಃ ಸದೃಶಂ ರುದ್ರಮಾಶು-
ರ್ದಾವೈರ್ಜೀಮೂತ್ಯೈಃ ಸದೃಶಂ ರೂಪಮಸ್ಯ ॥೫೭॥

ಕಶ್ಯಪರು – ಈ ರುದ್ರನು ಸರ್ವರ ಅಂತರ್ಯಾಮಿ. ಮಾನವರ ಹೃದಯದಲ್ಲಿ ಇರುತ್ತಾನೆ. ತನಗೆ ಆಶ್ರಯವಾದ ಆ ದೇಹವನ್ನೂ ಮತ್ತು ತನಗೆ ಆಶ್ರಯವಾದ ಇನ್ನೊಂದು ದೇಹವನ್ನೂ ನಾಶ ಮಾಡುತ್ತಾನೆ. ಅವನು ಬಿರುಗಾಳಿಗೆ ಮತ್ತು ಉತ್ಪಾತಗಳಿಗೆ ಸದೃಶನಾದವನು. ಅವನ ರೂಪವು ದಾವಾಗ್ನಿಯ ಮತ್ತು ಮೋಡ-ಗಳ ರೂಪವನ್ನು ಹೋಲುತ್ತದೆ.

ವಾಯುವಿನಂತೆ ಸರ್ವತ್ರ ವ್ಯಾಪ್ತನಾಗಿರುತ್ತಾನೆ. ರೂಪೋಪದ್ರವಕಾರಿಗಳಾದ ದೈತ್ಯರನ್ನು ದಾವಾಗ್ನಿಯಂತೆ ನಾಶಗೊಳಿಸುತ್ತಾನೆ. ಜಗತ್ತಿನ ಉಗ್ರತೆಯನ್ನು ಶಮನ ಮಾಡುವ ಇಂದ್ರಾದಿ ದೇವತೆಗಳಲ್ಲಿ ಇದ್ದು ಮೋಡವು ಮಳೆಯನ್ನು ಸುರಿಸಿದಂತೆ ಬಾಣಗಳ ಮಳೆಯನ್ನು ಸುರಿಸಿ ಅವರಿಗೆ ದೈತ್ಯದಮನಶಕ್ತಿಯನ್ನು ಕೊಡುತ್ತಾನೆ. (ಲಕ್ಷ್ಮಲಂಕಾರ)

ಐಲಃ

ನ ವೈ ವಾತಂ ಪರಿವೃಣೋತಿ ಕಶ್ಚಿ-
ನ್ನ ಜೀಮೂತೋ ವರ್ಷತಿ ನೈವ ದಾವಃ।
ತಥಾऽಯುಕ್ತೋ ದೃಶ್ಯತೇ ಮಾನವೇಷು
ಕಾಮದ್ವೇಷಾದ್ ಬದ್ಧ್ಯತೇ ಮುಚ್ಯತೇ ಚ ॥೫೮॥

ಐಲ – ಯಾರೂ ಅಂತಹ ಬಿರುಗಾಳಿಯಂತಹ ವಾಯುವನ್ನು ಕಾಣುವುದಿಲ್ಲ. ಅಂತಹ ಮೋಡವು ಮಳೆಯನ್ನು ಸುರಿಸುವುದಿಲ್ಲ. ದಾವಾಗ್ನಿಯು ಕಂಡು ಬರುವುದಿಲ್ಲ. ರಾಗದ್ವೇಷಗಳಿಂದ ಜೀವರು ಬಂಧನಕ್ಕೆ ಮತ್ತು ಮೋಕ್ಷಕ್ಕೆ ಒಳಗಾಗುತ್ತಾರೆ. ನೀವು ಹೇಳಿದುದು ಮನುಷ್ಯರಲ್ಲಿ ಅಯುಕ್ತವಾಗಿ ಕಾಣುತ್ತದೆ.

ಕಶ್ಯಪಃ

ಯಥೈವ ಗೇಹೇ ಜಾತವೇದಾಃ ಪ್ರದೀಪ್ತಃ
ಕೃತ್ಸ್ನಂ ಗ್ರಾಮಂ ಪ್ರದಹೇತ್ ಸ ತ್ವರಾವಾನ್।
ವಿಮೋಹನಂ ಕುರುತೇ ದೇವ ಏಷಃ
ತತಃ ಸರ್ವಂ ಸ್ಪೃಶ್ಯತೇ ಪುಣ್ಯಪಾಪೈಃ ॥೫೯॥

ಕಶ್ಯಪರು – ಹೇಗೆ ಮನೆಯಲ್ಲಿ ಜನಿಸಿದ ದೀಪ್ತವಾದ ಅಗ್ನಿಯು ಶೀಘ್ರವಾಗಿ ಸಮಸ್ತಗ್ರಾಮವನ್ನು ಸುಡುತ್ತದೆಯೋ ಅದರಂತೆ ದೇವನಾದ ನಾರಾಯಣನು ಜೀವರಿಗೆ ಮೋಹವನ್ನು ಉಂಟು ಮಾಡುತ್ತಾನೆ. ಅದರಿಂದ ಪರಮಾತ್ಮನಿಂದಲೇ ಎಲ್ಲರೂ ಪುಣ್ಯಪಾಪಗಳ ಸಂಬಂಧವನ್ನು ಪಡೆಯುತ್ತಾರೆ. ನಾನು ಕೇವಲ ದೃಷ್ಟಾಂತರೂಪವಾಗಿ ವಾಯು ಮತ್ತು ದಾವಾಗ್ನಿಗಳನ್ನು ಹೇಳಿದೆನು.

ಐಲಃ

ಯದಿ ದಂಡಃ ಸ್ಪೃಶ್ಯತೇ ಪುಣ್ಯಪಾಪೈಃ
ಪಾಪೈಃ ಪಾಪೇ ಕ್ರಿಯಮಾಣೇऽವಿಶೇಷಾತ್।

ಕಸ್ಯ ಹೇತೋಃ ಸುಕೃತಂ ನಾಮ ಕುರ್ಯಾದ್
ದುಷ್ಕೃತಂ ವಾ ಕಸ್ಯ ಹೇತೋರ್ನ ಕುರ್ಯಾತ್ ॥೬೦॥

ಏಲ– ಪಾಪಿಗಳು ಪಾಪವನ್ನು ಮಾಡಿದರೆ ಅವಿಶೇಷವಾಗಿ ಪುಣ್ಯಪಾಪ-ಗಳರೆಡನ್ನು ಮಾಡಿದವರಿಗೆ ದಂಡದಿಂದ ಶಿಕ್ಷೆ ಉಂಟಾಗುವುದಾದರೆ ಪುಣ್ಯವನ್ನು ಏಕೆ ಮಾಡಬೇಕು? ಪಾಪವನ್ನಾದರೂ ಏಕೆ ಬಿಡಬೇಕು? (ಪಾಪಮಿಶ್ರಿತವಾದ ಪುಣ್ಯವು ಅಪ್ರಯೋಜಕವಾದ್ದರಿಂದ ಪಾಪಮಿಶ್ರಿತವಲ್ಲದ ಕೇವಲ ಪುಣ್ಯವು ಹೇಗೆ ಉಂಟಾ-ಗುತ್ತದೆಂಬುದು ಪ್ರಶ್ನೆಯ ಅಭಿಪ್ರಾಯ - ಲಕ್ಷಾಲಂಕಾರ)

ಕಶ್ಯಪಃ

ಅಸಂತ್ಯಾಗಾತ್ ಪಾಪಕೃತಾಮಪಾಪಾಂ-
ಸ್ತುಲ್ಯೋ ದಂಡಃ ಸ್ಪೃಶ್ಯತೇ ಮಿಶ್ರಭಾವಾತ್ ।
ಶುಷ್ಕೇಣಾರ್ದ್ರಂ ದಹ್ಯತೇ ಮಿಶ್ರಭಾವಾ-
ನ್ನ ಮಿಶ್ರಃ ಸ್ಯಾತ್ ಪಾಪಕೃದ್ಭಿಃ ಕಥಂಚಿತ್ ॥೬೧॥

ಕಶ್ಯಪರು – ಅಸಜ್ಜನರ ಜೊತೆಯಲ್ಲಿ ಬೆರೆಯುವುದರಿಂದ ಪಾಪವನ್ನು ಮಾಡದವರಿಗೂ ಪಾಪಿಗಳ ದರ್ಶನಸ್ಪರ್ಶನಾದಿಗಳಿಂದ ಕ್ಷಣಕ್ಷಣದಲ್ಲಿ ಪಾಪವು ಉಂಟಾಗಿಯೇ ಆಗುತ್ತದೆ. ಆದ್ದರಿಂದ ಅವರಿಗೆ ಪುಣ್ಯವು ವ್ಯರ್ಥವಾಗುತ್ತದೆ. ಆದ್ದ-ರಿಂದ ಪುಣ್ಯವನ್ನು ಸಂಪಾದಿಸಲು ಬಯಸುವವರು ದುರ್ಜನಸಂಗವನ್ನೇ ಬಿಡಬೇಕು ಎಂಬ ಅಭಿಪ್ರಾಯದಿಂದ ಈ ಶ್ಲೋಕವು ಹೊರಟಿದೆ.

ಪಾಪಿಗಳ ಸಹವಾಸವನ್ನು ಬಿಡದಿರುವುದರಿಂದ ಅವರ ಜೊತೆಯಲ್ಲಿ ಮಿಶ್ರಣ-ವನ್ನು ಹೊಂದಿದ ಕಾರಣದಿಂದ ಪಾಪವನ್ನು ಮಾಡದವರಿಗೂ ಸಮಾನವಾದ ದಂಡವುಂಟಾಗುತ್ತದೆ. ಒಣಕಟ್ಟಿಗೆಯ ಜೊತೆಯಲ್ಲಿ ಬೆರೆತ ಹಸಿಯ ಕಟ್ಟಿಗೆಯೂ ಉರಿಯುತ್ತದೆ. ಆದ್ದರಿಂದ ಪಾಪಿಗಳ ಜೊತೆಯಲ್ಲಿ ಯಾವಾಗಲೂ ಮಿಶ್ರಣವನ್ನು ಹೊಂದಬಾರದು.

ಐಲಃ

ಸಾಧ್ವಸಾಧೂನ್ ಧಾರಯತೀಹ ಭೂಮಿಃ
ಸಾಧ್ವಸಾಧೂಂಸ್ತಾಪಯತೀಹ ಸೂರ್ಯಃ।
ಸಾಧ್ವಸಾಧೂನ್ ವಾತಯತೀಹ ವಾಯು-
ರಾಪಸ್ತಥಾ ಸಾಧ್ವಸಾಧೂನ್ ವಹಂತಿ ॥೬೨॥

ಐಲ – ಭೂಮಿಯು ಸಜ್ಜನರನ್ನೂ ಮತ್ತು ಅಸಜ್ಜನರನ್ನೂ ಧರಿಸುತ್ತದೆ. ಸೂರ್ಯನು ಸಜ್ಜನರಿಗೂ ಮತ್ತು ಅಸಜ್ಜನರಿಗೂ ಶಾಖವನ್ನು ಕೊಡುತ್ತಾನೆ. ವಾಯುವು ಸಜ್ಜನರ ಮೇಲೂ ಮತ್ತುಅಸಜ್ಜನರ ಮೇಲೂ ಬೀಸುತ್ತದೆ. ಜಲವು ಸಜ್ಜನರಿಗೂ ಮತ್ತು ಅಸಜ್ಜನರಿಗೂ ಹರಿಯುತ್ತದೆ. (ಪಾಪಿಷ್ಠರ ಸಹವಾಸದಿಂದ ಪುಣ್ಯಾತ್ಮರಿಗೂ ಹಾನಿಯುಂಟಾಗುವುದಾದರೆ ಭೂಮ್ಯಾದಿಗಳು ಏಕೆ ಪಾಪಿಷ್ಠರನ್ನು ಧರಿಸುತ್ತವೆ ಎಂಬುದು ಪ್ರಶ್ನೆಯ ಅಭಿಪ್ರಾಯ)

ಕಶ್ಯಪಃ

ಏವಮಸ್ಮಿನ್ ವರ್ತತೇ ಲೋಕ ಏವ
ನಾಮುತ್ರೈವಂ ವರ್ತತೇ ರಾಜಪುತ್ರ।
ಪ್ರೇತ್ಯೈತಯೋರಂತರವಾನ್ ವಿಶೇಷೋ
ಯೋ ವೈ ಪುಣ್ಯಂ ಚರತೇ ಯಶ್ಚ ಪಾಪಮ್ ॥೬೩॥

ಕಶ್ಯಪರು – ಎಲೈ ರಾಜಪುತ್ರನೇ! ಈ ಲೋಕದಲ್ಲಿ ಹೀಗೆಯೇ ನಡೆಯುತ್ತದೆ. ಆದರೆ ಪರಲೋಕದಲ್ಲಿ ಹೀಗೆ ನಡೆಯುವುದಿಲ್ಲ. ಮರಣಾನಂತರದಲ್ಲಿ ಪುಣ್ಯವನ್ನು ಮಾಡಿದವನಿಗೂ ಮತ್ತು ಪಾಪವನ್ನು ಮಾಡಿದವನಿಗೂ ವಿಶೇಷವಾದ ವ್ಯತ್ಯಾಸ-ವಿರುತ್ತದೆ.

ಪುಣ್ಯಸ್ಯ ಲೋಕೋ ಮಧುಮಾನ್ ಘೃತಾರ್ಚಿ-
ರ್ಹಿರಣ್ಯಜ್ಯೋತಿರಮೃತಸ್ಯ ನಾಭಿಃ।

ತತ್ರ ಪ್ರೇತ್ಯ ಮೋದತೇ ಪುಣ್ಯಕಾರೀ
ನ ತತ್ರ ಮೃತ್ಯುರ್ನ ಜರಾ ನೋತ ದುಃಖಮ್ ॥೬೪॥

ಪುಣ್ಯದಿಂದ ಸಂಪಾದಿಸಲ್ಪಡುವ ಲೋಕವು ಸುಖಮಯವೂ, ಸತತಪ್ರಕಾಶದಿಂದ ಕೂಡಿರುವುದೂ, ಸುವರ್ಣಮಯವಾದ ಜ್ಯೋತಿಯುಳ್ಳದ್ದೂ, ಅಮೃತಕ್ಕೆ ಆಶ್ರಯವೂ ಆಗಿರುತ್ತದೆ. ಪುಣ್ಯವನ್ನು ಮಾಡಿದವನು ಮರಣಾನಂತರದಲ್ಲಿ ಅಲ್ಲಿ ಸಂತೋಷ ಪಡೆಯುತ್ತಾನೆ. ಅಲ್ಲಿ ಮೃತ್ಯುವಾಗಲೀ ಮುಪ್ಪಾಗಲೀ ದುಃಖವಾಗಲೀ ಇರುವುದಿಲ್ಲ. (ಇದು ಮೋಕ್ಷದ ವರ್ಣನೆ - ಲಕ್ಷ್ಯಲಂಕಾರ)

ಪಾಪಸ್ಯ ಲೋಕೋ ನಿರಯೋಽಪ್ರಕಾಶೋ
ನಿತ್ಯದುಃಖಂ ಶೋಕಭೂಯಿಷ್ಠಮೇವ।
ತತ್ರಾತ್ಮಾನಂ ಶೋಚತೇ ಪಾಪಕರ್ಮಾ
ಬಹ್ವೀಃ ಸಮಾಃ ಪ್ರಪತನ್ನಪ್ರತಿಷ್ಠಃ ॥೬೫॥

ಪಾಪದಿಂದ ಸಂಪಾದಿಸಲ್ಪಡುವ ಲೋಕವು ನರಕರೂಪವಾದದ್ದು. ಕತ್ತಲೆರೂಪವಾಗಿರುತ್ತದೆ. ನಿತ್ಯದುಃಖ ಮತ್ತು ಶೋಕಪೂರ್ಣವಾಗಿರುತ್ತದೆ. ಪಾಪಕರ್ಮವನ್ನು ಮಾಡಿದವನು ಅಲ್ಲಿ ಯಾವ ನೆಲೆಯೂ ಇಲ್ಲದೇ ಅನೇಕಾನೇಕ ವರ್ಷಗಳ ಕಾಲ ಶೋಕಪಡುತ್ತಾನೆ. (ಇದು ಅಂಧಂತಮಸ್ಸಿನ ವರ್ಣನೆ - ಲಕ್ಷ್ಯಲಂಕಾರ).

ಮಿಥೋ ಭೇದಾದ್ ಬ್ರಾಹ್ಮಣಕ್ಷತ್ರಿಯಾಣಾಂ
ಪ್ರಜಾ ದುಃಖಂ ದುಃಸಹಂ ಚಾವಿಶಂತಿ।
ಏವಂ ಜ್ಞಾತ್ವಾ ಕಾರ್ಯ ಏವೇಹ ನಿತ್ಯಂ
ಪುರೋಹಿತೋ ನೈಕವಿದ್ಯೋ ನೃಪೇಣ ॥೬೬॥

ಬ್ರಾಹ್ಮಣಕ್ಷತ್ರಿಯರಿಗೆ ಪರಸ್ಪರ ಭೇದವುಂಟಾದರೆ ಪ್ರಜೆಗಳು ದುಃಸಹವಾದ ದುಃಖವನ್ನು ಹೊಂದುತ್ತಾರೆ. ಇದನ್ನು ತಿಳಿದು ಯಾವಾಗಲೂ ರಾಜನಾದವನು ಅನೇಕ ವಿದ್ಯೆಗಳನ್ನು ಬಲ್ಲವನನ್ನೇ ಪುರೋಹಿತನನ್ನಾಗಿ ಮಾಡಬೇಕು.

ತಂ ಚೈವಾನ್ವಭಿಷಿಂಚೇತ ತಥಾ ಧರ್ಮೋ ವಿಧೀಯತೇ।
ಅಗ್ರ್ಯೋ ಹಿ ಬ್ರಾಹ್ಮಣಃ ಪ್ರೋಕ್ತಃ ಸರ್ವಸ್ಯೈವೇಹ ಧರ್ಮತಃ ॥೬೭॥

ಅಂತಹವನನ್ನು ಪುರೋಹಿತನ ಸ್ಥಾನದಲ್ಲಿ ಅನುಕೂಲವಾಗಿ ಅಭಿಷೇಕ ಮಾಡಬೇಕು. ಹಾಗೆ ಮಾಡುವುದು ಧರ್ಮವನ್ನು ಅಭಿವೃದ್ಧಿಪಡಿಸುತ್ತದೆ. ಧರ್ಮದ ದೃಷ್ಟಿಯಿಂದ ಬ್ರಾಹ್ಮಣನು ಎಲ್ಲರಿಗಿಂತ ಶ್ರೇಷ್ಠನೆಂದು ಹೇಳಲ್ಪಡುತ್ತಾನೆ.

ಪೂರ್ವಂ ಹಿ ಬ್ರಾಹ್ಮಣಾಃ ಸೃಷ್ಟಾ ಇತಿ ಧರ್ಮವಿದೋ ವಿದುಃ।
ಜ್ಯೇಷ್ಠೇನಾಭಿಜನೇನಾಸ್ಯ ಪ್ರಾಪ್ತಂ ಸರ್ವಂ ಯದುತ್ತಮಮ್ ॥೬೮॥

ಬ್ರಾಹ್ಮಣನು ಮೊದಲು ಸೃಷ್ಟನಾದವನು ಎಂದು ಧರ್ಮಜ್ಞರು ಹೇಳುತ್ತಾರೆ. ಜ್ಯೇಷ್ಠವಾದ ಜನ್ಮದಿಂದ ಬ್ರಾಹ್ಮಣನು ಭೂಮಿಯಲ್ಲಿರುವ ಉತ್ತಮವಾದುದೆಲ್ಲವನ್ನೂ ಪಡೆಯುತ್ತಾನೆ.

ತಸ್ಮಾನ್ಮಾನ್ಯಶ್ಚ ಪೂಜ್ಯಶ್ಚ ಬ್ರಾಹ್ಮಣಃ ಪ್ರಸೃತಾಗ್ರಭುಕ್।
ಸರ್ವಂ ಶ್ರೇಷ್ಠಂ ವರಿಷ್ಠಂ ಚ ನಿವೇದ್ಯಂ ತಸ್ಯ ಧರ್ಮತಃ ॥೬೯॥

ಆದ್ದರಿಂದ ಘೃತ ಮಧು ಮೊದಲಾದವುಗಳ ಅಗ್ರಭೋಜಿಯಾದ ಬ್ರಾಹ್ಮಣನು ಮಾನ್ಯನೂ ಪೂಜ್ಯನೂ ಆದವನು. ಶ್ರೇಷ್ಠವಾದ ಮತ್ತು ಉತ್ತಮವಾದ ಎಲ್ಲ ವಸ್ತುಗಳನ್ನೂ ಧರ್ಮದ ದೃಷ್ಟಿಯಿಂದ ಅವನಿಗೆ ನಿವೇದಿಸಬೇಕು.

ಅವಶ್ಯಮೇತತ್ ಕರ್ತವ್ಯಂ ರಾಜ್ಞಾ ಬಲವತಾऽಪಿ ಹಿ।
ಬ್ರಹ್ಮ ವರ್ಧಯತಿ ಕ್ಷತ್ರಂ ಕ್ಷತ್ರತೋ ಬ್ರಹ್ಮ ವರ್ಧತೇ।
ರಾಜ್ಞಃ ಸರ್ವಸ್ಯ ಚಾನ್ಯಸ್ಯ ಸ್ವಾಮೀ ರಾಜಪುರೋಹಿತಃ ॥೭೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚಸಪ್ತತಿತಮೋऽಧ್ಯಾಯಃ ॥೭೫॥

ರಾಜನು ಬಲಿಷ್ಠನಾದರೂ ಅವಶ್ಯವಾಗಿ ಇದನ್ನು ಮಾಡಲೇ ಬೇಕು. ಬ್ರಹ್ಮಕುಲವು ಕ್ಷತ್ರಿಯಕುಲವನ್ನು ಅಭಿವೃದ್ಧಿ ಪಡಿಸುತ್ತದೆ. ಕ್ಷತ್ರಿಯಕುಲವು ಬ್ರಹ್ಮಕುಲವನ್ನು

ಅಭಿವೃದ್ಧಿ ಪಡಿಸುತ್ತದೆ. ರಾಜನ ಉಳಿದ ಎಲ್ಲ ವಸ್ತುಗಳಿಗೂ ರಾಜಪುರೋಹಿತನು ಸ್ವಾಮಿಯಾಗುತ್ತಾನೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೭೫ನೆಯ ಅಧ್ಯಾಯವು ಮುಗಿಯಿತು

—0—

೭೬. ಎಪ್ಪತ್ತಾರನೆಯ ಅಧ್ಯಾಯ

ಮುಚುಕುಂದಚರಿತಕಥನ, ಕ್ಷತ್ರಿಯನ ಬ್ರಹ್ಮಾಧೀನತ್ವಸಮರ್ಥನ

ಯುಧಿಷ್ಠಿರಃ

ಬ್ರಹ್ಮಕ್ಷತ್ರಸ್ಯ ಸಾಮರ್ಥ್ಯಂ ಕಥಿತಂ ತೇ ಪಿತಾಮಹ।
ಪುರೋಹಿತಪ್ರಭಾವಶ್ಚ ಲಕ್ಷಣಂ ಚ ಪುರೋಧಸಃ ॥೧॥

ಇದಾನೀಂ ಶ್ರೋತುಮಿಚ್ಛಾಮಿ ಬ್ರಹ್ಮಕ್ಷತ್ರವಿನಿರ್ಣಯಮ್।
ಬ್ರಹ್ಮಕ್ಷತ್ರಂ ಹಿ ಸರ್ವಸ್ಯ ಕಾರಣಂ ಜಗತಃ ಪರಮ್।
ಯೋಗಕ್ಷೇಮೌ ಹಿ ರಾಷ್ಟ್ರಸ್ಯ ತಾಭ್ಯಾಮಾಯತ್ತ ಏವ ಹಿ ॥೨॥

ಯುಧಿಷ್ಠಿರ – ಪಿತಾಮಹನೇ! ನೀವು ಬ್ರಾಹ್ಮಣ ಮತ್ತು ಕ್ಷತ್ರಿಯರ ಸಾಮರ್ಥ್ಯವನ್ನು ಪುರೋಹಿತರ ಪ್ರಭಾವ ಮತ್ತು ಲಕ್ಷಣಗಳನ್ನು ಹೇಳಿದ್ದೀರಿ. ಈಗ ಬ್ರಾಹ್ಮಣರ ಮತ್ತು ಕ್ಷತ್ರಿಯರ ಬಲಾಬಲಗಳ ನಿರ್ಣಯವನ್ನು ತಿಳಿಯಲು ಇಚ್ಛೆಪಡುತ್ತೇನೆ. ಜಗತ್ತಿಗೆ ಬ್ರಾಹ್ಮಣಕ್ಷತ್ರಿಯಸಮುದಾಯವು ಎಲ್ಲದಕ್ಕೂ ಶ್ರೇಷ್ಠವಾದ ಕಾರಣವಾಗಿದೆ. ರಾಷ್ಟ್ರದ ಯೋಗಕ್ಷೇಮಗಳು ಅವರಿಬ್ಬರನ್ನು ಅವಲಂಬಿಸಿವೆಯಷ್ಟೆ.

ಭೀಷ್ಮಃ

ಯೋಗಕ್ಷೇಮೌ ಹಿ ರಾಷ್ಟ್ರಸ್ಯ ರಾಜನ್ಯಾಯತ್ತ ಉಚ್ಯತೇ।
ಯೋಗಕ್ಷೇಮಶ್ಚ ರಾಜ್ಞೋऽಪಿ ಸಮಾಯತ್ತಃ ಪುರೋಹಿತೇ ॥೩॥

ಯತ್ರಾದೃಷ್ಟಂ ಭಯಂ ಬ್ರಹ್ಮ ಪ್ರಜಾನಾಂ ಶಮಯತ್ಯುತ।
ದೃಷ್ಟಂ ಚ ರಾಜಾ ಬಾಹುಭ್ಯಾಂ ತದ್ ರಾಷ್ಟ್ರಂ ಸುಖಮೇಧತೇ ॥೪॥

ಭೀಷ್ಮರು – ರಾಷ್ಟ್ರದ ಯೋಗಕ್ಷೇಮವು ರಾಜನನ್ನು ಅವಲಂಬಿಸಿದೆ ಎಂದು ಹೇಳಲ್ಪಡುತ್ತದೆ. ರಾಜನ ಯೋಗಕ್ಷೇಮವಾದರೋ ಪುರೋಹಿತನನ್ನು ಅವಲಂಬಿಸಿರುತ್ತದೆ. ಎಲ್ಲಿ ಬ್ರಾಹ್ಮಣರು ಪ್ರಜೆಗಳ ಭೂತಪ್ರೇತಾದಿಭಯಗಳನ್ನು ಪರಿಹಾರ ಮಾಡುತ್ತಾರೋ ದೃಷ್ಟವಾದ ಭಯಗಳನ್ನು ರಾಜನು ಬಾಹುಬಲದಿಂದ ಪರಿಹಾರ ಮಾಡುತ್ತಾನೆಯೋ ಅಲ್ಲಿ ರಾಷ್ಟ್ರವು ಸುಖವನ್ನು ಹೊಂದುತ್ತದೆ.

ಅತ್ರಾಪ್ಯುದಾರಹಂತೀಮಮಿತಿಹಾಸಂ ಪುರಾತನಮ್।
ಮುಚುಕುಂದಸ್ಯ ಸಂವಾದಂ ರಾಜ್ಞೋ ವೈಶ್ರವಣಸ್ಯ ಚ ॥೫॥

ಈ ವಿಷಯದಲ್ಲಿಯೂ ಸಹ ಮುಚುಕುಂದನ ಮತ್ತು ರಾಜನಾದ ಕುಬೇರನ ಸಂವಾದರೂಪವಾದ ಈ ಇತಿಹಾಸವನ್ನು ಹೇಳುತ್ತಾರೆ.

ಮುಚುಕುಂದೋ ವಿಜಿತ್ಯೇಮಾಂ ಪೃಥಿವೀಂ ಪೃಥಿವೀಪತಿಃ।
ಜಿಜ್ಞಾಸಮಾನಃ ಸ್ವಬಲಮಭ್ಯಯಾದಲಕಾಧಿಪಮ್ ॥೬॥

ರಾಜನಾದ ಮುಚುಕುಂದನು ಈ ಭೂಮಿಯನ್ನು ಗೆದ್ದು ತನ್ನ ಬಲವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಅಲಕಾಧಿಪತಿಯಾದ ಕುಬೇರನ ಮೇಲೆ ದಂಡೆತ್ತಿ ಹೋದನು.

ತತೋ ವೈಶ್ರವಣೋ ರಾಜಾ ರಕ್ಷಾಂಸಿ ಸಮವಾಸೃಜತ್।
ತೇ ಬಲಾನ್ಯವಮೃದ್ನಂತಃ ಪ್ರಾಚರಂಸ್ತಸ್ಯ ನೈರ್ಋತಾಃ ॥೭॥

ರಾಜನಾದ ಕುಬೇರನು ರಾಕ್ಷಸರನ್ನು ನಿಯೋಜಿಸಿದನು. ಆ ರಾಕ್ಷಸರು ಮುಚುಕುಂದನ ಸೈನ್ಯದಲ್ಲಿ ಸಂಚರಿಸುತ್ತಾ, ಆ ಸೈನ್ಯವನ್ನು ನಾಶಗೊಳಿಸಿದರು.

ಸ ಹನ್ಯಮಾನೇ ಸೈನ್ಯೇ ಸ್ವೇ ಮುಚುಕುಂದೋ ನರಾಧಿಪಃ।
ಗರ್ಹಯಾಮಾಸ ವಿದ್ವಾಂಸಂ ಪುರೋಹಿತಮರಿಂದಮಃ ॥೮॥

ತನ್ನ ಸೈನ್ಯವು ನಾಶವನ್ನು ಹೊಂದುತ್ತಿರಲು ಅರಿಂದಮನಾದ ಮುಚುಕುಂದ ರಾಜನು ವಿದ್ವಾಂಸನಾದ ತನ್ನ ಪುರೋಹಿತನನ್ನು ನಿಂದಿಸಿದನು.

ತತ ಉಗ್ರಂ ತಪಸ್ತಪ್ತ್ವಾ ವಸಿಷ್ಠೋ ಬ್ರಹ್ಮವಿತ್ತಮಃ।
ರಕ್ಷಾಂಸ್ಯಪಾವಧೀತ್ ತತ್ರ ಪಂಥಾನಂ ಚಾಪ್ಯವಿಂದತ ॥೯॥

ಆಗ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ವಸಿಷ್ಠರು ಉಗ್ರವಾದ ತಪಸ್ಸನ್ನು ಮಾಡಿ, ರಾಕ್ಷಸರನ್ನು ಸಂಹರಿಸಿ, ಅಲ್ಲಿ ಮಾರ್ಗವನ್ನು ಮಾಡಿಕೊಟ್ಟರು.

ತತೋ ವೈಶ್ರವಣೋ ರಾಜಾ ಮುಚುಕುಂದಮಗರ್ಹಯತ್।
ವಧ್ಯಮಾನೇಷು ಸೈನ್ಯೇಷು ವಚನಂ ಚೇದಮಬ್ರವೀತ್ ॥೧೦॥

ತನ್ನ ಸೈನ್ಯವು ವಧಿಸಲ್ಪಡುತ್ತಿರಲು ರಾಜನಾದ ಕುಬೇರನು ಮುಚುಕುಂದನನ್ನು ನಿಂದಿಸಿ ಈ ಮಾತನ್ನು ಆಡಿದನು.

ತ್ವತ್ತೋ ಹಿ ಬಲಿನಃ ಪೂರ್ವೇ ರಾಜಾನಃ ಸಪುರೋಹಿತಾಃ।
ನ ಚೈವಂ ಸಮವರ್ತಂಸ್ತೇ ಯಥಾ ತ್ವಮಿಹ ವರ್ತಸೇ ॥೧೧॥

ತೇ ಖಿಲ್ವಪಿ ಕೃತಾಸ್ತ್ರಾಶ್ಚ ಬಲವಂತಶ್ಚ ಭೂಮಿಪಾಃ।
ಆಗಮ್ಯ ಪರ್ಯುಪಾಸಂತೇ ಮಾಮೀಶಂ ಸುಖದುಃಖಯೋಃ ॥೧೨॥

ನಿನಗಿಂತ ಪೂರ್ವಿಕರಾದ ಪುರೋಹಿತಸಹಿತರಾಜರು ನಿನಗಿಂತ ಬಲಿಷ್ಠರಾಗಿದ್ದರು. ಅವರು ನೀನು ಈಗ ನಡೆದುಕೊಳ್ಳುತ್ತಿರುವಂತೆ ನಡೆದುಕೊಳ್ಳಲಿಲ್ಲ. ಆ ರಾಜರು ಅಸ್ತ್ರವಿದ್ಯೆಯನ್ನು ಹೊಂದಿ ಬಲಿಷ್ಠರಾಗಿದ್ದರು. ನನ್ನ ಬಳಿಗೆ ಬಂದು ಸುಖದುಃಖಗಳಿಗೆ ಒಡೆಯನಾದ ನನ್ನನ್ನು ಉಪಾಸನೆ ಮಾಡುತ್ತಿದ್ದರು.

ಯದ್ಯಸ್ತಿ ಬಾಹುವೀರ್ಯಂ ತೇ ತದ್ ದರ್ಶಯಿತುಮರ್ಹಸಿ।
ಕಿಂ ಬ್ರಾಹ್ಮಣಬಲೇನ ತ್ವಮತಿಮಾತ್ರಂ ಪ್ರವರ್ತಸೇ ॥೧೩॥

ನಿನಗೆ ಬಾಹುಬಲವಿದ್ದರೆ ಅದನ್ನು ತೋರಿಸು; ಬ್ರಾಹ್ಮಣರ ಬಲವನ್ನು ಆಶ್ರಯಿಸಿ ಏಕೆ ಬಹಳವಾಗಿ ಪ್ರವೃತ್ತಿಯನ್ನು ಮಾಡುತ್ತಿದ್ದೀಯೆ? (ಎಂದು ಕೇಳಿದನು)

ಮುಚುಕುಂದಸ್ತತಃ ಕ್ರುದ್ಧಃ ಪ್ರತ್ಯುವಾಚ ಧನೇಶ್ವರಮ್ ।
ನ್ಯಾಯಪೂರ್ವಮಸಂರಬ್ಧಮಸಂಭ್ರಾಂತಮಿದಂ ವಚಃ ॥೧೪॥

ಆಗ ಕೋಪಗೊಂಡ ಮುಚುಕುಂದನು ಧನೇಶ್ವರನನ್ನು ಕುರಿತು ನ್ಯಾಯಸಹಿತವಾದ ಶಾಂತವಾದ ಭ್ರಾಂತವಲ್ಲದ ಈ ಮಾತನ್ನು ಉತ್ತರರೂಪವಾಗಿ ಹೇಳಿದನು.

ಬ್ರಹ್ಮಕ್ಷತ್ರಮಿದಂ ಸೃಷ್ಟಮೇಕಯೋನಿ ಸ್ವಯಂಭುವಾ ।
ಪೃಥಗ್ ಬಲವಿಧಾನಂ ಚ ತಲ್ಲೋಕಂ ಪರಿರಕ್ಷತಿ ॥೧೫॥

ಬ್ರಹ್ಮದೇವರು ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು ಒಂದೇ ಯೋನಿಯವರನ್ನಾಗಿ ಸೃಷ್ಟಿಮಾಡಿದ್ದಾರೆ. ಅವರ ಬಲಗಳು ಬೇರೆ ಬೇರೆ ರೀತಿಯವು. ಆ ಬಲವು ಲೋಕವನ್ನು ರಕ್ಷಿಸುತ್ತವೆ.

ತಪೋಮಂತ್ರಬಲಂ ನಿತ್ಯಂ ಬ್ರಾಹ್ಮಣೇಷು ಪ್ರತಿಷ್ಠಿತಮ್ ।
ಅಸ್ತ್ರಬಾಹುಬಲಂ ನಿತ್ಯಂ ಕ್ಷತ್ರಿಯೇಷು ಪ್ರತಿಷ್ಠಿತಮ್ ॥೧೬॥

ಬ್ರಾಹ್ಮಣರಲ್ಲಿ ನಿತ್ಯವೂ ತಪಸ್ಸು ಮತ್ತು ಮಂತ್ರಬಲವು ಪ್ರತಿಷ್ಠಿತವಾಗಿದೆ. ಕ್ಷತ್ರಿಯರಲ್ಲಿ ಅಸ್ತ್ರಬಲ ಮತ್ತು ಬಾಹುಬಲಗಳು ಪ್ರತಿಷ್ಠಿತವಾಗಿವೆ.

ತಾಭ್ಯಾಂ ಸಂಭೂಯ ಕರ್ತವ್ಯಂ ಪ್ರಜಾನಾಂ ಪರಿಪಾಲನಮ್ ।
ತಥಾ ಚ ಮಾಂ ಪ್ರವರ್ತಂತಂ ಗರ್ಹಯಸ್ಯಲಕಾಧಿಪ ॥೧೭॥

ಅವರಿಬ್ಬರೂ ಸೇರಿ ಪ್ರಜೆಗಳ ಪಾಲನೆಯನ್ನು ಮಾಡಬೇಕು. ಎಲೈ ಅಲಕಾಧಿಪತಿಯೇ! ಆ ರೀತಿಯಲ್ಲಿ ಪ್ರವೃತ್ತನಾದ ನನ್ನನ್ನು ಏಕೆ ನಿಂದಿಸುತ್ತಿರುವೆ? (ಎಂದು ಕೇಳಿದನು.)

ತತೋಽಬ್ರವೀತ್ ವೈಶ್ರವಣೋ ರಾಜಾನಂ ಸಪುರೋಹಿತಮ್ ।
ನಾಹಂ ರಾಜ್ಯಮನಿರ್ದಿಷ್ಟಂ ಕಸ್ಮೈಚಿದ್ ವಿದಧಾಮ್ಯುತ ॥೧೮॥

ಆಗ ಕುಬೇರನು ಪುರೋಹಿತಸಹಿತನಾದ ಆ ರಾಜನನ್ನು ಕುರಿತು ಹೇಳಿದನು –

ನಾನು ಯಾರಿಗೆ ಎಷ್ಟು ನಿರ್ದಿಷ್ಟವಾಗಿದೆಯೋ ಅಷ್ಟೇ ರಾಜ್ಯವನ್ನು ಕೊಡುವೆನು. ಅದಕ್ಕಿಂತ ಅಧಿಕವಾಗಿ ಕೊಡುವುದಿಲ್ಲ.

ನಾಚ್ಛಿಂದೇ ಚಾಪಿ ನಿರ್ದಿಷ್ಟಮಿತಿ ಜಾನೀಹಿ ಪಾರ್ಥಿವ।
ಪ್ರಶಾಧಿ ಪೃಥಿವೀಂ ವೀರ ಮದ್ದತ್ತಾಮಖಿಲಾಮಿಮಾಮ್ ॥೧೯॥

ನಿರ್ದಿಷ್ಟವಾದುದನ್ನು ನಾನು ಕಡಿಮೆಯೂ ಮಾಡುವುದಿಲ್ಲ ಎಂದು ತಿಳಿಯುವವನಾಗು. ಎಲೈ ರಾಜನೇ! ವೀರನೇ! ನಾನು ನೀಡಿದ ಅಖಿಲವಾದ ಈ ಭೂಮಿಯನ್ನು ಆಳುವವನಾಗು.

ಮುಚುಕುಂದಃ

ನಾಹಂ ರಾಜ್ಯಂ ಭವದ್ದತ್ತಂ ಭೋಕ್ತುಮಿಚ್ಛಾಮಿ ಪಾರ್ಥಿವ।
ಬಾಹುವೀರ್ಯಜಿತಂ ರಾಜ್ಯಮಶ್ನೀಯಾಮಿತಿ ಕಾಮಯೇ ॥೨೦॥

ಮುಚುಕುಂದ – ಎಲೈ ರಾಜನೇ! ನೀನು ನೀಡಿದ ರಾಜ್ಯವನ್ನು ನಾನು ಭೋಗಿಸಲು ಬಯಸುವುದಿಲ್ಲ. ನನ್ನ ಬಾಹುಬಲದಿಂದ ಸಂಪಾದಿಸಿದ ರಾಜ್ಯವನ್ನೇ ನಾನು ಭೋಗಿಸಬೇಕೆಂದು ಆಶಿಸುತ್ತೇನೆ.

ಭೀಷ್ಮಃ

ತತೋ ವೈಶ್ರವಣೋ ರಾಜಾ ವಿಸ್ಮಯಂ ಪರಮಂ ಯಯೌ।
ಕ್ಷತ್ರಧರ್ಮೇ ಸ್ಥಿತಂ ದೃಷ್ಟ್ವಾ ಮುಚುಕುಂದಮಸಂಭ್ರಮಮ್ ॥೨೧॥

ಭೀಷ್ಮರು – ಆಗ ಮುಚುಕುಂದನು ಯಾವ ಭ್ರಾಂತಿಯಿಲ್ಲದೇ ಕ್ಷತ್ರಿಯ ಧರ್ಮ-ದಲ್ಲಿ ನಿರತನಾಗಿರುವುದನ್ನು ನೋಡಿ ರಾಜನಾದ ಕುಬೇರನು ಬಹಳ ವಿಸ್ಮಯವನ್ನು ಹೊಂದಿದನು.

ತತೋ ರಾಜಾ ಮುಚುಕುಂದಃ ಸೋಽನ್ವಶಾಸದ್ ವಸುಂಧರಾಮ್।
ಬಾಹುವೀರ್ಯಾರ್ಜಿತಾಂ ಸಮ್ಯಕ್ ಕ್ಷತ್ರಧರ್ಮಮನುವ್ರತಃ ॥೨೨॥

ಅನಂತರ ರಾಜನಾದ ಮುಚುಕುಂದನು ಕ್ಷತ್ರಿಯಧರ್ಮವನ್ನು ಪಾಲಿಸುವವನಾಗಿ ಬಾಹುವೀರ್ಯದಿಂದ ಸಂಪಾದಿಸಿದ ಭೂಮಿಯನ್ನು ಚೆನ್ನಾಗಿ ಆಳಿದನು.

ಏವಂ ಯೋ ಬ್ರಹ್ಮವಿದ್ ರಾಜಾ ಬ್ರಹ್ಮಪೂರ್ವಂ ಪ್ರವರ್ತತೇ।
ಜಯತ್ಯವಿಜಿತಾಮುರ್ವೀಂ ಯಶಶ್ಚ ಮಹದಶ್ನುತೇ ॥೨೩॥

ಹೀಗೆ ಯಾವ ರಾಜನು ಬ್ರಾಹ್ಮಣರ ಸಾಮರ್ಥ್ಯವನ್ನು ತಿಳಿದು ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಪ್ರವೃತ್ತಿಮಾಡುತ್ತಾನೆಯೋ ಅವನು ಜಯಿಸದಿದ್ದ ಭೂಮಿಯನ್ನೂ ಜಯಿಸುತ್ತಾನೆ. ದೊಡ್ಡ ಕೀರ್ತಿಯನ್ನು ಪಡೆಯುತ್ತಾನೆ.

ನಿತ್ಯೋದಕೋ ಬ್ರಾಹ್ಮಣಃ ಸ್ಯಾನ್ನಿತ್ಯಶಸ್ತ್ರಶ್ಚ ಕ್ಷತ್ರಿಯಃ।
ತಯೋರ್ಹಿ ಸರ್ವಮಾಯತ್ತಂ ಯತ್ಕಿಂಚಿಜ್ಜಗತೀಗತಮ್ ॥೨೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಟ್‌ಸಪ್ತತಿತಮೋऽಧ್ಯಾಯಃ ॥೭೬॥

ಬ್ರಾಹ್ಮಣನು ನಿತ್ಯವೂ ಜಪ ತರ್ಪಣಶೀಲನಾಗಬೇಕು. ಕ್ಷತ್ರಿಯನು ನಿತ್ಯವೂ ಶಸ್ತ್ರಶೀಲನಾಗಬೇಕು. ಈ ಭೂಮಿಯಲ್ಲಿರುವ ಎಲ್ಲವೂ ಅವರಿಬ್ಬರನ್ನು ಅವಲಂಬಿಸಿದೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭೬ನೆಯ ಅಧ್ಯಾಯವು ಮುಗಿಯಿತು

—೦—

೭೭. ಸಪ್ತಸಪ್ತತಿತಮೋऽಧ್ಯಾಯಃ

ಯುಧಿಷ್ಠಿರನನ್ನು ಕುರಿತು ರಾಜ್ಯಸ್ವೀಕಾರವು ಧರ್ಮವೆಂದು ಪ್ರತಿಪಾದನೆ

ಯುಧಿಷ್ಠಿರಃ

ಯಯಾ ವೃತ್ತ್ಯಾ ಮಹೀಪಾಲೋ ವಿವರ್ಧಯತಿ ಮಾನವಾನ್।
ಪುಣ್ಯಾಂಶ್ಚ ಲೋಕಾನ್ ಜಯತಿ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ! ರಾಜನು ಯಾವ ನಡತೆಯಿಂದ ಪ್ರಜೆಗಳಿಗೆ

ಅಭಿವೃದ್ಧಿಯನ್ನು ಮಾಡಿ ಪುಣ್ಯಲೋಕಗಳನ್ನು ಪಡೆಯುತ್ತಾನೆ ಎಂಬುದನ್ನು ನನಗೆ ಹೇಳು.

ಭೀಷ್ಮಃ

ದಾನಶೀಲೋ ಭವೇದ್ ರಾಜಾ ಯಜ್ಞಶೀಲಶ್ಚ ಭಾರತ।
ಉಪವಾಸತಪಃಶೀಲಃ ಪ್ರಜಾನಾಂ ಪಾಲನೇ ರತಃ ॥೨॥

ಭೀಷ್ಮರು – ಭಾರತನೇ! ಪ್ರಜೆಗಳ ಪಾಲನೆಯಲ್ಲಿ ರತನಾದ ರಾಜನು ದಾನಶೀಲನಾಗಿರಬೇಕು. ಯಜ್ಞಶೀಲನಾಗಿರಬೇಕು. ಉಪವಾಸ-ತಪಃಶೀಲನಾಗಿರಬೇಕು.

ಸರ್ವಾಶ್ಚೈವ ಪ್ರಜಾ ನಿತ್ಯಂ ರಾಜಾ ಧರ್ಮೇಣ ಪಾಲಯೇತ್।
ಉತ್ಥಾನೇನ ಪ್ರದಾನೇನ ಪೂಜಯೇಚ್ಚೈವ ಧಾರ್ಮಿಕಾನ್ ॥೩॥

ರಾಜನು ಎಲ್ಲಾ ಪ್ರಜೆಗಳನ್ನೂ ಧರ್ಮದಿಂದ ಪಾಲಿಸಬೇಕು. ಧಾರ್ಮಿಕರು ಬಂದಾಗ ಎದ್ದು ಅವರಿಗೆ ದಾನವನ್ನು ನೀಡಿ ಅವರನ್ನು ಪೂಜಿಸಬೇಕು.

ರಾಜ್ಞಾ ಹಿ ಪೂಜಿತೋ ಧರ್ಮಸ್ತತಃ ಸರ್ವತ್ರ ಪೂಜ್ಯತೇ।
ಯದ್ಯದಾಚರತೇ ರಾಜಾ ತತ್ ಪ್ರಜಾನಾಂ ಹಿ ರೋಚತೇ ॥೪॥

ರಾಜನಿಂದ ಪೂಜಿಸಲ್ಪಡುವ ಧರ್ಮವು ಅನಂತರ ಎಲ್ಲರಿಂದಲೂ ಪೂಜಿಸಲ್ಪಡುತ್ತದೆ. ರಾಜನು ಮಾಡುವುದೆಲ್ಲವೂ ಪ್ರಜೆಗಳಿಗೆ ಇಷ್ಟವಾಗುತ್ತದೆ.

ನಿತ್ಯಮುದ್ಯತದಂಡಶ್ಚ ಭವೇನ್ಮೃತ್ಯುರಿವಾರಿಷು।
ನಿಹನ್ಯಾತ್ ಸರ್ವತೋ ದಸ್ಯೂನ್ನ ಕಾಮಾತ್ ಕಸ್ಯಚಿತ್ ಕ್ಷಮೇತ್ ॥೫॥

ಉದ್ಯತದಂಡನಾಗಿ ಶತ್ರುಗಳ ವಿಷಯದಲ್ಲಿ ಮೃತ್ಯುವಿನಂತಿರಬೇಕು. ದಸ್ಯುಗಳನ್ನು ಸರ್ವತ್ರ ನಾಶಗೊಳಿಸಬೇಕು. ಪಕ್ಷಪಾತವನ್ನು ಮಾಡಿ ಯಾರಿಗೂ ಕ್ಷಮೆಯನ್ನು ನೀಡಬಾರದು.

ಯಂ ಹಿ ಧರ್ಮಂ ಚರಂತೀಹ ಪ್ರಜಾ ರಾಜ್ಞಾಸುರಕ್ಷಿತಾಃ।
ಚತುರ್ಥಂ ತಸ್ಯ ಧರ್ಮಸ್ಯ ರಾಜಾ ಭಾರತ ವಿಂದತಿ ॥೬॥

ರಾಜನಿಂದ ಸುರಕ್ಷಿತರಾದ ಪ್ರಜೆಗಳು ಈ ಲೋಕದಲ್ಲಿ ಯಾವ ಧರ್ಮವನ್ನು ಮಾಡುತ್ತಾರೆಯೋ, ಎಲೈ ಭಾರತನೇ! ರಾಜನು ಆ ಧರ್ಮದ ನಾಲ್ಕನೆಯ ಒಂದು ಭಾಗದ ಫಲವನ್ನು ಹೊಂದುತ್ತಾನೆ.

ಯದಧೀತೇ ಯದ್ ಯಜತೇ ಯದ್ ದದಾತಿ ಯದರ್ಚತಿ।
ರಾಜಾ ಚತುರ್ಥಭಾಕ್ ತಸ್ಯ ಪ್ರಜಾ ಧರ್ಮೇಣ ಪಾಲಯನ್ ॥೭॥

ಪ್ರಜೆಗಳನ್ನು ಧರ್ಮದಿಂದ ಪಾಲಿಸುವ ರಾಜನು ಪ್ರಜೆಗಳು ಮಾಡಿದ ಅಧ್ಯಯನದ, ಯಾಗದ, ದಾನದ, ಪೂಜೆಯ ಫಲದ ನಾಲ್ಕನೆಯ ಒಂದು ಅಂಶವನ್ನು ಪಡೆಯುತ್ತಾನೆ.

ಯದ್ ರಾಷ್ಟ್ರೇಽಕುಶಲಂ ಕಿಂಚಿದ್ ರಾಜ್ಞೋಽರಕ್ಷಯತಃ ಪ್ರಜಾಃ।
ಚತುರ್ಥಂ ತಸ್ಯ ಪಾಪಸ್ಯ ರಾಜಾ ಭಾರತ ವಿಂದತಿ।
ಅಪ್ಯಾಹುಃ ಸರ್ವಮೇವೇತಿ ಭೂಯೋಽರ್ಧಮಿತಿ ನಿಶ್ಚಯಃ ॥೮॥

ಪ್ರಜೆಗಳನ್ನು ರಕ್ಷಿಸದ ರಾಜನ ರಾಷ್ಟ್ರದಲ್ಲಿ ಯಾವ ಅನ್ಯಾಯವು ನಡೆಯುತ್ತದೆಯೋ ಎಲೈ ಭಾರತನೇ! ರಾಜನು ಆ ಪಾಪದ ನಾಲ್ಕನೆಯ ಒಂದು ಭಾಗಕ್ಕೆ ಭಾಗಿಯಾಗುತ್ತಾನೆ. ಕೆಲವರು ಪೂರ್ಣವಾಗಿಯೇ ಭಾಗಿಯಾಗುವನೆಂದು ಹೇಳುತ್ತಾರೆ. ಆದರೆ ಆ ಪಾಪದ ಅರ್ಧಭಾಗಕ್ಕೆ ಭಾಗಿಯಾಗುವನೆಂಬುದು ನಿಶ್ಚಿತವಾದುದು.

ಕರ್ಮಣಃ ಪೃಥಿವೀಪಾಲ ನೃಶಂಸೋಽನೃತವಾಗಪಿ।
ತಾದೃಶಾತ್ ಕಿಲ್ಬಿಷಾತ್ ರಾಜಾ ಶೃಣು ಯೇನ ಪ್ರಮುಚ್ಯತೇ ॥೯॥

ಎಲೈ ರಾಜನೇ! ಕ್ರೂರಿಯೂ ಅನೃತವಚನನೂ ಆದ ರಾಜನು ಅಂತಹ ಪಾಪಕರ್ಮದಿಂದ ನಿರ್ಮುಕ್ತನಾಗುವ ಬಗೆಯನ್ನು ಹೇಳು.

ಪ್ರತ್ಯಾಹರ್ತುಮಶಕ್ಯಂ ಸ್ಯಾದ್ ಧನಂ ಚೋರೈರ್ಹೃತಂ ಯದಿ।
ಸ್ವಕೋಶಾತ್ ತತ್ ಪ್ರದೇಯಂ ಸ್ಯಾದಶಕ್ತೇನೋಪಜೀವತಾ ॥೧೦॥

ಪ್ರಜೆಗಳ ಧನವು ಅಪಹರಿಸಲ್ಪಟ್ಟಾಗ ರಾಜನು ಅದನ್ನು ಹಿಂದೆ ಪಡೆಯಲು ಸಾಧ್ಯವಾಗದಿದ್ದರೆ ಪ್ರಜೆಗಳ ಕರವನ್ನು ಉಪಜೀವಿಸುವ ರಾಜನು ತನ್ನ ಕೋಶದಿಂದ ಆ ಧನವನ್ನು ಪ್ರಜೆಗಳಿಗೆ ಕೊಡಬೇಕು.

ಸರ್ವವರ್ಣೈಃ ಸದಾ ರಕ್ಷ್ಯಂ ಬ್ರಹ್ಮಸ್ವಂ ಬ್ರಾಹ್ಮಣಾಸ್ತಥಾ।
ನ ಸ್ಥೇಯಂ ವಿಷಯೇ ತೇಷು ಯೋಽಪಕುರ್ಯಾದ್ ದ್ವಿಜಾತಿಷು ॥೧೧॥

ಎಲ್ಲ ವರ್ಣದವರೂ ಬ್ರಾಹ್ಮಣರನ್ನೂ ಮತ್ತು ಬ್ರಾಹ್ಮಣರ ಸ್ವತ್ತನ್ನೂ ಸಂರಕ್ಷಿಸಬೇಕು. ಬ್ರಾಹ್ಮಣರಿಗೆ ಅಪಕಾರವನ್ನು ಮಾಡುವ ರಾಜನ ದೇಶದಲ್ಲಿ ವಾಸಿಸಬಾರದು.

ಬ್ರಹ್ಮಸ್ವೇ ರಕ್ಷ್ಯಮಾಣೇ ಹಿ ಸರ್ವಂ ಭವತಿ ರಕ್ಷಿತಮ್।
ತೇಷಾಂ ಪ್ರಸಾದೇ ನಿರ್ವೃತ್ತೇ ಕೃತಕೃತ್ಯೋ ಭವೇನ್ನೃಪಃ ॥೧೨॥

ಬ್ರಹ್ಮಸ್ವವು ರಕ್ಷಿತವಾದರೆ ಎಲ್ಲವೂ ರಕ್ಷಿತವಾಗುತ್ತದೆ. ಬ್ರಾಹ್ಮಣರು ಪ್ರಸನ್ನರಾದರೆ ರಾಜನು ಕೃತಕೃತ್ಯನಾಗುತ್ತಾನೆ.

ಪರ್ಜನ್ಯಮಿವ ಭೂತಾನಿ ಮಹಾದ್ರುಮಮಿವ ದ್ವಿಜಾಃ।
ನರಾಸ್ತಮುಪಜೀವಂತಿ ನೃಪಂ ಸರ್ವಾರ್ಥಸಾಧಕಮ್ ॥೧೩॥

ಎಲ್ಲ ಪ್ರಾಣಿಗಳೂ ಮತ್ತು ಸಸ್ಯಗಳೂ ಮಳೆಯನ್ನು ಉಪಜೀವಿಸುವಂತೆ, ಪಕ್ಷಿಗಳು ಮಹಾವೃಕ್ಷವನ್ನು ಉಪಜೀವಿಸುವಂತೆ ಮನುಷ್ಯರು ಸರ್ವಾರ್ಥಸಾಧಕನಾದ ರಾಜನನ್ನು ಉಪಜೀವಿಸುತ್ತಾರೆ.

ನಹಿ ಕಾಮಾತ್ಮನಾ ರಾಜ್ಞಾ ಸತತಂ ಶಠಬುದ್ಧಿನಾ।
ನೃಶಂಸೇನಾತಿಲುಬ್ಧೇನ ಶಕ್ಯಾಃ ಪಾಲಯಿತುಂ ಪ್ರಜಾಃ ॥೧೪॥

ಕಾಮಾತ್ಮನೂ, ಶಾಠ್ಯಬುದ್ಧಿಯುಳ್ಳವನೂ, ಕ್ರೂರಿಯೂ, ಲೋಭಿಯೂ ಆದ ರಾಜನಿಂದ ಪ್ರಜಾಪಾಲನೆಯು ಸಾಧ್ಯವಿಲ್ಲ.

ಯುಧಿಷ್ಠಿರಃ

ನಾಹಂ ಶಾಸ್ತುಂ ಸುಖಾನ್ವೇಷೀ ರಾಜ್ಯಮಿಚ್ಛಾಮ್ಯಪಿ ಕ್ಷಣಮ್ ।
ಧರ್ಮಾರ್ಥಂ ರೋಚಯೇ ರಾಜ್ಯಂ ಧರ್ಮಶಾಸ್ತ್ರ ನ ವಿದ್ಯತೇ ॥೧೫॥

ಯುಧಿಷ್ಠಿರ – ನಾನು ಸುಖವನ್ನು ಪಡೆಯಲು ಬಯಸಿ ರಾಜ್ಯವನ್ನು ಪಾಲನೆ ಮಾಡಲು ಒಂದು ಕ್ಷಣವೂ ಇಚ್ಛಿಸುವುದಿಲ್ಲ. ಧರ್ಮದ ಸಲುವಾಗಿ ರಾಜ್ಯವನ್ನು ಆಶಿಸಬೇಕು. ಆದರೆ ರಾಜ್ಯಪಾಲನೆಯಲ್ಲಿ ಧರ್ಮವಿಲ್ಲ.

ತದಲಂ ಮಮ ರಾಜ್ಯೇನ ಯತ್ರ ಧರ್ಮೋ ನ ವಿದ್ಯತೇ ।
ವನಮೇವ ಗಮಿಷ್ಯಾಮಿ ತಸ್ಮಾದ್ ಧರ್ಮಚಿಕೀರ್ಷಯಾ ॥೧೬॥

ಧರ್ಮವಿಲ್ಲದಿರುವ ರಾಜ್ಯಪಾಲನೆಯು ನನಗೆ ಬೇಡ. ಆದ್ದರಿಂದ ಧರ್ಮಾಚರಣೆಯನ್ನು ಬಯಸಿ ನಾನು ಕಾಡಿಗೇ ಹೋಗುವೆನು.

ತತ್ರ ಮೇಧ್ಯೇಷ್ವರಣ್ಯೇಷು ನ್ಯಸ್ತದಂಡೋ ಜಿತೇಂದ್ರಿಯಃ ।
ಧರ್ಮಮಾರಾಧಯಿಷ್ಯಾಮಿ ಮುನಿರ್ಮೂಲಫಲಾಶನಃ ॥೧೭॥

ಪವಿತ್ರವಾದ ಅರಣ್ಯಗಳಲ್ಲಿ ಎಲ್ಲ ದಂಡವನ್ನೂ ತ್ಯಜಿಸಿ, ಜಿತೇಂದ್ರಿಯನಾಗಿ, ಮೂಲಫಲ ಆಹಾರವುಳ್ಳವನಾಗಿ ಧರ್ಮವನ್ನು ಆರಾಧಿಸುವೆನು.

ಭೀಷ್ಮಃ

ವೇದಾಹಂ ತವ ಯಾ ಬುದ್ಧಿರಾನೃಶಂಸ್ಯಗುಣೈವ ಸಾ ।
ನ ಚ ಶುದ್ಧಾನೃಶಂಸ್ಯೇನ ಶಕ್ಯಂ ಮಹದುಪಾಸಿತುಮ್ ॥೧೮॥

ಭೀಷ್ಮರು – ನಿನ್ನ ಬುದ್ಧಿಯನ್ನು ನಾನು ತಿಳಿದಿದ್ದೇನೆ. ಅದು ನಿನ್ನ ಮಾರ್ದವ ಗುಣ. ಶುದ್ಧ ಮಾರ್ದವಗುಣದಿಂದ ದೊಡ್ಡದನ್ನು ಸಂಪಾದಿಸಲು ಸಾಧ್ಯವಿಲ್ಲ.

ಅಪಿ ತು ತ್ವಾಮೃದುಂ ದಾಂತಮನ್ಯಾಯ್ಯಮತಿಧಾರ್ಮಿಕಮ್ ।
ಕ್ಲೀಬಂ ಧರ್ಮಘೃಣಾಯುಕ್ತಂ ನ ಲೋಕೋ ಬಹು ಮನ್ಯತೇ ॥೧೯॥

ಕ್ಷತ್ರಿಯಧರ್ಮದಿಂದ ರಹಿತನಾಗಿ, ಅತಿಧಾರ್ಮಿಕನಾಗಿ, ಮೃದುವಾಗಿ, ಇಂದ್ರಿಯನಿಗ್ರಹವುಳ್ಳವನಾಗಿ, ಧರ್ಮದ ಆಸೆಯಿಂದ ನಪುಂಸಕನಂತಿರುವ ನಿನ್ನನ್ನು ಲೋಕವು ಗೌರವಿಸುವುದಿಲ್ಲ. (ಲಕ್ಷಾಲಂಕಾರ)

ರಾಜಧರ್ಮಾನವೇಕ್ಷಸ್ವ ಪಿತೃಪೈತಮಹೋಚಿತಾನ್ ।
ನೈತದ್ ರಾಜ್ಞಾಮಥೋ ವೃತ್ತಂ ಯಥಾ ತ್ವಂ ಸ್ಥಾತುಮಿಚ್ಛಸಿ ॥೨೦॥

ಪಿತೃಪಿತಾಮಹರು ಅನುಸರಿಸಿದ ರಾಜಧರ್ಮಗಳನ್ನು ನೋಡು; ನೀನು ಹೇಗೆ ಮಾಡಬೇಕೆಂದು ಬಯಸುತ್ತೀಯೋ ಅದು ರಾಜರ ನಡತೆಯಲ್ಲ.

ನ ಹಿ ವೈಕ್ಲವ್ಯಸಂಸೃಷ್ಟಮಾನೃಶಂಸ್ಯಮಿಹಾಸ್ಥಿತಃ ।
ಪ್ರಜಾಪಾಲನಸಂಭೂತಂ ಪ್ರಾಪ್ತಾ ಧರ್ಮಫಲಂ ಹ್ಯಸಿ ॥೨೧॥

ಮನಸ್ಸಿನಲ್ಲಿ ಭಯಗ್ರಸ್ತನಾಗಿ ಮಾರ್ದವವನ್ನು ಹೊಂದಿದ ರಾಜನಾದ ನೀನು ಪ್ರಜಾಪಾಲನೆಯಿಂದ ಉಂಟಾಗುವ ಧರ್ಮಫಲವನ್ನು ಹೊಂದುವುದಿಲ್ಲ.

ನ ಹ್ಯೇತಾಮಾಶಿಷಂ ಪಾಂಡುರ್ನ ಚ ಕುಂತ್ಯನ್ವಯಾಚತ ।
ನ ಚೈತಾಂ ಪ್ರಾಜ್ಞತಾಂ ತಾತ ಯಯಾ ಚರಸಿ ಮೇಧಯಾ ॥೨೨॥

ಪಾಂಡುವಾಗಲೀ, ಅಥವಾ ಕುಂತಿಯಾಗಲೀ ಇಂತಹ ಒಂದು ಆಶಂಸನೆಯನ್ನು ಮಾಡಲಿಲ್ಲ. ಎಲೈ ಪ್ರೀತಿಪಾತ್ರನೇ! ನೀನು ನಿನ್ನ ಬುದ್ಧಿಯಿಂದ ಏನು ಮಾಡಲು ನಿರ್ಧರಿಸಿದ್ದೀಯೋ ಅದು ವಿವೇಕವಲ್ಲ. (ಅದನ್ನೂ ಪಾಂಡುಕುಂತಿಯರು ಆಶಿಸಲಿಲ್ಲ).

ಶೌರ್ಯಂ ಬಲಂ ಚ ಸತ್ತ್ವಂ ಚ ಪಿತಾ ತವ ಸದಾಬ್ರವೀತ್ ।
ಮಾಹಾತ್ಮ್ಯಂ ಬಲಮೌದಾರ್ಯಂ ತವ ಕುಂತ್ಯನ್ವಯಾಚತ ॥೨೩॥

ನಿನ್ನ ತಂದೆಯು ಶೌರ್ಯ, ಬಲ ಮತ್ತು ಧೈರ್ಯಗಳನ್ನು ಯಾವಾಗಲೂ ಹೇಳುತ್ತಿದ್ದನು. ಕುಂತಿಯು ಮಾಹಾತ್ಮ್ಯವನ್ನು, ಬಲವನ್ನು ಮತ್ತು ಔದಾರ್ಯವನ್ನು ಬೇಡುತ್ತಿದ್ದಳು.

ನಿತ್ಯಂ ಸ್ವಾಹಾ ಸ್ವಧಾ ನಿತ್ಯಮುಭೇ ಮಾನುಷದೈವತೇ।
ಪುತ್ರೇಷ್ವಾಶಾಸತೇ ನಿತ್ಯಂ ಪಿತರೋ ದೈವತಾನಿ ಚ ॥೨೪॥

ಪಿತೃಗಳು ಮತ್ತು ದೇವತೆಗಳು ತಮ್ಮ ಪುತ್ರರಲ್ಲಿ ಯಾವಾಗಲೂ ದೇವತಾ-ಸಂಬಂಧಿಯಾದ ಸ್ವಾಹಾಕಾರಗಳನ್ನು ಪಿತೃಸಂಬಂಧಿಯಾದ ಸ್ವಧಾಕಾರಗಳನ್ನು ಆಶಿಸುತ್ತಾರೆ.

ದಾನಮಧ್ಯಯನಂ ಯಜ್ಞಃ ಪ್ರಜಾನಾಂ ಪರಿಪಾಲನಮ್।
ಧರ್ಮಮೇತಮಧರ್ಮಂ ವಾ ಜನ್ಮನ್ಯೇವಾಭ್ಯಜಾಯಥಾಃ ॥೨೫॥

ದಾನ, ಅಧ್ಯಯನ, ಯಜ್ಞ, ಪ್ರಜಾಪಲನೆ ಇವು ಧರ್ಮವಾಗಲೀ ಅಥವಾ ಅಧರ್ಮವಾಗಲೀ ನೀನು ಜನ್ಮದಿಂದಲೇ ಅದನ್ನು ಪಡೆದು ಹುಟ್ಟಿದ್ದೀಯೆ.

ಕಾಲೇ ಧುರಿ ನಿಯುಕ್ತಾನಾಂ ವಹತಾಂ ಭಾರ ಆಹಿತೇ।
ಸೀದತಾಮಪಿ ಕೌಂತೇಯ ನ ಕೀರ್ತಿರವಸೀದತಿ ॥೨೬॥

ಎಲೈ ಕೌಂತೇಯನೇ! ಭಾರವನ್ನು ಹೊತ್ತು ನಡೆಯುವ ರಾಜರು ಕಾಲಕ್ರಮದಲ್ಲಿ ನಾಶವನ್ನು ಹೊಂದಿದರೂ ಅವರ ಕೀರ್ತಿಯು ನಾಶವನ್ನು ಹೊಂದುವುದಿಲ್ಲ.

ಸಮಂತತೋ ವಿನಿಯತೋ ವಹತ್ಯಸ್ಖಲಿತೋ ಹಿ ಯಃ।
ನಿರ್ದೋಷಕರ್ಮವಚನಾತ್ ಸಿದ್ಧಿಃ ಕರ್ಮಣ ಏವ ಸಾ ॥೨೭॥

ಎಲ್ಲ ರೀತಿಯಿಂದಲೂ ನಿಯಮಬದ್ಧನಾಗಿ ಎಡವದೇ ಅಂತಹ ಪ್ರಜಾಪಾಲನೆಯ ಭಾರವನ್ನು ಹೊತ್ತು ನಡೆಯುವ ರಾಜನು ಶತ್ರುಶಿಕ್ಷಣಾದಿಗಳು ನಿರ್ದೋಷವಾದವುಗಳು ಎಂಬ ವಚನದ ಬಲದಿಂದ ತಾನು ಮಾಡುವ ಆ ಕರ್ಮದಿಂದ ಸಿದ್ಧಿಯನ್ನು ಪಡೆಯುತ್ತಾನೆ.

ನೈಕಾಂತವಿನಿಪಾತೇನ ವಿಚಚಾರೇಹ ಕಶ್ಚನ।
ಧರ್ಮೀ ಗೃಹೀ ವಾ ರಾಜಾ ವಾ ಬ್ರಹ್ಮಚಾರ್ಯಥ ವಾ ಪುನಃ ॥೨೮॥

ಧರ್ಮವನ್ನು ಆಚರಿಸುವ ರಾಜನಾಗಲೀ, ಗೃಹಸ್ಥನಾಗಲೀ ಅಥವಾ ಬ್ರಹ್ಮಚಾರಿ -ಯಾಗಲೀ ಒಂದೇ ಕಾರ್ಯವನ್ನು ಮಾಡುತ್ತಾ ಮರಣದವರೆಗೂ ಹಠದಿಂದ ಅದರಲ್ಲಿಯೇ ಉಳಿದಿರುವುದಿಲ್ಲ.

ಅಲ್ಪಂ ತು ಸಾಧುಭೂಯಿಷ್ಠಂ ಯತ್ ಕರ್ಮೋದಾರಮೇವ ತತ್।
ಕೃತಮೇವಾಕೃತಾಚ್ಛ್ರೇಯೋ ನ ಪಾಪೀಯೋಽಸ್ತ್ಯಕರ್ಮಣಃ ॥೨೯॥

ಸತ್ಫಲವನ್ನು ಕೊಡುವ ಉದಾರವಾದ ಕರ್ಮವು ಅಲ್ಪವಾದರೂ ಕರ್ಮವನ್ನು ಮಾಡದಿರುವುದಕ್ಕಿಂತ ಅದು ಶ್ರೇಷ್ಠವಾದುದು. ಕರ್ಮವನ್ನು ಮಾಡದಿರುವುದಕ್ಕಿಂತ ಪಾಪತರವಾದುದು ಇನ್ನೊಂದು ಇಲ್ಲ.

ಯದಾ ಕುಲೀನೋ ಧರ್ಮಜ್ಞಃ ಪ್ರಾಪ್ನೋತ್ಯೈಶ್ವರ್ಯಮುತ್ತಮಮ್।
ಯೋಗಕ್ಷೇಮಸ್ತದಾ ರಾಜನ್ ಕುಶಲಾಯೈವ ಕಲ್ಪತೇ ॥೩೦॥

ಎಲೈ ರಾಜನೇ! ಕುಲೀನನೂ ಧರ್ಮಜ್ಞನೂ ಆದ ರಾಜನು ಒಳ್ಳೆಯ ಐಶ್ವ-ರ್ಯವನ್ನು ಪಡೆದರೆ ಆಗ ಪ್ರಜೆಗಳ ಯೋಗಕ್ಷೇಮವೆಲ್ಲವೂ ಕುಶಲವೇ ಆಗುತ್ತವೆ.

ದಾನೇನಾನ್ಯಂ ಬಲೇನಾನ್ಯಮನ್ಯಂ ಸೂನೃತಯಾ ಗಿರಾ।
ಸರ್ವತಃ ಪರಿಗೃಹ್ಣೀಯಾತ್ ರಾಜ್ಯಂ ಪ್ರಾಪ್ಯೇಹ ಧಾರ್ಮಿಕಃ ॥೩೧॥

ಧಾರ್ಮಿಕನಾದ ರಾಜನು ರಾಜ್ಯವನ್ನು ಪಡೆದು ಕೆಲವರನ್ನು ದಾನದಿಂದಲೂ, ಕೆಲವರನ್ನು ಬಲದಿಂದಲೂ, ಕೆಲವರನ್ನು ಒಳ್ಳೆಯ ಮಾತುಗಳಿಂದಲೂ ಎಲ್ಲ ಕಡೆಗಳಿಂದಲೂ ಸಂಗ್ರಹಿಸಬೇಕು.

ಯೇ ಹಿ ವೈದ್ಯಾಃ ಕುಲೇ ಜಾತಾ ಅವೃತ್ತಿಭಯಪೀಡಿತಾಃ।
ಪ್ರಾಪ್ಯತೃಪ್ತಾಃ ಪ್ರತಿಷ್ಠಂತಿ ಧರ್ಮಃ ಕೋಽಭ್ಯಧಿಕಸ್ತತಃ ॥೩೨॥

ಸತ್ಕುಲದಲ್ಲಿ ಪ್ರಸೂತರಾದ ಜೀವನೋಪಾಯವಿಲ್ಲದೆ ಭಯದಿಂದ ಪೀಡಿತರಾದ ವಿದ್ಯಾವಂತರು ಎಲ್ಲಿ ತಾವು ಪಡೆಯಬೇಕಾದುದನ್ನು ಯದೃಚ್ಛಯಾ ಪಡೆದು ತೃಪ್ತರಾಗಿರುತ್ತಾರೆಯೋ ರಾಜನಿಗೆ ಅದಕ್ಕಿಂತ ದೊಡ್ಡ ಧರ್ಮವು ಯಾವುದು?

ಯುಧಿಷ್ಠಿರಃ

ಕಿಂ ತತಃ ಪರಮಂ ಸ್ವರ್ಗ್ಯಂ ಕಾ ತತಃ ಪ್ರೀತಿರುತ್ತಮಾ।
ಕಿಂ ತತಃ ಪರಮೈಶ್ವರ್ಯಂ ಬ್ರೂಹಿ ಮೇ ಯದಿ ಮನ್ಯಸೇ ॥೩೩॥

ಯುಧಿಷ್ಠಿರ – ವೈರಾಗ್ಯಕ್ಕಿಂತಲೂ ಸ್ವರ್ಗಸಾಧಕವಾದುದು ಯಾವುದು? ವೈರಾಗ್ಯಕ್ಕಿಂತಲೂ ಸುಖ(ಪ್ರೀತಿ)ಜನಕವಾದುದು ಯಾವುದು? ವೈರಾಗ್ಯಕ್ಕಿಂತಲೂ ದೊಡ್ಡ ಐಶ್ವರ್ಯವ್ಯಾವುದು? ಅಂತಹದು ಏನಾದರೂ ಇದ್ದರೆ ನನಗೆ ಹೇಳು?

ಭೀಷ್ಮಃ

ಯಸ್ಮಿನ್ ಪ್ರತಿಷ್ಠಿತಾಃ ಸಮ್ಯಕ್ ಕ್ಷೇಮಂ ವಿಂದಂತಿ ತತ್ಕ್ಷಣಮ್।
ಸ ಸ್ವರ್ಗಜಿತ್ತಮೋऽಸ್ಮಾಕಂ ಸತ್ಯಮೇತದ್ ಬ್ರವೀಮಿ ತೇ ॥೩೪॥

ಭೀಷ್ಮರು – ಯಾವನು ರಾಜ್ಯಪಾಲನೆಯನ್ನು ಮಾಡಿದರೆ ಪ್ರಜೆಗಳು ತಮ್ಮ ಭಯವನ್ನು ಕಳೆದುಕೊಂಡು ತತ್ಕ್ಷಣದಲ್ಲಿಯೇ ಕ್ಷೇಮವನ್ನು ಹೊಂದುತ್ತಾರೆಯೋ ಅಂತಹ ರಾಜನು ನನ್ನ ದೃಷ್ಟಿಯಲ್ಲಿ ಸ್ವರ್ಗವನ್ನು ಜಯಿಸಿದವರಲ್ಲಿ ಅತ್ಯಂತ ಶ್ರೇಷ್ಠನಾದವನು. ಇದನ್ನು ಸತ್ಯವಾಗಿ ನಿನಗೆ ಹೇಳುತ್ತಿದ್ದೇನೆ.

ತ್ವಮೇವ ಪ್ರೀತಿಮಾಂಸ್ತಸ್ಮಾತ್ ಕುರೂಣಾಂ ಕುರುಸತ್ತಮ।
ಭವ ರಾಜಾ ಜಯ ಸ್ವರ್ಗಂ ಸತೋ ರಕ್ಷಾಸತೋ ಜಹಿ ॥೩೫॥

ಎಲೈ ಕುರುಸತ್ತಮನೇ! ನೀನೇ ಸಂತೋಷದಿಂದ ಕುರುಗಳಿಗೆ ರಾಜನಾಗು. ಸ್ವರ್ಗವನ್ನು ಜಯಿಸು. ಸಜ್ಜನರನ್ನು ರಕ್ಷಿಸು. ದುಷ್ಟರನ್ನು ವಿನಾಶಗೊಳಿಸು.

ಅನು ತ್ವಾತಾತ ಜೀವಂತು ಸುಹೃದಃ ಸಾಧುಭಿಃ ಸಹ।
ಪರ್ಜನ್ಯಮಿವ ಭೂತಾನಿ ಸ್ವಾದುದ್ರುಮಮಿವಾಂಡಜಾಃ ॥೩೬॥

ಎಲೈ ಪ್ರೀತಿಪಾತ್ರನೇ! ಎಲ್ಲ ಪ್ರಾಣಿಗಳು ಮತ್ತು ಸಸ್ಯಗಳು ಪರ್ಜನ್ಯನನ್ನು ಉಪಜೀವಿಸುವಂತೆ, ಪಕ್ಷಿಗಳು ಒಳ್ಳೆಯ ಹಣ್ಣಿನ ಮರವನ್ನು ಉಪಜೀವಿಸುವಂತೆ, ಸುಹೃಜ್ಜನರು ಮತ್ತು ಸಜ್ಜನರು ನಿನ್ನನ್ನು ಉಪಜೀವಿಸಲಿ.

ಧೃಷ್ಟಂ ಶೂರಂ ಪ್ರಹರ್ತಾರಮನೃಶಂಸಂ ಜಿತೇಂದ್ರಿಯಮ್।
ವತ್ಸಲಂ ಸಂವಿಭಕ್ತಾರಮನು ಜೀವಂತು ತ್ವಾಂ ಜನಾಃ ॥೩೭॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತಸಪ್ತತಿತಮೋऽಧ್ಯಾಯಃ ॥೭೭॥

ಧೈರ್ಯಶಾಲಿಯೂ, ಶೂರನೂ, ದುಷ್ಟರನ್ನು ಶಿಕ್ಷಿಸುವವನೂ, ಮೃದುವೂ, ಜಿತೇಂದ್ರಿಯನೂ, ಪ್ರಜಾವತ್ಸಲನೂ, ಐಶ್ವರ್ಯವನ್ನು ಪ್ರಜೆಗಳಿಗೆ ಹಂಚಿ ಭೋಗಿಸುವವನೂ ಆದ ನಿನ್ನನ್ನು ಪ್ರಜೆಗಳು ಉಪಜೀವಿಸಲಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭೭ನೆಯ ಅಧ್ಯಾಯವು ಮುಗಿಯಿತು

—0—

೭೮. ಎಪ್ಪತ್ತೆಂಟನೆಯ ಅಧ್ಯಾಯ

ಬ್ರಾಹ್ಮಣರ ಪ್ರಭೇದಕಥನ

ಯುಧಿಷ್ಠಿರಃ

ಸ್ವಕರ್ಮಣ್ಯಪರೇ ಯುಕ್ತಾಸ್ತಥೈವಾನ್ಯೇ ವಿಕರ್ಮಣಿ।
ತೇಷಾಂ ವಿಶೇಷಮಾಚಕ್ಷ್ವ ಬ್ರಾಹ್ಮಣಾನಾಂ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ ಕೆಲವರು ಬ್ರಾಹ್ಮಣರು ಸ್ವಕರ್ಮದಲ್ಲಿಯೂ, ಇನ್ನು ಕೆಲವರು ವಿಕರ್ಮದಲ್ಲಿಯೂ ನಿರತರಾಗಿರುತ್ತಾರೆ. ಅಂತಹ ಬ್ರಾಹ್ಮಣರ ವಿಶೇಷವನ್ನು ಹೇಳು.

ಭೀಷ್ಮಃ

ವಿದ್ಯಾಲಕ್ಷಣಸಂಪನ್ನಾಃ ಸರ್ವತ್ರಾಮ್ನಾಯದರ್ಶಿನಃ।
ಏತೇ ಬ್ರಹ್ಮಸಮಾ ರಾಜನ್ ಬ್ರಾಹ್ಮಣಾಃ ಪರಿಕೀರ್ತಿತಾಃ ॥೨॥

ಭೀಷ್ಮರು – ಎಲೈ ರಾಜನೇ! ವಿದ್ಯಾಲಕ್ಷಣಸಂಪನ್ನರಾಗಿ, ಸರ್ವತ್ರ ವೇದಗಳನ್ನು ಪ್ರದರ್ಶಿಸುವ ಬ್ರಾಹ್ಮಣರು ಬ್ರಹ್ಮಸಮರು ಎಂದು ಹೇಳಲ್ಪಡುತ್ತಾರೆ.

ಋಗ್ಯಜುಃಸಾಮಸಂಪನ್ನಾಃ ಸ್ವೇಷು ಕರ್ಮಸ್ವವಸ್ಥಿತಾಃ।
ಏತೇ ದೇವಸಮಾ ರಾಜನ್ ಬ್ರಾಹ್ಮಣಾನಾಂ ಭವಂತ್ಯುತ ॥೩॥

ಋಗ್ಯಜುಃಸಾಮವೇದಸಂಪನ್ನರಾಗಿ ತಮ್ಮ ಕರ್ಮಗಳಲ್ಲಿ ನಿರತರಾದ ಬ್ರಾಹ್ಮಣರು ಎಲೈ ರಾಜನೇ! ದೇವಸಮರಾಗುತ್ತಾರೆ.

ಋತ್ವಿಕ್ ಪುರೋಹಿತೋ ಮಂತ್ರೀ ದೂತೋಽಥಾರ್ಥಾನುಶಾಸಕಃ।
ಏತೇ ಕ್ಷತ್ರಸಮಾ ರಾಜನ್ ಬ್ರಾಹ್ಮಣಾನಾಂ ಭವಂತ್ಯುತ ॥೪॥

ಎಲೈ ರಾಜನೇ! ಋತ್ವಿಕ್, ಪುರೋಹಿತ, ಮಂತ್ರಿ, ದೂತ ಹಾಗೂ ರಾಜನ ಅನುಶಾಸನವನ್ನು ನೆರವೇರಿಸುವವನು ಇವರು ಬ್ರಾಹ್ಮಣರಲ್ಲಿ ಕ್ಷತ್ರಿಯಸಮಾನರಾಗುತ್ತಾರೆ.

ಅಶ್ವಾರೋಹಾ ಗಜಾರೋಹಾ ರಥಿನೋಽಥ ಪದಾತಯಃ।
ಏತೇ ವೈಶ್ಯಸಮಾ ರಾಜನ್ ಬ್ರಾಹ್ಮಣಾನಾಂ ಭವಂತ್ಯುತ ॥೫॥

ಎಲೈ ರಾಜನೇ! ಅಶ್ವಾರೋಹಿಗಳು, ಗಜಾರೋಹಿಗಳು, ರಥಿಕರು, ಪದಾತಿಗಳು ಇವರು ಬ್ರಾಹ್ಮಣರಲ್ಲಿ ವೈಶ್ಯಸಮರಾಗುತ್ತಾರೆ.

ಜನ್ಮಕರ್ಮವಿಹೀನಾ ಯೇ ಕದರ್ಯಾ ಬ್ರಹ್ಮಬಂಧವಃ।
ಏತೇ ಶೂದ್ರಸಮಾ ರಾಜನ್ ಬ್ರಾಹ್ಮಣಾನಾಂ ಭವಂತ್ಯುತ ॥೬॥

ಎಲೈ ರಾಜನೇ! ಜಾತಿಕರ್ಮರಹಿತರಾಗಿ ಕೃಪಣರಾಗಿ ಇರುವ ಬ್ರಹ್ಮಬಂಧುಗಳು ಬ್ರಾಹ್ಮಣರಲ್ಲಿ ಶೂದ್ರಸಮರಾಗುತ್ತಾರೆ.

ಅಶ್ರೋತ್ರಿಯಾಃ ಸರ್ವ ಏವ ಸರ್ವೇ ಚಾನಾಹಿತಾಗ್ನಯಃ।
ತಾನ್ ಸರ್ವಾನ್ ಧಾರ್ಮಿಕೋ ರಾಜಾ ಬಲಿಂ ವಿಷ್ಟಿಂ ಚ ಕಾರಯೇತ್ ॥೭

ಧಾರ್ಮಿಕನಾದ ರಾಜನು ಶ್ರೋತ್ರಿಯರಲ್ಲದ, ಆಹಿತಾಗ್ನಿಗಳಲ್ಲದ ಎಲ್ಲ ಬ್ರಾಹ್ಮಣರಿಂದಲೂ ಕಪ್ಪವನ್ನು ಮತ್ತು ಬಿಟ್ಟಿ ಕೆಲಸವನ್ನು ತೆಗೆದುಕೊಳ್ಳಬೇಕು.

ಆಹ್ವಾಯಕಾ ದೇವಲಕಾ ನಾಕ್ಷತ್ರಾ ಗ್ರಾಮಯಾಜಕಾಃ।
ಏತೇ ಬ್ರಾಹ್ಮಣಚಂಡಾಲಾ ಮಹಾಪಥಿಕಪಂಚಮಾಃ ॥೮॥

ಇನ್ನೊಬ್ಬರನ್ನು ಕರೆಯುವವರು, ಸಂಬಳ ತೆಗೆದುಕೊಂಡು ದೇವಸ್ಥಾನದಲ್ಲಿ ಪೂಜೆಯನ್ನು ಮಾಡುವವರು, ಜ್ಯೋತಿಷ್ಕರು, ಗ್ರಾಮಪುರೋಹಿತರು ಮತ್ತು ಮಹಾಪಥದಲ್ಲಿ ಹೋಗುವವರು (ಸಮುದ್ರಯಾನ ಮತ್ತು ವಿಮಾನಯಾನವನ್ನು ಮಾಡುವವರು?) ಇವರು ಬ್ರಾಹ್ಮಣಚಂಡಾಲರು.

ಏತೇಭ್ಯೋ ಬಲಿಮಾದದ್ಯಾದ್ ಹೀನಕೋಶೋ ಮಹೀಪತಿಃ।
ಋತೇ ಬ್ರಹ್ಮಸಮೇಭ್ಯಶ್ಚ ದೇವಕಲ್ಪೇಭ್ಯ ಏವ ಚ ॥೯॥

ಅಲ್ಪಕೋಶವುಳ್ಳ ರಾಜನು ಬ್ರಹ್ಮಸಮರನ್ನು ಮತ್ತು ದೇವಸಮರನ್ನು ಬಿಟ್ಟು ಉಳಿದ ಈ ಬ್ರಾಹ್ಮಣರಿಂದ ಕಪ್ಪವನ್ನು ತೆಗೆದುಕೊಳ್ಳಬೇಕು.

ಅಬ್ರಾಹ್ಮಣಾನಾಂ ವಿತ್ತಸ್ಯ ಸ್ವಾಮೀ ರಾಜೇತಿ ವೈದಿಕಮ್।
ಬ್ರಾಹ್ಮಣಾನಾಂ ಚ ಯೇ ಕೇಚಿದ್ ವಿಕರ್ಮಸ್ಥಾ ಭವಂತ್ಯುತ ॥೧೦॥

ಬ್ರಾಹ್ಮಣರಲ್ಲದವರ ಧನಕ್ಕೆ ರಾಜನೇ ಒಡೆಯನೆಂಬುದು ವೇದದ ಶಾಸನ. ಬ್ರಾಹ್ಮಣರಲ್ಲಿಯೇ ಯಾವ ಕೆಲವರು ವಿಕರ್ಮಸ್ಥರಾಗುತ್ತಾರೆಯೋ ಅವರ ಧನಕ್ಕೂ ರಾಜನೇ ಒಡೆಯನಾಗುತ್ತಾನೆ.

ವಿಕರ್ಮಸ್ಥಾಸ್ತು ನೋಪೇಕ್ಷ್ಯಾ ಜಾತು ರಾಜ್ಞಾಕಥಂಚನ।
ಪಥಿಕಃ ಸಂವಿಭಜ್ಯಶ್ಚ ಧರ್ಮಾನುಗ್ರಹಕಾರಣಾತ್ ॥೧೧॥

ವಿಕರ್ಮಸ್ಥರಾದ ಯಾರನ್ನೂ ರಾಜನು ಯಾವರೀತಿಯಿಂದಲೂ ಉದಾಸೀನ-ಮಾಡಬಾರದು. ವಾಣಿಜ್ಯಸ್ಥಳಗಳಲ್ಲಿ ತೆರಿಗೆಯನ್ನು ರಾಜನ ಪರವಾಗಿ ತೆಗೆದು-ಕೊಳ್ಳುವ ಬ್ರಾಹ್ಮಣನು ಧರ್ಮಾನುಗ್ರಹಕಾರಣದಿಂದ ಅದರಲ್ಲಿ ಒಂದು ಭಾಗಕ್ಕೆ ಅರ್ಹನಾಗುತ್ತಾನೆ. (ಲಕ್ಷಾಲಂಕಾರ)

ಯಸ್ಯ ಸ್ಮ ವಿಷಯೇ ರಾಜ್ಞಃ ಸ್ತೇನೋ ಭವತಿ ವೈ ದ್ವಿಜಃ।
ರಾಜ್ಞ ಏವಾಪರಾಧಂ ತಂ ಮನ್ಯಂತೇ ತದ್ವಿದೋ ಜನಾಃ ॥೧೨॥

ಯಾವ ರಾಜನ ರಾಷ್ಟ್ರದಲ್ಲಿ ಬ್ರಾಹ್ಮಣನು ಕಳ್ಳನಾಗುತ್ತಾನೋ ಅದನ್ನು ಜನರು ರಾಜನ ಅಪರಾಧವೆಂದೇ ತಿಳಿಯುತ್ತಾರೆ.

ಅವೃತ್ತ್ಯಾ ಯೋ ಭವೇತ್ ಸ್ತೇನೋ ವೇದವಿತ್ ಸ್ನಾತಕಸ್ತಥಾ।
ರಾಜನ್ ಸ ರಾಜ್ಞಾ ಭರ್ತವ್ಯ ಇತಿ ಧರ್ಮವಿದೋ ವಿದುಃ ॥೧೩॥

ವೇದವಿದ್ಯಾಪಾರಂಗತನಾಗಿ, ಸ್ನಾತಕನಾಗಿ ಯಾವ ಬ್ರಾಹ್ಮಣನು ಜೀವನೋ-ಪಾಯವಿಲ್ಲದೇ ಕಳ್ಳನಾಗುತ್ತಾನೆಯೋ ಎಲೈ ರಾಜನೇ! ಅವನನ್ನು ರಾಜನು ಪೋಷಿಸ-ಬೇಕು ಎಂದು ಧರ್ಮಜ್ಞರು ತಿಳಿಯುತ್ತಾರೆ.

ಸ ಚೇನ್ನೋಪರಿವರ್ತೇತ ಕೃತವೃತ್ತಿಃ ಪರಂತಪ।
ತತೋ ನಿರ್ವಾಸನೀಯಃ ಸ್ಯಾತ್ ತಸ್ಮಾದ್ ದೇಶಾತ್ ಸಬಾಂಧವಃ ॥೧೪॥

ಎಲೈ ಪರಂತಪನೇ! ಜೀವನೋಪಾಯವನ್ನು ಕಲ್ಪಿಸಿದರೂ ಅವನು ತನ್ನ ಹಿಂದಿನ ವೃತ್ತಿಯನ್ನು ಬಿಡದಿದ್ದರೆ ಆಗ ಅವನನ್ನು ಬಂಧುಸಹಿತನಾಗಿ ಆ ದೇಶದಿಂದ ಹೊರಗೆ ಕಳುಹಿಸಬೇಕು.

ಯಜ್ಞಃ ಶ್ರುತಮಪೈಶುನ್ಯಮಹಿಂಸಾತಿಥಿಪೂಜನಮ್ ।
ದಮಃ ಸತ್ಯಂ ತಪೋ ದಾನಮೇತದ್ ಬ್ರಾಹ್ಮಣಲಕ್ಷಣಮ್ ॥೧೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಸಪ್ತತಿತಮೋऽಧ್ಯಾಯಃ ॥೭೮॥

ಯಜ್ಞ, ವಿದ್ಯೆ, ಚಾಡಿಹೇಳದಿರುವಿಕೆ, ಅಹಿಂಸೆ, ಅತಿಥಿಪೂಜೆ, ಇಂದ್ರಿಯ-ನಿಗ್ರಹ, ಸತ್ಯವಚನ, ತಪಸ್ಸು ಮತ್ತು ದಾನ ಇವುಗಳು ಬ್ರಾಹ್ಮಣನ ಲಕ್ಷಣಗಳು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೭೮ನೆಯ ಅಧ್ಯಾಯ ಮುಗಿಯಿತು.

—0—

೭೯. ಎಪ್ಪತ್ತೊಂಬತ್ತನೆಯ ಅಧ್ಯಾಯ

ಕೇಕಯರಾಜ-ರಾಕ್ಷಸಸಂವಾದದಲ್ಲಿ ಪ್ರಜೆಗಳ ಧರ್ಮಕಥನ

ಯುಧಿಷ್ಠಿರಃ

ಕೇಷಾಂ ರಾಜಾ ಪ್ರಭವತಿ ವಿತ್ತಸ್ಯ ಭರತರ್ಷಭ ।
ಕಯಾ ಚ ವೃತ್ತ್ಯಾ ವರ್ತೇತ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ- ಎಲೈ ಭರತರ್ಷಭನೇ! ಯಾರ ವಿತ್ತದ ಮೇಲೆ ರಾಜನಿಗೆ ಅಧಿಕಾರವಿರುತ್ತದೆ. ರಾಜನು ಎಂತಹ ನಡತೆಯಿಂದ ಜೀವಿಸಬೇಕು ಎಂಬುದನ್ನು ನನಗೆ ಹೇಳು.

ಭೀಷ್ಮಃ

ಅಬ್ರಾಹ್ಮಣಾನಾಂ ವಿತ್ತಸ್ಯ ಸ್ವಾಮೀ ರಾಜೇತಿ ವೈದಿಕಮ್ ।
ಬ್ರಾಹ್ಮಣಾನಾಂ ಚ ಯೇ ಕೇಚಿದ್ ವಿಕರ್ಮಸ್ಥಾ ಭವಂತ್ಯುತ ॥೨॥

ಭೀಷ್ಮರು – ಬ್ರಾಹ್ಮಣರಲ್ಲದವರ ವಿತ್ತಕ್ಕೆ ರಾಜನು ಒಡೆಯನೆಂಬುದು ವೇದಾನುಶಾಸನ. ವಿಕರ್ಮಸ್ಥರಾದ ಬ್ರಾಹ್ಮಣರ ವಿತ್ತಕ್ಕೂ ಅವನು ಒಡೆಯನಾಗುತ್ತಾನೆ.

ವಿಕರ್ಮಸ್ಥಾಶ್ಚ ನೋಪೇಕ್ಷ್ಯಾ ವಿಪ್ರಾ ರಾಜ್ಞಾಕಥಂಚನ।
ಇತಿ ರಾಜ್ಞಾಂ ಪುರಾವೃತ್ತಮಭಿಜಲ್ಪಂತಿ ಸಾಧವಃ ॥೩॥

ರಾಜನು ವಿಕರ್ಮಸ್ಥರಾದ ಬ್ರಾಹ್ಮಣರನ್ನು ಉಪೇಕ್ಷೆ ಮಾಡಬಾರದು. ಇದು ಪ್ರಾಚೀನರಾಜರ ನಡತೆಯೆಂದು ಸಜ್ಜನರು ಹೇಳುತ್ತಾರೆ.

ಯಸ್ಯ ಸ್ಮ ವಿಷಯೇ ರಾಜ್ಞಃ ಸ್ತೇನೋ ಭವತಿ ವೈ ದ್ವಿಜಃ।
ರಾಜ್ಞ್ಯೇವಾಪರಾಧಂ ತಂ ಮನ್ಯಂತೇ ಕಿಲ್ಬಿಷಂ ನೃಪ ॥೪॥

ಯಾವ ರಾಜನ ರಾಜ್ಯದಲ್ಲಿ ಬ್ರಾಹ್ಮಣನು ಕಳ್ಳನಾಗುತ್ತಾನೆಯೋ ಆ ದೋಷವನ್ನು ರಾಜನ ದೋಷವೆಂದೇ ಹೇಳುತ್ತಾರೆ.

ಅಭಿಶಸ್ತಮಿವಾತ್ಮಾನಂ ಮನ್ಯಂತೇ ತೇನ ಕರ್ಮಣಾ।
ತಸ್ಮಾದ್ ರಾಜರ್ಷಯಃ ಸರ್ವೇ ಬ್ರಾಹ್ಮಣಾನನ್ವಪಾಲಯನ್ ॥೫॥

ಅಂತಹ ದೋಷದಿಂದ ರಾಜನು ತನ್ನನ್ನೇ ನಿಂದಿತನನ್ನಾಗಿ ಭಾವಿಸುತ್ತಾನೆ. ಆದರಿಂದ ಎಲ್ಲ ರಾಜರ್ಷಿಗಳೂ ಬ್ರಾಹ್ಮಣರನ್ನು ಚೆನ್ನಾಗಿ ಪಾಲಿಸಿದರು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಗೀತಂ ಕೇಕಯರಾಜೇನ ಹ್ರಿಯಮಾಣೇನ ರಕ್ಷಸಾ ॥೬॥

ಈ ವಿಷಯದಲ್ಲಿಯೂ ಸಹ ರಾಕ್ಷಸನಿಂದ ಅಪಹರಿಸಲ್ಪಡುತ್ತಿದ್ದ ಕೇಕಯ ರಾಜನಿಗೂ ಮತ್ತು ರಾಕ್ಷಸನಿಗೂ ನಡೆದ ಸಂವಾದರೂಪವಾದ ಈ ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ.

ಕೇಕಯಾನಾಮಧಿಪತಿಂ ರಕ್ಷೋ ಜಗ್ರಾಹ ದಾರುಣಮ್।
ಸ್ವಾಧ್ಯಾಯೇನಾನ್ವಿತಂ ರಾಜನ್ನರಣ್ಯೇ ಸಂಶಿತವ್ರತಮ್ ॥೭॥

ಎಲೈ ರಾಜನೇ! ಸ್ವಾಧ್ಯಾಯಶೀಲನಾದ ಒಳ್ಳೆಯ ವ್ರತಧಾರಿಯಾದ ಕೇಕಯ ರಾಜನನ್ನು ಕಾಡಿನಲ್ಲಿ ಒಬ್ಬ ರಾಕ್ಷಸನು ಹಿಡಿದು ಅವನ ಮನಸ್ಸನ್ನು ಪ್ರವೇಶಿಸಿದನು.

ರಾಜಾ

ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪಃ।
ನಾನಾಹಿತಾಗ್ನಿರ್ನಾಯಜ್ವಾ ಮಾ ಮಮಾಂತರಮಾವಿಶಃ ॥೮॥

ರಾಜ– ನನ್ನ ರಾಜ್ಯದಲ್ಲಿ ಕಳ್ಳರಿಲ್ಲ, ಕೃಪಣರಿಲ್ಲ, ಮದ್ಯಪಾನಿಗಳಿಲ್ಲ, ಅಗ್ನ್ಯಾಧಾನ ಮಾಡದವರಿಲ್ಲ, ಯಾಗವನ್ನು ಮಾಡಿದವರಿಲ್ಲ ಆದ್ದರಿಂದ ನನ್ನ ಒಳಗೆ ಪ್ರವೇಶಿಸಬೇಡ.

ನ ಚ ಮೇ ಬ್ರಾಹ್ಮಣೋಽವಿದ್ವಾನ್ ನಾವ್ರತೀ ನಾಪ್ಯಸೋಮಪಃ।
ನಾನಾಹಿತಾಗ್ನಿರ್ವಿಷಯೇ ಮಾ ಮಮಾಂತರಮಾವಿಶಃ ॥೯॥

ನನ್ನ ರಾಜ್ಯದಲ್ಲಿ ವಿದ್ವಾಂಸನಲ್ಲದ, ವ್ರತಧಾರಿಯಲ್ಲದ, ಸೋಮಪಾನವನ್ನು ಮಾಡದ, ಅಗ್ನ್ಯಾಧಾನವನ್ನು ಮಾಡದ ಯಾವ ಬ್ರಾಹ್ಮಣನೂ ಇಲ್ಲ. ನನ್ನೊಳಗೆ ಪ್ರವೇಶಿಸಬೇಡ.

ನಾನಾಪ್ತದಕ್ಷಿಣೈರ್ಯಜ್ಞೈರ್ಯಜಂತೇ ವಿಷಯೇ ಮಮ।
ಅಧೀತೇ ನಾವ್ರತೀ ಕಶ್ಚಿನ್ಮಾ ಮಮಾಂತರಮಾವಿಶಃ ॥೧೦॥

ನನ್ನ ರಾಜ್ಯದಲ್ಲಿ ಭೂರಿದಕ್ಷಿಣೆಗಳನ್ನು ಕೊಡದೇ ಯಜ್ಞಗಳನ್ನು ಮಾಡುವುದಿಲ್ಲ. ಎಲ್ಲರೂ ಅಧ್ಯಯನವನ್ನು ಮಾಡುತ್ತಾರೆ. ವ್ರತವನ್ನು ಧರಿಸದವನು ಯಾವನೂ ಇಲ್ಲ. ನನ್ನೊಳಗೆ ಪ್ರವೇಶಿಸಬೇಡ.

ಅಧೀಯತೇಽಧ್ಯಾಪಯಂತಿ ಯಜಂತೇ ಯಾಜಯಂತಿ ಚ।
ದದತಿ ಪ್ರತಿಗೃಹ್ಣಂತಿ ಷಟ್ಸು ಕರ್ಮಸ್ವವಸ್ಥಿತಾಃ ॥೧೧॥

ಬ್ರಾಹ್ಮಣರು ಅಧ್ಯಯನ-ಅಧ್ಯಾಪನ, ಯಜನ-ಯಾಜನ, ದಾನ-ಪ್ರತಿಗ್ರಹ ಈ ಆರು ಕರ್ಮಗಳಲ್ಲಿ ನಿರತರಾಗಿದ್ದಾರೆ.

ಪೂಜಿತಾಃ ಸಂವಿಭಕ್ತಾಶ್ಚ ಮೃದವಃ ಸತ್ಯವಾದಿನಃ।
ಬ್ರಾಹ್ಮಣಾ ಯೇ ಸ್ವಕರ್ಮಸ್ಥಾ ಮಾ ಮಮಾಂತರಮಾವಿಶಃ ॥೧೨॥

ಬ್ರಾಹ್ಮಣರು ನನ್ನಿಂದ ಪೂಜಿಸಲ್ಪಟ್ಟು, ಯಥಾಯೋಗ್ಯವಾಗಿ ನನ್ನ ಧನವನ್ನು ಸ್ವೀಕರಿಸಿ, ಋಜುಗಳೂ ಸತ್ಯವಾದಿಗಳೂ ಆಗಿ ತಮ್ಮ ಕರ್ಮಗಳಲ್ಲಿ ನಿರತರಾಗಿದ್ದಾರೆ. ನನ್ನೊಳಗೆ ಪ್ರವೇಶಿಸಬೇಡ.

ನ ಯಾಚಂತೇ ಪ್ರಯಚ್ಛಂತಿ ಸತ್ಯಧರ್ಮವಿಶಾರದಾಃ।
ನಾಧ್ಯಾಪಯಂತ್ಯಧೀಯಂತೇ ಯಜಂತೇ ನ ಚ ಯಾಜಕಾಃ ॥೧೩॥

ಬ್ರಾಹ್ಮಣಾನ್ ಪರಿರಕ್ಷಂತಿ ಸಂಗ್ರಾಮೇಷ್ವಪಲಾಯಿನಃ।
ಕ್ಷತ್ರಿಯಾ ಮೇ ಸ್ವಕರ್ಮಸ್ಥಾ ಮಾ ಮಮಾಂತರಮಾವಿಶಃ ॥೧೪॥

ಕ್ಷತ್ರಿಯರು ಯಾಚಿಸುವುದಿಲ್ಲ; ದಾನವನ್ನು ಕೊಡುತ್ತಾರೆ. ಸತ್ಯಧರ್ಮವಿಶಾರದರು. ಅಧ್ಯಯನ ಮಾಡುತ್ತಾರೆ. ಅಧ್ಯಾಪನವನ್ನು ಮಾಡುವುದಿಲ್ಲ. ಯಾಗವನ್ನು ಮಾಡುತ್ತಾರೆ. ಮಾಡಿಸುವುದಿಲ್ಲ. ಬ್ರಾಹ್ಮಣರನ್ನು ರಕ್ಷಿಸುತ್ತಾರೆ. ಯುದ್ಧದಿಂದ ಹಿಮ್ಮೆಟ್ಟುವುದಿಲ್ಲ. ಸ್ವಕರ್ಮನಿರತರಾಗಿದ್ದಾರೆ. ನನ್ನೊಳಗೆ ಪ್ರವೇಶಿಸಬೇಡ.

ಕೃಷಿಗೋರಕ್ಷವಾಣಿಜ್ಯಮುಪಜೀವಂತ್ಯಮಾಯಯಾ।
ಅಪ್ರಮತ್ತಾಃ ಕ್ರಿಯಾವಂತಃ ಸುವ್ರತಾಃ ಸತ್ಯವಾದಿನಃ ॥೧೫॥

ಸಂವಿಭಾಗಂ ದಮಂ ಶೌಚಂ ಸೌಹೃದಂ ಚ ವ್ಯಪಾಶ್ರಿತಾಃ।
ಮಮ ವೈಶ್ಯಾಃ ಸ್ವಕರ್ಮಸ್ಥಾಃ ಮಾ ಮಮಾಂತರಮಾವಿಶಃ ॥೧೬॥

ನನ್ನ ದೇಶದ ವೈಶ್ಯರು ಕೃಷಿ, ಗೋರಕ್ಷಣೆ, ವಾಣಿಜ್ಯಗಳನ್ನು ನಿಷ್ಕಪಟವಾಗಿ ಉಪಜೀವಿಸುತ್ತಾರೆ. ಜಾಗರೂಕರಾಗಿ ಸತ್ಕರ್ಮಗಳನ್ನು ಮಾಡುತ್ತಾರೆ. ಒಳ್ಳೆಯ ವ್ರತಗಳನ್ನು ಹೊಂದಿದ್ದಾರೆ, ಸತ್ಯವಾದಿಗಳಾಗಿದ್ದಾರೆ. ಸಂವಿಭಾಗ, ಇಂದ್ರಿಯನಿಗ್ರಹ, ಶೌಚ, ಸೌಹಾರ್ದಗಳನ್ನು ಆಶ್ರಯಿಸಿದ್ದಾರೆ. ಸ್ವಕರ್ಮನಿರತರಾಗಿದ್ದಾರೆ. ನನ್ನೊಳಗೆ ಪ್ರವೇಶಿಸಬೇಡ.

ತ್ರೀನ್ ವರ್ಣಾನನುತಿಷ್ಠಂತಿ ಯಥಾವದನಸೂಯಕಾಃ।
ಮಮ ಶೂದ್ರಾಃ ಸ್ವಕರ್ಮಸ್ಥಾ ಮಾ ಮಮಾಂತರಮಾವಿಶಃ ॥೧೭॥

ನನ್ನ ದೇಶದಲ್ಲಿ ಶೂದ್ರರು ಅಸೂಯೆಯಿಲ್ಲದೇ ಮೂರು ವರ್ಣದವರನ್ನೂ ಚೆನ್ನಾಗಿ ಅನುಸರಿಸುತ್ತಾರೆ. ನನ್ನೊಳಗೆ ಪ್ರವೇಶಿಸಬೇಡ.

ಕೃಪಣಾನಾಥವೃದ್ಧಾನಾಂ ದುರ್ಬಲಾತುರಯೋಷಿತಾಮ್ ।
ಸಂವಿಭಕ್ತಾಸ್ಮಿ ಸರ್ವೇಷಾಂ ಮಾ ಮಮಾಂತರಮಾವಿಶಃ ॥೧೮॥

ನಾನು ಕೃಪಣರಿಗೂ, ಅನಾಥರಿಗೂ, ವೃದ್ಧರಿಗೂ, ದುರ್ಬಲರಿಗೂ, ರೋಗಿಗಳಿಗೂ ಮತ್ತು ಸ್ತ್ರೀಯರಿಗೂ ನನ್ನ ಐಶ್ವರ್ಯವನ್ನು ಹಂಚುತ್ತೇನೆ. ನನ್ನೊಳಗೆ ಪ್ರವೇಶಿಸಬೇಡ.

ಕುಲದೇಶಾದಿಧರ್ಮಾಣಾಂ ಪ್ರಥಿತಾನಾಂ ಯಥಾವಿಧಿ ।
ಅವ್ಯುಚ್ಛೇತ್ತಾಸ್ಮಿ ಸರ್ವೇಷಾಂ ಮಾ ಮಮಾಂತರಮಾವಿಶಃ ॥೧೯॥

ಪ್ರಸಿದ್ಧವಾದ ಕುಲಧರ್ಮಗಳನ್ನು, ದೇಶಧರ್ಮಗಳನ್ನು, ವಿಧಿಗೆ ಅನುಗುಣವಾಗಿ ಲೋಪಗೊಳಿಸದೇ ಪ್ರವರ್ತಿಸುತ್ತೇನೆ. ನನ್ನೊಳಗೆ ಪ್ರವೇಶಿಸಬೇಡ.

ತಪಸ್ವಿನೋ ಮೇ ವಿಷಯೇ ಪೂಜಿತಾಃ ಪರಿಪಾಲಿತಾಃ ।
ಸಂವಿಭಕ್ತಾಶ್ಚ ಸತ್ಕೃತ್ಯ ಮಾ ಮಮಾಂತರಮಾವಿಶಃ ॥೨೦॥

ನನ್ನ ದೇಶದಲ್ಲಿರುವ ತಪಸ್ವಿಗಳು ಸತ್ಕೃತರಾಗಿ, ರಕ್ಷಿತರಾಗಿ ನನ್ನ ಐಶ್ವರ್ಯವನ್ನು ಹಂಚಿಕೊಳ್ಳುತ್ತಾರೆ. ನನ್ನೊಳಗೆ ಪ್ರವೇಶಿಸಬೇಡ.

ನಾಸಂವಿಭಜ್ಯ ಭೋಕ್ತಾಸ್ಮಿ ನ ವಿಶಾಮಿ ಪರಸ್ತ್ರಿಯಮ್ ।
ಸ್ವತಂತ್ರೋ ಜಾತು ನ ಕ್ರೀಡೇ ಮಾ ಮಮಾಂತರಮಾವಿಶಃ ॥೨೧॥

ಇನ್ನೊಬ್ಬರಿಗೆ ಕೊಡದೇ ನಾನು ಏನನ್ನೂ ಭೋಗಿಸುವುದಿಲ್ಲ; ಪರಸ್ತ್ರೀಯರ ಸಂಬಂಧವನ್ನು ಮಾಡುವುದಿಲ್ಲ. ಒಬ್ಬನೇ ಯಾವ ಕ್ರೀಡೆಯನ್ನೂ ಮಾಡುವುದಿಲ್ಲ. ನನ್ನೊಳಗೆ ಪ್ರವೇಶಿಸಬೇಡ.

ನಾಬ್ರಹ್ಮಚಾರೀ ಭಿಕ್ಷಾವಾನ್ ಭಿಕ್ಷುರ್ವಾऽಬ್ರಹ್ಮಚಾರಿಕಃ।
ಅನೃತ್ವಿಜಂ ಹುತಂ ನಾಸ್ತಿ ಮಾ ಮಮಾಂತರಮಾವಿಶಃ ॥೨೨॥

ನನ್ನ ರಾಜ್ಯದಲ್ಲಿ ಬ್ರಹ್ಮಚಾರಿಯಲ್ಲದವನು ಭಿಕ್ಷೆಯನ್ನು ಬೇಡುವುದಿಲ್ಲ; ಬ್ರಹ್ಮಚಾರಿಯಲ್ಲದ ಸನ್ಯಾಸಿಯೂ ಇಲ್ಲ. ಋತ್ವಿಜರಿಲ್ಲದೇ ಯಾವ ಹೋಮವೂ ನಡೆಯುವುದಿಲ್ಲ. ನನ್ನೊಳಗೆ ಪ್ರವೇಶಿಸಬೇಡ.

ನಾವಜಾನಾಮ್ಯಹಂ ವೃದ್ಧಾನ್ನ ವೈದ್ಯಾನ್ನ ತಪಸ್ವಿನಃ।
ರಾಷ್ಟ್ರೇ ಸ್ವಪತಿ ಜಾಗರ್ಮಿ ಮಾ ಮಮಾಂತರಮಾವಿಶಃ ॥೨೩॥

ನಾನು ವೃದ್ಧರನ್ನೂ, ವಿದ್ಯಾವಂತರನ್ನೂ, ತಪಸ್ವಿಗಳನ್ನೂ ಅವಮಾನಗೊಳಿಸುವುದಿಲ್ಲ. ರಾಷ್ಟ್ರವು ನಿದ್ರಿಸುವಾಗ ನಾನು ಎಚ್ಚರದಿಂದಿರುತ್ತೇನೆ. ನನ್ನೊಳಗೆ ಪ್ರವೇಶಿಸಬೇಡ.

ಶುಕ್ಲಕರ್ಮಾಸ್ಮಿ ಸರ್ವತ್ರ ನ ದುರ್ಗತಿಭಯಂ ಮಮ।
ಧರ್ಮಚಾರೀ ಗೃಹಸ್ಥಶ್ಚ ಮಾ ಮಮಾಂತರಮಾವಿಶಃ ॥೨೪॥

ನಾನು ಎಲ್ಲ ಕಡೆಗಳಲ್ಲಿಯೂ ಶುದ್ಧವಾದ ಕರ್ಮವನ್ನೇ ಮಾಡಿದ್ದೇನೆ. ನನಗೆ ದುರ್ಗತಿಯ ಭಯವಿಲ್ಲ. ನಾನು ಬ್ರಹ್ಮಚಾರಿಯಾದ ಗೃಹಸ್ಥನಾಗಿದ್ದೇನೆ. ನನ್ನೊಳಗೆ ಪ್ರವೇಶಿಸಬೇಡ.

ವೇದಾಧ್ಯಯನಸಂಪನ್ನಸ್ತಪಸ್ವೀ ಸರ್ವಧರ್ಮವಿತ್।
ಸ್ವಾಮೀ ಸರ್ವಸ್ಯ ರಾಜ್ಯಸ್ಯ ಶ್ರೀಮಾನ್ ಮಮ ಪುರೋಹಿತಃ ॥೨೫॥

ನನ್ನ ಪುರೋಹಿತನು ವೇದಾಧ್ಯಯನಸಂಪನ್ನನಾದವನು, ತಪಸ್ವಿಯಾದವನು, ಸರ್ವಧರ್ಮವನ್ನೂ ತಿಳಿದವನು, ಎಲ್ಲ ರಾಜ್ಯಕ್ಕೂ ಸ್ವಾಮಿಯಾದವನು ಮತ್ತು ಸಂಪದ್ಯುಕ್ತನಾದವನು.

ದಾನೇನ ದಿವ್ಯಾನಭಿವಾಂಛಾಮಿ ಲೋಕಾನ್
ಸತ್ಯೇನಾಘೋ ಬ್ರಾಹ್ಮಣಾನಾಂ ಚ ಗುಪ್ತ್ಯಾ।

ಶುಶ್ರೂಷಯಾ ಚಾಪಿ ಗುರೂನುಪೈಮಿ
ನ ಮೇ ಭಯಂ ವಿದ್ಯತೇ ರಾಕ್ಷಸೇಭ್ಯಃ ॥೨೬॥

ನಾನು ದಾನದಿಂದಲೂ, ಸತ್ಯವಚನದಿಂದಲೂ ಮತ್ತು ಬ್ರಾಹ್ಮಣರ ರಕ್ಷೆಯಿಂದಲೂ ದಿವ್ಯಲೋಕಗಳನ್ನು ಪಡೆಯಲು ಬಯಸುತ್ತೇನೆ. ನಾನು ಹಿರಿಯರ ಸೇವೆಯನ್ನು ಮಾಡುತ್ತೇನೆ. ನನಗೆ ರಾಕ್ಷಸರಿಂದ ಭಯವಿಲ್ಲ.

ನ ಮೇ ರಾಷ್ಟ್ರೇ ವಿಧವಾ ಬ್ರಹ್ಮಬಂಧುಃ
ನ ಬ್ರಾಹ್ಮಣಃ ಕೃಪಣೋ ನೋತ ಚೋರಃ।
ನ ಪಾರಜಾಯೀ ನ ಚ ಪಾಪಕರ್ಮಾ
ನ ಮೇ ಭಯಂ ವಿದ್ಯತೇ ರಾಕ್ಷಸೇಭ್ಯಃ ॥೨೭॥

ನನ್ನ ರಾಜ್ಯದಲ್ಲಿ ವಿಧವೆಯರಿಲ್ಲ; ಬ್ರಹ್ಮಬಂಧುಗಳಿಲ್ಲ; ಕೃಪಣರಾದ ಅಥವಾ ಚೋರನಾದ ಬ್ರಾಹ್ಮಣನಿಲ್ಲ; ಪರಸ್ತ್ರೀಸಂಗವನ್ನು ಮಾಡುವವನಿಲ್ಲ; ಪಾಪಕರ್ಮಗಳನ್ನು ಮಾಡುವವನಿಲ್ಲ. ನನಗೆ ರಾಕ್ಷಸರಿಂದ ಭಯವಿಲ್ಲ.

ನ ಮೇ ಶಸ್ತ್ರೈರನಿರ್ಭಿನ್ನಮಂಗೇ ದ್ವ್ಯಂಗುಲಮಂತರಮ್ ।
ಧರ್ಮಾರ್ಥಂ ಯುದ್ಧ್ಯಮಾನಸ್ಯ ಮಾ ಮಮಾಂತರಮಾವಿಶಃ ॥೨೮॥

ಧರ್ಮಯುದ್ಧವನ್ನು ಮಾಡುವ ನನಗೆ ದೇಹದಲ್ಲಿ ಶಸ್ತ್ರದಿಂದ ವ್ರಣಗೊಳ್ಳದ ಎರಡು ಅಂಗುಲಪ್ರದೇಶವೂ ಇಲ್ಲ. ನನ್ನೊಳಗೆ ಪ್ರವೇಶಿಸಬೇಡ.

ಗೋಬ್ರಾಹ್ಮಣೇ ಚ ಯಜ್ಞೇ ಚ ನಿತ್ಯಂ ಸ್ವಸ್ತ್ಯಯನಂ ಮಮ।
ಆಶಾಸತೇ ಜನಾ ರಾಷ್ಟ್ರೇ ಮಾ ಮಮಾಂತರಮಾವಿಶಃ ॥೨೯॥

ನನ್ನ ರಾಷ್ಟ್ರದ ಪ್ರಜೆಗಳು ಯಜ್ಞಗಳಲ್ಲಿ ಮತ್ತು ಗೋಬ್ರಾಹ್ಮಣಸಮುದಾಯದಲ್ಲಿ ನನಗೆ ನಿತ್ಯವೂ ಶುಭವನ್ನು ಹಾರೈಸುತ್ತಾರೆ. ನನ್ನೊಳಗೆ ಪ್ರವೇಶಿಸಬೇಡ.

ನಾರೀಣಾಂ ವ್ಯಭಿಚಾರಾಚ್ಚ ಅನ್ಯಾಯಾಚ್ಚ ಮಹೀಕ್ಷಿತಾಮ್ ।
ವಿಪ್ರಾಣಾಂ ಕರ್ಮದೋಷಾಚ್ಚ ಪ್ರಜಾನಾಂ ಜಾಯತೇ ಭಯಮ್ ॥೩೦॥

ಪ್ರಜೆಗಳಿಗೆ ನಾರಿಯರ ವ್ಯಭಿಚಾರದಿಂದಲೂ, ರಾಜರ ಅನ್ಯಾಯದಿಂದಲೂ, ವಿಪ್ರರ ಕರ್ಮದೋಷದಿಂದಲೂ ಭಯವುಂಟಾಗುತ್ತದೆ.

ಅವೃಷ್ಟಿರ್ಮಾರಕೋ ರೋಗಃ ಸತತಂ ಕ್ಷುದ್ಭಯಾನಿ ಚ।
ವಿಗ್ರಹಶ್ಚ ಸದಾ ತಸ್ಮಿನ್ ದೇಶೇ ಭವತಿ ದಾರುಣೇ ॥೩೧॥

ಅಂತಹ ದಾರುಣವಾದ ದೇಶದಲ್ಲಿ ಅನಾವೃಷ್ಟಿ, ಮಾರಕರೋಗಗಳು, ಸತತವಾಗಿ ಹಸಿವಿನ ಭಯ, ಕಲಹಗಳು ಯಾವಾಗಲೂ ಇರುತ್ತವೆ.

ಯಕ್ಷರಕ್ಷಃಪಿಶಾಚೇಭ್ಯೋ ನಾಸುರೇಭ್ಯಃ ಕಥಂಚನ।
ಭಯಮುತ್ಪದ್ಯತೇ ತತ್ರ ಯತ್ರ ವಿಪ್ರಾಃ ಸುಸಂಯತಾಃ ॥೩೨॥

ಎಲ್ಲಿ ವಿಪ್ರರು ಸಂಯಮಶೀಲರಾಗಿರುತ್ತಾರೆಯೋ ಅಲ್ಲಿ ಯಕ್ಷರಾಕ್ಷಸ-ಪಿಶಾಚಿಗಳಿಂದಾಗಲೀ, ಅಸುರರಿಂದಾಗಲೀ ಯಾವ ರೀತಿಯಿಂದಲೂ ಭಯವುಂಟಾಗುವುದಿಲ್ಲ.

ಗಂಧರ್ವಾಪ್ಸರಸಃ ಸಿದ್ಧಾಃ ಪನ್ನಗಾಶ್ಚ ಸರೀಸೃಪಾಃ।
ಮಾನವಾನ್ನ ಜಿಘಾಂಸಂತಿ ಯತ್ರ ನಾರ್ಯಃ ಪತಿವ್ರತಾಃ ॥೩೩॥

ಎಲ್ಲಿನಾರಿಯರು ಪತಿವ್ರತೆಯರಾಗಿರುತ್ತಾರೆಯೋ ಅಲ್ಲಿ ಗಂಧರ್ವಾಪ್ಸರೆಯರಾಗಲೀ, ಸಿದ್ಧರಾಗಲೀ, ಸರ್ಪಗಳಾಗಲೀ ಮಾನವರನ್ನು ಕೊಲ್ಲಲು ಬಯಸುವುದಿಲ್ಲ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಯತ್ರ ಶೂದ್ರಾಶ್ಚ ಧಾರ್ಮಿಕಾಃ।
ನಾನಾವೃಷ್ಟಿಭಯಂ ತತ್ರ ನ ದುರ್ಭಿಕ್ಷಂ ನ ವಿಭ್ರಮಃ ॥೩೪॥

ಯಾವ ರಾಷ್ಟ್ರದಲ್ಲಿ ಬ್ರಾಹ್ಮಣಕ್ಷತ್ರಿಯವೈಶ್ಯ ಶೂದ್ರರೆಲ್ಲರೂ ಧಾರ್ಮಿಕರಾಗಿರುತ್ತಾರೆಯೋ ಅಲ್ಲಿ ಅನಾವೃಷ್ಟಿಭಯವಾಗಲೀ, ದುರ್ಭಿಕ್ಷವಾಗಲೀ, ಉನ್ಮಾದಾದಿ ರೋಗಗಳಾಗಲೀ ಇರುವುದಿಲ್ಲ.

ಧಾರ್ಮಿಕೋ ಯತ್ರ ಭೂಪಾಲೋ ನ ತತ್ರಾಸ್ತಿ ಪರಾಭವಃ।
ಉತ್ಪಾತಾ ನ ಚ ದೃಶ್ಯಂತೇ ನ ದಿವ್ಯಾ ನ ಚ ಮಾನುಷಾಃ ॥೩೫॥

ರಾಜನು ಧಾರ್ಮಿಕನಾಗಿದ್ದ ಸ್ಥಳದಲ್ಲಿ ಪರಾಭವವುಂಟಾಗುವುದಿಲ್ಲ. ದಿವ್ಯವಾದ ಅಥವಾ ಮಾನುಷವಾದ ಅಪಶಕುನಗಳು ಅಲ್ಲಿ ಕಂಡುಬರುವುದಿಲ್ಲ.

ರಾಕ್ಷಸಃ

ಯಸ್ಮಾತ್ ಸರ್ವಾಸ್ವವಸ್ಥಾಸು ಧರ್ಮಮೇವಾನ್ವವೇಕ್ಷಸೇ।
ತಸ್ಮಾತ್ ಪ್ರಾಪ್ನುಹಿ ಕೈಕೇಯ ಗೃಹಾನ್ ಸ್ವಸ್ತಿ ವ್ರಜಾಮ್ಯಹಮ್ ॥೩೬॥

ರಾಕ್ಷಸ – ಎಲೈ ಕೇಕಯನೇ! ಯಾವ ಕಾರಣದಿಂದ ಎಲ್ಲ ಅವಸ್ಥೆಗಳಲ್ಲೂ ಧರ್ಮವನ್ನೇ ನೀನು ಯೋಚಿಸುತ್ತಿದ್ದೀಯೋ ಆದ್ದರಿಂದ ಸುಖವಾಗಿ ಮನೆಗೆ ಹೋಗು. ನಾನು ನನ್ನ ದಾರಿಯಲ್ಲಿ ಹೋಗುತ್ತೇನೆ.

ಯೇಷಾಂ ಗೋಬ್ರಾಹ್ಮಣಾ ರಕ್ಷ್ಯಾಃ ಪ್ರಜಾ ರಕ್ಷ್ಯಾಶ್ಚ ಕೇಕಯ।
ನ ರಕ್ಷೋಭ್ಯೋ ಭಯಂ ತೇಷಾಂ ಕುತ ಏವ ತು ಮಾನುಷಾತ್ ॥೩೭॥

ಎಲೈ ಕೇಕಯನೇ! ಯಾರು ಗೋಬ್ರಾಹ್ಮಣರನ್ನು ಮತ್ತು ಪ್ರಜೆಗಳನ್ನು ರಕ್ಷಿಸುತ್ತಾರೆಯೋ ಅವರಿಗೆ ರಾಕ್ಷಸರ ಭಯವಿಲ್ಲ. ಇನ್ನು ಮನುಷ್ಯರಿಂದ ಭಯವು ಎಲ್ಲಿಂದ ಬಂದೀತು?

ಯೇಷಾಂ ಪುರೋಗಮಾ ವಿಪ್ರಾ ಯೇಷಾಂ ಬ್ರಹ್ಮಬಲಂ ಬಲಮ್।
ಪ್ರಿಯಾತಿಥ್ಯಾಸ್ತಥಾ ದಾರಾಸ್ತೇ ವೈ ಸ್ವರ್ಗಜಿತೋ ನರಾಃ ॥೩೮॥

ಯಾರಿಗೆ ಬ್ರಾಹ್ಮಣರೇ ಪುರಸ್ಸರರೋ, ಯಾರಿಗೆ ಬ್ರಾಹ್ಮಣಬಲವೇ ಬಲವೋ, ಯಾರು ಅತಿಥಿಪ್ರಿಯರೋ ಮತ್ತು ತಮ್ಮ ಪತ್ನಿಯರಿಗೆ ಪ್ರಿಯರೋ ಅಂತಹ ಮನುಷ್ಯರು ಸ್ವರ್ಗವನ್ನು ಜಯಿಸಿದವರು.

ಭೀಷ್ಮಃ

ತಸ್ಮಾದ್ ದ್ವಿಜಾತೀನ್ ರಕ್ಷೇತ ತೇ ಹಿ ರಕ್ಷಂತಿ ರಕ್ಷಿತಾಃ।
ಆಶೀರೇಷಾಂ ಭವೇದ್ ರಾಜ್ಞಾಂ ರಾಷ್ಟ್ರಂ ಸಮ್ಯಕ್ ಪ್ರವರ್ಧತೇ ॥೩೯॥

ಭೀಷ್ಮರು – ಆದ್ದರಿಂದ ಬ್ರಾಹ್ಮಣರನ್ನು ರಕ್ಷಿಸಬೇಕು. ಅವರನ್ನು ರಕ್ಷಿಸಿದರೆ ಅವರು ನಿನ್ನನ್ನು ರಕ್ಷಿಸುತ್ತಾರೆ. ರಾಜನಿಗೆ ತನ್ನ ರಾಷ್ಟ್ರವು ಸರಿಯಾಗಿ ಪ್ರವೃದ್ಧಿಯನ್ನು ಹೊಂದಲಿ ಎಂಬ ಆಸೆಯು ಇರಬೇಕು.

ತಸ್ಮಾದ್ ರಾಜ್ಞಾವಿಶೇಷೇಣ ವಿಕರ್ಮಸ್ಥಾ ದ್ವಿಜಾತಯಃ।
ನಿಯಮ್ಯಾಃ ಸಂವಿಭಜ್ಯಾಶ್ಚ ಪ್ರಜಾನುಗ್ರಹಕಾರಣಾತ್ ॥೪೦॥

ಆದ್ದರಿಂದ ರಾಜನಾದವನು ಪ್ರಜೆಗಳನ್ನು ಅನುಗ್ರಹಿಸುವ ದೃಷ್ಟಿಯಿಂದ ವಿಕರ್ಮಸ್ಥರಾದ ಬ್ರಾಹ್ಮಣರನ್ನು ನಿಯಂತ್ರಿಸಿ, ಅವರಿಗೂ ಯೋಗ್ಯವಾದ ಧನಾದಿಗಳನ್ನು ಕೊಡಬೇಕು.

ಯ ಏವಂ ವರ್ತತೇ ರಾಜಾ ಪೌರಜಾನಪದೇಷ್ವಿಹ।
ಅನುಭೂಯೇಹ ಭದ್ರಾಣಿ ಪ್ರಾಪ್ನೋತೀಂದ್ರಸಲೋಕತಾಮ್ ॥೪೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಾಶೀತಿತಮೋऽಧ್ಯಾಯಃ ॥೭೯॥

ಯಾವ ರಾಜನು ರಾಜಧಾನಿಯಲ್ಲಿರುವ ಪೌರರ ಮತ್ತು ಜಾನಪದರ (ದೇಶದಲ್ಲಿ ವಾಸಿಸುವವರ ವಿಷಯಗಳಲ್ಲಿ) ಇಲ್ಲಿ ಹೀಗೆ ನಡೆದುಕೊಳ್ಳುತ್ತಾನೆಯೋ ಅವನು ಇಲ್ಲಿ ಶುಭಗಳನ್ನು ಅನುಭವಿಸಿ ಇಂದ್ರನ ಸಮಾನಲೋಕವನ್ನು ಪಡೆಯುತ್ತಾನೆ.

ರಾಜಧರ್ಮಪರ್ವದ ಕನ್ನಡಾನುವಾದದಲ್ಲಿ ೭೯ನೆಯ ಅಧ್ಯಾಯವು ಮುಗಿಯಿತು.

—0—

೮೦. ಎಂಬತ್ತನೆಯ ಅಧ್ಯಾಯ

ಬ್ರಾಹ್ಮಣಾದಿಗಳ ಆಪದ್ಧರ್ಮಕಥನ

ಯುಧಿಷ್ಠಿರಃ

ವ್ಯಾಖ್ಯಾತಾ ಕ್ಷತ್ರಧರ್ಮೇಣ ವೃತ್ತಿರಾಪತ್ಸು ಭಾರತ।
ಕಥಂಚಿದ್ ವೈಶ್ಯಧರ್ಮೇಣ ಜೀವೇದ್ ವಾ ಬ್ರಾಹ್ಮಣೋ ನ ವಾ ॥೧॥

ಯುಧಿಷ್ಠಿರ – ಎಲೈ ಭಾರತನೇ! ಬ್ರಾಹ್ಮಣನು ಆಪತ್ತು ಬಂದಾಗ ಕ್ಷತ್ರಿಯ-ಧರ್ಮದಿಂದ ವರ್ತಿಸಬೇಕು ಎಂದು ಶಾಸ್ತ್ರದಲ್ಲಿ ಹೇಳಲಾಯಿತು. ಬ್ರಾಹ್ಮಣನು ಯಾವುದಾದರೂ ಸಂದರ್ಭದಲ್ಲಿ ವೈಶ್ಯಧರ್ಮದಿಂದ ಜೀವಿಸಬಹುದೇ ಇಲ್ಲವೇ?

ಭೀಷ್ಮಃ

ಅಶಕ್ತಃ ಕ್ಷತ್ರಧರ್ಮೇಣ ವೈಶ್ಯಧರ್ಮೇಣ ವರ್ತಯೇತ್।
ಕೃಷಿಗೋರಕ್ಷಮಾಸ್ಥಾಯ ವ್ಯಸನೇ ವೃತ್ತಿಸಂಕ್ಷಯೇ ॥೨॥

ಭೀಷ್ಮರು – ರಾಷ್ಟ್ರಕ್ಕೆ ವ್ಯಸನವುಂಟಾದಾಗ ಅಥವಾ ತನಗೆ ಜೀವನೋಪಾಯ-ವಿಲ್ಲದಿದ್ದಾಗ ಕ್ಷತ್ರಿಯಧರ್ಮದಿಂದ ಜೀವಿಸಲು ಸಾಧ್ಯವಿಲ್ಲದಿದ್ದರೆ ಕೃಷಿ ಗೋ-ರಕ್ಷಣೆಗಳನ್ನು ಆಶ್ರಯಿಸಿ ವೈಶ್ಯಧರ್ಮದಿಂದ ಜೀವಿಸಬೇಕು.

ಯುಧಿಷ್ಠಿರಃ

ಕಾನಿ ಪಣ್ಯಾನಿ ವಿಕ್ರೀಣನ್ ಸ್ವರ್ಗಲೋಕಾನ್ನ ಹೀಯತೇ।
ಬ್ರಾಹ್ಮಣೋ ವೈಶ್ಯಧರ್ಮೇಣ ವರ್ತಯನ್ ಭರತರ್ಷಭ ॥೩॥

ಯುಧಿಷ್ಠಿರ – ಎಲೈ ಭರತರ್ಷಭನೇ! ವೈಶ್ಯಧರ್ಮದಿಂದ ಜೀವಿಸುವ ಬ್ರಾಹ್ಮಣನು ಎಂತಹ ವಸ್ತುಗಳನ್ನು ಮಾರಿದರೆ ಸ್ವರ್ಗಲೋಕದಿಂದ ಚ್ಯುತನಾಗುವು-ದಿಲ್ಲ.

ಭೀಷ್ಮಃ

ಸುರಾ ಲವಣಮಿತ್ಯೇವ ತಿಲಾನ್ ಕೇಸರಿಣಃ ಪಶೂನ್ ।
ವೃಷಭಾನ್ ಮಧು ಮಾಂಸಂ ಚ ಕೃತಾನ್ನಂ ಚ ಯುಧಿಷ್ಠಿರ ॥೪॥

ಸರ್ವಾಸ್ವವಸ್ಥಾಸ್ವೇತಾನಿ ಬ್ರಾಹ್ಮಣಃ ಪರಿವರ್ಜಯೇತ್ ।
ಏತೇಷಾಂ ವಿಕ್ರಯಾತ್ ತಾತ ಬ್ರಾಹ್ಮಣೋ ನರಕಂ ವ್ರಜೇತ್ ॥೫॥

ಭೀಷ್ಮರು – ಯುಧಿಷ್ಠಿರನೇ! ಮದ್ಯ, ಲವಣ, ಎಳ್ಳು, ರೋಮವಿರುವ ಪಶುಗಳು, ಎತ್ತುಗಳು, ಜೇನುತುಪ್ಪ, ಮಾಂಸ ಹಾಗೂ ಸಿದ್ಧವಾದ ಅನ್ನ ಇವುಗಳನ್ನು ಮಾರುವುದನ್ನು ಬ್ರಾಹ್ಮಣನು ಎಲ್ಲಾ ಅವಸ್ಥೆಗಳಲ್ಲೂ ವರ್ಜಿಸಬೇಕು. ಎಲೈ ಪ್ರೀತಿ-ಪಾತ್ರನೇ! ಇವುಗಳನ್ನು ಮಾರುವುದರಿಂದ ಬ್ರಾಹ್ಮಣನು ನರಕಕ್ಕೆ ಹೋಗುತ್ತಾನೆ.

ಅಜೋಽಗ್ನಿರ್ವರುಣೋ ಮೇಷಃ ಸೂರ್ಯೋಽಶ್ವಃ ಪೃಥಿವೀ ವಿರಾಟ್ ।
ಧೇನುರ್ಯಜ್ಞಶ್ಚ ಸೋಮಶ್ಚ ನ ವಿಕ್ರೇಯಾಃ ಕಥಂಚನ ॥೬॥

ಆಡಿನಲ್ಲಿ ಅಗ್ನಿಯ ಸನ್ನಿಧಾನ; ಹೋತದಲ್ಲಿ ವರುಣನ ಸನ್ನಿಧಾನ; ಅಶ್ವದಲ್ಲಿ ಸೂರ್ಯನ ಸನ್ನಿಧಾನ; ಪೃಥಿವಿಯಲ್ಲಿ ಬ್ರಹ್ಮನ ಸನ್ನಿಧಾನ; ಧೇನುವಿನಲ್ಲಿ ಯಜ್ಞ ಮತ್ತು ಸೋಮಗಳ ಸನ್ನಿಧಾನವಿದೆ. ಆದ್ದರಿಂದ ಅವುಗಳನ್ನು ಯಾವ ಕಾರಣ-ದಿಂದಲೂ ಮಾರಬಾರದು.

ಪಕ್ವೇನಾಮಸ್ಯ ನಿಮಯಂ ನ ಪ್ರಶಂಸಂತಿ ಸಾಧವಃ ।
ನಿಮಯೇತ್ ಪಕ್ವಮಾಮೇನ ಭೋಜನಾರ್ಥಾಯ ಭಾರತ ॥೭॥

ಪಕ್ವಪದಾರ್ಥವನ್ನು ಕೊಟ್ಟು ಹಸಿಯ ಪದಾರ್ಥಗಳನ್ನು ತೆಗೆದುಕೊಳ್ಳುವುದನ್ನು ಸಜ್ಜನರು ಪ್ರಶಂಸಿಸುವುದಿಲ್ಲ. ಎಲೈ ಭಾರತನೇ! ಭೋಜನದ ಸಲುವಾಗಿ ಹಸಿಯ ಪದಾರ್ಥವನ್ನು ಕೊಟ್ಟು ಪಕ್ವವಾದ ಪದಾರ್ಥವನ್ನು ತೆಗೆದುಕೊಳ್ಳಬಹುದು.

ವಯಂ ಸಿದ್ಧಮಶಿಷ್ಯಾಮೋ ಭವಾನ್ ಸಾಧಯತಾಮಿದಮ್ ।
ಏವಂ ಸಮೀಕ್ಷ್ಯ ನಿಮಯನ್ ನಾಧರ್ಮೋಽಸ್ತಿ ಕದಾಚನ ॥೮॥

ನಾವು ಸಿದ್ಧವಾದ ಅನ್ನವನ್ನು ಸ್ವೀಕರಿಸುತ್ತೇವೆ. ನೀವು ಇದರಿಂದ ಅನ್ನವನ್ನು ಸಿದ್ಧಪಡಿಸಿ ಸ್ವೀಕರಿಸಿ ಎಂದು ಹಸಿಯ ಪದಾರ್ಥವನ್ನು ಕೊಡಬಹುದು - ಈ ರೀತಿಯಲ್ಲಿ ವಿನಿಮಯವನ್ನು ಮಾಡಿಕೊಂಡರೆ ಅದರಲ್ಲಿ ಎಂದೂ ಅಧರ್ಮವಿರುವುದಿಲ್ಲ.

ಅತ್ರ ತೇ ವರ್ತಯಿಷ್ಯಾಮಿ ಯಥಾ ಧರ್ಮಃ ಪುರಾತನಃ।
ವ್ಯವಹಾರಪ್ರವೃತ್ತಾನಾಂ ತನ್ನಿಬೋಧ ಯುಧಿಷ್ಠಿರ ॥೯॥

ಎಲೈ ಯುಧಿಷ್ಠಿರನೇ! ವ್ಯವಹಾರದಲ್ಲಿ ಪ್ರವೃತ್ತರಾದವರಿಗೆ ಹಿಂದೆ ಧರ್ಮವು ಹೇಗಿದ್ದಿತು ಎಂದು ನಾನು ನಿನಗೆ ಹೇಳುವೆನು. ಅದನ್ನು ಕೇಳು.

ಭವತೇऽಹಂ ದದಾನೀದಂ ಭವಾನೇತತ್ ಪ್ರಯಚ್ಛತು।
ರುಚಿತೇ ವರ್ತತೇ ಧರ್ಮೋ ನ ಬಲಾತ್ ಸಂಪ್ರವರ್ತಿತೇ ॥೧೦॥

'ನಾನು ಇದನ್ನು ನಿನಗೆ ಕೊಡುತ್ತೇನೆ; ಇದನ್ನು ನೀನು ನನಗೆ ಕೊಡು' ಹೀಗೆ ಪರಸ್ಪರಸಮ್ಮತಿಯಿಂದ ಮಾಡಿದ ವಿನಿಮಯವ್ಯವಹಾರದಲ್ಲಿ ಧರ್ಮವಿದೆ. ಬಲಾತ್ಕಾರದಿಂದ ನಡೆಯುವುದರಲ್ಲಿ ಧರ್ಮವಿಲ್ಲ.

ಇತ್ಯೇವಂ ಸಂಪ್ರವರ್ತಂತ ವ್ಯವಹಾರಾಃ ಪುರಾತನಾಃ।
ಋಷೀಣಾಮಿತರೇಷಾಂ ಚ ಸಾಧು ಚೇದಮಸಂಶಯಮ್ ॥೧೧॥

ಪುರಾತನಕಾಲದಲ್ಲಿ ಈ ರೀತಿಯ ವ್ಯವಹಾರವು ನಡೆಯುತ್ತಿದ್ದಿತು. ಇಂತಹ ವ್ಯವಹಾರವು ಋಷಿಗಳಿಗೂ ಮತ್ತು ಇತರರಿಗೂ ಬಹಳ ಸಮ್ಮತವಾದವು ಎಂಬುದರಲ್ಲಿ ಸಂಶಯವಿಲ್ಲ.

ಯುಧಿಷ್ಠಿರಃ

ಅಥ ತಾತ ಯದಾ ಸರ್ವಾಃ ಶಸ್ತ್ರಮಾದದತೇ ಪ್ರಜಾಃ।
ವ್ಯತ್ಯಾಕ್ರಮಂತಿ ಸ್ವಧರ್ಮೇಭ್ಯಃ ಕ್ಷತ್ರಸ್ಯ ಕ್ಷೀಯತೇ ಬಲಮ್ ॥೧೨॥

ರಾಜಾ ತ್ರಾತಾ ನ ಲೋಕೇ ಸ್ಯಾತ್ ಕಿಂ ತದಾ ಸ್ಯಾತ್ ಪರಾಯಣಮ್ ।
ಏತನ್ಮೇ ಸಂಶಯಂ ಬ್ರೂಹಿ ವಿಸ್ತರೇಣ ಪಿತಾಮಹ ॥೧೩॥

ಯುಧಿಷ್ಠಿರ – ಎಲೈ ಪ್ರೀತಿಪಾತ್ರನೇ! ಕ್ಷತ್ರಿಯರ ಬಲವು ಕ್ಷೀಣಿಸಿ, ಅವರು ತಮ್ಮ ಧರ್ಮದಿಂದ ಚ್ಯುತರಾಗಿ ಯಾವಾಗ ಎಲ್ಲ ಪ್ರಜೆಗಳೂ ಶಸ್ತ್ರವನ್ನು ಹಿಡಿಯುತ್ತಾರೆಯೋ ಲೋಕವನ್ನು ರಕ್ಷಿಸುವ ರಾಜನು ಇರುವುದಿಲ್ಲವೋ ಆಗ ಲೋಕಕ್ಕೆ ಯಾವುದು ಆಶ್ರಯವಾಗುತ್ತದೆ? ಪಿತಾಮಹನೇ! ಈ ನನ್ನ ಸಂಶಯವನ್ನು ವಿಸ್ತಾರವಾಗಿ ಪರಿಹರಿಸು.

ಭೀಷ್ಮಃ

ದಾನೇನ ತಪಸಾ ಯಜ್ಞೈರದ್ರೋಹೇಣ ದಮೇನ ಚ ।
ಬ್ರಾಹ್ಮಣಪ್ರಮುಖಾ ವರ್ಣಾಃ ಕ್ಷೇಮಮಿಚ್ಛೇಯುರಾತ್ಮನಃ ॥೧೪॥

ಭೀಷ್ಮರು – ಬ್ರಾಹ್ಮಣಪ್ರಮುಖವಾದ ವರ್ಣಗಳು ದಾನದಿಂದ, ತಪಸ್ಸಿನಿಂದ, ಯಜ್ಞಗಳಿಂದ, ಅದ್ರೋಹದಿಂದ ಮತ್ತು ಇಂದ್ರಿಯನಿಗ್ರಹದಿಂದ ತಮ್ಮ ಕ್ಷೇಮವನ್ನು ಬಯಸುತ್ತವೆ.

ತೇಷಾಂ ಯೇ ವೇದಬಲಿನಸ್ತ ಉತ್ಥಾಯ ಸಮಂತತಃ ।
ರಾಜ್ಞೋ ಬಲಂ ವರ್ಧಯೇಯುರ್ಮಹೇಂದ್ರಸ್ಯೇವ ದೇವತಾಃ ॥೧೫॥

ಅವರಲ್ಲಿ ಯಾರು ವೇದಬಲವುಳ್ಳವರೋ ಅವರು ಎಲ್ಲ ಕಡೆಗಳಿಂದಲೂ ಎದ್ದು ದೇವತೆಗಳು ಇಂದ್ರನ ಬಲವನ್ನು ಅಭಿವೃದ್ಧಿಪಡಿಸಿದಂತೆ ರಾಜನ ಬಲವನ್ನು ಅಭಿವೃದ್ಧಿಪಡಿಸಬೇಕು.

ರಾಜ್ಞೋ ಹಿ ಕ್ಷೀಯಮಾಣಸ್ಯ ಬ್ರಹ್ಮೈವಾಹುಃ ಪರಾಯಣಮ್ ।
ತಸ್ಮಾದ್ ಬ್ರಹ್ಮಬಲೇನೈವ ಸಮುತ್ಥೇಯಂ ವಿಜಾನತಾ ॥೧೬॥

ದುರ್ಬಲನಾಗುತ್ತಿರುವ ರಾಜನಿಗೆ ಬ್ರಾಹ್ಮಣರೇ ಶ್ರೇಷ್ಠವಾದ ಆಶ್ರಯ. ಆದ್ದರಿಂದ ವಿವೇಕಿಯಾದವನು ಬ್ರಹ್ಮಬಲದಿಂದಲೇ ಪುನಃ ಮೇಲೆ ಬರಬೇಕು.

ಯದಾ ತು ವಿಜಯೀ ರಾಜಾ ಕ್ಷೇಮಂ ರಾಷ್ಟ್ರೇऽಭಿಸಂದಧೇತ್ ।
ತದಾ ವರ್ಣಾ ಯಥಾಧರ್ಮಮಾವಿಶೇಯುಃ ಸ್ವಕರ್ಮಸು ॥೧೭॥

ಯಾವಾಗ ರಾಜನು ವಿಜಯವನ್ನು ಹೊಂದಿ, ರಾಷ್ಟ್ರದಲ್ಲಿ ಕ್ಷೇಮವನ್ನು ಉಂಟು ಮಾಡುವನೋ ಆಗ ವರ್ಣಗಳು ತಮ್ಮ ತಮ್ಮ ಧರ್ಮಗಳಿಗೆ ಅನುಸಾರವಾಗಿ ತಮ್ಮ ತಮ್ಮ ಕರ್ಮಗಳಲ್ಲಿ ನಿರತವಾದಾವು!

ಉನ್ಮರ್ಯಾದೇ ಪ್ರವೃತ್ತೇ ತು ದಸ್ಯುಭಿಃ ಸಂಕರೇ ಕೃತೇ ।
ಸರ್ವೇ ವರ್ಣಾ ನ ದುಷ್ಯೇಯುಃ ಶಸ್ತ್ರವಂತೋ ಯುಧಿಷ್ಠಿರ ॥೧೮॥

ಎಲೈ ಯುಧಿಷ್ಠಿರನೇ! ದಸ್ಯುಗಳು ಮರ್ಯಾದೆಯನ್ನು ಮೀರಿ ಪ್ರವೃತ್ತರಾದಾಗ ಧರ್ಮಸಂಕರಗಳನ್ನು ಮಾಡಿದಾಗ ಎಲ್ಲ ವರ್ಣದವರೂ ಶಸ್ತ್ರವನ್ನು ಹಿಡಿದರೆ ದೋಷವಿಲ್ಲ.

ಯುಧಿಷ್ಠಿರಃ

ಅಥ ಚೇತ್ ಸರ್ವತಃ ಕ್ಷತ್ರಂ ಪ್ರದುಷ್ಯೇದ್ ಬ್ರಾಹ್ಮಣಾನ್ ಪ್ರತಿ ।
ಕಸ್ತಸ್ಯ ಬ್ರಾಹ್ಮಣಸ್ತ್ರಾತಾ ಕೋ ಧರ್ಮಃ ಕಿಂ ಪರಾಯಣಮ್ ॥೧೯॥

ಯುಧಿಷ್ಠಿರ – ಒಂದು ಪಕ್ಷ ಎಲ್ಲ ಕ್ಷತ್ರಿಯರೂ ಬ್ರಾಹ್ಮಣರಿಗೆ ವಿರುದ್ಧವಾಗಿ ನಡೆದುಕೊಂಡರೆ ಆಗ ಬ್ರಾಹ್ಮಣರನ್ನು ರಕ್ಷಿಸುವವನು ಯಾವನು? ಆಗ ಯಾವುದು ಧರ್ಮ? ಯಾವುದು ಆಶ್ರಯವಾಗುತ್ತದೆ?

ಭೀಷ್ಮಃ

ತಪಸಾ ಬ್ರಹ್ಮಚರ್ಯೇಣ ಶಸ್ತ್ರೇಣ ಚ ಬಲೇನ ಚ ।
ಅಮಾಯಯಾ ಮಾಯಯಾ ಚ ನಿಯಂತವ್ಯಂ ತದಾ ಭವೇತ್ ॥೨೦॥

ಭೀಷ್ಮರು – ಆಗ ತಪಸ್ಸಿನಿಂದಲೂ, ಬ್ರಹ್ಮಚರ್ಯೆಯಿಂದಲೂ, ಶಸ್ತ್ರದಿಂದಲೂ, ಬಲದಿಂದಲೂ, ನಿಷ್ಕಪಟವಾದ ಉಪಾಯಗಳಿಂದಲೂ, ಕಪಟೋಪಾಯಗಳಿಂದಲೂ ಕ್ಷತ್ರಿಯರನ್ನು ನಿಯಂತ್ರಿಸಬೇಕು.

ಕ್ಷತ್ರಿಯಸ್ಯಾತಿವೃತ್ತಸ್ಯ ಬ್ರಾಹ್ಮಣೇಷು ವಿಶೇಷತಃ।
ಬ್ರಹ್ಮೈವ ಸನ್ನಿಯಂತೃ ಸ್ಯಾತ್ ಕ್ಷತ್ರಂ ಹಿ ಬ್ರಹ್ಮಸಂಭವಮ್ ॥೨೧॥

ಕ್ಷತ್ರಿಯರು ತಮ್ಮ ಎಲ್ಲೆಯನ್ನು ಮೀರಿ ನಡೆದರೆ ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರಿಗೆ ಅಪಚಾರವನ್ನು ಮಾಡಿದರೆ ಬ್ರಾಹ್ಮಣಜಾತಿಯೇ ಅವರನ್ನು ನಿಯಂತ್ರಿಸಬೇಕು. ಏಕೆಂದರೆ, ಕ್ಷತ್ರಿಯರು ಬ್ರಾಹ್ಮಣಜಾತಿಯಿಂದ ಹುಟ್ಟಿದವರು.

ಅದ್ಭ್ಯೋऽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್।
ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥೨೨॥

ಜಲದಿಂದ ಅಗ್ನಿ, ಬ್ರಾಹ್ಮಣರಿಂದ ಕ್ಷತ್ರಿಯರು, ಶಿಲೆಯಿಂದ ಲೋಹ ಉತ್ಪನ್ನವಾಗಿವೆ. ಉಳಿದ ಎಲ್ಲ ಕಡೆ ಇರುವ ಅವುಗಳ ಸಾಮರ್ಥ್ಯವು ತಮ್ಮ ಮೂಲ ಕಾರಣಗಳಲ್ಲಿ ನಾಶವನ್ನು ಹೊಂದುತ್ತದೆ.

ಯದಾ ಛಿನತ್ತ್ಯಯೋऽಶ್ಮಾನಮಗ್ನಿಶ್ಚಾಪ್ಸೋऽಭಿಪದ್ಯತೇ।
ಕ್ಷತ್ರಂ ಚ ಬ್ರಾಹ್ಮಣಂ ದ್ವೇಷ್ಟಿ ತದಾ ಶಾಮ್ಯಂತಿ ತೇ ತ್ರಯಃ ॥೨೩॥

ಕಬ್ಬಿಣವು ಕಲ್ಲನ್ನು ಛೇದಿಸಿದರೆ, ಅಗ್ನಿಯು ಜಲವನ್ನು ಪ್ರವೇಶಿಸಿದರೆ, ಕ್ಷತ್ರಿಯನು ಬ್ರಾಹ್ಮಣನನ್ನು ದ್ವೇಷಿಸಿದರೆ ಆಗ ಆ ಮೂವರೂ ನಾಶವನ್ನು ಹೊಂದುತ್ತಾರೆ.

ತಸ್ಮಾದ್ ಬ್ರಹ್ಮಣಿ ಶಾಮ್ಯಂತಿ ಕ್ಷತ್ರಿಯಾಣಾಂ ಯುಧಿಷ್ಠಿರ।
ಸಮುದೀರ್ಣಾನ್ಯಜೇಯಾನಿ ತೇಜಾಂಸಿ ಚ ಬಲಾನಿ ಚ ॥೨೪॥

ಎಲೈ ಯುಧಿಷ್ಠಿರನೇ! ಆದ್ದರಿಂದ ಕ್ಷತ್ರಿಯರ ಉನ್ನತವಾದ ತೇಜಸ್ಸು ಮತ್ತು ಬಲಗಳು ಬ್ರಾಹ್ಮಣರಲ್ಲಿ ನಾಶವನ್ನು ಹೊಂದುತ್ತವೆ.

ಬ್ರಹ್ಮವೀರ್ಯೇ ಮೃದೂಭೂತೇ ಕ್ಷತ್ರವೀರ್ಯೇ ಚ ದುರ್ಬಲೇ।
ದುಷ್ಟೇಷು ಸರ್ವವರ್ಣೇಷು ಬ್ರಾಹ್ಮಣಾನ್ ಪ್ರತಿ ಸರ್ವಶಃ ॥೨೫॥

ಯೇ ತತ್ರ ಯುದ್ಧಂ ಕುರ್ವಂತಿ ತ್ಯಕ್ತ್ವಾ ಜೀವಿತಮಾತ್ಮನಃ।
ಬ್ರಾಹ್ಮಣಾನ್ ಪರಿರಕ್ಷಂತೋ ಧರ್ಮಮಾತ್ಮಾನಮೇವ ಚ ॥೨೬॥

ಮನಸ್ವಿನೋ ಮನ್ಯುಮಂತಃ ಪುಣ್ಯಲೋಕಾ ಭವಂತಿ ತೇ।
ಬ್ರಾಹ್ಮಣಾರ್ಥಂ ಹಿ ಸರ್ವೇಷಾಂ ಶಸ್ತ್ರಗ್ರಹಣಮಿಷ್ಯತೇ ॥೨೭॥

ಬ್ರಹ್ಮಸಾಮರ್ಥ್ಯವು ಮೃದುವಾಗಿ, ಕ್ಷತ್ರಿಯಸಾಮರ್ಥ್ಯವು ದುರ್ಬಲವಾಗಿ ಎಲ್ಲ ವರ್ಣದವರೂ ಬ್ರಾಹ್ಮಣರಿಗೆ ವಿರೋಧಿಗಳಾಗಿ ಇರುವ ಸಂದರ್ಭದಲ್ಲಿ ಯಾರು ತಮ್ಮ ಜೀವಿತದ ಹಂಗನ್ನು ತೊರೆದು ಬ್ರಾಹ್ಮಣರನ್ನು ತಮ್ಮನ್ನು ಮತ್ತು ಧರ್ಮವನ್ನು ರಕ್ಷಿಸುತ್ತಾ ಯುದ್ಧವನ್ನು ಮಾಡುತ್ತಾರೆಯೋ ಅಂತಹ ಧೈರ್ಯಶಾಲಿಗಳೂ ಕೋಪ-ವುಳ್ಳವರೂ ಆದವರು ಪುಣ್ಯಲೋಕವನ್ನು ಪಡೆಯುತ್ತಾರೆ. ಬ್ರಾಹ್ಮಣರ ರಕ್ಷಣೆಯ ಸಲುವಾಗಿ ಎಲ್ಲರೂ ಶಸ್ತ್ರಗ್ರಹಣವನ್ನು ಮಾಡಬೇಕೆಂದು ಹೇಳಲ್ಪಡುತ್ತದೆ.

ಅತಿ ಸ್ವಿಷ್ಟಸ್ವಧೀತಾನಾಂ ಲೋಕಾನತಿ ತಪಸ್ವಿನಾಮ್ ।
ಅನಾಶಕಾಗ್ನ್ಯೌರ್ವಿಶತಾಂ ಶೂರಾ ಯಾಂತಿ ಪರಾಂ ಗತಿಮ್ ।
ಏವಮೇವಾತ್ಮನಸ್ತ್ಯಾಗಾನ್ನಾನ್ಯಂ ಧರ್ಮಂ ವಿದುರ್ಜನಾಃ ॥೨೮॥

ಶೂರರಾದವರು ಯಾಗ ಮತ್ತು ಅಧ್ಯಯನ ಮಾಡಿದವರಿಗಿಂತಲೂ ಉತ್ತಮ-ವಾದ ಲೋಕಗಳನ್ನು ತಪಸ್ವಿಗಳಿಗಿಂತಲೂ ಉತ್ತಮವಾದ ಲೋಕಗಳನ್ನು ಉಪವಾಸ ಮತ್ತು ಯಾಗಗಳನ್ನು ಮಾಡಿದವರಿಗಿಂತಲೂ ಉತ್ತಮವಾದ ಲೋಕಗಳನ್ನು ಪಡೆಯುತ್ತಾರೆ. ಬ್ರಾಹ್ಮಣರ ಸಲುವಾಗಿ ಆತ್ಮತ್ಯಾಗವನ್ನು ಮಾಡುವುದಕ್ಕಿಂತಲೂ ದೊಡ್ಡದಾದ ಇನ್ನೊಂದು ಧರ್ಮವಿಲ್ಲವೆಂದು ವಿವೇಕಿಗಳು ತಿಳಿಯುತ್ತಾರೆ.

ತೇಭ್ಯೋ ನಮಶ್ಚ ಭದ್ರಂ ಚ ಯೇ ಶರೀರಾಣಿ ಜುಹ್ವತಿ।
ಬ್ರಹ್ಮದ್ವಿಷೋ ನಿಯಚ್ಛಂತಸ್ತೇಷಾಂ ನೋಽಸ್ತು ಸಲೋಕತಾ।
ಬ್ರಹ್ಮಲೋಕಜಿತಃ ಸ್ವರ್ಗ್ಯಾನ್ ವೀರಾಂಸ್ತಾನ್ ಮನುರಬ್ರವೀತ್ ॥೨೯॥

ನಿಮಗೆ ಮಂಗಳವಾಗಲಿ, ಯಾರು ಅದಕ್ಕಾಗಿ ತಮ್ಮ ಶರೀರವನ್ನು ಹೋಮ

ಮಾಡುತ್ತಾರೆಯೋ ಅವರಿಗೆ ನನ್ನ ನಮಸ್ಕಾರ. ಬ್ರಾಹ್ಮಣದ್ವೇಷವನ್ನು ಮಾಡುವವರನ್ನು ನಿಯಂತ್ರಿಸುವವರಿಗೆ ಯಾವ ಲೋಕಗಳು ಉಂಟಾಗುತ್ತವೆಯೋ ನಮಗೂ ಆ ಲೋಕಗಳು ಉಂಟಾಗಲಿ. ಅಂತಹ ವೀರರು ಬ್ರಹ್ಮಲೋಕವನ್ನು ಜಯಿಸಿ ಸ್ವರ್ಗದಲ್ಲಿ ವಾಸಿಸುವವರು ಎಂದು ಮನುವು ಹೇಳಿದ್ದಾನೆ.

ಯಥಾಶ್ವಮೇಧಾವಭೃಥೇ ಸ್ನಾತಾಃ ಪೂತಾ ಭವಂತ್ಯುತ।
ದುಷ್ಕೃತಃ ಸುಕೃತಶ್ಚೈವ ತಥಾ ಶಸ್ತ್ರಹತಾ ರಣೇ ॥೩೦॥

ಅಶ್ವಮೇಧಯಾಗದ ಅವಭೃಥಸ್ನಾನವನ್ನು ಮಾಡಿದವರು ಹೇಗೆ ಪವಿತ್ರರಾಗುತ್ತಾರೆಯೋ ಅದರಂತೆ ದುಷ್ಕರ್ಮವನ್ನು ಮಾಡಿದವರಾಗಲೀ, ಸತ್ಕರ್ಮವನ್ನು ಮಾಡಿದವರಾಗಲೀ ಯುದ್ಧದಲ್ಲಿ ಶಸ್ತ್ರದಿಂದ ಹತರಾದರೆ ಪವಿತ್ರರಾಗುತ್ತಾರೆ.

ಭವತ್ಯಧರ್ಮೋ ಧರ್ಮೋ ಹಿ ಧರ್ಮಾಧರ್ಮಾವುಭಾವಪಿ।
ಕಾರಣಾದ್ ದೇಶಕಾಲಸ್ಯ ದೇಶಕಾಲಃ ಸ ತಾದೃಶಃ ॥೩೧॥

ದೇಶಕಾಲಗಳ ನಿಮಿತ್ತದಿಂದ ಅಧರ್ಮವು ಧರ್ಮವೂ ಧರ್ಮವು ಅಧರ್ಮವೂ ಆಗುತ್ತದೆ. ದೇಶಕಾಲಗಳ ಪ್ರಭಾವವು ಅಂತಹದು.

ಮೈತ್ರ್ಯಾಃ ಕ್ರೂರಾಣಿ ಕುರ್ವಂತೋ ಜಯಂತಿ ಸ್ವರ್ಗಮುತ್ತಮಮ್।
ಧರ್ಮ್ಯಾಃ ಪಾಪಾನಿ ಕುರ್ವಂತೋ ಗಚ್ಛಂತಿ ಪರಮಾಂ ಗತಿಮ್ ॥೩೨॥

ಮೊದಲು ಸರ್ವಜನಮಿತ್ರರಾದವರು ದೇವಬ್ರಾಹ್ಮಣರ ಸಲುವಾಗಿ ಭರ್ತ್ಸನ ತಾಡನಾದಿಗಳನ್ನು ಮಾಡಿದರೆ ಅವರು ಉತ್ತಮಸ್ವರ್ಗವನ್ನೇ ಪಡೆಯುತ್ತಾರೆ. ತಮ್ಮ ಧರ್ಮದಲ್ಲಿ ಇರುವವರು ದೇವಬ್ರಾಹ್ಮಣರ ಸಲುವಾಗಿ ದುಷ್ಪಹನನಾದಿ ಕರ್ಮಗಳನ್ನು ಮಾಡಿದರೂ ಅದರಿಂದ ಅವರು ಶ್ರೇಷ್ಠವಾದ ಗತಿಯನ್ನೇ ಹೊಂದುತ್ತಾರೆ. ಬ್ರಾಹ್ಮಣೋಪದ್ರವಕಾಲದಲ್ಲಿ ಧರ್ಮವು ಅಧರ್ಮವಾಯಿತು. ಬ್ರಾಹ್ಮಣರ ಉಪದ್ರವವನ್ನು ಮಾಡುವ ವ್ಯಕ್ತಿಯಲ್ಲಿ ಸ್ನೇಹವನ್ನು ಮಾಡಿದರೆ ಅದು ಅಧರ್ಮವಾಯಿತು ಎಂದು ಅಭಿಪ್ರಾಯ – ಲಕ್ಷ್ಯಲಂಕಾರ.

ಬ್ರಾಹ್ಮಣಸ್ತ್ರಿಷು ಕಾಲೇಷು ಶಸ್ತ್ರಂ ಗೃಹ್ಣನ್ನ ದುಷ್ಯತಿ।
ಆತ್ಮತ್ರಾಣೇ ವರ್ಣದೋಷೇ ದುರ್ಗಸ್ಯ ನಿಯಮೇಷು ಚ ॥೩೩॥

ತನ್ನನ್ನು ರಕ್ಷಿಸಿಕೊಳ್ಳಲು ಅಥವಾ ಬ್ರಾಹ್ಮಣರಿಗೆ ವಿಪತ್ತು ಒದಗಿದಾಗ ಅಥವಾ ದುರ್ಗದ ನಿಯಮಗಳಂತೆ (ಸರ್ವಸ್ವಹರಣಕಾಲದಲ್ಲಿ) ಈ ಮೂರು ಸಮಯ-ಗಳಲ್ಲಿ ಶಸ್ತ್ರವನ್ನು ಹಿಡಿಯುವ ಬ್ರಾಹ್ಮಣನು ದೋಷಕ್ಕೆ ಒಳಗಾಗುವುದಿಲ್ಲ.

ಯುಧಿಷ್ಠಿರಃ

ಅಭ್ಯುತ್ಥಿತೇ ದಸ್ಯುಬಲೇ ಕ್ಷತ್ರಾರ್ಥೇ ವರ್ಣಸಂಕರೇ।
ಸಂಪ್ರಮೂಢೇಷು ವರ್ಣೇಷು ಯದ್ಯನ್ಯೋಽಭಿಭವೇದ್ ಬಲೀ ॥೩೪॥

ಬ್ರಾಹ್ಮಣೋ ಯದಿ ವಾ ವೈಶ್ಯಃ ಶೂದ್ರೋ ವಾ ರಾಜಸತ್ತಮ।
ದಸ್ಯುಭ್ಯೋಽಥ ಪ್ರಜಾ ರಕ್ಷೇದ್ ದಂಡಂ ಧರ್ಮೇಣ ಧಾರಯನ್ ॥೩೫॥

ಕಾರ್ಯಂ ಕುರ್ಯಾನ್ನ ವಾ ಕುರ್ಯಾತ್ ಸಂವಾಯೋರ್ ವಾ ಭವೇನ್ನ ವಾ।
ತಸ್ಮಾಚ್ಛಸ್ತ್ರಂ ಗ್ರಹೀತವ್ಯಮನ್ಯತ್ರ ಕ್ಷತ್ರಬಂಧುತಃ ॥೩೬॥

ಯುಧಿಷ್ಠಿರ – ಕ್ಷತ್ರಿಯರ ವಿರುದ್ಧವಾಗಿ ದಸ್ಯುಬಲವು ಉನ್ನದ್ಧವಾದಾಗ ವರ್ಣ-ಸಂಕರವುಂಟಾಗಿ ಎಲ್ಲ ವರ್ಣದವರೂ ದಿಗ್ಭ್ರಾಂತರಾದಾಗ ಬ್ರಾಹ್ಮಣನಾಗಲೀ, ವೈಶ್ಯನಾಗಲೀ ಅಥವಾ ಶೂದ್ರನಾಗಲೀ ಬಲಿಷ್ಠನಾದ ಇನ್ನೊಬ್ಬನು ದಂಡವನ್ನು ಧರ್ಮದಿಂದ ಪ್ರಯೋಗಿಸುತ್ತಾ ದಸ್ಯುಗಳಿಂದ ಪ್ರಜೆಗಳನ್ನು ರಕ್ಷಿಸಿದರೆ ಅವನು ಕ್ಷತ್ರಿಯನ ಬೇರೆ ಕಾರ್ಯವನ್ನು ಮಾಡಲಿ ಅಥವಾ ಬಿಡಲಿ ಅವನನ್ನು ತಡೆಯಬೇಕೇ ಬೇಡವೇ? ಅವನು ಕ್ಷತ್ರಿಯನಲ್ಲದಿದ್ದರೆ ಅವನಿಂದ ಶಸ್ತ್ರವನ್ನು ಕಸಿದುಕೊಳ್ಳಬೇಕೇ ಬೇಡವೇ?

ಭೀಷ್ಮಃ

ಅಪಾರೇ ಯೋ ಭವೇತ್ ಪಾರಮಪ್ಲವೇ ಯಃ ಪ್ಲವೋ ಭವೇತ್।
ಶೂದ್ರೋ ವಾ ಯದಿ ವಾಪ್ಯನ್ಯಃ ಸರ್ವಥಾ ಮಾನಮರ್ಹತಿ ॥೩೭॥

ಭೀಷ್ಮರು – ಶೂದ್ರನಾಗಲೀ ಅಥವಾ ಇನ್ನೊಬ್ಬನಾಗಲೀ ದಡವಿಲ್ಲದ ಕಡೆಯಲ್ಲಿ ದಡವಾದರೆ, ನೌಕೆಯಲ್ಲಿದ ಸ್ಥಳದಲ್ಲಿ ನೌಕೆಯಾದರೆ ಅವನು ಸರ್ವಥಾ ಸಮ್ಮಾನಕ್ಕೆ ಅರ್ಹನಾಗುತ್ತಾನೆ.

ಯಮಾಶ್ರಿತ್ಯ ನರಾ ರಾಜನ್ ವರ್ತಯೇಯುರ್ಯಥಾಸುಖಮ್ ।
ಅನಾಥಾಃ ಪಾಲ್ಯಮಾನಾ ವೈ ದಸ್ಯುಭಿಃ ಪರಿಪೀಡಿತಾಃ ॥೩೮॥

ತಮೇವ ಪೂಜಯೇರಂಸ್ತೇ ಪ್ರೀತ್ಯಾ ಸ್ವಮಿವ ಬಾಂಧವಮ್ ।
ಮಹದ್ ಹ್ಯಭೀಕ್ಷ್ಣಂ ಕೌರವ್ಯ ಕರ್ತಾ ಸನ್ಮಾನಮರ್ಹತಿ ॥೩೯॥

ಎಲೈ ರಾಜನೇ! ಅನಾಥರಾದ ದಸ್ಯುಗಳಿಂದ ಪೀಡಿತರಾದ ಯಾವ ಜನರು ಯಾವನಿಂದ ಪಾಲಿಸಲ್ಪಟ್ಟು ಯಾವನನ್ನು ಆಶ್ರಯಿಸಿ ಸುಖದಿಂದ ಜೀವಿಸುತ್ತಾರೆಯೋ ಅವನನ್ನೇ ತಮ್ಮ ಬಂಧುವಿನಂತೆ ಪ್ರೀತಿಯಿಂದ ಪೂಜಿಸುತ್ತಾರೆ. ಎಲೈ ಕೌರವ್ಯನೇ! ಅಂತಹ ಕಾರ್ಯವನ್ನು ಮಾಡುವವನು ಸತತವಾಗಿ ದೊಡ್ಡ ಸನ್ಮಾನಕ್ಕೆ ಅರ್ಹನಾಗುತ್ತಾನೆ.

ಕಿಮುಕ್ಷ್ಣಾऽವಹತಾ ಕೃತ್ಯಂ ಕಿಂ ಧೇನ್ವಾ ಚಾಪ್ಯದುಗ್ಧಯಾ ।
ವಂಧ್ಯಯಾ ಭಾರ್ಯಯಾ ಕೋऽರ್ಥಃ ಕೋऽರ್ಥೋ ರಾಜ್ಞಾಪ್ಯರಕ್ಷತಾ ॥

ಭಾರವನ್ನು ಹೊರದ ಎತ್ತಿನಿಂದಾಗಲೀ, ಹಾಲನ್ನು ಕೊಡದ ಹಸುವಿನಿಂದಾಗಲೀ, ವಂಧ್ಯೆಯಾದ ಪತ್ನಿಯಿಂದಾಗಲೀ ಏನು ಪ್ರಯೋಜನ? ಹಾಗೆಯೇ ರಕ್ಷಿಸದಿರುವ ರಾಜನಿಂದಲಾದರೂ ಏನು ಪ್ರಯೋಜನ?

ಯಥಾ ದಾರುಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ ।
ಯಥಾ ಹ್ಯನೇತ್ರಃ ಶಕಟಃ ಪಥಿ ಕ್ಷೇತ್ರಂ ಯಥೋಷರಮ್ ॥೪೧॥

ಏವಂ ಬ್ರಹ್ಮಾನಧೀಯಾನಂ ರಾಜಾ ಯಶ್ಚ ನ ರಕ್ಷಿತಾ ।
ನ ವರ್ಷತಿ ಚ ಯೋ ಮೇಘಃ ಸರ್ವ ಏತೇ ನಿರರ್ಥಕಾಃ ॥೪೨॥

ಕಟ್ಟಿಗೆಯ ಆನೆಯಂತೆ, ಚರ್ಮಮಯವಾದ ಮೃಗದಂತೆ, ದಾರಿಯಲ್ಲಿರುವ ನಾಯಕನಿಲ್ಲದ ಶಕಟದಂತೆ, ಬಿತ್ತಿದುದು ಬೆಳೆಯದಿರುವ ಮರುಭೂಮಿಯಂತೆ, ವೇದಾಧ್ಯಯನವನ್ನು ಮಾಡದ ಬ್ರಾಹ್ಮಣನಂತೆ, ಮಳೆಯನ್ನು ಸುರಿಸದಿರುವ ಮೇಘದಂತೆ ರಕ್ಷಣೆಯನ್ನು ಮಾಡದಿರುವ ರಾಜನಿಂದ ಏನು ಪ್ರಯೋಜನ? ಇವರೆಲ್ಲರೂ ನಿರರ್ಥಕರಾದವರು.

ನಿತ್ಯಂ ಯಸ್ತು ಸತೋ ರಕ್ಷೇದಸತಶ್ಚ ನಿಬರ್ಹಯೇತ್ ।
ಸ ಏವ ರಾಜಾ ಕರ್ತವ್ಯಸ್ತೇನ ಸರ್ವಮಿದಂ ಧೃತಮ್ ॥೪೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಶೀತಿತಮೋऽಧ್ಯಾಯಃ ॥೮೦॥

ಆದ್ದರಿಂದ ಯಾವನು ನಿತ್ಯವೂ ಅಸಜ್ಜನರನ್ನು ವಿನಾಶಗೊಳಿಸಿ ಸಜ್ಜನರನ್ನು ರಕ್ಷಿಸುತ್ತಾನೆಯೋ ಅವನನ್ನೇ ರಾಜನನ್ನಾಗಿ ಮಾಡಬೇಕು. ಅವನು ಈ ರಾಜ್ಯವೆಲ್ಲವನ್ನೂ ಧರಿಸುತ್ತಾನೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೮೦ನೆಯ ಅಧ್ಯಾಯವು ಮುಗಿಯಿತು.

—೦—

೮೧. ಎಂಬತ್ತೊಂದನೆಯ ಅಧ್ಯಾಯ

ಋತ್ವಿಗ್ಲಕ್ಷಣಾದಿ ಕಥನ

ಯುಧಿಷ್ಠಿರಃ

ಕ್ವಸಮುತ್ಥಾಃ ಕಥಂಶೀಲಾಃ ಋತ್ವಿಜಃ ಸ್ಯುಃ ಪಿತಾಮಹ ।
ಕಥಂವಿಧಾಶ್ಚ ರಾಜೇಂದ್ರ ತದ್ ಬ್ರೂಹಿ ವದತಾಂವರ ॥೧॥

ಯುಧಿಷ್ಠಿರ – ಪಿತಾಮಹನೇ! ಋತ್ವಿಜರು ಹೇಗೆ ಉತ್ಪನ್ನರಾದರು? ಅವರ ಸ್ವಭಾವವು ಹೇಗಿರಬೇಕು? ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ! ರಾಜೇಂದ್ರನೇ! ಅವರ ರೀತಿಯು ಹೇಗಿರಬೇಕು ಎಂದು ನನಗೆ ಹೇಳು.

ಭೀಷ್ಮಃ

ಪ್ರತಿಕರ್ಮ ಪುರಾಚಾರ ಋತ್ವಿಜಾಂ ಸ್ಮ ವಿಧೀಯತೇ।
ಆದೌ ಛಂದಾಂಸಿ ವಿಜ್ಞಾಯ ದ್ವಿಜಾನಾಂ ಶ್ರುತಮೇವ ಚ ॥೨॥

ಭೀಷ್ಮರು – ಋತ್ವಿಜರು ಪ್ರತಿಕರ್ಮದಲ್ಲಿಯೂ ಹಿಂದಿನಿಂದ ಬಂದ ಆಚಾರವನ್ನು ನಡೆಸಿಕೊಂಡು ಬರಬೇಕು. ಮೊದಲು ವೇದಾಧ್ಯಯನವನ್ನು ಮಾಡಿ ಬ್ರಾಹ್ಮಣರಿಂದ ಜ್ಞಾನವನ್ನು ಸಂಪಾದಿಸಬೇಕು.

ಯೇ ತ್ವೇಕರತಯೋ ನಿತ್ಯಂ ಧೀರಾ ನಾಪ್ರಿಯವಾದಿನಃ।
ಪರಸ್ಪರಸ್ಯ ಸುಹೃದಃ ಸಮ್ಮತಾಃ ಸಮದರ್ಶಿನಃ ॥೩॥

ಯೇಷ್ವಾನೃಶಂಸ್ಯಂ ಸತ್ಯಂ ಚಾಪ್ಯಹಿಂಸಾ ತಪ ಆರ್ಜವಮ್।
ಅದ್ರೋಹೋ ನಾಭಿಮಾನಶ್ಚ ಹ್ರೀಸ್ತಿತಿಕ್ಷಾ ದಮಃ ಶಮಃ ॥೪॥

ಹ್ರೀಮಾನ್ ಸತ್ಯಧೃತಿರ್ದಾಂತೋ ಭೂತಾನಾಮವಿಹಿಂಸಕಃ।
ಅಕಾಮದ್ವೇಷಸಂಯುಕ್ತಸ್ತ್ರಿಭಿಃ ಶುಕ್ಲೈಃ ಸಮನ್ವಿತಃ ॥೫॥

ಅಹಿಂಸಕೋ ಜ್ಞಾನತೃಪ್ತಃ ಸ ಬ್ರಹ್ಮಾಸನಮರ್ಹತಿ।
ಏತೇ ಮಹರ್ತ್ವಿಜಸ್ತಾತ ಸರ್ವೇ ಮಾನ್ಯಾ ಯಥಾತಥಮ್ ॥೬॥

ಯಾರು ಒಂದೇ ರೀತಿಯ ಅಭಿರುಚಿಯುಳ್ಳವರಾಗಿರುತ್ತಾರೋ, ಯಾವಾಗಲೂ ಧೀರರೋ, ಅಪ್ರಿಯವಾಗಿ ಮಾತನಾಡುವುದಿಲ್ಲವೋ, ಪರಸ್ಪರ ಸುಹೃದರೋ, ಪರಸ್ಪರವಾಗಿ ಸಮ್ಮತರೋ, ಸಮಾನವಾದ ದೃಷ್ಟಿಯುಳ್ಳವರೋ, ಯಾರಲ್ಲಿ ದಯೆ, ಸತ್ಯ, ಅಹಿಂಸಾ, ತಪಸ್ಸು, ಆರ್ಜವ, ಅದ್ರೋಹ, ಅನಹಂಕಾರ, ನಾಚಿಕೆ, ಸಹಿಷ್ಣುತೆ, ಶಮ, ದಮ, ಸತ್ಯವಾದ ಧೈರ್ಯ, ಭೂತದಯೆ, ಕಾಮದ್ವೇಷ ರಾಹಿತ್ಯ, ಮೂರು ವೇದಗಳ ಅಧ್ಯಯನ, ಜ್ಞಾನದಿಂದ ತೃಪ್ತಿ ಇರುತ್ತವೆಯೋ ಅಂತಹವರು ಬ್ರಹ್ಮಾಸನದಲ್ಲಿ ಕುಳಿತುಕೊಳ್ಳಲು ಅರ್ಹರಾಗುತ್ತಾರೆ. ಎಲೈ ಪ್ರೀತಿಪಾತ್ರನೇ! ಮಹಾ ಋತ್ವಿಜರಾದ ಇವರೆಲ್ಲರೂ ಚೆನ್ನಾಗಿ ಮಾನ್ಯರಾದವರು.

ಯುಧಿಷ್ಠಿರಃ

ಯದಿದಂ ವೇದವಚನಂ ದಕ್ಷಿಣಾಸು ವಿಧೀಯತೇ।
ಇದಂ ದೇಯಮಿದಂ ದೇಯಂ ನ ಕ್ವಚಿದ್ ವ್ಯವತಿಷ್ಠತೇ ॥೭॥

ಯುಧಿಷ್ಠಿರ – ವೇದಗಳಲ್ಲಿ ಇದನ್ನು ಕೊಡಬೇಕು, ಇದನ್ನು ಕೊಡಬೇಕು ಎಂದೇನು ವಚನವಿದೆಯೋ ಅದು ಎಲ್ಲಿಯೂ ಪರ್ಯವಸಾನವನ್ನು ಹೊಂದುವುದಿಲ್ಲ.

ನೇದಂ ಪ್ರತಿಧನಂ ಶಾಸ್ತ್ರಮಾಪದ್ಧರ್ಮಾಶ್ಚ ಶಾಸ್ತ್ರತಃ।
ಆಜ್ಞಾಶಾಸ್ತ್ರಸ್ಯ ಘೋರೇಯಂ ನ ಶಕ್ತಿಂ ಸಮವೇಕ್ಷತೇ ॥೮॥

ಯಜಮಾನನ ಬಳಿಯಿರುವ ಧನವನ್ನು ನೋಡಿ ದಕ್ಷಿಣಾಶಾಸ್ತ್ರವು ಪ್ರವೃತ್ತವಾಗುವುದಿಲ್ಲ. ದಕ್ಷಿಣೆಯನ್ನು ಹೇಳಿದ ಕಡೆಯಲ್ಲಿ ಶಾಸ್ತ್ರದಲ್ಲಿ ಆಪದ್ಧರ್ಮಗಳನ್ನು ಹೇಳಿಲ್ಲ. ಶಾಸ್ತ್ರದ ಘೋರವಾದ ಈ ಆಜ್ಞೆಯು ಯಜಮಾನನ ಶಕ್ತಿಯನ್ನು ಗಮನಿಸುವುದಿಲ್ಲ.

ಶ್ರದ್ಧಾಮಾರಭ್ಯ ಯಷ್ಟವ್ಯಮಿತ್ಯೇಷಾ ವೈದಿಕೀ ಶ್ರುತಿಃ।
ಮಿಥ್ಯೋಪೇತಸ್ಯ ಯಜ್ಞಸ್ಯ ಕಿಮು ಶ್ರದ್ಧಾ ಕರಿಷ್ಯತಿ ॥೯॥

ಶ್ರದ್ಧೆಯಿಂದ ಯಜ್ಞವನ್ನು ಮಾಡಬೇಕೆಂಬುದು ವೇದಾನುಶಾಸನ. ಇಷ್ಟು ದಕ್ಷಿಣೆಯನ್ನು ಕೊಡುತ್ತೇನೆಂದು ಸಂಕಲ್ಪಮಾಡಿ ಅದನ್ನು ಕೊಡಲಾರದೇ ಯಜ್ಞವನ್ನು ಮುಗಿಸಿದರೆ ಆಗ ಶ್ರದ್ಧೆಯಿಂದ ಏನಾಗುತ್ತದೆ?

ಭೀಷ್ಮಃ

ನ ವೇದಾನಾಂ ಪರಿಭವಾನ್ನ ಶಾಠ್ಯೇನ ನ ಮಾಯಯಾ।
ಕಶ್ಚಿನ್ಮಹದವಾಪ್ನೋತಿ ಮಾ ತೇ ಭೂದ್ ಬುದ್ಧಿರೀದೃಶೀ ॥೧೦॥

ಭೀಷ್ಮರು – ವೇದಗಳನ್ನು ನಿಂದಿಸುವುದರಿಂದಲಾಗಲೀ, ಶಾಠ್ಯದಿಂದಾಗಲೀ,

ಕಪಟದಿಂದಾಗಲೀ ಯಾರೂ ಯಾವ ದೊಡ್ಡದನ್ನೂ ಸಂಪಾದಿಸುವುದಿಲ್ಲ. ಆದ್ದರಿಂದ ನಿನ್ನ ಬುದ್ಧಿಯು ಹೀಗಿರುವುದು ಬೇಡ.

ಯಜ್ಞಾಂಗಂ ದಕ್ಷಿಣಾಸ್ತಾತ ವೇದಾನಾಂ ಪರಿಬೃಂಹಣಮ್ ।
ನ ಮಂತ್ರಾ ದಕ್ಷಿಣಾಹೀನಾಸ್ತಾರಯಂತಿ ಕಥಂಚನ ॥೧೧॥

ಪ್ರೀತಿಪಾತ್ರನೇ! ದಕ್ಷಿಣೆಯು ಯಜ್ಞಾಂಗವಾದುದು. ಅದರಿಂದ ವೇದಗಳು ವಿಸ್ತಾರವನ್ನು ಹೊಂದುತ್ತವೆ. ದಕ್ಷಿಣಾರಹಿತವಾದ ಮಂತ್ರಗಳು ಯಾವ ರೀತಿಯಿಂದಲೂ ಆಪತ್ತಿನಿಂದ ದಾಟಿಸುವುದಿಲ್ಲ.

ಶಕ್ತಿಸ್ತು ಪೂರ್ಣಪಾತ್ರೇಣ ಸಮ್ಮಿತಾ ನಾವಮಾ ಭವೇತ್ ।
ಅವಶ್ಯಂ ತಾತ ಯಷ್ಟವ್ಯಂ ತ್ರಿಭಿರ್ವರ್ಣೈರ್ಯಥಾವಿಧಿ ॥೧೨॥

ಪೂರ್ಣಪಾತ್ರರೂಪವಾದ ದಕ್ಷಿಣೆಯು ಶಕ್ತಿಯನ್ನು ನೋಡಿ ಹೇಳಲ್ಪಟ್ಟಿದೆ. ದಕ್ಷಿಣೆಯು ಅದಕ್ಕಿಂತಲೂ ಕಡಿಮೆಯಾಗಬಾರದು. ಪ್ರೀತಿಪಾತ್ರನೇ! ಮೂರು ವರ್ಣದವರೂ ವಿಧಿಗೆ ಅನುಸಾರವಾಗಿ ಅವಶ್ಯವಾಗಿ ಯಾಗವನ್ನು ಮಾಡಬೇಕು.

ಆಗ್ನೇಯಸ್ಥಾಲಿಪಾಕಪ್ರಕರಣದಲ್ಲಿ 'ವೃಷಭವನ್ನು ದಾನ ಮಾಡಬೇಕು' ಅಥವಾ ಪೂರ್ಣಪಾತ್ರವನ್ನು ದಾನ ಮಾಡಬೇಕು' ಎಂದಿದೆ. ಪೂರ್ಣಪಾತ್ರವೆಂದರೆ ೧೦೮, ಅಥವಾ ೮ ಅಥವಾ ೪ ಪೂರ್ಣಮುಷ್ಟಿಧಾನ್ಯಗಳಿಂದ ತುಂಬಿದ ಪಾತ್ರೆ. ವೃಷಭವನ್ನು ದಾನ ಮಾಡಬೇಕು ಎಂದು ಹೇಳಿದ ಸ್ಥಳದಲ್ಲಿಯೇ ಯಜಮಾನನ ಅಶಕ್ತಿಯನ್ನು ಗಮನಿಸಿ ಪೂರ್ಣಪಾತ್ರೆಯ ದಾನವನ್ನು ಹೇಳಿದೆ. ಅದರಿಂದ ವೇದವು ಯಜಮಾನನ ಶಕ್ತಿಯನ್ನು ಗಮನಿಸುವುದಿಲ್ಲ ಎಂದು ನೀನು ಹೇಳಿದುದು ಸರಿಯಲ್ಲ. ಹಾಗೆ ಹೇಳಿ ವೇದಕ್ಕೆ ಅವಮಾನವನ್ನು ಮಾಡಬಾರದು ಎಂದು ಅಭಿಪ್ರಾಯ – ಲಕ್ಷ್ಯಲಂಕಾರ.

ಸೋಮೋ ರಾಜಾ ಬ್ರಾಹ್ಮಣಾನಾಮಿತ್ಯೇಷಾ ವೈದಿಕೀ ಶ್ರುತಿಃ ।
ತಂ ಚ ವಿಕ್ರೇತುಮಿಚ್ಛಂತಿ ನ ವೃಥಾವೃತ್ತಿರಿಷ್ಯತೇ ।
ತೇನ ಕ್ರೀತೇನ ಧರ್ಮೇಣ ತತೋ ಯಜ್ಞಃ ಪ್ರವರ್ತತೇ ॥೧೩॥

ಬ್ರಾಹ್ಮಣರಿಗೆ ಸೋಮಾಭಿಮಾನಿಯಾದ ಚಂದ್ರನು ರಾಜ ಎಂಬುದು ವೇದ-ವಚನ. ಯಾಗದಲ್ಲಿ ಆ ಸೋಮರಸವನ್ನು ಕೊಂಡುಕೊಳ್ಳಲು ಯೋಗ್ಯವಾದ ದ್ರವ್ಯವನ್ನು ಕೊಡದೇ ಮಿತ್ರಾದಿಗಳ ಮನೆಯಿಂದ ತಂದ ಸೋಮರಸದಲ್ಲಿ ಯಾಗವನ್ನು ಮಾಡಬಾರದು. ಧರ್ಮದಿಂದ ಕ್ರಯವನ್ನು ಕೊಟ್ಟು ತಂದ ಸೋಮ-ರಸದಿಂದಲೇ ಯಜ್ಞವನ್ನು ಮಾಡಬೇಕು.

ಇತ್ಯೇವಂ ಧರ್ಮತಃ ಖ್ಯಾತಮೃಷಿಭಿರ್ಧರ್ಮವಾದಿಭಿಃ।
ಪುಮಾನ್ ಯಜ್ಞಶ್ಚ ಸೋಮಶ್ಚ ನ್ಯಾಯವೃತ್ತೋ ಯಥಾ ಭವೇತ್।
ಅನ್ಯಾಯವೃತ್ತಃ ಪುರುಷೋ ನ ಪರಸ್ಯ ನ ಚಾತ್ಮನಃ ॥೧೪॥

ಹೀಗೆ ಧರ್ಮವಾದಿಗಳಾದ ಋಷಿಗಳು ಧರ್ಮದ ದೃಷ್ಟಿಯಿಂದ ಹೇಳಿದ್ದಾರೆ. ಯಜಮಾನನೂ, ಯಜ್ಞವೂ, ಸೋಮವೂ ನ್ಯಾಯದಿಂದ ಕೂಡಿರಬೇಕು. ಅನ್ಯಾಯದಿಂದ ಕೂಡಿದ ಮನುಷ್ಯನು ತನಗಾಗಲೀ ಇನ್ನೊಬ್ಬನಿಗಾಗಲೀ ಯಾವ ಪ್ರಯೋಜನಕ್ಕೂ ಬಾರದವನು.

ಶರೀರಂ ಯಜ್ಞಪಾತ್ರಾಣಿ ಇತ್ಯೇಷಾ ಶ್ರೂಯತೇ ಶ್ರುತಿಃ।
ತಾನಿ ಸಮ್ಯಕ್ ಪ್ರಣೀತಾನಿ ಬ್ರಾಹ್ಮಣಾನಾಂ ಮಹಾತ್ಮನಾಮ್ ॥೧೫॥

ಶರೀರವೇ ಯಜ್ಞಪಾತ್ರೆಯು ಎಂಬ ಶ್ರುತಿಯು ಕೇಳಿ ಬರುತ್ತದೆ. ಮಹಾತ್ಮರಾದ ಬ್ರಾಹ್ಮಣರು ಆ ಯಜ್ಞಪಾತ್ರೆಗಳನ್ನು ಸದಾಚಾರಸಂಪತ್ತಿನಿಂದ ಚೆನ್ನಾಗಿ ಇಟ್ಟುಕೊಂಡಿ-ರುತ್ತಾರೆ.

ಬೆನ್ನು ವೇದಿ, ರೋಮಗಳು ದರ್ಭೆಗಳು, ಜಿಹ್ವೆಯು ಸ್ರುಕ್ ಸ್ರುವಗಳು, ಎಂಬ ವೇದವಚನದಿಂದ ಶರೀರವೇ ಯಜ್ಞಪಾತ್ರೆ ಎಂದು ಹೇಳಲಾಗಿದೆ. - ಲಕ್ಷ್ಮಣಂಕಾರ.

ತಪೋ ಯಜ್ಞಾದಪಿ ಶ್ರೇಷ್ಠಮಿತ್ಯೇಷಾ ಪರಮಾ ಶ್ರುತಿಃ।
ತತ್ ತೇ ತಪಃ ಪ್ರವಕ್ಷ್ಯಾಮಿ ವಿದ್ವಂಸ್ತದಪಿ ಮೇ ಶೃಣು ॥೧೬॥

ತಪಸ್ಸು ಯಜ್ಞಕ್ಕಿಂತಲೂ ಶ್ರೇಷ್ಠವಾದುದು ಎಂದೂ ಶ್ರೇಷ್ಠವಾದ ಶ್ರುತಿಯಿದೆ. ಎಲೈ ವಿದ್ವಾಂಸನೇ! ಅಂತಹ ತಪಸ್ಸನ್ನು ಹೇಳುವೆನು. ಅದನ್ನು ನನ್ನಿಂದ ಕೇಳು.

ಅಹಿಂಸಾ ಸತ್ಯವಚನಮಾನೃಶಂಸ್ಯಂ ದಮೋ ಘೃಣಾ ।
ಏತತ್ ತಪೋ ವಿದುರ್ಧೀರಾ ನ ಶರೀರಸ್ಯ ಶೋಷಣಮ್ ॥೧೭॥

ಅಹಿಂಸೆ, ಸತ್ಯವಚನ, ಅಸ್ತೇಯ, ದಯಾ, ದಮ, ಅಕ್ರೌರ್ಯ ಇವುಗಳನ್ನು ಧೀರರು ತಪಸ್ಸೆಂದು ತಿಳಿಯುತ್ತಾರೆ. ಶರೀರಶೋಷಣೆಯನ್ನು ಮಾಡುವುದು ತಪಸ್ಸಲ್ಲ.

ಅಪ್ರಾಮಾಣ್ಯಂ ಚ ವೇದಾನಾಂ ಶಾಸ್ತ್ರಾಣಾಂ ಚಾತಿಲಂಘನಮ್ ।
ಅವ್ಯವಸ್ಥಾ ಚ ಸರ್ವತ್ರ ತದ್ ವೈ ನಾಶನಮಾತ್ಮನಃ ॥೧೮॥

ವೇದಗಳಿಗೆ ಅಪ್ರಾಮಾಣ್ಯವನ್ನು ಹೇಳುವುದು, ಶಾಸ್ತ್ರಗಳನ್ನು ಮೀರುವುದು, ಎಲ್ಲ ಕಾರ್ಯಗಳನ್ನು ಅವ್ಯವಸ್ಥೆಯಿಂದ ಮಾಡುವುದು ಇವೇ ಆ ವ್ಯಕ್ತಿಯ ನಾಶಕ್ಕೆ ಕಾರಣಗಳಾಗುತ್ತವೆ.

ನಿಬೋಧ ದಶಹೋತ್಄ಣಾಂ ವಿಧಾನಂ ಪಾರ್ಥ ಯಾದೃಶಮ್ ।
ವಿತ್ತಂ ಸ್ರುಕ್ ಚಿತ್ತಮಾಜ್ಯಂ ಚ ಪವಿತ್ರಂ ಜ್ಞಾನಮುತ್ತಮಮ್ ॥೧೯॥

ಎಲೈ ಪಾರ್ಥನೇ! ಹತ್ತು ಹೋತೃಗಳನ್ನು ವೇದವು ಯಾವ ರೀತಿಯಲ್ಲಿ ವಿಧಾನ ಮಾಡಿದೆ ಎಂಬುದನ್ನು ತಿಳಿಯುವವನಾಗು. ವಿತ್ತ, ಸ್ರುಕ್, ಚಿತ್ತ, ಆಜ್ಯ, ಪವಿತ್ರ, ಜ್ಞಾನ, ಶೂದ್ರಾದಿ ಸ್ಪರ್ಶಾಭಾವ, ಕುಟಿಲತೆಯ ಅಭಾವ, ದೇಶ ಮತ್ತು ಕಾಲಗಳು ಆ ಹತ್ತು ಹೋತ್ರಗಳು.

ಸರ್ವಂ ಜಿಹ್ಮಂ ಮೃತ್ಯುಪದಮಾರ್ಜವಂ ಬ್ರಹ್ಮಣಃ ಪದಮ್ ।
ಏತಾವಾನ್ ಜ್ಞಾನವಿಷಯಃ ಕಿಂ ಪ್ರಲಾಪಃ ಕರಿಷ್ಯತಿ ॥೨೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕಾಶೀತಿತಮೋಽಧ್ಯಾಯಃ ॥೮೧॥

ಕಪಟದಿಂದ ಕೂಡಿದುದೆಲ್ಲವೂ ಮೃತ್ಯುಪದವಾಚ್ಯವಾದುದು. ಆರ್ಜವವು ಬ್ರಹ್ಮಪದದಿಂದ ವಾಚ್ಯವಾದುದು. ಇದೇ ಜ್ಞಾನದ ಸಾರ. ಹೆಚ್ಚು ಮಾತನಾಡಿ ಏನು ಪ್ರಯೋಜನ?

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೮೧ನೆಯ ಅಧ್ಯಾಯವು ಮುಗಿಯಿತು.

—0—

೮೨. ಎಂಬತ್ತೆರಡನೆಯ ಅಧ್ಯಾಯ

ಅಮಾತ್ಯ ಮತ್ತು ಜ್ಞಾತಿಗಳ ಸ್ವರೂಪಕಥನ

ಯುಧಿಷ್ಠಿರಃ

ಯದಪ್ಯಲ್ಪತರಂ ಕರ್ಮ ತದಪ್ಯೇಕೇನ ದುಷ್ಕರಮ್ ।
ಪುರುಷೇಣಾಸಹಾಯೇನ ಕಿಮು ರಾಜ್ಯಂ ಪಿತಾಮಹ ॥೧॥

ಕಿಂಶೀಲಃ ಕಿಂಸಮಾಚಾರಃ ರಾಜ್ಞೋऽರ್ಥಸಚಿವೋ ಭವೇತ್ ।
ಕೀದೃಶೇ ವಿಶ್ವಸೇದ್ ರಾಜಾ ಕೀದೃಶೇ ನಾಪಿ ವಿಶ್ವಸೇತ್ ॥೨॥

ಯುಧಿಷ್ಠಿರ – ಪಿತಾಮಹನೇ! ಒಂದು ಸಣ್ಣಕಾರ್ಯವನ್ನೂ ಸಹ ಸಹಾಯವಿಲ್ಲದೇ ಒಬ್ಬನೇ ಮಾಡಲು ಸಾಧ್ಯವಾಗುವುದಿಲ್ಲ. ಇನ್ನು ರಾಜ್ಯವನ್ನು ಸಹಾಯವಿಲ್ಲದೇ ಪಾಲಿಸುವುದು ಹೇಗೆ? ಆದ್ದರಿಂದ ರಾಜನ ಅರ್ಥಸಚಿವನಾದವನು ಎಂತಹ ಸ್ವಭಾವವನ್ನು ಹೊಂದಿರಬೇಕು? ಎಂತಹ ಆಚಾರವನ್ನು ಹೊಂದಿರಬೇಕು? ರಾಜನು ಯಾರಲ್ಲಿ ವಿಶ್ವಾಸವನ್ನು ಮಾಡಬೇಕು, ಯಾರಲ್ಲಿ ವಿಶ್ವಾಸವನ್ನು ಮಾಡಬಾರದು?

ಭೀಷ್ಮಃ

ಚತುರ್ವಿಧಾನಿ ಮಿತ್ರಾಣಿ ರಾಜ್ಞಾಂ ರಾಜನ್ ಭವಂತ್ಯುತ ।
ಸಹಾರ್ಥೋ ಭಜಮಾನಶ್ಚ ಸಹಜಃ ಕೃತ್ರಿಮಸ್ತಥಾ ॥೩॥

ಭೀಷ್ಮರು – ರಾಜನೇ ರಾಜನಿಗೆ ಸಹಾರ್ಥ, ಭಜಮಾನ, ಸಹಜ, ಮತ್ತು ಕೃತ್ರಿಮ ಎಂದು ನಾಲ್ಕುವಿಧವಾದ ಮಿತ್ರರಿರುತ್ತಾರೆ.

ಸಹಾರ್ಥ ಎಂದರೆ ಒಂದೇ ಗ್ರಾಮಕ್ಕೆ ನಡೆದುಕೊಂಡು ಹೋಗುವ ಇಬ್ಬರಿಗೆ ಉಂಟಾಗುವ ಮೈತ್ರಿ. ಭಜಮಾನ ಎಂದರೆ ತನ್ನ ಪ್ರಯೋಜನಕ್ಕಾಗಿ ರಾಜನನ್ನು ಸೇವಿಸುವವನು. ರಾಜನ ಶರೀರಸಂಬಂಧಿಯಾದವನು ಸಹಜ. ಸಂಬಳಕ್ಕೆ ಇಟ್ಟುಕೊಂಡವನು ಕೃತ್ರಿಮ – ಲಕ್ಷ್ಮಲಂಕಾರ.

ಧರ್ಮಾತ್ಮಾ ಪಂಚಮಂ ಮಿತ್ರಂ ಸ ತು ನೈಕಸ್ಯ ನ ದ್ವಯೋಃ।
ಯತೋ ಧರ್ಮಸ್ತತೋ ವಾ ಸ್ಯಾದ್ ಧರ್ಮಸ್ಥೋ ವಾ ತತೋ ಭವೇತ್ ॥

ಧರ್ಮಾತ್ಮನಾದವನು ಐದನೆಯ ಮಿತ್ರ. ಅವನು ಒಬ್ಬನಿಗೆ ಅಥವಾ ಇಬ್ಬರಿಗೆ ಮಿತ್ರನಲ್ಲ. ಎಲ್ಲರಿಗೂ ಮಿತ್ರನಾದವನು. ಎಲ್ಲಿ ಧರ್ಮವಿದೆಯೋ ಅವನನ್ನು ರಾಜನು ಮಿತ್ರನನ್ನಾಗಿ ಮಾಡಿಕೊಳ್ಳಬೇಕು. ಆ ಧರ್ಮಾತ್ಮನ ಸಂಬಂಧದಿಂದ ಇನ್ನೊಬ್ಬನೂ ಧರ್ಮಸ್ಥನಾದಾನು!

ಯಸ್ತಸ್ಯಾರ್ಥೋ ನ ರೋಚೇತ ನ ತಂ ತಸ್ಯ ಪ್ರಕಾಶಯೇತ್।
ಮಿತ್ರಾಣಾಂ ಪ್ರಕೃತಿರ್ನಾಸ್ತಿ ತ್ವಮಿತ್ರಾಣಾಂ ಚ ಭಾರತ।
ಉಪಕಾರಾದ್ ಭವೇನ್ಮಿತ್ರಮಪಕಾರಾದ್ ಭವೇದರಿಃ ॥೫॥

ಯಾರಿಗೆ ತನ್ನ ಅಭಿಪ್ರಾಯವು ಹಿಡಿಸುವುದಿಲ್ಲವೋ ಅವರಿಗೆ ಅದನ್ನು ಹೇಳಬಾರದು. ಎಲೈ ಭಾರತನೇ! ಮಿತ್ರನಿಗಾಗಲೀ, ಶತ್ರುಗಳಿಗಾಗಲೀ, ಒಂದು ಸ್ವಭಾವವೆಂಬುದು ಇಲ್ಲ. ಉಪಕಾರದಿಂದ ಮಿತ್ರರಾಗುತ್ತಾರೆ. ಅಪಕಾರದಿಂದ ಶತ್ರುಗಳಾಗುತ್ತಾರೆ.

ಯಸ್ಯೈವ ಹಿ ಮನುಷ್ಯಸ್ಯ ನರೋ ಮರಣಮಿಚ್ಛತಿ।
ತಸ್ಯ ಪರ್ಯಾಗತೇ ಕಾಲೇ ಪುನರ್ಜೀವಿತಮಿಚ್ಛತಿ।
ಧರ್ಮಾರ್ಥಮೇವ ರಾಜಾನಶ್ಚರಂತಿ ವಿಜಿಗೀಷವಃ ॥೬॥

ಯಾವ ಮನುಷ್ಯನಿಗೆ ಒಬ್ಬನು ಮರಣವನ್ನು ಬಯಸುತ್ತಾನೆಯೋ ಅದೇ ಮನುಷ್ಯನು ಕಾಲಕ್ರಮದಲ್ಲಿ ಪುನಃ ಅದೇ ವ್ಯಕ್ತಿಯ ಜೀವನವನ್ನು ಬಯಸುತ್ತಾನೆ. ಧರ್ಮರಕ್ಷಣೆಯ ಅಧರ್ಮಶಿಕ್ಷಣೆಯ ನಿಮಿತ್ತದಿಂದಾಗಿ ಜಯವನ್ನು ಹೊಂದಲು ಬಯಸುವ ರಾಜರು ಪ್ರವೃತ್ತಿಯನ್ನು ಮಾಡುತ್ತಾರೆ.

ಚತುರ್ಣಾಂ ಮಧ್ಯಮೌ ಶ್ರೇಷ್ಠೌ ನಿತ್ಯಂ ಶಂಕ್ಯೌ ತಥಾಪರೌ।
ಸರ್ವೈರ್ನಿತ್ಯಂ ಶಂಕಿತವ್ಯಂ ಪ್ರತ್ಯಕ್ಷಂ ಕಾರ್ಯಮಾತ್ಮನಃ ॥೭॥

ನಾಲ್ಕು ಜನ ಮಿತ್ರರ ಮಧ್ಯೆ ಮಧ್ಯದ ಇಬ್ಬರು ಶ್ರೇಷ್ಠರಾದವರು. ಉಳಿದ ಇಬ್ಬರನ್ನು ಯಾವಾಗಲೂ ಶಂಕಿಸಬೇಕು. ಯಾವ ಕಾರ್ಯವು ತನಗೆ ಮಾತ್ರ ಸಾಕ್ಷಿಸಿದ್ಧವಾಗಿದೆಯೋ ಅದನ್ನು ಎಲ್ಲರನ್ನೂ ಶಂಕಿಸಿ ಯಾರಿಗೂ ಹೇಳಬಾರದು. (ಲಕ್ಷ್ಯಲಂಕಾರ)

ನಹಿ ರಾಜ್ಞಾ ಪ್ರಮಾದೋ ವೈ ಕರ್ತವ್ಯೋ ಮಿತ್ರರಕ್ಷಣೇ।
ಪ್ರಮಾದಿನಂ ಹಿ ರಾಜಾನಂ ಲೋಕಾಃ ಪರಿಭವಂತ್ಯುತ ॥೮॥

ರಾಜನು ಮಿತ್ರರಕ್ಷಣೆಯ ವಿಷಯದಲ್ಲಿ ಪ್ರಮಾದವನ್ನು ಮಾಡಬಾರದು. ಪ್ರಮಾದಶೀಲನಾದ ರಾಜನನ್ನು ಪ್ರಜೆಗಳು ಅವಮಾನಗೊಳಿಸುತ್ತಾರೆ.

ಅಸಾಧುಃ ಸಾಧುತಾಮೇತಿ ಸಾಧುರ್ಭವತಿ ದಾರುಣಃ।
ಅರಿಶ್ಚ ಮಿತ್ರಂ ಭವತಿ ಮಿತ್ರಂ ಚಾಪಿ ಪ್ರದುಷ್ಯತಿ ॥೯॥

ಅನಿತ್ಯಚಿತ್ತಃ ಪುರುಷಸ್ತಸ್ಮಿನ್ ಕೋ ಜಾತು ವಿಶ್ವಸೇತ್।
ತಸ್ಮಾತ್ ಪ್ರಧಾನಂ ಯತ್ ಕಾರ್ಯಂ ಪ್ರತ್ಯಕ್ಷಂ ತತ್ ಸಮಾಚರೇತ್ ॥೧೦॥

ಅಸಾಧುವು ಸಾಧುವಾಗುತ್ತಾನೆ. ಸಾಧುವು ಕ್ರೂರನಾಗುತ್ತಾನೆ. ಶತ್ರುವು ಮಿತ್ರನಾಗುತ್ತಾನೆ. ಮಿತ್ರನು ದುಷ್ಟನಾಗುತ್ತಾನೆ. ಪುರುಷನ ಮನಸ್ಸು ಚಂಚಲವಾದುದು. ಅವನಲ್ಲಿ ಯಾರು ವಿಶ್ವಾಸಮಾಡಿಯಾರು? ಆದ್ದರಿಂದ ದಂಡಯಾತ್ರೆಯೇ ಮೊದಲಾದ ಪ್ರಧಾನ ಕಾರ್ಯಗಳನ್ನು ಪ್ರತ್ಯಕ್ಷವಾಗಿಯೇ ಮಾಡಬೇಕು. (ಲಕ್ಷ್ಯಲಂಕಾರ)

ಏಕಾಂತೇನ ಹಿ ವಿಶ್ವಾಸಃ ಕೃತೋ ಽನೇ ಧರ್ಮಾರ್ಥನಾಶಕಃ।
ಅವಿಶ್ವಾಸಶ್ಚ ಸರ್ವತ್ರ ಮೃತ್ಯುನಾ 'ನ ವಿಶಿಷ್ಯತೇ ॥೧೧॥

ಒಂದು ವ್ಯಕ್ತಿಯಲ್ಲಿ ಯಾವಾಗಲೂ ವಿಶ್ವಾಸವನ್ನು ಮಾಡುವುದು ಧರ್ಮಾರ್ಥಗಳನ್ನು ಸಮಗ್ರವಾಗಿ ನಾಶಮಾಡುವಂತಹದು. ಯಾವಾಗಲೂ ಅವಿಶ್ವಾಸವನ್ನು ಮಾಡುವುದು ಮೃತ್ಯುವಿಗಿಂತ ಬೇರೆಯಲ್ಲ.

ಅಕಾಲಮೃತ್ಯುರ್ವಿಶ್ವಾಸೋ ವಿಶ್ವಸನ್ ಹಿ ವಿಪದ್ಯತೇ।
ಯಸ್ಮಿನ್ ಕರೋತಿ ವಿಶ್ವಾಸಮಿಚ್ಛಾತಸ್ತಸ್ಯ ಜೀವತಿ ॥೧೨॥

ವಿಶ್ವಾಸವೆಂಬುದು ಅಕಾಲಮೃತ್ಯುಪ್ರದವಾದುದು. ವಿಶ್ವಾಸವನ್ನು ಮಾಡುವವನು ವಿಪತ್ತಿಗೆ ಒಳಗಾಗುತ್ತಾನಷ್ಟೇ! ಯಾವನಲ್ಲಿ ವಿಶ್ವಾಸ ಮಾಡುತ್ತಾನೆಯೋ ಅವನ ಇಚ್ಛೆಯಿಂದ ರಾಜನು (ಇನ್ನೊಬ್ಬನು) ಜೀವಿಸುತ್ತಾನೆ.

ತಸ್ಮಾದ್ ವಿಶ್ವಸಿತವ್ಯಂ ಚ ಶಂಕಿತವ್ಯಂ ಚ ಕೇಷುಚಿತ್।
ಏಷಾ ನೀತಿಗತಿಸ್ತಾತ ಲಕ್ಷ್ಮೀಶ್ಚೈವ ಸನಾತನೀ ॥೧೩॥

ಆದ್ದರಿಂದ ಕೆಲವರಲ್ಲಿ ವಿಶ್ವಾಸ ಮಾಡಬೇಕು. ಕೆಲವರಲ್ಲಿ ವಿಶ್ವಾಸವನ್ನು ಮಾಡದೇ ಅವರನ್ನು ಶಂಕಿಸಬೇಕು. ಪ್ರೀತಿಪಾತ್ರನೇ! ಇದು ನೀತಿಯ ಮಾರ್ಗ. ಸನಾತನವಾದ ಸಂಪತ್ತಿಗೆ ಕಾರಣವಾದುದು.

ಯಂ ಮನ್ಯೇತ ಮಮಾಭಾವಾದಿಮಮರ್ಥಾಗಮಃ ಸ್ಪೃಶೇತ್।
ನಿತ್ಯಂ ತಸ್ಮಾಚ್ಛಂಕಿತವ್ಯಮಮಿತ್ರಂ ತಂ ವಿದುರ್ಬುಧಾಃ ॥೧೪॥

ನಾನಿಲ್ಲದಿದ್ದರೆ ನನ್ನ ಎಲ್ಲ ಸಂಪತ್ತೂ ಇವನಲ್ಲಿ ಸೇರುತ್ತದೆ ಎಂದು ಯಾವನನ್ನು ತಿಳಿಯುತ್ತಾನೆಯೋ ಅವನನ್ನು ಯಾವಾಗಲೂ ಶಂಕಿಸಬೇಕು. ವಿವೇಕಿಗಳು ಅಂತಹವನನ್ನು ಶತ್ರುವೆಂದು ಹೇಳುತ್ತಾರೆ.

ಯಸ್ಯ ಕ್ಷೇತ್ರಾದಪ್ಯುದಕಂ ಕ್ಷೇತ್ರಮನ್ಯಸ್ಯ ಗಚ್ಛತಿ।
ನ ತತ್ರಾನಿಚ್ಛತಸ್ತಸ್ಯ ಭಿದ್ಯೇರನ್ ಸರ್ವಸೇತವಃ ॥೧೫॥

ತಥೈವಾತ್ಯುದಕಾದ್ ಭೀತಸ್ತಸ್ಯ ಭೇದನಮಿಚ್ಛತಿ।
ಯಮೇವಂಲಕ್ಷಣಂ ವಿದ್ಯಾತ್ ತಮಮಿತ್ರಂ ವಿದುರ್ಬುಧಾಃ ॥೧೬॥

ಯಃ ಸಮೃದ್ಧ್ಯಾ ನ ತುಷ್ಯೇತ ಕ್ಷಯೇ ದೀನತರೋ ಭವೇತ್।
ಏತದುತ್ತಮಮಿತ್ರಸ್ಯ ನಿಮಿತ್ತಮಭಿಚಕ್ಷತೇ ॥೧೭॥

ಯಾವನ ಭೂಮಿಯಿಂದ ಇನ್ನೊಬ್ಬನ ಭೂಮಿಗೆ ನೀರು ಹರಿಯುತ್ತದೆಯೋ ಅಲ್ಲಿಯೂ ಸಹ ಮೇಲಿನ ಭೂಮಿಯವನು ಇಷ್ಟಪಡದಿದ್ದರೆ ಕಟ್ಟೆಗಳನ್ನು ಒಡೆದು ಕೆಳಗಿನ ಭೂಮಿಯವನಿಗೆ ನೀರು ಹರಿಯುವುದಿಲ್ಲ. ಮೊದಲನೆಯವನ ಕ್ಷೇತ್ರದಲ್ಲಿ ಬಹಳ ಜಲಪ್ರವಾಹ ಉಂಟಾದರೆ ತನ್ನ ಕ್ಷೇತ್ರದ ನಾಶದ ಭಯದಿಂದ ಅವನು ಕಟ್ಟೆಗಳನ್ನು ಒಡೆದು ಇನ್ನೊಬ್ಬನ ಕ್ಷೇತ್ರಕ್ಕೆ ಅದೂ ಹಾಳಾಗಲಿ ಎಂಬ ಅಭಿಪ್ರಾಯದಿಂದ ನೀರನ್ನು ಬಿಡುತ್ತಾನೆ. ಅಂತಹ ಸ್ವಭಾವವುಳ್ಳವನನ್ನು ವಿವೇಕಿಗಳು ಶತ್ರುವೆಂದು ತಿಳಿಯುತ್ತಾರೆ. ಯಾವನು ಇನ್ನೊಬ್ಬನ ಸಮೃದ್ಧಿಯಿಂದ ತೃಪ್ತನಾಗುವುದಿಲ್ಲವೋ ಕ್ಷಯವುಂಟಾದರೆ ಬಹಳ ದೀನನಾಗುತ್ತಾನೆಯೋ ಅದು ಉತ್ತಮಮಿತ್ರನ ಲಕ್ಷಣವೆಂದು ಹೇಳಲ್ಪಡುತ್ತದೆ.

ಯಂ ಮನ್ಯೇತ ಮಮಾಭಾವಾದಸ್ಯಾಭಾವೋ ಭವೇದಿತಿ।
ತಸ್ಮಿನ್ ಕುರ್ವೀತ ವಿಶ್ವಾಸಂ ಯಥಾ ಪಿತರಿ ವೈ ತಥಾ ॥೧೮॥

ಯಾವನ ವಿಷಯದಲ್ಲಿ ನಾನು ಇಲ್ಲದಿದ್ದರೆ ಇವನೂ ಇರುವುದಿಲ್ಲ ಎಂದು ತಿಳಿಯುತ್ತಾನೆಯೋ ಅಂತಹ ವ್ಯಕ್ತಿಯಲ್ಲಿ ಪುತ್ರನು ತಂದೆಯಲ್ಲಿ ವಿಶ್ವಾಸ ಮಾಡಿದಂತೆ ವಿಶ್ವಾಸವನ್ನು ಮಾಡಬೇಕು.

ತಂ ಶಕ್ತ್ಯಾ ವರ್ಧಮಾನಶ್ಚ ಸರ್ವತಃ ಪರಿಬೃಂಹಯೇತ್।
ನಿತ್ಯಂ ಕ್ಷತಾದ್ ವಾರಯತಿ ಯೋ ಧರ್ಮೇಷ್ವಪಿ ಕರ್ಮಸು ॥೧೯॥

ಯಾವನು ನಿತ್ಯವೂ ತನ್ನನ್ನು ವ್ರಣಗಳಿಂದ (ನಷ್ಟಗಳಿಂದ) ವಾರಣೆ ಮಾಡುತ್ತಾನೆಯೋ ಧರ್ಮಕಾರ್ಯಗಳಲ್ಲೂ ಸಹಾಯವಾಗಿರುತ್ತಾನೆಯೋ ಅಂತಹವನನ್ನು ತಾನು ಶಕ್ತಿಯಿಂದ ಬೆಳೆದಂತೆ ಸರ್ವಪ್ರಕಾರದಿಂದ ಬೆಳೆಸಬೇಕು.

ಕ್ಷತಾದ್ ಭೀತಂ ವಿಜಾನೀಯಾದುತ್ತಮಂ ಮಿತ್ರಲಕ್ಷಣಮ್ ।
ಯೇ ತಸ್ಯ ಕ್ಷತಮಿಚ್ಛಂತಿ ತೇ ತಸ್ಯ ರಿಪವಃ ಸ್ಮೃತಾಃ ॥೨೦॥

ಯಾವನು ಮಿತ್ರನ ಕೇಡಿಗೆ ಹೆದರುತ್ತಾನೆಯೋ ಅವನೇ ಉತ್ತಮನಾದ ಮಿತ್ರ. ಯಾರು ಅವನಿಗೆ ಕೇಡನ್ನು ಬಯಸುತ್ತಾರೆಯೋ ಅವರು ಶತ್ರುಗಳೆಂದು ಹೇಳಲ್ಪಡುತ್ತಾರೆ.

ವ್ಯಸನಾನ್ನಿತ್ಯಭೀತೋಽಸೌ ಸಮೃದ್ಧ್ಯಾಮೇವ ತೃಪ್ಯತೇ ।
ಯತ್ ಸ್ಯಾದೇವಂವಿಧಂ ಮಿತ್ರಂ ತದಾತ್ಮಸಮಮುಚ್ಯತೇ ॥೨೧॥

ಯಾವನು ಇನ್ನೊಬ್ಬನಿಗೆ ಉಂಟಾಗಬಹುದಾದ ವ್ಯಸನದಿಂದ ನಿತ್ಯವೂ ಹೆದರಿ ಸಮೃದ್ಧಿಯಲ್ಲಿ ಮಾತ್ರ ತೃಪ್ತಿಪಡುತ್ತಾನೆಯೋ ಅಂತಹವನನ್ನು ಆತ್ಮಸಮನಾದ ಮಿತ್ರ ಎಂದು ಕರೆಯುತ್ತಾರೆ.

ರೂಪವರ್ಣಸ್ವರೋಪೇತಸ್ತಿತಿಕ್ಷುರನಸೂಯಕಃ ।
ಕುಲೀನಃ ಶೀಲಸಂಪನ್ನಃ ಸ ತೇ ಸ್ಯಾತ್ ಪ್ರತ್ಯನಂತರಃ ॥೨೨॥

(ಇನ್ನು ಅಮಾತ್ಯರ ಸ್ವರೂಪವು ಹೇಳಲ್ಪಡುತ್ತದೆ) – ಎಲೈ ಯುಧಿಷ್ಠಿರನೇ! ಯಾವನು ರೂಪವರ್ಣಸ್ವರದಿಂದ ಕೂಡಿದವನಾಗಿ, ಕಷ್ಟಸಹಿಷ್ಣುವಾಗಿ, ಅಸೂಯಾರಹಿತನಾಗಿ, ಒಳ್ಳೆಯ ಕುಲದಲ್ಲಿ ಜನಿಸಿ ಶೀಲಸಂಪನ್ನನಾಗಿರುತ್ತಾನೆಯೋ ಅವನು ನಿನ್ನ ಅಮಾತ್ಯನಾಗಲಿ.

ಮೇಧಾವೀ ಸ್ಮೃತಿಮಾನ್ ದಕ್ಷಃ ಪ್ರಕೃತ್ಯಾ ಚಾನೃಶಂಸವಾನ್ ।
ಯೋ ಮಾನಿತೋಽಮಾನಿತೋ ವಾ ನ ಸಂದೂಷ್ಯೇತ್ ಕದಾಚನ ॥೨೩॥

ಮೇಧಾವಿಯೂ, ಸ್ಮೃತಿವಂತನೂ, ದಕ್ಷನೂ, ಸ್ವಭಾವದಿಂದಲೇ ದಯಾಪರನೂ, ಸನ್ಮಾನವನ್ನು ಮಾಡಿದರೂ ಅಥವಾ ಅವಮಾನವನ್ನು ಮಾಡಿದರೂ ಎಂದೂ ದೂಷಿಸದಿದ್ದವನು ನಿನ್ನ ಅಮಾತ್ಯನಾಗಲಿ.

ಋತ್ವಿಗ್ ವಾ ಯದಿ ವಾಚಾರ್ಯಃ ಸಖಾ ವಾತ್ಯಂತಸಂಸ್ತುತಃ।
ಗೃಹೇ ವಸೇದಮಾತ್ಯಸ್ತೇ ಯಃ ಸ್ಯಾತ್ ಪರಮಪೂಜಿತಃ ॥೨೪॥

ಋತ್ವಿಜನಾಗಲೀ ಅಥವಾ ಆಚಾರ್ಯನಾಗಲೀ ಅಥವಾ ಅತ್ಯಂತಸಂಬದ್ಧನಾದ ಮಿತ್ರನಾಗಲೀ ಅಥವಾ ಪರಮಪೂಜಿತನಾದ ಅಮಾತ್ಯನಾಗಲೀ ಅವನು ನಿನ್ನ ಮನೆಯಲ್ಲಿ ವಾಸಿಸಲಿ.

ಸ ತೇ ವಿದ್ಯಾತ್ ಪರಂ ಮಂತ್ರಂ ಪ್ರಕೃತಿಂ ಚಾರ್ಥಧರ್ಮಯೋಃ।
ವಿಶ್ವಾಸಸ್ತೇ ಭವೇತ್ ತತ್ರ ಯಥಾ ಪಿತರಿ ವೈ ತಥಾ ॥೨೫॥

ಅವರು ಅರ್ಥ ಮತ್ತು ಧರ್ಮಗಳ ವಿಷಯದಲ್ಲಿ ನಿನ್ನ ಮಂತ್ರಾಲೋಚನೆಯನ್ನು ಮತ್ತು ಸ್ವಭಾವವನ್ನು ತಿಳಿಯಬೇಕು. ಅವರಲ್ಲಿ ನೀನು ತಂದೆಯಲ್ಲಿ ಮಾಡಿದಂತೆ ವಿಶ್ವಾಸವನ್ನು ಮಾಡಬೇಕು.

ನೈವ ದ್ವೌ ನ ತ್ರಯಃ ಕಾರ್ಯಾ ನ ಮೃಷ್ಯೇರನ್ ಪರಸ್ಪರಮ್।
ಏಕಾರ್ಥಾದಿಹ ಭೂತಾನಾಂ ಭೇದೋ ಭವತಿ ಸರ್ವಥಾ ॥೨೬॥

ಇಬ್ಬರನ್ನು ಅಥವಾ ಮೂವರನ್ನು ಅಮಾತ್ಯರನ್ನಾಗಿ ಮಾಡಬಾರದು. ಅವರು ಪರಸ್ಪರವಾಗಿ ಸಹಿಸುವುದಿಲ್ಲ. ಎಲ್ಲರೂ ಒಂದೇ ಕಾರ್ಯವನ್ನು ಮಾಡಲು ಹೊರಟಾಗ ಅವರಲ್ಲಿ ಸರ್ವಥಾ ವಿರೋಧವುಂಟಾಗುತ್ತದೆ.

ಕೀರ್ತಿಪ್ರದಾನೋ ಯಶ್ಚ ಸ್ಯಾದ್ ಯಶ್ಚ ಸ್ಯಾತ್ ಸಮಯೇ ಸ್ಥಿತಃ।
ಸಮರ್ಥಾನ್ ಯಶ್ಚ ನ ದ್ವೇಷ್ಟಿ ಸಮರ್ಥಾನ್ ಕುರುತೇ ಚ ಯಃ ॥೨೭॥

ಯೋ ನ ಕಾಮಾದ್ ಭಯಾಲ್ಲೋಭಾತ್ ಕ್ರೋಧಾದ್ ವಾ
ಧರ್ಮಮುತ್ಸೃಜೇತ್।
ದಕ್ಷಃ ಪರ್ಯಾಪ್ತವಚನಃ ಸ ತೇ ಸ್ಯಾತ್ ಪ್ರತ್ಯನಂತರಃ ॥೨೮॥

ಯಾವನು ನಿನಗೆ ಕೀರ್ತಿಯನ್ನು ಉಂಟುಮಾಡುತ್ತಾನೆಯೋ, ಯಾವನು ಕಟ್ಟಳೆಯಂತೆ ನಡೆದುಕೊಳ್ಳುತ್ತಾನೆಯೋ, ಯಾವನು ಸಮರ್ಥರನ್ನು ದ್ವೇಷಿಸುವು-

ದಿಲ್ಲವೋ, ಅಶಕ್ತರನ್ನು ಸಮರ್ಥರನ್ನಾಗಿ ಮಾಡುತ್ತಾನೆಯೋ, ಯಾವನು ಕಾಮದಿಂದಲಾಗಲೀ ಕ್ರೋಧದಿಂದಾಗಲೀ ಭಯದಿಂದಾಗಲೀ ಲೋಭದಿಂದಾಗಲೀ ಧರ್ಮವನ್ನು ತ್ಯಜಿಸುವುದಿಲ್ಲವೋ ಅಂತಹ ದಕ್ಷನು ಒಳ್ಳೆಯ ಮಾತನಾಡುವವನು ಆದವನು ನಿನಗೆ ಅಮಾತ್ಯನಾಗಲಿ.

ಶೂರಶ್ಚಾರ್ಯಶ್ಚ ವಿದ್ವಾಂಶ್ಚ ಪ್ರತಿಪತ್ತಿವಿಶಾರದಃ।
ಕುಲೀನಃ ಶೀಲಸಂಪನ್ನಸ್ತಿತಿಕ್ಷುರನಸೂಯಕಃ ॥೨೯॥

ಏತೇ ಹ್ಯಮಾತ್ಯಾಃ ಕರ್ತವ್ಯಾಃ ಸರ್ವಕರ್ಮಸ್ವವಸ್ಥಿತಾಃ।
ಪೂಜಿತಾಃ ಸಂವಿಭಕ್ತಾಶ್ಚ ಸುಸಹಾಯಾಃ ಸ್ವನುಷ್ಠಿತಾಃ ॥೩೦॥

ಶೂರರೂ, ಉದಾರವಾದ ನಡತೆಯುಳ್ಳವರೂ, ವಿದ್ವಾಂಸರೂ, ಶೀಘ್ರವಾಗಿ ತಿಳಿದುಕೊಳ್ಳುವುದರಲ್ಲಿ ಸಮರ್ಥರಾದವರೂ, ಸತ್ಕುಲದಲ್ಲಿ ಜನಿಸಿದವರೂ, ಶೀಲಸಂಪನ್ನರೂ, ಕಷ್ಟ ಸಹಿಷ್ಣುಗಳೂ , ಅಸೂಯಾರಹಿತರೂ ಆದವರನ್ನು ಸರ್ವಕರ್ಮಗಳಲ್ಲಿ ಅಮಾತ್ಯರನ್ನಾಗಿ ಮಾಡಬೇಕು. ಅವರು ಪೂಜಿತರಾಗಿ ರಾಜನ ಸಂಪತ್ತನ್ನು ಹಂಚಿಕೊಂಡು ಒಳ್ಳೆಯ ಸಹಾಯದಿಂದ ಕೂಡಿದವರಾಗಿ ಒಳ್ಳೆಯ ಕಾರ್ಯಾನುಷ್ಠಾನವನ್ನು ಮಾಡುವಂತೆ ಮಾಡಬೇಕು.

ಕೃತ್ಸ್ನಮೇತೇ ನಿಕ್ಷಿಪ್ತಾಃ ಪ್ರತಿರೂಪೇಷು ಕರ್ಮಸು।
ಯುಕ್ತಾ ಮಹತ್ಸು ಕಾರ್ಯೇಷು ಶ್ರೇಯಾಂಸ್ಯುತ್ಪಾದಯಂತಿ ಚ ॥೩೧॥

ಅವರೆಲ್ಲರನ್ನೂ ಅವರವರಿಗೆ ಯೋಗ್ಯವಾದ ಕಾರ್ಯಗಳಲ್ಲಿ ನಿಯೋಜಿಸಬೇಕು. (ಒಂದೇ ಕಾರ್ಯದಲ್ಲಿ ಅನೇಕರನ್ನು ನಿಯೋಜಿಸಬಾರದು). ದೊಡ್ಡ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟರೆ ಅವರು ರಾಜನಿಗೆ ಶ್ರೇಯಸ್ಸನ್ನು ಉಂಟು ಮಾಡುವರು.

ಏತೇ ಕರ್ಮಾಣಿ ಕುರ್ವಂತಿ ಸ್ಪರ್ಧಮಾನಾ ಮಿಥಃ ಸದಾ।
ಅನುತಿಷ್ಠಂತಿ ಚೈವಾರ್ಥಾನಾಚಕ್ಷಾಣಾಃ ಪರಸ್ಪರಮ್ ॥೩೨॥

ಅಂತಹವರು ಪರಸ್ಪರವಾಗಿ ಸ್ಪರ್ಧೆ ಮಾಡುತ್ತಾ ಕಾರ್ಯಗಳನ್ನು ಮಾಡುವರು. ಪರಸ್ಪರವಾಗಿ ಮಾತನಾಡಿಕೊಂಡು ತಮಗೆ ಒಪ್ಪಿಸಿದ ಕಾರ್ಯಗಳನ್ನು ಅನುಷ್ಠಾನಕ್ಕೆ ತರುವರು.

ಜ್ಞಾತಿಭ್ಯೋ ಬಿಭಿಯಾಚ್ಚೈವ ಮೃತ್ಯೋರಿವ ಯತಃ ಸದಾ ।
ಉಪರಾಜೇವ ರಾಜರ್ಧಿಂ ಜ್ಞಾತಿರ್ನ ಸಹತೇ ಸದಾ ॥೩೩॥

(ಇನ್ನು ಜ್ಞಾತಿಗಳ ಸ್ವರೂಪವನ್ನು ಹೇಳುತ್ತಾರೆ) ರಾಜನು ಮೃತ್ಯುವಿಗೆ ಹೆದರಿದಂತೆ ದುಷ್ಟ ಜ್ಞಾತಿಗಳಿಗೆ ಯಾವಾಗಲೂ ಹೆದರಬೇಕು. ಸಾಮಂತರಾಜನು ರಾಜನ ಸಮೃದ್ಧಿಯನ್ನು ನೋಡಿ ಸಹಿಸದಂತೆ ಜ್ಞಾತಿಯು ರಾಜನ ಸಮೃದ್ಧಿಯನ್ನು ಸಹಿಸುವುದಿಲ್ಲ.

ಋಜೋರ್ಮೃದೋರ್ವದಾನ್ಯಸ್ಯ ಹ್ರೀಮತಃ ಸತ್ಯವಾದಿನಃ ।
ನಾನ್ಯೋ ಜ್ಞಾತೇರ್ಮಹಾಬಾಹೋ ವಿನಾಶಮಭಿನಂದತಿ ॥೩೪॥

ಎಲೈ ಮಹಾಬಾಹುವೇ! ಋಜುವೂ, ಮೃದುವೂ, ಉದಾರಿಯೂ, ನಾಚಿಕೆಯುಳ್ಳವನೂ, ಸತ್ಯವಾದಿಯೂ ಆದ ರಾಜನಿಗೆ ಜ್ಞಾತಿಯನ್ನು ಬಿಟ್ಟು ಬೇರೆ ಯಾವನೂ ವಿನಾಶವನ್ನು ಬಯಸುವುದಿಲ್ಲ.

ಅಜ್ಞಾತಿತಾ ನಾತಿಸುಖಾ ಜ್ಞಾತಯೋಪಿ ಸುಖಾವಹಾಃ ।
ಅಜ್ಞಾತಿಮಂತಂ ಪುರುಷಂ ಪರೇ ಪರಿಭವಂತ್ಯುತ ॥೩೫॥

ಜ್ಞಾತಿಗಳು ಇಲ್ಲದಿರುವುದೇ ದೊಡ್ಡ ಸುಖವಲ್ಲ. ಜ್ಞಾತಿಗಳು ದೊಡ್ಡ ಸುಖವನ್ನು ಉಂಟುಮಾಡಲು ಸಮರ್ಥರು. ಜ್ಞಾತಿಗಳು ಇಲ್ಲದಿರುವ ಪುರುಷನನ್ನು ಶತ್ರುಗಳು (ಅಥವಾ ಬೇರೆಯವರು) ಸೋಲಿಸುತ್ತಾರೆ.

ನಿಕೃತಸ್ಯ ನರೈರನ್ಯೈರ್ಜ್ಞಾತಿರೇವ ಪರಾಯಣಮ್ ।
ನಾನ್ಯೈರ್ನಿಕಾರಂ ಸಹತೇ ಜ್ಞಾತೇರ್ಜ್ಞಾತಿಃ ಕದಾಚನ ॥೩೬॥

ಇನ್ನೊಬ್ಬರಿಂದ ಅವಮಾನಕ್ಕೊಳಗಾದರೆ ಆಗ ಜ್ಞಾತಿಯೇ ಶ್ರೇಷ್ಠನಾದ ಆಶ್ರಯ-

ನಾಗುತ್ತಾನೆ. ಜ್ಞಾತಿಯಾದವನು ತನ್ನ ಜ್ಞಾತಿಗೆ ಇನ್ನೊಬ್ಬನಿಂದಾಗುವ ಅವಮಾನವನ್ನು ಎಂದೂ ಸಹಿಸುವುದಿಲ್ಲ.

ಆತ್ಮಾನಮೇವ ಜಾನಾತಿ ನಿಕೃತಂ ಬಾಂಧವೈರಪಿ।
ತೇಷು ಸಂತಿ ಗುಣಾಶ್ಚೈವ ನೈರ್ಗುಣ್ಯಂ ಚೈವ ಲಕ್ಷ್ಯತೇ ॥೩೭॥

ಬಾಂಧವರು ಜ್ಞಾತಿಗೆ ಅವಮಾನವನ್ನು ಮಾಡಿದರೂ ಅದು ತನಗೇ ಆದ ಅವಮಾನವೆಂದು ತಿಳಿಯುತ್ತಾನೆ. ಜ್ಞಾತಿಗಳಲ್ಲಿ ಗುಣಗಳೂ ಇವೆ. ದೋಷಗಳೂ ಕಂಡುಬರುತ್ತವೆ.

ನಾಜ್ಞಾತಿರನುಗೃಹ್ಣಾತಿ ನಾಜ್ಞಾತಿರ್ದಿಗ್ಧಮಸ್ಯತಿ।
ಉಭಯಂ ಜ್ಞಾತಿಲೋಕೇಷು ದೃಶ್ಯತೇ ಸಾಧ್ವಸಾಧು ಚ ॥೩೮॥

ಜ್ಞಾತಿಯಲ್ಲದವನು ಅನುಗ್ರಹವನ್ನೂ ಮಾಡುವುದಿಲ್ಲ. ಜ್ಞಾತಿಯಲ್ಲದವನು ದ್ರೋಹವನ್ನೂ ಮಾಡುವುದಿಲ್ಲ. (ವಿಷದ ಬಾಣವನ್ನು ಪ್ರಯೋಗಿಸುವುದಿಲ್ಲ) ಜ್ಞಾತಿ ಸಮೂಹದಲ್ಲಿ ಒಳ್ಳೆಯದು ಮತ್ತು ಕೆಟ್ಟುದು ಎರಡೂ ಕಂಡು ಬರುತ್ತದೆ.

ತಾನ್ ಮಾನಯೇತ್ ಪೂಜಯೇಚ್ಚ ನಿತ್ಯಂ ವಾಚಾ ಚ ಕರ್ಮಣಾ।
ಕುರ್ಯಾಚ್ಚ ಪ್ರಿಯಮೇತೇಭ್ಯೋ ನಾಪ್ರಿಯಂ ಕಿಂಚಿದಾಚರೇತ್ ॥೩೯॥

ಜ್ಞಾತಿಗಳನ್ನು ಮಾತಿನಿಂದಲೂ, ಕ್ರಿಯೆಯಿಂದಲೂ ನಿತ್ಯವೂ ಸನ್ಮಾನಿಸಬೇಕು; ಪೂಜಿಸಬೇಕು. ಅವರಿಗೆ ಪ್ರಿಯವನ್ನುಂಟುಮಾಡಬೇಕು. ಸ್ವಲ್ಪವೂ ಅಪ್ರಿಯವನ್ನು ಮಾಡಬಾರದು.

ವಿಶ್ವಸ್ತವದವಿಶ್ವಸ್ತಸ್ತೇಷು ವರ್ತೇತ ಸರ್ವದಾ।
ನಹಿ ದೋಷೋ ಗುಣೋ ವೇತಿ ನಿರೂಪ್ಯಸ್ತೇಷು ದೃಶ್ಯತೇ ॥೪೦॥

ಅವರಲ್ಲಿ ಪೂರ್ಣವಿಶ್ವಾಸವನ್ನು ಮಾಡದೇ ವಿಶ್ವಾಸವನ್ನು ಮಾಡಿದವನಂತೆ ನಡೆದುಕೊಳ್ಳಬೇಕು. ಅವರಲ್ಲಿ ಹೇಳಬಹುದಾದ ಗುಣವೆಂಬುದಾಗಲೀ, ದೋಷವೆಂಬುದಾಗಲೀ ಕಂಡು ಬರುವುದಿಲ್ಲ.

ತಸ್ಯೈವಂ ವರ್ತಮಾನಸ್ಯ ಪುರುಷಸ್ಯಾಪ್ರಮಾದಿನಃ।
ಅಮಿತ್ರಾಃ ಸಂಪ್ರಸೀದಂತಿ ತಥಾ ಮಿತ್ರೀಭವಂತ್ಯಪಿ ॥೪೧॥

ಈ ರೀತಿಯಲ್ಲಿ ಪ್ರಮಾದರಹಿತನಾಗಿ ನಡೆದುಕೊಳ್ಳುವ ರಾಜರಿಗೆ ಶತ್ರುಗಳು ಪ್ರಸನ್ನರಾಗಿ ಮಿತ್ರರಾಗುತ್ತಾರೆ.

ಯ ಏವಂ ವರ್ತತೇ ನಿತ್ಯಂ ಜ್ಞಾತಿಸಂಬಂಧಿಮಂಡಲೇ।
ಮಿತ್ರೇಷ್ವಮಿತ್ರೇಽಪ್ಯೈಶ್ವರ್ಯೇ ಚಿರಂ ಯಶಸಿ ತಿಷ್ಠತಿ ॥೪೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವ್ಯಶೀತಿತಮೋಽಧ್ಯಾಯಃ ॥೮೨॥

ಜ್ಞಾತಿ ಮತ್ತು ಸಂಬಂಧಿಗಳ ಸಮೂಹದಲ್ಲಿ ಮಿತ್ರಾಮಿತ್ರರ ವಿಷಯದಲ್ಲಿ ಯಾವನು ಹೀಗೆ ನಡೆದುಕೊಳ್ಳುತ್ತಾನೆಯೋ ಅವನು ಬಹುಕಾಲ ಐಶ್ವರ್ಯವನ್ನು ಮತ್ತು ಕೀರ್ತಿಯನ್ನು ಪಡೆಯುತ್ತಾನೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೮೨ನೆಯ ಅಧ್ಯಾಯವು ಮುಗಿಯಿತು.

* * * * * *

॥ ಶ್ರೀಮದ್ಭೇಶಾರ್ಪಣಮಸ್ತು ॥

ಏಕೋಽಪಿ ಕೃಷ್ಣಸ್ಯಕೃತಃ ಪ್ರಣಾಮಃ
ದಶಾಶ್ವಮೇಧಾವಭೃಥೇನತುಲ್ಯಃ ।
ಧಶಾಶ್ವಮೇಧೀ ಪುನರೇತಿಜನ್ಮ
ಕೃಷ್ಣಪ್ರಣಾಮೀ ನ ಪುನರ್ಭವಾಯ ॥

ಶ್ರೀಕೃಷ್ಣನಿಗೆ ಭಕ್ತಿಪೂರ್ವಕವಾಗಿ ಮಾಡಿದ ಒಂದು ಪ್ರಣಾಮವೂ ಸಹ ಹತ್ತು ಅಶ್ವಮೇಧಯಾಗದ ಅವಭೃಥಸ್ನಾನಕ್ಕೆ ಸಮಾನವಾದದ್ದು. ಹತ್ತು ಅಶ್ವಮೇಧಯಾಗಗಳು ಮಾಡಿದವನು ಪುನಃ ಜನ್ಮವನ್ನು ಪಡೆಯುತ್ತಾನೆ. ಕೃಷ್ಣಪ್ರಣಾಮ ಮಾಡಿದವನು ಪುನಃ ಜನ್ಮವನ್ನು ಪಡೆಯುವುದಿಲ್ಲ.

ISBN: 978-93-88813-29-7